ಕಾಮಧೇನು
ಪುಸ್ತಕ ಭವನ

ಡಾ|| ಪಿ.ವಿ. ನಾರಾಯಣ ಸಂಪಾದಿತ

ಪಂಪ ಕಾವ್ಯಸಾರ

(ಸಂಕ್ಷಿಪ್ತ ಆದಿಪುರಾಣ ಹಾಗೂ ಸಂಕ್ಷಿಪ್ತ ವಿಕ್ರಮಾರ್ಜುನ ವಿಜಯ ಟಿಪ್ಪಣಿಗಳೊಂದಿಗೆ)



ಪಿ. ವಿ. ನಾರಾಯಣ
(ಸ್ವಂತ ಪ್ರತಿ)

ಪಂಪ ಕಾವ್ಯಸಾರ

(ಸಂಕ್ಷಿಪ್ತ ಆದಿಪುರಾಣ ಹಾಗೂ ಸಂಕ್ಷಿಪ್ತ ವಿಕ್ರಮಾರ್ಜುನ ವಿಜಯ ಟಿಪ್ಪಣಿಗಳೊಂದಿಗೆ)

ಡಾ. ಪಿ.ವಿ. ನಾರಾಯಣ

ಕಾಮಧೇನು
ಪುಸ್ತಕ ಭವನ

ನಂ. ೫/೧, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರ, ಬೆಂಗಳೂರು–೫೬೦ ೦೨೦

Pampa Kavyasara: Abridged Edition with notes of Pamps's 'Adipurana' - Edited by Dr. P.V. Narayan, 'Thangali', # 30, RBI Colony, Jayanagar 3rd Block, Bengaluru - 560 011.

Published by : Prof. D.K. Shyamasundara Rao for
Kamadhenu Pustaka Bhavana,
5/1, Nagappa Street, Sheshadripura, Bengaluru - 560 020

First Edition	:	2013
Pages	:	xii + 276 = 288
Copies	:	500
Copy Right	:	Dr. P.V. Narayana
Paper	:	70 GSM Maplitho
Price	:	₹ 200/-
Cover Design	:	Sri Ganjeefa Raghupati Bhat

ಪಂಪ ಕಾವ್ಯಸಾರ: ಆದಿಪುರಾಣ ಹಾಗೂ ವಿಕ್ರಮಾರ್ಜುನ ವಿಜಯ ಈ ಎರಡು ಕಾವ್ಯಗಳ ಸಂಗ್ರಹ, ಸಂಪಾದಕರು ಡಾ॥ ಪಿ.ವಿ. ನಾರಾಯಣ, 'ತಂಗಾಳಿ' ನಂ. 30, ಆರ್.ಬಿ.ಐ. ಕಾಲೋನಿ, ಜಯನಗರ 3ನೇ ಬ್ಲಾಕ್, ಬೆಂಗಳೂರು – 560 011.

ಪ್ರಕಾಶಕರು : ಪ್ರೊ. ಡಿ.ಕೆ. ಶ್ಯಾಮಸುಂದರರಾವ್, ಕಾಮಧೇನು ಪುಸ್ತಕ ಭವನ,
ನಂ. 5/1, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರ, ಬೆಂಗಳೂರು – 560 020

ಕೃತಿಸ್ವಾಮ್ಯ	:	ಡಾ॥ ಪಿ.ವಿ. ನಾರಾಯಣ
ಮೊದಲ ಮುದ್ರಣ	:	2013
ಬೆಲೆ	:	₹ 200/–
ರಕ್ಷಾಪುಟ ವಿನ್ಯಾಸ	:	ಶ್ರೀ ಗಂಜೀಫಾ ರಘುಪತಿ ಭಟ್

ಮುದ್ರಣ : ಪರಿಶ್ರೀ ಪ್ರಿಂಟರ್ಸ್, ನಂ.38/3, 2ನೇ ಅಡ್ಡರಸ್ತೆ, ನಾಗಪ್ಪ ಬ್ಲಾಕ್,
ಶ್ರೀರಾಮಪುರಂ, ಬೆಂಗಳೂರು – 560 021, ✆ 2312 8286,
email: info@parishree.com; web: www.parishree.com

ಪಂಪ: ಒಂದು ಚಿಂತನೆ

ಪಂಪ ಈಗ್ಗೆ ಸುಮಾರು ಒಂದು ಸಾವಿರದ ಎಪ್ಪತ್ತು ವರ್ಷಗಳಷ್ಟು ಹಿಂದೆ ತನ್ನ ಕಾವ್ಯಗಳನ್ನು ಹೇಳಿದ. ಅವನನ್ನು ಎಲ್ಲ ಕಾಲದ ಕವಿಗಳು ಹೊಗಳಿದರು, ಚಂಪೂ ಕವಿಗಳಂತೂ ಅವನನ್ನು ಅನುಕರಿಸಲು ಹೆಣಗಿದರು. ಈಗಲೂ ಪಂಪನ ಕಾವ್ಯಗಳ ಹಿರಿಮೆಯ ಬಗ್ಗೆ ಆಧುನಿಕ ವಿಮರ್ಶಕರೂ ಮುಕ್ತಕಂಠದ ಮಾತುಗಳನ್ನಾಡುತ್ತಿದ್ದಾರೆ. ಹೀಗೆ ಪಂಪ ಯಾಕೆ ಎಲ್ಲ ಕಾಲದಲ್ಲಿಯೂ ಮಹತ್ವವನ್ನು ಗಳಿಸಿಕೊಂಡ? ಅಥವಾ, ಒಬ್ಬ ಪ್ರಾಚೀನ ಕವಿ ಇವತ್ತಿಗೂ ಮಹತ್ವದವನಾಗಿ ಕಾಣಲು ಏನು ಕಾರಣ? ಎಂದು ಆಲೋಚಿಸಬೇಕಾಗಿದೆ. ಪಂಪನನ್ನು ಸಾಮಾನ್ಯವಾಗಿ 'ಕನ್ನಡದ ಆದಿಕವಿ' ಎಂದು ಕರೆಯುವ ರೂಢಿಯಿದೆ. ಆದರೆ ಅವನು ಕನ್ನಡದಲ್ಲಿ ಬರೆದ ಮೊದಲನೆಯ ಕವಿಯೇನಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಅಂಶವೇ. ಅವನಿಗಿಂತ ಮುಂಚೆ ಅನೇಕ ಕವಿಗಳ, ಅದೂ ಮಹತ್ತರ ಕೆಲಸ ಮಾಡಿದವರು ಆಗಿಹೋದ, ವಿಷಯ ಪಂಪನಿಗಿಂತ ಸುಮಾರು ಒಂದು ಶತಮಾನದ ಹಿಂದೆ ರಚಿತವಾದ 'ಕವಿರಾಜ ಮಾರ್ಗ' ಸ್ಪಷ್ಟವಾಗಿ ಹೇಳುತ್ತದೆ. ಪಂಪನಿಗೆ ಈ 'ಆದಿತನ'ವನ್ನು ನೀಡಲು ಕಾರಣವೇನು?

ಪಂಪನಿಗೆ ಮುಂಚೆಯೇ ಅನೇಕ ಕನ್ನಡ ಕವಿಗಳಿದ್ದುದು ಮಾತ್ರವಲ್ಲದೆ, ಅವರು ವಿವಿಧ ಬಗೆಯ ಕೃತಿಗಳನ್ನು ರಚಿಸಿದರು ಎಂದೂ 'ಕವಿರಾಜಮಾರ್ಗ' ಹೇಳುತ್ತದೆ, ಹಾಗೂ ತನ್ನ ಹಿಂದಿನ ಮತ್ತು ತನ್ನ ಕಾಲದ ಅನೇಕ ಸಾಹಿತ್ಯ ಪ್ರಕಾರಗಳ ಹೆಸರನ್ನು ಹೇಳುತ್ತದೆ. ಅವುಗಳಲ್ಲಿ ಒಂದು 'ಗದ್ಯಕಥಾ'. "ಮಿಗೆ ಕನ್ನಡಗಬ್ಬಂಗಳೊಳ್ ಅಗಣಿತಗುಣಗಣ ಗದ್ಯಪದ್ಯಸಮ್ಮಿಶ್ರಿತಮಂ ನಿಗದಿಸುವರ್ ಗದ್ಯಕಥಾಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್" ಎಂಬ ಪದ್ಯವನ್ನು ಗಮನಿಸಿ. ಎಂದರೆ ಅಪರಿಮಿತ ಗುಣಗಳಿಂದ ಕೂಡಿದ ಗದ್ಯಪದ್ಯಗಳು ಸೇರಿದ ಕಾವ್ಯ ಪ್ರಕಾರವನ್ನು ಕವಿರಾಜಮಾರ್ಗಕಾರ 'ಗದ್ಯಕಥಾ' ಎಂದು ಕರೆಯುತ್ತಿದ್ದಾನೆ. ಇದು ಈಗ ನಾವು 'ಚಂಪೂ' ಎಂದು ಕರೆಯುವ ಪ್ರಕಾರವೇ ಎಂದು ಹಲವು ವಿದ್ವಾಂಸರ ಅಭಿಪ್ರಾಯ. ಚಂಪೂ ಕನ್ನಡದಲ್ಲಿಯೇ ಜನ್ಮತಾಳಿದ ಕಾವ್ಯಪ್ರಕಾರ, ಅದು ಕನ್ನಡದಿಂದ ಸಂಸ್ಕೃತಕ್ಕೆ ಹೋಯಿತು ಎಂಬ ಒಂದು ವಾದವಿದ್ದರೆ, ಕನ್ನಡ ಸಂಸ್ಕೃತಕ್ಕೇ ಏನು ಕೊಟ್ಟೀತು ಎಂಬ ಭಾವನೆಯಿಂದಲೋ ಏನೋ ಸಂಸ್ಕೃತದಲ್ಲಿಯೇ ಅದರ ಜನನವಾಯಿತು ಎಂದು ಅನೇಕರು ವಾದಿಸುತ್ತಾರೆ. ಸಂಸ್ಕೃತದಲ್ಲಿರುವ ದಂಡಿಯ 'ಕಾವ್ಯಾದರ್ಶ' ಎಂಬ ಲಕ್ಷಣಗ್ರಂಥ 'ಕವಿರಾಜಮಾರ್ಗ'ಕ್ಕೆ ಮಾದರಿ ಎಂಬುದು ನಿಜ [ಅದರೊಡನೆ ಭಾಮಹನ

'ಕಾವ್ಯಾಲಂಕಾರ' ಕೂಡ]. ಅಲ್ಲಿ "ಗದ್ಯಪದ್ಯ ಮಯೀ ಕಾಚಿತ್ ಚಂಪೂರಿತ್ಯಭಿವಿದ್ಯತೇ" ಎಂಬ ಮಾತಿದೆ [ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೇ – ಎಂಬುದು ಅದಕ್ಕಿರುವ ಪಾಠಾಂತರ]. ಈ ಮಾತು ಚಂಪೂ ಪ್ರಕಾರ 'ಕವಿರಾಜಮಾರ್ಗ'ಕ್ಕಿಂತ ಮುಂಚೆಯೇ ಸಂಸ್ಕೃತದಲ್ಲಿತ್ತು ಎಂಬ ವಾದಕ್ಕೆ ಪುಷ್ಟಿ ಕೊಡುತ್ತದೆ. ಆದರೆ ಇದರಲ್ಲೊಂದು ತೊಡಕು ಇದೆ. ದಂಡಿಯನ್ನು ಬಹು ವಿಷಯಗಳಲ್ಲಿ ಅನುಸರಿಸುವ 'ಕವಿರಾಜಮಾರ್ಗ'ವು ಚಂಪೂ ಎಂಬ ಹೆಸರನ್ನೇ ಹೇಳುವುದಿಲ್ಲ. ಇದಕ್ಕೇನು ಕಾರಣ? ಜೊತೆಗೆ ಬಲದೇವ ಉಪಾಧ್ಯಾಯರು 'ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೇ' ಎಂಬ ಮಾತಿಗೆ ವ್ಯಾಖ್ಯಾನ ಮಾಡುತ್ತ, ಕಾಚಿತ್ ಮತ್ತು ಅಭಿಧೀಯತೇ ಎಂಬ ಶಬ್ದಗಳ ಕಾರಣದಿಂದಾಗಿ, ದಂಡಿಯ ಕಾಲಕ್ಕೆ ಚಂಪೂ ಇತ್ತು, ಆದರೆ ದಂಡಿ ಅದನ್ನು ಕಣ್ಣಾರೆ ಕಂಡಿರಲಿಲ್ಲ ಎಂದು ತೀರ್ಮಾನಿಸುತ್ತಾರೆ. ಹೀಗಾಗಿ, ಈ ವಾಕ್ಯವು ದಂಡಿಯ 'ಕಾವ್ಯಾದರ್ಶ'ದ ಮೂಲದಲ್ಲಿತ್ತೇ ಎಂಬ ಸಂದೇಹ ಮೂಡುತ್ತದೆ. ದಂಡಿಯೇ ಗದ್ಯ, ಪದ್ಯ ಮತ್ತು ಮಿಶ್ರ ಎಂಬ ಮೂರು ಕಾವ್ಯಪ್ರಕಾರಗಳನ್ನು ಉಲ್ಲೇಖಿಸುತ್ತಾನೆ. ಮಿಶ್ರ ಎಂಬುದು ಚಂಪೂವನ್ನು ಸೂಚಿಸುತ್ತಿದೆಯೋ ಅಥವಾ ಬೇರೇನನ್ನಾದರೋ ಎಂಬ ಅನುಮಾನ ಉಂಟಾಗುತ್ತದೆ. ಏಕೆಂದರೆ, ಸಾಮನ್ಯವಾಗಿ ಹಿಂದೆಲ್ಲ ಕಾವ್ಯವನ್ನು 'ಶ್ರವ್ಯ ಕಾವ್ಯ' ಮತ್ತು 'ದೃಶ್ಯ ಕಾವ್ಯ' ಎಂಬ ವಿಂಗಡಣೆ ಮಾಡುವ ಪರಿಪಾಠವಿತ್ತು. 'ಶ್ರವ್ಯಕಾವ್ಯ'ದಲ್ಲಿ ಗದ್ಯ ಮತ್ತು ಪದ್ಯ ಎಂಬೆರಡು ಭೇದ. ದಂಡಿ ಹೇಳುವ ಮಿಶ್ರ ಇನ್ನೊಂದು ಕಾವ್ಯಪ್ರಕಾರವಾದ 'ದೃಶ್ಯ ಕಾವ್ಯ'ವನ್ನೇನಾದರೂ ಸೂಚಿಸುತ್ತದೆಯೇ? ಏಕೆಂದರೆ ಸಂಸ್ಕೃತ ದೃಶ್ಯಕಾವ್ಯ [ನಾಟಕ]ಗಳಲ್ಲಿ ಸಂಭಾಷಣೆಯಲ್ಲಿ ಗದ್ಯವೂ ಪದ್ಯವೂ ಇರುತ್ತಿತ್ತು. ಇದನ್ನೇ ಮಿಶ್ರ ಎಂದು ದಂಡಿ ಸೂಚಿಸುತ್ತಿದ್ದಿರಬಹುದು. ಸಂಸ್ಕೃತದಲ್ಲಿಯೂ ಚಂಪೂ ಬಂದ ಮೇಲೆ ಯಾರಾದರೂ 'ಕಾವ್ಯಾದರ್ಶ'ದಲ್ಲಿ ಈ ಮಾತನ್ನು ಸೇರಿಸಿರಬಹುದು; ಅಂದರೆ ಚಂಪೂವಿನ ಈ ವ್ಯಾಖ್ಯೆ ಪ್ರಕ್ಷೇಪವಿರಬಹುದು. ಅಲ್ಲದೆ ಮೊದಮೊದಲ ಸಂಸ್ಕೃತ ಚಂಪೂ ಕಾವ್ಯಗಳನ್ನು ರಚಿಸಿದವರು ಕನ್ನಡಿಗರು; ಸಂಸ್ಕೃತದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಚಂಪೂ ಕೃತಿಯಾದ ತ್ರಿವಿಕ್ರಮನ 'ನಲಚಂಪೂ' ಹತ್ತನೆಯ ಶತಮಾನದ್ದು; ಪಂಪನ ಕಾಲವೇ, ಸ್ವಲ್ಪ ಹಿಂಚು ಮುಂಚು.

ಈ ವಾದ ಸಾಕು. ನಮಗಿಲ್ಲಿ ಪ್ರಸ್ತುತವಾದುದೆಂದರೆ, 'ಕವಿರಾಜಮಾರ್ಗ' ಪೂರ್ವದಲ್ಲಿಯೇ ಚಂಪೂ ಕನ್ನಡದಲ್ಲಿ ನೆಲೆಯೂರಿತ್ತು ಮಾತ್ರವಲ್ಲ, ದೊಡ್ಡ ಕವಿಗಳು ಆ ಪ್ರಕಾರದಲ್ಲಿ ಕಾವ್ಯ ರಚಿಸಿದ್ದರು ಎಂಬ ಅಂಶ. ಅದು ಕಾಲಕಾಲಕ್ಕೆ ಹೆಚ್ಚೆಚ್ಚು ಪರಿಷ್ಕರಣಗೊಳ್ಳುತ್ತ ಅಂತಸ್ಸತ್ವವನ್ನು ಹೆಚ್ಚಿಸಿಕೊಳ್ಳುತ್ತ ಪಂಪನ ಕಾವ್ಯಗಳಲ್ಲಿ ತನ್ನ ಸಾಧನೆಯ ಶಿಖರವನ್ನು ತಲುಪಿತು. ಆನಂತರ ಆ ಕಾವ್ಯದ ಸತ್ವ ಇಳಿಮುಖವಾಯಿತು. ಅಂದರೆ ಪಂಪ ಚಂಪೂ ಪ್ರಕಾರದ ಪಕ್ವಫಲ. ಆ ಪಕ್ವತೆಗೆ ಕಾರಣ ತನ್ನೆರಡು ಕಾವ್ಯಗಳ ವಸ್ತು, ಭಾಷೆ, ಅಭಿವ್ಯಕ್ತಿವಿಧಾನ, ಪಾತ್ರಚಿತ್ರಣ, ತನ್ನ ಕಾಲದ ಸ್ಥಿತಿಗತಿಗಳನ್ನು ಒಳಗೊಳ್ಳುವ ಬಗೆ – ಇವೆಲ್ಲ ವಿಶಿಷ್ಟವಾದವು ಎಂಬುದು. ಪಂಪ ತನ್ನೆರಡೂ ಕಾವ್ಯಗಳಲ್ಲಿನ ವೈಶಿಷ್ಟ್ಯಗಳನ್ನು ಒಟ್ಟಾರೆಯಾಗಿ 'ದೇಸಿ' ಎಂದು ಬಣ್ಣಿಸಿಕೊಳ್ಳುತ್ತಾನೆ. ತನ್ನ ಮೊದಲ ರಚನೆಯಾದ 'ಆದಿಪುರಾಣ'ದ ಕೊನೆಯಲ್ಲಿ "ಸ್ವರ್ಗಾಪವರ್ಗಕ್ಕಮಾಸ್ಪದಮಪ್ಪ ಆದಿಪುರಾಣವಸ್ತುಕೃತಿಯಂ ಪೇೞ್ದಂ ಬೆಡಂಗಪ್ಪ ಮಾರ್ಗದೊಳಂ ದೇಸಿಯೊಳಂ ಪೊದಳ್ದೆಸೆವಿನಂ ಸಂಸಾರಸಾರೋದಯಂ" ಎಂದು

ಹೇಳಿಕೊಂಡರೆ, 'ವಿಕ್ರಮಾರ್ಜುನ ವಿಜಯ'ದ ಮೊದಲ ಆಶ್ವಾಸದಲ್ಲಿ, ಒಂದೆಡೆ "ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದು ಒಂದಿ ದೇಸಿಯೊಳ್ ಪುಗುವುದು" ಎಂದೂ; ಮತ್ತೊಂದೆಡೆ, "ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಟ್ವೊಡೆ ಪಂಪನೆ ಪೇಟ್ಗುಂ ಎಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇಟಲೊಡರ್ಚಿದೆನೀ ಪ್ರಬಂಧಮಂ" ಎಂದೂ ನುಡಿಯುತ್ತಾನೆ. ಅದೇ ಕಾವ್ಯದ ಕೊನೆಯ ಆಶ್ವಾಸದಲ್ಲಿ ಒಂದೆಡೆ, ತನ್ನ ಕಾವ್ಯವೈಶಿಷ್ಟ್ಯಗಳಲ್ಲಿ 'ಕೈತ ದೇಸಿ'ಯೂ ಸೇರುವುದನ್ನು ಉಲ್ಲೇಖಿಸುತ್ತಾನೆ; ಮತ್ತೊಂದೆಡೆ, "ವ್ಯಾಸಮುನಿಪ್ರಣೂತಕೃತಿಯಂ ಸಲೆ ಪೇಟ್ದು ಪೊದಳ್ದ ಸತ್ಕವಿವ್ಯಾಸಸಮಾಗಮಾನ್ವಿತನುಂ ಆದಿಪುರಾಣಮನೆಯ್ದೆ ಪೇಟ್ದು ವಾಕ್ಶ್ರೀಸುಭಗಂ ಪುರಾಣಕವಿಯುಂ ಧರೆಗಾಗಿರೆ ಉಣ್ಮಿಪೊಣ್ಮುವೀ ದೇಸಿಗರಂತೆ ನಾಡೊವಜನಾದನೊ ಪೇಟ್ ಕವಿತಾಗುಣಾರ್ಣವಂ" ಎಂದೂ ಹೇಳೀಕೊಳ್ಳುತ್ತಾನೆ. ['ದೇಸಿಗಳುಂತೆ' ಎಂಬುದನ್ನು ವೆಂಕಟಾಚಲಶಾಸ್ತ್ರಿಗಳು 'ದೇಸಿಗರಂತೆ' ಎಂದು ಪರಿಷ್ಕರಿಸುತ್ತಾರೆ]. ಹೀಗಾಗಿ ಪಂಪನಿಗೆ ತನ್ನ ಕಾವ್ಯವೈಶಿಷ್ಟ್ಯವಾದ 'ದೇಸಿಯ' ಬಗ್ಗೆ ಅರಿವು ಮಾತ್ರವಲ್ಲದೆ ಅಪಾರ ಹೆಮ್ಮೆಯೂ ಇದೆ. ಮುಂದಿನ ಕವಿಗಳು ಪಂಪನ ವೈಶಿಷ್ಟ್ಯವೆಂದು 'ದೇಸಿ'ಯನ್ನು ಉಲ್ಲೇಖಿಸುವುದನ್ನು ಗಮನಿಸಬೇಕು. ಹಾಗಾದರೆ 'ದೇಸಿ' ಎಂದರೇನು ಎಂಬ ಪ್ರಶ್ನೆ ಏಳುತ್ತದೆ. ಕನಿಷ್ಠ ಪಕ್ಷ, ತನ್ನ ವೈಶಿಷ್ಟ್ಯವೆಂದು ಹೆಮ್ಮೆಯಿಂದ ಬೀಗುವ ಪಂಪನ ಕಾವ್ಯಗಳ ದೇಸಿಯ ಸ್ವರೂಪವೇನು ಎಂಬುದನ್ನು ಅನ್ವೇಷಿಸಬೇಕಾಗಿದೆ.

ಸಾಮಾನ್ಯವಾಗಿ ಪಂಪನ ಎರಡು ಕಾವ್ಯಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ'ಗಳನ್ನು ಕ್ರಮವಾಗಿ 'ಧಾರ್ಮಿಕ' ಮತ್ತು 'ಲೌಕಿಕ' ಕಾವ್ಯಗಳೆಂದು ಗುರುತಿಸುವ ಪದ್ಧತಿಯಿದೆ; ಇದೇನೂ ತಪ್ಪಲ್ಲ. ಏಕೆಂದರೆ ಪಂಪನೇ ತನ್ನ 'ವಿಕ್ರಮಾರ್ಜುನ ವಿಜಯ'ದ ಕೊನೆಯಲ್ಲಿ "ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ" ಎಂದು ಹೇಳಿಕೊಂಡಿದ್ದಾನೆ. ಆದರೆ 'ಧಾರ್ಮಿಕ' ಹಾಗೂ 'ಲೌಕಿಕ' ಎಂಬುದನ್ನು ನಾವು ಹೇಗೆ ನಿರ್ವಚಿಸಬೇಕು ಎಂಬ ಪ್ರಶ್ನೆ ಏಳುತ್ತದೆ. ಧರ್ಮ ಎಂಬುದಕ್ಕೆ ನಿರ್ದಿಷ್ಟ ಅರ್ಥವಿದೆಯೇ, ಉಹ್ಞೂ, ಇಲ್ಲ. ಹಾಗೆಯೇ ಲೌಕಿಕ ಎಂಬುದಕ್ಕೂ. ಏಕೆಂದರೆ "ಛಲದೊಳ್ ದುರ್ಯೋಧನಂ" ಎಂದು ಮೊದಲಾಗುವ, 'ವಿಕ್ರಮಾರ್ಜುನ ವಿಜಯ'ದ ಹದಿನಾಲ್ಕನೆಯ ಆಶ್ವಾಸದ ಅರುವತ್ತನಾಲ್ಕನೆಯ ಪದ್ಯದಲ್ಲಿ ವಿವಿಧ ಪಾತ್ರಗಳು ವಿಭಿನ್ನ ಗುಣಗಳಿಂದಾಗಿ ವಿಶಿಷ್ಟವಾಗುತ್ತಾರೆಂದು ಹೇಳಿದ ಮೇಲೆ, "ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ" ಎನ್ನುತ್ತಾನೆ. ಹಾಗಾದರೆ, ಲೌಕಿಕ ಗುಣಗಳೂ ಪೂಜ್ಯವೇ ಎಂದಂತಾಯಿತು. ಹಾಗಾದರೆ, ಧಾರ್ಮಿಕ ಗುಣಗಳಿಗೂ ಲೌಕಿಕ ಗುಣಗಳಿಗೂ ಏನು ವ್ಯತ್ಯಾಸವೆಂದು ಕೇಳಬೇಕಾಗುತ್ತದೆ. ಕೊನೆಯ ಪಕ್ಷ, ಪಂಪನ ದೃಷ್ಟಿಯಲ್ಲಿ ಇವುಗಳ ಸ್ವರೂಪವೇನು ಎಂದು ವಿವೇಚಿಸಬೇಕು.

'ಆದಿಪುರಾಣ'ದ ಆರಂಭದ ಪದ್ಯಗಳಲ್ಲೊಂದರಲ್ಲಿ ಕವಿಯು ತನ್ನ ಈ ಪುರಾಣಕಾವ್ಯ ಎಲ್ಲರಿಗೂ ಹೇಗೆ ಪ್ರಿಯವಾಗುತ್ತದೆಂದು ಹೇಳಿಕೊಳ್ಳುವ ಮಾತುಗಳಿವೆ: "ಇದುವೆ ಸುಕವಿಪ್ರಮೋದಪ್ರದಂ ಇದುವೆ ಸಮಸ್ತಭವ್ಯಲೋಕಪ್ರಮುದಪ್ರದಂ ಎನೆ ನೆಗಟ್ದಿ ಆದಿಪುರಾಣದೊಳ್ ಅಜೆವುದು ಕಾವ್ಯಧರ್ಮಮಂ ಧರ್ಮಮುಮಂ" ಎಂಬುದೇ ಆ ಮಾತುಗಳು. ಧರ್ಮ ಎಂಬುದಕ್ಕೆ ಪಂಪ ಏನು ಅರ್ಥ ಕೊಡುತ್ತಿದ್ದಾನೆಂಬುದನ್ನು

ಹುಡುಕುವುದು ಕಷ್ಟವೇನಲ್ಲ. ಏಕೆಂದರೆ ಅವನ ಕೃತಿಯದು 'ಸ್ವರ್ಗಾಪವರ್ಗಕ್ಕೆ ಆಸ್ಪದಮಪ್ಪ' ವಸ್ತು, ಎಂದರೆ ಮೊದಲ ತೀರ್ಥಂಕರರನ ಚರಿತೆ, 'ತ್ರಿದಶಸ್ತುತ್ಯಮಿದಾದಿದೇವಚರಿತಂ'; ಇದು 'ಸಮಸ್ತಭವ್ಯಲೋಕಪ್ರಮದಪ್ರದ'ವಾದುದು, ಮತ್ತು ಇದರ ರಚನೆಯೇ 'ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆ' ಎಂಬ ಉದ್ದೇಶವನ್ನು ಹೊಂದಿರುವಂಥದು. ಇಲ್ಲಿನ ವಸ್ತು ಮತ್ತು ಈ ವಸ್ತುವನ್ನು ಪುಣ್ಯಕರವೆಂದು ಭಾವಿಸುವ ಶ್ರೋತೃವರ್ಗ ಇವುಗಳು, ಹಾಗೂ ಪಂಪನೂ ಜೈನನೇ ಆಗಿ ಕಾವ್ಯದ ಆರಂಭದಲ್ಲಿ ಜೈನ ಪರಿಕಲ್ಪನೆಗಳಿಗನುಗುಣವಾದ ಪ್ರಾರ್ಥನಾಪದ್ಯಗಳಿರುವುದರಿಂದ, ಇಲ್ಲಿನ 'ಧರ್ಮ' ಎಂಬ ಶಬ್ದಕ್ಕೆ 'ಜೈನಧರ್ಮ' ಎಂಬ ಪರಿಮಿತವಾದ ಮತ್ತು ನಿರ್ದಿಷ್ಟವಾದ ಅರ್ಥವಿರುವುದು ಸ್ಪಷ್ಟವಾಗುತ್ತದೆ. ಅಂದರೆ ತನ್ನ ಕೃತಿಯ ಒಂದು ಗುಂಪಿನ ಓದುಗವರ್ಗವು ಜೈನಮತಕ್ಕೆ ಸಂಬಂಧಿಸಿದವರು ಎಂಬುದು ಆಶಯ, ಅದರಲ್ಲಿ ಅನುಮಾನವಿಲ್ಲ. ಆದರೆ ಅದಕ್ಕೂ ಮೊದಲೇ ಬರುವ 'ಸುಕವಿಪ್ರಮೋದಪ್ರದಂ' ಎಂಬ ಮಾತೂ, 'ಅಜೆವುದು ಕಾವ್ಯಧರ್ಮಮಂ' ಎಂಬ ಮಾತೂ ಏನನ್ನು ಸೂಚಿಸುತ್ತವೆ? ಅಲ್ಲದೆ ತನ್ನ ಕಾವ್ಯ ಸಂತಸವನ್ನುಂಟುಮಾಡುವುದು ಮುಖ್ಯವಾಗಿ ಕಾವ್ಯಾಸಕ್ತರನ್ನು ಎಂಬ ಆಶಯವು ಧರ್ಮಕ್ಕೆ ಅವನು ನೀಡಿದ ಎರಡನೆಯ ಸ್ಥಾನದಿಂದ ವಿದಿತವಾಗುತ್ತದೆ ['ಸುಕವಿ' ಎಂದರೆ ಕವಿಗಳು ಎಂಬ ಅರ್ಥಕ್ಕಿಂತ ಒಳ್ಳೆಯ ಕಾವ್ಯಗಳಲ್ಲಿ ಆಸಕ್ತರಾದವರು ಎಂಬ ಅರ್ಥವೇ ಇಲ್ಲಿ ಸೂಕ್ತ]. ಅಂಥವರಿಗಾಗಿ ಇಲ್ಲಿರುವುದು 'ಕಾವ್ಯಧರ್ಮ' ಎನ್ನುತ್ತಾನೆ ಕವಿ. ಈಗ ಇನ್ನೊಂದು ಪ್ರಶ್ನೆ ತಲೆದೋರುತ್ತದೆ: 'ಕಾವ್ಯಧರ್ಮ' ಎಂದರೇನು?

ಕಾವ್ಯ ಎಂದರೇನೆಂಬುದನ್ನು ಇದುವರೆಗೂ ಯಾರೂ ಖಚಿತವಾಗಿಯೂ, ಸರ್ವಸಮ್ಮತವಾಗಿಯೂ ಸೂತ್ರರೂಪದಲ್ಲಿ ಹೇಳಿಲ್ಲ. ಜಗತ್ತಿನೆಲ್ಲೆಡೆಯ ಕಾವ್ಯಮೀಮಾಂಸೆ ಮತ್ತು ವಿಮರ್ಶೆಗಳು ಆದಿಯಿಂದ ಇಲ್ಲಿಯವರೆಗೂ ಅದರ ಬಗ್ಗೆ ಚರ್ಚಿಸುತ್ತಲೇ ಬಂದಿವೆ; ಆದರೆ ಏನನ್ನೂ ನಿರ್ದಿಷ್ಟವಾಗಿ ಹೇಳಲಾಗಿಲ್ಲ. ಏಕೆಂದರೆ ಹೇಳಲಾಗುವುದಿಲ್ಲ. ಏಕೆಂದರೆ ಕಾವ್ಯ [ಸಾಹಿತ್ಯ] ಎಂಬುದು ಅನಂತಮುಖಿಯಾದುದು, ಅಮೂರ್ತವಾದುದು. ಪಂಪನೇ 'ಆದಿಪುರಾಣ'ದಲ್ಲಿ "ಇದು ನಿಚ್ಚಂ ಪೊಸತು ಅರ್ಣವಂಬೊಲ್ ಅತಿಗಂಭೀರಂ ಕವಿತ್ವಂ" ಎನ್ನುತ್ತಾನೆ. ಎಂದರೆ ಕವಿತ್ವವು ಹಿಡಿತಕ್ಕೆ ಸಿಕ್ಕುವಂತಹುದಲ್ಲ, ಆಗಸವನ್ನು ಹಿಡಿಯಲು ಸಾಧ್ಯವೇ? ಈ ಮಾತುಗಳಲ್ಲಿ ಪಂಪ ಯಾವ ಆಶಯವನ್ನು ಹೇಳುತ್ತಿದ್ದಾನೆಯೋ ತಿಳಿಯದು; ಅವನು ನಮಗಿಂತ ಒಂದು ಸಾವಿರ ವರ್ಷಕ್ಕೂ ಹಿಂದೆ ಇದ್ದವನು, ತನ್ನ ಮಾತುಗಳನ್ನು ಅವನು ವಿವರಿಸಿಲ್ಲ. ಜೊತೆಗೆ ಇಂಥ ಮಾತುಗಳೂ 'ನಿಚ್ಚಂ ಪೊಸತು', ಎಂದರೆ ಹೊಸ ಹೊಸ ಅರ್ಥಗಳನ್ನು ಸ್ಫುರಿಸುವಂತಹವು. ಕವಿತ್ವ ಎಂಬುದು ಸಮುದ್ರದ ಹಾಗೆ: ಹರಹು ಮತ್ತು ಆಳಗಳನ್ನು ಹೊಂದಿರುವಂಥದು. ಜೊತೆಗೆ ಸಮುದ್ರದ 'ನೀರು' ನಮ್ಮನ್ನೇ ಪ್ರತಿಬಿಂಬಿಸುವಂಥದು. ಹಾಗೆಯೇ ಕಾವ್ಯವೂ ಕಾಣುವವರ ಕಣ್ಣಿಗೆ ಸಾಧ್ಯವಾದಂತೆ ಕಾಣುವಂಥದೇ ಹೊರತು ಎಲ್ಲರಿಗೂ ಒಂದೇ ರೀತಿಯಲ್ಲಿ ಅಲ್ಲ. ಏಕೆಂದರೆ ಕವಿತ್ವಕ್ಕೆ "ಅರ್ಥವಿಲ್ಲ, ಸ್ವಾರ್ಥವಿಲ್ಲ"; ಓದುಗ ಅದಕ್ಕೆ ಅರ್ಥ ನೀಡಬೇಕು, ಅಷ್ಟೆ. ಹಾಗೆ ನೀಡುವುದು ತನ್ನ ಅರ್ಥವನ್ನು ಮಾತ್ರ ಎಂಬುದನ್ನು ಮರೆಯಲಾಗದು. ಅಂದರೆ ಪಂಪನ ಕಾವ್ಯಕ್ಕಾಗಲೀ, ನಮ್ಮ ಚರ್ಚೆಯ ಆಧಾರವಾದ 'ಕಾವ್ಯಧರ್ಮ' ಎಂಬ ಮಾತಿಗಾಗಲೀ ನಾವೊಂದು ಅರ್ಥ ನೀಡಿ, ಅದಕನ್ನನುಗುಣವಾಗಿ ಕಾವ್ಯವವನ್ನು ವಿವರಿಸಬೇಕು.

'ಕಾವ್ಯ ಎಂದರೇನು', ಯಾರೂ ಹೇಳಲಾರರು ಎಂಬುದನ್ನಾಗಲೇ ಒಪ್ಪಿಕೊಂಡು ಬಿಟ್ಟಿದ್ದೇವಲ್ಲ. ಆದ್ದರಿಂದ ಈಗ ಕಾವ್ಯವನ್ನು ನಾವೇ ನಮ್ಮ ಅನುಕೂಲಕ್ಕಾಗಿ ನಿರ್ವಚಿಸಿಕೊಳ್ಳಬೇಕು; ಬೇರೆಯವರು ಒಪ್ಪಲಿ ಬಿಡಲಿ, ಇದು ನಮಗೆ ಆವಶ್ಯಕ. ಇಲ್ಲದಿದ್ದರೆ ಮುಂದುವರಿಯಲಾಗುವುದಿಲ್ಲ. ಕಾವ್ಯ ಎಂದರೆ, ನನ್ನ ದೃಷ್ಟಿಯಲ್ಲಿ, ವೈಯಕ್ತಿಕ ಅನುಭವಗಳ ನೆಲೆಯಿಂದ ಮತ್ತು ಅವುಗಳ ಆಧಾರದ ಮೇಲೆ, ಬದುಕಿನ ಸ್ವರೂಪವನ್ನು ಕಂಡುಕೊಳ್ಳುವ ಅನ್ವೇಷಣಾ ಪ್ರಕ್ರಿಯೆಯನ್ನು ಭಾಷೆಯ ಮಾಧ್ಯಮದಿಂದ ಅಭಿವ್ಯಕ್ತಗೊಳಿಸುವ ಪ್ರತಿಭಾವಂತನ 'ಅಸಲು ಕಸಬು'. ಬದುಕು ಕಾವ್ಯಕ್ಕಿಂತ ದೊಡ್ಡದು; ಏಕೆಂದರೆ ಕಾವ್ಯವೇ ಬದುಕಿನ ಒಂದು ಸಣ್ಣ ಭಾಗ. ಕಾವ್ಯವೇ ಅಸಂಖ್ಯಮುಖಿಯಾದರೆ, ಇನ್ನು ಬದುಕು? ಇನ್ನೂ ವಿಸ್ತಾರವಾದುದು. ಹಾಗಾಗಿ ಕವಿಕರ್ಮವೂ ಅಸಂಖ್ಯ ಬಗೆಯದು. ಅಂದರೆ ಒಂದು ಕಾವ್ಯಕೃತಿ ಮೇಲೆ ಹೇಳಿದ ಪ್ರತಿಭಾವಂತನೊಬ್ಬನ ಯಾವುದೋ ಒಂದು ಕಾಣ್ಕೆಯ ಅಭಿವ್ಯಕ್ತಿ. ಇಂತಹ ಕಾವ್ಯದ ಧರ್ಮ ಯಾವುದು? ಕಾವ್ಯಧರ್ಮ ಎಂದರೆ ಕಾವ್ಯದ ಪರಿಣಾಮ ಎಂದು ಅರ್ಥವಿಸಬಹುದೇನೋ. ಎಂದರೆ ತನ್ನ 'ಆದಿಪುರಾಣ' ಇಂತಹ ಕಾವ್ಯಕುತೂಹಲಿಗಳಾದ ಓದುಗರ ಮತ್ತು ಜಿನಧರ್ಮೀಯ ಓದುಗರ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರುತ್ತದೆ ಎಂಬ ಅರಿವು ಪಂಪನಿಗಿದೆ.

ಜೈನಧರ್ಮೀಯರಿಗೆ ಈ ಕಾವ್ಯವು ಉಂಟುಮಾಡುವ ಪರಿಣಾಮದ ಸ್ಥೂಲ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಪರಿಭಾವಿಸಿಕೊಳ್ಳಬಹುದು: ಪುಣ್ಯ, ಶ್ರೇಯಸ್ಸು, ಸದ್ಗತಿ ಇಂತಹವುಗಳಿಗೆ ಇದರ ಓದು, ಮನನ, ಮತ್ತು ಅಲ್ಲಿನ ಧಾರ್ಮಿಕತೆಯ ಅನುಸರಣ ಕಾರಣವಾಗುತ್ತದೆ ಎನ್ನಬಹುದೇನೋ. ಆದರೆ ಕವಿ ಅದಕ್ಕಿಂತ ಹೆಚ್ಚಾಗಿ ಮತ್ತು ಮುಖ್ಯವೆಂದು ಬಗೆದು ನಿರೀಕ್ಷಿಸುವ 'ಸುಕವಿಜನ'ರ ಮೇಲೆ ಯಾವ ಪರಿಣಾಮ ಬೀರಬೇಕೆಂದು ನಿರೀಕ್ಷಿಸುತ್ತಾನೆ ಎಂಬುದನ್ನೀಗ ಸ್ವಲ್ಪ ವಿಶದಪಡಿಸಿಕೊಳ್ಳಬೇಕು. ಇಂಥ ಓದುಗರು ಜೈನರಾಗಿದ್ದೂ, ಧರ್ಮೇತರವಾದ 'ಕಾವ್ಯಧರ್ಮ'ವನ್ನು ನಿರೀಕ್ಷಿಸುವವರಾಗಬಹುದು, ಅಥವಾ ಜೈನೇತರ ಕಾವ್ಯಾಸಕ್ತರಾಗಿರಬಹುದು. ಆ ಮನೋಭಾವದ ಓದಿನ ಮಟ್ಟಿಗೆ ಅವರಿಬ್ಬರಲ್ಲಿರುವುದು ಒಂದೇ ಬಗೆಯ ನಿರೀಕ್ಷೆ. ಇಲ್ಲಿ ಪುಣ್ಯ, ಸದ್ಗತಿ ಇವುಗಳ ನಿರೀಕ್ಷೆಯಿಲ್ಲ. ಇಂಥವರು ಏನನ್ನು ನಿರೀಕ್ಷಿಸಬಹುದು ಅಥವಾ ಇಂಥವರ ಮೇಲೆ ಕಾವ್ಯ ಏನು ಪರಿಣಾಮ ಬೀರಬಹುದು?

ಕಾವ್ಯಾಸಕ್ತನು ಕಾವ್ಯದಿಂದ ನಿರೀಕ್ಷಿಸುವುದು ಒಂದು ವಿಶಿಷ್ಟ ಅನುಭವದ ಪುನರ್ನಿರ್ಮಿತಿಯನ್ನು, ಮತ್ತು ಬದುಕಿನ ಒಂದಂಶದ ವಿಶಿಷ್ಟ ಕಾಣ್ಕೆಯೊಂದನ್ನು. ಇಲ್ಲಿರುವುದು ಆದಿಜಿನನ ಚರಿತ್ರೆ, ಅವನು ಒಬ್ಬ ಮನುಷ್ಯನೇ; ನಾವೂ ಮನುಷ್ಯರೇ. ಹಾಗಾಗಿ ನಮ್ಮಿಬ್ಬರಲ್ಲಿರುವ ಸಮಾನಾಂಶ ಮಾನವ ಬದುಕು. ಜೈನರು ದೇವರಲ್ಲಿ ನಂಬಿಕೆಯಿಡದವರು; ಹೀಗಾಗಿ ಅವರಿಗೆ ಸಾಕ್ಷಾತ್ಕರಿಸಿಕೊಳ್ಳಬೇಕಾದ ಅಥವಾ ಸಾಯುಜ್ಯ ಹೊಂದಬೇಕಾದ ಅಥವಾ ತನ್ನಲ್ಲಿರುವ ದೈವಾಂಶವನ್ನು ಕಂಡುಕೊಳ್ಳಬೇಕಾದ ತುರ್ತು ಇಲ್ಲ. ಆದರೆ ತೀರ್ಥಂಕರನು ಸಾಮಾನ್ಯ ವ್ಯಕ್ತಿಗಳಿಗಿಂತ ತುಂಬ ಮೇಲುಮಟ್ಟದ ಜೀವಿ, ಅವನು ಜೀವನವನ್ನು [ಬದುಕು ಎಂಬ ನೀರು] ಪವಿತ್ರ ತೀರ್ಥವನ್ನಾಗಿ ಪರಿವರ್ತಿಸಿಕೊಂಡವನು. ಅವನ ಬದುಕು ಹೀಗಾಗಿರುವುದು ಅವನ ವೈಯಕ್ತಿಕ ಸಾಧನೆಯಿಂದ, ಅವನ ಬದುಕಿನ

ಪರಿಯು ಎಲ್ಲರಿಗೂ ಆದರ್ಶವಾದುದು, ಮತಧರ್ಮಗಳ ಪರಿಧಿಯನ್ನು ಮೀರಿ. ಪ್ರಾಯಶಃ ಆ ಪರಿಣಾಮವನ್ನು ತನ್ನ 'ಪುರಾಣಕಾವ್ಯ'ವು ಕಾವ್ಯಾಸಕ್ತರ ಮೇಲೆ ಮಾಡುತ್ತದೆ ಎಂಬುದು ಕವಿಯ ನಿರೀಕ್ಷೆಯಾಗಿರಬೇಕು [ಈ ದೃಷ್ಟಿಕೋನದಿಂದ 'ಆದಿಪುರಾಣ' ವನ್ನು ಕುರಿತು ನಡೆಸಿರುವ ವಿವೇಚನೆಯನ್ನು ಈ ಪುಸ್ತಕದ ಕೊನೆಯಲ್ಲಿರುವ ಒಂದು ಅನುಬಂಧದಲ್ಲಿ ಕಾಣಬಹುದು].

ಪಂಪ 'ಲೌಕಿಕ' ಎಂದು ಕರೆದುಕೊಳ್ಳುವ 'ವಿಕ್ರಮಾರ್ಜುನ ವಿಜಯ'ದ ಬಗ್ಗೆ ಒಂದಷ್ಟು ಚರ್ಚಿಸೋಣ. ಇಲ್ಲಿ ಲೌಕಿಕತೆ ನಮ್ಮ ವ್ಯಾವಹಾರಿಕ ಬದುಕಿಗೆ ಸಂಬಂಧಿಸಿದ್ದೇ? ಅಲ್ಲ. ಏಕೆಂದರೆ ಇಲ್ಲಿ ತುಂಬಿರುವುದು ರಾಜರ ಕತೆ, ಅವರ ನಡುವಣ ಭಿನ್ನಾಭಿಪ್ರಾಯಗಳು, ಕುಟಿಲ ಕಾರಾಸ್ಥಾನಗಳು, ಯುದ್ಧಗಳ ವರ್ಣನೆ ಇಂತಹವು. ಇವು ಸಾಮಾನ್ಯನ ಬದುಕಿಗೆ ಹೊರತಾದುದು, ತಾನೇ ಸೈನ್ಯದಲ್ಲಿ ಪಾಲ್ಗೊಳ್ಳದಿದ್ದರೆ. ಇಡೀ ಈ ಕಾವ್ಯವು ಉದ್ದಕ್ಕೂ ರಾಜತ್ವದ ವೈಭವೀಕರಣಕ್ಕೆ ಮೀಸಲಾಗಿದೆ ಎಂಬ ಭಾವನೆಯನ್ನು ಓದುಗನಲ್ಲಿ ಉಂಟುಮಾಡಿದರೆ ಆಶ್ಚರ್ಯವಿಲ್ಲ. ಕಾವ್ಯದ ಮೊದಲ ಪದ್ಯದಿಂದ ಕೊನೆಯದರವರೆಗೂ ಈ ಕಾರ್ಯ ನಡೆದಿರುವುದೂ ಸುಳ್ಳಲ್ಲ. [ಈ ಅಂಶವು ಲಾನುಬಂಧದಲ್ಲಿನ 'ಪಂಪ ಮತ್ತು ರಾಜತ್ವ' ಎಂಬ ಲೇಖನದಲ್ಲಿ ವಿವರವಾಗಿ ಪ್ರಸ್ತಾಪಿತವಾಗಿದೆ]. ಆದರೆ ಅದರ ಒಡಲಲ್ಲಿಯೇ ರಾಜತ್ವದ ವಿರುದ್ಧವಾದ ಆಕ್ರೋಶವೂ ಅಡಗಿದೆ, ಅದನ್ನು ಗುರುತಿಸಬೇಕು. ಈ ಆಕ್ರೋಶ ಯಾಕೆ?

ಪಂಪನ ಕಾಲದ ಕನ್ನಡ ನಾಡು, ನನ್ನ ದೃಷ್ಟಿಯಲ್ಲಿ, ಎರಡು ಬಗೆಯ ತೀವ್ರ ತಲ್ಲಣಗಳನ್ನು ಅನುಭವಿಸುತ್ತಲಿತ್ತು; ಹೇಳಿಕೊಳ್ಳಲಾಗದ ಸಂಕಟದ ಉರಿಯನ್ನು ಜನಪದವು ತನ್ನ ಮಡಿಲಲ್ಲಿ ಕಟ್ಟಿಕೊಂಡಿತ್ತು. 'ಸೆರಗಿನ ಕೆಂಡ'. ಅವುಗಳೆಂದರೆ ಜಾತಿ ಮತ್ತು ಯುದ್ಧ – ಇವುಗಳು. ಜಾತಿ ಎಂಬುದು ಒಬ್ಬ ವ್ಯಕ್ತಿಯ ಬದುಕನ್ನು ನಿರ್ಧರಿಸಿಬಿಡುವ ವ್ಯಾಪಕವೂ ಬಲಿಷ್ಠವೂ ಆದ ವ್ಯವಸ್ಥೆ. ವ್ಯಕ್ತಿಯೊಬ್ಬ ಯಾವ ಜಾತಿಯಲ್ಲಿ ಹುಟ್ಟಿದ್ದಾನೆ ಎಂಬುದರ ಮೇಲೆಯೇ ಆ ಕಾಲದ ವ್ಯಕ್ತಿ ಮುಂದೇನಾಗುತ್ತಾನೆ ಎಂಬುದು ನಿರ್ಧರಿತವಾಗುತ್ತಿತ್ತು. ಈಗಿಗಿಂತ ಆಗ ಜಾತಿವ್ಯವಸ್ಥೆ ತೀರ ನಿಷ್ಠುರವಾಗಿತ್ತು, ಕ್ರೂರವಾಗಿತ್ತು. ಹಾಗೆಯೇ ಯುದ್ಧ. ಯುದ್ಧ ನಡೆಯುತ್ತಿದ್ದುದು ಯಾರಿಗಾಗಿ, ರಾಜನ ಸಾಮ್ರಾಜ್ಯವಿಸ್ತರಣೆಗಾಗಿ ತಾನೇ? ಆದರೆ ಯುದ್ಧದಲ್ಲಿ ಪಾಲ್ಗೊಳ್ಳಬೇಕಾದವರು ಸಾಮಾನ್ಯರು, ದೃಢಕಾಯರಾದ ಯುವಕರು. ಯುದ್ಧದ ಗೆಲವು ದೊರೆಯುತ್ತಿದ್ದುದು ರಾಜನಿಗೆ, ಆದರೆ ಗೆದ್ದ ಮತ್ತು ಸೋತ ಎರಡೂ ಕಡೆಯ ಜನಗಳಿಗೆ ಸಿಕ್ಕುವುದು ಬವಣೆ. ಕಟ್ಟಿದ ಬದುಕನ್ನು ಕೆಡಹುವುದು, ಯುದ್ಧಪರಿಣಾಮದ ಬಗೆಗಿನ ಆತಂಕ, ಬಿಟ್ಟಿಯ ಕೆಲಸ, ಸಾವು–ನೋವು, ಆಸ್ತಿಪಾಸ್ತಿಯ ಹಾನಿ, ಮುಂದೆ ಏರಬಹುದಾದ ತೆರಿಗೆಯ ಭೀತಿ – ಇವುಗಳು. ಯಾವ ಕಾಲದಲ್ಲಿಯೂ ಯುದ್ಧ ಅದರ ಫಲಾನುಭವಿಗಳಾದ ಕೆಲವರಿಗೆ ಹೊರತಾಗಿ ಜನಗಳಿಗೆ ಬೇಕಾಗದು. ಜನ ಮೂಲತಃ ಯುದ್ಧವಿರೋಧಿಗಳೇ. ಆದರೆ ತನ್ನ ರಾಜ್ಯದ ಒಡೆಯ ಯುದ್ಧದಲ್ಲಿ ತೊಡಗಿರುವಾಗ ಯಾರಾದರೂ ಅದರ ವಿರುದ್ಧ ಮಾತನಾಡಿದರೆ, ಅದು ರಾಜದ್ರೋಹವಾಗುತ್ತಿತ್ತು, ಹಾಗೆ ಮಾತನಾಡಿದವರು ದಂಡನೆಗೆ ಈಡಾಗಬೇಕಾಗಿತ್ತು. ಹೀಗಾಗಿ ಯುದ್ಧಪರಿಸ್ಥಿತಿಯೆಂದರೆ 'ಅನ್ನಲಾಗದ ಅನುಭವಿಸಲಾಗದ' ಸಂಕಟ. ಯುದ್ಧಕ್ಕೆ

ಕಾರಣವಾದ ರಾಜನ ವಿರುದ್ಧ ಎಲ್ಲ ಕಾಲದಲ್ಲಿಯೂ ಸಾಮಾನ್ಯ ಜನತೆ ಹೊಂದುವ ಭಾವನೆ ಆಕ್ರೋಶವೇ. ನಮ್ಮ ನಾಡಿನ ಹತ್ತನೆಯ ಶತಮಾನದ ಸುತ್ತುಮುತ್ತಲ ಪರಿಸ್ಥಿತಿಯನ್ನು ನೋಡಿದರೆ, ಪ್ರಾಯಶಃ ಆಗಿನ ಕಾಲದ ರಾಜರು ನಡೆಸಿದ ಯುದ್ಧಗಳು ಅಸಂಖ್ಯಾತ; ಆರನೆಯ ವಿಕ್ರಮಾರ್ಜುನನೆಂಬ ಚಾಲುಕ್ಯ ಚಕ್ರವರ್ತಿ ಐವತ್ತು ವರ್ಷ ಆಳಿದನಂತೆ, ಆವನ ಆಳ್ವಿಕೆಯ ಅವಧಿಯಲ್ಲಿ ಐವತ್ತು ಯುದ್ಧಗಳನ್ನು ಮಾಡಿದನಂತೆ, ಇವನ ಮೇಲೆ ದಂಡೆತ್ತಿ ಬಂದವರೊಡನೆ, ತಾನೇ ದಂಡೆತ್ತಿ ಹೋಗಿ ಆಕ್ರಮಣ ಮಾಡಿ ಇತರರೊಡನೆ. ಜನರ ಪಾಡು ಏನಾಗಬೇಕು!

ಪಂಪನ 'ವಿಕ್ರಮಾರ್ಜುನ ವಿಜಯ' ಕಾವ್ಯವು ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವುದು ಈ ಎರಡು ತಲ್ಲಣಗಳನ್ನೇ. ಕರ್ಣನ ಪ್ರಸಂಗದ ಮೂಲಕ ಕವಿ ಧ್ವನಿಸುತ್ತಿರುವುದು ಒಂದು ಪಾತ್ರದ ದುರಂತವನ್ನು ಮಾತ್ರವಲ್ಲ, ಅದಕ್ಕೆ ಕಾರಣವಾದ ವ್ಯವಸ್ಥೆಯ ದುರಂತದ ಬಗ್ಗೆ. ಕರ್ಣನ ಸಾವಿನ ಸನ್ನಿವೇಶದಲ್ಲಿ ಬರುವ "ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನ್ ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ" ಎಂಬ ಮಾತಿನ ಮೂಲಕ ತನ್ನ 'ಸಮಸ್ತ ಭಾರತ' ಕಾವ್ಯದಲ್ಲಿನ ನೆನಪಿನಲ್ಲಿಡಬೇಕಾದ ಅಂಶವೆಂದರೆ ಜಾತಿದುರಂತದ ಪರಿಯನ್ನು ಎಂಬುದನ್ನು ಕವಿ ಸೂಚಿಸುತ್ತಿರುವಂತೆ; ತನ್ನ ಕಾವ್ಯವನ್ನು ಓದಿದ ಮೇಲೆ ಕರ್ಣನ ಸಾವಿಗೆ ಕಾರಣವಾದ ಜಾತಿವ್ಯವಸ್ಥೆಯ ದುರಂತದ ಬಗ್ಗೆ ಓದುಗ ಚಿಂತಿಸಬೇಕೆಂಬ ಆಶಯವೂ ಇರಬಹುದು.

ಮತ್ತೊಂದು ಅಂಶದ ಕಡೆಗೆ ನಮ್ಮ ಗಮನವನ್ನೀಗ ಹರಿಸಬಹುದು. ದ್ರೋಣನ ಸಾವಿನ ನಂತರ ಕರ್ಣನಿಗೆ ವೀರಪಟ್ಟವನ್ನು ಕಟ್ಟುವ ತನ್ನ ನಿರ್ಧಾರವನ್ನು ದುರ್ಯೋಧನ ಹೇಳಿದಾಗ ಅಶ್ವತ್ಥಾಮನು "ನಿಜದೊಳೆ ಭೂಪರೆಂಬರವಿವೇಕಿಗಳಪ್ಪರ್" ಎಂದು ಉದ್ಗರಿಸುತ್ತಾನೆ. ಅಂತೆಯೇ, ವೀರಪಟ್ಟ ಕಟ್ಟಿಸಿಕೊಂಡ ಮೇಲೆ ಕರ್ಣನು ಶರಶಯ್ಯೆಯ ಮೇಲೆ ಕುರುಕ್ಷೇತ್ರದ ಮತ್ತೊಂದು ಮೂಲೆಯಲ್ಲಿ ಮಲಗಿದ್ದ ಭೀಷ್ಮನ ಬಳಿ ಹೋಗಿ ಮುಂದೇನು ಮಾಡಬೇಕೆಂಬ ಬಗ್ಗೆ ಸಲಹೆ ಕೇಳುತ್ತಾನೆ. ಆಗ ಅವನು ಹೇಳುವುದೆಂದರೆ, "ಎಮಗಿಂಬುಕೆಯ್ವೊಡಂ ಸುಯೋಧನನ ರಾಜ್ಯಮನೊಲ್ವೊಡಂ ಶಲ್ಯನನೆ ಸಾರಥಿಮಾಡಿ ಕಾದುವುದು" ಎಂದು. ಅದರಂತೆಯೇ ದುರ್ಯೋಧನನು ಕರ್ಣನಿಗೆ ಸಾರಥಿಯಾಗೆಂದು ಕೇಳುವ ಪ್ರಸಂಗ. ಕೀಳು ಕುಲದವನಿಗೆ ಸಾರಥಿಯಾಗೆಂದು ಕೇಳಿದಾಕ್ಷಣವೇ ಸಿಡಿಲಾದ ಶಲ್ಯನು ಆಡುವ ಮಾತುಗಳೆಂದರೆ, "ಪೊದಳ್ದ ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂಚಲಂ ಅದಱಿಂದಮೋಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ" ಮತ್ತು "ಮದಾನ್ವಿತ ರಾಜಬೀಜಸಂಜನಿತಗುಣಂ ಮದಂ, ಮದಮನಾಳ್ದವಿವೇಕತೆಯಿಂದಮಲ್ತೆ ತೊಟ್ಟಿನ ಮೊಲೆವಾಲನುಂಡ ಗುಣಂ, ಆರ್ ಕಿಡಿಪರ್ ನರೇಂದ್ರರೊಳ್" ಎಂಬಿವು. ಅಶ್ವತ್ಥಾಮ ಮತ್ತು ಶಲ್ಯರ ಮಾತುಗಳು ಅವರ ವೈಯಕ್ತಿಕ ಅಭಿಪ್ರಾಯವನ್ನು ಸೂಚಿಸುತ್ತವೆ ಎಂದು ನನಗನ್ನಿಸುವುದಿಲ್ಲ, ಜನತೆಯು ರಾಜತ್ವದ ಬಗ್ಗೆ ಹೊಂದಿದ ಆಕ್ರೋಶ ಇಲ್ಲಿ ಹೊರಬಂದಿದೆ ಎನ್ನಿಸುತ್ತದೆ. ಈ ಎರಡೂ ಮಾತುಗಳು ಹೊಮ್ಮಿರುವುದು ಯುದ್ಧರಂಗದಲ್ಲಿ, ಯುದ್ಧದ ನಡುವೆ, ರಾಜನ ಎದುರಿಗೆ. ಯಾವಾಗಿನದೋ ಸಿಟ್ಟು ಇನ್ನಾವಾಗಲೋ ಸಿಡಿಯುವಂತೆ ಪಂಪಪ್ರತಿಭೆಯ ಆಳದಲ್ಲಿನ ರಾಜತ್ವವಿರೋಧಿ [ಯುದ್ಧವಿರೋಧಿ] ಧೋರಣೆ ಈ ಸನ್ನಿವೇಶಗಳಲ್ಲಿ ಹೊಮ್ಮಿದೆ.

ಕವಿಗೆ, ಎರಡು ನೆಲೆಯ ವ್ಯಕ್ತಿತ್ವಗಳು [ಎಲ್ಲರದೂ]: ವೈಯಕ್ತಿಕ ನೆಲೆ ಮತ್ತು ಪ್ರಾತಿಭ ನೆಲೆ. ಸಂಗತಿಯೊಂದರ ನಿಜಸ್ವರೂಪವನ್ನು ವ್ಯಕ್ತ್ಯತೀತ ನೆಲೆಯಲ್ಲಿ ಕಂಡುಕೊಳ್ಳುವ ಗುಣವೇ ಪ್ರತಿಭೆ ಎನ್ನುವುದಾದರೆ, ಕವಿ ವೈಯಕ್ತಿಕ ನೆಲೆಯಲ್ಲಿ ನಡೆದುಕೊಳ್ಳುವುದಕ್ಕಿಂತ ಅವನ ಈ ವ್ಯಕ್ತ್ಯತೀತ ನೆಲೆಯಲ್ಲಿನ ಕಾಣ್ಕೆ ಭಿನ್ನವಾದುದಾಗಿರುತ್ತದೆ ಎನ್ನಬಹುದು. ಹೀಗಾಗಿ ವ್ಯಕ್ತಿಯಾಗಿ ಪಂಪನಿಗೆ ರಾಜತ್ವದ ಬಗ್ಗೆ ಅಕ್ಕರೆಯಿರಬಹುದಾದರೂ, ಅವನ ಪ್ರಾತಿಭ ದೃಷ್ಟಿಗೆ ಅದರ ಕ್ರೌರ್ಯ ಸ್ಪಷ್ಟವಾಗುತ್ತದೆ. ಸಮರ್ಥ ಕವಿಯೊಬ್ಬನ ಕೃತಿಯು ಕವಿಕಾಲದ ಸುತ್ತಲ ವಾಸ್ತವವನ್ನು ಕಟ್ಟಿಕೊಡುತ್ತಲೇ ಅದು ಇರಬೇಕಾದ ಬಗೆಯನ್ನೂ ಒಳಗೊಳ್ಳುತ್ತದೆ; ಇದನ್ನೇ ಸದ್ಯ ಮತ್ತು ಶಾಶ್ವತ ಎಂಬ ಮಾತುಗಳ ಮೂಲಕ ಕೆಲವರು ಸೂಚಿಸುವುದು. ಕಣ್ಣಿಗೆ ಕಾಣುವುದರ ವಿವರಗಳ ಮೂಲಕ ಅದು ಬದಲುಗೊಳ್ಳಬೇಕಾದ ರೀತಿಯನ್ನು ಉತ್ತಮ ಕಾವ್ಯ ಧ್ವನಿಸುತ್ತದೆ.

ಪಂಪನ ಮತ್ತು ಅವನಂತಹ ಕವಿಗಳ ವೈಶಿಷ್ಟ್ಯ ಇರುವುದು ಇಲ್ಲಿಯೇ. ವ್ಯಾಸನ ಕತೆಯನ್ನಾರಿಸಿಕೊಂಡರೂ ಮಹಾಭಾರತವನ್ನವನು ಮೂಲದಲ್ಲಿದ್ದಂತೆಯೇ ಸ್ವೀಕರಿಸಲಿಲ್ಲ. ಸನ್ನಿವೇಶ ಪಾತ್ರಸ್ವರೂಪಗಳಂತಹ ಅಂಶಗಳಲ್ಲಿ ವ್ಯತ್ಯಾಸಗಳನ್ನು ಮಾತ್ರವೇ ಮಾಡಿಕೊಳ್ಳದೆ, ತನ್ನ ಕಾವ್ಯಗಳಲ್ಲಿ ತನ್ನ ಕಾಲದ ತಲ್ಲಣಗಳನ್ನೂ ಒಳಗೊಂಡು ನಿಜವಾದ ಜನಮಾನಸದ ಆಳದಲ್ಲಿನ ಅನಿಸಿಕೆಯನ್ನು ಹುದುಗಿಸಿದ್ದಾನೆ. ಇದನ್ನೇ ಕೆಲವರು ಪಂಪನ 'ಸಮಸ್ತಭಾರತ'ದ ಪರಿಕಲ್ಪನೆ ಎಂದು ಹೇಳುತ್ತಾರೆ, ಇರಬಹುದು. ಆದರೆ ನಾನು ಇದನ್ನೇ 'ದೇಸಿ' ಎನ್ನುತ್ತೇನೆ, ಆದರೆ ಇಷ್ಟು ಮಾತ್ರವೇ ಅಲ್ಲ. ಭಾಷೆ, ಸಂಸ್ಕೃತ ಮಾದರಿಯ ಕಾವ್ಯವಸ್ತು ಮತ್ತು ಆಕಾರಗಳ ನಡುವೆ ಕನ್ನಡದ ಸತ್ವವನ್ನು ಪ್ರಕಟಿಸುವ ಬಗೆ, ಮಾತಿನ ಬಳಕೆಯ ಪರಿ, ಕನ್ನಡದ್ದಲ್ಲದ ಅಕ್ಷರ ಛಂದಸ್ಸಿಗೆ ಅಚ್ಚಗನ್ನಡವನ್ನು ಒಗ್ಗಿಸುವ ಬಗೆ, ಕನಕಸ್ವಾಮಿಯ ಪ್ರಸಂಗದಂತಹ ಸನ್ನಿವೇಶಗಳಲ್ಲಿ ಸೇರಿಸಿರುವ ಜಾನಪದ ಸಂಸ್ಕೃತಿ ವಿವರಗಳು ಮತ್ತು, ಎಲ್ಲಕ್ಕಿಂತ ಮಿಗಿಲಾಗಿ, ತನ್ನ ಕಾಲದ ಜನರ ತಲ್ಲಣಗಳು ತವಕಗಳು, ಭಾವನೆ-ನಂಬಿಕೆಗಳು, ನೋವು ನಲಿವುಗಳು, ಆಸೆ ಆಕಾಂಕ್ಷೆಗಳು ಇವೆಲ್ಲ ಒಗ್ಗೂಡಿ 'ದೇಸಿ'ಯಾಗುತ್ತದೆ ಎಂದು ನನ್ನ ಭಾವನೆ. 'ಆದಿಪುರಾಣ'ದಲ್ಲಿ ಒಂದು ಮತಧರ್ಮದವರ ಆರಾಧ್ಯ ವ್ಯಕ್ತಿತ್ವದ ಚಿತ್ರಣವನ್ನು ಜೈನೀಯ ಪರಿಭಾಷೆಯ ಮೂಲಕವೂ ಅದರ ಚೌಕಟ್ಟಿನ ಪರಿಧಿಯಲ್ಲಿಯೂ ಮಾಡುತ್ತಲೇ, ಜೀವನ ಪಾವನವಾಗುವುದು ಹೇಗೆ, ನೀರು ತೀರ್ಥವಾಗುವುದು ಹೇಗೆ, ವ್ಯಕ್ತಿಯ ಬದುಕಿನ ಸಾರ್ಥಕತೆ ಎಲ್ಲಿ ಎಂಬುದರ ಬಗ್ಗೆ ಧ್ಯಾನಿಸಿದ್ದರೆ [ಆ ಕಾರಣದಿಂದಲೇ ಅದು ಧಾರ್ಮಿಕ, ಏಕೆಂದರೆ ಧಾರ್ಮಿಕತೆ ಎಂಬುದು ವೈಯಕ್ತಿಕ ಸಾರ್ಥಕತೆಯ ತುರ್ತೇ ವಿನಾ ಸಾಮೂಹಿಕ ಕ್ರಿಯೆಯಲ್ಲ], 'ವಿಕ್ರಮಾರ್ಜುನ ವಿಜಯ'ವು ತನ್ನ ಕಾಲದ ಸಾಮಾಜಕ ನಂಬಿಕೆಗಳು, ವಾಸ್ತವಗಳು ಇವುಗಳ ಸ್ವರೂಪದ ವಿವರಗಳ ನಡುವೆಯೇ ಒಡಲಾಳದ ಸಂವೇದನೆಯನ್ನು ಒಳಗೊಳ್ಳುತ್ತದೆ. ಮಾನವನ ಬದುಕೆಂದರೆ ಎರಡು ನೆಲೆಯದು: ಆಂತರಿಕ ಬದುಕು, ಮತ್ತು ಸಾಮಾಜಿಕ ಬದುಕು; ವ್ಯಕ್ತಿಯ ಆಶೋತ್ತರಗಳು ಮತ್ತು ಸಾಮಾಜಿಕ ಹೊಣೆಗಾರಿಕೆಗಳು. ಪಂಪನ ಈ ಎರಡು ಕಾವ್ಯಗಳು ಮಾನವ ಬದುಕಿನ ಎರಡು ಮುಖ್ಯ ನೆಲೆಗಳನ್ನು ಕುರಿತ ಪ್ರಾತಿಭ ಕಾಣ್ಕೆಯ ಫಲ. ಎಲ್ಲ ಕಾಲದ ಮಾನವ ಬದುಕಿನ ಪರಿಯೂ ಇದೇ ಆದುದರಿಂದ, ಆಯಾ ಕಾಲಕ್ಕೆ ಅನುಗುಣವಾಗಿ ಓದುಗರಿಗೆ ಇಂತಹ ಕಾವ್ಯಗಳು ಓದುಗರಲ್ಲಿ ಅರಳುತ್ತ,

ಪ್ರಸ್ತುತವಾಗುತ್ತವೆ. ಹೀಗಾಗಿಯೇ ಈ ಕಾವ್ಯಗಳು ಒಂದು ಸಾವಿರದ ಎಪ್ಪತ್ತು ವರ್ಷಗಳ ತಮ್ಮ ಇರುವಿಕೆಯಲ್ಲಿ ಎಲ್ಲ ಕಾಲದ ಕಾವ್ಯಾಸಕ್ತರ ಹೃದಯವನ್ನು ಗೆಲ್ಲಲು ಸಾಧ್ಯವಾಗಿದೆ.

ಅಂದರೆ, ಪಂಪನ ಕಾವ್ಯಗಳ ಶ್ರೇಷ್ಠತೆಯಿರುವುದು ಅದರ ಹೂರಣದಲ್ಲಿ. ಕನ್ನಡಿಗರ ಬದುಕಿನ ಸಂವೇದನೆ ಎಲ್ಲಕಾಲಕ್ಕೂ ಒಂದೇ, ತನ್ನದೇ ವಿಶಿಷ್ಟ ರೂಪದ್ದು. ಇದೇ 'ಕನ್ನಡತನ', ಅಂದರೆ ಕನ್ನಡಿಗರು ಬದುಕನ್ನು ಗ್ರಹಿಸಿಕೊಳ್ಳುವ ಕ್ರಮ. ಪ್ರಾಯಶಃ ಅದೇ ದೇಸಿ. ಪಂಪ ತನ್ನ ಕಾವ್ಯದ ವೈಶಿಷ್ಟ್ಯವೆಂದರೆ 'ದೇಸಿ' ಎಂದು ಹೇಳಿಕೊಳ್ಳುವವುದರ ಹಿಂದೆ ಈ ಮನೋಭಾವವಿರಬಹುದು. ಇದನ್ನು ಮುಂದಿನ ಕವಿಗಳೂ ಮೆಚ್ಚಿಕೊಂಡಿದ್ದಾರೆ; 'ಪಂಪನ ದೇಸಿ' ಎನ್ನುವುದು ಒಂದು ನುಡಿಗಟ್ಟಾಗಿಬಿಟ್ಟಿದೆ. ಅಷ್ಟು ಮಾತ್ರವಲ್ಲ, ಪಂಪ ಯಾವುದೇ ಅಭಿವ್ಯಕ್ತಿವಿಧಾನದಲ್ಲಿ ಅಂತರ್ವಾಹಿನಿಯಾಗಿರಬೇಕಾದುದು ದೇಸಿಯೇ ಎಂಬ ಅಭಿಪ್ರಾಯದವನಾಗಿ ಕಾಣುತ್ತಾನೆ. ಆದ್ದರಿಂದಲೇ "ಬಗೆ ಪೊಸತಪ್ಪುದಾಗಿ ದೇಸಿಯೊಳ್ ಪುಗುವುದು, ಪೊಕ್ಕ ಮಾರ್ಗದೊಳೆ ತಳ್ವುದು" ಎನ್ನುವುದು. ಇಲ್ಲಿ 'ಬಗೆ ಪೊಸತಪ್ಪುದಾಗಿ' ಎಂಬ ಮಾತು 'ಆದಿಪುರಾಣ'ದ "ಇದು ನಿಚ್ಚಂ ಪೊಸತು ಅರ್ಣವಂಬೊಲ್ ಅತಿ ಗಂಭೀರಂ ಕವಿತ್ವಂ" ಎಂಬ ವಾಕ್ಯವನ್ನು ನೆನಪಿಸುತ್ತದೆ. ಹೊಸತಾಗುವುದೆಂದರೆ ಅಪರಿಮಿತ ದೃಷ್ಟಿಕೋನಗಳಿಗೆ ಅನ್ವಯಿಸಬಹುದಾದುದು, ಪ್ರತಿ ಓದುಗನಿಗೂ ಪ್ರತಿ ಪೀಳಿಗೆಗೂ ಪ್ರಸ್ತುತವಾಗಿ ಕಾಣುವುದು ಎಂದರ್ಥ. ಕನ್ನಡ ಕಾವ್ಯ ಹೀಗಾಗಬೇಕಾದರೆ ಅದರ ಒಡಲಲ್ಲಿ 'ದೇಸಿ' ಅಥವಾ 'ಕನ್ನಡತನ' ಹುದುಗಿರಬೇಕು. ಇದು ಎಲ್ಲ ಕಾಲದ ಎಲ್ಲ ಬಗೆಯ ಕನ್ನಡ ಸಾಹಿತ್ಯದ ಮಾಗದರ್ಶಿ ಅಂಶ. ಇದನ್ನು ಮುಂದಿನ ಕನ್ನಡ ಕಾವ್ಯ ಪರಂಪರೆ ಒಪ್ಪಿದೆ. ಅದಕ್ಕಾಗಿಯೇ ಪಂಪ ಸಾವಿರ ವರ್ಷದ ಸರದಾರನಾಗಿದ್ದಾನೆ. ನಾಗರಾಜನೆಂಬ ಒಬ್ಬ ಹಿಂದಿನ ಕವಿಯಂತೂ "ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ" ಎಂದು ಉದ್ಗರಿಸಿದ್ದಾನೆ. ಇವತ್ತೂ ಕನ್ನಡ ಸಾಹಿತ್ಯ ಜನಸಂವೇದನೆಗೆ ಮಿಡಿಯುವುದನ್ನು ತನ್ನ ಆದರ್ಶವಾಗಿ ಸ್ವೀಕರಿಸಿದೆ. ಆ ಕಾರಣಕ್ಕಾಗಿ ಪಂಪ 'ಆದಿಕವಿ'ಯಾಗಿದ್ದಾನೆ, ಅವನ ಕಾವ್ಯಗಳು ಇಂತಹವಲ್ಲದ ರಚನೆಗಳನ್ನು 'ಇಕ್ಕಿ ಮೆಟ್ಟಿವೆ'.

* * * * * * *

ಕೃತಜ್ಞತೆಗಳು

ಈ ಕೃತಿಯನ್ನು ಪ್ರೊ. ಡಿ.ಕೆ. ಶ್ಯಾಮಸುಂದರ ರಾವ್ ಅವರು ಮುದ್ರಣ ಮಾಡುವ ಸಾಹಸಕ್ಕೆ ಕೈಯಿರಿಸಿದ್ದಾರೆ. ಪರಿಶ್ರೀ ಪ್ರಿಂಟರ್ಸ್ ಸಿಬ್ಬಂದಿ ಸುಂದರವಾಗಿ ಮುದ್ರಿಸಿದ್ದಾರೆ; ಶ್ರೀ ಗಂಜೀಫಾ ರಘುಪತಿ ಭಟ್ ಆಕರ್ಷಕವಾದ ಮುಖಪುಟ ರಚಿಸಿಕೊಟ್ಟಿದ್ದಾರೆ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

ಪರಿವಿಡಿ

ಪುಟ ಸಂಖ್ಯೆ

೧. ಪಂಪ : ಒಂದು ಚಿಂತನೆ ೩
೨. ಸಂಕ್ಷಿಪ್ತ ಆದಿಪುರಾಣ ೧೨
೩. ಟಿಪ್ಪಣಿಗಳು (ಸಂಕ್ಷಿಪ್ತ ಆದಿಪುರಾಣಂ) ೭೩
೪. ಸಂಕ್ಷಿಪ್ತ 'ವಿಕ್ರಮಾರ್ಜುನ ವಿಜಯಂ' ೧೦೯
೫. ಟಿಪ್ಪಣಿಗಳು (ಸಂಕ್ಷಿಪ್ತ ವಿಕ್ರಮಾರ್ಜುನ ವಿಜಯಂ) ೨೦೯
೬. ಅನುಬಂಧಗಳು
(ಅ) ಕನ್ನಡ ಚಂಪೂ ಕಾವ್ಯ ಪರಂಪರೆ ೨೪೫
(ಆ) ಪಂಪನ ಆದಿಪುರಾಣದಲ್ಲಿ ಜೀವ ಮಾಗುವ ಪರಿ ೨೫೬
(ಇ) ಪಂಪ ಹಾಗೂ ರಾಜತ್ವ ೨೬೫

ಸಂಕ್ಷಿಪ್ತ ಆದಿಪುರಾಣ

ಸಂಕ್ಷಿಪ್ತ ಆದಿಪುರಾಣ

ಪೂರ್ವಭವಾವಳಿ: ಭೋಗನಿರಸನಂ

ಶ್ರೀದೇವೇಂದ್ರ ಮುನೀಂದ್ರವಂದಿತ ಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿ ಬ್ರಹ್ಮನಗಾಧಬೋಧ ನಿಳಯಂ ದುರ್ವಾರಸಂಸಾರ ವಿ
ಚ್ಛೇದೋಪಾಯನಿಯುಕ್ತ ಸೂಕ್ತಿವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ೧

ಪದಿನೆಂಟುಂ ಕಿಲ್ಬಿಷಂಗಳ್ ಕಿಡೆ, ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ
ತಣಿವಂ ಕೈಕೊಂಡಮೂರ್ತರ್, ಚರಮತನು ಸಮಾಕಾರರುದ್ಧೂತಲೇಪರ್,
ಪ್ರಣತರ್, ನಿತ್ಯರ್, ಜಗನ್ಮಂಗಳನಿಳಯರನಂತರ್, ತ್ರಿಳೋಕೈಕ ಚೂಡಾ
ಮಣಿಗಳ್ ಸಿದ್ಧರ್ ಸ್ವಕೀಯಪ್ರಭುತೆಯನೆಮಗಂ ಮಾಳ್ಕೆತಿಪ್ರೀತಿಯಿಂದಂ ೨

ಮೂವತ್ತಾಱುಂ ಗುಣಂಗಳ್ ತಮಗಮರ್ದಿರೆ, ಸಂದೈದುಮಾಚಾರದೊಳ್ ಸ
ದ್ಭಾವಂ ಕೈಗಣ್ಮೆ, ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ
ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರಿನ್ನೆಮ್ಮನೇನೋ
ದಾವಂ ತಳ್ತಟ್ಟದಂತೋಸರಿಸಿ ಕಳೆಗೆ ಸಂಸಾರ ಕಾಂತಾರದಿಂದಂ ೩

ಹೇಯಂಗಳ್ ಖಳಕರ್ಮಬಂಧನಕರ ಕ್ರೋಧಾದಿಗಳ್ ಮತ್ತುಪಾ
ದೇಯಂಗಳ್ ದುರಿತೇಂಧನಾನಳ ಲಸದ್ರತ್ನತ್ರಯಂಗಳ್ ಸುಖೋ
ಪಾಯಂಗಳ್ ಗಡಿಮೆಂದು ಭವ್ಯಜನಮಂ ಕಣ್ಣೊಣಿಜೆ ಕಲ್ಪಿಪ್ಪುಪಾ
ಧ್ಯಾಯರ್ ಜ್ಯೋತಿಸುಗೆಮ್ಮ ಚಿತ್ತಗೃಹದೊಳ್ ರತ್ನತ್ರಯಜ್ಯೋತಿಯಂ ೪

ಬಗೆಯೊಳ್ ಪೊಣ್ಮೆ ದಯಾರಸಂ ಚರಿತದೊಳ್ ಕೈಗಣ್ಮೆ ಚಾರಿತ್ರಮಾ
ವಗಮಾವಶ್ಯಕದೊಳ್ ತಗುಳ್ದು ಪಲವುಂ ಶೀಲಂಗಳಂ ತಾಳ್ದಿದಂ
ದುಗಮೊಂದುಂ ತಮಗಾಗದಂತೆಸಗುವರ್ ಸರ್ವೋತ್ತಮರ್ ಸರ್ವ ಸಾ
ಧುಗಳೋರಂತೆ ಕಟಲ್ಚುಗೆಮ್ಮ ಮನದಿಂ ದುರ್ಮೋಹಸಂದೋಹಮಂ ೫

ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱಿದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆಂರೆದಪೆನಾ ಸರಸ್ವತಿಯೆ ಮಾಳ್ಕೆಮಗಿಲ್ಲಿಯೆ ವಾಗ್ವಿಳಾಸಮಂ ೬

ಗುರು ದೇವೇಂದ್ರ ಮುನೀಂದ್ರವಂದಿತನಮಿತಂ ದೇವಂ ಕಥಾನಾಯಕಂ
ಪುರುದೇವಂ ಕಥೆಯುಂ ತದಾದಿಪುರುಷ ಪ್ರಸ್ತುತ್ಯ ಜನ್ಮಾಳೀ ಬಂ
ಧುರಮೆಂದಂದೆ ಮದೀಯ ವಾಗ್ವಿಭವವಿನ್ಯಾಸಂ ಬಲಂಬೆತ್ತುದಿ
ನ್ನಿರು ಬಲ್ಲಿತ್ತಱ ಕೋಡು ಕೂರಿತದನಂತಿಂತುಂತೆನಲ್ ಬರ್ಕುಮೇ ೭

ಇದು ನಿಚ್ಚಂ ಪೊಸತರ್ಣವಂಬೋಲತಿಗಂಭೀರಂ ಕವಿತ್ವಂ ಜಗ
ಕ್ಕದಱಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ
ಭ್ಯುದಯಪ್ರಾಪ್ತಿನಿಮಿತ್ತಮುತ್ತಮಯಶಂ ಸಂಸಾರದೊಳ್ಸಾರಮ
ಪ್ಪುದಱಿಂ ಧರ್ಮಮದಂ ನಿಮಿರ್ಚುವುದಱಿಂ ಸಂಸಾರಸಾರೋದಯಂ ೮

ಇದುವೆ ಸುಕವಿಪ್ರಮೋದ
ಪ್ರದಮಿದುವೆ ಸಮಸ್ತಭವ್ಯಲೋಕ ಪ್ರಮದ
ಪ್ರದಮೆನೆ ನೆಗಟ್ಟಾದಿಪುರಾ
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ ೯

ಪ್ರಾಣಿಹಿತಮಮಂ ವಿನೇಯ
ಪ್ರೀಣನಕರಮಂ ಜಗತ್ತ್ರಯಪ್ರಕಟಿತ ಕ
ಲ್ಯಾಣಮನೀ ನೆಗಟ್ಟಾದಿಪು
ರಾಣಮನಪರಿಮಿತ ಭಕ್ತಿಯಿಂ ವಿರಚಿಸುವೆಂ ೧೦

ಲೋಕತ್ರಯಮಧ್ಯದೊಳ್ ಮಧ್ಯಮಲೋಕವೆಂಬ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿ ಪರಿವೃತವಾಗಿ ಜಂಬೂದ್ವೀಪಂ ನೆಗಟ್ದುದು. ಆ ಜಂಬೂದ್ವೀಪದ ನಟ್ಟನಡುವೆ ನಿಂದ ಮಂದರದ ಪೂರ್ವಾಪರ ದಿಗ್ವಿಭಾಗಂಗಳೊಳ್ ವಿದೇಹಂಗಳಿರ್ದುವು. ಅಲ್ಲಿ ಪಶ್ಚಿಮ ವಿದೇಹಕ್ಕಳಂಕಾರಮಪ್ಪ ಸೀತೋದಾ ನದಿಯ ಬಡಗಣ ಗಂಧಿಳ ವಿಷಯದ ನಡುವೆ ವಿಜಯಾರ್ಧಪರ್ವತಮೊಪ್ಪುಗುಂ. ಅವರೊಳುತ್ತರಶ್ರೇಣಿಯೊಳಲಕಾಪುರಂ ಒಪ್ಪಿ ತೋಱುಗುಂ. ಅದನಾಳ್ವನ್ ಅತಿಬಳನೆಂಬಂ. ಆತನ ಮಹಾದೇವಿ ಮನೋಹರಿಯೆಂಬಳ್. ಆ ಮಹಾದೇವಿಗಂ ಆ ವಿಯಚ್ಚರಾಗ್ರಣಿಗಂ ಮಗಂ ಮಹಾಬಳಂ. ಮಹಾಬಳಕುಮಾರಂ ಯುವರಾಜ ಪದವಿಗೆ ಯೋಗ್ಯನಾಗೆ ಖೇಚರೇಂದ್ರಂ ಕಂಠಿಕೆಯಂ ಕಟ್ಟಿದಂ. ಅತಿಬಳಂ ರಾಜ್ಯಂಗೆಯ್ಯುತ್ತಿರ್ಪಿನಂ.

ತೊಡರ್ದೀಪುತ್ರಕಳತ್ರಮೋಹದೀದೇಕಟ್ಟಿರ್ದಪಯ್ ನಿನ್ನ ಮೆ
ಟ್ಟಿಡಿದೇ ಕಾರಣಮಂತಕಂ ಕಡುಪಿನಿಂ ಕಂಠಗ್ರಹಂಗೆಯ್ಯದಿನ್
ತಡೆಯಂ ಚೇತರಿಸೆಂದು ಬಂದು ಕಿವಿಯೊಳ್ ಪೇಟ್ವಂತೆವೊಲ್ ಕೆನ್ನೆಯಿಂ
ದೊಡೆದೋರೊಂದೊಗೆತಂದುದಂದು ನರೆಗಳ್ ವಿದ್ಯಾಧರಾಧೀಶನಾ ೧೧

ಅಂತು ಬಂದ ಪಳಿತಂಗಳಂ ಕಂಡು ಅದುವೆ ಸಂಸಾರ ನಿರ್ವೇಗಕಾರಣಮಾಗೆ ಮಹಾಬಳಂಗೆ ಅಂಬರಚರಶ್ರೀಯನಿತ್ತು ಗುಣಧರ ಕೇವಳಿಗಳ ಪಾದ ಮೂಲದೊಳ್ ತಪೋವೃತ್ತಿಯನಾಂತಂ. ಇತ್ತ ಮಹಾಬಳ ಖಚರಪತಿಯುಂ ಗಗಚರ ರಾಜ್ಯಮಂ ನಾಲ್ವರುಂ ಅಮಾತ್ಯರ ಮೆಯ್ಯೊಳ್ ನಿಱೆಸಿ ನಿರಾಕುಳಸ್ವಾಂತನಾಗಿ ರಸವದ್ಗೇಯಂಗಳೊಳ್ ಮೂಡುತುಂ ಮುಟುಗುತ್ತುಂ ಖಚರೀಜನಾನನ ನವಾಂಭೋಜಂಗಳೊಳ್ ಕಂಪನೀಟ್ಕೊಳುತುಂ ನಂದನರಾಜಿಯೊಳ್ ನಲಿಯುತುಂ ಪೊೞ್ತುಗಳೆವಂ. ಸ್ವಯಂಬುದ್ಧನೆ ತನಗೆ ಪರಮ ವಿಶ್ವಾಸಭೂಮಿಯಾಗೆ ತತ್ಪರ್ಯಾಳೋಚಿತ ವಿಷಯಸುಖಾನುಭವನಿರತನುಮಾಗಿ ಮೂವತ್ತಾಱು ಲಕ್ಕೆ ಪುರ್ಬಂ ರಾಜ್ಯಂಗೆಯ್ಯೆ, ಸ್ವಯಂಬುದ್ಧಂ

ಮುಸುಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ ಕೂಡೆ ಜೋ
ಲ್ದು ಸಡಿಲ್ದಿರ್ದೊಡಲಳ್ಳೆತನಮಂ ಮೇಣ್ಕಾಣನೋ ಸಂತತ
ವ್ಯಸನೋದ್ರೇಕದ ಕುಂದನೇನೊಣರನೋ ಶಕ್ತಿಕ್ಷಯಂಗಾಣನೋ
ಬಿಸುಡಂ ಮುನ್ನಿನ ತನ್ನ ಲಂಪಳಿಕೆಯಂ ಮತ್ತಂ ಜರಾಜರ್ಜರಂ ೧೨

ಎಂದಾತ್ಮಗತದೊಳ್ ಬಗೆಯುತ್ತುಂ ಬಂದು ಖಚರಪತಿಯನೆಯ್ದಿ

ನಿನಗೀ ಸಂಸೃತಿವಾರಾಶಿತಟಮತ್ಯಾಸನ್ನಮಾಸನ್ನ ಭ
ವ್ಯನೆಂದೆಯ್ದೆ ಮುನೀಂದ್ರ ದಿವ್ಯ ಮತದಿಂ ನಿಶ್ಚೈಸಿದೆಂ ಮಾಣಲಿ
ನ್ನೆನಸುಂ ಬಾರದು ನಿನ್ನೊಳಾತ್ಮಹಿತಮಂ ನಿಶ್ಚೈಸು ಸನ್ಮಾರ್ಗ ಸೂ
ಚನೆಗೆಯ್ದಂ ಶರಣಂ ಜಿನೇಂದ್ರಚರಣಂ ವಿದ್ಯಾಧರಾಧೀಶ್ವರಾ ೧೩

ಎಂದು ಮುಟ್ಟನುಡಿದು ತನ್ನ ಕಂಡ ಕನಸುಗಳನ್ ಅನುಕ್ರಮಂದಪ್ಪದೆ ಅಱೆಪಿದ ಮಂತ್ರಿಮುಖ್ಯನ ನುಡಿಯೊಳ್ ಅಪಗತಕಲುಷಹೃದಯನಾಗಿ, ನಿಜಸುತಂ ಅತಿಬಳಕುಮಾರನಂ ರಾಜ್ಯಭಾರದೊಳ್ ನಿಱೆಸಿ ಜಿನೇಂದ್ರಾರ್ಚನಾಪುರಸ್ಸರಂ ವೀರಸಂಸ್ಥಾನಾರೂಢನಾದಾಗಳ್, ಸ್ವಯಂಬುದ್ಧಂ ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರ ಶರೀರ ಪ್ರತ್ಯಾಖ್ಯಾನಮಂ ಕೊಟ್ಟು ತೋಱಿಯಿಸಿದಂ. ಮಹಾಬಳ ಖಚರೇಂದ್ರಂ ಪ್ರಾಯೋಪಗಮನ ವಿಧಿಯಿಂದವಾತ್ಮೀಯ ಶರೀರಭಾರಮನಿೞಿಪಿ ಈಶಾನಕಲ್ಪದೊಳ್ ಮುಱಲುಂದಿದನ್ ಎೞ್ಚಱುವಂತೆ [ಲಲಿತಾಂಗನಾಗಿ] ಪುಟ್ಟಿದಂ. ಅಕೃತ್ರಿಮ ಚೈತ್ಯಾಲಯಂಗಳನರ್ಚಿಸಿ ತಪ್ತ ತಪನೀಯಚ್ಛಾಯನುಂ ನಿದ್ರಾ ಆಲಸ ಅಕ್ಷಿನಿಮೇಷ

ಜರಾ ಶೋಕ ವಿಷಾದವಿರಹಿತನುಂ ಏಕಪಾರಾವಾರೋಪಮಾಯುಷ್ಯನುಮಾಗಿ ಸ್ವಯಂಪ್ರಭೆ ಕನಕಲತೆ ಕನಕಮಾಳೆ ವಿದ್ಯುಲ್ಲತೆಯೆಂಬ ನಾಲ್ವರ್ ಮನೋನಯನವಲ್ಲಭೆಯರೊಳ್ ಸ್ವಯಂಪ್ರಭಾಭಿಧಾನೆಯರ್ ಪಲಂಬರುಮತಿಕ್ರಾಂತೆಯರಾಗೆ ತತ್ಸಂತಾನದೊಳ್

ಅಭಿನವ ಪಾರಿಜಾತ ಕುಸುಮಾಸವಮೊರ್ಮೊದಲುಣ್ಮೆ ದೇವದುಂ
ದುಭಿ ನಭದೊಳ್ ಪೊದಳ್ದೆಸೆಯೆ ಕಣ್ಗೆಸೆದಿರ್ಪ ನಿಜಾಂಗ ಸಂಗತ
ಪ್ರಭೆ ಸುರಲೋಕಮಂ ಬೆಳಗೆ ವಿಸ್ಮಯಮಪ್ಪಿನಮಾಗಳಾ ಸ್ವಯಂ
ಪ್ರಭೆ ಲಲಿತಾಂಗನಳ್ಕೆರ್ದೆಗೆ ತೊಟ್ಟನೆ ಬೇಂಟಮೆ ಪುಟ್ಟೆ ಪುಟ್ಟಿದಳ್ ೧೪

ನೆಗಟ್ದಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇ
ಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕಮದೊಂದು ದಗುಂತಿಗೊಂದು ಭಂ
ಗಿಗೆ ನೆಗಟ್ವೊಂದು ಮೆಲ್ಪಿನ ತೊದಳ್ನುಡಿಗಪ್ಪೊಡನೆಯ್ದೆವಾರವೇ
ನೊಗಸುವಮೆಂದು ತಳ್ತಗಲನಾಕೆಯನಾ ಲಲಿತಾಂಗವಲ್ಲಭಂ ೧೫

ಅಣಿಮಾದ್ಯಷ್ಟಗುಣಪ್ರಭೂತ ವಿಭವಂ ದೇವಾಂಗನಾಸನ್ಮನಃ
ಪ್ರಣಯ ಪ್ರೀಣಿತ ಮಾನಸಂ ಸುರವಧೂ ಲೀಲಾವಧೂತ ಪ್ರತಿ
ಕ್ಷಣ ಚಂಚಚ್ಚಮರೀರುಹಂ ಪಟುನಟಪ್ರಾರಬ್ಧಸಂಗೀತಕಂ
ತಣಿದಂ ಸಂತತಮಿಂತು ದಿವ್ಯಸುಖದೊಳ್ ಸಂಸಾರಸಾರೋದಯಂ ೧೬

ಅಂತಾತ್ಮಪುಣ್ಯೋಪಾರ್ಜಿತ ಅಮರಲೋಕ ಭೋಗಂ ಏಕಸಾಗರಪ್ರಮಿತ ಜೀವಿತಂ ಅಱುದಿಂಗಳ್ ಉಟಿದುದೆಂಬಂದಿಂಗೆ

ಸೂಡಿದ ಪಾರಿಜಾತನಮೇರುವ ಬಾಸಿಗಮೊಯ್ಯನೊಯ್ಯನಿ
ಪೋರ್ಡಿದುದಂದಿನಂಗರುಚಿ ಕಣ್ಗಿಳಿದಾಯ್ತು ವಿಭೂಷಣಂಗಳೊಳ್
ತೀಡುವ ರಶ್ಮಿಗಳ್ ಮಸುಳ್ದುವಾಗುಳಿಯಾಯ್ತನಿತುಬ್ಬೆಗಂ ಮೊಗಂ
ಬಾಡೆ ತಗುಳ್ದು ಸೂಚಿಸಿದುದು ದಿವಿಜಂಗವಸಾನಕಾಲಮಂ ೧೭

ನಾಕಲೋಕಚ್ಯುತಿಯನಾಗಳ್ ಅಜಿದು ಮನದೊಳಳ್ಕಿ ಬೆಳ್ಕನೆವೋಗಿ

ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ
ತರ ಸುರತಾಲಯಂಗಳಿರ ಚಾರು ವಿಲೋಲ ಕಟಾಕ್ಷಪಾತ ಸೌಂ
ದರ ಪರಿವಾರ ದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ
ರ್ನೆರಮೆಟೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ ೧೮

ಎಂದು ಸೈರಿಸದೆ, ಕಾಮಸಾಮ್ರಾಜ್ಯ ಸರ್ವಸ್ವಭೂತೆಯಪ್ಪ ನಲ್ಲಳ ಮೊಗಮಂ ನೋಡಿ,

ಸಂತಸದಂತನೆಯ್ದಿ ಸುರತಾಮೃತದೊಳ್ ತಣಿದಟ್ಟಜೆಂ ಜಗಿ
ಲ್ತಂತಿರೆ ಪತ್ತಿ ಮೆಯ್ಗಳೆರಡಾದೊಡಮೇನಸುವೊಂದೆ ನೋಟಿಸ್ಪೊಡೆಂ
ಬಂತಿರೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆನ್ನನು
ಯ್ವಂತಕನೆಂಬ ಬೂತನೆಲೆ ಮಾಣಿಸಲಾಗದೆ ಪೇಟ್ ಸ್ವಯಂಪ್ರಭೇ ೧೯

ಎಂದು ಧೈರ್ಯಮಂ ಪತ್ತುವಿಟ್ಟು ಅತಿಪ್ರಲಾಪಂಗೆಯ್ವ ಲಲಿತಾಂಗದೇವನಂ ಸಾಮಾನಿಕದೇವರ್ ಎಯ್ದೆವಂದು, "ನೀಂ ಭವ್ಯನಯ್ ಮತ್ತಿನ ಮಿಥ್ಯಾಜ್ಞಾನಿವೋಲ್ ನೀಂ ತರಳತೆವೆರಸಿಂತೇಕೆ ವಿಭ್ರಾಂತನಪ್ಪಯ್" ಎನೆ ಬಗೆಗೊಂಡು ಆಱು ಮಾಸಂ ಜಿನೇಂದ್ರನನ್ ಒಸೆದರ್ಚಿಸುತ್ತುಂ, ನೋಡೆ ನೋಡೆ ಶರತ್ಸಮಯ ಜಳಧರರೂಪದಿಂದದೃಶ್ಯನಾಗಿ – ಉತ್ಕಳಖೇಟಮೆಂಬುದು ಪೊೞಲ್, ಅದನಾಳ್ವ ಭೂಪತಿ ವಜ್ರಬಾಹು ನೃಪಂ, ಆ ನೃಪನ ಕಾಂತೆ ವಸುಂಧರೆ, ಅವರ್ಗೆ ಅಗ್ರಸೂನು – ವಜ್ರಜಂಘನೆನೆ ಬಂದು ಪುಟ್ಟಿದಂ. ರಾಜಕುವಾರಂ ಯೌವನಪ್ರಾದುರ್ಭಾವಮಂ ಪ್ರಕಟವಾಡೆ, ಅವನ್ ದೇವಲೋಕದೊಳಿನಿತಾನುಂ ಕಾಲಮನುಭವಿಸಿದನುಭವಕ್ಕೆ ಮೊದಲಿಗೆಯೆನಿಸಿದಾ ಸ್ವಯಂಪ್ರಭೆಯಂ ನೆನೆನೆನೆದು [ಇರೆ],

ಅನ್ನೆಗಂ, ಈಶಾನಕಲ್ಪದೊಳಾ ಶ್ರೀಪ್ರಭವಮಾನದೊಳ್ ನಿಜಪ್ರಾಣವಲ್ಲಭ ವಿಯೋಗ ಶೋಕವ್ಯಾಕುಳೆಯಾಗಿರ್ದ ಸ್ವಯಂಪ್ರಭಾದೇವಿಯ ಸಮೀಪಕ್ಕೆ ಮಹತ್ತರದೇವಿಯರ್ ಬಂದು "ಇಂತು ಬಾಯಟಿವುದೇ? ಗಾಂಪು, ಜಿನಪತಿಯಂ ಪೂಜಿಸು, ಮಱುಭವದೊಳಿನಿಯನಂ ಪಡೆವೆ" ಎಂಬುದುಂ, ಅದನೆ ಮನಂಗೊಂಡು ಗುರುಪಂಚಕಮಂ ನೆನೆಯುತ್ತುಂ ನಿಶಾಂತ ತಾರಕಾಕಾರದಿಂದೆ ಅದೃಶ್ಯರೂಪೆಯಾಗಿ, ಪೂರ್ವವಿದೇಹದ ಪುಂಡರೀಕಿಣಿಯೆಂಬ ಪೊೞಲನಾಳ್ವ ವಜ್ರದಂತ ಭೂಪತಿಗಂ ಲಕ್ಷ್ಮೀ ಮಹಾದೇವಿಗಂ ಮಗಳಾಗಿ [ಪುಟ್ಟಿ],

ಕಾಮನ ಮಂತ್ರದೇವತೆಯೊ ಕಾಮನ ವಿದ್ದೆಯೊ ಬದ್ದರಂ ಗೆಲಲ್
ಕಾಮನ ನಿಚ್ಚಮರ್ಚಿಸುವ ಕಯ್ದುವೊ ಕಾಮನ ಮೋಹಪಾಶಮೋ
ಕಾಮನ ಕಾಣ್ಬ ಕಯ್ಗಿಡಿಯೊ ವಿಸ್ಮಯಮಾದಪುದೆಂಬಿನಂ ಮಗಳ್
ಶ್ರೀಮತಿಯೆಂಬಳಾಗಿ ನವಯೌವನಲಕ್ಷ್ಮಿಯಂ ತಾಳ್ದಿದಳ್ ೨೦

ಒಂದು ದಿವಸಂ, ಆ ಕನ್ನೆ ಕನ್ನೆಮಾಡದೋವರಿಯೊಳಗೆ ಪವಡಿಸಿರೆ, ನಿಶಾವಸಾನ ಸಮಯದೊಳ್ ಭೋಂಕನೆಟ್ಟೆತ್ತು ಯಶೋಧರ ಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಗೆ ನೆರೆದ ದೇವಾಗಮನಮಂ ನೋಡಲೊಡಂ, ಪೂರ್ವಭವಸ್ಮರಣಮಾಗಿ ದೇವಲೋಕದ ಲಲಿತಾಂಗದೇವನಂ ನೆನೆದು ಬೆಚ್ಚನುಸಿರ್ದು ಮೂರ್ಛೆವೋದಳ್. ಕನ್ಯಾಂತಃಪುರದ ಮಹತ್ತರಿಯರ್ ಎಂತಾನುಂ ಮೂರ್ಛೆಯಿಂದೆಟ್ಟಜೆಸಿ ಬೆಸಗೊಳೆ, "ಎನ್ನೆರ್ದೆಯೊಳ್ ಲಲಿತಾಂಗದೇವನಾ ಸೌಂದರರೂಪಮಿನ್ನುಂ ಶಾಸನಂ ಬರೆದುದು; ಪಿರಿದುಂ ಅನುರಾಗದಿಂದಂ ಬರೆದ ಪಟಮನಿದನರ್ಚಿಸಿ ಕನ್ಯಾಬ್ರತದೊಳೆ ಕಾಲಮಂ ಕಟಿಪುವೆಂ" ಎಂದು ನುಡಿದು ಮಾಣ್ಬ ಕನ್ನೆಯ ನುಡಿಯಂ ಪಂಡಿತೆಯೆಂಬ ದಾದಿ ಮನಂಗೊಂಡು,

“ನಿನ್ನ ನಿರ್ವೇಗಮನಱಿದೆಂ, ಶಕ್ತಿಯೊಳ್ ಮುಕ್ತಿಯಂ ಸಾಧಿಸಲಕ್ಕುಂ, ನಿನ್ನಿನಿಯನನಱಿಸಲ್ ಸಾರ್ವೆಂ ಚಿಂತಿಸದಿರ್” ಎಂದು ಮುನ್ನಮಾ ಪಟದೊಳಾಕೆ ಬರೆಯದೆ ಬಂಚಿಸಿದ ಅವಿನಾಣಂಗಳನಱಿಯೆ ಬೆಸೆಗೊಂಡು, ಪಟಮಂ ಕೈಕೊಂಡು ಪೋಗಿ, ಜಗತ್ಪೂತಮೆನಿಸಿದ ಮಹಾ ಪೂತ ಜಿನಾಲಯಕ್ಕೆ ಬಂದು, ಕೆಲದ ಪಟ್ಟಸಾಲೆಯ ಮುಂತೆ ನೇಱಿ, ಕಾರ್ಯಸಿದ್ಧಿಯನೆ ಪಾರುತ್ತುಮಿರ್ದಳ್.

ಅನ್ನೆಗಂ ಒರ್ವಂ ರಾಜಕುಮಾರಂ ಶ್ರೀಮಜ್ಜಿನಭವನಮಂ ಮೂಮೆ ಬಲಗೊಂಡು ಸಿದ್ಧಶೇಷೆಯಂ ಕೊಂಡು ಪೊಱಮಟ್ಟು ಚಿತ್ರಪಟಮಂ ಭೋಂಕನೆ ಕಂಡು, ನೀಡುಂ ಭಾವಿಸಿ ನೋಡಿ, ಇರುಳ್ ಕಂಡ ಕನಸಂ ಮಱುದೆವಸಂ ನೆನೆವಂತೆ ಸುರಲೋಕಸುಖಾನು ಭವಮನಾಗಳೇ ನೆನೆದು, “ಹಾ! ಸ್ವಯಂಪ್ರಭೇ” ಎಂದು ಮೂರ್ಛೆವೋಪುದುಂ, ತುರಿಪದೆ ಕರಕಾಂಬುವಂ ತಳಿದೆಚ್ಚಱಿಸೆ ಕುಮಾರಂ ಮೂರ್ಛೆ ತಿಳಿದು, “ಈ ಪಟಮನಿಲ್ಲಿಗಾರ್ ತಂದರ್?” ಎಂಬನ್ನೆಗಂ ಭವದೀಯವಲ್ಲಭಂ ಲಲಿತಾಂಗಚರ ವಜ್ರಜಂಘನೆಂಬುದನಾ [ಪಂಡಿತೆ] ತಿಳಿದು, “ನೀಂ ಲಲಿತಾಂಗಚರನ್. ಸ್ವಯಂಪ್ರಭಾದೇವಿ ನಿಮ್ಮ ಮಾವಂ ವಜ್ರದಂತ ಚಕ್ರವರ್ತಿಗಂ ನಿಮ್ಮತ್ತೆ ಲಕ್ಷ್ಮೀಮತಿ ಮಹಾದೇವಿಗಂ ಶ್ರೀಮತಿಯೆಂಬ ಮಗಳಾಗಿ ಪುಟ್ಟಿದಳ್. ಆಕೆ ನಿನ್ನೊಳಾದ ವೃತ್ತಾಂತಮನೀ ಪಟದೊಳ್ ಬರೆದು, ಎನ್ನ ಕೈಯೊಳ್ ಕೊಟ್ಟು ‘ಮದೀಯ ಪ್ರಾಣವಲ್ಲಭನಂ ಅಱಿಸು’ ಎಂದಟ್ಟಿದೊಡೆ ಬಂದು ಇದನಿಲ್ಲಿ ಪಸರಿಸಿರ್ದೆಂ. ಮದೀಯ ಕ್ಲೇಶಫಳಮಿಂದು ನಿನ್ನ ಬರವಿನಿಂದಂ ಸಫಳಮಾದುದು” ಎಂಬುದುಂ ಆತಂ ರೋಮಾಂಚಶರೀರನಾದಂ.

ಅನ್ನೆಗಂ ಅತ್ತ ಶ್ರೀಮತಿ ವಜ್ರಜಂಘರ ಜನ್ಮಾಂತರ ಸ್ನೇಹರಸಾಮೃತಪಾತ್ರ ಚಿತ್ರಪಟವ್ಯತಿಕರಮಂ ವಜ್ರಬಾಹುಮಹೀಭುಜಂ ವಜ್ರಜಂಘಾನುಚರರಿಂದಂ ಅಱಿದು, ನಿಜತನೂಜಗುಣಮಣಿಮಾಲೆಗೆ ತತ್ ಕನ್ಯಾರತ್ನಮಂ ನಾಯಕಮಣಿ ಮಾಡಲೆಂದು ಆತ್ಮೀಯ ವಿಳಾಸಂ ಬೆರಸು ಬರೆ, ವಜ್ರದಂತಚಕ್ರವರ್ತಿಯುಂ ಅನಂತಸಾಮಂತ ಅಂತಃಪುರ ಪರಿವೃತನುಂ ಬಂಧುರಗಂಧಸಿಂಧುರಾರೂಢನಾಗಿ ಬಂದು

ಬಾಲಸಹಕಾರತರು ನವ
ಮಾಲಕೆಗತಿಲಲಿತ ಪೂಗಜಾತಂ ತಾಂ
ಬೂಲ ಲತೆಗೆಂಬವೊಲ್ ಸ್ಮರ
ಲೀಲಂ ನಿಜತನಯನೆನ್ನ ತನುಜೆಗೆ ತಕ್ಕಂ ೨೧

ಎಂಬುದುಂ ನಿಜೋತ್ತರೀಯಾಂಶುಕಮನೆ ಮಹೋತ್ಸವಧ್ವಜಂ ಮಾಡಿ, ವಸುಧರೆಯುಂ ತಾನುಂ ಪ್ರಿಯತನಯ ವಿವಾಹೋತ್ಸವಚಿತ್ತರಾಗಿ ಲಗ್ನಮನೆ ಪಾರುತ್ತುಮಿರ್ದರ್. [ಅನತಿಕಾಲದೊಳ್] ಪಾಣಿಗ್ರಹಣಂಗೆಯಿಸಿದಾಗಳ್ ವಿವಾಹಮಂಗಳಂ ರಯ್ಯಮಾಯ್ತು.

ದಿವಿಜೇಂದ್ರಾವಾಸದೊಳ್ ಮುನ್ನೊಡನೆ ದಿವಿಜಭೋಗಂಗಳಂ ಭೋಗಿಸಿರ್ದೀ

ಭವದೊಳ್ ಬಂದಿಲ್ಲಿ ಜಾತಿಸ್ಮರರೆನೆ ನೆರೆದೋರೊರ್ವರೊಳ್ ಮತ್ತಮತ್ಯು
ತ್ಸವದಿಂದಂ ಮರ್ತ್ಯಭೋಗಂಗಳನನುಭವಿಸಲ್ ನೋಂತರಿಂತೀಗಳೆಂತುಂ
ತವದಂತೇಂ ಪುಣ್ಯಮಂ ಪುಂಜಿಸಿದರೊ ಪಿರಿದುಂ ಶ್ರೀಮತಿ ವಜ್ರಜಂಘರ್ ೨೨

ಒರ್ಮೆ, ಆ ವಜ್ರಜಂಘ ಮಹಾಮಂಡಳೇಶ್ವರಂ ಸರೋಜಷಂಡದೊಳ್ ಬೀಡಂ ಬಿಟ್ಟಿರ್ಪನ್ನೆಗಂ – ಸ್ವರ್ಗಾಪವರ್ಗಮಾರ್ಗದಂತೆ ಅಕಲ್ಮಷರುಮ್, ಆದಿತ್ಯನಂತೆ ನಿರ್ಧೂತ ತಮಸ್ತಮರುಂ, ಚಂದ್ರನಂತೆ ಸರ್ವಸತ್ವಸೌಮ್ಯರುಮ್, ಮೇರುವಿನಂತೆ ಅಚಳಿತಗುಣರುಮಪ್ಪ ದಮಧರ–ಸಾಗರಸೇನರೆಂಬ ಗಗನಚಾರಣರ್ ಕಾಂತಾರಚರ್ಯಾಮಾರ್ಗದಿಂ ತಮ್ಮ ಆವಾಸಕ್ಕೆ ವರ್ಪರಂ ಶ್ರೀಮತಿಯುಂ ತಾನುಂ ಕಂಡು – ಸಂಭ್ರಮಂಬೆರಸು ಇದಿರಂ ನಡೆದು, ಬದ್ಧಾಂಜಳಿಪುಟಘಟಿತನಿಟಿಲರಾಗಿ, ನಿಲ್ಕೆಂದು ನಿಱಿಸಿ,

ನೆಱೆದತ್ತಿ ಭಕ್ತಿ ದಯೆ ಪುದಿ
ದಱಿವೌದಾರ್ಯಂ ಕ್ಷಮಾಗುಣಂ ಶಕ್ತಿಯುಮೆಂ
ಬಱಿಕೆಯ ಗುಣಮೇಟಿಱೊಳಂ
ನೆಱೆದಿತ್ತರ್ ಮುನಿಯುಗಳಕ್ಕೆ ದಾನವಮನವರ್ಗಳ್ ೨೩

ಕ್ಷಿತಿಚಕ್ರಾರ್ಚಿತ ಚಕ್ರವರ್ತಿಪದಮುಂ ದೇವೇಂದ್ರರಾಜ್ಯೋದಯೋ
ನ್ನತಿಯುಂ ಭವ್ಯಜನಂಗಳಾಸೆವಡುತಿರ್ಪಾರ್ಹಂತ್ಯಮುಂ ಸಾರ್ಗುಮ
ನ್ವಿತದಾನಂಗರಿದುಂಟೆ ಸೌಖ್ಯಮೆನುತ್ತುಂ ದಾನಪ್ರಭಾವಕ್ಕೆ ಸಂ
ಚಿತ ಪುಣ್ಯೋದಯನಾಗಲಾದಮೆಸೆದಂ ಸಂಸಾರಸಾರೋದಯಂ ೨೪

ಅಂತನೇಕ ಸಂವತ್ಸರಂಗಳ್ ಸಲ್ವಿನಂ, ಒಂದು ದಿವಸಂ ರಜನೀಸಮಯದೊಳ್ ಅನರ್ಘ್ಯಮರಕತಮಣಿ ಶಿಲಾಸಂಪಾದಿತ ಮೇದಿನೀಭಾಗದೊಳ್, ಅತಿವಿಶದ ಮಣೀದೀಪ್ತಿಕೋದ್ಯೋತ ದೂರೀಕೃತ ತಮಸ್ತಮದೊಳ್, ಪಯಃಪಯೋಧಿಫೇನ ಸಂಕಾಶ ದುಕೂಲಪ್ರಚ್ಛದಾಚ್ಛಾದಿತ ಶಯ್ಯಾತಳವಿಳಸಿತದೊಳ್, ಆ ದಂಪತಿಗಳ್ ಅನ್ಯೋನ್ಯಾಂಗಸ್ಪರ್ಶಸುಖ ನಿಮೀಳತವಿಳೋಚನರ್ ಅಂತಂತೆ ನಿದ್ರಾರಸವಶಗತರಾದರ್. ಅನ್ನೆಗಮಲ್ಲಿ ಮುಚ್ಚಿರ್ದ ಹರಿನೀಲ ಗವಾಕ್ಷ ಕವಾಟಪುಟಂಗಳಂ ತೆಱೆಯಲ್ ಮಱೆದು ಸೂರ್ಯಕಾಂತದ ಧೂಪಗುಂಡಿಗೆಯೊಳ್ ಅಳವಱಿಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರ ಕಾಳಾಗರುಧೂಪಂ

ಮೊದಲೊಳ್ ನೀಳ್ದು ಪೊದಳ್ದು ಪರ್ಬಿ ಪರಪಂ ಕೈಕೊಂಡು ಮಂದೈಸಿ ಮಾ
ಣದೆ ತನ್ನಂದದೊಳೇೞ್ಗೆಗುಂದದೆ ನಿರುದ್ಧೋಚ್ಛ್ವಾಸಮಪ್ಪನ್ನೆಗಂ
ಪುದಿದಾ ದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂ
ದುದು ಕೃಷ್ಣಾಗರು ಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್ ೨೫

ಬಿಡದೆ ಪೊಗೆ ಸುತ್ತೆ ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆದರೋಪರೋಪರೊ
ಳೊಡಸಾಯಲ್ ಪಡೆದರಿನ್ನವೇಂ ಸಯ್ಪೊಳವೇ ೨೬

ಅಂತು ಪಂಚತ್ವಮನೆಯ್ದಿದ ವಜ್ರಜಂಘಂಗಂ ಶ್ರೀಮತಿಗವಾ ತಿರಿಕಂಗಳ್ಗಂ ಉತ್ತಮ ಪಾತ್ರದಾನದ ದಾನಾನುಮೋದದ ಪುಣ್ಯಫಲದಿಂದಂ ಜಂಬೂದ್ವೀಪದ ಮಂದರಮಹೀಧರದ ಉತ್ತರದಿಗ್ಭಾಗದೊಳಿರ್ದ ಉತ್ತರಕುರುವೆಂಬ ಉತ್ತಮ ಭೋಗಭೂಮಿಯೆ ಜನ್ಮಭೂಮಿಯಾದುದು. ಅದಱೊಳ್ ಅಱುಸಾಯಿರ ಬಿಲ್ನಿಡಿಯರಾಗಿ ದಿನತ್ರಯದೊಳ್ ಬದರೀಫಲ ಮಾತ್ರಾಹಾರಿಗಳುಂ, ಆರೋಗ್ಯಶರೀರಿಗಳುಂ ಸುಂದರಾಕಾರಂಗಳುಂ, ತ್ರಿಪಲ್ಯೋಪಮ ಜೀವಿತಂಗಳುಂ ಆಗಿ

ತೊಲಗದ ಜವ್ವನಂ ತವದ ಮಚ್ಚು ಮರಲ್ಚುವ ನೋಟಮಟ್ಟಿಯಿಂ
ಸಲಿಸುವ ಭೋಗಮೊಲ್ದಗಲದೋಪರ ಕೂಟಮನಂಗರಾಗದೊಳ್
ನಲಿವ ವಿನೋದಮಾದಮೆರ್ದೆಯೊಳ್ ತಡಮಾಡೆ ಸುಖಂಗಳೋಳ್ ಪಳಂ
ಚಲೆವುದು ನಾಕಲೋಕಮುಮನೇನೆರವಿದುದೊ ಭೋಗಭೂತಳಂ ೨೭

ಅಂತನೇಕ ಭೋಗನಿವಾಸಮೆನಿಸಿದ ಭೋಗಭೂಮಿಯೊಳ್,

ಅಗರುವ ಧೂಪಧೂಮದೊಳೆ ಸೊರ್ಕಿದ ಸೊರ್ಕುಗಳಾಗಳಲ್ಲಿ ತೊ
ಟ್ಟಗೆ ತಿಳಿದಂತೆ ತನ್ಮನುಜದಂಪತಿ ದಂಪತಿಯಾಗೆ ತೋಳ ತ
ಳ್ತಗಲದಲಂಪಿನಿಂಪು ತವದಟ್ಟಿಱಿಳುರ್ಕೆ ನಿಮಿರ್ಕೆಗುಂದದಾ
ವಗಮತಿಸೌಖ್ಯಮಂ ಪಡೆವುದೀ ದೊರೆಯುನ್ನತಿ ಪಾತ್ರದಾನದಾ ೨೮

ಸಮ್ಯಗ್ದರ್ಶನಮಂ ಅಸ್ಖಲಿತಮಾರಾಧಿಸಿ ಆಯುಷ್ಯಾವಸಾನದೊಳ್ ವಜ್ರಜಂಘಾರ್ಯಂ ಶ್ರೀಪ್ರಭ ವಿಮಾನದೊಳ್ ಶ್ರೀಧರದೇವನೆಂಬ ದೇವನಾದಂ; ಶ್ರೀಮತ್ಯಾರ್ಯೆಯುಂ ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀರೂಪಮುಂ ಪತ್ತುವಿಟ್ಟು ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬ ದಿವಿಜನಾದಂ.

ಶ್ರೀಧರಂ ದಿವದಿಂ ಪರಿಚ್ಯುತನಾಗಿ ಜಂಬೂದ್ವೀಪದ ಪೂರ್ವ ವಿದೇಹದ ವತ್ಸಕಾವತೀ ವಿಷಯದ ಸುಸೀಮಾ ನಗರಮನಾಳ್ವ ಸುದೃಷ್ಟಿ ಮಹೀಪಾಳಂಗಂ ಸುನಂದಾ ಮಹಾದೇವಿಗಂ ಸುವಿಧಿನಾಮದಿಂ ಪುತ್ರನಾದಂ. ಸುವಿಧಿಗಂ ಮನೋರಮೆಗಂ ಶ್ರೀಮತೀಚರನೆನಿಸಿದಾ ಸ್ವಯಂಪ್ರಭದೇವಂ ದೇವಲೋಕದಿಂದವತರಿಸಿ ಕೇಶವಾಂಕಂ ಪ್ರಿಯತನಯನಾದಂ. ಆಗಿ ಪೂರ್ವಭವಸ್ನೇಹಂ ತಮ್ಮನೊಂದು ಮಾಡೆ ಪಲಕಾಲಂ

ಉರ್ವೀತಳಸುಖಮನ್ ಉಣುತುಮಿರೆ, ಒಂದು ದಿವಸಂ ಸುವಿಧಿಯುಂ ಸಮಾಧಿ ವಿಧಿಯಿಂ ಶರೀರ ಪರಿತ್ಯಾಗಂಗೆಯ್ದು ಅಚ್ಯುತೇಂದ್ರನಾದಂ; ಕೇಶವನುಂ ಆತ್ಮೀಯ ಗುರುವಿಯೋಗದೊಳ್ ಪರಿತ್ಯಕ್ತರಾಜ್ಯಂ ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ ಅಚ್ಯುತಕಲ್ಪದೊಳ್ ಪ್ರತೀಂದ್ರನಾದಂ.

ಆ ದೇವನಲ್ಲಿಂ ತಳರ್ದು ಜಂಬೂದ್ವೀಪದ ಪ್ರಾಗ್ವಿದೇಹದ ಪುಷ್ಕಳಾವತೀ ವಿಷಯದ ಪ್ರತಿಬದ್ಧ ಪುಂಡರೀಕಿಣೀ ಪುರದೊಳ್ ವಜ್ರಸೇನವಿಭುಗಂ ಶ್ರೀಕಾಂತೆಗಂ ಪುತ್ರನಾಗಿ ವಜ್ರನಾಭಿವೆಸರಂ ತಾಳ್ದಿದಂ. ಕೇಶವಚರ ಪ್ರತೀಂದ್ರಂ ಬಂದಾ ಪುರದೊಳ್ ವಣಿಗ್ವಂಶಾಗ್ರಣಿ ಕುಬೇರದತ್ತಂಗಂ ಅನಂತಮತಿಗಂ ಧನದೇವನೆಂಬ ತನೂಭವನಾದಂ. ವಜ್ರಸೇನ ಮಹಾರಾಜಂ ಕರ್ಮದ ತೊಡರಂ ಪಱಿವಂತೆ ಕೇಶಪಾಶಮಂ ಪಱಿದು ತಪಂಗೊಂಡಂ. ವಜ್ರನಾಭಿಯುಂ ಧರಾತಳಂ ಪೊಗೞ್ವಿನಂ ರಾಜ್ಯದೊಳ್ ನಿಂದಂ.

ನೆಗೞ್ದೀ ಷಟ್ಖಂಡಮಂ ಸಾಧಿಸಿದೊಡೆ ಫಲಮೇಂ ಭೋಗದಿಂ ಸಾಧ್ಯಮೇಂ ಬಂ
ಧುಗಳಿಂದಂ ಬರ್ಪುದೇಂ ಸುತ್ತಿದ ಪರಿಜನದಿಂದಪ್ಪುದೇನೊಂದುಮಿಲ್ಲ
ಚ್ಚಿಗಮೊಂದುಂಟಿಲ್ಲಿ ಗಾಂಪಿಂ ತೊಡರ್ವನೆ ಪಡೆವೆಂ ಶಾಶ್ವತ ಶ್ರೀಯನೆಂಬು
ಜ್ಜುಗದೊಳ್ ಚಿತ್ತಂ ಕರಂ ತಣ್ಮಲೆಯೆ ನೆಱೆಯೆ ನಿಶ್ಚೈಸಿದಂ ಸಾರ್ವಭೌಮಂ ೨೯

ಅಂತು ವಿಷಯವಿರಕ್ತನಾಗಿ ವಸುಂಧರಾಭರಮಂ ವಜ್ರದಂತನೆಂಬ ಅಗ್ರತನೂಜನೊಳ್ ನಿಱಿಸಿ, ನಿಜದ ರೂಪುಮಂ ಕೈಕೊಂಡು ಅಯ್ದುಂ ಮಹಾವ್ರತಂಗಳೊಳ್ ನೆರೆದು ತಪಮನೆತ್ತಿಕೊಂಡು ಅನಿತ್ಯಾದಿ ದ್ವಾದಶಾನುಪ್ರೇಕ್ಷಾನುಸ್ಮರಣ ಪರಿತಾಂತಃಕರಣನಾಗಿ ಶುಕ್ಲಧ್ಯಾನದೊಳ್ ಸಮಾಹಿತನುಪಶಾಂತ ಗುಣಸ್ಥಾನದೊಳ್ ಪ್ರಾಣ ಪರಿತ್ಯಾಗಂಗೆಯ್ದು ಸರ್ವಾರ್ಥಸಿದ್ಧಿಯೊಳ್ ಅಹಮಿಂದ್ರನಾಗಿ ಪುಟ್ಟಿ ಅಣಿಮಾದ್ಯಷ್ಟಗುಣಂಗಳ ಕಣೆಯಿರ್ಪಂತಿರ್ದು ಅಖಿಳಸುಖಮಂ ಪಡೆದಂ.

* * * * * * *

ಆದಿತೀರ್ಥಂಕರ ಚರಿತಂ: ಧರ್ಮಚಕ್ರವರ್ತಿತ್ವಂ

ಅನ್ನೆಗಮಿತ್ತ ಮೇರುಗಿರಿಯೆ ತನಗೆ ನಾಭಿಯಾಗಿ ಸೊಗಯಿಸುವ ಜಂಬೂ ದ್ವೀಪಾಂತರ್ಗತ ಭರತಕ್ಷೇತ್ರ ಮಧ್ಯಮಧ್ಯಮ ಖಂಡದೊಳ್ ಅವಸರ್ಪಿಣಿಯೊಳ್ ಜಘನ್ಯ ಭೋಗಭೂಮಿಯ ಕಡೆಯ ಪಲ್ಯೋಪಮದ ಭಾಗದೊಳ್

ಉತ್ತಮ ಮಧ್ಯಮಾಧಮಗುಣಂ ನಿಜದಾನದೆ ಭೋಗಭೂತಳ
ಕ್ಕೆತ್ತಮೊಡಂ ಪಡೆಯೆ ಬೇಡಿದ ಭೋಗಮನಿತ್ತು ಪೇೞಿಮಿ
ತ್ತಿತ್ತಿವರ್ಗಿತ್ತೆವೆಂಬ ಬಗೆ ತೊಟ್ಟಗೆ ಪುಟ್ಟಿರೆ ಮುನ್ನಮಿತ್ತು ಬೇ
ಳ್ಕುತ್ತಿನಿಸಿರ್ದ ಪಾರ್ಥಿವರೊಳೇಂ ದೊರೆಯಾದುದೊ ಕಲ್ಪಪಾರ್ಥಿವಂ ೧

ಮರಗಳ್ ಮುನ್ನಿತ್ತಿನಿಸಂ
ಮರವಟ್ಟವು ಪೆಟ್ಟುವೆರ್ಚೆ ಕುದಿದಿತ್ತೊಡಮೀ
ಧರಣೀತಲಕವಿವೇಕಿಯ
ಮರವಾನಸನಿತ್ತ ಚಾಗಮೇ ನಿಮಿರ್ದಪುವೇ ೨

ಅದಂ ಕಂಡು ಬೆರ್ಚಿ ಬೆಗಡುಗೊಂಡ ಭೋಗಭೂಮಿಜರಂ ಅಗ್ರಿಮಕುಲಧರಂ ಪ್ರತಿಶ್ರುತಿಯೆಂಬಂ ಸಂತಯಿಸಿದಂ. ಆನಂತರಮ್ ಜನಂಗಳ್ಗೆ ಸನ್ಮತಿವಿಕಾಸಮಂ ಮಾಡಿದ ಸನ್ಮತಿಯುಂ, ಮೃಗಸಂಕುಳಂ ಕೋಟ್ಮಸಗಿದೊಡೆ ಆರ್ಯಜನಕ್ಕೆ ಅವನಳವಡಿಸುವ ಬಗೆಯಂ ಪೇೞ್ದ ಕ್ಷೇಮಂಕರನುಂ, ಪಾಪಸತ್ವಂಗಳ್ ಕಾಡೆ ಲಕುಟ ಯಷ್ಟ್ಯಾದಿ ರಕ್ಷಾವಿಧಿಯಮ್ ಉಪದೇಶಂಗೆಯ್ದ ಕ್ಷೇಮಂಧರನುಂ, ಭೂಮಿಜರೊಂದೊರ್ವರಂ ಪಳಂಚಲೆಡೆವೆಡೆಯೊಳ್ ಸೀಮೆಗಳ ತೊಡರನುಡುಗಿಸಿದ ಸೀಮಂಕರನುಂ, ಮರ್ಯಾದಾವಿಪ್ರತಿಪತ್ತಿಯಿಂದಂ ಊಳ್ವ ಆರ್ಯಜನಕ್ಕೆ ಆಘಾಟಶುದ್ಧಿಯುಂ ಮಾಡಿದ ಸೀಮಂಧರನುಂ, ಬನಕಂ ಪೊಲಕಂ ನಡೆಯಲ್ಕಾರದೆ ಮಱುಗುವ ಆರ್ಯರಂ ಕಂಡು ಕರಿ ಹರಿ ವಾಹನಂಗಳಂ ಪಡೆದ ವಿಮಲವಾಹನನುಂ, ಸುತಮುಖ ಆಳೋಕನಮತಿವಿಸ್ಮಯಮಾಗೆ ಮಱುಗುವ ಆರ್ಯಜನಕ್ಕೆ ಅತಿವಿದಿತಂ ಮಾಡಿ ತಿಳಿಪಿದ ಚಕ್ಷುಷ್ಮನುಂ, ಪೆಸರಿಲ್ಲದಾರ್ಯರ್ಗೆ ಪೆಸರಿಟ್ಟ ಯಶಸ್ವಿಯುಂ, ಚಂದ್ರನಂ ತೋಱಿ ಕೂಸುಗಳನ್ ಆಡಿಸುವಾಟಮಂ ತೋಱಿದ

ಅಭಿಚಂದ್ರನುಂ, ಮಂಜಿನ ಮಱೆಯೊಳ್ ಮಸುಳ್ದ ಕಂಜಪ್ರಿಯ ಕುಮುದಬಂಧುಗಳಂ ಕಂಡಂಜಿರ್ದರಂ ಅಂಜಲಿಂ ಎಂದು ನಿಱೆಸಿದ ಚಂದ್ರಾಭನುಂ [ಎಂಬ ಪನ್ನೊಂದು ಮಂದಿ ಕುಲಧರರ್ ಭೋಗಭೂಮಿಯೊಳ್ ಅವತರಿಸಿದರ್.]

ಆತನ ಕಡೆಯೊಳ್ ಅಸಂಖ್ಯೇಯ ವರ್ಷಾನಂತರ ವಿರಾಮದೊಳ್ ಪನ್ನೆರಡನೆಯ ಕುಲಧರಂ ಪುಟ್ಟಿದಂದು

ತುಱುಗಿದ ಮುಗಿಲಾ ಮುಗಿಲಿಂ
ದೆಱಗುವ ಮಱೆ ಕದಡಿ ಬರ್ಪ ತೊಱೆ ಬೆಟ್ಟು ತೆವರ್
ಮೊಱೆಡುಪಜಲಧಿಗಳೆನೆ ಜನ
ಮಱೆಯಱೆಯೆ ದಲುದ್ದಬಿದ್ದಮಾಯ್ತವನಿತಳಂ ೩

ಅಂತು ಕರ್ಮಭೂಮಿಸ್ಥಿತಿಯೊಳ್ ಉಪನದಿ ಉಪಸಮುದ್ರ ಉಪಪರ್ವತಂಗಳ್ ಅತಿಪ್ರಕಟವಾಗೆ, ಸೋಪಾನಪದ್ಧತಿಗಳೊಳ್ ಗಿರಿದುರ್ಗಾರೋಹಣಮುಮಂ, ದ್ರೋಣೀಯಾನಪಾತ್ರದಿಗಳೊಳ್ ಜಳದುರ್ಗೋತ್ತರಮುಮನ್ ಉಪದೇಶಂಗೆಯ್ದು,

ಇದು ಕರ್ಮಭೂಮಿಯಂದಂ
ಪೊದಳ್ದು ತೋಱೆದುದು ಭೋಗಭೂಮಿಸ್ಥಿತಿ ಕುಂ
ದಿದುದೆಂದು ಪೇಟ್ದು ಮನು ಜಸ
ಮೊದವೆ ಮರುದ್ದೇವನೆಂಬ ಪೆಸರಂ ಪಡೆದಂ ೪

ಆತನ ಕಡೆಯೊಳ್ ಉಚಿತ ಮನ್ವಂತರವ್ಯತಿಕರಣದೊಳ್, ಪದಿಮೂಱನೆಯ ಕುಲಧರಂ ಪುಟ್ಟಿ,

ಪಸರಿಸೆ ಜರಾಯುಪಟಲಂ
ಪಸುಗೂಸುಗಳೊಡಲೊಳವನಗಲ್ಚುವ ತೆಱನಂ
ವಸುಮತಿಗಱೆಪಿ ಮಹಾತ್ಮಂ
ಪ್ರಸೇನಜಿತ್ ನಾಮಧೇಯಮಂ ಪ್ರಕಟಿಸಿದಂ ೫

ಆತನಿಂ ಬಱೆಯಂ ಅಸಂಖ್ಯೇಯ ವರ್ಷಪ್ರಮಿತ ಮನ್ವಂತರಾತಿಕ್ರಾಂತಿಯೊಳ್ ಪದಿನಾಲ್ಕನೆಯ ಮನು ಪುಟ್ಟಿದನ್

ಮನುಗಳೊಳೀತನೆ ಪದಿನಾ
ಲ್ಕನೆಯಾತಂ ತಪ್ಪದಪ್ಪನೆನಿಸಿಯುಮಂತಾ
ಮನುಗಳೊಳೀತನೆ ಮೊದಲಿಗ
ನೆನಿಸಿದನೇನ್ ನಾಭಿ ನಾಭಿಯೋ ಗುಣಗಣದಾ ೬

ಆ ನಾಭಿರಾಜನ ಕಾಲದೊಳ್ ಪಯೋಧರ ಕಾಲಸ್ವರೂಪಂ ವಿಚಿತ್ರರೂಪದಿಂ ನಭೋಭಾಗಮಂ ಪರ್ವಿದಾಗಳ್

ನವಮೇಘಧ್ವನಿ ಪುಷ್ಕರಧ್ವನಿ ಲಸತ್ತಾರಾಳಿ ಪುಷ್ಪೋಪಹಾ
ರವಿಲಾಸಂ ರುಚಿರಾಂಬುದಂ ಯವನಿಕಾವಿನ್ಯಾಸಮಾದಲ್ಲಿ ಚಿ
ತ್ರವಿದಂ ಬಂದವಸರ್ಪಿಣೀನಟನ ಪೇಟಿಬ್ದೊಂದಂದದಿಂದೆತ್ತಮಾ
ಡೆ ವಿಯದ್ರಂಗದೊಳಂದದೇನೆಸೆದುದೋ ವಿದ್ಯುನ್ನಟೀನರ್ತನಂ ೭

ಅಂತು ಕೊಂಡ ಪದವಟಿಗೆಗಳೊಳ್ ಕಳಮ ಷಷ್ಟಿಕಾ ವ್ರೀಹಿ ಯಾವನಾಳ ಗೋಧೂಮ ಕಂಗು ಶ್ಯಾಮಕ ಕೋದ್ರವ ನೀವಾರ ತಿಲ ಅತಸಿ ಮಸೂರಿಕಾ ಕುಳತ್ಥ ಮುದ್ಗ ಮಾಷ ರಾಜಮಾಷ ಆಢಕೀ ನಿಷ್ಪಾವ ಚಣಕ ಕುಸುಂಭ ಕಾರ್ಪಾಸ ಸರ್ಷಪ ಮರೀಚ ಧಾನ್ಯಕಾದಿ ವಿವಿಧ ಧಾನ್ಯಭೇದಂಗಳ್ – ಕಲ್ಪವೃಕ್ಷ ಪರಿಕ್ಷಯದೊಳ್ – ಪ್ರಜಾಜೀವನೋಪಾಯ ಹೇತುಗಳ್ ಅಕೃಷ್ಟಪಚ್ಯಂಗಳಾಗಿ ಬೆಳೆದೆಜಿಗಿರೆಯುಂ, ಆವಂ ಪುಲ್ಗಳೆಂದೆ ಬಗೆದು ಅಳುರ್ವ ಪಸಿವನಾಮೇಗೊಂಡೇನ್ ಗಳ ಗೆಯ್ವೆವೆಂದು ಜನಂ ನಾಭಿಯಲ್ಲಿಗೆ ವಂದರ್. ನಾಭಿರಾಜಂ

'ಬಗೆಯಲ್ವೇಡ ಸುಧಾ ಮಹೀರುಹದೊಳಾದೌದಾರ್ಯಮಂ ವೀರ್ಯಮೀ
ಯುಗದೊಳ್ ತತ್ತರುಗಿಲ್ಲ ಪಕ್ವಫಲಂ ನಮ್ರಾಮ್ರಾದಿ ಭೂಜಂಗಳೀ
ಯುಗದೊಳ್ ಕಲ್ಪ ಕುಜಂಗಳಿಂತಿವಱ ಪಣ್ ಭೋಜ್ಯಂಗಳಾರೋಗ್ಯ ಹೇ
ತುಗಳೀ ಪಣ್ಗಳೇ ಭೋಜ್ಯಮೆಂ'ದು ವಿಳಸದ್ಭಾಗ್ಯೋದಯಂ ತೋಱಿದಂ ೮

ತೋಱಿ ನಾನಾವಿಧ ಧಾನ್ಯಂಗಳಂ ಪದನಱಿದು ಉಡುಗುವ ಕಣಂ ಮಾಡುವ ಒಕ್ಕುವ ಅಡಕುವ ಬಯ್ತಿಡುವ ಅಕ್ಕಿ ಮಾಡುವ ವಿವಿಧ ಭಾಜನಂಗಳೊಳ್ ಅಡುವ, ಘೃತ ಲವಣ ತೈಲ ಕ್ಷೀರ ದಧಿವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ, ಅಳವಿಯಱಿದು ಉಣ್ಬ ಉಪಾಯಮಂ, ಪುಂಡ್ರೇಕ್ಷುದಂಡಂಗಳಂ ಕಡಿಕಡಿದು ಯಂತ್ರಪೀಡನೆಯಿಂ ರಸಂಗೊಳ್ವ ತೆಱನುಮನ್ ಅಱಿಯೆ ಪೇೞ್ದು,

ಚ್ಯುತಿಯಾಗೆ ಭೋಗಭೂಮಿ
ಸ್ಥಿತಿ ಕಲ್ಪಮಹೀರುಹ ವ್ಯಪಾಯದೊಳೆಂತುಂ
ಕ್ಷಿತಿಪತಿ ಕಲ್ಪ ಮಹೀಜ
ಸ್ಥಿತಿಯಿಂ ತಾನಿಂತು ಜನಮನೇಂ ನಿಱಿಸಿದನೋ ೯

ಕುಳಧರನೆನಿಪ ನಾಭಿರಾಜಂಗೆ ಸತಿ ಮರುದೇವಿಯೆಂಬಳ್. ಅನ್ಯೋನ್ಯಪ್ರೇಮವಾಗಿ ನಿಳಿಂಪದಂಪತಿಯುನೆ ಪೋಲ್ವ ತತ್ ದಂಪತಿಯಿಂದಂ ಪವಿತ್ರೀಭೂತವಪ್ಪ ಭೂತಳೋದ್ದೇಶದೊಳ್ ಉತ್ಪತ್ಸ್ಯಮಾನ ಭಾವೀ ತೀರ್ಥಕರ ಪುಣ್ಯ ದೂತಾಹೂತಂ ಪುರುಹೂತಂ ಬಂದು

ಕೆದಱೆ ಮನುಷ್ಯದಂಪತಿಗಳಿರ್ದುವನೊಂದೆಡೆಯೊಳ್ ತೆರಳ್ಚಿ ನಾ
ಕದ ಫಣಿಲೋಕದಂಕದ ಪೊಲಲ್ಗಳುಮೀ ಪೊಲಲೊಂದು ರಮ್ಯ ಹ
ರ್ಮ್ಯದ ಬೆಲೆಗಂ ಬರಲ್ ನೆಱೆಯವೆಂಬಿನಮುಜ್ಜ್ವಳ ಪಂಚರತ್ನ ಭಾ
ಸ್ಪದ ಸದನಂಗಳಿಂ ನೆಱೆದುದಂ ಸಮೆದಂ ಪುರಮಂ ಪುರಂದರಂ ೧೦

ಅಂತು ಸಮೆದ ಪುರವರಕೆ - ಅರಾತಿನಿಕರಕ್ಕೆ ಅಯೋಧ್ಯೆಯಪ್ಪುದಱಿಂದೆ ಅಯೋಧ್ಯೆಯುಂ, ಅನೇಕ ನಿಕೇತನಸಹಿತಮಪ್ಪುದಱಿಂ ಸಾಕೇತಮುಂ, ವಿನೀತ ಜನಸಂಕೀರ್ಣಮಪ್ಪುದಱಿಂ ವಿನೀತೆಯುಂ, ಭವಿಷ್ಯತ್ ಸುಕೌಶಲವಿಷಯ ಸಹಚರ್ಯದಿಂ ಸುಕೌಶಲೆಯುಂ ಎಂಬ ಪೆಸರ್ಗಳನಿಟ್ಟು ನಾಭಿರಾಜಂಗೆ ರಾಜ್ಯಾಭಿಷೇಕಂ ಗೆಯ್ದು ಮರುದೇವೀ ಮಹಾದೇವಿವೆರಸು ಪಟ್ಟಂಗಟ್ಟಿ, ಸಕಳಜನಮನ್ ಆಜ್ಞಾಕರಣದೊಳ್ ನಿಯೋಜಿಸಿ, ದಿವಿಜಕುಜಜನಿತ ವಸನ ಪ್ರಸವ ವಿಲೇಪನಾಭರಣಂಗಳಿಂ ಪೂಜಿಸಿ,

ಸುರರಾಜಂ ತಾನೆ ರಾಜ್ಯಾಭಿಷವಣ ವಿಧಿಯಂ ಮಾಡಿದಂ ಸ್ವರ್ಗದಿಂದಂ
ಪುರುದೇವಂ ಬಂದಪಂ ನಂದನನೆನಗೆನಿಸಲ್ಕಾನೆ ಸಂಸಾರ ಸೌಖ್ಯಾ
ಕರನಾಗಿರ್ದಪ್ಪೆನೆಂಬುತ್ಸವದೊಳೆ ಸುಖದಿಂದಿರ್ದನೊಪ್ಪಿರ್ದಯೋಧ್ಯಾ
ಪುರದೊಳ್ ಶ್ರೀ ನಾಭಿರಾಜಂ ಸುಕವಿಜನ ಮನೋಮಾನಸೋತ್ತಂಸಹಂಸಂ ೧೧

ಆ ಪ್ರಸ್ತಾವದೊಳ್

ಲಯಮಂ ಕರ್ಮತಮಸ್ತಮಕ್ಕೆ ಜಯಮಂ ಧರ್ಮಕ್ಕೆ ಪೀನಂ ಪರಾ
ಜಯಮಂ ದೋಷಗಣಕ್ಕೆ ಲಕ್ಕ ತೆಱದಿಂ ಮುನ್ ಮಾಡಿ ಸರ್ವಾರ್ಥ ಸಿ
ದ್ಧಿಯನೀಯಲ್ಕೆ ವಿನೇಯ ಸಂತತಿಗಭಿಪ್ರಾಯಾರ್ಥಸರ್ವಾರ್ಥಸಿ
ದ್ಧಿಯಿನುದ್ಭೂತ ತಮಂ ಬರಲ್ಕೆ ಬಗೆದಂ ಸಂಸಾರಸಾರೋದಯಂ ೧೨

ಯುಗಮಂ ನಿಪ್ಪೊಸತಪ್ಪಿನಂ ಕೃತಯುಗಂ ಮಾಡಲ್ ಸುರೇಂದ್ರಾಳಿಗಾ
ವಗಮುತ್ಸಾಹಮನುಂಟುಮಾಡಲೆಡೆಗೊಟ್ಟೀ ಧರ್ಮಮಂ ನೀಂ ಜಲ
ಕ್ಕಗೆ ಮಾಡಲ್ ನಡೆತಪ್ಪುದೆಂದು ನಯದಿಂ ಸಾಕೇತಮುತ್ಕೇತ ಬಾ
ಹುಗಳಿಂದಂ ಕರೆವಂತೇನೆಸೆದುದೋ ಸರ್ವಾರ್ಥಸಿದ್ಧೀಶನಂ ೧೩

ಅನ್ನೆಗಂ ಅಮರಪತಿ ಪರಮನ ಚರಮ ಗರ್ಭಾವತರಣಮನ್ ಅವಧಿಯಿಂದಂ ಅಱಿದು ಅಱುದಿಂಗಳುಂಟೆನೆ ಮುನ್ನಮೆ

ಸುರಿವುದು ತಡೆಯದಯೋಧ್ಯಾ
ಪುರದೊಳ್ ನೀನಿಂದೆ ತೊಡಗಿ ವಸುಧಾರೆಯನಾ

ದರದಿನೆನೆ ಸಹಜ ಭಕ್ತಿಯ
ಭರದಿಂ ಸುರಪತಿಯ ಬೆಸದಿನೊಸೆದಂ ಧನದಂ ೧೪

ಮತ್ತಮೆತ್ತಾನುಂ ತೆಱಿದ ಬೆಸಂಗಳಂ ಬೆಸಸುವುದುಂ, ಅಮರ ಕಾಮಿನೀ ಮಹತ್ತರಿಕೆಯರ್ ಜಿನಜನನಿಯ ಮನಮನಱಿದೋಲಗಿಸುವಲ್ಲಿ

ಮನಮೊಲ್ದಿಂದ್ರನಿವಾಸ ಸಂಭವ ಶುಚಿ ದ್ರವ್ಯಂಗಳಿಂ ಗರ್ಭಶೋ
ಧನಮಂ ದೇವಿಯರಿರ್ದು ಮಾಡೆ ಪೆಱದಿನ್ನೇನೆಂಬುದಾ ಕಾಂತೆಗಂ
ದು ನಯಂ ಬೇಱೆಬೆಡಂಗು ಬೇಱೆಪೊಳೆವಂಗಚ್ಛಾಯೆಯುಂ ಬೇಱೆ ತೊ
ಟ್ಟನೆ ಮೆಯ್ದೋಱೆ ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೊಪ್ಪಿದಳ್ ೧೫

ಮತ್ತಂ ಅಮರಾಧೀಶ ಶಾಸನದೊಳೆ ನಾಭಿರಾಜ ರಾಜಮಂದಿರಾಂಗಣದೊಳ್ ಧನದಂ ಪಂಚರತ್ನಮಯವೃಷ್ಟಿಯಂ ಪ್ರತಿದಿನಂ ಸುರಿಯೆ

ಧರೆ ರತ್ನಗರ್ಭಮಾದುದು
ಸುರರೆಲ್ಲಂ ಹರ್ಷಗರ್ಭರಾದರ್ ಪಿರಿದ
ಚ್ಚರಿಯನೆ ಹಿರಣ್ಯಗರ್ಭನ
ನಿರುಪಮ ಗರ್ಭಾವತರಣ ಮಂಗಳ ವಿಧಿಯೊಳ್ ೧೬

ಮತ್ತೊಂದು ದಿವಸಮ್, ಆ ಮರುದೇವಿ ಮಹಾದೇವಿ ಚತುರ್ಥಸ್ನಾನದೊಳ್ ಕಲ್ಪದ್ರುಮ ದುಕೂಲವಸನೆಯಾಗಿ,

ಶ್ರೀಗೆ ಕುಳಸದನಮೆನೆ ತೊಳಪ ಮಣಿಭವನದೊಳ್
ರಾಗರಸಮೊದವೆ ಸರಸಿರುಹಸಮವದನದೊಳ್
ಪೊಳೆವ ಪಚ್ಚದೊಳೆ ಸೊಗಯಿಸುವ ಮೃದುತಲ್ಪದೊಳ್
ಲಳಿತ ಗಂಗಾನದೀ ಲಹರಿಕಾತಲ್ಪದೊಳ್
ದೇವಿ ಮರುದೇವಿ ವಿಶದೀಕೃತಾಶಾಂತದೊಳ್
ಭಾವಿ ಜಿನಜನನಿ ಸತಿ ಪವಡಿಸಿ ನಿಶಾಂತದೊಳ್
ಚಂಡಗಜಗಮನೆ ಪರಿಖಂಡಿತಾಘಾಳಿಯಂ
ಕಂಡಳೀರೆಂಟುಮೊಳ್ಗನಸಿನೆಸೆವೋಳಿಯಂ
ಶರದಮಳ ಜಳದನಿಭ ಧವಳ ಗಜರಾಜನಂ
ಕುಮುದದಳ ಧವಳರುಚಿ ರುಚಿರ ವೃಷನಾಥನಂ
ಲೋಲಲಾಂಗೂಲ ಮದಸಿಂಧುರಾರಾತಿಯಂ
ದರದಲಿತ ದಲಕಳಿತ ಸರಸಿರುಹನಿಳಯೆಯಂ

ವಿಕಚನವಮಾಲಿಕಾ ಕುಸುಮ ನವಮಾಲೆಯಂ
ವಿಮಳತರ ಗಗನತಳ ತಿಳಕ ಹಿಮಕಿರಣನಂ
ಉದಯಗಿರಿಶಿಖರಗತ ತರುಣ ಮಾರ್ತಂಡನಂ
ಮಿಳಿರ್ದು ಜಳದೊಳಗೆ ಪೊಳೆವೆರಡೆಳೆವಾಳೆಯಂ
ಜಳದಳನಯನಯುಗೆ ಪೊಣರ್ದ ಮಣಿಕುಂಭನಂ
ಜಳಜಕುಲ ವಿಜಿತಜಳ ಪದ್ಮಿನೀನಿಳಯಮಂ
ಕರಿಮಕರ ಕರದಳಿತ ವೀಚಿ ವಾರಾಶಿಯಂ
ಮಂದರೋತ್ತುಂಗ ಕಂಠೀರವಾಸಂದಿಯಂ
ಸ್ಥೂಳಮಣಿಖಚಿತ ಸುರಪರಿವೃತ ವಿಮಾನಮಂ
ಕ್ವಣಿತ ಮಣಿಕಿಂಕಿಣೀನಿನದ ಫಣಿಗೇಹಮಂ
ಸುರುಚಿರಾಂಶೂಲ್ಲಸದ್ ರತ್ನಸಂಘಾತಮಂ
ಸತತಗತಿಪಥಮನಳುರ್ವುಜ್ಜ್ವಲ ಜ್ವಾಲೆಯಂ
ನಿಜವದನವನಜಮಂ ಪುಗುವ ವೃಷಭೇಂದ್ರನಂ
ನೋಡಿ ಗಜಗಮನೆ ಕನಸೆಂದು ಬಗೆವನ್ನೆಗಂ
ತೀಡೆ ಕಿವಿಗುಚಿತ ಮಂಗಳನಿನದಮನ್ನೆಗಂ ೧೭

ಕಂಡುಪ್ಪವಡಿಸಿ ಮಜ್ಜನ
ಮಂಡನವಿಧಿಯಂ ಲತಾಂಗಿ ನಿರ್ವರ್ತಿಸಿ ಭೂ
ಮಂಡಲಪತಿಗಱಿಪಿದೊಡೆರ್ದೆ
ಗೊಂಡವಱ ಫಲಂಗಳನಿತುಮಂ ಮನುತಿಳಕಂ ೧೮

ನಮಗೆ ತನೂಜಂ ದಿವದಿಂ
ದಮೋಘಮನವತರಿಸಿದಪ್ಪನಖಿಳ ವಿನೇಯ
ಪ್ರಮದಕರಂ ದಿವಿಜೇಂದ್ರ
ಪ್ರಮೋದಕರನೆನೆ ಗುಣಾಕರಂ ತೀರ್ಥಕರಂ ೧೯

ಎಂದು ನಿರ್ವಚಿಸುವನ್ನೆಗಂ, ಸರ್ವಾರ್ಥಸಿದ್ಧೀಶ್ವರನ್ ಆ ಭುವನಾಂಬಿಕೆಯ ಗರ್ಭಸರೋವರಾಂಬುವಿನೊಳ್ ಚಂದ್ರಬಿಂಬದಂತೆ ಸಂಕ್ರಮಿಸಿದಾಗಳ್, ದೇವೇಂದ್ರಂ ಚತುರ್ನಿಕಾಯ ಅಮರರ್ವೆರಸು ಪ್ರಥಮಕಲ್ಯಾಣಮಂ ನಿರ್ವರ್ತಿಸಿದಂ. ಗರ್ಭಂ ಬಳೆಯೆವಳೆಯೆ

ಜ್ಞಾನಮಯಂ ತೇಜೋನಿಧಿ
ತಾನಿರ್ದುಂ ತಾಯ ಗರ್ಭದೊಳ್ ಪೀಡೆಯನಂ
ತೇನಂ ಮಾಡಿದನಿಲ್ಲ ಕೃ
ಶಾನುವ ನೆಟಲುರದಂತೆವೋಲ್ ಕನ್ನಡಿಯಂ ೨೦

ಪಳಿಕಿನ ಕೊಡದೊಳ್ ಸೊಡರ್ಗುಡಿ
ಬೆಳಗುವವೊಲ್ ಶುದ್ಧಗರ್ಭಗೃಹದೊಳ್ ತೇಜೋ
ನಿಳಯಂ ಬೆಳಗಿದನಱಿವಿನ
ಬೆಳಗಿನ ಮೊಳೆ ಮೊಳೆತು ಬಳೆವುದೊಂದಚ್ಚರಿಯೇ ೨೧

ಬರೆ ಚೈತ್ರಂ ಕೃಷ್ಣ ಪಕ್ಷಂ ದೊರೆಕೊಳೆ ನವಮೀ ವಾಸರಂ ಪೊರ್ದೆ ಲೋಕೋ
ತ್ತರಮಾಗಿರ್ದುತ್ತರಾಷಾಢದೊಳತಿ ಶುಭದಂ ಬ್ರಹ್ಮಯೋಗಂ ಮನಂಗೊಂ
ಡಿರೆ ಭಾಸ್ವನ್ನಾಭಿರಾಜಾಂಗನೆ ವಿಶದ ಯಶೋಭಾಗಿಯಂ ಭವ್ಯ ಪದ್ಮಾ
ಕರಬೋಧಾದಾಯಿಯಂ ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್ ೨೨

ತ್ರಿದಶಾನೇಕಾನಕಂಗಳ್ ಮೊಳಗಿದವು ಕರಾಸ್ಫಾಳನಂ ದೇವರಿಂದಾ
ಗದೆಮುಂ ಕಲ್ಪದ್ರುಮಂಗಳ್ ಪೊಸತಲರ್ದಲರಂ ತಾಮೆ ಸಾಲ್ವನ್ನೆಗಂ ಸೂ
ಸಿದುವೇಕಾಯ್ತೋ ಕಿರೀಟಕ್ಕವನತಿಯೆನೆ ದೇವೋತ್ತಮಾಂಗಂಗಳುಂ ಬಾ
ಗಿದುವಾ ತ್ರೈಲೋಕ್ಯನಾಥೋದಯಮನಱಿಪುವಂತಾ ತ್ರೈಲೋಕಕ್ಕಮಾಗಳ್ ೨೩

ವಾಸವನಾಸನಕಂಪದಿ
ನಾ ಸಮಯದೊಳವಧಿಯಂ ಪ್ರಯೋಗಿಸಿ ಬೋಧಾ
ವಾಸ ಪ್ರಿಯನುದಯಮನಱಿ
ದಾಸನದಿಂದೆಟ್ಟು ಮೂಱು ಸೂಟ್ ಪೊಡೆವಟ್ಟಂ ೨೪

ಅಂತು ಪೊಡೆವಟ್ಟು ಜನ್ಮಾಭಿಷೇಕೋದ್ಯುಕ್ತ ಚಿತ್ತನಾದಾಗಳ್

ನೆಗೞ್ದಾ ದೇವೇಂದ್ರರೆಲ್ಲಂ ಬಳಸಿ ಬರೆ ಮುದಶ್ರೀಯುತೈರಾವತ ಸ್ಕಂ
ಧಗತಂ ನಾನಾಪತ್ರಸ್ಥಗಿತ ದಶದಿಶಾಮಂಡಲಂ ದೇವತೂರ್ಯಾ
ನುಗ ದೇವೀ ಗೀತ ಜೈನಸ್ತವ ಸಮುಪಹಿತಾತ್ಮೀಯಚಿತ್ತಂ ವಿಳಾಸಂ
ಮಿಗೆ ಸೌಧರ್ಮೇಂದ್ರನಂದಾ ಶಚಿವೆರಸು ಮಹೋತ್ಸಾಹದಿಂ ಬಂದನಾಗಳ್ ೨೫

ಅಂತು ಗಗನತಳದಿನ್ ಅವತರಿಸಿ ಸಾಕೇತಮಂ ಬಳಸಿ ದೇವನಿಕಾಯಮಿರೆ ಸೌಧರ್ಮೇಂದ್ರಪ್ರಮುಖ ಚತುರ್ನಿಕಾಯಾಮರೇಂದ್ರವೃಂದಂ ನಾಭಿರಾಜ ರಾಜಗೇಹಾಂಗಣದೊಳ್ ಸಂದಣಿಸಿ ಬಂದಿರೆ, ಶಚೀ ಮಹಾದೇವಿ ತಿರೋಹಿತ ಶರೀರೆಯಾಗಿ ಪ್ರಸೂತಿಗೃಹಮಂ ಪೊಕ್ಕು ತೇಜೋಧಿಕನಪ್ಪ ಬಾಳನನಟ್ಟಿಕರ್ತು ನೋಡುತ್ತುಮಿರ್ಬರುಂ ಮೂಮೆ ಬಲಗೊಂಡು

ಎಱಗಿ ಜಗತ್ತ್ರಯ ಗುರುಗೆರ್ದೆ
ಯೆಱಕದೆ ಪೊಗೞ್ದಖಿಳ ಭುವನಜನನಿಯನಾಗಳ್

ಮಱೆಯಿಸಿ ಮಾಯಾನಿದ್ರೆಯಿ
ನುಱೆ ಮಾಯಾ ಶಿಶುವನಿೞೆಸಿ ಮುಂದಂಬಿಕೆಯಾ ೨೬

ಪಡೆಯಲ್ಕಾಗದ ನಿಧಿಯಂ
ಬಡವಂ ಪಡೆದಂತೆ ಕಮಳದಳ ಕರತಳದಿಂ
ಪಿಡಿದೆತ್ತಿಕೊಂಡ ಸಂತಸದ
ದೊಡಮೆಯನಾಂ ಪೊಗೞಲಱಿಯೆನಿಂದ್ರಾಂಗನೆಯಾ ೨೭

ಮಂಗಳಮನೆ ಪಾಡುತ್ತುಂ
ಮಂಗಳಧಾರಿಣಿಯರಾಗಿ ಮುಂದಂ ನಡೆವಾ
ಶಾಂಗನೆಯರಿಂದೆ ದಿವಿಜೇಂ
ದ್ರಾಂಗನೆ ಕರಮೆಸೆದು ಹಂಸಗತಿಯೊಳ್ ಬಂದಳ್ ೨೮

ಅಂತು ಬಂದು ಜಗತ್ತ್ರಿತಯಪತಿಯಂ ತ್ರಿದಶಪತಿಯ ನೀಡಿದ ಭುಜಯುಗಳಕ್ಕೆ ನೀಡಿದಾಗಳ್ ನಿಜಾಂಕಮನೇಱೆಸಿಕೊಂಡು

ತ್ರಿಜಗನ್ನಾಥನ ಮಜ್ಜನಕ್ಕೆ ಮಣಿಪೀಠಾಕಾರದಂತಾಗಿ ವಿ
ಶ್ವ ಜಗತ್ಪೂಜಿತಮಾಗಿ ಪೆಂಪುವಡೆದಾ ಹೇಮಾಚಳೇಂದ್ರಕ್ಕೆ ಕ
ಲ್ಪಜರಂ ಪೋಗಲೆ ಸನ್ನೆಗೆಯ್ಯೆ ಭಗವಜ್ಜನ್ಮಾಭಿಷೇಕೋತ್ಸವ
ಧ್ವಜಮಂ ಪೋಲ್ತುದು ರತ್ನರಂಜಿತ ಭುಜಾದಂಡಂ ಸುರಾಧೀಶನಾ ೨೯

ಆಗಳ್ ಸೌಧರ್ಮೇಂದ್ರನೇಱೆದೈರಾವತಗಜೇಂದ್ರಕ್ಕೆ ನಿಜಗಜೇಂದ್ರಂಗಳಂ ಪಕ್ಕು ಮಾಡಿ

ಹಿಮಕರ ಬಿಂಬನಿಭಚ್ಛ
ತ್ರಮನೀಶಾನೇಂದ್ರನೆತ್ತಿದಂ ತತ್ಕರ ವಿ
ಭ್ರಮದಿಂ ಪದಪೊದವೆ ಸನ
ತ್ಕುಮಾರ ಮಾಹೇಂದ್ರರಿಕ್ಕಿದರ್ ಚಾಮರಮಂ ೩೦

ನೆಗೞ್ದೈರಾವತ ದಂತಿಗಾದುದು ಮೊಗಂ ಮೂವತ್ತೆಱಟ್ಕೋಟಿಪ್ಪಿಡಾ
ಮೊಗಮೊಂದೊಂದರೞೊಳೆಂಟು ಕೋಡವಱೊಳಂತೊಂದೊಂದಱೊಳ್ ಪೂಗೊಳಂ
ನೆಗೞ್ದೊಂದೊಂದೆಸೆದಿರ್ಕುಮಾ ಕೊಳಂಗಂಳತೊಂದೊಂದಱೊಳ್ ಚಿತ್ರಪ
ತ್ರಗಣಂ ಪದ್ಮಿನೀ ನಾಡೆ ಚೆಲ್ವನೊಳಕೊಂಡೊಂದೊಂದೆ ಕಣ್ಗೊಪ್ಪುಗುಂ ೩೧

ಪೊಸ ಪೂವಬ್ಜಿನಿಯೊಂದಱೊಳ್ ಸೊಗಯಿಕುಂ ಮೂವತ್ತೆರಡ್ ಪೂವಿನೊಳ್
ಪೊಸಗಂಪಂ ಪುದಿದೊಪ್ಪಿ ತೋಱುವೆಸಟ್ಗಳ್ ಮೂವತ್ತೆರಡ್ ಚೆಲ್ವನ
ಪ್ಪೆಸಳೊರೊಂದಱ ಮೇಲೆ ಲೀಲೆ ಮಿಗೆ ಮೂವತ್ತಿರ್ವರೋರಂತೆ ನ
ರ್ತಿಸೆ ದೇವಾಂಗನೆಯರ್ ಬೆಡಂಗನೊಳಕೊಂಡತ್ತಿಂದ್ರ ರುಂದ್ರದ್ವಿಪಂ ೩೨

ನಡೆ ನೋಡಲ್ ರೂಪು ಕೇಳಲ್ ನುಡಿ ಪುರದ ಜನಕ್ಕಾಯ್ತು ಮುನ್ನಂತೆ ಮೇಗ
ಣ್ಗಡರ್ದಾಗಳ್ ಮೆಯ್ಯ ಕಾಣಲ್ ಕಳಕಳಮೆನಿಸಂ ಕೇಳಲಾಯ್ತಂತು ಮತ್ತಂ
ನಡೆಗೊಂಡಾಗಳ್ ತನುವ್ಯಕ್ತಿಯನಱಿಯಲಣಂ ಬಾರದಾಯ್ತತ್ತಣಂ ಕಾ
ಣ್ಬೆಡೆಗಂ ಗೆಂಟಾದುದೆಂಬಂತಿರೆ ಗಗನತಳೋದ್ಗಾಮಿಯಾಯ್ತಿಂದ್ರಸೈನ್ಯಂ ೩೩

ಅಂತು ಪೋಗಿ ಮಂದರಾಚಳಮನೆಯ್ದಿ ಪಾಂಡುಕವನದ ಪೂರ್ವೋತ್ತರಾಶಾಮುಖನಿವಾಸಿಯಾಗಿ ಅಷ್ಟಮೀಚಂದ್ರಾಕೃತಿಯೊಳಮ್ ಅಷ್ಟಮಂಗಳ ಪರಿವೇಷ್ಟನದೊಳಂ ನೆಱೆದು

ಕ್ಷೀರೋದ ವಾರಿಧಾರಾ
ಪೂರದ ಚೆಲ್ವಿಂಗೆ ಸೆಣಸುವಂತಭಿನವ ನೀ
ಹಾರದ ಬೆಳ್ಪನೆ ಬಾರಿಸಿ
ಬಾರಿಸಿ ಪಾಂಡುಕ ಶಿಳಾತಳಂ ಸೊಗಯಿಸುಗುಂ ೩೪

ಅಲ್ಲಿ ದೇವರಾಜಂ ಶ್ರೀಮಂಟಪಮಂ ವಿರಚಿಸಿ ಮೃಗರಾಜವಿಷ್ಟರದೊಳ್ ಬಾಳಕನಂ ಪೂರ್ವಾಭಿಮುಖ ನಿವಿಷ್ಟನಂ ಮಾಡುವುದುಂ

ತನು ಕಿಱಿದಾದೊಡಮುದ್ಯ
ತ್ತನು ಪ್ರಭಾಪ್ರಸರಮೆಸೆದು ಪಸರಿಸಿ ಸಿಂಹಾ
ಸನಮಂ ಪುದಿದಿರೆ ದೇವಂ
ಕನಕ ಕನಚ್ಛಿಖರಿಶಿಖರಶೇಖರನಾದಂ ೩೫

ಅಲ್ಲಿಂ ಬೞಿಯಂ ಪೂರ್ಣಕಳಶಗಳಂ ಕಳಶೋದ್ಧಾರ ಮಂತ್ರಪೂರ್ವಕಂ ಸೌಧರ್ಮೇಂದ್ರನುಂ ಈಶಾನೇಂದ್ರನುಮೆತ್ತಿಕೊಂಡು

ಇತರೇಂದ್ರರ್ ಪರಿಚಾರಕ ಪ್ರಭೃತಿಯಿಂ ಮುಂದಾಡೆ ದೇವಾಂಗನಾ
ನ್ವಿತ ದೇವಾಧಿಪ ಕಾಂತೆ ಕನ್ನಡಿ ಸೊಡರ್ ಪೂಮಾಲೆ ಭೃಂಗಾರಮ
ಕ್ಷತಮೆಂಬುಜ್ಜ್ವಳಮಂಗಳೋಪಕರಣ ದ್ರವ್ಯಂಗಳಂ ನೀಡೆ ಸಂ
ತತಮೇನಂದು ಜಿನಾರ್ಭಕಂಗೆಸೆದುದೋ ಜನ್ಮಾಭಿಷೇಕೋತ್ಸವಂ ೩೬

ಜಳನಿಧಿ ತೊಱೆಗಳನೆನಿತುಮ
ನೊಳಕೊಳ್ವವೊಲಿನಿಸು ತಳರದಾಶ್ಚರ್ಯ ಮಹಾ
ಜಳನಿಧಿ ಪಯಃಪ್ಲವಂಗಳ
ನೊಳಕೊಂಡಂ ಸುರರ ಮಿಸಿಸುವವಸರದಾಗಳ್ ೩೭

ಮಜ್ಜನಪೀಠಂ ಸುರಗಿರಿ
ಮಜ್ಜನ ಜಳವಮೃತ ಜಳಧಿ ಜಳವಮರೇಂದ್ರಂ
ಮಜ್ಜನವಳ್ಳನುಮೆನೆ ಜಿನ
ಮಜ್ಜನ ಮಹಿಮೆಯ ಬೆಡಂಗನೇವಣ್ಣಿಪುದೋ ೩೮

ಜಳ ಗಂಧಾಕ್ಷತೆ ಪುಷ್ಪಾ
ವಳಿ ಚರು ದೀಪ ಪ್ರದೀಪ ಧೂಪ ಫಲಂಗಳ್
ಕುಳಿಶಾಯುಧನರ್ಚಿಸೆ ತೊಳ
ತೊಳ ತೊಳಗಿದುವೆಳಸಿ ಬಳಸಿ ಜಿನನಡಿದಳಿರೊಳ್ ೩೯

ಜಯ ಗುಣಮಣಿರತ್ನಾಕರ
ಜಯ ಭುವನತ್ರಯ ಲಲಾಮ ಜಯ ಮನಸಿಜ ದು
ರ್ಜಯ ಜಯ ವಿನೇಯ ಬಾಂಧವ
ಜಯ ಮಂದರ ಶಿಖರಿಶಿಖರ ರತ್ನೋತ್ತಂಸಾ ೪೦

ಎಂದು ಪರಿಸಮಾಪ್ತಿ ಸವನಾರ್ಚನಸ್ತವನ ಸಮಯಾನಂತರಮ್ ಇಂದ್ರಾಣಿ ಭಗವದಂಗಸಂಗತ ಜಳಕಣಂಗಳಂ ದೇವಾಂಗವಸ್ತ್ರಂಗಳೊಳೊತ್ತಿ ಕಳೆದು, ಸುಗಂಧ ದ್ರವ್ಯಂಗಳಂ ಪೂಸಿ, ತಿಳಕಮನಿಟ್ಟು, ಮಣಿಮಯ ಕಂಠಿಕೆಯಂ ಕಟ್ಟಿ, ಬಾಹುಯುಗಳಕ್ಕೆ ಕೇಯೂರ ಹಾರಾಂಗದ ಕಟಕಾಳಂಕಾರಮಂ ಮಾಡಿ, ಅಮರಸಮಿತಿವೆರಸು ಅಯೋಧ್ಯಾಪುರಕ್ಕಭಿಮುಖನಾಗಿ ಗಗನತಳದಿಂದವತರಿಸಿ ರಾಜಭವನಮಂ ಪೊಕ್ಕು,

ಕಳಧೌತೋಜ್ಜ್ವಳ ಕೂಟ ಕೋಟಿ ಘಟಿತ ಶ್ರೀಗೇಹದಿಂ ಮುಂದೆ ಮಂ
ಗಳ ಕಾರ್ಯೋಚಿತಮಾಗೆ ಮುನ್ನಮೆ ಸುರಾನೀಕಂ ಜನಂಗಳ್ ಮನಂ
ಗೊಳೆ ಮಾಡಿಟ್ಟ ವಿಚಿತ್ರಮಂಟಪದ ಸಿಂಹಾನಂದಿಯೊಳ್ ಬಾಲನಂ
ಕುಳಿಶಾಸ್ತ್ರಂ ಪಿರಿದುಂ ವಿಭೂತಿವೆರಸಿಟ್ಟೇಂ ಸಂತಸಂಬಟ್ಟನೋ ೪೧

ಆಗಳ್ ಸುತಮುಖ ನಿರೀಕ್ಷಣ ಜನಿತ ಪುಳಕನಪ್ಪ ನಾಭಿಮಹೀಭುಜನ್ ಇಂದ್ರಾಣೀವದನ ಚಂದ್ರಿಕಾ ವಿಘಟಿತ ನಿದ್ರಾಮುದ್ರಿತ ನಯನ ನೀಳೋತ್ಪಳೆಯಪ್ಪ ಜಗದ್ಗುರುಜನನಿ[ವೆರಸಿ] ಬಂದು ನಿಜ ತನೂಜ ವದನಮನಟ್ಟುರ್ತು ನೋಡಿ[ದನ್]. ಆಗಳ್

ಸುರೇಶ್ವರಂ ಜನ್ಮಾಭಿಷೇಕ ವ್ಯತಿಕರಮನವರ್ಗೆ ಮಹೋತ್ಸಾಹಕರಮಾಗೆ ಸವಿಸ್ತರಮಱಿಪಿ, ಭಗವಜ್ಜನ್ಮಾಭಿಷೇಕಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವಕಾರ ರೂಪಕಮುಮಂ ದಶಾವತಾರ ರೂಪಗರ್ಭಸಂದರ್ಭಂಗಳಪ್ಪ ಶೇಷಾಶೇಷ ರೂಪಕಂಗಳುಮಂ ಸುರಾಸುರಸಭೆಗಂ ನಾಭಿರಾಜಾದಿ ಮನುಜ ಸಭೆಗಂ ಮೆಱೆಯಲೆಂದು ನಾಂದೀವಿಧಿಯಂ ನಿರ್ವರ್ತಿಸಿ ರಂಗಂಬೊಕ್ಕು ಲೋಕಾಕಾರಮನಭಿನಯಿಪ ಆಕಾರಂ ನೆಗೞ್ದೆ ನಿಂದನ್. . ಆಗಳ್ ಪುಷ್ಪಾಂಜಳಿಯಂ ಸೂಸಿ ನಾಕಲೊಕ ವಾದ್ಯಂಗಳೊಳ್ ಕಿನ್ನರೀಜನ ಮಧುರ ಗೀತಾನುಗತಂಗಳನ್ ಅನುಕ್ರಮದೊಳೆ ನೆಗೞ್ದೆ,

ರಸಭಾವಾಭಿನಯಂಗಳಂ ಭುಜಲತಾ ಭ್ರೂಚಾಪ ನೇತ್ರೋತ್ಪಲ
ಪ್ರಸರಂಗಳ್ ಪ್ರಸರಂಗೆಯ್ಯುತ್ತಿರೆ ಲಸನ್ನೇತ್ರಂಗಳಂ ಕೂಡೆ ಬಂ
ಚಿಸುತುಂ ಮೆಟ್ಟಿನ ಮೆಟ್ಟಿನೊಳ್ಪು ಜನತಾನೇತ್ರಂಗಳಂ ನಾಡೆ ಚೆ
ಲ್ವೆಸೆದತ್ತಿಂದ್ರನ ನೀಳ್ದ ತೋಳ್ದುಜುಗಲೊಳ್ ದೇವಾಂಗನಾ ನರ್ತನಂ ೪೨

ಯುವಸಂಘಾತಮದೊಂದು ತೋಳ್ದುಜುಗಲೊಳ್ ಮತ್ತೊಂದು ತೋಳೋಳಿಯೊಳ್
ಯುವತೀವ್ರಾತಮನೇಕ ಭೇದ ರಸಭಾವಂಗಳ್ ಪೊದಳ್ದುಣ್ಮಿ ಪೊ
ಣ್ಮುವಿನಂ ನರ್ತಿಸೆ ಸೂತ್ರಧಾರವಿಧಿಯಿಂ ಸುತ್ರಾಮನಂದಿಂತು ತಾಂ
ಡವಲಾಸ್ಯಂಗಳ ಚೆಲ್ವನೊರ್ಮೆಯೆ ತದೀಯಾಸ್ಥಾನದೊಳ್ ತೋಱಿದಂ ೪೩

ಅಂತು ಪುರಂದರನಾನಂದ ನೃತ್ಯಾವಸಾನದೊಳೀ ಪರಮೇಶ್ವರಂ ಧರ್ಮಾಮೃತ ವರ್ಷದಿಂ ಭವ್ಯ ಸಸ್ಯ ಸಮೃದ್ಧಿಯಂ ಮಾಡುವುದಱಿಂ ವೃಷವೆಂಬುದು, ಧರ್ಮಮ್ ಅದಱಿಂದೊಪ್ಪುವುದಱಿಂದಂ, ಸ್ವರ್ಗಾವತರಣ ಸಮಯದೊಳ್ ನಿಜಜನನೀ ವದನವನಜಮಂ ಸ್ವಪ್ನದೊಳ್ ಧವಳ ವೃಷಭಾಕಾರದಿಂ ಪೊಕ್ಕುದಱಿಂದಂ ವೃಷಭಸ್ವಾಮಿಯೆಂದು ಪೆಸರನಿಟ್ಟು ಮಜ್ಜನಮಂಡನ ಕ್ರಿಯೆಗಳ್ಗೆ ದೇವಿಯರನೆ ದಾದಿಯರ್ಮಾಡಿ ಸಮಯಾನುರೂಪ ವೇಷದ ಸುರಕುಮಾರಕರನ್ ಒಡನಾಡಿಗಳ್ ಮಾಡಿ ದೇವಸಮಾಜಂಬೆರಸು ಅಮರೇಂದ್ರಂ ಪೋದನಾಗಳ್.

ಬಾಲ್ಯಕಾಲಮಂ ಬಾಳಕೇಳೀ ಲೀಲೆಯಿಂ ಕಟಿಪಿ ಕುಮಾರಕಾಲದೊಳ್ ಸಹೋತ್ಪನ್ನ ಮತಿಶ್ರುತ ಅವಧಿ ಬೋಧನಪ್ಪುದಱಿಂ ವಿಶ್ವವಿದ್ಯೇಶ್ವರನುಂ ಜನ್ಮಾಂತರಾಭ್ಯಸ್ತ ಕಳಾಕುಶಲನುಂ ಪ್ರತ್ಯಕ್ಷೀಕೃತ ಸಕಲ ವಾಙ್ಮಯನುಂ ಪ್ರತಿದಿನ ಪ್ರವರ್ಧಮಾನತನು ವಯೋವಿಭವಕ್ರಮದೊಳೆ ಬಳೆದು ಮನೋಹರಮೆನಿಸಿತ್ತು ಯೌವನೋದಯಮ್ ಇಂದ್ರನರೇಂದ್ರವಂದ್ಯನಾ. ಪರಮನ ಪರಿಪೂರ್ಣ ಯೌವನಶ್ರೀಯಂ ನಾಭಿರಾಜಂ ನೋಡಿ, "ಈಗಳ್ ಕುಮಾರಂಗೆ ಯೌವನಂ ನೆಱೆದತ್ತು; ಈತಂಗೆ ವಿವಾಹ ಮಂಗಳಮಂ ಮಾಡಲ್ಕೆವೇಳ್ಕುಂ" ಎಂದು ತನ್ನೊಳೆ ಬಗೆದು ಕುಮಾರನಂ ಸಾರೆವಂದು,

ಶಾಂತಾತ್ಮಾ ಮದುವೆ ನಿಲ್ ನೀ
ನಿಂತೆನ್ನ ಗೃಹಸ್ಥಧರ್ಮದಿಂದಂ ನೀನೆಂ
ತಂತೆ ಸಲೆ ನೆಗಟಿ ಜಗತೀ
ಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ ೪೪

ಎನೆ ದೇವನ ದರಹಸಿತಾ
ನನದೊಳ್ ತನಗಿಂಬುಕೆಯ್ದು ಬಗೆಯಂ ಪದಿನಾ
ಲ್ಕನೆಯ ಮನು ಜಲಕನಜಿದಂ
ದನಿತುಂ ಭುವನಮುಮನಾಗಳಾಳ್ದಂತೊಸೆದಂ ೪೫

ಅಂತು ತನ್ನುಪರೋಧದೊಳಂ ಪ್ರಜಾನುಗ್ರಹ ಬುದ್ಧಿಯೊಳಂ ಪೋಗಲಾಜಿ ದೊಡಂಬಟ್ಟ ಆದಿಪುರುಷನೊಡಂಬಡನಜಿದು ನಿಶ್ಶಂಕನಾಗಿ ದಿವಿಜೇಂದ್ರನನುಮತದೊಳ್ ಕಚ್ಛ ಮಹಾಕಚ್ಛರ ತಂಗೆಯರಪ್ಪ ಯಶಸ್ವತೀ ಮಹಾದೇವಿಯುಂ ಸುನಂದಾ ಮಹಾದೇವಿಯುಮೆಂಬ ಕನ್ಯಾರತ್ನಂಗಳನೊಂದೆ ಪಸೆಯೊಳ್ ಪಾಣಿಗ್ರಹಣಂಗೆಯಿಸಿದಾಗಳ್

ಆ ಪುಣ್ಯವತಿಯರಿರ್ಬರು
ಮಾ ಪರಮೇಶ್ವರನ ಮನಮನಿರ್ಕುಟಿಗೊಳೆ ಮ
ತ್ತಾ ಪೀನವೃಷಸ್ಕಂಧನು
ಮಾ ಪದ್ಮಾಸ್ಯೆಯರ ಮನಮನಿರ್ಕುಟಿಗೊಂಡಂ ೪೬

ಅಂತಾ ಲಲಿತಾಂಗಿಯರೊಳ್ ಆದಿಪುರುಷನಶೇಷ ಸಂಸಾರಸುಖಮನನುಭವಿಸು ತ್ತಿರ್ಪಿನಂ, ಅನೇಕ ಸಂವತ್ಸರಂಗಳೇಕ ಸಂವತ್ಸರಸಮಾನಂಗಳಾಗಿ ಪೋಗೆ, ಯಶಸ್ವತೀ ಮಹಾದೇವಿ ಗರ್ಭಮಂ ತಾಳ್ದಿ ಸುಖ ಪ್ರಸೂತಿ ಸಮಯದೊಳ್

ಮನುಗೋತ್ರಾಂಭೋಧಿಚಂದ್ರಂ ಮನುಕುಲಸರಸೀ ವಿಭ್ರಮೋತ್ತಂಸಹಂಸಂ
ಮನುವಂಶಪ್ರಾಚ್ಯಶೈಲದ್ಯುಮಣಿ ಮನುನೃಪಾಮ್ನಾಯ ದುರ್ಗಾದ್ರಿಸಿಂಹಂ
ಮನುಭೂಪಾಳಾನ್ವಯ ಶ್ರೀಭವನ ಕಳಶಮೆಂಬಂತು ವಿಖ್ಯಾತ ಪುಣ್ಯಂ
ಮನುಧಾತ್ರೀಪಾಲ ಚೂಡಾಮಣಿ ಜನಿಯಿಸಿದಂ ಚಕ್ರವರ್ತಿ ಪ್ರಧಾನಂ ೪೭

ಭಾವಿ ಭರತೇಶಪದಮುಮಿ
ಳಾ ವಿಪುಳ ಪ್ರೇಮಭರಮುಮೆರ್ದೆಗೊಂಡಿರೆ ಸ
ದ್ಭಾವದಿನಿಟ್ಟುದು ಬಂಧು ಜ
ನಾವಳಿ ಕೂಸಿಂಗೆ ಭರತನೆಂಬೀ ಪೆಸರಂ ೪೮

ಭರತಕುಮಾರಂಬೆರಸು ನೂರ್ವರ್ ಕುಮಾರರುಮಂ, ಅನಿಬರಿಂ ಕಿಱಿಯಳ್ ಬ್ರಾಹ್ಮಿಯೆಂಬ ಮಗಳಂ ಪಡೆದು ಯಶಸ್ವತಿ ಪಿರಿದೊಂದು ಮೈಮೆಯಂ ಪಡೆದಳ್. ಸುನಂದಾದೇವಿಯ ಗರ್ಭದೊಳವತರಿಸಿ[ದ] ಬಾಳಕಂಗೆ ಬಾಹುಬಲಿಯೆಂಬನ್ವರ್ಥ ಅಭಿಧಾನಮನಿಟ್ಟು ಆತನ ಬಾಲ್ಯವಿಳಾಸಂಗಳಿಂದವಾನಂದಿತ ಹೃದಯನಾಗಿ ನಾಭಿರಾಜನಂದನನಿರ್ಪನ್ನೆಗಂ, ಬಾಹುಬಲಿ ಕುವಾರನಿಂ ನೇರ್ಗಿಱಿಯಳಾಗಿ ಸುಂದರಿಯೆಂಬಳ್ ನಂದನೆಯಾದಳ್. ಅಂತು ಭರತೇಶ್ವರಂ ಬಾಹುಬಲಿ ಕುಮಾರಂ ಮೊದಲಾಗೆ ನೂರ್ವರ್ ಕುಮಾರರುಮನಿರ್ವರ್ ಕನ್ನೆಯರುಮನಾದಿಪುರುಷಂ ನೋಡಿ ಮನದೊಳಾದ ಅಟ್ಕಿಱಿಂ [ಕೂಡಿರ್ದಂ].

ಮತ್ತೊಂದು ದಿವಸಂ ವೃಷಭೇಶ್ವರಂ ಸಕಳ ವಿದ್ಯೋಪದೇಶೋತ್ಸುಕನಾಗಿ, ಬ್ರಾಹ್ಮಿಯುಂ ಸುಂದರಿಯುಂ ಪೊಡೆವಟ್ಟೆಯ್ದುವಂದಿರ್ದಾಗಳ್, ನಿಮಗೆ ಈ ವಯಸಮೆಂಬುದು ವಿದ್ಯಾಭ್ಯಾಸಯೋಗ್ಯಮೆಂದು ವಿಶಾಲ ಹೇಮ ಪಟ್ಟಕದೊಳ್ ಆತ್ಮಹೃತ್ಪದ್ಮಸದ್ಮೆಯಂ ಸರಸ್ವತಿಯಂ ಪೂಜಾಪೂರ್ವಕಮಾರಾಧಿಸಿ, ನಿಜ ತನೂಜೆಯರಿರ್ವರುಮನ್ ಎರಡುಂ ಕೆಲದೊಳಿರಿಸಿ,

ಮುನ್ನಂ ತ್ರಿಲೋಕಗುರು ಸಿ
ದ್ಧನ್ನಮಯೆಂದಱಿಪಿ ಮುಖ್ಯಮಂಗಳ ಪದಮಂ
ಕನ್ನೆಗೆ ಪಿರಿಯಾಕೆಗೆ ಬಱಿ
ಯನ್ನಯದಿಂ ಬರೆದು ತೋಱಿದಂ ಲಿಪಿಗಳುಮಂ ೪೯

ಅಂತು ಅಕಾರಾದಿ ಹಕಾರಾಂತ ಸ್ವರವ್ಯಂಜನಭೇದ ಭಿನ್ನಶುದ್ಧಾಕ್ಷರಗಳುಮಂ ಆಯೋಗವಾಹ ಚತುಷ್ಕಮುಮಂ ಸಂಯೋಗಾಕ್ಷರಗಳುಮಂ ಬ್ರಾಹ್ಮಿಗೆ ದಕ್ಷಿಣ ಹಸ್ತದೊಳುಪದೇಶಂಗೆಯ್ದು

ಸುಂದರಿಗೆ ಗಣಿತಮಂ ದಳಿ
ತೇಂದೀವರ ನಯನೆಗೆಡದ ಕಯ್ಯೊಳ್ ಭವ್ಯಾ
ನಂದಕರಂ ಸ್ಥಾನ ಕ್ರಮ
ದಿಂದಂ ಪುರುದೇವನಱಿಯೆ ತೋಱಿದನಾಗಳ್ ೫೦

ನಿಜಾತ್ಮಜೆಯರಿರ್ವರುಮಂ ವಿದ್ಯಾಪರಿಣತರಪ್ಪಂತು ಮಾಡಿ, ಭರತಂಗೆ ಭರತಮುಮಂ ಅರ್ಥಶಾಸ್ತ್ರಮುಮಂ, ವೃಷಭಸೇನಂಗೆ ಗಾಂಧರ್ವಶಾಸ್ತ್ರಮುಮಂ, ಅನಂತವಿಜಯಂಗೆ ಚಿತ್ರಕಳೆಯುಮಂ ವಾಸ್ತುವಿದ್ಯೆಯುಮಂ, ಬಾಹುಬಲಿಗೆ ಕಾಮತಂತ್ರಸಾಮುದ್ರಿಕ ಆಯುರ್ವೇದ ಧನುರ್ವೇದ ಹಸ್ತ್ಯಶ್ವತಂತ್ರ ರತ್ನಪರೀಕ್ಷೆಗಳುಮಂ, ಮತ್ತಮ್ ಇವು ಮೊದಲಾಗೆ ಪೆಱವುಂ ಲೋಕೋಪಕಾರಿಗಳಪ್ಪ ಶಾಸ್ತ್ರಂಗಳೆನಿತೊಳವನಿತುಮಂ ಮತ್ತಿನ ತನೂಜವರ್ಗಕ್ಕೆಲ್ಲಮುಪದೇಶಂಗೆಯ್ದಂ.

ಆ ಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಟಿ ವ್ರೀಹಿ ಯುವ ಗೋಧೂಮಾದಿ ಮಹೌಷಧಿಗಳುಂ ತಿಳಾತಸೀಕುಸುಂಭಾದಿ ದೀಪ್ರೌಷಧಿಗಳುಂ ಯಾವನಾಳ ಕಂಗು ಕೋದ್ರವಾದಿ ಸರ್ವೌಷಧಿಗಳುಂ ಮುನ್ನಮಕೃಷ್ಟಪಚ್ಯಂಗಳಪ್ಪು ವಂದು ವಿರಳಂಗಳಾಗಿಯುಂ, ಅನಲ್ಪ ಕಲ್ಪಾವನಿಜಂಗಳ್ ಅಪೇತರಸವೀರ್ಯ ವಿಪಾಕಂಗಳಾಗೆಯುಂ, ಅಧಿವ್ಯಾಧಿಬಾಧಿತಶರೀರರ್ ಮಾನವರ್ ಅಭಿಮಾನವಂ ಪತ್ತುವಿಟ್ಟು ನಾಭಿರಾಜನ ಅನುಮತದಿಂ ಬ್ರಹ್ಮನಲ್ಲಿಗೆ ವಂದು ಮೈಯಿಕ್ಕಿ,

ವಿರಳ ಫಳಂಗಳಾದುವಖಿಳೌಷಧಿಗಳ್ ರಸ ವೀರ್ಯ ಪಾಕಮುಂ
ವಿರಳಮೆ ವೃಕ್ಷಜಾತಿಗಳೊಡಲ್ ಪಸಿವಾದಮಳುರ್ವೆ ನಿಪ್ಪುಟಂ
ಕರಗಿದುದೆಮ್ಮ ಬಾಳ್ವ ತೆಱನಾವುದು ದೇವ ಶರಣ್ಗೆ ವಂದೆವಾ
ದರದೆಮಗಪ್ಪುದಂ ಬೆಸಸಿ ಕಾವುದು ಲೋಕಮನಾದಿಪೂರುಷಾ ೫೧

ಎಂಬುದುಂ ತತ್ಪ್ರಜಾಜೀವನೋಪಾಯಂ ಷಟ್ಕರ್ಮಂಗಳುಮಂ ವರ್ಣಾಶ್ರಮ ವಿಭಾಗಂಗಳುಮಂ ಗ್ರಾಮ ಗೃಹಾದಿ ಭೇದಂಗಳುಮಂ ಭೋಗಭೂಮಿವಿರಾಮದೊಳ್ ಈ ಕರ್ಮಭೂಮಿ ಪ್ರಾರಂಭದೊಳ್ ನಿಜೆಸಲ್ವೇಟ್ಕುಮೆಂದು ಮನದೊಳ್ ಬಗೆದು, ಅವರಂ 'ಅಂಜದಿರಿಂ' ಎಂದು ಸಂತಯಿಸಿ, ತದನಂತರಂ ಭಗವದನುಸ್ಮರಣ ಮಾತ್ರದಿಂದಂ ಅಮರೇಂದ್ರಂ ಬಂದು ಜಿನೇಂದ್ರಮಂದಿರಂಗಳಂ ನಿರ್ಮಿಸಿ, ಬಳಿಕಂ ತಜ್ಜನಪದ ಮಧ್ಯಂಗಳೊಳ್ ರಾಜಧಾನಿಗಳುಮಂ ಅಭಿರಾಮ ಜಲಾಶಯಂಗಳುಮಂ ನಿರ್ಮಿಸಿ, ದೇವಮಾತೃಕ ಸಾಧಾರಣ ಅನೂಪ ಜಾಂಗಳಗಳೆಂಬ ಭೇದಂಗಳುಮಂ, ಅನಂತಪಾಳಪಾಳಿತ ದುರ್ಗಪರಿವೃತಾಂತಂಗಳುಂ ಲುಬ್ಧಕ ಅರಣ್ಯಚರ ಪುಳಿಂದ ಶಬರಾದಿ ಪರಿರಕ್ಷಿತಂಗಳುಮಪ್ಪ ವಿವಿಧ ವಿಷಯಂಗಳುಮಂ, ಸಮಸ್ತ ಸಸ್ಯ ಸಂಪತ್ಸಂಪನ್ನ ಸುಕ್ಷೇತ್ರಂಗಳುಮಂ ಅವನಾಳ್ವ ತೆಱಗೊಳ್ವ ಬಿಟ್ಟ ಬೆಸಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ. ಇಂತು ಪಲವುಂ ಪುರಂಗಳಂ ಸಮೆದು ದೇವನಿಡೆ ಪುರಂದರವೆಸರಂ ಧರಿಯಿಸಿ ಅಮರೇಂದ್ರನಮರ ಲೋಕಕ್ಕೊಗೆದಂ.

ತದನಂತರಂ ಪ್ರಜಾಪತಿಯುಂ ಪ್ರಜೋಪಜೀವನ ನಿಮಿತ್ತವಾಗೆ ಸೇವಾ ಧರ್ಮೋಚಿತಮೆನಿಸುವ ಸುಕರ್ಮಂಗಳುಮಂ ಅನೇಕ ಲಿಪಿವಿಧಾನಂಗಳಪ್ಪ ಮೃಷಿ ಯುಮಂ, ಕೃಷೀವಲಕುಲೋಚಿತಮಪ್ಪ ಕೃಷಿಯುಮಂ, ಶಾಸ್ತ್ರಾನುಗತಮಪ್ಪ ವಿದ್ಯೆಯುಮಂ, ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ, ಹಸ್ತಕೌಶಲಕಳಿತಮಪ್ಪ ಚಿತ್ರಕಳಾಪ ಪತ್ರಚ್ಛೇದ್ಯಾದಿ ಶಿಲ್ಪಮುಮಂ ಪಡೆದು, ತನ್ನ ಪಡೆದ ಕ್ಷತ್ರಿಯ ವಣಿಕ್ಶೂದ್ರರೆಂಬ ಮೂಱು ವರ್ಣಂಗಳೊಳಗೆ ಕ್ಷತತ್ರಾಣಾದಿ ಗುಣೋಪೇತಮಪ್ಪ ಅಖಿಳ ಕ್ಷತ್ರಿಯ ಸಮೂಹಕ್ಕೆ ಶಸ್ತ್ರಕರ್ಮಮುಮಂ, ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ ಪಣ್ಯಕರ್ಮಂಗಳುಮಂ, ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮೆಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾ ನಿಯೋಗಂಗಳುಮಂ ಯಥಾಯೋಗ್ಯಂ ಉಪದೇಶಂಗೆಯ್ದು, ವರ್ಣಸಂಕರವಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ[ದಂ].

ವಿತತಾಷಾಢದ ಬಹುಳ
ಪ್ರತಿಪದ್ದಿನದಂದು ಕೀರ್ತಿ ನೆಗಟ್ದಿರೆ ಭಗವ
ತ್ಕೃತಯುಗಮಾದುದಱಿಂದಂ
ಕೃತಯುಗಮೆಂಬರ್ ಪುರಾಣವಿದರಿದನೀಗಳ್ ೫೨

ಅಂತು ಕೃತಯುಗಾರಂಭ ಸೂತ್ರಧಾರನೆನಿಸಿದಾದಿಬ್ರಹ್ಮಂಗೆ ರಾಜ್ಯಾಭಿಷೇಕಂ ಗೆಯ್ವ ಬಗೆಯನೆ ಬಗೆದು,

ಸುರಕಾಂತಾ ನೃತ್ಯಮೆತ್ತಂ ಪಸರಿಸಿರೆ ನಭೋರಂಗದೊಳ್ ದೇವತೂರ್ಯ
ಸ್ವರಮಾಶಾಚಕ್ರದೊಳ್ ಬಳ್ವಳ ಬಳೆದಿರೆ ನಾನಾ ವಿಮಾನಂಗಳೊಳ್ ಭಾ
ಸುರರತ್ನಜ್ಯೋತಿಗಳ್ ತಳ್ತಳಿಸಿರೆ ಸುರವೃಂದಾನ್ವಿತಂ ಬಂದನಾಗಳ್
ಸುರರಾಜಂ ರಾಜದೈರಾವತವಿಪುಳತರಸ್ಕಂಧದೇಶಾಭಿರಾಮಂ ೫೩

ಅಂತು ಬಂದು, ಭುವನತ್ರಯ ಚೂಡಾಮಣಿಯ ರಾಜ್ಯಾಭಿಷೇಕದೊಸಗೆಯಂ ನಾಭಿರಾಜಾಧಿರಾಜಸಭೆಗಱಿಪಿ, ಮಹಾನದ್ಯುಭಯ ಮೃದು ಮೃತ್ಸ್ನಾವಿರಚಿತ ವೇದಿಕಾ ವಿರಾಜಮಾನದೊಳ್, ಗಂಧರ್ವಸಮಾರಬ್ಧಸಂಗೀತಕ ಮೃದು ಮೃದಂಗ ನಾದ ಪ್ರಮೋದಿತಾಶೇಷ ರಾಜದ್ರಾಜಕದೊಳ್, ಸಂಚರತ್ ಸುರವಿಲಾಸಿನೀ ಸಲೀಲ ಮೃದು ಪದವಿನ್ಯಾಸ ಮಂಜು ಗುಂಜನ್ಮಂಜೀರಕ ಮನೋಹರ ಝುಂಕಾರ ಪ್ರವರ್ಧಮಾನ ಮದಾಳಿಕುಲ ಕೋಲಾಹಲದೊಳ್, ರಾಜಭವನಾಂಗಣ ಮಧ್ಯಸ್ಥಿತ ರಾಜ್ಯಾಭಿಷೇಕ ಮಂಟಪದೊಳ್,

ಮುನ್ನಮೆ ನಿಱಿಸಿದ ಮಣಿಖಚಿ
ತೋನ್ನತ ಹರಿಪೀಠದೊಳ್ ಜಗತ್ಪತಿಯಂ ಮಾ
ನೋನ್ನತನಂ ಪ್ರಾಙ್ಮುಖದಿಂ
ದುನ್ನತ ಸುರಮೌಳಿ ಲಾಲಿತಾಂಘ್ರಿದ್ವಯನಂ ೫೪

ಇರಿಸಿ, ಮಹಾ ಸರಿತ್ ಸರಸೀ ಸಮುದ್ರ ನಂದೀಶ್ವರದ್ವೀಪನಿವಾಸಿಗಳಿಂದಂ ಬಂದ ತೀರ್ಥೋದಕಂಗಳಿಂದಂ ತೀವಿದ ಕಳಧೌತ ಕಳಶಂಗಳನ್, ಅಮರರಾಜಸಮಾಜಂ ನಾಭಿರಾಜನುಂ ಬೆರಸು ಎತ್ತಿಕೊಂಡು, ನೀಲನಳಿನ ದ್ಯುತಿಪಟಲ ವಿಭ್ರಾಂತಿಯಂ ಪಡೆವ ಸಲಿಲಂಗಳಿಂದಂ, ಮಜ್ಜನಾವಸರ ಮಂಗಳಪಾಠಕ ಮೃದು ಮಧುರ ಗಂಭೀರ ಧೀರ ನಿನಾದಮನಾಲಿಸುತ್ತುಂ ಮಜ್ಜನಮನೆಯ್ದೆ ನಿರ್ವರ್ತಿಸಿದಂ.

ಅಂತು ನಿಷ್ಪನ್ನ ಮಜ್ಜನನುಂ, ವಿಹಿತ ನೀರಾಜನನುಮಾಗಿ – ಸುರರಾಜ ಸಮರ್ಪಿತ ಸಂತಾನಕುಸುಮದಾಮಾಂಬರ ಭೂಷಣ ಪ್ರಸಾಧಿತಂ ಪುರುದೇವಂ ಮೃಗೇಂದ್ರವಿಷ್ಟರದೊಳಿರೆ, ನಾಭಿರಾಜಂ ಸನಾಭಿಗಳ್ವೆರಸು ಬಂದು,

ಸಕಲ ಮಕುಟಬದ್ಧಾಧೀಶನಯ್ ದೇವ ನೀನುಂ
ಮಕುಟಧರನುಮಾಗಲ್ವೇಟ್ಕುಮೆಂದಾಗಳಿಂದ್ರಂ
ಮಕುಟದೊಡನಲಂಪಿಂ ಪಟ್ಟಮಂ ಕಟ್ಟೆ ಲೋಕ
ಪ್ರಕಟಮೆನೆ ಪೊದಳ್ದತ್ತಾದಿದೇವ ಪ್ರಭಾವಂ ೫೫

ಇಂತನೇಕ ಮಕುಟಬದ್ಧ ಮಣಿಕರ್ಷಣಸೃಣಿತಚರಣನ್, ಅವಾಪ್ತಿರಾಜ್ಯಂ ನಾಭಿರಾಜ ಸನ್ನಿಧಾನದೊಳ್, ಅಖಿಳಪ್ರಜಾಪಾಲನದೊಳ್ ಅತಿಪ್ರಯತ್ನಪರನಾಗಿ, ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ, ಭರತನಿಂದಂ ಇನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತ ಪ್ರತಿಪತ್ತಿಗಳನ್ ಅಱೆಪಿ, ಮತ್ತಂ ದಂಡಧರರಿಲ್ಲದಂದು ಪ್ರಜೆಗಳತಿಕ್ರಮಿಸಿ ನಡೆಗುಮೆಂದುಂ ಮತ್ಸ್ಯನ್ಯಾಯಂ ಪ್ರವರ್ತಿಸುಗುಮೆಂದುಂ ಯಥೋಚಿತಧರಣೀಧರರಪ್ಪ ಭೂಪಾಳಕರನವರವರ ಪದವಿಯೊಳ್ [ಆದಿಬ್ರಹ್ಮಂ] ನಿಱೆಸಿದಂ. ಆದಿದೇವನಿಕ್ಷುರಸ ಸಂಗ್ರಹಣ ಸಮಯಾಹೂತ ಭೂತಳನಪ್ಪುದಱೆಂದಂ ಇಕ್ಷ್ವಾಕುಕುಳತಿಳಕನುಂ ಪ್ರಜಾ ಜೀವನೋಪಾಯುಮನನಾದುದಱೆಂ ಪ್ರಜಾಪತಿಯುಂ ನಿಜಕುಲೋದ್ಧರಣದಿಂ ಕುಲಧರನುಂ ಕೃತಯುಗಾರಂಭಕ್ಕಾದಿಯಾದುದಱೆಂದಂ ಆದಿಬ್ರಹ್ಮನುಂ ಎಂಬ ಅನ್ವರ್ಥನಾಮಂಗಳುಮಂ ಲೋಕಪ್ರಸಿದ್ಧಮಾಗಿರಲ್ ಅಱುವತ್ತುಮೂಱು ಲಕ್ಕೆ ಪುಬ್ಬಂ ರಾಜ್ಯಕಾಲಂ ಸಲೆ, ಸಾಕೇತಸಿಂಹಾಸನಾಸೀನಂ ಪಾಲಿಸಿದಂ ಮಹೀವಳಯಮಂ

ಎರಡೋಳಿಯೊಳಂ ಮೊದಲೊಳ್
ಭರತೇಶ್ವರ ಬಾಹುಬಲಿಗಳಿರೆ ಮತ್ತಿನ ಪು
ತ್ರರುಮವರ ಕೆಲದೊಳಿರೆ ಸುರ
ಶರಾಸನಂ ನೆಗಟ್ಟುದವರ ಮಕುಟಪ್ರಭೆಯೊಳ್ ೫೬

ಮತ್ತಂ ಸಿಂಹಾಸನಾಸನ್ನಸ್ಥಿತ ಮಣಿಮಯ ಪೀಠದೊಳ್ ನಾಭಿರಾಜನುಂ, ಕನಕ ಮಣಿಪೀಠದೊಳ್ ಕಚ್ಛಮಹಾಕಚ್ಛರುಂ ಸೋಮವಂಶಲಲಾಮಂ ಸೋಮಪ್ರಭನುಂ, ಹರಿವಂಶಾಗ್ರಗಣ್ಯಂ ಹರಿಕಾಂತನುಂ, ನಾಭಿವಂಶನಾಯಕನ್ ಆಕಂಪನನುಂ, ಉಗ್ರವಂಶಾಗ್ರಣಿ ಕಾಶ್ಯಪನುಂ ಇರೆ, ಪೆಱರುಂ ಅಱೆಕೆಂಯ ನಾಯಕರುಂ ಮಣಿಮಕುಟಬದ್ಧರಾತ್ಮೋಚಿತ ಪ್ರದೇಶಾನುಗಳೊಳ್ ಇರ್ದು ಓಲಗಿಸುತ್ತಿರ್ದನ್ನೆಗಂ, ಆದಿದೇವನ ಪರಿನಿಷ್ಕ್ರಮಣಕಲ್ಯಾಣಮ್ ಅತ್ಯಾಸನ್ನಮೆಂಬುದಂ ನಿಜಾವಧಿಬೋಧದಿಂದಮಱೆದು ಸಂಗೀತ ಪ್ರಸಂಗದಿಂದಮೋಲಗಿಸಲೆಂದು ಸುರರಾಜಂ ಬಂದು ಅವನತಮಣಿಕಿರೀಟ ರತ್ನಪ್ರದೀಪಂಗಳಿಂದಮರ್ಚಿಸಿ ಕನಕಪೀಠದೊಳ್ ಕುಳ್ಳಿರ್ದು,

ಪರಮನನೋಲಗಿಸಿ ಕೃತಾ
ರ್ಥರೆಮಪ್ಪೆವಮೋಘಮವಸರಂಗುಡಿಸುವುದೆಂ
ದಿರದೆನ್ನನಧಿಕ ಭಕ್ತಿಯೆ
ತರೆ ಬಂದುದು ದೇವ ದಿವಿಜ ಪೇಟಕಮನಿತುಂ ೫೭

ಸಮನಿಸಲಿವರ ಮನೋರಥ
ಮಮರೀ ನೃತ್ಯ ಪ್ರಸಂಗಮಕ್ಕಭವ ಭವ
ತ್ಕ್ರಮ ಕಮಳ ಸೇವೆಯಿಂದಿಂ
ತಮನಂತಂ ಗೀತ ವಾದಿತಂ ಫಲಮಲ್ತೇ ೫೮

ಎಂದಿಂದ್ರಂ ಬಿನ್ನವಿಸಲೊ
ಡಂ ದರಹಸಿತಾನನಾಬ್ಜನಾವುದು ನಿಮಗಾ
ನಂದಮದಕ್ಕೆನೆ ನುತ ಸುರ
ವೃಂದಂ ಸಂಗೀತಕ್ಕೊಡರ್ಚಲೆವೇಟ್ಟಿಂ ೫೯

ಅಮರ್ದಿನ ಮೞೆಯೊಳಗೆಸೆದಪು
ದಮೃತಾಂಬುದ ನಿನದಮೆನಿಸೆ ಸಭೆಯಿನಹೋ ಗೀ
ತಮಹೋವಾದಿತಮೆನಿಸಿದು
ದಮರೀಜನ ಗೀತಮಮರ ವಾದಿತಮಾಗಳ್ ೬೦

ಕಳ ಗೀತಂ ವಾದ್ಯಂ ನೃ
ತ್ಯಲೀಳೆ ಪೆಱರ್ಗೊಪ್ಪದೀಕೆಗಲ್ಲದೆ ಗಣಿಕಾ
ತಿಳಕಮಿವಳ್ ನರ್ತನ ರಸ
ದೊಳೆ ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್ ೬೧

ಎನಿಸಿದ ನೀಳಾಂಜನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳ ಜನಾಂತರಂಗಮಂ ರಂಗಮುಮಂ ೬೨

ನಿಲ್ತುವು ರಸಂಗಳಲ್ಲಿ ಮ
ಡಲ್ತೆನೆ ಭಂಗಿಯೊಳನಂಗ ಜಂಗಮ ಲತೆವೊಲ್
ನಿಲ್ತು ಜವನಿಕೆಯ ಮಱೆಯೊಳ್
ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ ೬೩

ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸಲೆ ಕಂತು ಪುಷ್ಪಾಂಜಳಿಯಂ
ಸೂಸಿದ ಪದದೊಳೆ ಸಭೆಗಂ
ಪುಗುವುದನನುಕರಿಸಿ ರಂಗದೊಳ್ ಸೊಗಯಿಸಿದಳ್ ೬೪

ಭಾವದನುಭಾವದೆಸೆವ ವಿ
ಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ
ಭಾವಿಸುವೊಡಾದಿದೇವನ
ದೇವೇಂದ್ರನ ಬಗೆಗಮಸದಳಂ ನರ್ತಕಿಯಾ ೬೫

ಪುಗುವ ಪೊಱಮಡುವ ತೆಱನೆರ್ದೆ
ವುಗುವಳ್ ಪೊಱಮಡುವಳೆನಿಸೆ ಪೊಸತಮರ್ದಂ ಮೇ
ಗುಗುಟ್ಟಿಪಳೆನಿಸೆ ಮುಗುಳ್ನಗೆ
ನಗೆಮೊಗದ ಬೆಡಂಗವಳ್ಗದೇನೊಪ್ಪಿದುದೋ ೬೬

ಪೊಸವೆಳ್ದಿಂಗಳ್ ದೆಸೆದೆಸೆ
ಗೆಸೆದುದು ಕುಮುದವನಮಲರ್ದುದೆಂಬಂತಿರದೇ
ನೆಸೆದುದೊ ಕಟಾಕ್ಷಮಾಲಾ
ಪ್ರಸರಂ ಭ್ರೂಲಾಸ್ಯಸೌಂದರಂ ನರ್ತಕಿಯಾ ೬೭

ಅವಯವದಿಂದಮೆ ದೇವಾಂ
ಗ ವಸ್ತ್ರದುಳ್ಳುಡೆಯನಾಕೆಯೋಸರಿಸುವ ಸೂ
ಸುವ ಹಾರಲತೆಯನಳವಡಿ
ಸುವ ಭಂಗಿಯೆ ಮದನ ರಾಜ ರಾಜ್ಯವಿಳಾಸಂ ೬೮

ಸುರಗಣಿಕಾ ನಾಟ್ಯರಸಂ
ಪರಮನ ಚಿತ್ತಮುಮನೆಯ್ದೆ ರಂಜಿಸಿದುದು ವಿ
ಸ್ಫುರಿತ ಸ್ಫಟಿಕಂ ಶುದ್ಧಾಂ
ತರಂಗಮೇನನ್ಯ ರಾಗದಿಂ ರಂಜಿಸದೇ ೬೯

ಆ ಮಧುರಾಕಾರ ಲತಾ
ಕೋಮಳೆ ತನಗಾಗಳಾಯುರಂತರಂ ಬರೆ ಸೌ
ದಾಮಿನಿವೊಲ್ ಭೋಂಕೆನೆ ಸುರ
ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್ ೭೦

ರಸಭಂಗ ಭಯದಿನಿಂದ್ರಂ
ಪೊಸತೊಂದಾದೊರೆಯ ಪಾತ್ರಮಂ ತಂದನುಸಂ
ಧಿಸುವುದುಮದನಣಮಱಿಯ
ಲ್ಕೆ ಸುರಾಸುರ ಸಮಿತಿಗಾದುದಿಲ್ಲಾ ಕ್ಷಣದೊಳ್ ೭೧

ಆ ನೀಲಾಂಜನೆಯೆಂದೆ ಮ
ನೋನಯನೋದಿತೆ ವಿಮೋಹದಿಂದಿರೆ ಸಭೆ ವಿ
ದ್ಯಾನಿಳಯನಱಿದದಂ ದೇ
ಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ ೭೨

ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ
ಸಾರದನಿತ್ಯತೆ ಮನದೊಳ್
ಬೇರೂಱಿದುದೀಗಳೆಂತಿದಂ ಕಡೆಗಣಿಪೆಂ ೭೩

ಕೋಟಿ ತೆಱದಿಂದಮೆಸೆವೀ
ನಾಟಕಮಂ ತೋಱಿ ಮಾಣ್ದಳಿಲ್ಲಲ್ ಬಗೆಯೊಳ್
ನಾಟುವಿನಮಮರ ಸಂಸೃತಿ
ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್ ೭೪

ತನು ರೂಪ ವಿಭವ ಯೌವನ
ಧನ ಸೌಭಾಗ್ಯಾಯುರಾದಿಗಳ್ಗೆಣೆ ಕುಡಿಮಿಂ
ಚಿನ ಪೊಳಪು ಮುಗಿಲ ನೆಟಲಿಂ
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ ೭೫

ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ
ದೆನಿತೆನಿತಂ ಮಱುಗಿದುದಿ
ಲ್ಲನಂತ ಸಂಸಾರಗಹನದೊಳ್ ಜೀವಂಗಳ್ ೭೬

ಬಗೆದೀಡಾಡೆ ದುರಂತ ದುಃಖ ತತಿಗಳ್ ಬೆನ್ನಟ್ಟೆ ದುರ್ಮೋಹ ಮ
ತ್ಸ್ಯಗಣಂಗಳ್ ಕಡಿದಿಕ್ಕೆ ಲೋಭ ಮಕರಾನೀಕಂಗಳಾಟಂದು ನು
ಣ್ಣಗೆ ನುಂಗುತ್ತಿರೆ ಮಾರ ರಾಗ ಶಿಶುಮಾರಂಗಳ್ ಮಹೋಗ್ರಂಗಳಿ
ನ್ನೆಗಮೋರಂತೆ ತೊಟಲ್ದೆನಿನ್ ತಿರಿಯಲಾಱೆಂ ಭವಾಂಭೋಧಿಯೊಳ್ ೭೭

ಎಂದು ಸಂಸಾರ ಶರೀರ ಭೋಗ ವಿರಕ್ತಾಂತರಂಗನುಂ ಮುಕ್ತಿ ಕಾಂತಾನುರಕ್ತಚಿತ್ತನುಮಾಗಿರ್ಪನ್ನೆಗಂ, ಪೂರ್ವಭವಾಭ್ಯಸ್ತಸಮಸ್ತ ಆಗಮಾರ್ಥರುಂ, ಉಚಿತ ಶುಭಭಾವನಾಧ್ಯಾಸಿತ ಅಂತಃಕರಣರುಂ ತ್ರಿಭುವನ ಗುರು ಪರಿನಿಷ್ಕ್ರಮಣ ಕಲ್ಯಾಣ ಪ್ರತೀಕ್ಷಣರುಂ, ಬ್ರಹ್ಮ ಕಲ್ಪಾಂತನಿವಾಸಿಗಳುಮಪ್ಪ ಎಣ್ಬರುಂ ಲೋಕಾಂತಿಕ ದೇವರ್ ಬಂದು

ಪರಮಾರ್ಹಂತ್ಯಮನೆಯ್ದಲಿರ್ದುದಱಿಂ ಮೇಲುಂಟೆ ಸತ್ವಂ ಚರಾ
ಚರಮಂ ನೆಟ್ಟನೆ ಪರ್ವಲಿರ್ದುದದಱಿಂ ಮೇಲುಂಟೆ ವಿಜ್ಞಾನಮಿಂ
ತೆರದರ್ಕಂ ನೆಲೆಯಾಗಿಯುಂ ವಸುಮತೀ ಸಾಮ್ರಾಜ್ಯದೊಳ್ ನೀನ್ ನಿರಾ
ದರನಾಗಿರ್ದುದೆ ತತ್ಸುಖಾನುಗುಣಮಂ ಪೇೞ್ಗುಂ ಗುಣಾಂಭೋನಿಧೀ ೭೮

ಅದು ಕಾರಣದಿಂದೀ ವಸುಂಧರಾ ರಾಜ್ಯಮೋಹಮೆಂಬ ವಜ್ರಲೋಹನಿಗಳಮಂ ಪಱಿಯೆ ಪೊಯ್ವ ರಾಜಕುಂಜರಂಗೆ ನಿನಗಪವರ್ಗ ಮಾರ್ಗಂ ನಿರರ್ಗಳಮೆ ವಲಂ ಎಂದು ಪ್ರತಿಬೋಧಿಸಿ ಪೋಗಲೊಡಂ ಅಮರರಾಜಂ ಪರಿನಿಷ್ಕ್ರಮಣಕಲ್ಯಾಣೋತ್ಸುಕನಾಗಿ ಪಂಚಮಾಂಬುಧಿ ಪವಿತ್ರಜಳಪರಿಪೂರ್ಣಸುವರ್ಣ ಕಲಶಂಗಳಿಂದಮಭಿಷೇಕಂಗೆಯ್ದು, ತದನಂತರಂ ವೃಷಭನಾಥಂ ಭರತ ರಾಜನಂ ಬರಿಸಿ ರಾಜ್ಯಾಭಿಷೇಕಂಗೆಯ್ದು ಬಾಹುಬಲಿಗಂ ಯುವರಾಜ ಪದವಿಯಂ ದಯೆಗೆಯ್ದಯೋಧ್ಯಾ ಪೌದನಪುರಾಧಿಪತ್ಯದೊಳಿರ್ವರುಮಂ ನಿಱಿಸಿ ಉೞಿದಪತ್ಯವರ್ಗಕ್ಕೆಲ್ಲಮಿಳಾತಳ ವಿಭಾಗಮುಮಂ ಪಚ್ಚುಕೊಟ್ಟು ಪರಿನಿಷ್ಕ್ರಮಣೋದ್ಯುಕ್ತಚಿತ್ತನಾಗಿ ನಾಭಿರಾಜಾದಿಗಳಂ ಬೀೞ್ಕೊಂಡು ಸೌಧರ್ಮೇಂದ್ರ ದತ್ತ ಹಸ್ತಾವಲಂಬಂ ಸುದರ್ಶನಮೆಂಬ ಶಿಬಿಕೆಯನೇಱಿದಾಗಳ್, ಅಯೋಧ್ಯಾಪುರಕ್ಕತಿ ದೂರಮುಮತ್ಯಾಸನ್ನಮುಮಲ್ಲದ ಸಿದ್ಧಾರ್ಥವನದ ನಡುವಣ ಚಂದ್ರಕಾಂತ ಶಿಳಾತಳದೊಳ್ ಶಿಬಿಕೆಯನಿರಿಸಿ ಸುರಾಸುರ ಸಭೆಯಂ ದೂರೋತ್ಸಾರಿತಂ ಮಾಡಿ ಜನದ ಕಳಕಳಮಂ ಬಾರಿಸಿ ತನ್ಮಧ್ಯದೊಳ್ ಜಗನ್ನಾಥನನಿರಿಸಿ ಪರಿಚಾರ ಭೃತ್ಯಮಂ ದೇವೇಂದ್ರಂ ಮಾಡಲ್, ಶುಭಭಾವನೆವೆರಸು ಸಮಸ್ತ ವಸ್ತುಗಳೊಳ್ ಸಮತೆಯಂ ಭಾವಿಸಿ ಬಾಹ್ಯಾಭ್ಯಂತರಪರಿಗ್ರಹ ಪರಿತ್ಯಾಗೋನ್ಮುಖ ಮಾನಸಂ ತ್ರಿಸಾಕ್ಷಿಕನಾಗಿ ವಸ್ತ್ರಾಭರಣಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ ಪೂರ್ವಾಭಿಮುಖನುಂ ನಿಬಿಡ ನಿಬದ್ಧಪಲ್ಯಂಕಾಸನನುಮಾಗಿ

ಮನದ ಪರಿಚ್ಛೇದದಿನಂ
ದು ನಮಸ್ಸಿದ್ಧೇಭ್ಯ ಎಂದು ಕರ್ಮಂಗಳ ಬೇ
ರನೆ ಪಱಿವ ತೆಱದೆ ಪಱಿದಂ
ಮನಸ್ವಿ ಚಳದಳಿವಿನೀಳ ಕೇಶಾವಳಿಯಂ ೭೯

ಬರೆ ಚೈತ್ರಂ ಕೃಷ್ಣ ಪಕ್ಷಂ
ದೊರೆಕೊಳೆ ನವಮಿಯೊಳಮುತ್ತರಾಷಾಢಂ ದು
ರ್ಧರ ಜಿನದೀಕ್ಷೆಯನಘಕುಳ
ಕರಚಂಡಂ ಮೂಱು ಜಾವದಾಗಳ್ ಕೊಂಡಂ ೮೦

ಸುರದುಂದುಭಿರವಮೆಸೆದಿರೆ
ಸುರಪತಿ ತಳೆದಮರೆ ಕೆದಱ್ ಹರಿನೀಲಮಣಿ

ಸ್ಫುರಿತದೆ ತೆರೆಗಳ ಕೆಲದೊಳ್
ಪರಭಾಗಂಬಡೆದುವು ಪಯೋಂಭೋನಿಧಿಯೊಳ್ ೮೧

ಅಂತು ದೇವೇಂದ್ರಂ ಪರಿನಿಷ್ಕ್ರಮಣಕಲ್ಯಾಣಮಂ ಮನ್ನಿಸಿ ತನ್ಮುನೀಂದ್ರ ಪದಪಯೋಜಂಗಳ್ಗೆಱಗಿ ಪೊಡೆವಟ್ಟು ಪೋಗೆ, ತದನಂತರದೊಳ್ ಭರತಂ ಅವನತಭಕ್ತಿನಿರತಂ ತ್ರಿಲೋಕಗುರುಚರಣ ಸರಸಿಜಂಗಳನರ್ಚಿಸಿ ನಿಜ ಪರಿಜನಂಬೆರಸು ರಾಜಧಾನಿಗೆ ಪೋದಂ. ಕಚ್ಛ ಮಹಾಕಚ್ಛರುಂ ಭರತನ ಮಗಂ ಮರೀಚಿಯುಂ ಬೆರಸು ನಾಲ್ಸಾಸಿರ್ವರ್ ಮಕುಟಬದ್ಧರಪ್ಪರಸುಮಕ್ಕಳ್ ಪೋಗಲೊಲ್ಲದೆ ಭಕ್ತಿಯ ಭರದಿಂ ಜಾತರೂಪಮಂ ಕೈಕೊಂಡರ್. ಆಗಳಾ ತ್ರೈಲೋಕ್ಯವಲ್ಲಭಂ,

ಇಂದಿಂಗಱುದಿಂಗಳ್ ನೆಱೆ
ದಂದಲ್ಲದೆ ಕಯ್ಯನೆತ್ತೆನೆಂದನಶನದಿಂ
ನಿಂದಂ ಯೋಗದೊಳತಿ ನಿ
ಷ್ಪಂದಂ ಮಂದರನಗಂಬೊಲಚಳಿತ ಧೈರ್ಯಂ ೮೨

ಸ್ತಿಮಿತೇಕ್ಷಣಭ್ರೂಭಂ
ಗಮನಾಪಾಂಗಾವಳೋಕನಂ ಸುಶ್ಲಿಷ್ಟೋ
ತ್ತಮದಶನಚ್ಛದಮಾನನನ
ಮಮರ್ದುದು ಯೋಗಪ್ರಯೋಗದೊಳ್ ಮುನಿಪತಿಯಾ ೮೩

ನೆಗಱ್ದುದು ದೀಕ್ಷಾನಂತರ
ಮಗಣಿತ ಪುಣ್ಯೋದಯಂ ಮನಃಪರ್ಯಯಮಂ
ತೊಗೆದ ಚತುರ್ಜ್ಞಾನದೊಳಾ
ವಗಮೆಸೆದಂ ಜ್ಞಾನರೂಪನಾದಿಬ್ರಹ್ಮಂ ೮೪

ಆದಿ ತೀರ್ಥಕರ್ತಾರನ್ ಅಮರಗಿರಿಯಂತೆ ಅಚಳಿತನುಂ, ಪಾರಾವಾರದಂತೆ ಅಕಲುಷಿತನುಂ, ಅನಿಲನಂತೆ ನಿಸ್ಸಂಗನುಂ, ಅಂಬರದಂತೆ ನಿರ್ಲೇಪನುಮಾಗಿ ನಿಲೆ, ಆ ಮುನೀಂದ್ರನ ತಪಃಪ್ರಭಾವದೊಳ್ ಅನ್ಯೋನ್ಯ ವೈರಂಗಳಂ ಮಱೆದು

ಕರಿಗಳ್ ಕೇಸರಿಗಳ್ಗೆ ಪುಷ್ಕರ ಧೃತ ಸ್ವಚ್ಛಾಂಬುವಂ ನೀಡೆ ಭೀ
ಕರ ಶಾರ್ದೂಲಕುಳಂ ಕುರಂಗಕುಲದೊಳ್ ತಳ್ಪೊಯ್ದು ಬಂದಾಡೆ ಕೇ
ಸರಿಣೀಸ್ತನ್ಯಮನನ್ಯ ವನ್ಯ ಗಜಪೋತಾನೀಕಮುಂಡಾಡೆ ಶಾಂ
ತರಸಂ ಪೊಂಪುಳಿವೋದುದಾ ಮುನಿಪನಿಂ ತತ್ಕಾಂತ ಕಾಂತಾರದೊಳ್ ೮೫

ಆ ಪ್ರಸ್ತಾವದೊಳ್ ತತ್ತಪೋನಿಧಿಯ ಸನ್ನಿಧಿಗೆ ಕಚ್ಛ ಮಹಾಕಚ್ಛರ ತನಯರಪ್ಪ ನಮಿ ವಿನಮಿಗಳ್ ಅಭಿನವ ಯೌವನಾರಂಭಪ್ರೇರಿತ ವಿಷಯಸುಖಾನುಭವೋನ್ಮುಖ ಮಾನಸರ್ ಕೃಪಾಣ ಖೇಟಕವ್ಯಗ್ರಪಾಣಿಗಳ್ ಬಂದು ಆದಿಪುರುಷನ ಪದಪಯೋಜಂಗಳನರ್ಚಿಸಿ ಯುಕ್ತಾಯುಕ್ತವಿಚಾರ ದೂರಮತಿಗಳಾಗಿ

ಕಡಲ ತಡಿಯೆಯ್ದೆ ನೆಲನಂ
ಪಡೆದರ್ ಭವದೀಯ ಪುತ್ರರುಳ್ಳಳವಿಗಳೊಳ್
ಪಡೆದುದು ಬಂಧು ಜನಂ ನಿ
ಮ್ಮಡಿಗಾವೇಂ ಪೋಷ್ಯವರ್ಗದಿಂದಂ ಪೊಱಗೇ ೮೬

ಎಂದು ತಮ್ಮ ಭೋಗಾಕಾಂಕ್ಷೆಯನೆ ಬಗೆದು ಯೋಗವ್ಯಾಘಾತಮಂ ಮಾಡುವುದುಂ, ಪ್ರಕಂಪಿತಾಸನಂ ಉತ್ಪನ್ನಾವಧಿಬೋಧಂ ಧರಣೇಂದ್ರನಱಿದು ಭೋಂಕೆನೆ ಬಂದು ತ್ರಿಭುವನಗುರುಗೆ ಪೊಡೆವಟ್ಟು ನಮಿವಿನಮಿಗಳ ಮೊಗಮಂ ನೋಡಿ, 'ಪರಿವರ್ಜಿತ ಭೋಗನೊಳ್ ಭೋಗಪರಂಪರೆಯನಱಸುವುದೆ? ಇನಿತು ಬಯಕೆಯುಳ್ಳೊಡೆ ನಿಮ್ಮಿರ್ಬರುಂ ಭರತನನೋಲಗಿಸಿ ವಾಂಛಿತಮಂ ಪಡೆಯಿಂ' [ಎನೆ]

'ಕುಡುವಂ ಗುರು ಪಡೆವರ್ ಪೆಱ
ರೆಡೆಯೊಳ್ ನೀಮಾರ್ಗಿದೇಕೆ ಕಿಡೆ ನುಡಿದಪಿರಿ
ಟ್ಟೆಡೆವೆರ್ಗಡೆತನದೊಳಿದೇ
ವಡೆವಿರ್ ನಿಮಗೆಮ್ಮ ಕಜ್ಜದೊಳ್ ಪೊರೆಯುಂಟೇ ೮೭

ಸುರ ಭೂರುಹಮಿರೆ ಮತ್ತಿನ
ಮರಮಂ ಜಳರಾಶಿಯಿರೆ ಕುಳುಂಪೆಯ ನೀರಂ
ಎರೆವೆಮೆ ಪುರು ಪರಮೇಶ್ವರ
ನಿರೆ ಭರತನನೆಮ್ಮ ಮಹಿಮೆಗಂತದು ದೊರೆಯೇ' ೮೮

ಎಂಬುದುಂ ಧರಣೇಂದ್ರನವರ ಮಹಾನುಭಾವಮುಮನಾದಿ ದೇವನೊಳಾದ ನಿರ್ಭರ ಭಕ್ತಿಯುಮಮಂ ಮೆಚ್ಚಿ ದಿವ್ಯರೂಪಮಂ ತೋಱಿ

'ಧರಣೇಂದ್ರನೆನಭವನ ಕಿಂ
ಕರನೆಂ ನಿಮಗಪ್ಪ ಭಾಗಮಂ ಕುಡಲೆನ್ನಂ
ಗುರು ಮುನ್ನಂ ಬೆಸಸಿದನಿ
ನ್ನಿರದೆನ್ನೊಡವನ್ನಿಮೆನ್ನ ಪೇಳ್ವುದು ಗೆಯ್ಯಿಂ' ೮೯

ಎಂಬುದುಂ, 'ಅಧಿಪಂ ಸಂಮುಖದಿಂ ಬೆಸಸಿದೊಡಲ್ಲದೊಲ್ಲೆವು' ಎನೆ, ವಿಕ್ರಿಯೆಯಿಂ ಬೆಸಸುವಂತೆ ಮಾಡಿ ನಮಿವಿನಮಿಯುಮಂ ನಿಜವಿಮಾನಮನೇಱಿಸಿಕೊಂಡು ರಜತಾಚಲಮನೆಯ್ದಿ, ವಿಜಯಾರ್ಧದೊಳ್ ನಿಂದು ಅವರನಲ್ಲಿಗೆ ವಾಸ್ತವ್ಯರ್ ಮಾಡಿ ದಕ್ಷಿಣೋತ್ತರ ಶ್ರೇಣಿಗಳೊಳಿರ್ಪ ವಿದ್ಯಾಧರಾಧೀಶ್ವರರಂ ಬರಿಸಿ ಗಗನವಲ್ಲಭ ರಥನೂಪುರ ಚಕ್ರವಾಳಂಗಳಂ ರಾಜಧಾನಿಗಳಾಗಿ ನೆಗೞ್ದ ನೂಱಪತ್ತುಂ ಪೊೞಲ್ಗಳನೊಳಗೊಂಡ ದಕ್ಷಿಣೋತ್ತರ ಶ್ರೇಣಿಗಳಂ ನಮಿ ವಿನಮಿಗಳ್ಗೆ ಕೊಟ್ಟು ಗಾಂಧಾರ ಪನ್ನಗ ವಿದ್ಯೆಗಳನವರ್ಗೆ ವಿಧಿಪೂರ್ವಕಮಿತ್ತು ಧರಣೇಂದ್ರನ್ ಅವರಂ ಅಂಬರಚರೇಂದ್ರಪದವಿಯೊಳ್ ನಿಱಿಸಿ ನಿಜಾಮರಲೋಕಕ್ಕೆ ಪೋದಂ. ಅನ್ನೆಗಮಿತ್ತಲ್,

ಪರಮಂ ಪೂಣ್ದಾಱುದಿಂಗಳಂ ನೆಱಪಿ ಚರ್ಯಾಮಾರ್ಗದೊಂದಂದಮಂ
ಧರೆಯೊಳ್ ಮಾರ್ಗ ವಿಬೋಧನಾರ್ಥಮಱಿಪಲ್ಕೆಂದೆತ್ತಿ ಕಯ್ಯಂ ಸುರೇ
ಶ್ವರಶೈಳಂ ತಳರ್ವಂತೆವೊಲ್ ತಳರ್ದನೀರ್ಯಾಗೋಚರಂ ಶುದ್ಧಿ ತ
ಳ್ತಿರೆ ತನ್ನೊಳ್ ಧರೆಯಂ ಪದಾಂಬುಜರಜಂಗಳ್ ನೀರಜಂ ಮಾಳ್ಪಿನಂ ೬೦

ಅಂತು ತಳರ್ದು ಗ್ರಾಮ ನಗರ ಖೇಡ ಖರ್ವಡ ಮಡಂಬಗಳೊಳೊಡಂಬಡಿಲ್ಲದೆ ಚರ್ಯಾಮಾರ್ಗದೊಳ್ ನಡೆವಲ್ಲಿ ಜನಪದ ಪುರ ಸನಾಭಿ ಜನಂಗಳ್ ಕಂಡು ಮುಸುಱಿಕೊಂಡು ಕೆಲಬರ್ ಅತಿಜಡಮತಿಗಳ್ 'ಮಿಂದುಂಡು ಈಗಳೆ ಬಿಜಯಂಗೆಯ್' ಎಂದಿರೆ ಕುಳಾದ್ರಿಧೈರ್ಯಂಗೆ ಚರಿಗೆ ಮಾಣ್ದತ್ತಿನಿಸುಂ. ಅಂತಾ ಮುನೀಶ್ವರಂಗೆ ನಿಖಿಳಜಗಜ್ಜನಾಶ್ಚರ್ಯ ಚರ್ಯಾಪರ್ಯಟನದೊಳ್ ಮತ್ತಮಾಱುದಿಂಗಳ್ ಪೋಗೆ, ಸಂವತ್ಸರಂ ನೆಱೆದಂದು ಹಸ್ತಿನಾಪುರಮನಾಳ್ವ ಕುರುವಂಶ ಶಿಖಾಮಣಿ ಸೋಮಪ್ರಭಂಗೆ ತತ್ ಸ್ವಯಂಪ್ರಭಾ ಶ್ರೀಮತ್ಯಾರ್ಯಾ ಸ್ವಯಂಪ್ರಭದೇವ ಕೇಶವ ಮಹೀಶಾಚ್ಯುತ ಪ್ರತೀಂದ್ರಂ ಧನದೇವಚರಂ ಸರ್ವಾರ್ಥ ಸಿದ್ಧಿಯಿಂ ಬಂದು ಶ್ರೇಯಾಂಸನೆಂಬೊಂ ಪ್ರಿಯಾನುಜನಾಗಿರ್ದಾತಂ ಅಂದಿನ ಬೆಳಗಪ್ಪ ಜಾವದೊಳ್,

ಸುರಶೈಲಂ ಕಲ್ಪವೃಕ್ಷಪ್ರಕರಪರಿವೃತಂ ರಾಜಗೇಹಾಂಗಣಾಲಂ
ಕರಣಂ ಬಂದಿರ್ದುದಂ ಕಂಡಮರಗಿರಿನಿಭಂ ಪ್ರಾರ್ಥಿತಾರ್ಥಪ್ರದಂ ಮಾ
ಣ್ದಿರದಾದಿಬ್ರಹ್ಮನೆಟ್ಟರ್ಪುದನೆ ಕನಸುವೇೞ್ದಪ್ಪುದೆಂದಗ್ರಜಂಗಾ
ದರದಿಂದಂ ಪೇೞ್ದು ಕಾಣ್ಬುತ್ಸವದೊಳೆ ಪರಮಾನಂದಮಂ ತಾಳ್ದಿ ನಿಂದಂ ೬೧

ಅನ್ನೆಗಂ ಆದಿಮುನೀಶ್ವರನುಂ ಆ ಪುರಾಂತರಾಳದೊಳ್ ಸಂವೇಗವೈರಾಗ್ಯಾಭಿವೃದ್ಧ್ಯರ್ಥಮಾಗೆ ಜಗತ್ಕಾಯಸ್ವಭಾವನಾಪರಂ ಸಕಳಶರೀರಗುಣಾಧಿಕದುಃಖಾರ್ದಿತಾವಿನೀತರೊಳ್ ಮೈತ್ರೀ ಪ್ರಮೋದ ಕಾರುಣ್ಯಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ ಬರ್ಪನ್ನೆಗಂ, ದ್ವಾರಪಾಳಕಂ ಪರಿತಂದು ಭಗವದ್ವೃತ್ತಕ ಪ್ರಸಕ್ತವಚನರಚನಾಮುಖಸರಸೀರುಹನಾಗಿರ್ದ ಸೋಮಪ್ರಭಂಗಂ ಶ್ರೇಯಾಂಸಂಗಂ ಅಱಿಪಿದಾಗಳ್, ಅತಿಪ್ರಮೋದಪ್ರೀಣಿತಾಂತಃಕರಣನಾಗಿ,

ಇದಿರೊಳ್ ಮಂಗಳ ಗೀತ ತೂರ್ಯ ನಿನದಂ ಕೈಗಣ್ಮೆ ಮಾಂಗಲ್ಯವೇ
ಷದ ಕಾಂತಾತತಿ ಮಂಗಳೋಪಕರಣ ದ್ರವ್ಯಂಗಳಿಂದೊಪ್ಪೆ ಪೆ
ರ್ಚಿದ ತನ್ನುತ್ತಮ ಭಕ್ತಿಯಿಂ ನಿಱಿಪುದುಂ, ಶ್ರೇಯೋಗೃಹದ್ವಾರದೊಳ್
ನಿಧಿ ನಿಲ್ವಂತಿರೆ ನಿಂದನೂರ್ಜಿತ ಗುಣಂ ಸಂಸಾರ ಸಾರೋದಯಂ ೯೨

ಆದಿ ತೀರ್ಥಕರ್ತಾರನಂ ಶ್ರದ್ಧಾದಿ ಗುಣಸಂಪನ್ನನಾಗಿ ನಿಱಿಸಿ ಕರ್ಮಭೂಮಿಯ ಮೊದಲೊಳಾದಿ ದಾನತೀರ್ಥ ಪ್ರವರ್ತಕಂ ಶ್ರೇಯಾಂಸಂ ನಿಜಾಗ್ರಜನಪ್ಪ ಸೋಮಪ್ರಭಂಬೆರಸು ಕನಕ ಕಳಶದೊಳ್ ತೀವಿದಮೃತ ರಸಸಮಾನ ಧವಳೇಕ್ಷುರಸಧಾರೆ ಪುಣ್ಯಧಾರೆಯಂತೆ ಸೊಗಯಿಸುವಿನಂ ವಿಶಾಲ ಪಾಣಿಪಾತ್ರದೊಳೆಱೆವುದುಂ,

ವಸುಧಾರೆ ನಾಡೆಯುಂ ಕ
ಣ್ಗೆಸದಳಮಾಯ್ತಮರ ಕರ ಪರಿಚ್ಯುತಮೆತ್ತಂ
ಪೊಸ ಪೂವಿನ ಸರಿ ಪಿರಿದಾ
ಯ್ತುಸದಳಮೆಸಪೆಲರೊಂದು ಮೆಲ್ಪಾಯ್ತಾಗಳ್ ೯೩

ಆನಂದದುಂದುಭಿ ಧ್ವನಿ
ತಾನೊಡನೊಡನೆಸೆಯೆ ನಭದೊಳೊಡನೆಸೆದುವಹೋ
ದಾನಿಯಹೋ ಪಾತ್ರಮಹೋ
ದಾನಮಹೋ ದೇಯಮೆಂಬ ದಿವ್ಯಧ್ವನಿಗಳ್ ೯೪

ಅಂತು ಕಾಯಸ್ಥಿತಿಯಂ ನಿರ್ವರ್ತಿಸಿ ತದನಂತರಮೆ ಸೋಮಪ್ರಭ ಶ್ರೇಯಾಂಸರ್ ಭಕ್ತಿಯಿಂದೆಱಗಿದರ್ ತತ್ಪಾದಪದ್ಮಂಗಳೊಳ್. ಆಗಳ್,

ಅಕ್ಷಯದಾನಂ ನಿಮಗ
ಕ್ಕಕ್ಷುಣ್ಣಮಿದೆಂದು ಪರಮ ಮುನಿ ಪರಸೆ ಬೞಿ
ಕ್ಕಕ್ಷಯ ತೃತೀಯೆಯೆಂದಖಿ
ಳ ಕ್ಷಿತಿಗಂ ನೆಗಳ್ದುದಲ್ತೆ ತತ್ಪುಣ್ಯದಿನಂ ೯೫

ಅಂತು ಪರಸಿ ಪೊಱಮಟ್ಟು ಪೋಪ ಯತಿಪತಿಯಂ ಕ್ಷಿತಿಪತಿಗಳಿರ್ವರುಮಗಲಲಾಱದೊಡನೊಡನೆ ಪೋಗಿ ಕಿಱಿದಂತರಮಂ ಕೞಿಪಿ ಮಗುಳ್ದು ಬಂದು ದಿವಿಜಕರೋನ್ಮುಕ್ತಾದಿರತ್ನಂಗಳಂ ಪೊೞಲ್ಗೆಲ್ಲಂ ಗೋಸನೆವಿಡಿಸಿ ಕುಡೆ, ಭರತೇಶ್ವರಂ ಆಕಂಪನಾದಿ ನೃಪಸಮೂಹಂ ಬೆರಸು ಬಂದು, ಆದಿ ದಾನತೀರ್ಥಪ್ರವರ್ತಕನೈ ಪುಣ್ಯಭಾಜನನೈ ನೀನೆಯೆಂದು ಪೊಗಳ್ದು ಪೂಜಿಸಿ ಪೋದಂ.

ಪುರುದೇವಂಗಾದ ಕೈವಕಲ್ಯದ ಮಹಿಮೆಯನುಗ್ರಾಯುಧಾಗಾರದೊಳ್ ಭಾ
ಸ್ಕರ ಚಕ್ರೋದ್ಭಾಸಿ ಚಕ್ರೋದ್ಭವದ ಪಿಱಿದುಮಾಶ್ಚರ್ಯಮಮಂ ಶೋಭಿತಾಂತಃ
ಪುರದೊಳ್ ಮಾದೇವಿಗಾದಾತ್ಮಜನೊಸಗೆಯನಾ ಮೂವರುಂ ಬಿನ್ನಪಂಗೆ
ಯ್ದಿರೆ ಜಾತಾನಂದನೀ ಮೂಱುಸಗೆಗಳೊಳಮಿನ್ನಾವುದಂ ಮುನ್ನಮಾಳ್ಪೆಂ ೧೦೩

ಧರ್ಮಾರ್ಥಕಾಮಮೆಂಬಿವು
ಧರ್ಮಾರ್ಥಿಜನಕ್ಕೆ ನೆಱೆದ ನೆರ್ಮಂತವಱೊಳ್
ಧರ್ಮಂ ಪ್ರಧಾನಮರ್ಥಂ
ಧರ್ಮಾಂಘ್ರಿಪ ಫಲಮದರ್ಕೆ ರಸಮದು ಕಾಮಂ ೧೦೪

ಅದಱಿಂದಮಿವಱೊಳರ್ಹ
ತ್ಪದಪದ್ಮಪ್ರಣತಿ ಮುಖ್ಯಮೊಸಗೆಯುಮುಮೆಮಗಿ
ನ್ನಿದಱಿಂದಮಿಲ್ಲ ಮೇಲಾ
ವುದೆಂದು ಬಗೆದಧಿಕಭಕ್ತಿನಿರತಂ ಭರತಂ ೧೦೫

ಪುರಜನ ಪರಿಜನ ಪರಿವೃತಂ ಬಂದು ಅಭವನಾಸ್ಥಾನ ಮಂಟಪಮಂ ಗೆಂಟಱೊಳೆ ಕಂಡು ರಾಜಚಿಹ್ನಂಗಳನಿರಿಸಿ ಶ್ರೀಮಂಟಪ ಶ್ರೀಯನತ್ಯಂತ ವಿಸ್ಮಯಸ್ಮೇರ ಮುಖನುಂ ರೋಮಾಂಚಕಂಚುಕಿತನುಮಾಗಿ ನೋಡುತ್ತುಂ ಅನೇಕಾರ್ಚನೆಗಳಿಂದರ್ಚಿಸುತ್ತುಂ ಮೂಱು ಸೂಟ್ ಬಲಗೊಂಡು ಜಗತ್ರಿತಯಾಧೀಶ್ವರ ಶ್ರೀಮುಖಾಭಿಮುಖನಾಗಿ ಅನೇಕಸ್ತೋತ್ರ ಪವಿತ್ರೀಕೃತ ಮುಖಾರವಿಂದಂ ನಿಜೋಚಿತ ಸ್ಥಾನದೊಳ್ ಕುಳ್ಳಿರ್ದು

ನೃಸುರಾಸುರ ಪರಿಷತ್ಸ
ಸ್ಯ ಸಂಕುಳಂ ಜಿನವಚೋಮೃತಾಸಾರಮನಂ
ದಸದಳಮೆ ಬಯಸೆ ಭರತಂ
ಬೆಸಗೊಂಡಂ ಜಿನನನಖಿಳ ವಸುಸ್ಥಿತಿಯಂ ೧೦೬

ಅಂತು ಬೆಸಗೊಳೆ ದಿವ್ಯಧ್ವನಿಯೊಳಾ ಪರಮಯೋಗೀಂದ್ರನಿಂತೆಂದು ಬೆಸಸಿದಂ: ನಿನ್ನ ಬೆಸಗೊಂಡ ತತ್ತ್ವಮುಂ ಹೇಯೋಪಾದೇಯ ರೂಪದಿಂ ದ್ವಿವಿಧಮಕ್ಕುಂ; ಅಲ್ಲಿ ಸಂಸಾರ ಕಾರಣಂಗಳ್ ಹೇಯಂಗಳ್, ಮುಕ್ತಿಕಾರಣಂಗಳುಪಾದೇಯಂಗಳ್; ಮಿಥ್ಯಾದರ್ಶನಾದಿ ಕರ್ಮಂಗಳ್ ಸಂಸಾರಕಾರಣಂಗಳ್; ಅನಂತಜ್ಞಾನಾದಿ ನಿಜರೂಪಮಂ ಪಡೆವುದು ಮುಕ್ತಿ; ಸಮ್ಯಗ್ದರ್ಶನಚಾರಿತ್ರಂಗಳ್ ಅವಿಕಲ್ಪಂಗಳ್ ಮೋಕ್ಷಕಾರಣಂಗಳ್; ಅಲ್ಲಿ ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ. ಜೀವಾದಿ ಪದಾರ್ಥಯಾಥಾತ್ಮ್ಯಾವಗಮಂ ಸಮ್ಯಜ್ಞಾನಂ; ಸಂಸಾರಪರಿತ್ಯಾಗೋದ್ಯುಕ್ತ ಸಮ್ಯಜ್ಞಾನೋಪೇತ ಭವ್ಯ ಜೀವನ ಬಾಹ್ಯಾಭ್ಯಂತರ ಕ್ರಿಯಾನಿವೃತ್ತಿ ಸಮ್ಯಕ್ಚಾರಿತ್ರಮೆಂಬುದು – ಎಂದು ಹೇಯೋಪಾದೇಯ

ತತ್ತ್ವಮನಱಿಪಿ[ದಂ]. ಮತ್ತಂ ಭರತೇಶ್ವರನುಂ ಬಾಹುಬಲಿ ಕುಮಾರನುಂ ಜಿನೇಶ್ವರ ಪಾದಪದ್ಮಂಗಳ್ಗೆಱಗಿ ನಿಜ ರಾಜಧಾನಿಗಳ್ಗೆ ಪೋದರ್.

ಇತ್ತ ಸೌಧರ್ಮೇಂದ್ರಂ ಧರ್ಮಚಕ್ರವರ್ತಿತ್ವಕ್ಕೆ ದಿಗ್ವಿಜಯಮೆನಿಸಿದ ಭಗವದ್ವಿಹಾರಮ ನವಧಿಯಿಂದಮಱಿದು, ಅದನೆ ಪುನರುಕ್ತಂ ಮಾಳ್ಪಂತೆ

ದೇವ ವಿನೇಯೋತ್ಕರ ಸ
ಸ್ಯಾವಳಿ ಸುಗಿಸುಗಿದು ಕೂಡೆ ಬಾಡಿರ್ದುದು ಪಾ
ಪಾವಗ್ರಹದಿಂದದನಖಿ
ಳಾವನಿತಳ ಬಂಧು, ತಳಿಯ ಧರ್ಮಾಮೃತಮಂ ೧೦೭

ಮಿಳಿರೆ ದಯಾಧ್ವಜಮುನ್ನತಿ
ಗೊಳಗಾಗಿರೆ ಧರ್ಮಚಕ್ರಮಾಯತಿಯಂ ಕೈ
ಕೊಳೆ ಭವ್ಯ ವರೂಥಿನಿ ನಿ
ರ್ಮಳ ನಿನ್ನ ವಿಹಾರಮಾರನೇನೆಱಗಿಸದೋ ೧೦೮

ಎಂದಾದಿ ಜಿನೇಂದ್ರಂಗೆ ಬಿನ್ನಪಂಗೆಯ್ಯಲೊಡಮನೇಕ ಭವ್ಯ ಕೋಟಿಯ ಪುಣ್ಯಪ್ರೇರಣೆಯಿಂದಂ ಸಮವಸರಣ ಮಂಡಳಂ ಗಗನಮಂಡಳದೊಳ್ ನಡೆಯೆ ಜನಿತ ಜಗಜ್ಜನಾನಂದನುಂ ಸಮಸ್ತ ಜನ ಮೈತ್ರೀಸಮೇತನುಂ ಸಹಸ್ರ ದಿನಕರ ಸ್ಪರ್ಧಿಸಹಸ್ರಾರ ಧರ್ಮಚಕ್ರ ಪುರಸ್ಸರನುಮಾಗಿ ಧರ್ಮಕ್ಷೇತ್ರಂಗಳಂ ವಿಹಾರಿಸಿ ಬಂದು

ಪರಮಾನಂತ ಚತುಷ್ಟಯೈಕ ನಿಳಯಂ ಶ್ರೀಮತ್ಸಭಾಮಂಡಳಾಂ
ತರ ಸಿಂಹಾಸನ ಸುಸ್ಥಿತಂ ಗಣವೃತಂ ಚಂಚಚ್ಚತುಷ್ಷಷ್ಟಿ ಚಾ
ಮರವಿಭ್ರಾಜಿತಾನತ ತ್ರಿಭುವನಂ ಕುಂದೇಂದು ದುಗ್ಧಾಬ್ಧಿ ಪಾಂ
ಡುರ ಕೈಲಾಸ ನಗೇಂದ್ರದೊಳ್ ನೆಲಸಿದಂ ಸಂಸಾರ ಸಾರೋದಯಂ ೧೦೯

* * * * * * *

ಭರತಚಕ್ರವರ್ತಿ ಚರಿತಂ: ಅಹಂಕಾರ ನಿರಸನಂ

ಶ್ರೀ ಪರಿಪೂರ್ಣಂ ಭರತ ಮ
ಹೀಪಾಳಂ ಚಕ್ರ ಪೂಜೆಗೆಯ್ದಂ ಸಕಳ
ಕ್ಷ್ಮಾಪ ಶಿರೋರತ್ನಾಂಶು
ವ್ಯಾಪಿತ ಚರಣಂ ಸರಸ್ವತೀಮಣಿಹಾರಂ ೧

ಆ ಸುದರ್ಶನ ಚಕ್ರರತ್ನಮಂ ಪೂಜಿಸಿ ಬಟಿಯಂ ಜೀವಾಜೀವರತ್ನಂ ಬೇಱೆವೇಱೆ ಸಹಸ್ರಯಕ್ಷರಕ್ಷಿತಂಗಳಪ್ಪುವಂ

ಪೂಜಿಸಿ ಪೊಱಮಟ್ಟಗ್ರತ
ನೂಜೋತ್ಪತ್ಯುತ್ಸವಕ್ಕೊಡರ್ಚುವ ಪದದೊಳ್
ರಾಜಾಧಿರಾಜನಮರಮ
ಹೀಜದ ಲೀಲೆಯನೆ ಲೀಲೆಯಿಂ ಕೈಕೊಂಡಂ ೨

ಅನ್ನೆಗಂ,

ಪೊಸಜಾದಿಯ ಬೆಳೆದೊಱಗಿದ
ಪೊಸಗಟಿಮೆಯ ಪೊಸತರಲ್ದ ತಾವರೆಗಳ ಕಂ
ಪಸದಳಮೆಸೆದಿರೆ ದೆಸೆದೆಸೆ
ಗೊಸಗೆಯೆ ಬರ್ಪಂತೆ ಕಣ್ಗೆವಂದುದು ಶರದಂ ೩

ಖರಕಿರಣಂಗಳ ಕಾಯ್ಪಿನ
ಖರತನದಿಂ ಚಂದ್ರಕಿರಣದುಜ್ವಳಿಕೆಯಿನಾ
ಭರತನ ಮುಳಿಸೊಸಗೆಯನನು
ಕರಿಸಿದುದೇಂ ಚಕ್ರವರ್ತಿವೃತ್ತಮೊ ಶರದಂ ೪

ಅಂತು ದಿಗ್ವಿಜಯೋದ್ಯೋಗಕ್ಕುಪಯೋಗಿಯಾಗಿ ಬಂದ ಶಾರದ ಶ್ರೀಯನಿದಿರ್ಗೊಂಡು ಶುಭಮುಹೂರ್ತದೊಳ್ ದಿಗ್ವಿಜಯ ಪ್ರಯಾಣ ಭೇರಿಯಂ ಪೊಯ್ಸಿದಾಗಳ್

ಒದವಿದ ಚಕ್ರರತ್ನದೊಳಿದೊಂದೆಣೆಯಾಯ್ತೆನಿಸಿರ್ದ ಚಕ್ರ ಯು
ಗ್ಮದಿನಮರ್ದಚ್ಚು ವಜ್ರಮಯಮಾಗೆ ಕನನ್ಮಣಿ ಮೌಕ್ತಿಕ ಪ್ರಭಾ
ಸ್ಪದಮಮರೇಂದ್ರರುಂದ್ರ ಗಿರಿಕುಂಜ ವಿಚಂಚಳ ಕೇತನಾಳೀ ಕ
ಟ್ಟದಿರೊಳೆ ಬಂದು ನಿಂದುದಜಿತಂಜಯಮಾತ್ರಮನೋರಥಂ ರಥಂ ೫

ಆಗಳ್ ಮೌಹೂರ್ತಿಕರ್ ಬಂದು ದೇವಾ ವಿಜಯ ಪ್ರಸ್ಥಾನಲಗ್ನಂ ಸಾರೆವಂದುದೆಂದು ಬಿನ್ನಪಂಗೆಯ್ದಾಗಳ್

ರೋದೋಂತರ್ಭಾಗದೊಳ್ ದುಂದುಭಿಗಳೆಸೆಯೆ ಮಾಂಗಲ್ಯಗೀತಪ್ರಣಾದಂ
ವಾದಿತ್ರಧ್ವಾನದೊಳ್ ಸಂದಣಿಸೆ ಗುರು ಜನೋದ್ಗೀತ ನಾನಾ ವಿಧಾಶೀ
ರ್ವಾದಂ ಶೇಷಾಕ್ಷತಂಗಳ್ವೆರಸೆಸೆಯೆ ಮಹಾ ವಂದಿವೃಂದಾಂತಮಾಲಾ
ನಾದಂ ಗಂಭೀರನಾದಂ ನೆಗಟ್ದಿರೆ ತಳರ್ದಂ ರಾಗದಿಂ ಸಾರ್ವಭೌಮಂ ೬

ಅಂತು ತಳರ್ದು ಚಿತ್ತದೊಳ್ ವೀರರಸಂ ಪೊಣ್ಮುತ್ತಿರೆ ನಿಜಬಲಮಂ ನೋಡಿ ಎರಡುಂ ಕೆಲದೊಳಂ ಬಂದೆಜಿಗಿದ ರಾಜ ಚಕ್ರಮನೀಕ್ಷಣ ದರಹಸಿತವಿಸ್ರಂಭಾಳಾಪಂಗಳಿಂ ಸಂತಸಂಬಡಿಸುತ್ತಂ ಬಂದು ಅಂದಿನ ದಿನಮಯೋಧ್ಯಾ ಪುರಾಸನ್ನದೊಳ್ ನಿಜಸ್ಥಪತಿರತ್ನ ವಿರಚಿತಮಾಗಿ

ವಿಜಯಶ್ರೀ ಗೃಹಮೆನಿಸುವ
ವಿಯಪ್ರಸ್ಥಾನ ಶಿಬಿರ ನೃಪಮಂದಿರಮಂ
ವಿಜಿಗೀಷು ಬಂದು ಪೊಕ್ಕಂ
ವಿಜಯಾಳಂಕಾರ ಬಾಹು ಭರತ ಮಹೀಶಂ ೭

ಮಱುದಿವಸಂ ಆನಂದಿಗಳೆಂಬ ಪನ್ನೆರಡು ಭೇರಿಗಳುಂ ವಿಜಯಘೋಷಂಗಳೆಂಬ ಪನ್ನೆರಡು ಪಟಹಂಗಳುಂ ಗಂಭೀರಾವರ್ತಂಗಳೆಂಬಿರ್ಪತ್ತುನಾಲ್ಕು ಶಂಖಂಗಳುಂ ನಾಲ್ವತ್ತೆಂಟು ಕೋಟಿ ಪತಾಕೆಗಳುಮೆಸೆಯೆ ಪೂರ್ವಾಭಿಮುಖನಾಗಿ ಚಕ್ರರತ್ನಪುರಸ್ಸರಂ ಬಿಜಯಂಗೆಯ್ದಾಗಳ್

ಘನಘಟೆ ನಭದಿಂದಂ ಧಾತ್ರಿಗೆತ್ತತ್ತ ಬಂದ
ತ್ತೆನಿಸಿ ಕಳೆದುದೆತ್ತಂ ಚೂತ ಸಪ್ತಚ್ಛದೈಳಾ
ವನ ಸುರಭಿ ಮದಾಸಾರಾಸವಾಸಕ್ತ ಭೃಂಗೀ
ನಿನದ ಮುಖರಿತಾಶಾ ಚಕ್ರ ಗಂಧೇಭ ಚಕ್ರಂ ೮

ವನಧಿಯ ನೀಳ್ದ ಪೆರ್ದೆರೆಗಳೀ ನೆಲನಂ ಕವಿದಪ್ಪುವೀಗಳೀಗಳೆಂ
ಬಿನಮತಿ ವೇಗದಿಂ ಪರಿವ ಪಾಱುವ ಲಕ್ಕೆಯನೊಡ್ಡುವೊಳ್ಪು ತ
ನ್ನನೆ ನಡೆ ನೋಡಿಸುತ್ತುಮಿರೆ ಜಾಯಿಲಮೊಂದೆರಡೆಂದು ತೋಱೆ ನೆ
ಟ್ಟನೆ ಪದಿನೆಂಟು ಕೋಟಿವರೆಗಂ ತಳರ್ದತ್ತು ತುರಂಗಸಾಧನಂ ೯

ವಿವಿಧಾಯುಧ ಪೂರ್ಣಂಗಳ್
ಪ್ರವೀರ ಪುರುಷ ಪ್ರತಿಷ್ಠಿತಂಗಳ್ ಚೇತೋ
ಜವ ಹರಿ ಯೋಗ್ಯಂಗಳ್ ತಳ
ರ್ದುವಾಗಳೆಂಬತ್ತುನಾಲ್ಕು ಲಕ್ಕೆ ರಥಂಗಳ್ ೧೦

ಪಾದಾಭಿಘಾತ ವಿಚಳ
ನ್ಮೇದಿನ್ಯುತ್ಥಿತ ವಿಶಾಲ ಧೂಳೀ ಪಟಲಾ
ಚ್ಛಾದಿತ ಗಗನಂ ನಡೆದುದು
ಪಾದಾತಂ ಚತುರಶೀತಿ ಕೋಟಿ ಪ್ರಮಿತಂ ೧೧

ಎಡೆ ನೆಱೆಯದು ಭುವನತಳಂ
ನಡೆವ ಚತುರ್ಬಲಕೆ ದಿವಿಜಖೇಚರ ಸೈನ್ಯ
ಕ್ಕೆಡೆ ನೆಱೆಯದು ಗಗನಮುಮೆನೆ
ಷಡಂಗ ಬಲಮಿಂತು ತಳರೆ ತಳರ್ದಂ ಭರತಂ ೧೨

ಲಯದಿಂ ಮೆಲ್ಪಿಂ ಬೆಡಂಗಂ ಪಡೆವ ತುರಗದಿಂ ಚಿತ್ರಿತಚ್ಛತ್ರಿಕಾ ಲೀ
ಲೆಯಿನುದ್ದಂ ಬರ್ಪ ಚೇಟೀನಿವಹದ ಬರವಿಂ ಭೂಷಣಾಡಂಬರೋದ್ದ್ಯೋ
ತಿಯಿನೊಪ್ಪಿರ್ದುದ್ವಿಳಾಸಂ ವಿಳಸಿತ ಕಮಳಾವಾಸಮೀ ಬರ್ಪುದಂ ರಾ
ಣಿಯವಾಸಂ ನೋಡಿಮೆಂಬಂತೆಸೆದುದು ಪಲವುಂ ತಂಡದಿಂ ಪೆಂಡವಾಸಂ ೧೩

ಚತುರಂಗಬಲ ಸಮನ್ವಿತ
ರತರ್ಕ್ಯ ವಿಕ್ರಮರನೇಕ ಕರಿ ತುರಗಮಣಿ
ಪ್ರತತಿಗಳಂ ಮುಂದಿಟ್ಟವ
ನತರಾದರ್ ಚಕ್ರಿಗಳ್ಗೆ ದಂಡೋಪನತರ್ ೧೪

ಮತ್ತಂ ಅತಿಪ್ರಚಂಡ ಮಂಡಳಿಕರ್ ಭರತೇಶ್ವರ ಚಕ್ರವರ್ತಿಯ ಬರವಂ ಕೇಳ್ದು

ಕರಿಸಂಘಾತಮುಮಂ ಹಯವ್ರಜಮುಮಂ ಪಿಂತಿಕ್ಕಿ ತೂರ್ಯಸ್ವನೋ
ತ್ಕರಮಂ ಮಾಣಿಸಿ ಹೇತಿ ಮುಕ್ತಭಟ ದೋರ್ದಂಡಾಗ್ರ ಶುಂಭದ್ಧ್ವಜೋ

ತ್ಕರ ಸಂದೋಹಮುಮಂ ಬಿಸುಟ್ಟುಡುಗಿ ಪಿಂಛಚ್ಛತ್ರಮಂ ಪ್ರಶ್ರಯಾ
ಕರ ವೇಷೋಚಿತರರ್ಘ್ಯ ಹಸ್ತರಿದಿರಂ ಬಂದರ್ ಭಯಭ್ರಾಂತಿಯಿಂ ೧೫

ಅಂತು ತನ್ನ ಬಲಂಬೆರಸೆಲ್ಲಿಯುಂ ನಿಲ್ಲದೆ ಬಂದು ಲವಣಸಮುದ್ರದೊಳಗನೆ ಪೋಲ್ತಿರ್ದುಪಸಮುದ್ರದ ತಡಿವಿಡಿದು ಆದಂ ನೋಡುತ್ತಂತೆ ಬಂದು ಗಂಗಾದ್ವಾರ ವಜ್ರವೇದಿಕೋತ್ತುಂಗ ತೋರಣ ದ್ವಾರದಂತರ್ವಣ ತುಂಗ ಕುಜಂಗಳ ನೆಟಿಲ್ಗಳೊಳ್ ನಾಲ್ವತ್ತೆಣ್ಗಾವುದ ನೀಳದ ಮೂವತ್ತಾಱು ಗಾವುದದಗಲದ ಬೀಡಂ ಬಿಡಿಸಿ, ದರ್ಭಶಯನ ತಳಗತನಾಗಿ ನಾನಾ ವಿಧ ಮಂತ್ರಾನುಷ್ಠಾನಪ್ರಧಾನನುಪವಾಸದಿಂ ತ್ರಿರಾತ್ರಮನಿರ್ದು ಪಂಚಪರಮೇಷ್ಠಿಗಳ್ಗೆ ಪೂಜೆಯಂ ಪುರೋಹಿತಂ ಮಾಡಿ ಶಾಂತಿಕ ಪೌಷ್ಟಿಕಕ್ರಿಯೆಯಂ ನಿರ್ವರ್ತಿಸಿ ಮಱುದಿವಸಂ ನೇಸಱ್ ಮೂಡೆ ಪಡೆವಳ್ಳನಂ ಪಡೆಗೆ ಕಾಪುವೇಟ್ಟು ದಿವ್ಯಾಸ್ತ್ರಂಗಳಿಂ ತೀವಿ ಗಿಳಿಯ ಬಣ್ಣದ ಕುದುರೆಗಳೊಳ್ ಪೂಡಿದಜಿತಂಜಯಮೆಂಬ ರಥಮನೇಱಿ ಸಾರಥಿಯಂ ಚೋದಿಸಲ್ವೇಟ್ಟು ಗಂಗಾದ್ವಾರದೊಳಗನೆ ಲವಣಜಳಧಿಯಂ ಪೊಕ್ಕಾಗಳ್

ಕುದುರೆಯ ಖುರಂಗಳಿನಿಸಾ
ಟದೆಯುಂ ಚಕ್ರಂಗಳಟ್ಟು ಬಾರದೆಯುಂ ಚ
ಕ್ರದ ಚೀತ್ಕಾರರವಂ ಕುಂ
ದದೆಯುಂ ರಥಮಿಂತು ಪರಿದುದಂಭೋನಿಧಿಯೊಳ್ ೧೬

ಅಂತು ರಥಂ ಪನ್ನೆರಡು ಯೋಜನಂಬರಂ ಪೋದಾಗಳ್ ಬಿಣ್ಪುಂಡಿಕ್ಕಿದ ಬಹಿತ್ರದಂತೆ ಅಲ್ಲಿಂ ತಳರದೆ ನಿಂದ ರಥಮಂ ಕಂಡು ಮುಳಿದು ವಜ್ರಕಾಂಡಮೆಂಬ ವಿಜಯ ಕಾರ್ಮುಕಕ್ಕೆ ನಿಜಭುಜಾದಂಡಮಂ ನೀಡಿ ನೀಡಿಲ್ಲದೇಱಿಸಿ ನೀವಿಯುಂ ಜೇವೊಡೆದಮೋಘ ಬಾಣಮಂ ಬಾಣಧಿಯಿನುರ್ಚಿಕೊಂಡು

ಪುರು ಪರಮೇಶ್ವರ ಪುತ್ರಂ
ಭರತೇಶ್ವರ ಚಕ್ರವರ್ತಿ ಬಂದಿರ್ದಂ ತ
ದ್ಧರಣಿ ನಿವಾಸಿಗಳುಂ ವ್ಯಂ
ತರಾಮರರ್ ಬಂದು ಕಾಣ್ಬುದವನತ ಮಕುಟರ್ ೧೭

ಎಂಬಕ್ಕರದಿಂದೆಸೆದುದ
ನಂಬರ ತಳಮೊಡರೆ ಬೆಳಗೆ ಬೆಳಪುದನಾ ಶೌ
ರ್ಯಾಂಬುಧಿ ತೊಟ್ಟಿಸಲೊಡಮಿರ
ದಂಬರದಿಂದುಳ್ಕುವುಳ್ಕಮಂ ಪೋಲ್ತು ಶರಂ ೧೮

ಕಾಳಾಂತ ಪವನಹತಿ ಕ
ಲ್ಲೋಳಾವಿಳ ಜಳಧಿ ನಿನದಮೋ ನಿರ್ಘಾತಾ
ಭೀಳತರ ರಭಸಮೋ ಲಯ
ಕಾಳಾಂಬರ ಘೋಷಮೋ ನೆಲಂ ಮೊಱಗಿದುದೋ ೧೯

ಎನೆ ಪುರಜನಮಂತಃಪುರ
ಜನಮುಂ ಪರಿಜನಮುಮಳ್ಕೆ ತದ್ರಾಜ ನಿಕೇ
ತನದಲ್ಲಿ ಬಿಟ್ಟು ಪಡೆದುದು
ಮನಕ್ಕೆ ಕಡುಮುಳಿಸಿನೆಸಕಮಂ ಮಾಗಧನಾ ೨೦

ಶರ ಚಾಪ ಚಕ್ರಭೀಕರ
ಕರವಾಳಾಯುಧ ವಿರಾಜಿ ಮತ್ಕರ ಯುಗಮಿಂ
ದೊರೆಗಿಡೆ ಪೆಱಂಗೆ ಮುಗಿವುದೆ
ಕಿರೀಟಮಿದು ಪೆಂಪುಗಿಡೆ ಪೆಱಂಗೆಱಗುವುದೇ ೨೧

ಶರಮನಿದಂ ಕಡಿಕಡಿದುಡಿ
ದೆರಡೆರಡಪ್ಪಂತು ತಱಿದು ರಿಪುಬಲಗಹನಾಂ
ತರಮಂ ಸುಡಲೊಗೆವುದು ದು
ರ್ಧರ ಕೋಪಾಗ್ನಿಯನೆ ಮುನ್ನಮಾಂ ಪೊತ್ತಿಸೆನೇ ೨೨

ಎಂದು ನುಡಿವನಿತುಮಂ ನುಡಿದು ಮಾಣ್ದ ಮಾಗಧಾಮರನಂ ದೃಷ್ಟಪರಂಪರರಪ್ಪ ಕುಲವೃದ್ಧರೆಯ್ದೆ ವಂದು ಬಲಸ್ಥನೊಳ್ ಬಲಮನೆ ಪೂಣ್ಬುದುಂ ಪರಿಭವಕ್ಕೆ ಮೊದಲ್

ಸಾಮಾನ್ಯಮಲ್ತು ಶರಮಿದು
ಸಾಮಾನ್ಯ ಮನುಷ್ಯನಲ್ಲನಿದನೆಚ್ಚಾತಂ
ನಾಮಾಕ್ಷರ ಮಾಳಿಕೆಗಳ್
ತಾಮಱಿಪವೆ ಚಕ್ರವರ್ತಿಯೆಂಬುದನಾತಂ ೨೩

ಪುರು ಪರಮೇಶ್ವರಪುತ್ರಂ
ಚರಮಾಂಗಂ ಚಕ್ರವರ್ತಿಯೆಂದೊಡೆ ಪೇೞಲ್
ದೊರೆ ಪೆಱರಾರ್ ಭರತನೊಳೆನೆ
ಕರಗಿದುದಾ ಗರ್ವಪರ್ವತಂ ಮಾಗಧನಾ ೨೪

ಅಂತು ನಿಜ ಶೌರ್ಯಮದಜ್ವರಂ ಮಂತ್ರಿವರ್ಗವೈದ್ಯವನೌಷಧಿಗಳಿಂ ಪತ್ತುವಿಡೆ

ಮುನ್ನಂ ಪೂಜಿಸಿ ಶರಮಂ
ರನ್ನದ ಪಡಲಗೆಯೊಳಿಟ್ಟು ನಿಜ ಪರಿವಾರಂ
ತನ್ನುಳ್ಳನಿತುಂ ಬೆರಸು ಭ
ಯಂ ನಡುಕಮನೀಯೆ ಬಂದು ಕಂಡಂ ದಿವಿಜಂ ೨೫

ಚಕ್ರಂ ಪುಟ್ಟಲೊಡಂ ಪರ
ಚಕ್ರಭಯಂಕರ ಬರಲ್ಕೆವೇೞ್ಪುದನಱಿದೆಂ
ವಿಕ್ರಮಮನುಟಿದೆನೆನತೊಂ
ದಕ್ರಮಮಂ ಸೈರಿಸೊಂದು ಸೂಟ್ ಚಕ್ರಧರಾ ೨೬

ಎಂದು ಮಗಧಾಮರಂ ತನ್ನ ಸದ್ಭಾವ ಸರ್ವಸ್ವದೊಡನೆ ಸರ್ವಸ್ವಮೆಲ್ಲಮುಮಂ ಮುಂದಿಟ್ಟಾಗಳ್

ಮಣಿ ಸಂಘಾತಂಗಳಂ ಮಾಗಧನತಿ ಭಯದಿಂದಿತ್ತುವಂ ಚಕ್ರಿಚೂಡಾ
ಮಣಿ ಕೈಕೊಂಡಾಜ್ಞೆಯಂ ದಾಂಟದೆ ನಡೆವುದು ನೀನೆಂದಣಂ ಮಾಣದೇಕ
ಕ್ಷಣದಿಂದಂ ತನ್ನ ಲೀಲಾ ರಥದೊಳೆ ಲವಣಾಂಭೋಧಿಯಂ ದಾಂಟಿ ನಾನಾ
ಗುಣರತ್ನಾಂಭೋಧಿ ಬಂದಂ ಸುಕವಿ ಮನೋ ಮಾನಸೋತ್ತಂಸಹಂಸಂ ೨೭

ಅಂತು ಭರತೇಶ್ವರ ಚಕ್ರವರ್ತಿ ದಕ್ಷಿಣಾಂಬುರಾಶಿಯನೆಯ್ದಿ ವೈಜಯಂತೀ ದ್ವಾರದೊಳ್ ಬೀಡಂ ಬಿಟ್ಟು ಲವಣ ಸಮುದ್ರದುಪಸಮುದ್ರದ ನಡುವೆ ನಡೆದು ಬಂದು ಸಿಂಧುದ್ವಾರದೊಳ್ ಅವಾಸಿತ ವಿಜಯಕಟಕನಾಗಿ ಪೂರ್ವಸ್ಥಿತಿಯೊಳೆ ಜಳಧಿಯ ನೀರಂ ದಾಂಟಿ [ವ್ಯಂತರದೇವಾಧಿಪತಿ] ಪ್ರಭಾಸಾಮರಂ ನಿಜ ವಿಜಯ ಯಶಃಪ್ರಭಾ ಸಮೂಹದಿಂದಂ ಪುದಿದು ಸಿಂಧು ನದೀ ತೀರಂಬಿಡಿದು ಬರ್ಪಲ್ಲಿ

ಎಳವಿಸಿಲೀಗಳೀಗಳೆ ಮುದಿರ್ದುದು ಚೂತ ಕುಜಾತಮೀಗಳೀ
ಗಳೆ ನನೆದೋಱಿತಿಂದೊಳದಿನುನ್ಮದ ಷಟ್ಪದವೃಂದಮೀಗಳೀ
ಗಳೆ ಮೊರೆದತ್ತು ಚಂದನದ ತಳ್ಕಬಳಾ ನಿಕರಕ್ಕದೀಗಳೀ
ಗಳೆ ನೆಗೞ್ದಿತ್ತಲೇ ಪುಗಿಲದಾಗಲೆ ವೇಡ ವಸಂತರಾಜನಾ ೨೮

ಅಂತು ದಿಗ್ವಿಜಯ ಯಾತ್ರೆಯು ವಸಂತೋದ್ಯಾನಯಾತ್ರೆಯುನನುಕರಿಸೆ ವಿಜಯೋದ್ಯೋಗದಿಂ ವಿಜಯಾರ್ಧಾಚಳೋಪಾಂತಮನೆಯ್ದಿ ವನದೇವತೆಯ ತೋರಣ ದ್ವಾರದಿಂದಂ ನುಗುಳ್ದು ವಿಜಯಾರ್ಧ ಮಧ್ಯಮ ಕೂಟಾಸನ್ನ ಪ್ರದೇಶ ನಿವೇಶಿತ ಶಿಬಿರನಾಗಿ ನಿಯಮದೊಳಿರ್ದ ಭರತೇಶ್ವರ ಚಕ್ರವರ್ತಿಯಿರವನಱಿದು ವಿಜಯಾರ್ಧಕುಮಾರಂ ಬಂದು ಎಱಗಿ ಮುಂದೆ ನಿಲ್ವುದುಂ ನೃಪೇಂದ್ರಂ ಸಾರೆ ಕರೆದು ಭದ್ರಾಸನಮನಿಕ್ಕವೇೞ್ ಕುಳ್ಳಿರ್ದ

ಇದು ವಿಜಯಾರ್ಧಮೆನ್ನ ಪೆಸರುಂ ವಿಜಯಾರ್ಧಮಲಂಘ್ಯಮೆಂದುಮಿಂ
ತಿದು ಪೆಱರ್ಗಾನುಮಿನ್ನೆಗಮಲಂಘ್ಯನೆನಿಂ ನಿನಗಾಳೆನಾಳ ಲೆ
ಕ್ಕದೊಳಿದು ಚಕ್ರವರ್ತಿಗಳ ದಿಗ್ವಿಯಾರ್ಧದೊಳೊಂದಿ ನಿಂದುದ
ಪ್ಪುದದಱೊಳೆ ಸಂದುದೀ ಗಿರಿಯುಮೀ ಜಗದೊಳ್ ವಿಜಯಾರ್ಧನಾಮದಿಂ ೨೯

ಇದಱೊಳ್ ಮಧ್ಯಮ ಕೂಟದೊಳ್ ವಸಿಯಿಪೆಂ ನಿನ್ನಾಜ್ಞೆ ಪೂಮಾಲೆಯಂ
ದದೆ ನಿಂದಿರ್ಪುದು ಮತ್ಕಿರೀಟ ತಟದೊಳ್ ಚಕ್ರೇಶರಾರ್ ಬಂದೊಡಂ
ಮೊದಲೊಳ್ ಮಾಳ್ಪ ನಿಯೋಗಮಿಂತಿದೆನಗೆಂದಾನಂದದಿಂ ತಾನೆ ಮಾ
ಡಿದನಾ ಚಕ್ರಿಗೆ ನಾಡೆಯುಂ ವಿಭವದಿಂ ಪುಣ್ಯೋದಕಸ್ನಾನಮಂ ೩೦

ಅಂತು ವಿಜಯಾಭಿಷೇಕಂಗೆಯ್ದು ಸಾರವಸ್ತುಗಳನೋಲಗಿಸಿ ವಿಜಯಾರ್ಧಕುಮಾರಂ ಆಜ್ಞಾವಿಧೇಯನಾಗಿ ಪೋದಂ. ಭರತೇಶ್ವರ ಚಕ್ರವರ್ತಿಯುಮಲ್ಲಿ ಚಕ್ರರತ್ನಮುಂ ಪೂಜಿಸಿ ತನ್ನ ಮುನ್ನೆ ಬಂದ ವನವೀಧಿಯೊಳಗನೆ ಮಗುಳ್ದು ಪೋಗಿ ವೇದಿಕಾ ದ್ವಾರದಿಂ ಪೊರಮಟ್ಟು ಬೀಡಂ ಬಿಟ್ಟಿರ್ಪನ್ನೆಗಂ ಗಂಗಾ ಸಿಂಧುಗಳೆರಡಱೆಡೆಯ ಕುರುರಾಜಾದಿ ಮೂರ್ಧಾಭಿಷಿಕ್ತ ಪಾರ್ಥಿವರ್ ಮುನ್ನ ವೃಷಭನಾಥನ ನಡೆಪಿದುದುಮಂ ತಮ್ಮ ನಣ್ಪುಮಂ ಬಗೆದು ಸನ್ನದ್ಧ ಬಲಪರಿವೃತರಾಗಿ ಭರತೇಶ್ವರ ಚಕ್ರವರ್ತಿಯನಾಸ್ಥಾನದೊಳ್ ಬಂದು ಕಂಡು ದೇವರ್ ನಡೆವನಿತುಮಾವುದು ಗಹನಂ ಎಮ್ಮನೆ ಬೆಸಸಾ ಎಂಬನ್ನೆಗಂ ಚಕ್ರವರ್ತಿಯ ಮನ್ನಣೆಯೊಳ್ ಸಂತಸಂಬಟ್ಟು ಪೋಗಲೊಡಂ, ಸೇನಾನಾಯಕನ ಮೊಗಮಂ ನೋಡಿ, ಕೃತಮಾಳಾಮರೋದ್ದಿಷ್ಟ ಉಪಾಯಮನೆಲ್ಲಮಂ ಪೇಳ್ದು,

ತೆಱೆವ ತೆಱನಿಂತುಟಿಂತೀ
ತೆಱದಿಂದೆ ತಮಿಸ್ರಗುಹೆಯ ವಜ್ರದ ಪಡಿಯಂ
ತೆಱೆದದಱ ಬೆಂಕೆ ಪೋಪಿನ
ಮೆಱಗಿಸು ನೀಂ ಮ್ಲೇಚ್ಛಖಂಡಮಂ ಪಡುವಣದಂ ೩೧

ಎನೆ ರಥಿನೀಪತಿಚಕ್ರೇಶನ ಬೆಸನಂ ಪೂಣ್ದು ತಾನೊರ್ಬನೆಯ್ದೆವಂದು ತುರಗರತ್ನಮನೇಱಿ ಚಕ್ರವರ್ತಿ ಗೆಲ್ಗೆಂದು ವಜ್ರಪುಟಂಗಳಂ ಭರದಿಂದಂ ದಂಡದೊಳ್ ತಾಟಿಸಿದೊಡೆ ಅಭೇದ್ಯ ವಜ್ರಕವಾಟಪುಟಂಗಳಾ ಪರ್ವತದೆರ್ದೆದೆಱೆವಂತೆ ತೆಱೆಯೆ ಭೋಂಕೆನಲುರ್ವ ಬೆಂಕೆಯುಂ ಸೋಂಕಲೀಯದೆ ತುರಂಗರತ್ನಮುಂ ಮ್ಲೇಚ್ಛಖಂಡದೊಳಗಣ ಭೂಮಿಭಾಗಮುಂ ಪುಗಿಸಿದಾಗಳ್ ಸೇನಾನಾಯಕಂ ಮ್ಲೇಚ್ಛಖಂಡಮಂ ತ್ರಿಪ್ರದಕ್ಷಿಣಂಗೆಯ್ದು ಬಾಯ್ಕೇಳಿಸಿ ಗುಹಾದ್ವಾರಮಂ ಪತಾಕಿನೀಪತಿ ಪಡೆಗೆ ನಡೆಯಲಿಂಬಪ್ಪಂತು ಶೋಧಿಸಿ ಕಾಪಂ ಪೇಳ್ದು ಶಿಬಿರಮಂ ಪೊಕ್ಕು ಚಕ್ರವಲ್ಲಭನಾಸ್ಥಾನ ಮಂಟಪದೊಳ್ ಮ್ಲೇಚ್ಛರಾಜರಂ ಲಲಾಟಸ್ಪೃಷ್ಟ ಭೂತಳರಂ ಮಾಡಿ ಕಾಣಿಸಿ ಅವರ ದೇಶ ನಾಮ ಕುಲ ಗೋತ್ರಂಗಳಂ ತಿಳಿಯೆ ಬಿನ್ನಪಂಗೆಯ್ದು ಭೃತ್ಯಭಾವಮಂ ಪೂಣಿಸಿ ಸನ್ಮಾನ ದಾನಂಗಳೊಳ್ ಸಂತಸಂಬಡಿಸಿ ತಂತಮ್ಮ ನೆಲೆಗಳ್ಗೆ ಪೋಗಲ್ವೇಟ್ದಂ[೦].

ಆನಂತರಂ ರಾಜರಾಜಂ ಜಯಗಜಮನೇಱಿ ಪೊಱಮಟ್ಟು ನಡೆಯೆ ಸೈನ್ಯಾಧಿನಾಥನಧಿನಾಥನ ಕೆಲದೊಳ್ ಪಕ್ಷಗಜಾಧಿರೂಢನಾಗಿ ಅನೇಕ ದೇಶಾಧೀಶ ಬಲಂಗಳಂ ಬೇಱೆವೇಱೆ ತೋಱುತ್ತುಂ ನಡೆದು ಪಶ್ಚಿಮಖಂಡಮುಮಂ ಧ್ವಜಿನೀಪತಿಯನಟ್ಟಿ ಬಾಯ್ಕೇಳಿಸಿ ಚಕ್ರರತ್ನಮಂ ಮುಂದಿಟ್ಟು ಮಧ್ಯಮಖಂಡಮುಮಂ ಔಂಕಿ ಬಳಾಕಾವರ್ತರೆಂಬಿರ್ವರುಂ ಮ್ಲೇಚ್ಛರಾಜರ್ ತಮ್ಮ ಬಲಮನೊಂದುಮಾಡಿ ಕೂಡಿಕೊಂಡು [ಬರೆ] ಬಳಕಾವರ್ತರಂ ವಿಧೇಯರ್ ಮಾಡಿ ಸಿಂಧುನದೀತೀರಂಬಿಡಿದು ಪೋಗಿ ಹಿಮವತ್ಪರ್ವತದ ಸಿಂಧುಪ್ರಪಾತಮನೆಯ್ದಿ ಸಿಂಧುದೇವಿಯಿಂದಂ ಸಿಂಧುಜಳಂಗಳೊಳಭಿಷಿಕ್ತನಾಗಿ ಭದ್ರಾಸನಮಂ ಪಡೆದು ಕತಿಪಯ ಪ್ರಯಾಣಂಗಳಿಂ ಹಿಮವನ್ಮಧ್ಯ ಕೂಟಾಭಿಮುಖ ಪ್ರದೇಶದೊಳ್ ಬೀಡಂ ಬಿಟ್ಟು ನಿಯಮಸ್ಥನಾಗಿ ಹಿಮವತ್ಕುಮಾರನುಮಂ ವಿಜಯಾರ್ಧಕುಮಾರನಂದದೊಳೆ ಸಾಧಿಸುವುದುಂ ಆತನಂದೋಲಗಿಸಿದ ಸಾರವಸ್ತುಗಳಂ ಕೈಕೊಂಡು ಸಿಂಧುನದೀತೀರಂಬಿಡಿದು ಪೋಗಿ ಹಿಮವತ್ಪರ್ವತಮಂ ನೋಡಿ ತದ್ಗಿರೀಂದ್ರಮಧ್ಯಮಕೂಟದಿಂದಂ ಸಯ್ತು ತೆಂಕ ಮೊಗದೆ ಬಂದು ವೃಷಭಾಚಳಮಂ [ಕಂಡು] ವೃಷಭಾದ್ರಿಯ ಮೇಖಳಾಭಿತ್ತಿಯೊಳ್ ಆತ್ಮೀಯವಿಜಯ ಪ್ರಶಸ್ತಿಯನಟ್ಟಿಯೊಳ್ ಬರೆಯಿಸುವೆನೆಂದು ಪೋಗಿ ನೋಡುವನ್ನೆಗಂ

ಅದಱೊಳನೇಕ ಕಲ್ಪ ಶತಕೋಟಿಗಳೊಳ್ ಸಲೆ ಸಂದ ಚಕ್ರಿವೃಂ
ದದ ಚಲದಾಯದಾಯತಿಯ ಬೀರದ ಚಾಗದ ಮಾತುಗಳ್ ಪೊದ
ಱೊಡ್ಡದವಿರೆ ತತ್ಪ್ರಶಸ್ತಿಗಳೊಳಂತವನೊಯ್ಯನೆ ನೋಡಿ ನೋಡಿ ಸೋ
ರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರ ಚಕ್ರವರ್ತಿಯಾ ೩೨

ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿಪಾಳ ಪ್ರಶಸ್ತಿಯೊಳೊಂದಂ ದಂಡರತ್ನದಿಂ ಸೀಂಟಿ ಕಳೆದು ನಿಜಪ್ರಶಸ್ತಿಗೆಡೆಮಾಡಿ

ಸ್ವಸ್ತಿ ಸಮಸ್ತನರೇಶ್ವರ
ಮಸ್ತಕವಿನ್ಯಸ್ತ ಶಾಸನಂ ಸಕಲ ಜಗ
ದ್ವಿಸ್ತಾರಿತ ಯಶನನ್ವಯ
ವಿಸ್ತಾರಕನಾದಿ ದೇವನಗ್ರತನೂಜಂ ೩೩

ಭುವನ ವಿಶೇಷಕನಿಕ್ಷ್ವಾ
ಕು ವಂಶ ಗಗನೇಂದು ಚಕ್ರರತ್ನಾಧೀಶಂ
ನವನಿಧಿ ವಲ್ಲಭನಾನತ
ದಿವಿಜಗಣಂ ನೆಗಟ್ದ ನಾಭಿರಾಜನ ಮೊಮ್ಮಂ ೩೪

ವೇಳಾವನಂಗಳುಂ ಕು
ತ್ಕೀಳಂಗಳುಮಾವ ನೃಪನ ಪಡೆ ನಡೆವೆಡೆ ನಿ

ಮೂರ್ಳಂಗಳಾದುವಾವನ
ತೋಳಿಂ ನಿಮಿರ್ದತ್ತು ಜಳಧಿವರಮವನಿತಳಂ ೩೫

ಆತಂ ಭರತೇಶ್ವರನಿಂ
ತೀ ತೆಱದಿಂ ನೆಗೞ್ದ ತನ್ನ ಕೀರ್ತಿಯನೀ ವಿ
ಖ್ಯಾತ ವೃಷಭಾದ್ರಿಯೊಳ್ ಸುರ
ಗೀತಯಶಂ ನಿಱಿಸಿದಂ ನೆಲಂ ನಿಲ್ವಿನೆಗಂ ೩೬

ಅಂತಾತ್ಮೀಯ ವಿಜಯ ಪ್ರಶಸ್ತಿಯನಾ ವೃಷಭಗಿರಿಯೊಳ್ ಬರೆಯಿಸಿ ಗಂಗಾತಟಂಬಿಡಿದು ದಕ್ಷಿಣಾಭಿಮುಖನಾಗಿ ನಿತ್ಯ ಪ್ರಯಾಣಂಗಳಂ ಬಂದು ವಿಜಯಾರ್ಧಾಚಳ ಕಾಂಡಕಪ್ರಪಾತ ಗುಹಾ ಸಮೀಪದೊಳ್ ಬೀಡಂ ಬಿಟ್ಟು ಮುನ್ನಿನ ಮಾಟ್ಕೆಯೊಳೆ ವರೂಥಿನೀಪತಿಯುಂ ಬೆಸಸಿದೊಡೆ ಆತಂ ಆ ಗುಹಾದ್ವಾರಮಂ ಪೂರ್ವೋಕ್ತಕ್ರಮದೊಳೆ ತೆಱೆದಱ ಬೆಂಕೆಯಾಱುವನ್ನೆಗಂ ವಿದ್ಯಾಧರರಾಜಾಧಿರಾಜರ್ ನಮಿವಿನಮಿಗಳಂ ಮುಂದಿಟ್ಟು ಬಂದು

ಭರತೇಶ್ವರಪದ ನಖಮಣಿ
ಮರೀಚಿಗಳ್ ತಮ್ಮ ಮಕುಟಮಣಿದೀಧಿತಿಯೊಳ್
ಬೆರಸಿರೆ ತದಾಜ್ಞೆಯಂ ನಿಜ
ಕಿರೀಟದಿಂ ತಾಳ್ದಿದಂದದಿಂ ಸೊಗಯಿಸಿದರ್ ೩೭

ನಮಿವಿನಮಿಗಳಾ ಕ
ಚ್ಛ ಮಹಾಕಚ್ಛರ್ಕಳಿಂದಮೊದವಿದ ನಣ್ಪಂ
ತಮರ್ದಿರೆ ತಮ್ಮೊಡವುಟ್ಟಿದ
ಕಮಳಾನನೆಯಂ ಸುಭದ್ರೆಯಂ ತಂದಿತ್ತರ್ ೩೮

ಅಂತು ಆ ಕನ್ಯಾರತ್ನಮಂ ಆ ಪುರುಷರತ್ನಾಕರನೊಳ್ ನೆರಪಿ ತಮ್ಮ ಮನೆಯೊಳುಳ್ಳನರ್ಘ್ಯರತ್ನಂಗಳೆಲ್ಲಮುಮಂ ಬಱಿವಱಿಗೊಟ್ಟು ಪೋದರ್. ಆನಂತರಂ ಭರತೇಶ್ವರಂ ಗುಹಾದ್ವಾರದಿಂ ಪೊಱಮಟ್ಟು ಪೂರ್ವ ದಿಗ್ಭಾಗಸ್ಥಿತಮಂ ಮ್ಲೇಚ್ಛಖಂಡಮನಪ್ರತಿಹತ ಶಾಸನಾಂಕಿತಂ ಮಾಡಿ ಸಿದ್ಧದಿಗ್ವಿಜಯನಾಗಿ ಗಂಗಾಟತಂಬಿಡಿದು ಪಯಣಂ ಬಂದು ಕೈಳಾಸಾಚಳ ನಿಕಟದೊಳ್ ಕಟಕಮಂ ನಿಱಿಸಿ ಪರಿಮಿತ ಪರಿಜನಂಬೆರಸು ತದ್ಗಿರೀಂದ್ರಮನೆಯ್ದೆವಂದು ವೃಷಭನಾಸ್ಥಾನ ಮಂಟಪಮಂ ನೋಡುತ್ತುಂ ಬಂದು ಜಗತ್ತ್ರಯತಿಳಕನ ಪಾದಪದ್ಮಂಗಳ್ಗೆ ಭರತೇಶ್ವರ ಚಕ್ರವರ್ತಿ ಮಹೀತಳನಿಹಿತ ಮಣಿಕಿರೀಟನಾಗಿ

ಸಮಸ್ತ ಸುರಕೋಟಿ ಹೇಮಕೋಟಿಯಿಂ ತೀವಿ ತಂ
ದಮೇಯ ಭುಜಕೋಟಿಯಿಂ ಮಿಸಿಸೆ ದುಗ್ಧ ಸಿಂಧುಪ್ಲವಂ
ಶ್ರಮಾಂಬು ಲವಮೊಂದುಮಂ ನಿನಗೆ ಪುಟ್ಟಿಸಲ್ಕಾರ್ತುದಿ
ಲ್ಲಮಾನುಷಮನಂತ ವೀರ್ಯ ಗುಣಮಾದಿ ತೀರ್ಥೇಶ್ವರಾ ೩೯

ಅತೀಂದ್ರಿಯ ಸುಖಾಮೃತಾಂಬುನಿಧಿ ನಿವಾಸಮೊಂದೊಂದನಾ
ತ್ಮ ತತ್ತ್ವವಿದ ಮುಕ್ತಿಮಾರ್ಗಮನೆ ಕೀಱಿ ಕಂಡಯ್ ಪೆಱರ್
ಚತುರ್ಗತಿಯ ಬಟ್ಟೆಯಂ ನೆಱೆಯೆ ಕಂಡರೆಂತುಂ ಕರ
ಸ್ಥಿತಾಮಳಕಮೆಂಬರಾ ಜಱುಚದೇವುದಿಂದ್ರಾರ್ಚಿತಾ ೪೦

ಜವಂಗಿಡದೆ ಮುಟ್ಟಿವರ್ಪ ಜವನಂ ಜವಂಗುಂದಿಸಲ್
ಜವಂಗೆ ಜವನಾಗಲಿಂ ಪೆಱರ್ಗೆ ತೀರ್ಗುಮೇ ತೀರದಾ
ಜವಂ ಜವಜವಾಗಿ ಮುಟ್ಟುಗಿಡುವನ್ನಮಿನ್ನಾ ಜವಂ
ಜವ ವ್ಯಸನಪುಂಜಮಂ ಕಿಡಿಪುದಾದಿ ತೀರ್ಥೇಶ್ವರಾ ೪೧

ಅನೇಕ ಭುಜ ನೇತ್ರ ಪಂಕ್ತಿ ರಸನಾಳಿಗಳ್ ದೇವ ನಿ
ನ್ನನರ್ಚಿಸುವ ನೋೞ್ಪ ಬಣ್ಣಿಸುವ ಪೊೞ್ತುದೇಕಾಗದಿಂ
ದ್ರನಂತೆನಗೆ ಸಾಲವಿನ್ನೆರಡೆ ಕೈಯೆರಡುಕಣ್ಗಳೊಂ
ದೆ ನಾಲಗೆಯುಮೆಂದೆ ಚಿಂತಿಸುವೆನಾದಿ ತೀರ್ಥೇಶ್ವರಾ ೪೨

ಫಣಿ ಪ್ರಭುಗಮೆತ್ತಮತ್ತಳಗಮಲ್ತೆ ರೂಪಸ್ತವಂ
ಗುಣಸ್ತವಮುದಾತ್ತ ವೃತ್ತ ಭವದೀಯ ವಸ್ತು ಸ್ತವಂ
ಗುಣಾಗುಣ ವಿವೇಕಮೂಕರತಿಮೂರ್ಖರೆಮ್ಮಂದಿಗರ್
ಪ್ರಣಾಮದೊಳೆ ಪುಣ್ಯಮಂ ಪಡೆವರಾದಿ ತೀರ್ಥೇಶ್ವರಾ ೪೩

ಎಂದನೇಕ ಸ್ತವನಂಗಳಿಂ ಸ್ತುತಿಸಿ

ಚತುರಂಭೋರಾಶಿ ಮಧ್ಯ ಕ್ಷಿತಿವಲಯದೊಳಂ ತನ್ನುದಗ್ರ ಪ್ರತಾಪೋ
ನ್ನತಿಯಿಂದಂ ತನ್ನ ರತ್ನ ಪ್ರತತಿಗಳೊಳಪೂರ್ವಂಗಳಂ ಕೊಂಡು ಕೊಂಡೂ
ರ್ಜಿತ ಪುಣ್ಯಂ ಪೂಜಿಸುತ್ತಂ ತಣಿಯನೆ ಭಗವತ್ಪಾದ ಪೀಠೋಪಕಂಠ
ಕ್ಷಿತಿಯಂ ಚಕ್ರಾಧಿನಾಥಂ ಸುಕವಿ ಜನ ಮನೋಮಾನಸೋತ್ತಂಸಹಂಸಂ ೪೪

ಶ್ರೀರಮಣನೆಱಗಿ ಮುಕ್ತಿ
ಶ್ರೀ ರಮಣನ ಪಾದಪೀಠದೊಳ್ ಸುರ ಸಭೆ ಕ

ಣ್ಣಾರೆ ನಡೆ ನೋಡೆ ಮದನಾ
ಕಾರಂ ತಳರ್ದಂ ಸರಸ್ವತೀ ಮಣಿಹಾರಂ ೪೫

ಅಂತು ಸಮವಸರಣ ಮಂಡಳದಿಂ ಪೊಱಮಟ್ಟು ಲೀಲಾಪ್ರಸಾದಿತ ಸಕಳದಿಙ್ಮಂಡಳಂ ಕೈಲಾಸಶೈಲಕಟಕನಿಕಟವರ್ತಿಯಾಗಿರ್ದ ನಿಜವಿಜಯ ಕಟಕಕ್ಕೆ ವಂದು

ಅಱುವತ್ತು ಸಾಸಿರಂಗಳ್
ನೆರೆದುವು ಬರಿಸಂಗಳೆಂದು ದಿಗ್ವಿಜಯದೊಳ
ಟ್ಟಿಜಿನೊಳಯೋಧ್ಯೆಗೆ ಮೊಗಸಿದ
ನಜಿಕೆಯ ಪಱಿ ಪಲವುಮೆಸೆಯೆ ಭರತಮಹೀಶಂ ೪೬

ಅಂತು ಕೆಲವು ಪಯಣಂಗಳಿಂದಂ ನಿಜಾನ್ವಯ ರಾಜಧಾನಿಯನಯೋಧ್ಯಾಪುರ ಮನೆಯ್ದಿದಾಗಳ್

ಹತವೈರಿಕ್ಷತಚಕ್ರಂ ಭಯಚಕಿತಜಗದ್ವೀರಚಕ್ರಂ ವಿನಮ್ರ
ಕ್ಷಿತಿಚಕ್ರಂ ದೀಪದೀಪ್ತಿಪ್ರತಿಹತದಿನಕೃಚ್ಚಕ್ರತೀವ್ರಾಂಶುಚಕ್ರಂ
ಜಿತದಿಕ್ಚಕ್ರಂ ಪ್ರಭಾಪ್ರಜ್ವ್ವಳಿತ ದಶದಿಶಾಚಕ್ರಮುಗ್ರಪ್ರತಾಪೋ
ರ್ಜಿತದಿಕ್ಚಕ್ರಮಿರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ ೪೭

ಅಂತು ಚಕ್ರರತ್ನಮಯೋಧ್ಯಾಪುರಮಂ ಪುಗದೆ ತಱುಂಬಿ ನಿಂದುದಂ ಕಂಡುಮದಂ ರಕ್ಷಿಸುವ ಯಕ್ಷಸಹಸ್ರಂಬೆರಸು ಗಣಬದ್ಧದೇವರೆಲ್ಲಂ ನೆರೆದು

ಪುರಗೋಪುರದೊಳಗಂ ಚ
ಕ್ರರತ್ನಮಿಂತೇಕೆ ಪುಗದೆ ಮಾಣ್ದಿರ್ದುದೊ ಮ
ಚ್ಚರಿಪದಟನಿನ್ನದಾವನೊ
ಭರತೇಶ್ವರಚಕ್ರವರ್ತಿಗಿನ್ನುಂ ಜಗದೊಳ್ ೪೮

ಆವಂಗೆ ಕಾಲಚಕ್ರಮ
ನೋವದೆ ಮಾಡಲ್ಕೆ ಚಕ್ರಮಿದು ಬಗೆದುದೊ ಶೌ
ರ್ಯಾವಿರ್ಭೂತದವಾನಳ
ನಾವನ ಚತುರಂಗಬಲಮನಿಂ ಸುಟ್ಟಪುದೋ ೪೯

ಆತಂಗೆ ಚಕ್ರಿವೇಟ್ಟುಮೆ
ಪೋ ತಳ್ತಿಱಿದಾಮೆ ಗೆಲ್ವಮೆಂದನಿಬರುಮು

ತ್ಪಾತ ಮರುದಾಭಿಘಾತೋ
ದ್ಭೂತ ಪಯೋನಿಧಿಗಳಂತೆ ಮಸಗಿದರಾಗಳ್ ೫೦

ಆ ಪ್ರಸ್ತಾವದೊಳ್ ಚಕ್ರೇಶ್ವರಂಗೆ ಚಕ್ರರತ್ನಸ್ಖಳನಂ ಪತಾಕಿನೀಪ್ರಧಾನಪ್ರಭುಗಳಱಿಯೆ ಬಿನ್ನಪಂಗೈದೊಡಸ್ಖಲಿತಗತಿಯಪ್ಪ ಚಕ್ರರತ್ನಸ್ಖಳನಕ್ಕೆ ಚಕ್ರಿ ಮನಸ್ಖಳನಮಾಗೆ ವಿಸ್ಮಯಂಬಟ್ಟು ಪುರೋಹಿತರತ್ನಮಂ ಬರಿಸಿ

ಪದಿನಾಲ್ಕುಂ ರತ್ನಕ್ಕಂ
ಮೊದಲೆನಗೀ ಚಕ್ರರತ್ನಮಿದಱಿಂ ಮೇಲಾ
ವುದು ದೈವಮೆನಗಯೋಧ್ಯೆಯ
ನಿದು ಪುಗದೆ ತಱುಂಬಿ ನಿಂದ ಕಾರಣಮೇನೋ ೫೧

ಎನಗಮರಾತಿಗಳೊಳರೆಂ
ಬಿನಿತು ಪರಾಭವಮನೀಗಳೀ ಚಕ್ರಂ ಸೂ
ಚನೆಗೈದುದಿನ್ನನಾವಂ
ತನಗಿರಲೆಡೆಮಾಡಿದಪ್ಪನಂತಕಮುಖಮಂ ೫೨

ಎಂದು ವೀರರಸೋದಾರಗಂಭೀರವಚನರಚನೆಗಳಿನನಿತನೆ ಬೆಸಸಿ ಮಾಣ್ದ ಚಕ್ರವಲ್ಲಭಂಗೆ ಪುರೋಹಿತನಭಿಮುಖನಾಗಿ

ಇದು ಪಗೆವರುಳ್ಳುದಂ ತೋ
ಱಿದಪುದು ನಿನಗರಿನೃಪರ್ಕಳಿಲ್ಲದಿಂತಿರ್ಪು
ದೆ ದುರ್ನಿರೀಕ್ಷ್ಯಮಿನಬಿಂ
ಬದಂತೆ ಪಜ್ಜಳಿಸಿ ಬಾಗಿಲೊಳ್ ಪುರವರದಾ ೫೩

ನಿನಗರಸ ಬಹಿರ್ಮಂಡಳ
ಮನೆ ಸಮಱಲ್ಕಿನಿತು ಬರಿಸಮುಂ ಪೋದುವು ಕೇ
ಳಿನಿಸಂತರ್ಮಂಡಲಶೋ
ಧನಮುಂಟೆಂದಱಿಪಿದುದುಮನಿನ್ನಱಿಪುವೆವೇ ೫೪

ಪುರುತನಯಂ ತಾನಾಮುಂ
ಪುರುತನಯರೆಮಗೆ ತಂದೆಯಿತ್ತವನಿತಳಂ
ಪೊರೆಯುಂಟೆ ತಮಗೆ ಭಾಗ್ಯಾ
ನುರೂಪದಿಂ ಬಾೞ್ವೆಮೆಱಗೆವೆಂಬತಿಮದದಿಂ ೫೫

ನಿನ್ನನುಜರನಿಬರುಂ ಮಾ
ನೋನ್ನತರಣಮೆಱಗರವರೊಳಗ್ಗಳದದಟಂ
ತನ್ನಭಿಮಾನದ ಭುಜಬಲ
ದುನ್ನತಿಯನೆ ಮೆಱೆವ ಬಾಹುಬಲಿ ಮುನ್ನೆಱಗಂ ೫೬

ಆದಿಬ್ರಹ್ಮರ ಕೊಟ್ಟೀ
ಮೇದಿನಿಗಾನೊಡೆಯನಾತನರಸಿನಿವಿರಿದಿಂ
ದಾದೊಡಮೇನೆನಗೆಂಬ ಮ
ದೋದಯದೊಳ್ ದೇವ ಬಾಹುಬಲಿ ಬಲ್ದಿರ್ದಂ ೫೭

ನಿನಗೇನಂ ಪೇಟ್ವೆನಾತಂ ಸುಭಟಸಮರಸಂಘಟ್ಟದೋರ್ಗರ್ವವಿಧ್ವಂ
ಸನಕೇಳೀದೋಹಳಂ ವಿದ್ವಿಷದಿಭರದನಸ್ತಂಭಲೀಲಾಸಮುತ್ಪಾ
ಟನಕಾಂಕ್ಷಾದುರ್ಮದಂ ದುರ್ಜಯರಿಪುನೃಪಶೌರ್ಯೋನ್ನಮನ್ಮಸ್ತಕಾವ
ರ್ಜನವಾಂಛಾದುರ್ಧರಂ ದುರ್ಲಲಿತಚರಿತಸಂಕೇತಗೋಷ್ಠೀನಿಕೇತಂ ೫೮

ಭರತೇಶ್ವರ ನಿನ್ನ ಪದಾಂ
ಬುರುಹಕ್ಕವರೆಱಗಿ ಸುಖಮನನುಭವಿಸುಗೆ ಮೇಣ್
ಪುರುಪರಮೇಶ್ವರನ ಪದಾಂ
ಬುರುಹಕ್ಕೆಱಗಿ ತಪಮನನುಭವಿಸುಗೆ ಮೇಣ್ ೫೯

ಎನೆ ಬಳೆದ ಮುನಿಸಿನೊಳ್ ಕೆ
ಚ್ಚನಾದ ಕಣ್ ದೆಸೆಗೆ ಕೆಂಪನೊದವಿಸಿದುದು ದಿ
ಗ್ವನಿತೆಯರ್ಗೆ ರಕ್ತಬಲಿಯಂ
ಮನಕ್ಕೆವರೆ ಬಳೆದ ಮುನಿಸೆ ಕುಡುವಂತಾಗಳ್ ೬೦

ವಿಕಸಿತನಾಸಾಪುಟನತಿ
ವಿಕಂಪಿತಾತಾಮ್ರದಶನವಸನಂ ಬದ್ಧ
ಭ್ರುಕುಟಿಪುಟಂ ಭರತೇಶ್ವರ
ನಕಾಲಯಮರಾಜಲೀಲೆಯಂ ಕೈಕೊಂಡಂ ೬೧

ಏನೇನೋ ಮದನುಜರೆನ
ಗಾನತರಣಮಾಗದಿರ್ದರಾ ಮದಮವರ್ಗೇ
ನೇನೇತಱೊಳಾದುದನಿನಿ
ಸಾನುಂ ಬೇಗದೊಳೆ ಕಳೆದು ತೋಱೆನೆ ರಣದೊಳ್ ೬೨

ಎನಿಬರರಸುಗಳುಮೆಱಗಿದೊ
ಡೇವಂದಪುದೊ ಬಾಹುಬಲಿ ಪೊಱಗೆನೆ ಪೇ
ಟೆನಿತುಂ ಪುರಮೇವುದೊ ಪೌ
ದನಪುರಮೆನ್ನಾಳ್ಕೆಗಿಂತು ಪೊಱಗೆನಿಪಾಗಳ್ ೬೩

ಏವನೆಮಗೆಂಬ ಶೌರ್ಯಮ
ದಾವಷ್ಟಂಭದೊಳವಂದಿರಿಂತುಱದಿರೆ ಪೇ
ೞಾವುದೊ ಬಾಯ್ಕೇಳಿಸಿಯುಮಿ
ದೇವುದೊ ಷಟ್ಖಂಡಮಂಡಿತಂ ಭೂವಳಯಂ ೬೪

ಎಂದೊಡೆ ಪುರೋಹಿತಂ ನಿನ
ತೊಂದೋಲೆಗೆ ತೀರ್ವುದೊಂದು ಮನೆವಾರ್ತೆಗಿದೇ
ನೆಂದರಸ ಬಳೆಯೆ ನುಡಿದಪೆ
ಯೆಂದಟ್ಟವೇಟ್ದಿನವರ್ಗೆ ಶಾಸನಹರರಂ ೬೫

ಆಗಳ್ ಭರತೇಶ್ವರ ಚಕ್ರವರ್ತಿಯಟ್ಟಿದ ದೂತರ್ ಪುರು ಪರಮೇಶ್ವರತನೂಜರಲ್ಲಿಗೆ ಪೋಗಿ

ಎನಗೊರ್ವಂಗುಪಭೋಗ್ಯಮಲ್ತು ವಸುಧಾ ಸಾಮ್ರಾಜ್ಯಮೋರಂತೆ ನಿ
ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ
ವಿನಯಂ ಸಲ್ವುದು ತಾಮುಮಾಮುಮೊಡನಿರ್ಪಂ ಬರ್ಪುದೆಂಬೀಶ ಶಾ
ಸನಮಂ ನೆತ್ತಿಯೊಳಾಂತು ಬನ್ನಿಮೆಱಗಿಂ ಚಕ್ರೇಶ ಪಾದಾಬ್ಜದೊಳ್ ೬೬

ಎಂದು ನುಡಿದ ನುಡಿಯುಮಂ ರಾಜಾದೇಶಮುಮನವಧಾರಿಸಿ ಬಂದ ದೂತರಂ ಮನ್ನಿಸಿ ಪೋಗಲ್ವೇಟ್ಟು

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದಮಾದೊಡೆಱಕಂ ಚಿಃ ಕಷ್ಟಮಲ್ತೇ ವಸುಂ
ಧರೆಗಯ್ಯಂ ದಯೆಗೆಯ್ಯೆ ಮುಂ ಪಡೆದುದರ್ಕಿಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೂೞುಣ್ಬಂದಮಂ ಪೋಲದೇ ೬೭

ಎಂದು ತಮ್ಮೊಳನಿಬರುಂ ಪರಿಚ್ಛೇದಿಸಿ ಪರಿತ್ಯಕ್ತ ನಿಜರಾಜ್ಯಪರಿಚ್ಛೇದರಾಗಿ ಕುಮಾರರ್ ನೂರ್ವರುಂ ಸಮವಸರಣ ಭೂಮಂಡಲಮನೊಳ [ಪೊಕ್ಕು,]

ಭವದಂಘ್ರಿಕಮಳರಜದಿಂ
ಪವಿತ್ರಮಾದೆಮ್ಮ ಮಕುಟಮೆಱಗದು ಪೆಱರ್ಗಂ
ಭವಭಯಹರ ಭರತನನೆಮ
ಗವಯವದೆಱಗಿಸುವ ತಪಮನೀಗಳೆ ದಯೆಗೈ ೧೮

ಭರತಂಗೆಱಗುವರೆಂಬಿದೆ
ಪರಿಭವಮೆಮಗಿಂತು ಮಾನಭಂಗಂ ಬರೆ ಬ
ರ್ಪರಸೇವುದೆಂದು ಪೂಣ್ದರ್
ಪರಮತಪೋಭರಮನನಿಬರುಂ ಪುರುತನಯರ್ ೧೯

ಅಂತಾ ಕುಮಾರರನಿಬರುಮಾದಿತೀರ್ಥಂಕರಸಮವಸರಣಸರೋವರ ರಾಜಹಂಸವ್ಯತಿಕರಮಂ ಭರತೇಶ್ವರಂ ಕೇಳ್ದು

ಎನಗನುಜರಾಗಿಯುಂ ಚಲ
ದಿನೆಱಗದೆ ಪೋಗಿ ಭುವನಗುರುಗೆಱಗಿದರಂ
ತನಿಬರುಮವಱಿಂದಗ್ಗಳ
ಮೆನೆ ನೆಗಟ್ದ ಬಾಹುಬಲಿಯನೆಂತೆಱಗಿಸುವೆಂ ೨೦

ಖರಕಿರಣಸ್ಫುರಿತಕ್ಕಿದಿ
ರುರಿವಂತಿರೆ ಸೂರ್ಯಕಾಂತಮೆನ್ನೀ ತೇಜ
ಸ್ಫುರಿತಕ್ಕೆ ಸೆಣಸಿನೊಳ್ ಮಾ
ಱುರಿಗುಂ ಸೈರಿಸದು ತೇಜಮಾ ಭುಜಬಲಿಯಾ ೨೧

ಅದಱಿಂದಮಾತನಂ ಸಾ
ಮದಿಂದಮಳವಡಿಸಿ ನೋಡುವೆಂ ಸಾಮದೊಳಂ
ಪದವಡದೊಡೆ ಬೞಿಕಿರ್ದ
ಪ್ಪುದಲ್ತೆ ಪದವಡಿಸಲೆನ್ನ ಬಯಕೆಯ ದಂಡಂ ೨೨

ಎಂದು ಮಂತ್ರಿವರ್ಗದೊಡನೆ ನಿರಾಕುಳಿತಕಾರ್ಯಪರ್ಯವಸಾನನಾಗಿ ಬಾಹುಬಲಿ ಕುಮಾರಂಗೆ ಲೇಖನಮನುನ್ಮಯೂಖರತ್ನಾಭರಣಪ್ರಭೂತಸಮೇತಮನಟ್ಟುವಂತು ಮಹಾಸಂಧಿವಿಗ್ರಹಿಗೆ ಬೆಸಸಿದೊಡಾತಂ ಮಹತ್ತರನ ಕೈಯೊಳ್ ಸನ್ಮಾನ ದಾನಪುರಸ್ಸರಮಾಗೆ ಕೊಟ್ಟು [ಕಟಿಪಲ್] ಆತನುಂ ಪೌದನಪುರಮನೆಯ್ದಿ ರಾಜಮಂದಿರಮನೆಯ್ದಿ ದೌವಾರಿಕ ನಿವೇದಿತಾತ್ಮೀಯ ವೃತ್ತಾಂತನಾಸ್ಥಾನಮಂಡಪಮಂ ಪೊಕ್ಕು ಲಲಾಟತಟಸಂಘಟ್ಟಿತ ಸಭಾಕುಟ್ಟಿಮನಾಗಿ, ಉಪಾಯನರತ್ನಕರಂಡಕಮಂ ಕೊಂಡು ದೇವ ಭವದೀಯಾಗ್ರಜಂ

ರಾಜಾಧಿರಾಜಂ ನಿಮಗಟ್ಟಿದ ಮಹಾಪ್ರಸಾದಂ ಬಿನ್ನಪಮೆಂದು ಮುಂದಿಟ್ಟು ಮಹತ್ತರಂ ಯೋಗ್ಯಮಹೀನಿಹಿತಾಸನದೊಳಿರ್ಪುದುಂ; ಅದಂ ಮಹಾಸಂಧಿವಿಗ್ರಹಿ ಕೊಂಡು ಅಪನೀತಮುದ್ರೆಯಂ ಮಾಡಿ ದೇವ ಲೇಖಮಿದೆಂದು ಗಂಭೀರನಾದದಿಂ ಬಾಜಿಸಿದಂ: ಸ್ವಸ್ತಿ ಸಮಸ್ತವಿಷ್ಟಪಾಧೀಶ್ವರ ಪುರುಪರಮೇಶ್ವರಚರಣಸರಸಿಜರಜೋರಂಜಿತ ಮಣಿಕಿರೀಟಮಕರಿಕಾಚಕ್ರಂ ಚಕ್ರರತ್ನಪ್ರಭಾಪ್ರಸಾದಿತ ನಿಖಿಲದಿಕ್ಚಕ್ರಂ ಭರತೇಶ್ವರ ಚಕ್ರವರ್ತಿ ನಿಜಪ್ರಿಯಾನುಜ ಬಾಹುಬಲಿಕುಮಾರನಂ ಪರಮಾಶೀರ್ವಾದದಿಂ ಪರಸಿ ಕನಕಪತ್ರಾಂಕಿತಕಾರ್ಮುಕಲತಾಲಂಬನಂಗಳುಂ ವಿಜಯೋತ್ಸವತೋರಣಸ್ತಂಭಗಳುಂ ವೀರಶ್ರೀಭುಜಂಗೀ ಸಮಾಶ್ರಯಶ್ರೀಖಂಡಕಾಂಡಂಗಳುಮಪ್ಪ ದೋರ್ದಂಡಂಗಳಿಂದಮತಿ ನಿಬಿಡಾಲಿಂಗನಂಗೆಯ್ದು ಕಾರ್ಯಮಂ ಬೆಸಸಿರ್ಕುಂ ಎನಲೊಡಂ ಭೂಪೋತ್ತಮನಿರ್ದನೆ ಸುಖದಿಂ ಉದಾತ್ತಯಶಂ [ಎಂದು ವಿಚಾರಿಸಿ]

ಎಂತಾನುಂ ನೆನದಂ ಬಹು
ಚಿಂತಂ ಚಕ್ರೇಶನೆಮ್ಮ ದಿಗ್ವಿಜಯಮುಮಾ
ದಂತೆಡಱದೆಯ್ದೆ ನಡೆದುದೆ
ಸಂತಮ್ ದಕ್ಷಿಣಭುಜಕ್ಕೆ ಭೂವಲ್ಲಭನಾ ೭೩

ಅರಸುಗಳೆಲ್ಲಂ ಬಾಯ್ಕೇ
ಳ್ದರೆಂದುಮಾಶಾಂತರಂಗಳಳ್ಕಿದುವೆಂದುಂ
ಧರಣಿ ತಳಂ ಕೀರ್ತಿಸೆ ಕೇ
ಳ್ದು ರಾಗಿಸುತ್ತಿರ್ಪೆವಿನ್ನುಮೇನ್ ತೊದಳುಂಟೇ ೭೪

ಎನೆ ದೂತಂ ನುಡಿದಂ

ನೃಸುರಾಸುರಖೇಚರರಂ
ಬೆಸಕಯ್ಸಿದನೆಡಱುವಹಿತರಂ ಚಕ್ರಮೆ ಸಾ
ಧಿಸಿದಪ್ಪುದು ನವನಿಧಿಗಳ್
ಪೊಸಯಿಸಿದಪ್ಪುವು ವಿಭೂತಿಯಂ ಪುರುಸುತನಾ ೭೫

ಎನ್ನಣುಗದಮ್ಮನಿಲ್ಲದೆ
ಬಿನ್ನನೆ ಸಾಮ್ರಾಜ್ಯಮಿನಿತುಮಾದೆಱಕಮುಮ
ತ್ಯುನ್ನತಿಯಲ್ತೆನಗಾತಂ
ಮುನ್ನೆಱಗದೊಡೆಂದು ಬೆಸಸಿಯಟ್ಟಿದನೆನ್ನಂ ೭೬

ಎಂಬುದುಂ ಬಾಹುಬಲಿಕುಮಾರಂ ಕೋಪಗರ್ಭಸ್ಮಿತಂಬೆರಸು

ಮುನ್ನಂ ಸಾಮಮನೆನ್ನ ಮ
ನಂ ನೋಡಲ್ ನುಡಿದುಭೇದಮಂ ದಂಡಮುಮಂ
ನಿನ್ನಱಿವನಿತಂ ನುಡಿದೆಯಿ
ದೇನ್ನುಡಿಗಳೊ ಸಮೞಿಕೊಂಡ ನುಡಿಗಳ್ ನಿನ್ನಾ ೭೭

ನೀನ್ನಿನ್ನ ನೃಪನ ದಿಗ್ವಿಜ
ಯೋನ್ನತಿಯಂ ಪೊಗೞ್ದು ಮೂರ್ಛೆವೋಪ್ಪೆ ಪೆಱತೇಂ
ನೀನ್ನಿನ್ನ ಮನದೊಳಿಂತಿದು
ಬನ್ನಮನೆತ್ತುವವೊಲಾಯ್ತು ನಿನ್ನವನಿಪನಾ ೭೮

ಮುಂದಿಟ್ಟು ಚಕ್ರಮಂ ತಿರಿ
ತಂದುದುಮಂ ಪಾಳಮಿರ್ದು ಬೈಕಂಗೊಳ್ವೊಂ
ದಂದದೆ ಕೊಂಡುದುಮನದೇ
ನೆಂದುನ್ನತಿ ಮಾಡಿ ಪೊಗೞ್ವೆಯೊಳಗಱಿಯದುದೇ ೭೯

ಪಸಿದುಣ್ಣಪಟ್ಟು ಬಿಟ್ದಿ
ರ್ದು ಸಮುದ್ರದ ತಡಿಯೊಳುದಕಮಂತ್ರದ ಬಲದಿಂ
ನುಸುಳ್ದೊಡೆ ಜಳನಿಧಿಯಂ ಕರು
ಣಿಸಿ ಕೊಟ್ಟರ್ ಧನಮನಂಜಿ ಕೊಟ್ಟರೆ ದಿವಿಜರ್ ೮೦

ಧರೆಯೊಳ್ ಕುಲಾಲಚಕ್ರಂ
ತಿರಿವಂತಿರೆ ತಿರಿಯೆ ಚಕ್ರಮಱಿಯೆ ಬಟೆಯಂ
ತಿರಿತಿರಿದು ಮಾಡಿದಂ ಕುಲ
ಧರಕುಲದೊಳ್ ಪಿರಿದುಮಯಶಮಂ ನಿಮ್ಮರಸಂ ೮೧

ಉತ್ತರಭರತದೊಳಾದಾ
ಪತ್ತಂ ನೀನಱಿಯೆಯಕ್ಕುಮನಿತುಂ ಬಲಮಂ
ಮುತ್ತಿ ಚಿಲಾಕಾವರ್ತರ್
ಸುತ್ತಲುಮೇಸಾಡಿ ಪಿರಿದು ತಿಣಿಕಂ ತಂದರ್ ೮೨

ಮೇಘಮುಖರೆನಿಸಿ ಸಂದುರ
ಗೌಘದಿನಂದೋಘಮೇಘಮಾದೊಡೆ ಮಱೆ ಶಾ
ರ್ಯಾಘಾತಂ ನೆಗೞೆ ಬಳ
ವ್ಯಾಘಾತಂ ನಿನ್ನ ಪತಿಗಾದುದು ಪುಸಿಯೇ ೮೩

ಬೇಡವಡೆ ಮುಸುಱಿಕೊಂಡೇ
ಸಾಡೆ ಸುರುಳ್ದಗಿದು ಕೊಡೆಯ ಚರ್ಮದ ಮಱಿಯೊಳ್
ಗೂಡುಗೊಳುತಿರ್ದ ಶೌರ್ಯ
ಕ್ರೀಡೆಯ ದಿಗ್ವಿಜಯಮೆಸೆದುದೆಮ್ಮಗ್ರಜನಾ ೮೪

ಬರೆಯಿಸದಂ ಪೂರ್ವಮಹೀ
ಶ್ವರನಾಮಮನೆಯ್ದೆ ಕಳೆದು ವೃಷಭಾಚಳದೊಳ್
ಭರತಂ ನಿಜನಾಮಮನೆನೆ
ಪರಿಹಸಿತಂ ಬುಧಜನಕ್ಕಲ್ಲದೆ ಪೆಱತೇಂ ೮೫

ಧನಮೆಂಬುದು ವಿಭುಗೆ ಯಶೋ
ಧನಮದನಿಂತಳಿಪಿ ಕಳಿಪಿ ಕಿಡೆ ಮಾಡಿರ್ದಾ
ತನ ಪಡೆದ ಧನಮದೇತಱ
ಧನಮದಱಿಂ ನಿಧನಮನೆಯ್ದಿದರ್ ಪಲರರಸರ್ ೮೬

ಪಿರಿಯಣ್ಣಂಗೆಱಗುವುದೇಂ
ಪರಿಭವಮೇ ಕೀೞಿ ನೆತ್ತಿಯೊಳ್ ಬಾಳಂ ನಿ
ರ್ನೆರಮೂೞಿ ಚಲದಿನೆಱಗಿಸ
ಲಿರೆ ಭರತಂಗೆಱಗುವೆಱಕಮಂಜುಮೆಯಲ್ತೇ ೮೭

ಭರತಂ ಷಟ್ಖಂಡಭೂವಲ್ಲಭನೆನೆ ಸಿರಿಯಂ ಗೆಂಟಱೊಳ್ ಕೇಳ್ದು ರಾಗಂ
ಬೆರೆಸಿರ್ಪೀ ನಣ್ಪೆ ಸಾಲ್ಗುಂ ಕರೆದೊಡೆ ಬೆಸನೇನೆಂಬ ಜೀಯೆಂಬ ದೇವಂ
ಬಾರಸೆಂಬಾಳೆಂಬ ದೈನ್ಯಕ್ಕೆಲವೊ ತನುವನಾನೊಡ್ಡದಂತಾದಿದೇವಂ
ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂತಮುಂಟೇ ೮೮

ಧರೆಯಂ ಕುಡುವಂದೆನಗಂ
ಗುರು ತನಗಂ ರಾಜನಾಮಮಂ ಕೊಟ್ಟೊಡೆ ನೋ
ಡಿರೆ ತನಗೀಗಳ್ ರಾಜಾ
ಧಿರಾಜನೆಂದಿಟ್ಟುಕೊಂಡನಡಕಿಲ್ವೆಸರಂ ೮೯

ದೊರೆಯಲ್ಲದಂಗೆ ನುಡಿವುದು
ಪುರುಳಿಲ್ಲದ ಮಾತನೆಮ್ಮೊಳಂ ನುಡಿವುದೆ ಪೇೞ್
ಎರಲೆಗೆ ಪಾಡುವ ಗೋರಿಯ
ನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ ೯೦

ಪುರುತನಯರ್ ಭುಜಬಲಿಯುಂ
ಭರತನುಮೆನೆ ದೊರೆಗೆವಂದೊಡಾರಳವುಮನೀ
ಧರೆಯಱಿಯಲೊಡಂ ತೂಗಲ್
ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ ೯೧

ನೆಗಟ್ದೀ ಷಟ್ಖಂಡಭೂಮಂಡಲಮನನಿತುಮಂ ಗೆಲ್ದಖಂಡಪ್ರತಾಪಂ
ನೆಗಟ್ದಿಂತಾಱುಂ ಬಲಂಗಳ್ವೆರಸೊದವಿದ ಸಂಗ್ರಾಮಸಂರಂಭದಿಂದಂ
ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯಧನವ್ರಾತದೊಳ್ ಮಾಡದಾರ್ತಾ
ಜಿಗೆ ಬಂದೊಡ್ಡಲ್ಕೆ ಪೇೞ್ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ ೯೨

ಎಂದು ಮನುನರೇಂದ್ರವೃಂದಾರಕಶಿಖಂಡಮಂಡನಮಣಿಯೆಂಯೆನಿಸಿದ ಬಾಹುಬಲಿಕುಮಾರಂ ಭರತೇಶ್ವರ ಚಕ್ರವರ್ತಿಯ ದೂತನಂ ಪೋಗಲ್ವೇೞ್ದಾಗಳ್ ಅನೇಕಂ ರಾಜನ್ಯಕಮಕುಟಸಂಘಟ್ಟೋಚ್ಚಳೋನ್ಮಣಿಮರೀಚಿಗಳ್ ವಿಳಯಾನಿಳ ವಿಸ್ಫುಲಿಂಗಂಗಳಂತೆ ಕೆದಱೆ ಬಾಹುಬಲಿನೃಪಾಸ್ಥಾಯಿಕೆಯೊಳ್, ದೂತಂ ಸಾಕೇತಪುರಮನೆಯ್ದೆವಂದಾಸ್ಥಾನ ಮಂಟಪದೊಳಿರ್ದ ಚಕ್ರವರ್ತಿಯಂ ಕಂಡು ಪೊಡೆಮಟ್ಟು ಬಿನ್ನಪಂಗೆಯ್ದಾಗಳ್

ತುದಿಯೆಯ್ದಿತ್ತೆಮ್ಮ ವಿಶ್ವಕ್ಷಿತಿತಳಜಯಮಿಂತೆಮ್ಮ ದಾಯಾದನುಂ ಕೋ
ಪದಿನೆನ್ನೊಳ್ ಕಾದಲೆವಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾ
ಣ್ಬುದು ಸೂಟಲ್ತೆಮ್ಮ ಸಾಪತ್ನ್ಯನ ಭುಜಬಲಮಂ ನೋೞ್ಪೆಮೆಂದಾಗಳಾಸ್ಥಾ
ನದಿನೆೞ್ದಂ ಚಕ್ರಿ ರಾಜನ್ಯಕಮಕುಟಮಣಿಪ್ರೋಜ್ಜ್ವಳದ್ವ್ಯೋಮಚಕ್ರಂ ೯೩

ಆಗಳ್ ದೂತಾಳಾಪ ವಿಳಯಸಮೀರಪ್ರೇರಿತ ಪ್ರಳಯಜಳಧಿಪ್ರಧ್ವಾನುಕಾರಿಯಪ್ಪ ಸಮರಸನ್ನಾಹಭೇರೀನಿನಾದಂ ಭುವನಾಂತರ್ಭಾಗಮಂ ಪರ್ಬಿಱೆ ಭರತಂ ವಿಜಯಪರ್ವತಗಜೇಂದ್ರದ ಬೆಂಗೆ ವಂದು ಪೌದನಪುರಾಭಿಮುಖನಾಗಿ ನಡೆವಲ್ಲಿ

ರಜಮುಂ ದಿಗ್ಧೂಮಮುಂ ಸಂದಣಿಸೆ ಪರುಷವಾತಾಹತಿಪ್ರೋಚ್ಚಳತ್ಸಾ
ಮಜಸೇನಾಕುಂಭಸಿಂಧೂರಮುಮೊದವಿದ ದಿಗ್ದಾಹಮುಂ ಕೂಡೆ ಭೂರಿ
ಧ್ವಜಿನೀಸಂಕ್ಷೋಭಮಾಕಂಪಮುಮಶುಭಮಹೀಕಂಪಮುಂ ತನ್ನೊಳೊಂದಾ
ಗೆ ಜಗಕ್ಕೇನಿಲ್ಲಿ ಪೇೞಾದಪುದೆನೆ ದೆಸೆ ಬರ್ಪಂತೆ ಬಂದೊಡ್ಡಿ ನಿಂದಂ ೯೪

ಅನ್ನೆಗಮಿತ್ತಲಾ ಬಾಹುಬಲಿಕುಮಾರಂ ವಿಜಯಗಜದ ಬೆಂಗೆ ವಂದು
ಇರದೆಂಟುಂ ದಿಗ್ಗಜಂಗಳ್ ನೆಱೆದಿದಿರೊಳ್ ತಾಗೆಯುಂ ಮಂದರಕ್ಷ್ಮಾ
ಧರದೊಳ್ ಕಯ್ಗೊಡಿ ಗೋತ್ರಾದ್ರಿಗಳೆ ಗಜಘಟಾರೂಪದಿಂ ತಾಗೆಯುಂ ಮ
ತ್ಕರಿ ತಾಂಗಲ್ ತಾನೆ ಸಾಲ್ಗುಂ ವನಗಜಘಟಾಬಂಧಮೇ ಬಂಧಮೆಂಬೊಂ
ದು ರಣೋತ್ಸಾಹಂ ಮನಕ್ಕುಬ್ಬರಿಸೆ ಸಮರೋತ್ಸಾಹಸಂಪನ್ನನಾದಂ ೯೫

ಅಂತುಭಯಬಲದ ಸೆರೆಗೋಲ್ಗಳೊಂದೊಂದಂ ಮುಟ್ಟುವಿನಮತ್ತ ರಾಜಾಧಿರಾಜನುಮಿತ್ತ ಯುವರಾಜನುಂ ನಿಂದಾಗಳ್ ಉಭಯಬಲಮಂತ್ರಿಮುಖ್ಯರ್ ಇವರಿರ್ಬರರಸುಗಳಪ್ಪೊಡೆ ಚರಮದೇಹಧಾರಿಗಳಿವರ ಯುದ್ಧಮೆಂಬುದತಿಕ್ರೂರಗ್ರಹ ಯುದ್ಧದಂತೆ ಸಕಳಪ್ರಜಾವಿನಾಶಕರಮಲ್ಲದೆ ಪೆಱತಲ್ತು ಸಮಸ್ತಜನಸಂಹರಣ ಕಾರಣಮಪ್ಪ ರಣದೊಳೇವಂದಪುದೆಂದು ಧರ್ಮಯುದ್ಧಮನೆ ಸಮಕಟ್ಟಿ ಮುನ್ನಂ ಭರತೇಶ್ವರ ಚಕ್ರವರ್ತಿಯಲ್ಲಿಗೆ ವಂದು

ಜಯಮಂ ಕೈಕೊಳ್ವುದು ದೃ
ಷ್ಟಿಯುದ್ಧ ಜಳಯುದ್ಧ ಮಲ್ಲಯುದ್ಧದೊಳೆ ಜನ
ಕ್ಷಯಕರಣದೊಳೇಂ ಪಾಪಮು
ಮಯಶಮುಮಪ್ಪನಿತೆ ದೇವ ಕಡೆಗಣಿಪುದಿದಂ ೯೬

ಎನೆ ಭರತಶ್ವರಚಕ್ರವರ್ತಿಯಂತಾದೊಡೆಮಗೆ ಬಾಹುಬಲಿಯ ಸಮರ ಸಂಘಟ್ಟದೋಹಳಮಿದು ದರಿದ್ರಗೇಹಿನೀದೋಹಳದಂತಾದುದೆಂದು ಸಿಂಧುರ ಸ್ಕಂಧಪೀಠದೊಳ್ ಸುಖಾಸೀನಾಗಿರ್ದಾಗಳ್ ಬಾಹುಬಲಿಕುಮಾರನಲ್ಲಿಗೆ ಮಂತ್ರಿಗಳ್ ಬಂದು ಪೂರ್ವೋಕ್ತಕ್ರಮದೊಳೆ ಧರ್ಮಯುದ್ಧವ್ಯತಿಕರಮಂ ಬಿನ್ನಪಂಗೆಯ್ದು

ಬಿಸುಡುವುದಸದಾಗ್ರಹಮಂ
ಪ್ರಸನ್ನಗಂಭೀರಚಿತ್ತದಿಂದಿನದನವಧಾ
ರಿಸುವುದು ಯುವರಾಜ ಮನಂ
ಬಸದೊರ್ಮೆಗೆ ಸಲಿಪುದೆಮ್ಮ ಮುದುಗಣ್ತನಮಂ ೯೭

ಎಂದು ನುಡಿದೊಡಂಬಡಿಸಿ ಧರ್ಮಯುದ್ಧಮನುಭಯಬಲಂಗಳೊಳಮಾನಂದ ಭೇರಿಯಂ ಪೊಯಿಸಿ ಘೋಷಿಸಲ್ವೇಟ್ಟು ಬಾಹುಬಲಿಕುಮಾರನ ಭರತೇಶ್ವರನ ಪಕ್ಷದ ರಾಜಲೋಕಮನೆರಡುಂ ದೆಸೆಯೊಳಂ ಮಧ್ಯಸ್ಥರಾಗಿ ಮಿಡುಕದೆ ನೋಡುತ್ತಿರ್ಪಂತು ನಿಯಮಿಸಿದಾಗಳಿರ್ಬರುಂ ನೀಲನಿಷಧಗಿರಿಗಳೊಂದೊಂದಱೊಳ್ ಬಂದು ಪೊಣರ್ದು ನಿಲ್ವಂತೆ ನಿಂದೊರ್ವರೊರ್ವರೆಮೆಯಿಕ್ಕದೆ ನೋಡುವಲ್ಲಿ

ಲಲಿತಮುಖ ಸರಸಿಜಂ ನಿ
ಶ್ಚಳಪಕ್ಷ್ಮಂ ಸ್ತಿಮಿತ ತಾರಕಂ ಭುಜಬಲಿ ಕ
ಣ್ಣೊಳೆ ತವೆ ಪೀರ್ವವೊಲೇ ನಿ
ಶ್ಚಳ ತನು ನಡೆ ನೋಡೆ ಭರತ ರಾಜಂ ಸೋಲ್ತಂ ೯೮

ಕರಿಯೂಥಪತಿಗಳೆರಡುಂ
ಸರಸೀಜಳಮಂ ವಿಳಾಸದಿಂ ಪುಗುವವೊಲಾ

ದರದಿಂದೆ ಪೊಕ್ಕು ತುಳುಕಿದ
ರರವಿಂದರಜಃಪಿಶಂಗಿತಾಚ್ಛೋದಕಮಂ ೯೯

ಭರತನ ಮುಖದೊಳ್ ಪರ್ವಿದ
ಖರಕೋಪಾನಳನನೆಯ್ದೆ ನಂದಿಸುವವೊಲಾ
ಮರಕತವರ್ಣಂ ಕರಿಕರ
ಪರಿಘದಿನೊಡನೊಡನೆ ತುಳುಕಿದಂ ತಿಳಿನೀರಂ ೧೦೦

ಭರತೇಶ್ವರಂ ಪಂಚಶತಶರಾಸನೋತ್ಸೇಧನಪ್ಪುದಱಿಂ ಪಂಚವಿಂಶತ್ಯುತ್ತರಪಂಚಶತಶರಾಸನ್ನೋತ್ಸೇಧನಪ್ಪ ಬಾಹುಬಲಿಕುಮಾರನ ಮೇಗೆ

ಭರದಿಂದಂ ತುಳುಕಿದ ನೀ
ರುರದೊಳ್ ಹಾರಾಂಶುರುಚಿಯನಿರ್ಕುಟಿಗೊಳೆ ದು
ರ್ಧರ ಜಳಯುದ್ಧಮುಮಾದಮೆ
ಪರಿಭವಮಂ ಚಕ್ರವರ್ತಿಗಿತ್ತತ್ತಾಗಳ್ ೧೦೧

ಅಂತು ಬಾಹುಬಲಿಯ ಸುರಕರಿಕರಾನುಕಾರಿಯಪ್ಪ ಬಾಹುಗಳಿಂದಂ ತುಳ್ಕಿದ ನೀರ್ಗೆ ಮೊಗಮನೊಡ್ಡಿ ಮೊಗಂ ಸೋಲ್ವುದುಂ ಕುಮಾರಂಗೆ ಘೋಷಿಸುವ ಜಯಘೋಷಣೆಯಂ ಕೇಳಲಾಱದೆ ಕನಕಾಚಳಮನೆ ಪೋಲ್ತು ಮಲ್ಲಯುದ್ಧದೊಳ್ ಬಂದು ಪೊಣರ್ದು

ಮರಕತ ಮಣಿಶೈಲಮನನು
ಕರಿಸುವ ಭುಜಬಲಿಯೊಳಿರದೆ ಪೊಣರ್ವುದುಮಾಗಳ್
ಸುರ ವಿದ್ಯಾಧರ ನರ ಬಲ
ಮೆರಡುಂ ದೆಸೆಯೊಳ್ ತೆರಳ್ದು ನೋಡಿತ್ತೆತ್ತಂ ೧೦೨

ಕನಕಾಚಳಮಂ ಪೊತ್ತುದು
ಘನ ಮರಕತಶೈಲಮೆನಿಸಿ ಭುಜಬಲಿ ಸಕಲಾ
ವನಿ ತಳ ವಲ್ಲಭನಂ ಭೋಂ
ಕನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್ ೧೦೩

ಭರತಾವನೀಶ್ವರಂ ಗುರು
ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ
ದೊರೆಯನುಮಳವಟಿಯೆ ವಸುಂ
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ ೧೦೪

ಎಂದೊಯ್ಯನಿಟಿಪೆ ನೆಲದೊಳ್
ದುಂದುಭಿರವದೊಡನೆ ವಿಜಯಘೋಷಣೆ ನೆಗೞ್ದು
ತ್ತಂದು ಭುಜಬಲಿಯ ಬಲದೊಳ್
ಕುಂದು ಕರಂ ಪಿರಿದುಮಾಯ್ತು ಭರತನ ಬಲದೊಳ್ ೧೦೫

ನೆರೆದೆರಡುಂ ಬಲದರಸುಗ
ಳಿರೆ ಪರಿಭವಮಂತು ತನಗೆ ಬರೆ ಮುನಿಸಿನ ದ
ಳ್ಳುರಿಗಳನುಗುಱುತ್ತುಂ ಚ
ಕ್ರರತ್ನಮಂ ಬಗೆದು ಬೆಸೆಸಿದಂ ಭರತೇಶಂ ೧೦೬

ಬೆಸಸಿದೊಡದು ಮಾರ್ಕೊಳ್ಳದೆ
ಬೆಸನಂ ಬಲವಂದು ಬಾಹುಬಲಿಯನಣಂ ಭೇ
ದಿಸಲಾಱದುದಱೆನಿರ್ದುದು
ಮಸುಳ್ದೆಸಕಂಗೆಟ್ಟು ಬಲದ ಮುಯ್ಪಿನ ಕೆಲದೊಳ್ ೧೦೭

ತನಗಲ್ಲದುದಂ ಮಾಡಿದ
ನಿನಿಸಂ ಚಕ್ರೇಶನೆಂಬ ಕುಲವೃದ್ಧರ ಭೂ
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನವನತಮಕುಟಂ ೧೦೮

ತನ್ನ ದಕ್ಷಿಣ ಬಾಹುವ ಕೆಲದಲ್ಲಿ ನಿಂದ ಚಕ್ರರತ್ನಮಂ ಕಂಡು, ಬಾಹುಬಲಿ

ಕಳೆದಿಡುವುದೆ ಕಷ್ಟಂ ಭೂ
ತಳ ರಾಜ್ಯವಿಮೋಹಮಚಿರರುಚಿಸಂಚಳಮಿಂ
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳ ಮಹೀಶರುಟಿದವರಳವೇ ೧೦೯

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ
ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್ ೧೧೦

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವಿಂ

ತೆನೆಯೆನೆ ವಿಷಯಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರ ಪಶುಗಳ್ ೧೧೧

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದೀ
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತಸುರಸಮುದಯಂ ೧೧೨

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಟಿ ಮುಳಿಸಂ ನೀಂ
ಎಂದಿಂಗಂ ಬಿಸುಡೀ ತ
ಮ್ಮಂದಿರೊಳಿಂತಿನಿತು ಕಟ್ಟುವರ್ಮುದು ಪೆಂಪೇ ೧೧೩

ನಿನ್ನೀ ಬೆಸಸಿದ ಚಕ್ರಮ
ದೆನ್ನೀ ದೇಹಾದ್ರಿಯಂ ಗೆಲಲ್ನೆಱೆಯದು ನೀಂ
ಬಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ ೧೧೪

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ಟೆ ಮಾಸದೇ ೧೧೫

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಮಂ ನೆಗಟ್ದಿ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ ೧೧೬

ಎಂದು ಬಾಹುಬಲಿಕುಮಾರಂ ತಪಶ್ಚರಣನಿಶ್ಚಳನಿಶ್ಚಯಮನನಾದಾಗಳ್

ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳೆತ್ತೆತ್ತ ಗೆ
ಯ್ದನಿದಂ ತಮ್ಮನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನೈ
ಮನುವಂಶಕ್ಕೆ ಲಲಾಮನಪ್ಪನುಜನೈ ಬೇಡಮ್ಮ ನೀನುಂ ತಪೋ
ವನಮಂ ಸಾರ್ವುದುಮಾರ್ಗೆ ಮೆಱೆವೆಂ ಮತ್ಪ್ರಾಜ್ಯಸಾಮ್ರಾಜ್ಯಮಂ ೧೧೭

ಎಂದು

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗಱ್ದುದೆಂಬಾಶಂಕೆಯಂ ಮಾಡಿದಂ ೧೧೮

ಅಂತು ಭರತೇಶ್ವರನಂ ಬಾಹುಬಲಿ ಕುಮಾರನೆಂತಾನುಮೊಡಂಬಡಿಸಿ ಮಹಾಬಲಿಯೆಂಬ ನಿಜತನೂಜನನಾತ್ಮೀಯಪದವಿಯೊಳ್ ನಿಱಿಸಿ

ಕ್ಷಿತಿತಳದೊಳ್ ನೆಗೞ್ದಿರ್ದ
ಪ್ರತಿಮಲ್ಲನಿಕ್ಕಿ ಮುಯ್ವನಣಮಾನದೆ ದ
ರ್ಪಿತದುರಿತಮಲ್ಲನುಮನುಡಿ
ವ ತಕ್ಕಿನಿಂ ಸಭೆಗೆ ನಡೆದನಿಂದ್ರಾರ್ಚಿತನಾ ೧೧೯

ಅಂತು ಭಗವದಾಸ್ಥಾನಾರವಿಂದಿನಿಯಂ ರಾಜಹಂಸನಂತಳಕಂರಿಸುತ್ತುಂ ಬಂದು ಭಗವತ್ಪಾದ ಪೀಠೋಪಕಂಠದೊಳ್ ಸರ್ವಾಂಗೋಪನತನಾಗಿ ನಿಂ[ದು] ನಿಟಿಲತಟಘಟಿತ ಕರಕುಶೇಶಯಕುಟ್ಮಲನಾಗಿ

ಮೊದಲೊಳ್ ದೇವರ ದಯೆಗೆ
ಯ್ದುದಲ್ತೆ ಯುವರಾಜಪದವಿಯೆನಗೀಗಳುಮ
ಭ್ಯುದಯಕರಪ್ರವ್ರಜ್ಯದ
ಪದವಿಯ ಯುವರಾಜಪದವಿಯಂ ದಯೆಗೆಯಿಸಿಂ ೧೨೦

ಗುರುಪದಪದ್ಮಾಂತಿಕದೊಳ್
ಪರಮೇಶ್ವರದೀಕ್ಷೆಯಂ ಮನಂಬಿಡೆ ಕೊಂಡೀ
ಧರೆಯಂ ಪೊಗಟಿಸಿದನಿದೇಂ
ಪುರುಪರಮೇಶ್ವರಸುತರ್ ಪರಿಚ್ಛೇದಿಗಳೋ ೧೨೧

ಅಂತು ಜೈನದೀಕ್ಷೆಯಂ ಕೈಕೊಂಡು ಗುರುವಿನನುಮತದಿಂ ದ್ವಾದಶಾಂಗಚತುರ್ದಶಪೂರ್ವಂಗಳಂ ಕಲ್ತು ತದನುಮತದೊಳ್ ಬಱಿಯುಮೇಕವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ ನಿಲೆ

ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗ
ಳ್ವಿಡಿದು ವಿಷೋರಗಪ್ರತತಿ ನೋಟಿಪ್ಪೊಡಗುರ್ವಿಸೆ ಸುಯ್ವ ಸುಯ್ಗಳಿಂ

ಕಿಡಿ ಪೊಱಪೊಣ್ಮೆ ಬಾಹುಬಲಿಯೋಗಿಯ ಘೋರತಪೋಮಹಾಗ್ನಿಯಿಂ
ಸಿಡಿಸಿಡಿದುಣ್ಮುತಿರ್ಪ ಕಿಡಿಗಳ್ಗೆಣೆಯಾದುವು ತತ್ಪ್ರದೇಶದೊಳ್ ೧೨೨

ಬಳೆದ ಜಡೆ ನಿಮಿರ್ದ ಬಳ್ಳಿಗ
ಳೊಳೆ ಪೆಣೆದು ವಿಷೋರಗಾನಳಾರ್ಚಿಗಳಿಂದಂ
ಮಿಳಿರ್ದುವು ಮುನಿಪಧ್ಯಾನಾ
ನಳನಿರ್ಯದ್ಧೂಮವೇಣಿಕಾನಿಕರದವೊಲ್ ೧೨೩

ಅಂತುಗ್ರೋಗ್ರತಪದೊಳವಾ ಬಾಹುಬಲಿಮುನೀಂದ್ರಂಗೆ ಕೇವಲಜ್ಞಾನಾವಾಪ್ತಿಯಾಗದುದರ್ಕೆ ಭರತೇಶ್ವರಂ ವಿಸ್ಮಯಮುತ್ತು ಪೋಗಿ ವೃಷಭನಾಥನಂ ಬೆಸಗೊಳೆ ತಪದೊಳ್ ನಿಂದುಂ ನಿನ್ನ ನೆಲದೊಳ್ ನಿಂದೆವೆಂಬ ಮಾನಕಷಾಯಮವರ್ಗಿನ್ನುಂ ಪತ್ತುವಿಟ್ಟುದಲ್ಲದಱಿಂ ಕೇವಲಜ್ಞಾನೋತ್ಪತ್ತಿಯಾಗದಿರ್ದುದು ನೀಂ ಪೋಗಿ ಕಾಲ್ಗೆಱಗಲೊಡಂ ಕೇವಲಜ್ಞಾನಮಕ್ಕುಮೆಂದು ಬೆಸಸಿದೊಡೆ ಲಬ್ಧೋಪದೇಶನಾಗಿ ವಿವಿಧಾರ್ಚನಾಸಮಗ್ರಪರಿಜನಪರಿವೃತಂ ರಾಜರಾಜಂ ಮುನಿರಾಜಚರಣಾಂಭೋಜದೊಳ್ ಬಂದೆಱಗಿ ವಿವಿಧಾರ್ಚನೆಗಳಿಂದಮರ್ಚಿಸಿ

ನಿನ್ನ ಮಡಗೂಟ್ಟಿನೆಲಂ ಮಾ
ನೋನ್ನತ ನೀನೀಯೆ ಬಂದುದೆನಗಿದನೆನತೆಂ
ದೇನ್ನಿನಗೆ ಬಗೆಯಲಪ್ಪುದೆ
ನಿನ್ನನೆ ನೀಂ ಬಗೆಯ ಬಗೆಯದಿರ್ ಪೆಱಪೆಱತಂ ೧೨೪

ಎನಲೊಡಮಂತಃಕರಣದೊ
ಳಿನಿಸಾನುಂ ನಿಂದುದೊಂದು ಮಾನಕಷಾಯಂ
ಮುನಿಪತಿಗೆ ಪೋಗೆ ಪುಟ್ಟಿದು
ದನಂತವಸ್ತುಪ್ರಕಾಶಿಕೇವಳಬೋಧಂ ೧೨೫

ಜಯನಿನದಂ ಸುರದುಂದುಭಿ
ಚಯನಿನದಂ ಪುಷ್ಪವರ್ಷಮೊರ್ಮೆಯೆ ಸಕಲೋ
ರ್ವಿಯನೆಯ್ದೆ ಪರ್ವುತಿರೆ ಚಿ
ತ್ತೆಯ ಸರಿಯಂತೆಱಗಿ ಪೋದುದಮರಸಮಾಜಂ ೧೨೬

ಅಂತು ಬಾಹುಬಲಿಕೇವಳಿಯುಂ ನಾನಾದೇಶವಿಹಾರದೊಳ್ ವಿಶ್ವಜನಮಂ ನಿಜವಚೋಮೃತದಿಂ ಭವ್ಯಜನಸಾರ್ಥಮಂ ತಣಿಪಿ ಬಂದು ಕೈಲಾಸಶೈಲದೊಳಾದಿದೇವನ ಸನ್ನಿಧಿಯೊಳಿರ್ದಂ

ಮನುಕುಳತಿಳಂ ವೃಷಭಾ
ಗ್ರನಂದನಂ ರಾಜರಾಜನಧಿರಾಜಂ ಚ
ಕ್ರನಿಧೀಶನಾದಿ ಭೂಭುಜ
ನೆನೆ ನೆಗಟ್ದಂ ಭರತಚಕ್ರಿ ವಿಶ್ವಂಭರೆಯೊಳ್ ೧೨೭

ಹಿಮದಿಂದಂ ಲವಣಾಂಬುರಾಶಿವರೆಗಂ ಷಟ್ಖಂಡಭೂಮಂಡಳಂ
ನಿಮಿರ್ದಾಜ್ಞಾಪ್ರಸರಕ್ಕಗುರ್ವುಗೊಳೆಯುಂ ವಿದ್ಯಾಧರರ್ ಮಾಗಧಾ
ದ್ಯಮರರ್ ತನ್ನನೆ ನಿಚ್ಚಮೋಲಗಿಸೆಯುಂ ಚಕ್ರೇಶ್ವರಂ ಕೀರ್ತಿವಿ
ಭ್ರಮದಿಂದಂ ಪಜ್ಜಳಿಪನ್ನಮುಜ್ವಳಿಸಿದಂ ವ್ಯೋಮಾವನೀಭಾಗಮಂ ೧೨೮

ಅಂತು ಭರತಮಂಡಳಮನೇಕಚ್ಛತ್ರಚ್ಛಾಯೆಯಿಂದಂ ಪ್ರತಿಪಾಲಿಸುತ್ತಮಿರೆಯಿರೆ ಸಕಲಚಕ್ರವರ್ತಿ

ಪುರನಿಧಿಶಯ್ಯಾಸನಭೋ
ಜ್ಯರತ್ನವಾಹನವರೂಥಿನೀ ನಾಟ್ಯಸಭಾ
ಪರಿಕರಸಹಿತಂ ಭರತೇ
ಶ್ವರಂಗೆ ಸಮಸಂದುದೀ ದಶಾಂಗಂ ಭೋಗಂ ೧೨೯

ಇಂತಯೋಧ್ಯಾಸಿಂಹಾಸನಾಸೀನನುಮುದಿತೋದಿತಸಾಮ್ರಾಜ್ಯಸುಖಾನುಭವನುಂ ಕೃತಕೃತ್ಯನುಮಪ್ಪ ಸಕಲಚಕ್ರವರ್ತಿ

ಜಿನಪೂಜೋತ್ಸವಮಂ ಮಹಾಮಹಮುಮಂ ತಾಂ ಮಾಡಿ ಸಲ್ವನ್ನೆಗಂ
ಧನಮಂ ತಕ್ಕವರ್ಗೀಯವೇಟ್ಟುದದನಂತೇಗೆಯ್ದುಮೊಲ್ಲರ್ ತಪೋ
ಧನರಾರಾಧ್ಯಗೃಹಸ್ಥರಾದರೊಳಮಿನ್ನಾರ್ ತಕ್ಕರಾರ್ಯೆವೆನೊ
ಯ್ಯನುಪಾಯಾಂತರದಿಂದಮೆಂದೊಸಗೆಯಂ ತದ್ವ್ಯಾಜದಿಂ ಮಾಡಿದಂ ೧೩೦

ಅಂತು ಮಾಡಿ

ಹರಿತಾಂಕುರಫಳಪುಷ್ಪೋ
ತ್ಕರಂಗಳಂ ಪೊಸತೆ ಮೊಳೆತ ಧಾನ್ಯಂಗಳನಾ
ಧರಣೀಶಂ ಕೆದಜೆಸಿದಂ
ನಿರಂತರಂ ರಾಜಗೇಹದೊಳಗಂ ಪೊಱಗಂ ೧೩೧

ಕೆದಜೆಸಿ ಬಟೆಯಂ ಬರವೇ
ಟ್ಟುದುಮಲ್ಲಿ ಕೆಲರ್ ವಿವೇಕರಹಿತರ್ ಬಂದರ್

ಮೊದಲೊಳೆ ಪೊಕ್ಕರ್ ಬ್ರತಮಿ
ಲ್ಲದವರ್ ತುಳಿಯುತ್ತುಮಂಕುರಂಗಳನಾಗಳ್ ೧೩೨

ಸಾವದ್ಯಭೀರುಗಳ್ಕೆಲ
ರಾ ವಿವಿಧಫಲಪ್ರಸೂನಪಲ್ಲವತತಿಯಿಂ
ತೀವಿದ ರಾಜಾಂಗಣಮನಿ
ಳಾವಂದ್ಯರ್ ಮೆಟ್ಟಲೊಲ್ಲದಲ್ಲಿಯೆ ನಿಂದರ್ ೧೩೩

ನಿಲಲೊಡಮನಿಬರುಮಂ ಭೂ
ತಲಪತಿ ಬೞಿಯಟ್ಟಿ ಬರಿಸೆ ಪೆಱತೊಂದೆಡೆಯೊಳ್
ಮಲರಹಿತರ್ ಬಂದು ಧರಾ
ಲಲನಾಧೀಶಂಗೆ ವಿನತಮಸ್ತಕರಾದರ್ ೧೩೪

ಆಗಳ್ ಭರತೇಶ್ವರ ಚಕ್ರವರ್ತಿ ನೀಮಿನಿಬರುಮಿವರ್ ಬಂದ ಮಾರ್ಗದೊಳ್ ಬಾರದೆ ಪೆಱತೊಂದು ಮಾರ್ಗದೊಳೇಕೆ ಬಂದಿರೆಂದು ಬೆಸಗೊಳೆ

ಫಳಕುಸುಮಪ್ರವಾಳಹರಿತಾಂಕುರರಾಜಿಯೊಳಲ್ಲಿ ಜೀವಸಂ
ಕುಳಮಳವಲ್ಲದುಂಟದಱಿನಾಗಮ ಪರ್ವದಿನಂಗಳೊಳ್ ವ್ರತಂ
ಗಳನೊಡಗೂಡಿ ನಿಂದೆಮಗೆ ಮೆಟ್ಟಲಿಳೇಶ್ವರ ಕೇಳ್ದವಾವಿದಂ
ತಿಳಿಯೆ ಗಣಾಧಿಪರ್ ಬೆಸಸೆ ರುಂದ್ರಜಿನೇಂದ್ರಸಭಾಂತರಾಳದೊಳ್ ೧೩೫

ಅದಱಿಂ ಪ್ರವಾಳಪತ್ರಪುಷ್ಪಾಂಕುರಂಗಳಿಂದಂ ಸಂಕೀರ್ಣಮಪ್ಪ ರಾಜಾಂಗಣಮಂ ಮೆಟ್ಟದೆ ಪೆಱತೊಂದು ಬಟ್ಟೆಯೊಳ್ ಬಂದೆವೆಂಬುದುಂ ನಾಭಿನಂದನನಂದನನವರ ದೃಢವ್ರತಕ್ಕೆ ಮೆಚ್ಚಿ ದಾನಸನ್ಮಾನಯೋಗ್ಯರಪ್ಪರೆಂದು ಪದ್ಮನಿಧಿಯೆಂಬ ನಿಧಿಯಿಂ ತರಿಸಿ ತಪನೀಯಸೂತ್ರದೊಳೇಕಾದ್ಯೇಕೋತ್ತರ ದಶಾಂತಂಬರಮವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ಮಾಡಿ

ವ್ರತಹೀನರನನಿಬರುಮಂ
ಕ್ಷಿತಿಪತಿ ಬೇಱಿರಿಸಿ ಮಾನ್ಯರಂ ಮನ್ನಿಸೆ ತ
ದ್ವ್ರತಹೀನರುಮಂದಖಿಳ
ವ್ರತಮಂ ಕೈಕೊಳ್ವ ಬಗೆಯಂ ತಂದರ್ ೧೩೬

ಭರತೇಶ್ವರಂ ತಾನುಂ ಭಟ್ಟಾರಕರ ಸಮಕ್ಷದೊಳ್ ಸಮಾಕರ್ಣಿತೋಪಾಸಕಾಧ್ಯಯನನಪ್ಪುದಱಿಂದಂ ಆರೇನುಂ ಬೇಟ್ಟಿರವರ್ಗದನೆ ಕೊಟ್ಟು ಪೂಜೆ ವಾರ್ತೆ ದತ್ತಿ

ಸ್ವಾಧ್ಯಾಯ ಸಂಯಮ ತಪೋನುಷ್ಠಾನಂಬೆರಸಾರ್ಯ ಷಟ್ಕರ್ಮಂಗಳಿವು ನಿಮಗೆ ಕುಲಾಚಾರಗಳೆಂದಱಿಯೆ ಪೇೞ್ದು ಕೈಕೊಳಿಸಿ

ಆಱುಂ ವೃತ್ತಿಗಳನಿವಂ
ಮೀಱಿದರಲ್ಲರ್ ದ್ವಿಜನ್ಮರೀ ವೃತ್ತಿಗಳಿಂ
ಬೇಱಾದರ್ ದ್ವಿಜರುಂತೇಂ
ಬೇಱುಂಟೆ ಮನುಷ್ಯ ಜಾತಿ ತಾನೊಂದೆ ವಲಂ ೧೩೭

ಮೊದಲಿಂ ತಗುಳ್ದು ತುದಿವರ
ಮಿದರ್ಕಿದಾಚರಣಮಿದಱ ವಿಧಿಯಿಂತುಟು ತ
ಪ್ಪದೆ ಮಂತ್ರಪೂರ್ವಕಂ ನೆಗ
ೞ್ವುದೆಂದು ಚಕ್ರಾಧಿಪಂ ಮನಂಗೊಳೆ ಪೇೞ್ದಂ ೧೩೮

ಪರಮ ಬ್ರಹ್ಮತನೂಭವರ್ ದ್ವಿಜವರರ್ ವರ್ಣೋತ್ತಮರ್ ಲೋಕ ಪೂ
ಜ್ಯರಿಳಾವಲ್ಲಭಮಾನ್ಯರುನ್ನತ ಗುಣರ್ ಚಾರಿತ್ರಶುದ್ಧರ್ ಧರಾ
ಮರರೀ ಬ್ರಾಹ್ಮಣರೆಂದು ಕೊಂಡು ಕೊನೆದಾ ಷಟ್ಖಂಡ ಭೂಮಂಡಲೇ
ಶ್ವರನೋರಂತೆ ನೆಗೞ್ಚೆ ಕೂಡೆ ನೆಗೞ್ದತ್ತೆತ್ತಂ ದ್ವಿಜನ್ಮಾನ್ವಯಂ ೧೩೯

ಅಂತು ಭರತೇಶ್ವರಂ ತಾನೆ ಮಾಡಿದ ತನ್ನ ಕೊಂಡಾಟದಿಂ ಪ್ರಸಿದ್ಧಮಾದ ವಿಪ್ರಸಂತತಿ ಕೆಲವು ಕಾಲಂ ನಡೆವನ್ನೆಗಮೊಂದು ದಿವಸಂ ಆಶ್ಚರ್ಯ ಭೂತಂಗಳುಂ ದೂರಾರಿಷ್ಟ ಫಲಸೂಚಕಂಗಳುಮಪ್ಪ ಸ್ವಪ್ನಂಗಳಂ ಕಂಡು ಭಗವದರ್ಹತ್ ಸಮೀಪಕ್ಕೆ ಪೋಗಿ ಸಮವಸೃತಿಯಂ ಪೊಕ್ಕು ವೃಷಭನಾಥನಂ ಸ್ತುತಿಯಿಸಿ ಅರ್ಚಿಸಿ ಗಣಧರಸಮಿತಿಗೆಱಗಿ ಉಚಿತಸ್ಥಾನದೊಳ್ ಕುಳ್ಳಿರ್ದು, ದೇವ, ನೀನಿರ್ದಂತೆ ಆನಾದ ಮರುಳ್ತನದಿಂದೆ ಉತ್ಪಾದಿಸಿದೆಂ ಬ್ರತಸಮೇತ ವಿಪ್ರಾನ್ವಯಮಂ

ಇದಱೊಳ್ ಗುಣಮೋ ದೋಷಮೊ
ಪೊದಳ್ದು ನಿಂದಪುದಯುಕ್ತಮೋ ಯುಕ್ತಮೊ ಪೇ
ೞಿದು ಹಾನಿಯೊ ವೃದ್ಧಿಯೊ ತಾ
ನದಾವುದಂ ಪೊರ್ದಿ ನಿಲ್ಕುಮಘವಿಘಟಪಟೂ ೧೪೦

ಅದಲ್ಲದೆಯುಂ ದಿನಂ ಬೆಳಗಪ್ಪ ಜಾವದೊಳ್ ಪದಿನಾಱು ಕನಸುಗಳಂ ಕಂಡೆನಾ ಕನಸುಗಳನಿಷ್ಟಫಲಸೂಚಕಂಗಳೆಂಬುದಂ ಸಾಮಾನ್ಯದಿನುಪಲಕ್ಷಿಸಿದೆಂ ಅವಱ ಫಲವುಮೆನಗಱಿಯೆ ಬೆಸಸಿಂ ಎಂದು, ಅವಧಿಜ್ಞಾನದಿಂ ತಾನಾ ಕನಸುಗಳನಱಿವವನಾಗಿಯುಂ ಸಭಾಜನಕ್ಕಮಱಿಪಲೆಂದು, ಬೆಸಗೊಳ್ವುದುಂ ಪ್ರಶ್ನಾಕ್ರಮದಿಂ ತ್ರಿಲೋಕಗುರುವಿಂತೆಂದು ಬೆಸಸಿದಂ

ಧರೆಯೊಳ್ ಧರ್ಮಾರ್ಥದಿಂ ನೀಂ ಸೃಜಿಯಿಸಿ ನೆಗಟ್ದೀ ವಿಪ್ರಸಂತಾನದೊಂದಾ
ಚರಣಂ ನೀನೆಂದ ಪಾಂಗಿಂ ಕೃತಯುಗದೊಳೆ ದಲ್ ಸಲ್ಗುಮಿನ್ನತ್ತ ನಷ್ಟಾ
ಚರಣಂ ಸನ್ಮಾರ್ಗದೊಳ್ ಮಚ್ಚರಿಸಿ ಕಲಿಯುಗಾಭ್ಯರ್ಣದೊಳ್ ದ್ರವ್ಯಲೋಭಾ
ತುರರುನ್ಮಾರ್ಗೋಪದೇಶೋದ್ಯತ ಮತಿಗಳತಿ ಕ್ರೂರಪ್ಪರ್ ದ್ವಿಜನ್ಮರ್ ೧೪೧

ಅಂತು ಪೇಟ್ದು ಮತ್ತಮಾತನ ಕಂಡ ಷೋಡಶಸ್ವಪ್ನ ಸೂಚಿತ ಫಲಂಗಳನಿಂತು ಬೆಸಸಿದರ್: ಇರ್ಪತ್ತು ಮೂಱು ಕೇಸರಿಗಳಂ ಕಂಡುದಱಿಂದನಿಬರೆ ತೀರ್ಥಕರರ್ಕಳಪ್ಪರ್; ಧರೆಯೊಳ್ ಪಾಷಂಡಿಗಳರೆಬರ್ ಪುಟ್ಟಿಯುಮಡಂಗುವರ್; ಕುಲಿಂಗಿಗಳ್ ವಿಕೃತಿಗಳಿಂ ವಿರಹಿತರಪ್ಪರ್; ಇನಿತಳವಿಲ್ಲದೆ ಕಿಡುವರಲ್ತೆ ದುಷ್ಷಮಯತಿಗಳ್; ಒರ್ವರೆ ವಿಹರಿಪುದಂ ಬಿಸುಟಂಬರಾಂಬರರ್ ತಮ್ಮ ಸಮುದಯಮಂ ಬೆರಸಿರ್ಪರ್; ಎಸೆಯುದು ದುಷ್ಷಮಕಾಲದೊಳಸದೃಶ ಕೈವಲ್ಯಬೋಧದಿನಕರಬಿಂಬಂ; ನರನಾರಿಕುಳಮನುಪಮ ಸತ್ಯಶೌಚವಿರಹಿತಮಕ್ಕುಂ; ಸಮಯಿಗಳುಂ ಚಾತುರ್ವರ್ಣಮುಮುಚಿತಚರಿತ್ರಮಂ ಬಿಸುಟ್ಟಾದಂ ಪೊಲ್ಲಮೆಯೊಳ್ ಸಲೆ ನಡೆವರ್ ದುಷ್ಷಮಮೆಂಬ ಐದನೆಯ ಕಾಲದೊಳ್; ಆದಿಭೂಪರ್ ಕಿಡೆ ಬೇಡರುಮಕುಲೀನರುಮತಿದುಶ್ಚರಿತ್ರರುಂ ಭೂಪರಪ್ಪರನ್ಯಾಯಪರರ್; ಜೈನಾಗಮವಿದರಂ ಸಾರದೆ ಪೋಗಿ ಕುಲಿಂಗಿಗಳಿನೀ ಜನಂ ಸೇವಿಸುಗುಂ; ಮಕ್ಕಳ್ಗಂ ಕೂಡೆ ಪೆಸರಿಟ್ಟು ಸಲೆ ಕೊಂಡಾಡಿದಪರ್ ವ್ಯಂತರರ್ಕಳಂ ಜಡಮತಿಗಳ್; ನಡುನಾಡೊಳಱಂ ನೆಲಸದೆ ಕಡೆಯೊಳ್ ನೆಲೆಗೊಳ್ಗುಂ; ಧರಣೀಪಾಳಕ ಮುನಿಪರ್ ಪಂಚಮಕಾಳದೊಳಣಮಾಗರಲ್ತೆ ಋದ್ಧಿಪ್ರಾಪ್ತರ್; ವ್ರತಹೀನರ್ ಸನ್ಮಾರ್ಗಪ್ರತಿಕೂಲರ್ ವ್ಯಸನವಶಗತರ್ ಪಾಪಿಗಳಿಂತತಿಕಷ್ಟರಪ್ಪರ್ ಅವನಿಯೊಳತಿಥಿಗಳಿನ್ನನ್ನದಾನಮಂ ಕುಡುವೆಡೆಯೊಳ್; ಜೈನದೀಕ್ಷೆಗೆ ಮೆಯ್ವ್ಯಂ ತರುಣಜನಂಗಳೆ ತರ್ಪರ್ ಪರಿಣತವಯಸರ್ಕಳಪ್ಪರವರ್ ಮೆಯ್ವಾರರ್; ಮುನಿನಿಕರಕ್ಕಾದರದವಧಿಮನಃ ಪರ್ಯಯಮೆರಡುಮಣಂ ಪುಟ್ಟವು; ಧಾನ್ಯಸಮಿತಿ ನೀರಸಮಕ್ಕುಂ

ಇವು ದೂರಫಲಂಗಳ್ ಸ್ವ
ಪ್ನವಿಶೇಷಂಗಳ್ ತನೂಜ ಕೊಕ್ಕರಿಸದಿರಿ
ನ್ನಿವಱೆಡೆಗೆ ನಿನಗೆ ಮಾ
ಟ್ಕೆ ವಿಶ್ವವಿಘ್ನೋಪಶಾಂತಿಯಂ ಜಿನಧರ್ಮಂ ೧೪೨

ಎಂಬುದುಂ ಭರತೇಶ್ವರಂ ಪ್ರಸನ್ನಮುನನಾಗಿ ಪುರುಪರಮೇಶ್ವರಂಗೆಱಗಿ ಬಂದಯೋಧ್ಯಾಪುರಮಂ ಪೊಕ್ಕು ದುಸ್ಸ್ವಪ್ನದರ್ಶನಕರ್ಷಣಾರ್ಥಮಾಗಿ ಶಾಂತಿಕಕ್ರಿಯೆಗಳಂ ನೆಗಟ್ದು

ವಿವಿಧದ್ವೀಪಂಗಳೊಳ್ ಮಂದರಗಿರಿತಟದೊಳ್ ಜ್ಯೋತಿರಾವಾಸದೊಳ್ ದೇ
ವ ವಿಮಾನೀಕದೊಳ್ ಶೋಭಿಸುವ ಜಿನಗೃಹವ್ರಾತಮಂ ಗೆಲ್ದು ರತ್ನ

ಚ್ಛವಿಯಿಂ ದಿಗ್ಭಿತ್ತಿಯಂ ಚಿತ್ರಿಸುವ ಜಿನಕೇತನಂಗಳಂ ಮಾಡಿಸುತ್ತುಂ
ದಿವಿಜೇಂದ್ರಸ್ತುತ್ಯನಾದಂ ಸುಕವಿಜನಮನೋಮಾನಸೋತ್ತಂಸಹಂಸಂ ೧೪೩

ಪ್ರಿಯಧರ್ಮನೃಪತಿಯಂ ನೋ
ಡಿ ಯಥಾ ರಾಜಾ ತಥಾ ಪ್ರಜಾ ಎಂಬವೊಲೋ
ಜೆಯೊಳೋಜೆಗೊಂಡು ಧರ್ಮ
ಪ್ರಿಯರಾದರ್ ಪ್ರಜೆಗಳುಂ ಸಮಸ್ತಾವನಿಯೊಳ್ ೧೪೪

ಮತ್ತಿತ್ತ ವೃಷಭನಾಥಂ ಎಣ್ಬತ್ತುನಾಲ್ವರ್ ಗಣಧರದೇವರುಂ ಸಕಳಪೂರ್ವಧರರುಂ ಶಿಕ್ಷಕರುಂ ಅವಧಿಜ್ಞಾನಿಗಳುಂ ಕೇವಳಜ್ಞಾನಿಗಳುಂ ವಿಕ್ರಿಯರ್ಧಿಪ್ರಾಪ್ತರುಂ ಮನಃಪರ್ಯಯಜ್ಞಾನಿಗಳುಂ ವಾದಿಗಳುಂ ಮೊದಲಾಗೆ ಮುನಿಪತಿಗಳುಂ ಆರ್ಯಿಕಾಗಣಮುಂ ಶ್ರಾವಕರುಂ ಶ್ರಾವಕಿಯರುಂ ಚತುರ್ವಿಧ ದೇವನಿಕಾಯಮುಂ ಪಕ್ಷಿ ಚತುಷ್ಪದ ಸರೀಸೃಪಾದಿ ತಿರ್ಯಗ್ಜಾತಿಗಳುಂ ಬೆರಸು ಧರ್ಮಾಮೃತವರ್ಷದಿಂ ಧರ್ಮಕ್ಷೇತ್ರಂಗಳೊಳ್ ಭವ್ಯ ಸಸ್ಯಂಗಳನನೇಕ ಬ್ರತ ಫಲಭರ ವಿನತಂಗಳ್ ಮಾಡಿ ಪದಿನಾಲ್ಕು ದಿವಸಮಾಯುಷ್ಯಮುಂಟೆನೆ ಕೈಳಾಸಪರ್ವತದ ಸಿದ್ಧಕೂಟದೊಳ್ ಪೌಷ್ಯಮಾಸದ ಪೌರ್ಣಮೀ ದಿನದಂದು ಯೋಗ ಪಲ್ಯಂಕಾಸನದಿಂದಂ ಯೋಗನಿರೋಧದೊಳ್ ಪೂರ್ವಾಭಿಮುಖನಾಗಿರ್ದಂ

ಅನ್ನೆಗಮಿತ್ತಲ್ ಭರತಂ, ಯುವರಾಜಂ, ಗೃಹಪತಿ, ಭರತಮಂತ್ರಿಮುಖ್ಯರ್, ಚಮೂಪತಿ, ಜಯಪ್ರಿಯತನೂಜಂ, ಅನಂತವೀರ್ಯಂ, ಸುಭದ್ರೆಯರ್ [ವಿವಿಧ ಕನಸುಗಳಂ ಕಂಡರ್]. ಭರತಾದಿಗಳನಿಬರುಂ ತಂತಮ್ಮ ಕಂಡ ಕನಸುಗಳಂ ಪ್ರಭಾತಸಮಯದೊಳ್ ಪುರೋಹಿತಂಗಱಿಪಿದೊಡೆ

ಕನಸುಗಳಿವು ಪೇೞಿಪೇೞಿತೇ
ನನಂತಗುಣನಿಳಯನಾದಿದೇವಂ ಪಲಬರ್
ಮುನಿಪತಿಗಳ್ವೆರಸಡರ್ದಪ
ನನಶ್ವರಾಸ್ಪದಮನೆಂಬುದಂ ಸೂಚಿಸುಗುಂ ೧೪೫

ಎಂಬುದುಂ, ಆ ಪ್ರಸ್ತಾವದೊಳ್ ಆದಿಭಟ್ಟಾರಕ ವ್ಯತಿಕರಸ್ಥಿತಿಯನಾನಂದನೆಂಬಂ ಧರ್ಮಕಾರ್ಯನಿಮಿತ್ತಂ ಬಂದಱಿಪಿದೊಡೆ ಭರತೇಶ್ವರ ಚಕ್ರವರ್ತಿ ವಿನೇಯಜನಸಮೇತಂ ಬಂದು ಭಟ್ಟಾರಕರಂ ಮೂಱು ಸೂಟಿಬ್ ಬಲವಂದು ಕೃತಾಭೀಷ್ಟಸ್ತವನಪರಂ ಮಹಾಮಹಮೆಂಬ ಮಹಾಪೂಜೆಯಂ ಮಹಾವಿಭೂತಿಯಿಂ ಪದಿನಾಲ್ಕು ದಿವಸಂಬರಂ ಮಾಡೆ ವೃಷಭನಾಥಂ

ಗುಣಮೆಂಟುಂ ಬಂದು ತನ್ನೊಳ್ ಪೆಣೆದಿರೆ ಸುಖಸಾದ್ಭೂತನುಂ ಲೋಕಚೂಡಾ
ಮಣಿಯುಂ ಶಶ್ವತ್ತ್ರಿಲೋಕೀ ಪ್ರಣುತನುಮತಿವಿಖ್ಯಾತನುಂ ಭವ್ಯಚಿಂತಾ
ಮಣಿಯುಂ ತಾನಾಗಿ ತನ್ನೊಳ್ ನೆಱೆಯೆ ಪಡೆದು ತನ್ನಂದಮಂ ತಾನೆ ತನ್ನ
ತ್ತಣಿನಾದಬ್ರಹ್ಮನೇಕಕ್ಷಣದೊಳೆ ಪರಮ ಬ್ರಹ್ಮಸದ್ಮಕ್ಕೆ ಸಂದಂ ೧೪೬

ದೊರೆಕೊಂಡ ಮಾಘ ಮಾಸಂ
ಬರೆ ಕೃಷ್ಣ ಚತುರ್ದಶೀ ದಿನಂ ಸಮನಿಸೆ ತ
ತ್ಪುರುದೇವಂ ಮುಕ್ತಿ ವಧೂ
ವರತೆಯನಭಿಜಿನ್ಮುಹೂರ್ತದೊಳ್ ಕೈಕೊಂಡಂ ೧೪೭

ಅಂತು ವೃಷಭೇಶ್ವರಂ ತ್ರಿಲೋಕಶಿಖರಿಶೇಖರಾಯಮಾನಮೆನಿಸಿದ ಈಷತ್ ಪ್ರಾಗ್ಭಾರದ ಮೇಗಣ ಘನೋದಧಿ ಘನಾನಿಳ ತನುವಾತ ತೃತೀಯಭಾಗದೊಳ್ ಅವ್ಯಾಬಾಧಮನಂತ ಸುಖಾಂಬುಧಿನಿಳಯನುಮಾಗಿ ನೆಲಸಿರ್ದಂ. ಇತ್ತ ಚತುರ್ವಿಧ ದೇವನಿಕಾಯಮುಂ ಪುರುದೇವ ಪರಿನಿರ್ವಾಣ ಮಹಾಕಲ್ಯಾಣ ಪೂಜಾ ನಿರ್ವರ್ತನಾಭಿಲಾಷಿಯಾಗಿ ನಿರ್ವಾಣ ಭೂಮಿಯನನೇಕ ಸುರಭಿ ಸುರತರು ಕುಸುಮ ಸುಗಂಧಾಕ್ಷತೆಗಳಿಂದಮರ್ಚಿಸಿ

ಸ್ಫುರಿತಾಗ್ನೀಂದ್ರ ಕಿರೀಟಕೋಟಿ ಮಣಿಸಂಭೂತಾಗ್ನಿಯಿಂ ಚಂದನಾ
ಗರು ಕರ್ಪೂರ ಲವಂಗ ಕುಂಕುಮ ಘೃತ ಕ್ಷೀರಾನಲ ದ್ರವ ಸಂ
ಕರ ಸಂಪರ್ಕದೊಳೆಯ್ದೆ ಪೆರ್ಚಿದುದಜೆಂ ರೂಪಾಂತರಕ್ಕೊಯ್ದು ಭಾ
ಸುರದಿಂ ತತ್ಸುರರಾಜನಂದು ಪಿರಿದೊಂದುತ್ಸಾಹಮಂ ಮಾಡಿದಂ ೧೪೮

ಭೂಪತಿಗಳೊಳ್ ಕಲ್ಯಾಣ ವಿ
ಭೂತಿಗಳೆಮಗಕ್ಕೆ ಬೇಗಮಿನ್ನೆಂದು ಮನೋ
ಜಾತ ಮಹೋತ್ಸಾಹರ್ ತ
ದ್ಭೂತಿಯನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್ ೧೪೯

ಅಂತು ತ್ರಿಪುಂಡಗಳನಿಟ್ಟೊಸಗೆಯಿಂದೊಸಗೆ ಮಱುಳ್ಗೊಂಡು

ಆನಂದನಾಟಕಂ ಪರ
ಮಾನಂದಮನಂದು ಮಾಡೆ ದಿವಿಜಾಧೀಶರ್
ನಾನಾ ಪ್ರಕಾರದಿಂದಮ
ದೇನೆಂಬುತ್ಸವಮನಟ್ಟೆಯಿಂ ಮಾಡಿದರೋ ೧೫೦

ಆಗಳಾತ್ಮೀಯ ಗುರುವಿಯೋಗ ಶೋಕಾನಳದಹ್ಯಮಾನ ಮಾನಸನಾಗಿರ್ದ ಭರತಪತಿಯ ಶೋಕಾವೇಗಮಂ ವೃಷಭಸೇನ ಗಣಾಗ್ರಣಿಗಳಿಂತೆಂದಾಜೆಸಿದರ್: ಜೀವಂಗಳ್ ಶುಭಾಶುಭ ಕರ್ಮಶೈಲೂಷಪ್ರೇರಿತಂಗಳಾಗಿ ಚತುರ್ಗತಿ ಸಂಸಾರಂಗಳೊಳ್ ನಾನಾ ಶರೀರೋಪಾದಾನ ಪರಿತ್ಯಜನ ಪುರಸ್ಸರಂ ಪರಿಭ್ರಮಿಸುಗುಂ ಅದು ನಮ್ಮಿನಿಬರ ಭವಾವಳಿಯಿಂದೆ ನಮಗನುಭೂತಪೂರ್ವಂ, ಅದೆಂತೆಂದೊಡೆ, ಭವದೀಯ ಜನಕಂ ಪುರುಪರಮೇಶ್ವರಂ

ಭೋಗಾಕಾಂಕ್ಷೆಯೊಳ್ ಜಯವರ್ಮಂ ಬಟಿಕೆ ಮಹಾಬಳಂ ಲಲಿತಾಂಗಂ
ವಜ್ರಜಂಘಂ
ಭೋಗಭೂಮಿಜಂ ಶ್ರೀಧರದೇವಂ ಸುವಿಧಿ ನರಾಧಿಪನಚ್ಯುತೇಂದ್ರಂ
ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕೈಸಿದ ವಜ್ರನಾಭಿ
ಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದಿಲ್ಲಿ ತಾನಾದಿದೇವನಾದಂ ೧೫೧

ಮುನಿವಿನುತ ಗಣಾಧಿನಾಥವಚನಾಮೃತದಿಂ ಭರತನಪಗತ ಗುರುಶೋಕವೇಗನಾಗಿ ಗಣಧರ ಸರಸಿಜಂಗಳ್ಗೆಱಗಿ ತನ್ನ ಭೋಗತೃಷ್ಣೆಯಂ ತಾನೆ ಮನದೊಳ್ ನಿಂದಿಸುತ್ತುಂ ಮುಕ್ತ್ಯನುರಕ್ತಚಿತ್ತನಾಗುತ್ತುಂ ಬಂದಯೋಧ್ಯಾಪುರಮಂ ಪೊಕ್ಕು ಕೆಲವು ದಿವಸಮಿರ್ದು ಒಂದು ದಿವಸಂ ತಳದಳಿಸಿ ಪೊಳೆವ ಮಣಿದರ್ಪಣದೊಳ್ ಪುರುಪರಮೇಶ್ವರನ ದೂತನಂ ಕಾಣ್ಬವೊಲ್ ಕೆನ್ನೆಯ ನರೆಯುಂ ಕಂಡು, ಭಗವದಾದಿಭಟ್ಟಾರಕರ ನಿರ್ವಾಣಭೂಮಿಸಮೀಪಸ್ಥಿತ ವಿಶಾಲಸ್ಫಟಿಕಶಿಲಾತಳಾರೂಢಂ ಉತ್ತರಾಭಿಮುಖನಾಗಿ ಸಿದ್ಧಭಕ್ತಿಪೂರ್ವಕಂ ತ್ರಿಜಗದ್ಗುರುವೇ ಗುರುವೆಂದು ತತ್ಪದಸರಸಿಜಧ್ಯಾನಪರಾಯಣನಾಗಿ

ಶ್ರೀನಾರೀಪತಿ ದೀಕ್ಷೆಯಂ ಕೊಳಲೊಡಂ ಭೋಂಕಲ್ ಮನಃಪರ್ಯಯ
ಜ್ಞಾನಂ ಪುಟ್ಟಿದುದಂತು ಪುಟ್ಟಿದ ಬಟಿಕ್ಕಂತರ್ಮುಹೂರ್ತಕ್ಕೆ ಭ
ವ್ಯಾನಂದಪ್ರದಮಿಂದ್ರವೃಂದ ಕೃತ ಕಲ್ಯಾಣಾಸ್ಪದಂ ಕೇವಲ
ಜ್ಞಾನಂ ಪುಟ್ಟಿದುದಿಂತು ಭವ್ಯತೆ ಜಗಕ್ಕಾಶ್ಚರ್ಯಮಾಯ್ತೀಶನಾ ೧೫೨

ನರಲೋಕಮೊಂದೆ ಮುನ್ನಿನ
ಚರಣಾಬ್ಜಕ್ಕೆಱಗೆ ನೆಗಟ್ದ ಕೇವಳ ಬೋಧಂ
ದೊರೆಕೊಳೆ ಸುರನರಲೋಕಂ
ಚರಣಾಬ್ಜಕ್ಕೆಱಗಿ ಭರತಯತಿಪತಿ ನೆಗಟ್ದಂ ೧೫೩

ಅಂತು ದೇವಮಾನವಪರಿಷತ್ಪರಿವೃತನಾಗಿ ನಾನಾವಿಧ ಧರ್ಮಕ್ಷೇತ್ರಂಗಳೊಳೊಂದು ಲಕ್ಕೆ ಪೂರ್ವಂಬರಂ ಧರ್ಮಾಮೃತಾಂಬುಸೇಕದಿಂ ವಿನೇಯಜನ ಸಸ್ಯಸಂಪತ್ಪರಂಪರೆಯಂ ಮಾಡಿ ಕೈಳಾಸಶೈಲ ಶಿಖರಾಲಂಕಾರ ನಿರುದ್ಧ ಯೋಗನುಂ ಅಪಗತ ಯೋಗಗುಣಸ್ಥಾನನುಂ ಚತುರ್ಥ ಧ್ಯಾನಾನಳದಗ್ಧ ಶೇಷಾಶೇಷ ಕರ್ಮೇಂಧನನುಮಾಗಿ

ಪರಮಶ್ರೀ ಸಂತತಾವಾಸದೊಳಖಿಳ ಸುಖ ಸ್ವಚ್ಛಸಂಪನ್ನ ತೋಯಾ
ಕರದೊಳ್ ಶಶ್ವದ್ಗುಣಾಂಭೋರುಹ ವಿಳಸನ ವಿಭ್ರಾಜಿಯೊಳ್ ಸಿದ್ಧಹಂಸೋ
ತ್ಕರಲೀಲಾ ರಮ್ಯದೊಳ್ ಸಂದಮೃತನಿಳಯನೀರೇಜಿನೀ ಷಂಡದೊಳ್ ಸೌಂ
ದರ ಕೇಳೀಹಂಸನಾದಂ ಸುಕವಿ ಜನಮನೋಮಾನಸೋತ್ತಂಸಹಂಸಂ ೧೫೪

ಶಕವರ್ಷಮೆಂಟುನೂಱ
ಕ್ಕೆ ಕಡೆಯೊಳಱುವತ್ತು ಮೂಱು ಸಂದಂದು ಜಗತ್
ಪ್ರಕಟ ಪ್ಲವ ಸಂವತ್ಸರ
ದ ಕಾರ್ತಿಕಂ ಮುದಮನೀಯೆ ನಂದೀಶ್ವರದೊಳ್ ೧೫೫

ಸಿತಪಕ್ಷದ ಪಂಚಮಿ ದಿನ
ಪತಿವಾರಂ ಶುಭದ ಮೂಲ ನಕ್ಷತ್ರದೊಳ
ನ್ವಿತಮಾಗೆ ನೆಗೞ್ದಿದೀ ಮ
ತ್ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ ೧೫೬

ತ್ರಿದಶಸ್ತುತ್ಯಮಿದಾದಿದೇವ ಚರಿತಂ ಕರ್ಣಾಮೃತಸ್ಯಂದಿಯ
ಕ್ಕಿದು ಭವ್ಯಾವಳಿಗೆಂದು ಪೇೞಿಸೆ ಬುಧರ್ ಸ್ವರ್ಗಾಪವರ್ಗಕ್ಕಮಾ
ಸ್ಪದಮಪ್ಪಾದಿಪುರಾಣ ವಸ್ತುಕೃತಿಯಂ ಪೇೞ್ದಿಂ ಬೆಡಂಗಪ್ಪ ಮಾ
ರ್ಗದೊಳಂ ದೇಸೆಯೊಳಂ ಪೊದಳ್ದೆಸೆವಿನಂ ಸಂಸಾರಸಾರೋದಯಂ ೧೫೭

ರಸಭಾವೋಪೇತ ಧರ್ಮಾಮೃತರಸಮಯದೊಳ್ ಘೋರಸಂಸಾರ ನಾನಾ
ವ್ಯಸನವ್ಯುಚ್ಛಿತ್ತಿಯೊಳ್ ಧಾರ್ಮಿಕ ಜನ ಜನಿತಾನಂದದೊಳ್ ಹೃದ್ಯವಿದ್ಯಾ
ರಸದೊಳ್ ಸಂಸಾರಸಾರೋದಯ ವಿರಚಿತದೊಳ್ ವಾಗ್ವಧೂಮುದ್ರೆಯೊಳ್ ಮು
ದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ ೧೫೮

ಇಂತು ದೇವೇಂದ್ರಮುನಿಂದ್ರವಂದ್ಯ ಪರಮಜಿನೇಂದ್ರಮುಖಚಂದ್ರ
ವಾಕ್ಚಂದ್ರಿಕಾಪ್ರಸರಪ್ರಸಾದೋದೀರ್ಣ ಸೂಕ್ತಿಕಲ್ಲೋಲಮಾಲಾಕೀರ್ಣ
ಕವಿತಾಗುಣಾರ್ಣವಪ್ರಣೀತಮಪ್ಪ ಸಂಕ್ಷಿಪ್ತ ಆದಿಪುರಾಣಂ
ಸಂಪೂರ್ಣಂ

* * * * * * *

ಟಿಪ್ಪಣಿಗಳು

ಪೂರ್ವ ಭವಾವಳಿ: ಭೋಗನಿರಸನಂ

ಕಾವ್ಯದ ಆರಂಭದಲ್ಲಿ ಪಂಚಪರಮೇಷ್ಠಿಗಳ ಪ್ರಾರ್ಥನೆಯನ್ನು ಮಾಡಲಾಗಿದೆ, ಪಂಚ ಪರಮೇಷ್ಠಿಗಳೆಂದರೆ, ಅರ್ಹಂತ, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸರ್ವ ಸಾಧುಗಳು. ಇಂತಹ ಧ್ಯಾನವನ್ನು 'ಪಂಚ ನಮಸ್ಕಾರ' ಎಂಬ ಮಾತಿನಿಂದಲೂ ಸೂಚಿಸುತ್ತಾರೆ. ಪಂಚನಮಸ್ಕಾರಗಳು: ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣವೋ ಅಂಯಾರಿಯಾಣಂ, ಣವೋ ಉವಜ್ಝಾಯಾಣಂ, ಣವೋ ಳೋಏ ಸಬ್ಬಸಾಹೂಣಂ ಎಂಬ ಐದು ಮಂತ್ರಗಳು

೧. ಈ ಪದ್ಯದಲ್ಲಿ ಆದಿಜಿನನಾದ ವೃಷಭದೇವನನ್ನು ಸ್ತುತಿಸಲಾಗಿದೆ. ಆದಿ ಬ್ರಹ್ಮ – ಆದಿ ಜಿನ; ವೃಷಮಾರ್ಗ – ಧರ್ಮಮಾರ್ಗ; ಅಗ್ರೇಸರ – ಶ್ರೇಷ್ಠನಾದವನು; ಪಾಪಹೃತ್ – ಪಾಪವನ್ನು ಹೋಗಲಾಡಿಸುವ

೨. ಇದು ಸಿದ್ಧರನ್ನು ಸ್ತುತಿಸುವ ಪದ್ಯ. ಸಿದ್ಧನು ಸಿದ್ಧಶಿಲೆಯಲ್ಲಿ ಶಾಶ್ವತವಾಗಿ ನೆಲೆಸಿದವನು; ಎಂಟುಂ ಕಿಲ್ಬಿಷಂಗಳ್ – ಘಾತಿಕರ್ಮ, ಆತ್ಮನ ಗುಣಕ್ಕೆ ಘಾತಕವಾದ ಕರ್ಮ – ಸತ್ಕಾರ್ಯ ಪ್ರವೃತ್ತಿ ಮುಂತಾದ ಉತ್ತಮಗುಣಗಳನ್ನು ಹಾಳುಮಾಡಿ ಆತ್ಮನ ಪರಿಪೂರ್ಣತೆಗೆ ಬಾಧಕವಾದ ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ ಮತ್ತು ಮೋಹನೀಯ ಎಂಬ ನಾಲ್ಕು ಘಾತಿ ಕರ್ಮಗಳು ಹಾಗೂ ನಾಮ, ಗೋತ್ರ. ಆಯು, ವೇದನೀಯ ಎಂಬ ನಾಲ್ಕು ಅಘಾತಿ ಕರ್ಮಗಳು; ಕಿಡದ ಗುಣ – ಸಿದ್ಧಪರಮೇಷ್ಠಿಗಳು ಗಳಿಸಿಕೊಳ್ಳುವ ಎಂಟು ಗುಣಗಳು: ಸಮ್ಯಕ್ ಜ್ಞಾನ, ದರ್ಶನ, ಅನಂತವೀರ್ಯ, ಸೂಕ್ಷ್ಮತ್ವ, ಅಗುರುಲಘುತ್ವ, ಅವಗಾಹ, ಅವ್ಯಾಬಾಧಗಳು; ಮತ್ತು ಸ್ವಕೀಯ ಪ್ರಭುತೆ– ಸ್ವಪ್ರಭುತ್ವ

೩. ಈ ಪದ್ಯವು ಆಚಾರ್ಯರನ್ನು ಸ್ತುತಿಸುತ್ತದೆ. ಮೂವತ್ತಾಱು ಗುಣಂಗಳ್ – ಆಚಾರ್ಯನಿಗೆ ಅಗತ್ಯವಾದ ದ್ವಾದಶ ತಪಸ್ಸು, ಷಡಾವಶ್ಯಕ, ದಶಧರ್ಮ, ಪಂಚಾಚಾರ, ತ್ರಿಗುಪ್ತಿ ಎಂಬ ಮೂಲೋತ್ತರಗುಣಗಳು; ಐದುಮ್ ಆಚಾರ – ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು

ವೀರ್ಯಾಚಾರಗಳು; ಕೈಗಣ್ಮ – ಮಿತಿಮೀರು; ಸಾವದ್ಯ – ಕಳಂಕ, ಪಾಪ; ವಿನೋದಾವ – ಪಾಪವೆಂಬ ಕಾಳ್ಗಿಚ್ಚು; ಕಾಂತಾರ – ಅರಣ್ಯ, ಕಾಡು

೪. ಇದು ಉಪಾಧ್ಯಾಯಯರನ್ನು ಕುರಿತಾದ ಸ್ತುತಿಪದ್ಯ. ಉಪಾದೇಯ – ಸ್ವೀಕಾರಾರ್ಹ; ಭವ್ಯಜನ – ಜೈನ ಭಾವುಕರು; ರತ್ನತ್ರಯ – ಸಮ್ಯಕ್‌ಜ್ಞಾನ, ದರ್ಶನ ಮತ್ತು ಚಾರಿತ್ರಗಳು; ಚಿತ್ತಗೃಹ – ಮನಸ್ಸು ಎಂಬ ಮನೆ

೫. ಈ ಪದ್ಯದಲ್ಲಿ ಸರ್ವ ಸಾಧುಗಳ ಬಗೆಗಿನ ಪ್ರಾರ್ಥನೆಯಿದೆ. ಶೀಲ – ಮುನಿಗಳು ಆಚರಿಸುವ ದಿಗ್‌ವ್ರತ, ದೇಶವ್ರತ ಮತ್ತು ದಂಡವಿರತಿ ವ್ರತಗಳೆಂಬ ಮೂರು ಗುಣವ್ರತಗಳು ಹಾಗೂ ಸಾಮಯಿಕ, ಪ್ರೋಷಧೋಪವಾಸ, ಉಪಭೋಗ ಪರಿಭೋಗಾತಿಥಿಸಂಗ್ರಹ ಮತ್ತು ಪಶ್ಚಿಮ ಸಲ್ಲೇಖನ ಎಂಬ ನಾಲ್ಕು ಶಿಕ್ಷಾವ್ರತಗಳು; ಇವು ಒಟ್ಟಾಗಿ 'ಶೀಲಸಪ್ತಕ' ಎನ್ನಿಸಿಕೊಳ್ಳುತ್ತವೆ; ದಂದುಗ – ವ್ಯಥೆ

೬. ಈ ಪದ್ಯದಲ್ಲಿ ಪಂಪನು ಸರಸ್ವತಿಯನ್ನು ವಿಶಿಷ್ಟ ರೂಪದಲ್ಲಿ ಪರಿಭಾವಿಸಿಕೊಳ್ಳುತ್ತಾನೆ: ಪರಮಜಿನೇಂದ್ರ ವಾಣಿಯೇ ಸರಸ್ವತಿ, ಅದನ್ನು ಹೇಳುವ, ಕೇಳುವ, ಪೂಜಿಸುವವರಿಗೆ ನಿರಂತರಸೌಖ್ಯವನ್ನೀಯುವಂಥದು; ಎರೆ – ಬೇಡಿಕೊ

೭. ಈ ಕಾವ್ಯದ ಹಿರಿಮೆಯನ್ನು ಇಲ್ಲಿ ವಿವರಿಸಲಾಗಿದೆ: ಸರ್ವಜನಮಾನ್ಯನಾದ ಆದಿದೇವನೇ ಕಥಾನಾಯಕ, ಕಥಾವಸ್ತುವು ಅವನ ಜನ್ಮಾವಳಿಯದು, ತನ್ನ ಪರಿಣಾಮಕಾರಿಯಾದ ವಾಗ್ವಿಲಾಸ ಇವುಗಳಿಂದ ಮುಪ್ಪುರಿಗೊಂಡದ್ದು. ಪ್ರಸ್ತುತ್ಯ – ಸ್ತುತಿಸಲ್ಪಟ್ಟ; ಮದೀಯ – ನನ್ನ; ಬಲ್ಲಿತ್ತಜಿ ಕೋಡು ಕೂಜೆತು – ಬಲಿಷ್ಠರ ಕೊಂಬು ಹರಿತ, ಎಂದರೆ ಅವರು ನಡೆದುದೆಲ್ಲ ಸರಿ; ಅಂತಿಂತುಂತು – ಅಂತು+ಇಂತು+ಉಂತು – ಹಾಗೆ ಹೀಗೆ ಹೇಗೂ

೮. ಕವಿತೆಯ ಸ್ವರೂಪಗುಣ ಮತ್ತು ತನ್ನ ವೈಶಿಷ್ಟ್ಯಗಳ ವಿವರಣೆ ಈ ಪದ್ಯದಲ್ಲಿದೆ. ನಿಚ್ಚಂ ಪೊಸತು – ನಿತ್ಯನೂತನ; ಅರ್ಣವ – ಸಮುದ್ರ 'ಕವಿತಾಗುಣಾರ್ಣವ' ಪಂಪ ತನಗೆ ತಾನೇ ಕೊಟ್ಟುಕೊಂಡ ವಿಶೇಷಣ. ಸಂಸಾರಸಾರೋದಯ – ಸಂಸಾರದಲ್ಲಿ ಸಾರವಾದ ಧರ್ಮವನ್ನು ಹರಡುವುದರಿಂದ ತಾನು ಸಂಸಾರಸಾರೋದಯ ಎಂದು ವಿವರಣೆ.

೯. ತನ್ನ 'ಆದಿಪುರಾಣ'ದಲ್ಲಿ ನಿರೀಕ್ಷಿಸಬೇಕಾದದ್ದು ಎರಡನ್ನು: ಕಾವ್ಯಧರ್ಮ ಮತ್ತು ಧರ್ಮ. 'ಕಾವ್ಯಧರ್ಮ' ಪ್ರಾಯಶಃ ಅನುಭವದ ಮೂಲಕ ಸತ್ಯಶೋಧನೆ, ಮತ್ತು 'ಧರ್ಮ' ವ್ಯಕ್ತಿತ್ವವಿಕಾಸ ಕ್ರಮ – ಎಂದು ಅರ್ಥೈಸಿದರೆ, ಆದಿಪುರಾಣವು ವ್ಯಕ್ತಿಯ ಅನುಭವದ ಹಿನ್ನೆಲೆಯಲ್ಲಿ ಜೀವನಸಾರ್ಥಕ್ಯದ ಬಗೆಗೆ ಚಿಂತಿಸುವಂಥದು ಎಂಬುದು ಪಂಪನ ಆಶಯವಿರಬಹುದು.

೧೦. ಪ್ರೀಣನಕರ – ಸಂತೋಷದಾಯಕ; ಜಗತ್ತ್ರಯ – ಮೂರು ಲೋಕಗಳು

ವ ಲೋಕತ್ರಯ – ಅಧೋಲೋಕ, ಮಧ್ಯಮಲೋಕ ಮತ್ತು ಊರ್ಧ್ವಲೋಕಗಳು: ಮಂದರಾಚಲದ ತುದಿಯಿಂದ ಮೇಲ್ಭಾಗವು ಊರ್ಧ್ವಲೋಕವಾದರೆ, ಮಂದರಾಚಲದ ಮೂಲದ ಕೆಳಗಿನದು ಅಧೋಲೋಕ, ಅಸಂಖ್ಯಾತ ದ್ವೀಪಸಮುದ್ರ, ವ್ಯಂತರಾವಾಸಿ, ಜ್ಯೋತಿಷ್ಯ ವಿಮಾನ ಮುಂತಾದವುಗಳಿರುವುದು

ಮಧ್ಯಮಲೋಕ; ತಿರ್ಯಗ್ಲೋಕ – ತಿರ್ಯಕ್+ಲೋಕ, ಜೀವಿಗಳಿರುವ ಲೋಕ; ವಿಯಚ್ಚರ – ಖೇಚರ; ಕಂಠಿಕೆ – ಹಾರ, ಸರ, ಏಕಾವಳಿ; ರಾಜ್ಯಂಗೆಯ್ – ರಾಜ್ಯವನ್ನು ಆಳು

೧೧. ಕಳತ್ರ – ಹೆಂಡತಿ; ಮೆಟ್ಟಿಡು – ಮರುಳುತನ; ಅಂತಕ – ಯಮ; ಕಂಠಗ್ರಹಂಗೆಯ್ – ಕತ್ತು ಹಿಸುಕು

ವ. ಪಳಿತ – ನರೆಗೂದಲು; ನಿರ್ವೇಗ – ವೈರಾಗ್ಯ; ಗೇಯ – ಸಂಗೀತ; ಲಕ್ಕೆ – ಲಕ್ಷ; ಪುರ್ಬ – [ಪೂರ್ವ] ಒಂದು ಅತಿ ದೀರ್ಘ ಕಾಲಾವಧಿ [೮೪ ಲಕ್ಷವನ್ನು ೮೪ ಲಕ್ಷದಿಂದ ಗುಣಿಸಿದರೆ ಬರುವಷ್ಟು ವರ್ಷಗಳು]

೧೨. ಮುಸುಮುತ್ತು – ಮುದಿ ಕಪಿ; ಅಳ್ಳೆಜೊಳ್ಳೆತನ – ಸಾರವಿಹೀನತೆ; ಒಣರ್ – ಗಮನಿಸು; ಲಂಪಳಿಕೆ – ಲಾಂಪಟ್ಯ; ಜರಾ – ಮುಪ್ಪು

೧೩. ಸಂಸೃತಿವಾರಾಶಿ – ಸಂಸಾರವೆಂಬ ಸಮುದ್ರ; ಅತ್ಯಾಸನ್ನ – ಅತಿ+ಆಸನ್ನ, ತುಂಬ ಸಮೀಪ; ಭವ್ಯ – ಮೋಕ್ಷಕ್ಕೆ ಅರ್ಹತೆಯನ್ನು ಹೊಂದಿರುವ ಸಂಸಾರಿಯಾದ ಜೀವ; ಮಾಣ್– ತಡೆ

ವ. ಮುಟ್ಟಿನುಡಿ – ಮನಸ್ಸಿಗೆ ನಾಟುವಂತೆ ಹೇಳು; ವೀರಸಂಸ್ಥಾನಾರಾರೂಢನಾಗು – ಸಲ್ಲೇಖನ ವ್ರತಧಾರಿಯಾಗಿ ಮಲಗು; ಜಾತರೂಪ – ದಿಗಂಬರ ಜೈನ ಸನ್ಯಾಸ; ಚತುರ್ವಿಧಾಹಾರ – ಅನ್ನ, ಪಾನ, ಖಾದ್ಯ ಮತ್ತು ಲೇಹ್ಯಗಳೆಂಬ ದೇಹರಕ್ಷಣೆಯ ನಾಲ್ಕು ಬಗೆಯ ಪದಾರ್ಥಗಳು; ಪ್ರತ್ಯಾಖ್ಯಾನ – ಮುಂದೆ ದೋಷಗಳನ್ನು ಮಾಡದಿರುವ ಪ್ರತಿಜ್ಞೆ; ಪ್ರಾಯೋಪಗಮನ – ಮುನಿಗಳು ತಮ್ಮ ರೋಗಕ್ಕೆ ತಾವೂ ಚಿಕಿತ್ಸೆ ಮಾಡಿಕೊಳ್ಳದೆ, ಬೇರೆಯವರು ಮಾಡಲೂ ಅವಕಾಶವೀಯದೆ ಧ್ಯಾನದಲ್ಲಿ ಲೀನರಾಗಿ, ಅಚಲರಾಗಿ ಪ್ರಾಣತ್ಯಾಗ ಮಾಡುವುದು; ಈಶಾನಕಲ್ಪ – ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ, ಬ್ರಹ್ಮೋತ್ತರ, ಲಾಂತವ, ಕಾಪಿಷ್ಠ, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರ, ಆನತ, ಪ್ರಾಣತ, ಆರಣ, ಮತ್ತು ಅಚ್ಯುತಗಳೆಂಬ ಹದಿನಾರು ಸ್ವರ್ಗಗಳಲ್ಲಿ ಎರಡನೆಯದು; ಮಱಿಲುಂದು – ಗಾಢನಿದ್ರೆಗೊಳಗಾಗು; ಚೈತ್ಯಾಲಯ – ಬಸದಿ; ತಪ್ತತಪನೀಯ – ಕಾಸಿದ ಚಿನ್ನ; ಪಾರಾವಾರ – ಸಮುದ್ರ, ಬಹಳ ದೀರ್ಘ ಅವಧಿಯ ಕಾಲ; ಅತಿಕ್ರಾಂತೆ – ತೀರಿಹೋದವಳು

೧೪. ಅಭಿನವ – ಹೊಸತಾದ; ಆಸವ – ರಸ, ಮಕರಂದ; ಅಳ್ಕೆರ್ದೆ – ಮೃದುಹೃದಯ; ಬೇಂಟ – ಪ್ರಣಯ

೧೫. ದೇಸೆ – ಚೆಲುವು; ದಗುಂತಿ – ಅತಿಶಯತೆ; ಎಯ್ದೆವರ್ – ಸಮೀಪಿಸು

೧೬. ಅಷ್ಟಗುಣ – ಅಣಿಮಾ ಮಹಿಮಾ ಲಘಿಮಾ ಗರಿಮಾ ಪ್ರಾಪ್ತಿ ಪ್ರಾಕಾಮ್ಯ ಈಶಿತ್ವ ವಶಿತ್ವ ಎಂಬ ಎಂಟು ವಿಶೇಷ ಸಾಮರ್ಥ್ಯಗಳು; ಪ್ರಭೂತ – ಆಧಿಕ್ಯ; ಪ್ರೀಣಿತ – ಸಂತುಷ್ಟಿಗೊಂಡ; ಪ್ರಾರಬ್ಧ – ಪ್ರಾರಂಭಿಸಲ್ಪಟ್ಟ

ವ. ಪ್ರಮಿತ – ಮಿತಿಯ

೧೭. ಸೂಡಿದ – ಮುಡಿದುಕೊಂಡ; ನಮೇರು – ಹೂ; ಇರ್ಪೋಡು – ಬಾಡು;

ಇಳಿದಾಗು – ಕುಂದು; ಮಸುಳ್ – ಮಂಕಾಗು; ಅವಸಾನಕಾಲ – ಮರಣಕಾಲ

೧೮. ಪಿನದ್ಧ – ಕೆತ್ತಿದ; ಕೃತಾಂತ – ಯಮ; ನಿರ್ನೆರಂ – ನಿಷ್ಕಾರಣವಾಗಿ; ಬಾರಿಸು – ತಡೆಗಟ್ಟು

೧೯. ಅಂತ – ತುತ್ತ ತುದಿ; ಜಿಗಿಲ್ – ಮೆತ್ತಿಕೊ; ಕೆಮ್ಮನೆ – ಸುಮ್ಮನೆ; ಅಂತಕ – ಯಮ; ಬೂತು – ಭೂತ

ವ. ಮಿಥ್ಯಾಜ್ಞಾನಿ – ದೇವ, ಗುರು, ಶಾಸ್ತ್ರಗಳಲ್ಲಿ ನಂಬಿಕೆಯಿಲ್ಲದವನು; ತರಳತೆ – ಚಾಂಚಲ್ಯ; ಜಳಧರ – ಮೋಡ; ಪ್ರಾದುರ್ಭಾವ – ಗೋಚರ; ವಿಮಾನ – ದೇವತೆಗಳ ವಾಹನ; ಮಹತ್ತರ ದೇವಿಯರು – ಸಾಮಾನಿಕ ದೇವಿಯರು: ದೇವತೆಗಳಲ್ಲಿ ಕಂಡುಬರುವ ಇಂದ್ರಾದಿ ಹತ್ತು ಭೇದಗಳಲ್ಲಿ ಒಂದು ದೇವತಾವರ್ಗ – ಆಜ್ಞೆ, ಐಶ್ವರ್ಯ ಇವುಗಳನ್ನು ಬಿಟ್ಟು, ಸ್ಥಾನ ವೀರ್ಯ ಪರಿವಾರ ಭೋಗೋಪಭೋಗಾದಿಗಳಿಂದ ಇಂದ್ರರಿಗೆ ಸಮಾನರಾದವರು; ಬಾಯಟಿ – ಗೋಳಾಡು; ಮಱುಭವ – ಮುಂದಿನ ಜನ್ಮ; ಮನದೆಗೊಳ್ – ಮನಸ್ಸಿಗೆ ತಂದುಕೊ; ಗುರುಪಂಚಕ – ಪಂಚಪರಮೇಷ್ಠಿಗಳು: ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು; ಉತ್ಪನ್ನಶರೀರೆ – ಶರೀರ ತೊರೆದವಳು; ನಿಶಾಂತ – ರಾತ್ರಿಯ ಕೊನೆ, ಬೆಳಗಿನ ಜಾವ

೨೦. ಬದ್ಧರ್ – ಪ್ರೌಢರು; ಕೈದು – ಆಯುಧ; ಕೈಪಿಡಿ – ಕನ್ನಡಿ

ವ. ಕನ್ನೆಮಾಡ – ಅಂತಃಪುರ; ಓವರಿ – ಕೋಣೆ; ನಿಶಾವಸಾನಸಮಯ – ಬೆಳಗಿನ ಜಾವ; ಕೇವಳಜ್ಞಾನ – ಸರ್ವಜ್ಞತ್ವ, ಲೋಕಾಲೋಕಗಳಲ್ಲಿಯ ಹಾಗೂ ತ್ರಿಕಾಲಗಳಲ್ಲಿಯ ಸರ್ವವಸ್ತುಗಳ ಸಮಗ್ರ ಜ್ಞಾನ; ಪೂರ್ವಭವ – ಹಿಂದಿನ ಜನ್ಮ; ಬೆಚ್ಚನುಸಿರ್ – ಬಿಸಿಯುಸಿರು ಬಿಡು; ಮಹತ್ತರಿ – ವೃದ್ಧಸ್ತ್ರೀ; ಶಾಸನಂ ಬರೆ – ಶಾಶ್ವತವಾಗಿರು; ಪಟ – ಚಿತ್ರಪಟ; ಬಂಚಿಸು – ಮರೆಮಾಚು; ಅವಿನಾಣ – ಅಭಿಜ್ಞಾನ, ಗುರುತು; ಪಟ್ಟಸಾಲೆ – ಪಡಸಾಲೆ; ಸಿದ್ಧಶೇಷೆ – ನಿರ್ಮಾಲ್ಯ ಮುಂತಾದ ಪೂಜಿಸಿದ ವಸ್ತುಗಳು; ತುರಿಪ – ತ್ವರಿತ; ಕರಕಾಂಬು – ಕರ್ಪೂರಮಿಶ್ರಿತ ತಣ್ಣೀರು; ಮದೀಯ – ನನ್ನ; ವ್ಯತಿಕರ – ವೃತ್ತಾಂತ

೨೧. ಸಹಕಾರತರು – ಮಾವಿನ ಮರ; ಪೂಗ – ಅಡಕೆ

ವ. ಪಾಣಿಗ್ರಹಣ – ಮದುವೆ; ರಯ್ಯ – ರಮ್ಯ, ಸೊಗಸು

೨೨. ದಿವಿಜಭೋಗ – ದೇವಭೋಗ; ಜಾತಿಸ್ಮರ – ಹಿಂದಿನ ಜನ್ಮದ ನೆನಪು; ಮರ್ತ್ಯಭೋಗ – ಇಹಲೋಕದ ಭೋಗ; ನೋನ್ – ವ್ರತಮಾಡು, ಹರಕೆ ಹೊರು; ಪುಂಜಿಸು – ಕೂಡಿಹಾಕು, ಸಂಚಯಿಸು

ವ. ಸರೋಜಷಂಡ – ಸರೋವರ; ಅಪವರ್ಗ – ಮೋಕ್ಷ; ನಿರ್ಧೂತ – ಹೊಡೆದೋಡಿಸಿದ; ಗಗನಚಾರಣ – ಆಕಾಶದಲ್ಲಿ ಸಂಚರಿಸುವ ಋಷಿದ್ವಯ; ಕಾಂತಾರಚರ್ಯಾ – ಕಾಡಿನಲ್ಲಿ ಸಿಕ್ಕಿದುದನ್ನು ಮಾತ್ರ ತಿನ್ನುವ ವ್ರತವುಳ್ಳ ಯತಿಗಳು; ಬದ್ಧಾಂಜಲಿಪುಟಘಟಿತನಿಟಿಲ – ಮುಗಿದ ಕೈಗಳನ್ನು ಹಣೆಯ ಮೇಲೆ ಇರಿಸಿಕೊಂಡವನು

೨೩. ದಾನ – ಶ್ರಾವಕರ ಷಟ್ಕರ್ಮಗಳಲ್ಲಿ ಒಂದು: ರತ್ನತ್ರಯಗಳಿಂದ ಕೂಡಿದ ಜೀವಿಗಳಿಗೆ ಐಶ್ವರ್ಯವನ್ನು ನೀಡುವುದೇ ದಾನ, ಇದರಲ್ಲಿ ಆಹಾರ, ಔಷಧ, ಅಭಯ ಹಾಗೂ ಶಾಸ್ತ್ರಗಳೆಂಬ ನಾಲ್ಕು ಬಗೆಗಳಿವೆ

೨೪. ಕ್ಷಿತಿಚಕ್ರ – ಭೂಮಂಡಲ; ಆರ್ಹಂತ್ಯ – ಅರ್ಹಂತನಾಗುವ ಸ್ಥಿತಿ; ಅನ್ವಿತದಾನ – ದಾನಮಾಡಿದವನು

ವ. ರಜನೀ – ರಾತ್ರಿ; ತಮಸ್ತಮ – ಕಗ್ಗತ್ತಲು; ಪಯಃಪಯೋಧಿ – ಹಾಲ್ಗಡಲು; ಫೇನ – ನೊರೆ; ಗವಾಕ್ಷ – ಗಾಳಿ–ಬೆಳಕುಗಳು ಬರಲು ಕೋಣೆಯ ಮೇಲ್ಭಾವಣಿಯಲ್ಲಿ ಇರುತ್ತಿದ್ದ ಕಿಂಡಿ; ಸೆಜ್ಜೆವಳ – ಮಲಗುವ ಮನೆಯ ಉಸ್ತುವಾರಿ ನೋಡಿಕೊಳ್ಳುವವನು; ಕೇಶಸಂಸ್ಕಾರ – ತಲೆಗೂದಲನ್ನು ಒಣಗಿಸಿಕೊಳ್ಳುವುದು

೨೫. ಪರಪು – ಹರಡುವಿಕೆ, ಹರಹು; ನಿರುದ್ಧೋಚ್ಛ್ವಾಸ – ನಿರುದ್ಧ+ಉಚ್ಛ್ವಾಸ, ಉಸಿರುಗಟ್ಟುವಿಕೆ; ಕೃಷ್ಣಾಗರು – ಕಪ್ಪನೆಯ ಅಗರು, ಧೂಪ

೨೬. ಪ್ರಾಣವಲ್ಲಭ – ಪ್ರಾಣಕ್ಕೆ ಒಡೆಯ, ಅತ್ಯಂತ ಆತ್ಮೀಯ; ಒಡಗಳೆ – ಒಡನೆ ಕಳೆ, ಜೊತೆಯಲ್ಲಿ ಬಿಡು; ಸಯ್ಪು – ಪುಣ್ಯ

ವ. ಪಂಚತ್ವ – ಸಾವು; ತಿರಿಕ – ಪ್ರಾಣಿ; ಭೋಗಭೂಮಿ – ಭೂಮಿಯ ಮೇಲೆಯೇ ಇರುವುದುದೆಂದು ಹೇಳಲಾದ, ಪುಣ್ಯವಂತರು ಹುಟ್ಟುವ ಸ್ಥಳ, ಇಲ್ಲಿ ರೋಗರುಜಿನಾದಿಗಳಿರುವುದಿಲ್ಲ; ಬದರೀಫಲ – ಎಲಚಿಹಣ್ಣು; ತ್ರಿಪಲ್ಯೋಪಮ – ಮೂರು ಪಲ್ಯಗಳಷ್ಟು ದೀರ್ಘ ಕಾಲ, ಪಲ್ಯ ಎಂಬುದು ಅಪರಿಮಿತ ಕಾಲಕ್ಕಿರುವ ಹೆಸರು

೨೭. ತವದ – [√ತವು] ಮುಗಿಯದ; ಕೂಟ – ಸಹವಾಸ, ಸೇರುವಿಕೆ; ತಡಮಾಡು – ಬೆರೆ, ಸೇರು; ಪಳಂಚಲೆ – ಮುಟ್ಟು, ತಲುಪು

೨೮. ದೊರೆ – ಸಮಾನ, ಅಂತಹ; ಪಾತ್ರದಾನ – ಮಹಾವ್ರತಿಯಾದ ಮುನಿಗೆ, ಸಮ್ಯಕ್ತ್ವಸಂಪನ್ನರಿಗೆ ರತ್ನತ್ರಯಗಳ ಆರಾಧಕರಿಗೆ ಕೊಡುವ ದಾನ

ವ. ಅಸ್ಖಲಿತ – ಚ್ಯುತಿಯಿಲ್ಲದ; ಪತ್ತುವಿಡು – ತೊರೆ, ಬಿಟ್ಟುಬಿಡು; ಪರಿಚ್ಯುತ – ಕೆಳಗೆ ಬೀಳು; ಪ್ರವ್ರಜ್ಯ – [ಸಂಚಾರ ಮಾಡುವ] ಸನ್ಯಾಸದೀಕ್ಷೆ; ಪ್ರತೀಂದ್ರ – ಇಂದ್ರನಂತೆಯೇ ಆಯುಷ್ಯ, ಐಶ್ವರ್ಯ, ಪರಿವಾರ, ಆಜ್ಞೆ ಮುಂತಾದವುಗಳಿರುವ ದೇವರು; ವಣಿಗ್ವಂಶಾಗ್ರಣಿ – ವಣಿಕ್+ವಂಶಾಗ್ರಣಿ, ವರ್ತಕವಂಶಶ್ರೇಷ್ಠ; ಕೇಶಪಾಶಮಂ ಪಜೆ – ಲೋಚು ಮಾಡಿಕೊಂಡು ಸನ್ಯಾಸ ಸ್ವೀಕರಿಸು

೨೯. ಷಟ್ಖಂಡ – ಆರು ಭೂಭಾಗಗಳು, ಹಿಮವತ್ಪರ್ವತದ ದಕ್ಷಿಣದಲ್ಲಿ ಲವಣಸಮುದ್ರದವರೆಗೂ ವ್ಯಾಪಿಸಿರುವುದು ಭರತಕ್ಷೇತ್ರ. ಇದರ ನಡುವೆ ವಿಜಯಾರ್ಧಪರ್ವತದ ಪೂರ್ವಪಶ್ಚಿಮವಾಗಿ ಹಬ್ಬಿ ಈ ಕ್ಷೇತ್ರವನ್ನು ಉತ್ತರ ಭರತ, ದಕ್ಷಿಣ ಭರತ ಎಂದು ಎರಡಾಗಿ ಒಡೆಯುತ್ತದೆ. ಹಿಮವತ್ಪರ್ವತದಲ್ಲಿ ಹುಟ್ಟಿದ ಮಹಾಸಿಂಧು ಮಹಾಗಂಗಾ ಎಂಬೆರಡು ನದಿಗಳು ಉತ್ತರದಿಂದ ದಕ್ಷಿಣಕ್ಕೆ ಹರಿದು ಲವಣ ಸಮುದ್ರವನ್ನು ಸೇರುತ್ತವೆ, ವಿಜಯಾರ್ಧಪರ್ವತ ಮತ್ತು

ಗಂಗಾಸಿಂಧೂ ನದಿಗಳಿಂದ ಭರತಕ್ಷೇತ್ರ ಆರು ಖಂಡಗಳಾಗಿ ಭಾಗವಾಗಿದೆ. ಉತ್ತರ ಭರತಕ್ಷೇತ್ರದ ಮೂರು ಖಂಡಗಳ ನಡುವೆ ಆರ್ಯಖಂಡವಿವೆ, ಈ ಎರಡೂ ಕ್ಷೇತ್ರದ ಖಂಡಗಳು ಕೂಡಿ ಷಟ್ಖಂಡವೆನಿಸಿವೆ; ಅಚ್ಚಿಗ – ವ್ಯಥೆ; ಗಾಂಪು – ಮೂರ್ಖತನ; ತಣ್ಮಲೆ – ಆಸಕ್ತವಾಗು

ವ. ನಿಜದ ರೂಪು – ದಿಗಂಬರತ್ವ; ದ್ವಾದಶಾನುಪ್ರೇಕ್ಷೆ – ಮುನಿಗಳು ಧ್ಯಾನಮಾಡಬೇಕಾದ ಅನಿತ್ಯ, ಅಶರಣ, ಸಂಸಾರ, ಏಕತಾ, ಅಶುಚಿತ್ವ, ಆಸ್ರವ, ಸಂವರ, ನಿರ್ಜರಾ, ಲೋಕ, ಬೋಧಿದುರ್ಲಭ ಮತ್ತು ಧರ್ಮ ಎಂಬ ಹನ್ನೆರಡು ತತ್ವಗಳು; ಶುಕ್ಲಧ್ಯಾನ – ಪರಿಶುದ್ಧವಾದ ಆತ್ಮಜ್ಞಾನ: ಪೃಥಕ್ತ್ವವಿತರ್ಕವಿಚಾರ, ಏಕತ್ವವಿತರ್ಕವಿಚಾರ, ಸೂಕ್ಷ್ಮಕ್ರಿಯಾ ಪ್ರತಿಪಾತಿ, ವ್ಯುಪರತ ಕ್ರಿಯಾನಿವೃತ್ತಿ ಎಂಬ ನಾಲ್ಕು ಬಗೆಯ ಶುಕ್ಲಧ್ಯಾನಗಳು; ಸಮಾಹಿತನಾಗು – ತನ್ಮಯನಾಗು; ಉಪಶಾಂತ ಗುಣಸ್ಥಾನ – ಮೋಹನೀಯ ಗುಣವು ಉಪಶಾಂತವಾದಾಗ ದೊರೆಯುವ ಹನ್ನೊಂದನೆಯ ಗುಣಸ್ಥಾನ: ಇದರಲ್ಲಿ ಎಲ್ಲ ಕಷಾಯಗಳೂ ಕೊನೆಗೊಳ್ಳುತ್ತವೆ, ಸಮ್ಯಗ್ದರ್ಶನದ ಅಪೇಕ್ಷೆಯಿಂದ ಔಪಶಮಿಕ ಮತ್ತು ಕ್ಷಾಯಿಕ ಎಂಬೆರಡು ಭಾವಗಳಿರುತ್ತವೆ; ಸರ್ವಾರ್ಥಸಿದ್ಧಿ – ಪಂಚಾಣೂತ್ತರ ವಿಮಾನಗಳಲ್ಲಿ ತುತ್ತತುದಿಯದು

* * * * * * *

ಆದಿತೀರ್ಥಂಕರ ಚರಿತಂ – ಧರ್ಮಚಕ್ರವರ್ತಿತ್ವಂ

ವ. ನಾಭಿ – ಹೊಕ್ಕುಳು, ಕೇಂದ್ರ ಬಿಂದು; ಅವಸರ್ಪಿಣಿ – ಒಂದು ಕಲ್ಪವು ಅವಸರ್ಪಿಣೀ, ಉತ್ಸರ್ಪಿಣಿ ಎಂಬ ಎರಡು ಭಾಗಗಳಿಂದ ಕೂಡಿರುತ್ತದೆ, ಅವಸರ್ಪಿಣಿಯೆಂದರೆ ಧರ್ಮ, ಸತ್ಯ, ನ್ಯಾಯ, ಆಯುಸ್ಸು, ಬಲ, ಸುಖ ಮುಂತಾದುವು ಕ್ರಮವಾಗಿ ಕಡಿಮೆಯಾಗುತ್ತ ಅಧರ್ಮ ಅನ್ಯಾಯಾದಿಗಳೇ ತುಂಬಿಕೊಳ್ಳುವ ಕಾಲ; ಇದರಲ್ಲಿ ಸುಷಮಾ–ಸುಷಮಾ, ಸುಷಮಾ, ಸುಷಮಾ–ದುಷಮಾ, ಸುಷ್ಷಮಾ–ಸುಷಮಾ, ದುಷ್ಷಮಾ ಮತ್ತು ದುಷ್ಷಮಾ–ದುಷ್ಷಮಾ ಅಥವಾ ಅತಿ ದುಷ್ಷಮಾ ಎಂಬ ಆರು ಭೇದಳು; ಇವೆಲ್ಲದರ ಒಟ್ಟ ಅವಧಿ ೧ ಸಾಗರೋಪಮ ಕೋಟಿ ಕೋಟಿ ವರ್ಷಗಳು; ಜಘನ್ಯ – ಕನಿಷ್ಠ;

೧. ಬಗೆ – ಆಲೋಚನೆ; ತೊಟ್ಟಗೆ – ತಕ್ಷಣ, ಬೇಗ; ಪಾರ್ಥಿವ – ರಾಜ ಮತ್ತು ವೃಕ್ಷ; ಕಲ್ಪಪಾರ್ಥಿವ – ಕಲ್ಪವೃಕ್ಷ

೨. ಮರವಡು – ಶಕ್ತಿಗುಂದು; ಮರವಾನಸ – ಮರ ಎಂಬ ಮಾನವ, ಮರದಿಂದ ಮಾಡಿದ ಮಾನವಾಕೃತಿ; ಚಾಗ – ದಾನ

ವ. ಬೆಗಡುಗೊಳ್ – ಭಯಪಡು; ಅಗ್ರಿಮ ಕುಲಧರ – ಮೊದಲನೆಯ ಮನು; ಕೋಟ್ಮಸಗು – ಹಿಂಸಿಸು; ಅಳವಡಿಸು – ಹತೋಟಿಯಲ್ಲಿರಿಸಿಕೊ; ಪಾಪಸತ್ವ – ಹಿಂಸಕ ಪ್ರಾಣಿ; ಲಕುಟ – ದೊಣ್ಣೆ; ಯಷ್ಟಿ – ಕೋಲು; ರಕ್ಷಾವಿಧಿ – ಕಾಪಾಡಿಕೊಳ್ಳುವ ವಿಧಾನ; ಸೀಮೆ – ಎಲ್ಲೆ, ಪ್ರದೇಶದ ಮೇರೆ; ಸೀಮಾವಿಪ್ರಪತ್ತಿ – ಗಡಿವಿವಾದ; ಕರಿ – ಆನೆ; ಹರಿ – ಕುದುರೆ; ಸುತಮುಖ ಆಲೋಕನಮತಿವಿಸ್ಮಯಮಾಗು – ಆ ಕಾಲದವರೆಗೆ ಮಕ್ಕಳು ಹುಟ್ಟಿದೊಡನೆಯೇ ತಂದೆ ತಾಯಿಗಳು ಸಾಯುತ್ತಿದ್ದರು, ಹೀಗಾಗಿ ತಮ್ಮ ಮಕ್ಕಳನ್ನು ಕಾಣುವ ಅದೃಷ್ಟ ಅವರಿಗಿರಲಿಲ್ಲ; ಪೆಸರಿಲ್ಲದಾರ್ಯರ್ – ವ್ಯಕ್ತಿನಾಮಗಳಿರದೆ ಎಲ್ಲರನ್ನೂ ಒಟ್ಟಿಗೇ ಆರ್ಯ ಎಂಬ ಶಬ್ದದಿಂದ ಗುರುತಿಸಲಾಗುತ್ತಿತ್ತು, ಇದರಿಂದ ವ್ಯವಹಾರ ಕಷ್ಟವೆಂದು ವ್ಯಕ್ತಿಗಳಿಗೆ ಹೆಸರಿಡುವ ಬಳಕೆ ಬಂತು; ಕಂಜಪ್ರಿಯ – ಸೂರ್ಯ; ಕುಮುದಬಂಧು – ಚಂದ್ರ; ಅಂಜಲಿಂ – 'ಅಂಜದಿರಿ'; ನಿಜೆಸು – ಸಂತೈಸು; ಅಸಂಖ್ಯೇಯ – ಲೆಕ್ಕವಿಲ್ಲದಷ್ಟು

೩. ತುಱುಗು – ಆವರಿಸು; ತೆವರ್ – ದಿಣ್ಣೆ; ಮೊಱಡು – ದಿಬ್ಬ; ಉದ್ದಬಿದ್ದಮಾಗು – ಅಸ್ತವ್ಯಸ್ತವಾಗು

ವ. ಸೋಪಾನಪದ್ಧತಿ – ಮೆಟ್ಟಿಲುಗಳ ವಿಧಾನ; ಆರೋಹಣ – ಏರುವುದು; ದ್ರೋಣೀಯಾನಪಾತ್ರ – ದೋಣಿ ಮತ್ತು ತೆಪ್ಪ; ಉತ್ತರ – ದಾಟುವಿಕೆ

೪. ಕರ್ಮಭೂಮಿ – ಅವಸರ್ಪಿಣಿ ಕಾಲದ ಆರು ವಿಭಾಗಗಳಲ್ಲಿ ಐದು ಮತ್ತು ಆರನೆಯ ವಿಭಾಗಗಳಿಗೆ ಸಂಬಂಧಪಟ್ಟ ಭೂಮಿ, ಶುಭ ಮತ್ತು ಅಶುಭ ಕರ್ಮಗಳಿಗೆ ಆಶ್ರಯವಾಗಿರುವುದರಿಂದ ಅದು ಕರ್ಮಭೂಮಿ; ಅಂದಂ ಪೊದಲ್ – ಅಂದಗೆಡು

ವ. ಮನ್ವಂತರ – ಮನುವಿನ ಕಾಲಾವಧಿ; ವ್ಯತಿಕರಣ – ಸಂಕ್ರಮಣ, ಕೂಡುವ ವೇಳೆ

೫. ಜರಾಯುಪಟಲ – ಗರ್ಭಕೋಶದ ಪೊರೆ; ಅಗಲ್ಚು – ಬೇರ್ಪಡಿಸು

ವ. ಅತಿಕ್ರಮ – ಕೊನೆಗೊಳ್ಳುವಿಕೆ

೬. ನಾಭಿ – ಕೇಂದ್ರಸ್ಥಾನ

ವ. ಪಯೋಧರ – ಮೋಡ

೭. ಮೇಘಧ್ವನಿ – ಗುಡುಗು; ಪುಷ್ಕರಧ್ವನಿ – ನಗಾರಿಯ ಧ್ವನಿ; ಲಸತ್ತಾರಾಳಿ – ಲಸತ್+ತಾರಾಳಿ, ಪ್ರಕಾಶಮಾನವಾದ ನಕ್ಷತ್ರಸಮೂಹ; ಅಂಬುದ – ಮೋಡ; ಯವನಿಕಾ – ತೆರೆ, ಪರದೆ; ಆಡು – ಕುಣಿ; ವಿಯದ್ರಂಗ – ವಿಯತ್+ರಂಗ, ಆಕಾಶವೆಂಬ ರಂಗಸ್ಥಳ; ವಿದ್ಯುತ್ – ಮಿಂಚು

ವ. ಪದವಟಿ – ಹದವಾಗಿ ಬಿದ್ದ ಮಳೆ; ಕಳಮ – ಬತ್ತ; ಷಷ್ಟಿಕಾ – ಅರುವತ್ತು ದಿನಗಳಿಗೆ ಬೆಳೆ ಬರುವ ಬತ್ತ; ವ್ರೀಹಿ – ಒಂದು ಬಗೆಯ ಬತ್ತ; ಯಾವನಾಳ – ಜೋಳ; ಗೋಧೂಮ – ಗೋಧಿ, ಕಂಗು – ನವಣೆ; ಶ್ಯಾಮಕ – ಸಾವೆ; ಕೋದ್ರವ – ಬರಗು; ನೀವಾರ – ಕಾಡು ನೆಲ್ಲು; ತಿಲ – ಎಳ್ಳು; ಅತಸಿ – ಅಗಸೆ; ಮಸೂರಿಕಾ – ಕಡಲೆ; ಕುಳತ್ಥ – ಹುರುಳಿ; ಮುದ್ಗ –ಹೆಸರು; ಮಾಷ – ಉದ್ದು; ರಾಜಮಾಷ – ತುಡುಗುಣಿ; ಆಢಕೀ – ತೊಗರಿ; ನಿಷ್ಪಾವ – ಅವರೆ; ಚಣಕ – ಕಡಲೆ; ಕುಸುಂಭ – ಕುಸುಬೆ; ಕಾರ್ಪಾಸ – ಹತ್ತಿ; ಸರ್ಷಪ – ಸಾಸಿವೆ; ಮರೀಚ – ಮೆಣಸು; ಧಾನ್ಯಕ – ಕೊತ್ತುಂಬರಿ; ಪರಿಕ್ಷಯ – ಕ್ಷೀಣಾವಸ್ಥೆ; ಅಕೃಷ್ಟಪಚ್ಯ – ಬೇಸಾಯ ಮಾಡದೆ ತಮಗೆ ತಾವೇ ಬೆಳೆದ ಆಹಾರಧಾನ್ಯ

೮. ಬಗೆಯಲ್ವೇಡ – ಚಿಂತಿಸದಿರಿ; ಸುಧಾ ಮಹೀರುಹ – ಕಲ್ಪವೃಕ್ಷ; ವೀರ್ಯ – ಸಾಮರ್ಥ್ಯ; ಪಕ್ವ – ಮಾಗಿದ; ಆಮ್ರ – ಮಾವು; ಭೂಜ – ಮರ; ಭೋಜ್ಯ – ತಿನ್ನಬಹುದಾದುದು; ಆರೋಗ್ಯಹೇತು – ಆರೋಗ್ಯಕರ

ವ. ಪದನಜಿ – ಹದವನ್ನು ತಿಳಿ; ಉಡುಗು – ಸ್ವಚ್ಛಮಾಡು; ಒಕ್ಕು – ಸಸ್ಯದಿಂದ ಧಾನ್ಯ ಬೇರ್ಪಡಿಸು; ಅಡಕು – ಸಂಗ್ರಹಿಸು, ಬಯ್ತಿಡು – ಮುಚ್ಚಿಡು; ಭಾಜನ – ಪಾತ್ರೆ; ಘೃತ – ತುಪ್ಪ; ಲವಣ – ಉಪ್ಪು; ತೈಲ – ಎಣ್ಣೆ; ಕ್ಷೀರ – ಹಾಲು; ದಧಿ – ಮೊಸರು; ವ್ಯಂಜನ – ಬಾಡಿಸಿಕೊಳ್ಳವ ಸಾಮಗ್ರಿ; ಪುಂಡ್ರೇಕ್ಷುದಂಡ – ಪಟ್ಟೆ ಕಬ್ಬಿನ ಜಲ್ಲೆ; ಯಂತ್ರಪೀಡನೆ – ಯಂತ್ರಗಳಲ್ಲಿ ಹಿಂಡುವುದು

೯. ವ್ಯಪಾಯ – ಅದೃಶ್ಯವಾಗುವಿಕೆ, ನಿರ್ಗಮನ; ನಿಜಿಸು – ನೆಲೆಗೊಳಿಸು

ವ. ನಿಳಿಂಪ – ದೇವತೆ; ಆಹೂತ – ಆಹ್ವಾನಿತ; ಪುರುಹೂತ – ಇಂದ್ರ

೧೦. ಫಣಿಲೋಕ – ನಾಗಲೋಕ; ಭಾಸ್ವದ – ಉಜ್ವಲವಾದ; ಸಮೆ – ನಿರ್ಮಿಸು; ಪುರಂದರ – ಇಂದ್ರ

ವ. ಅಯೋಧ್ಯೆ – [ಶತ್ರುಗಳಿಂದ] ಜಯಿಸಲಾಗದ್ದು; ಆಜ್ಞಾಕರಣ – ಆಜ್ಞಾಪಾಲಕ; ನಿಯೋಜಿಸು – ಮಾಡು; ದಿವಿಜಕುಜಜನಿತ – ಕಲ್ಪವೃಕ್ಷಗಳಿಂದ ದೊರಕಿದ [ಭೋಗಭೂಮಿಯ ಮದ್ಯ, ಭೂಷಣ, ವಸ್ತ್ರ, ಆತೋದ್ಯ, ಸ್ರಗ್ಭವನ, ಭಾಜನ, ಅಶನ, ದೀಪ, ಪ್ರೋದ್ಯತ್, ಜ್ಯೋತಿಸ್ಥಿತಿ ಎಂಬ ಹತ್ತುಕಲ್ಪವೃಕ್ಷಗಳು ವಸನ – ವಸ್ತ್ರ; ಪ್ರಸವ – ಹೂ; ವಿಲೇಪನ – ಸುಗಂಧದ್ರವ್ಯ

೧೧. ಅಭಿಷವಣ – ಅಭಿಷೇಕ; ನಂದನ – ಮಗ

೧೨. ಲಯ – ವಿನಾಶ; ಪೀನ – ಅತಿಯಾದ

೧೩. ನಿಪ್ಪೊಸತು – ಹೊಚ್ಚ ಹೊಸತು; ಕೇತು – ಧ್ವಜ

ವ. ಚರಮ – ಕೊನೆಯ; ಅವಧಿ – ಕಾಲದೇಶಗಳು ಎಷ್ಟೇ ದೂರವಾಗಿದ್ದರೂ ಅಲ್ಲಿನ ವಿಷಯಗಳನ್ನು ತಿಳಿಯಬಹುದಾದ ಅವಧಿಜ್ಞಾನ: ಕುಮತಿ ಕುಶ್ರುತ ವಿಭಂಗ ಮತಿ ಶ್ರುತ ಅವಧಿ ಮನಃಪರ್ಯಾಯ ಮತ್ತು ಕೇವಲ ಎಂಬ ಎಂಟು ಬಗೆಯ ಜ್ಞಾನಗಳಲ್ಲಿ ಒಂದು; ಅಱುದಿಂಗಳ್ – ಆರು ತಿಂಗಳು

೧೪. ವಸುಧಾರೆ –ಚಿನ್ನದ ಮಳೆ; ಧನದ – ಕುಬೇರ

೧೫. ಗರ್ಭಶೋಧನ – ಇಂದ್ರನು ಕಳುಹಿಸುವ ದೇವವನಿತೆಯರು ಹುಟ್ಟಲಿರುವ ತೀರ್ಥಂಕರನಿಗೆ ಕರ್ಮಮಲಗಳ ಲೇಪವಾಗದಂತೆ ಮಾಡುವ ಜಿನಮಾತೆಯ ಗರ್ಭ ಶುದ್ಧೀಕರಣ; ಅಂಗಚ್ಛಾಯೆ – ದೇಹಕಾಂತಿ; ಪಳಿಕು – ಸ್ಫಟಿಕ

೧೬. ಹಿರಣ್ಯಗರ್ಭ – ಬ್ರಹ್ಮ, ಜಿನ; ಗರ್ಭಾವತರಣ – ತೀರ್ಥಂಕರರಿಗೆ ಸಂಬಂಧಿಸಿದ ಗರ್ಭಾವತರಣ, ಜನ್ಮ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿನಿರ್ವಾಣವೆಂಬ ಐದು ಕಲ್ಯಾಣಗಳ ಆಚರಣೆಗಾಗಿ ಇಂದ್ರಾದಿಗಳು ನಡೆಸುವ ಉತ್ಸವಗಳಲ್ಲಿ ಮೊದಲನೆಯದು, ಜಿನಮಾತೆಯ ಗರ್ಭದಲ್ಲಿ ತೀರ್ಥಂಕರನಾಗಲಿರುವ ಜೀವನು ಸ್ವರ್ಗದಿಂದ ಬಂದು ಅವತರಿಸಿದಾಗ ಇಂದ್ರಾದಿಗಳು ಮಾತಾಪಿತೃಗಳಿಗೆ ಮಂಗಳಾಭಿಷೇಕ ಮಾಡಿ ಆಚರಿಸುವ ಉತ್ಸವ

ವ. ಚತುರ್ಥಸ್ನಾನ – ಮುಟ್ಟಾದವಳು ನಾಲ್ಕನೆಯ ದಿನ ಮಾಡುವ ಮಂಗಳಸ್ನಾನ

೧೭. [ರಗಳೆ] ಪಚ್ಚ – ಮೇಲುಹಾಸಿಗೆ, ವಸ್ತ್ರ; ವಿಶದೀಕೃತ – ಸ್ವಚ್ಛವಾದ; ಪರಿಖಂಡಿತ – ತೊಡೆದುಹಾಕಲ್ಪಟ್ಟ; ಈರೆಂಟು – ಹದಿನಾರು; ವೃಷನಾಥ – ಗೂಳಿ; ಸಿಂಧುರಾರಾತಿ ಮದ್ದಾನೆಯ ಶತ್ರುವಾದ ಸಿಂಹ; ಸರಸಿರುಹನಿಳಯೆ – ಲಕ್ಷ್ಮಿ; ಹಿಮಕಿರಣ – ಚಂದ್ರ; ಅಬ್ಜಿನೀಷಂಡ – ಕಮಲಗಳ ಸಮೂಹ; ತರುಣಮಾರ್ತಂಡ – ಬಾಲಸೂರ್ಯ; ಎಳೆವಾಳೆ – ಎಳೆಯ ಮೀನು; ಪದ್ಮಿನೀನಿಳಯ – ಕೊಳ; ವಾರಾಶಿ – ಸಮುದ್ರ; ಕಂಠೀರವಾಸಂದಿ – ಸಿಂಹಾಸನ; ಫಣಿಗೇಹ – ಹುತ್ತ

೧೮. ಉಪ್ಪವಡಿಸು – ನಿದ್ದೆಯಿಂದ ಎಚ್ಚರಗೊಳ್ಳು; ನಿರ್ವರ್ತಿಸು – ಮಾಡಿ ಪೂರೈಸು

೧೯. ದಿವ – ಸ್ವರ್ಗ; ಗುಣಾಕರ – ಸದ್ಗುಣಗಳ ನೆಲೆವನೆ

ವ. ನಿರ್ವಭಿಸು – ವಿವರಿಸು, ಅರ್ಥಹೇಳು; ಸಂಕ್ರಮಿಸು – ಸೇರು, ಬಂದು ಕೂಡು; ಚತುರ್ನಿಕಾಯಾಮರರ್ – ಭುವನ, ವನ, ಜ್ಯೋತಿ ಮತ್ತು ಕಲ್ಪಗಳೆಂಬ ನಾಲ್ಕು ಬಗೆಯ ದೇವತೆಗಳು; ಪ್ರಥಮಕಲ್ಯಾಣ – ಪಂಚಕಲ್ಯಾಣಗಳಲ್ಲಿ ಮೊದಲನೆಯದಾದ ಗರ್ಭಾವತರಣ ಕಲ್ಯಾಣ

೨೦. ಕೃಶಾನು – ಬೆಂಕಿ; ಉರದಂತೆ – ಸುಡದ ರೀತಿ

೨೧. ಅಱಿವು – ಜ್ಞಾನ

೨೨. ವಾಸರ – ದಿವಸ; ಶುಭದಂ – ಮಂಗಳಕರವಾದ; ಭಾಸ್ವತ್ – ಕಾಂತಿಯುಕ್ತ; ಭವ್ಯಪದ್ಮಾಕರಬೋಧಾದಾಯಿ – ಭವ್ಯರೆಂಬ ತಾವರೆಗೊಳಕ್ಕೆ ಜ್ಞಾನವೀಯುವವನು [ಅರಳಿಸುವವನು]; ತಿಗ್ಮಕರ – ಸೂರ್ಯ

೨೩. ತ್ರಿದಶ – ದೇವತೆ; ಕರಾಸ್ಫಾಳನ – ಕೈಯಿಂದ ಹೊಡೆ; ಕಲ್ಪದ್ರುಮ – ಕಲ್ಪವೃಕ್ಷ; ಅವನತಿ – ಬಾಗುವಿಕೆ; ತ್ರೈಲೋಕ – ಮೂರು ಲೋಕ

೨೪. ವಾಸವ – ಇಂದ್ರ; ಆಸನಕಂಪ – ತೀರ್ಥಂಕರರ ಜನನವೇ ಮುಂತಾದ ವಿಶೇಷ ಸಂದರ್ಭಗಳಲ್ಲಿ ದೇವೇಂದ್ರನಿಗೆ ಉಂಟಾಗುವ ಪೀಠದ ಅಲುಗಾಟ; ಸೂೞ್ – ಬಾರಿ; ಪೊಡೆವಡು – ನಮಸ್ಕರಿಸು

೨೫. ದೇವೇಂದ್ರರೆಲ್ಲಂ – ದೇವೇಂದ್ರರ ಸಮೂಹ: ಹದಿನಾರು ಬಗೆಯ ಸ್ವರ್ಗಗಳ ಇಂದ್ರರು; ಸ್ಕಂಧಗತ – [ಆನೆಯ] ಹೆಗಲೇರಿದವನು; ದೇವತೂರ್ಯಾನುಗ – ದೇವದುಂದುಭಿಗಳ ಶಬ್ದಕ್ಕನುಗುಣ; ಸಮುಪಹಿತ – ನೆಲೆಗೊಳಿಸಿದ; ಸೌಧರ್ಮೇಂದ್ರ – ಸೌಧರ್ಮ ಎಂಬ ಸ್ವರ್ಗಲೋಕದ ಅಧಿಪತಿ

ವ. ರಾಜಗೇಹ – ಅರಮನೆ; ತಿರೋಹಿತಶರೀರೆ – ಅದೃಶ್ಯೆ; ಪ್ರಸೂತಿಗೃಹ – ಹೆರಿಗೆಯ ಮನೆ; ಮೂಮೆ – ಮೂರು ಬಾರಿ; ಬಲಗೊಳ್ – ಪ್ರದಕ್ಷಿಣೆ ಹಾಕು

೨೬. ಎರ್ದೆಯೆಱಕ – ಮನದುಂಬಿದ ಪ್ರೀತಿ; ಮಾಯಾನಿದ್ರೆ – ಕೃತಕನಿದ್ರೆ; ಮಾಯಾಶಿಶು – ಜಿನಶಿಶುವಿಗೆ ಅಭಿಷೇಕ ಮಾಡಲು ತೆಗೆದುಕೊಂಡು ಹೋಗುವುದರಿಂದ ತಾಯಿಯ ಪಕ್ಕದಲ್ಲಿ ಅವಳಿಗೆ ತಿಳಿಯದಂತೆ ದೇವತೆಗಳು ಇರಿಸುವ ಕೃತಕ ಶಿಶು

೨೭. ಒಡಮೆ – ಆಸ್ತಿ; ಇಂದ್ರಾಂಗನೆ – ಶಚೀದೇವಿ

೨೮. ಮಂಗಳ – ಶುಭಗೀತೆ; ಆಶಾಂಗನೆ – ದಿಗಂಗನೆ

ವ. ತ್ರಿದಶಪತಿ – ದೇವತೆಗಳ ಒಡೆಯ, ಇಂದ್ರ; ನಿಜಾಂಕ – ನಿಜ+ಅಂಕ, ತನ್ನ ತೊಡೆ

೨೯. ಮಜ್ಜನ – [ಮಾರ್ಜನ] ಅಭಿಷೇಕ, ಸ್ನಾನ; ಭಗವತ್ – ತೀರ್ಥಂಕರನ; ಜನ್ಮಾಭಿಷೇಕೋತ್ಸವ – ಮೊದಲ ಕಲ್ಯಾಣ

೩೦. ಹಿಮಕರ – ಚಂದ್ರ; ನಿಭ – ಹೋಲುವ, ಸಮಾನವಾದ; ಈಶಾನೇಂದ್ರ – ಹದಿನಾರು ಸ್ವರ್ಗಗಳಲ್ಲಿ ಎರಡನೆಯದಾದ ಈಶಾನಕಲ್ಪದ ಒಡೆಯು, ಇಂದ್ರ; ಸನತ್ಕುಮಾರ ಮಾಹೇಂದ್ರ – ಹದಿನಾರು ಕಲ್ಪಗಳಲ್ಲಿ ಮೂರು ಮತ್ತು ನಾಲ್ಕನೆಯವು

೩೧. ದಂತಿ – ಆನೆ; ಕೋಡು – ದಂತ

೩೨. ಅಬ್ಜಿನಿ – ತಾವರೆ; ರುಂದ್ರದ್ವಿಪ – ವಿಸ್ತಾರವಾದ ಆನೆ

೩೩. ಕಾಣ್ಬೆಡೆ – ನೋಡಬಹುದಾದ ಪ್ರದೇಶ; ಗೆಂಟು – ದೂರ

ವ. ಪಾಂಡುಕವನ – ಮೇರುಪರ್ವತದ ಮೇಲಿರುವ ಪಾಂಡುಕ, ಭದ್ರಶಾಲ, ನಂದನವನ ಮತ್ತು ಸೌಮನಸ ಎಂಬ ನಾಲ್ಕು ವನಗಳಲ್ಲಿ ಒಂದು, ದೇವೇಂದ್ರಾದಿಗಳು ಜಿನಶಿಶುವನ್ನು ಜನ್ಮಾಭಿಷೇಕಕ್ಕಾಗಿ ಕೊಂಡೊಯ್ಯುವುದು ಇಲ್ಲಿಗೇ; ಇಲ್ಲಿ ನಾಲ್ಕು ಚೈತ್ಯಾಲಯಗಳಿವೆ; ಪೂರ್ವೋತ್ತರ – ಈಶಾನ್ಯದಿಕ್ಕು; ಅಷ್ಟಮಂಗಳ – ಎಂಟು ಬಗೆಯ ಮಂಗಳವಸ್ತುಗಳು: ಛತ್ರ, ಧ್ವಜ, ಕುಶ, ಚಾಮರ, ಸುಪ್ರತಿಷ್ಠಕ, ಭೃಂಗಾರ, ದರ್ಪಣ, ವ್ಯಜನ – ಇವು ಜನಪ್ರತಿಮೆಯ ಪರಿಕರಗಳಂತೆ ಇರುತ್ತವೆ; ಪರಿವೇಷ್ಟನ – ಕೂಡುವಿಕೆ

೩೪. ಕ್ಷೀರೋದವಾರಿ – ಕಾಲ್ಗಡಲಿನ ನೀರು; ನೀಹಾರ – ಮಂಜು; ಬಾರಿಸು – ಅಲ್ಲಗಳೆ, ಕೀಳ್ಮಾಡು

ವ. ಮೃಗರಾಜವಿಷ್ಟರ – ಸಿಂಹಾಸನ; ನಿವಿಷ್ಟ – ಮಲಗಿಸು

೩೫. ಕನಚ್ಛಿಕರಿ – ಹೊಳೆಯುವ ಪರ್ವತ

೩೬. ಇತರೇಂದ್ರರ್ – ಸೌಧರ್ಮೇಂದ್ರ ಮತ್ತು ಈಶಾನೇಂದ್ರರನ್ನುಳಿದ ಇತರ ಕಲ್ಪಗಳ ಇಂದ್ರರು; ಪ್ರಭೃತಿ – ಮೇಲ್ವಿಚಾರಣೆ; ಭೃಂಗಾರ – ಕಳಶ; ಜಿನಾರ್ಭಕ – ಜಿನ+ಅರ್ಭಕ, ಜಿನಶಿಶು

೩೭. ಜಳನಿಧಿ – ಸಮುದ್ರ; ಪಯಃಪ್ಲವ – ಕ್ಷೀರಪ್ರವಾಹ; ಮಿಸಿಸು – ಅಭಿಷೇಕ ಮಾಡು, ಸ್ನಾನ ಮಾಡಿಸು

೩೮. ಮಜ್ಜನಪೀಠ – ಸ್ನಾನ ಮಾಡಿಸುವ ಮಣೆ; ಮಜ್ಜನವಳ್ಳ – ಸ್ನಾನ ಮಾಡಿಸುವವನು

೩೯. ಚರು – ನೈವೇದ್ಯ; ಪ್ರದೀಪ – ಮಂಗಳಾರತಿ; ಕುಳಿಶಾಯುಧ – ವಜ್ರಾಯುಧನಾದ ಇಂದ್ರ

೪೦. ಮಂದರ – ಮಂದರಪರ್ವತ

ವ. ಇಂದ್ರಾಣಿ – ಶಚೀದೇವಿ; ಅಂಗಸಂಗತ – ದೇಹದ ಮೇಲಿದ್ದ; ಪೂಸು – ಲೇಪಿಸು; ಅವತರಿಸು – ಇಳಿದು ಬಾ; ರಾಜಭವನ – ಅರಮನೆ

೪೧. ಕಳಧೌತ – ಚಿನ್ನ; ಕೂಟ – ಗೋಪುರ; ಮನಂಗೊಳ್ – ಆಕರ್ಷಕವಾಗು; ಸಿಂಹಾನಂದಿ – ಸಿಂಹಾಸನ; ಕುಳಿಶಾಸ್ತ್ರ – ಇಂದ್ರ

ವ. ವಿಘಟ – ತೊರೆದ; ವ್ಯತಿಕರ – ವೃತ್ತಾಂತ; ಸಮವಕಾರ – ದಶರೂಪಕಗಳಲ್ಲಿ ಒಂದು ಪ್ರಭೇದ, ದೇವಾಸುರ ಯುದ್ಧವಸ್ತುವಿನ ಮೂರಂಕ ಉಳ್ಳದ್ದು; ದಶಾವತಾರ – ಜಿನನು ತಾಳಿದ ಹತ್ತು ಜನ್ಮಗಳು: ಮಹಾಬಲ, ಲಲಿತಾಂಗ, ವಜ್ರಜಂಘ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರ ಮತ್ತು ಆದಿನಾಥ; ನಾಂದೀವಿಧಿ – ನಾಟಕದ ಆರಂಭ; ಲೋಕಾಕಾರಮನಭಿನಯಿಪ ಆಕಾರ – ಸೊಂಟದ ಮೇಲೆ ಎರಡೂ ಕೈಗಳನ್ನಿಟ್ಟುಕೊಂಡು ಕಿಸುಗಾಲಿನಲ್ಲಿ ನಿಲ್ಲುವುದು ಜೈನ ಪರಿಕಲ್ಪನೆಯಲ್ಲಿನ ಲೋಕದ ಆಕೃತಿ, ಭಂಗಿಯನ್ನು ವೈಶಾಖಸ್ಥಾನವೆನ್ನುತ್ತಾರೆ.

೪೨. ಭುಜಲತಾ – ತೋಳೆಂಬ ಬಳ್ಳಿ; ಭ್ರೂಚಾಪ – ಹುಬ್ಬು ಎಂಬ ಬಿಲ್ಲು; ತೋಳ್ದುಱುಗಲ್ – ತೋಳುಗಳ ಸಮೂಹ

೪೩. ಯುವಸಂಘಾತ – ಯುವಕರ ಗುಂಪು; ವ್ರಾತ – ಸಮೂಹ; ಸೂತ್ರಧಾರ – ನಾಟಕದ ನಿರ್ದೇಶಕ; ಸುತ್ರಾಮ – ಇಂದ್ರ; ತಾಂಡವಲಾಸ್ಯ – ತಾಂಡವ ಮತ್ತು ಲಲಿತನರ್ತನ

ವ. ಪುರಂದರ – ಇಂದ್ರ, ಹಲವಾರು ಪುರಗಳನ್ನು ನಿರ್ಮಿಸಿದ್ದರಿಂದ ಆದಿದೇವನು ಸೌಧರ್ಮೇಂದ್ರನಿಗೆ ಇಟ್ಟ ಹೆಸರು; ಅವಸಾನ – ಮುಕ್ತಾಯ; ವೃಷ – ಧರ್ಮ; ವೃಷಭಾಕಾರ – ಗೂಳಿಯ ರೂಪ; ಸಹೋತ್ಪನ್ನ – ಜತೆಯಲ್ಲಿಯೇ ಹುಟ್ಟಿದ; ಅಭ್ಯಸ್ತ – ಕಲಿತ, ಅಭ್ಯಾಸ ಮಾಡಿದ; ವಾಙ್ಮಯ – ಸಾಹಿತ್ಯ; ಸಾರೆವರ್ – ಹತ್ತಿರ ಬರು

೪೪. ಜಗತೀಸಂತತಿ – ಜಗತ್ತಿನ ಸಂತಾನ

೪೫. ದರಹಸಿತಾನನ – ಮುಗುಳುನಗೆಯುಳ್ಳ ಮುಖ; ಜಲಕನೆ – ತಕ್ಷಣ

ವ. ಉಪರೋಧ – ಒತ್ತಾಯ; ಒಡಂಬಡು – ಒಪ್ಪಿಗೆ; ಒಂದೆ ಪಸೆ – ಒಂದೇ ಹಸೆಮಣೆ, ಏಕಕಾಲದಲ್ಲಿ

೪೬. ಇರ್ಕುಟಿಗೊಳ್ – ಆಕರ್ಷಿಸು; ಪದ್ಮಾಸ್ಯೆ – ತಾವರೆ ಮೊಗದವಳು

೪೭. ಮನುಗೋತ್ರ – ಮನುಸಂಕುಲ; ಪ್ರಾಚ್ಯಶೈಲ – ಮೂಡಲ ಗಿರಿ; ದ್ಯುಮಣಿ – ಸೂರ್ಯ; ಚಕ್ರವರ್ತಿಪ್ರಧಾನ – ತ್ರಿಷಷ್ಟಿಶಲಾಕಾಪುರುಷರಲ್ಲಿನ ಹನ್ನೆರಡು ಮಂದಿ ಚಕ್ರವರ್ತಿಗಳಲ್ಲಿ ಮೊದಲನೆಯವನು

೪೮. ಎರ್ದೆಗೊಳ್ – ಮನಸೂರೆಗೊಳ್ಳು

ವ. ಅಭಿಧಾನ – ಹೆಸರು; ನೇರ್ಗಿಜೆಯಳ್ – ಕೊಂಚ ಚಿಕ್ಕವಳು; ಆತ್ಮಹೃತ್ಪದ್ಮಸದ್ಮೆ – ತನ್ನ ಹೃದಯಕಮಲ ನಿವಾಸಿಯಾದ

೪೯. ಸಿದ್ಧನ್ನಮ – 'ಸಿದ್ಧಂ ನಮ';

ವ. ಅಕಾರಾದಿ ಹಕಾರಾಂತ – ಅಕಾರದಿಂದ ಮೊದಲಾಗಿ ಹಕಾರದವರೆಗಿನ [ಇದು ಸಂಸ್ಕೃತ ವರ್ಣಮಾಲೆಗೆ ಸಂಬಂಧಿಸಿದ ಮಾತು; ಕನ್ನಡದಲ್ಲಾದರೆ ಇದು ಅಕಾರಾದಿ ಳಕಾರಾಂತ]; ಶುದ್ಧಾಕ್ಷರ – ವರ್ಣಮಾಲೆಯ ಮೂಲಾಕ್ಷರಗಳು; ಅಯೋಗವಾಹ ಚತುಷ್ಕ – ಅನುಸ್ವಾರ, ವಿಸರ್ಗ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯ ಎಂಬ ನಾಲ್ಕರ ಗುಂಪು; ಸಂಯೋಗಾಕ್ಷರ – ದ್ವಿತ್ವಗಳು, ಒಟ್ಟಿಗೇ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಗಳು; ದಕ್ಷಿಣ ಹಸ್ತ – ಬಲಗೈ

೫೦. ಸ್ಥಾನಕ್ರಮ – ಒಂದು ಎರಡು ಮೂರು ಇತ್ಯಾದಿ ಸ್ಥಾನಕ್ಕೆ ಅನುಗುಣವಾಗಿ

ವ. ಭರತ – ನಾಟ್ಯಶಾಸ್ತ್ರ; ಗಾಂಧರ್ವಶಾಸ್ತ್ರ – ಸಂಗೀತಶಾಸ್ತ್ರ; ವಾಸ್ತುವಿದ್ಯೆ – ಕಟ್ಟಡ ನಿರ್ಮಾಣ; ತನೂಜವರ್ಗ – ಮಕ್ಕಳ ಸಮೂಹ; ಫಳಪಾಕವಿರಾಮ – ಕಾಳಾಗಿ ಒಣಗಲಿರುವ; ಗರ್ಭಷಷ್ಟಿ – ಅರುವತ್ತು ದಿನಗಳಲ್ಲಿ ಫಸಲು ಬರುವ ಬತ್ತ; ಮಹೌಷಧಿ – ಶ್ರೇಷ್ಠ ಆಹಾರಧಾನ್ಯಗಳ ಸಸ್ಯಗಳು; ದೀಪ್ರೌಷಧಿ – ಎಣ್ಣೆ ಬೀಜಗಳು; ಸರ್ವೌಷಧಿ – ಸಾಮಾನ್ಯ ಆಹಾರಧಾನ್ಯಗಳು; ವಿರಳಂಗಳಾಗು – ಅಪಪರೂಪವಾಗು; ಅಪೇತರಸವೀರ್ಯವಿಪಾಕ – ರುಚಿ ಶಕ್ತಿ ಪಕ್ವತೆಗಳಿಂದ

ದೂರವಾಗು; ಆಧಿ – ಮನೋವ್ಯಾಕುಲ; ವ್ಯಾಧಿ – ರೋಗರುಜಿನ; ಬ್ರಹ್ಮ – ವೃಷಭನಾಥ

೫೧. ಆದಂ – ಹೆಚ್ಚಾಗಿ; ಅಳುರ್ವೆ – ವ್ಯಾಪಿಸಿ; ನಿಪ್ಪುಟಂ – ಅಧಿಕವಾಗಿ; ಆದಿಪುರುಷ – ಆದಿದೇವ

ವ. ಷಟ್ಕರ್ಮ – ಬದುಕುವುದಕ್ಕಾಗಿ ಮಾಡುವ ಅಸಿ, ಮಸಿ, ಕೃಷಿ, ವಾಣಿಜ್ಯ, ವಿದ್ಯೆ ಮತ್ತು ಶಿಲ್ಪಗಳು; ವಿರಾಮ – ಆದ ಮೇಲೆ; ನಿಜೆಸು – ಸ್ಥಾಪಿಸು; ಅಭಿರಾಮ – ಸುಂದರವಾದ; ದೇವಮಾತೃಕ – ಮಳೆಯನ್ನವಲಂಬಿಸಿ ಬೆಳೆ ಬೆಳೆಯುವ ಪ್ರದೇಶ; ಅನೂಪ – ಜಲಸಮೃದ್ಧಿಯ ಪ್ರದೇಶ; ಜಾಂಗಳ – ಬರಡುಭೂಮಿ; ಅನಂತಪಾಳಿತ – ಗಡಿ ಕಾವಲುಗಾರರು ಕಾಯುವ; ವಿಷಯ – ರಾಜ್ಯ; ತೆಱಗೊಳ್ – ಕಂದಾಯ ವಸೂಲುಮಾಡು; ಬಿಟ್ಟಿ – ಕೂಲಿಯಿಲ್ಲದ ಕೆಲಸ; ನಿಯೋಗ – ಅಧಿಕಾರಿ; ಪ್ರಜಾಪತಿ – ಬ್ರಹ್ಮ, ಜಿನ; ಕ್ಷತತ್ರಾಣ – ಏಟಿನಿಂದ ಕಾಪಾಡಬಲ್ಲ; ಪಣ್ಯಕರ್ಮ – ವ್ಯಾಪಾರ; ನಿಯೋಗ – ಕಾರ್ಯ; ವರ್ಣಸಂಕರ – ವಿವಿಧ ವರ್ಣಗಳವರು ರಕ್ತಸಂಬಂಧದಿಂದ ಕೂಡುವುದು; ಕೊಳ್ಕೊಡೆ – ಹೆಣ್ಣು ಕೊಟ್ಟುತರುವುದು, ಮದುವೆ.

೫೨. ಪ್ರತಿಪದ್ದಿನ – ಪಾಡ್ಯಮಿ, ಭಗವತ್ಕೃತಯುಗ – ಆದಿ ಜಿನನು ಮಾಡಿದ ಯುಗ; ಪುರಾಣವಿದ – ಪುರಾಣವನ್ನು ಬಲ್ಲವನು

೫೩. ಸುರಕಾಂತಾ – ದೇವತಾಸ್ತ್ರೀ; ನಭೋಭಾಗ – ಆಕಾಶ ಪ್ರದೇಶ; ದೇವತೂರ್ಯ – ದೇವದುಂದುಭಿ; ಆಶಾಚಕ್ರ – ದಿಙ್ಮಂಡಲ

೫೪. ಹರಿಪೀಠ – ಸಿಂಹಾಸನ; ಪ್ರಾಙ್ಮುಖ – ಪೂರ್ವಾಭಿಮುಖ

ವ. ನಿಷ್ಪನ್ನಮಜ್ಜನ – ಸ್ನಾನ ಮಾಡಿದವನು; ನೀರಾಜನ – ಆರತಿ; ಮೃಗೇಂದ್ರವಿಷ್ಟರ – ಸಿಂಹಾಸನ

೫೫. ಅಲಂಪು – ಸಂತಸ

ವ. ಯಥೋಚಿತ – ಸೂಕ್ತವಾದ; ದಂಡಧರ – ಅಧಿಕಾರವಿರುವವನು; ಅತಿಕ್ರಮಿಸು – ಮೀರು, ಉಲ್ಲಂಘಿಸು; ಮತ್ಸ್ಯನ್ಯಾಯ – ದೊಡ್ಡ ಮೀನು ಸಣ್ಣ ಮೀನನ್ನು ನುಂಗುವುದು; ಇಕ್ಷುರಸ – ಕಬ್ಬಿನ ರಸ; ಅನ್ವರ್ಥನಾಮ – ಗುಣಕ್ಕೆ ಅನುಗುಣವಾದ ಹೆಸರು

೫೬. ಓಳಿ – ಬದಿ, ಪಕ್ಕ; ಮತ್ತಿನ – ಉಳಿದ; ಸುರಶರಾಸನ – ಕಾಮನ ಬಿಲ್ಲು

ವ. ಅಜೆಕೆ – ಪ್ರಸಿದ್ಧಿ; ಪರಿನಿಷ್ಕ್ರಮಣ – ಐಹಿಕತೆಯ ತ್ಯಾಗ, ಇದು ತೀರ್ಥಂಕರನಿಗೆ ಸಲ್ಲುವ ಮೂರನೆಯ ಕಲ್ಯಾಣ; ಕನಕಪೀಠ – ಚಿನ್ನದ ಆಸನ;

೫೭. ಅವಸರಂಗುಡಿಸು – ಅವಕಾಶವನ್ನು ಕೊಡಿಸು; ಪೇಟಕ – ಸಮೂಹ

೫೮. ಮನೋರಥ – ಆಸೆ, ಬಯಕೆ; ಭವತ್ಕ್ರಮಕಮಳ – ತಮ್ಮ ಪಾದಕಮಲ; ವಾದಿತ – ವಾದನ

೫೯. ಒಡರ್ಚು – ತೊಡಗು, ಆರಂಭಿಸು

೬೦. ಅಮರ್ದು – ಅಮೃತ, ಅಂಬುದ – ಸಮುದ್ರ; ಅಹೋ – ಹೋ! ಎಂಬ ಉದ್ಗಾರ

೬೧. ಕಳ – ಕಲ, ಮಧುರ; ಗಣಿಕಾತಿಳಕಂ – ಶ್ರೇಷ್ಠ ಗಣಿಕೆ; ಮೆಚ್ಚುಗೊಳ್ – ಮೆಚ್ಚಿಕೆಯನ್ನು ಪಡೆ

೬೨. ಮಸೆ – ಹರಿತಗೊಳಿಸು; ಅಲರ್ಗಣೆ – ಹೂಬಾಣ; ಬರ್ದುಕು – ಬದುಕು, ತಪ್ಪಿಸಿಕೊ; ಅಂತರಂಗ – ಮನಸ್ಸು

೬೩. ಮಡಲ್ – ಚಿಗುರಿ ಹಬ್ಬು; ಅನಂಗ – ಕಾಮ; ಜಂಗಮಲತೆ – ಓಡಾಡುವ ಬಳ್ಳಿ; ಜವನಿಕೆ – ತೆರೆ; ವಿದ್ಯುಲ್ಲತೆ – ಬಳ್ಳಿಮಿಂಚು

೬೪. ಓಸರಿಸು – ಸರಿಸು; ಇಸು – ಬಾಣಪ್ರಯೋಗಿಸು; ಕಂತು – ಮನ್ಮಥ

೬೫. ಭಾವ – ಮೂಲ ಚಿತ್ತಸ್ಥಿತಿ; ಅನುಭಾವ – ಭಾವವು ಸ್ಫುರಿಸಿದಾಗ ಉಂಟಾಗುವ ಪರಿಣಾಮ; ವಿಭಾವ – ಭಾವಸ್ಫುರಣೆಯ ಕಾರಣ; ಪಸುಗೆ – ವಿಭಾಗ; ರಸದಭನಯ – ರಸಪೂರ್ಣ ನರ್ತನ; ಅಸದಳ – ಅಸಾಧ್ಯ

೬೬. ಪುಗು – [ರಂಗ] ಪ್ರವೇಶಿಸು; ಪೊಱಮಡು – [ರಂಗದಿಂದ] ದೂರಸರಿ; ಎರ್ದೆವುಗು – ಮನಸ್ಸನ್ನು ಆಕ್ರಮಿಸು

೬೭. ಕಟಾಕ್ಷ – ಕುಡಿಗಣ್ಣ ನೋಟ; ಭ್ರೂಲಾಸ್ಯ – ಹುಬ್ಬಿನ ಕುಣಿಸಾಟ

೬೮. ಅವಯವ – ಸಲೀಸು, ಸುಲಭ; ಉಳ್ಳುಡೆ – ಒಳವಸ್ತ್ರ

೬೯. ಎಯ್ದೆ – ಬಹಳವಾಗಿ; ರಾಗ – ಬಣ್ಣ, ಪ್ರೀತಿ; ರಂಜಿಸು – ಪ್ರಕಾಶಿಸು

೭೦. ಆಯುರಂತ – ಆಯುಸ್ಸಿನ ಮುಗಿತಾಯ; ಸೌದಾಮಿನಿ – ಮಿಂಚು; ಭೋಂಕೆನೆ – ಇದ್ದಕ್ಕಿದ್ದಂತೆ; ಸುರಕಾಮಿನಿ – ದೇವತಾಸ್ತ್ರೀ; ಅದೃಶ್ಯೆ – ಕಣ್ಮರೆಯಾದವಳು

೭೧. ರಸಭಂಗ – ರಸಾಸ್ವಾದನೆಗೆ ಅಡ್ಡಿ, ಆನಂದಕ್ಕೆ ಅಡ್ಡಿ; ಆ ದೊರೆ – ಅದಕ್ಕೆ ಸರಿಸಮನಾದ; ಅನುಸಂಧಿಸು – ಜೋಡಿಸು; ಅಣಂ – ಕಿಂಚಿತ್ತಾದರೂ; ಸುರಸಮಿತಿ – ದೇವತೆಗಳ ಸಮೂಹ

೭೨. ವಿಮೋಹ – ಆಕರ್ಷಣೆ; ವಿದ್ಯಾನಿಳಯ – ಎಲ್ಲ ಜ್ಞಾನದ ನೆಲೆಯಾದ ಆದಿದೇವ; ದೇಹಾನಿತ್ಯತೆ – ದೇಹ+ಅನಿತ್ಯತೆ – ಶರೀರದ ನಶ್ವರತೆ; ನಾಡೆ – ಅತೀವವಾಗಿ

೭೩. ಯಂತ್ರಂ – ಸ್ವಂತಿಕೆಯಿಲ್ಲದೆ ಇತರರಿಂದ ಆಡಿಸಲ್ಪಡುವ ವಸ್ತು; ನೋಡೆ ನೋಡೆ – ನೋಡುತ್ತಿರುವಂತೆಯೇ; ಅನಿತ್ಯತೆ – ನಶ್ವರತೆ; ಕಡೆಗಣಿಪೆಂ – ಕಡೆಗಣಿಸಲಿ, ಕಡೆಗಣಿಸಬಲ್ಲೆ

೭೪. ಮಾಣ್ – ಸುಮ್ಮನಾಗು; ಬಗೆ – ಮನಸ್ಸು; ಸಂಸೃತಿನಾಟಕ – ಸಂಸಾರವೆಂಬ ನಾಟಕ, ನಾಟಕದಂತೆಯೇ ನಶ್ವರವೂ ಕೃತಕವೂ ಆದದ್ದು; ನೆಱಿಯೆ ತೋಱು – ಮನವರಿಕೆ ಮಾಡಿಕೊಡು

೭೫. ವಿಭವ – ವೈಭವ; ಕುಡಿಮಿಂಚು – ಬಳ್ಳಿಮಿಂಚು; ಇಂದ್ರನ ಬಿಲ್ – ಕಾಮನ ಬಿಲ್ಲು; ಬೊಬ್ಬುಳಿಕೆ – ನೀರ ಗುಳ್ಳೆ; ಉರ್ಬು – ಉಬ್ಬುವಿಕೆ

೭೬. ತಾಳ್ದು – ತಳೆ, ಧರಿಸು; ವಿಷಯಾನಳ – ಇಂದ್ರಿಯಗಳ ಬಯಕೆಯೆಂಬ ಬೆಂಕಿ; ಸಂಸಾರಗಹನ – ಸಂಸಾರವೆಂಬ ಕಾಡು

೭೭. ಬಗೆದೀಡಾಡು – ಬಗೆದು+ಈಡಾಡು – ಅಗೆದು ಎಸೆ; ತತಿ – ಸಮೂಹ; ಮಕರಾನೀಕ – ಮೊಸಳೆಗಳ ಗುಂಪು; ನುಣ್ಣಗೆ – ಸಂಪೂರ್ಣವಾಗಿ; ಶಿಶುಮಾರ

– ತಿಮಿಂಗಿಲ; ತಿರಿ – ಅಲೆ, ತೊಳಲು; ಭವಾಂಭೋಧಿ – ಐಹಿಕತೆಯೆಂಬ ಸಮುದ್ರ

ವ. ವಿರಕ್ತಾಂತರಂಗ – ವಿರಕ್ತಿಯನ್ನು ಹೊಂದಿದ ಮನಸ್ಸುಳ್ಳವನು; ಅನುರಕ್ತಚಿತ್ತ – ಪ್ರೀತಿ ತುಂಬಿದ ಮನಸ್ಸುಳ್ಳವನು; ಎಣ್ಬರ್ – ಎಂಟು ಮಂದಿ; ಲೋಕಾಂತಿಕ ದೇವರು – ಬ್ರಹ್ಮಲೋಕದಲ್ಲಿ ವಾಸಿಸುವ ದೇವತೆಗಳ ಒಂದು ಪಂಗಡಕ್ಕೆ ಸೇರಿದವರು, ಇವರು ದೇವಋಷಿಗಳು

೭೮. ಪರಮಾರ್ಹಂತ್ಯ – ಅತ್ಯಂತ ಶ್ರೇಷ್ಠವಾದ ಅರ್ಹಂತಪದವಿ; ವಸುಮತಿ – ಭೂಮಿ; ನಿರಾದರ – ನಿರಾಸಕ್ತ

ವ. ವಜ್ರಲೋಹನಿಗಳ – ಗಡುಸಾದ ಲೋಹದ ಸಂಕೋಲೆ; ಅಪವರ್ಗಮಾರ್ಗ – ಮೋಕ್ಷದ ಹಾದಿ; ನಿರರ್ಗಳ – ಸಲೀಸು; ಪ್ರತಿಬೋಧಿಸು – ತಿಳಿಸಿ ಹೇಳು; ಪಂಚಮಾಂಬುಧಿ – ಸಪ್ತಸಾಗರಗಳಲ್ಲಿ ಐದನೆಯದಾದ ಕ್ಷೀರಸಮುದ್ರ; ಅಪತ್ಯವರ್ಗ – ಮಕ್ಕಳ ಗುಂಪು; ಪಚ್ಚುಕೊಡು – ವಿಭಾಗ ಮಾಡಿಕೊಡು; ಶಿಬಿಕೆ – ಮೇನೆ; ದೂರೋತ್ಸಾರಿತಂ ಮಾಡು – ದೂರಮಾಡು, ಕಳಿಸು; ಕಳಕಳ – ಮಾತುಕತೆಯ ಶಬ್ದ; ಬಾಹ್ಯಾಭ್ಯಂತರ ಪರಿಗ್ರಹ – ಒಳಗಿನ ಮತ್ತು ಹೊರಗಿನ ಎಂಬೆರಡು ಬಗೆಯ ಮಮತೆ; ತ್ರಿಸಾಕ್ಷಿಕ – ಆತ್ಮ ಇಂದ್ರ ಮತ್ತು ಸಿದ್ಧ; ಪಲ್ಯಂಕಾಸನ – ಬಲಪಾದವನ್ನು ಎಡದ ತೊಡೆಯ ಮೇಲಿಟ್ಟುಕೊಳ್ಳುವ ಭಂಗಿ

೭೯. ಅಳಿವಿನೀಳ ಕೇಶಾವಳಿ – ದುಂಬಿಯಂತೆ ಕಪ್ಪಾದ ನೀಳಗೂದಲು

೮೦. ದುರ್ಧರ – ಕಠಿಣತಮವಾದ; ಮೂಱುಜಾವ – [ದಿನದ] ಮೂಱನೆಯ ಜಾವ, ಸಾಯಂಕಾಲ; ಕೊಳ್ – ಸ್ವೀಕರಿಸು

೮೧. ಸ್ಫುರಿತದೆ – ಕಾಂತಿಯಿಂದ; ಪರಭಾಗಂಬಡೆ – ಶೋಭಾಯಮಾನವಾಗು; ಪಯೋಂಭೋನಿಧಿ – ಪಯಃ+ಅಂಭೋನಿಧಿ – ಕ್ಷೀರಸಮುದ್ರ

ವ. ಜಾತರೂಪ – ದಿಗಂಬರತ್ವ

೮೨. ಅಱುದಿಂಗಳ್ – ಆರು ತಿಂಗಳು; ಅನಶನ – ಆಹಾರ ಸ್ವೀಕರಿಸದಿರುವಿಕೆ; ನಿಷ್ಪಂದಂ – ಅಚಲನಾಗಿ; ಮಂದರನಗ – ಮಂದರಪರ್ವತ

೮೩. ಸ್ತಿಮಿತೇಕ್ಷಣ – ನಿಶ್ಚಲವಾದ ಕಣ್ಣು; ಅಭ್ರೂಭಂಗ – ಅಲುಗಾಡದ ಹುಬ್ಬುಗಳು; ಅನಾಪಾಂಗಾವಲೋಕನ – ಅನಾಪಾಂಗ+ಅವಲೋಕನ – ಕುಡಿಗಣ್ಣೋಟವಿರದ; ಸುಶ್ಲಿಷ್ಟ – ಮುಚ್ಚಿಕೊಂಡ; ದಶನಚ್ಛದ – ತುಟಿ

೮೪. ಮನಃಪಪರ್ಯಯ – ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲ ಎಂಬ ಐದು ಬಗೆಯ ಜ್ಞಾನಗಳಲ್ಲಿ ಒಂದು, ಬೇರೆಯವರ ಅಂತರಂಗದಲ್ಲಿರುವುದನ್ನು ತಿಳಿಯಬಲ್ಲ ಜ್ಞಾನ; ಚತುರ್ಜ್ಞಾನ – ಮೇಲೆ ಹೇಳಿದವುಗಳಲ್ಲಿ ಮೊದಲ ನಾಲ್ಕು ಜ್ಞಾನಗಳು

ವ. ಅಮರಗಿರಿ – ಮೇರುಪರ್ವತ; ಪಾರಾವಾರ – ಸಮುದ್ರ; ಅನಿಲ – ಗಾಳಿ; ನಿಸ್ಸಂಗ – ಏಕಾಂಗಿ; ಅಂಬರ – ಆಕಾಶ; ನಿರ್ಲೇಪ – ಅಂಟಿಕೊಳ್ಳದ; ಅನ್ಯೋನ್ಯ – ಪರಸ್ಪರ

೮೫. ಕೇಸರಿ – ಸಿಂಹ; ಪುಷ್ಕರಧೃತ – ಸೊಂಡಿಲಿನಿಂದೆತ್ತಿದ; ಶಾರ್ದೂಲ – ಹುಲಿ; ಕುರಂಗ – ಜಿಂಕೆ; ಕೇಸರಿಣೀ – ಹೆಣ್ಣು ಸಿಂಹ; ಸ್ತನ್ಯ – ಮೊಲೆಹಾಲು; ಪೋತ – ಮರಿ; ಪೊಂಪುಟಿವೋಗು – ವ್ಯಾಪಿಸು, ಹಬ್ಬು; ಕಾಂತ ಕಾಂತಾರ – ಸುಂದರವಾದ ಅರಣ್ಯ

ವ. ಅಭಿನವ – ಹೊಸತಾಗಿ ಉದಯಿಸಿರುವ; ವಿಷಯಸುಖ – ಇಂದ್ರಿಯಸುಖ; ಕೃಪಾಣ – ಕತ್ತಿ; ಖೇಟಕ – ಗುರಾಣಿ; ವ್ಯಗ್ರಪಾಣಿ – ಹಿಡಿದವರು

೮೬. ತಡಿಯೆಯ್ದು – ದಡದವರೆಗೆ; ಭವದೀಯ – ತಮ್ಮ, ನಿಮ್ಮ; ಅಳವಿ – ಯೋಗ್ಯತೆ; ಪೋಷ್ಯವರ್ಗ – ರಕ್ಷಿಸಬೇಕಾದ ಬಂಧುವರ್ಗ; ಪೊಱಗೆ – ಹೊರತಾದವರೇ?

ವ. ಯೋಗವ್ಯಾಘಾತ – ಯೋಗಕ್ಕೆ ಅಡ್ಡಿ; ಪ್ರಕಂಪಿತಾಸನ – ಆಸನಕಂಪ ಹೊಂದಿದವನಾದ; ಧರಣೇಂದ್ರ – ನಾಗರಾಜ; ಪರಿವರ್ಜಿತಭೋಗ – ಭೋಗವನ್ನು ತ್ಯಜಿಸಿದವನು; ವಾಂಛಿತ – ಆಸೆ

೮೭. ಎಡೆ– ಮಧ್ಯ; ನೀಮಾರ್ಗೆ – ನೀವು ಯಾರು? ಕಿಡೆನುಡಿ – ಕೆಟ್ಟ ಮಾತಾಡು; ಪೆರ್ಗಡೆತನ – ದೊಡ್ಡಸ್ತಿಕೆ; ಪೊರೆ – ಹೊಣೆ

೮೮. ಸುರಭೂರುಹ – ದೇವಲೋಕದ ಮರ, ಕಲ್ಪವೃಕ್ಷ; ಜಳರಾಶಿ – ಸಮುದ್ರ; ಕುಳುಂಪೆ – ಕುಂಟೆ, ಹೊಂಡ; ಎರೆ – ಬೇಡು; ದೊರೆ – ತಕ್ಕುದು

ವ. ಮಹಾನುಭಾವ – ದೊಡ್ಡ ಸ್ವಭಾವ; ನಿರ್ಭರ – ಅತಿಶಯ

೮೯. ಅಭವ – ಹುಟ್ಟಿಲ್ಲದವನು, ಜಿನ

ವ. ಅಧಿಪ – ಒಡೆಯ; ಸಂಮುಖ – ಮುಖತಃ; ವಿಕ್ರಿಯೆ – ಶರೀರವನ್ನು ಜಡ–ಸೂಕ್ಷ್ಮ ಮೊದಲಾಗಿ ಮಾಡಲು ಸಾಧ್ಯವಾದ ಶಕ್ತಿ, ಅಷ್ಟವಿಧವಾದ ಋದ್ಧಿಗಳಲ್ಲಿ ಒಂದು; ಪೊಟಿಲ್ – ಪಟ್ಟಣ

೯೦. ಚರ್ಯಾಮಾರ್ಗ – ಚರಿಗೆಗಾಗಿ ಹೋಗುವ ಉದ್ದೇಶ; ಮಾರ್ಗವಿಭೋದ – ಆ ಮಾರ್ಗವನ್ನು ತಿಳಿಸುವ ಉದ್ದೇಶ; ಈರ್ಯಾಗೋಚರ – ನಡೆಯುವಾಗ ಪ್ರಾಣಿಗಳಿಗೆ ನೋವಾಗದಂತೆ ನೋಡಿಕೊಳ್ಳುವುದು; ನೀರಜಂ ಮಾಡು – ಶುದ್ಧವಾಗಿ ಮಾಡು

ವ. ಗ್ರಾಮ – ಹಳ್ಳಿ; ನಗರ – ಪಟ್ಟಣ; ಖೇಡ – ನದಿ ಬೆಟ್ಟ ಕಾಡುಗಳಿರುವ ಒಂದು ಬಗೆಯ ಊರು; ಖರ್ವಡ – ಖರ್ವಟ, ನಗರ–ಹಳ್ಳಿಗಳ ನಡುವಣ ಸ್ಥಿತಿಯ ಮತ್ತು ಬೆಟ್ಟಗಳ ನಡುವಿರುವ ಊರು; ಮಡಂಬ – ಐನೂರು ಹಳ್ಳಿಗಳಿಂದ ಸುತ್ತುವರಿದ; ಒಡಂಬಡಿಲ್ಲದೆ – ಇರಲು ಒಪ್ಪದೆ; ಸನಾಭಿ – ನಂಟರು; ಅತಿಜಡಮತಿ – ಮಂದಬುದ್ಧಿಯವನು; ಕುಳಾದ್ರಿಧೈರ್ಯಂ – ಕುಲಗಿರಿಯಂತೆ ಅಚಲವಾದ ಧೈರ್ಯವುಳ್ಳವನು; ನೆಱೆ – ಪೂರ್ಣಗೊಳ್ಳು; ಸರ್ವಾರ್ಥಸಿದ್ಧಿ – ಹದಿನಾರು ಕಲ್ಪಗಳ ನಂತರ ಇರುವ ಕಲ್ಪಾತೀತ ಸ್ವರ್ಗ, ಇಲ್ಲಿಯ ದೇವರಿಗೆ ಅಹಮಿಂದ್ರರೆಂದು ಹೆಸರು, ಅಲ್ಲಿ ಹುಟ್ಟಿದವರಿಗೆ ಎಲ್ಲವೂ ಯತ್ನವಿಲ್ಲದೆ ಸಿಕ್ಕುವುದರಿಂದ ಅದಕ್ಕೆ ಈ ಹೆಸರು

೯೧. ರಾಜಗೇಹ – ಅರಮನೆ; ವಿಭ–ಸಮಾನ.

ವ. ಪುರಾಂತರಾಳ – ನಗರದ ನಡುವೆ; ಭಾವನಾಪರಂ – ಅನುಸಂಧಾನ ಮಾಡತಕ್ಕವನಾದ; ಮಾಧ್ಯಸ್ಥ – ತಟಸ್ಥ; ಪರಿವೃತಂ – ಸುತ್ತುವರಿಯಲ್ಪಟ್ಟುದು; ಆದಿಬ್ರಹ್ಮ – ಆದಿಜಿನ; ಕನಸುವೇಟ್ – ಕನಸಿನ ಅರ್ಥ; ಉತ್ಸವ – ಉತ್ಸಾಹ

೯೨. ಕೈಗಣ್ಮು – ಉಂಟಾಗು; ಮಾಂಗಲ್ಯ – ಮಂಗಳಕರವಾದ; ನಿಜೆಸು – [ಭಿಕ್ಷೆಗಾಗಿ] ನಿಲ್ಲಿಸು

ವ. ಸಪ್ತಗುಣ – ದಾನಮಾಡುವವನಿಗಿರಬೇಕಾದ ಶ್ರದ್ಧೆ, ಶಕ್ತಿ, ಭಕ್ತಿ, ವಿಜ್ಞಾನ, ಅಲುಬ್ಧತೆ, ಕ್ಷಮೆ, ತ್ಯಾಗ ಎಂಬ ಏಳು ಗುಣಗಳು; ನವವಿಧಪುಣ್ಯ – ಚರಿಗೆಗೆ ಬಂದ ಮುನಿಗಳಿಗೆ ದಾನಮಾಡುವ ಒಂಬತ್ತು ವಿಧಿಗಳು, ಆವಾಹನ [ಇದಿರುಗೊಳ್ಳುವುದು], ಪಾದ್ಯ [ಕಾಲು ತೊಳೆಯುವುದು], ಆಸನ [ಎತ್ತರದ ಪೀಠದಲ್ಲಿ ಕುಳ್ಳಿರಿಸುವುದು], ಅರ್ಚನ [ಪೂಜಿಸುವುದು], ವಂದನ [ನಮಸ್ಕರಿಸುವುದು], ಮನಃಶುದ್ಧಿ, ವಾಕ್‌ಶುದ್ಧಿ, ಕಾಯಶುದ್ಧಿ, ಏಷಣಾಶುದ್ಧಿ [ಭಕ್ತಿಯಿಂದ ಆಹಾರವನ್ನು ನೀಡುವುದು]; ಸಮುತ್ತಾನೀಕೃತ – ಮೇಲ್ಮುಖವಾಗಿ ಎತ್ತಿ ಹಿಡಿದ; ಪಾಣಿಪಾತ್ರ – ಬೊಗಸೆ

೯೩. ವಸುಧಾರೆ – ರತ್ನದ ಮಳೆ; ಕರಪರಿಚ್ಯುತ – ಕೈಯಿಂದ ಬಿದ್ದ; ಸರಿ – ಮಳೆ; ಎಲರ್ – ಗಾಳಿ

೯೪. ನಭ – ಆಗಸ

ವ. ಕಾಯಸ್ಥಿತಿ – ದೇಹಸ್ಥಿತಿ [ಆಹಾರಸ್ವೀಕಾರ]

೯೫. ಅಕ್ಷುಣ್ಣ – ನಿರಂತರವಾಗಿ; ಕ್ಷಿತಿ – ಭೂಮಿ

ವ. ದಿವಿಜಕರೋನ್ಮುಕ್ತ – ದಿವಿಜಕರ+ಉನ್ಮುಕ್ತ, ದೇವತೆಗಳ ಕೈಯಿಂದ ಉದುರಿದ; ಗೋಸನೆವಿಡಿಸು – ಡಂಗುರ ಹೊಡೆಸು, ಸಾರಿಸು; ಜಿನಕಲ್ಪಿತ – ಶ್ರೇಷ್ಠವಾದ ತಪೋಯೋಗ; ಅವಹಿತ – ಸ್ಥಿರವಾದ, ನೆಲೆಗೊಳಿಸಿದ; ವಟವಿಟಪಿ – ಆಲದ ಮರ

೯೬. ಕರಣಗಣ – ಇಂದ್ರಿಯಸಮೂಹ; ಕುನುಂಗು – ಕುಗ್ಗು; ಅರೆಮುಗುಟ್ – ತುಸು ಅರಳು; ಅಂಕ – ತೊಡೆ; ಅರಲ್ದಿರು – ಅಗಲಿಸಿ ಇಡಲ್ಪಡು; ನಿಷ್ಕಂಪ – ನಿಶ್ಚಲ; ಸಮುಸಲ್ – ತಲೆದೋರು, ಉಂಟಾಗು

ವ. ಅಷ್ಟಗುಣ – [ಸಿದ್ಧಪರಮೇಷ್ಠಿಗಳ] ಕ್ಷಾಯಿಕಸಮ್ಯಕ್ತ್ವ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ, ಅಗುರುಲಘುತ್ವ, ಅವ್ಯಾಬಾಧತ್ವ ಎಂಬ ಎಂಟು ಗುಣಗಳು; ದ್ವಾದಶಾನುಪ್ರೇಕ್ಷೆ – ಮುನಿಗಳು ಧ್ಯಾನಮಾಡಬೇಕಾದ ಅನಿತ್ಯ, ಅಶರಣ, ಸಂಸಾರ, ಏಕತಾ, ಅನ್ಯತ್ವ, ಅಶುಚಿತ್ವ, ಆಸ್ರವ, ಸಂವರ, ನಿರ್ಜರಾ, ಲೋಕ, ಬೋಧಿದುರ್ಲಭ ಮತ್ತು ಧರ್ಮಸ್ವಾಖ್ಯಾತತ್ವ ಎಂಬ ಹನ್ನೆರಡು ತತ್ವಗಳು; ದರ್ಶನಮೋಹನೀಯತ್ರಿಕ – ಮಿಥ್ಯಾತ್ವ, ಸಮ್ಯಙ್ಮಿಥ್ಯಾತ್ವ, ಸಮ್ಯತ್ವಪ್ರಕೃತಿಗಳು; ಕ್ಷಾಯಿಕ ಸಮ್ಯಗ್ದೃಷ್ಟಿ – ದರ್ಶನ ಮೋಹನೀಯ ಕರ್ಮವು ಸಂಪೂರ್ಣವಾಗಿ ಕ್ಷಯವಾದ ಜೀವ; ಶುಕ್ಲಧ್ಯಾನ – ಪರಿಶುದ್ಧವಾದ ಆತ್ಮಜ್ಞಾನ: ಪೃಥಕ್ತ್ವವಿತರ್ಕವಿಚಾರ, ಏಕತ್ವವಿತರ್ಕವಿಚಾರ,

ಸೂಕ್ಷ್ಮಕ್ರಿಯಾ ಪ್ರತಿಪಾತಿ, ವ್ಯುಪರತ ಕ್ರಿಯಾನಿವೃತ್ತಿ ಎಂಬ ನಾಲ್ಕು ಬಗೆಯ ಶುಕ್ಲಧ್ಯಾನಗಳು; ಮತ್ತಿನ – ಆನಂತರದ; ಚರಮಸಮಯ – ಕೊನೆಯ ಕ್ಷಣ; ಜ್ಞಾನಾವರಣಪಂಚಕ – ಮತಿ, ಶ್ರುತ, ಅವಧಿ, ಮನಃಪರ್ಯಾಯ ಮತ್ತು ಕೇವಲಜ್ಞಾನ; ಅಂತರಾಯಪಂಚಕ – ಮೋಕ್ಷಾಪೇಕ್ಷಿಗೆ ಎದುರಾಗುವ ದಾನ, ಲಾಭ, ಭೋಗ, ಉಪಭೋಗ, ವೀರ್ಯ ಎಂಬ ಐದು ಬಗೆಯ ಅಡ್ಡಿಗಳು

೯೭. ಅಳಱು – ಚದುರಿ ಹೋಗು; ಅನಂತಚತುಷ್ಟಯ – ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತವೀರ್ಯಗಳು; ಕೈವಲ್ಯಲಕ್ಷ್ಮಿ – ಮೋಕ್ಷ ಲಕ್ಷ್ಮಿ

೯೮. ಘಾತಿತಮಸ್ತಮ – ಘಾತಿಕರ್ಮಗಳೆಂಬ ಕತ್ತಲೆಯ ಮೊತ್ತ, ಜ್ಞಾನವರಣೀಯ ದರ್ಶನಾವರಣೀಯ ಮೋಹನೀಯ ಮತ್ತು ಅಂತರಾಯ ಎಂಬ ಆತ್ಮನ ಗುಣಗಳಿಗೆ ಘಾತಕವಾದ ಕರ್ಮಗಳು; ಅಳುಂಬಮಾಗು – ಹೆಚ್ಚಾಗು; ವೈಮಾನಿಕ – ದೇವತೆ; ದಿನೇಶಬಿಂಬ – ಸೂರ್ಯಮಂಡಲ

೯೯. ಆಸಾರ – ಮಳೆ; ಧ್ವಾನ – ಧ್ವನಿ; ಆಂದೋಳ – ಬೀಸುವಿಕೆ; ತಳ್ಳಂಕಗುಟ್ಟು – ತಳಮಳಗೊಳ್ಳು

೧೦೦. ರಥಾಂಗ – ಚಕ್ರವಾಕ; ಅಂಭೋಧಮಾರ್ಗ – ಮೋಡಗಳ ಹಾದಿ, ಆಕಾಶ

೧೦೧. ಮನೋಜ – ಮನ್ಮಥ; ಘೂರ್ಣಿಸು – ಮೊಳಗು

ವ. ಧನದ – ಕುಬೇರ; ಸಮವಸರಣ – ತೀರ್ಥಂಕರನ ಉಪದೇಶ ಮಂಟಪ, ಇದನ್ನು ರಚಿಸುವವನು ಕುಬೇರ. ಇದು ಹನ್ನೆರಡು ಯೋಜನ ವಿಸ್ತಾರವುಳ್ಳುದಾಗಿದ್ದು ತೀರ್ಥಂಕರ ಎಂಬ ಹೆಸರನ್ನು ಪಡೆದ ನಂತರ ಕೇವಲಜ್ಞಾನಿಯು ಇಲ್ಲಿನಿಂದ ಲೋಕಕ್ಕೆ ಉಪದೇಶ ನೀಡುತ್ತಾನೆ; ಗಂಧಕುಟಿ – ಸಮವಸರಣದಲ್ಲಿ ತೀರ್ಥಂಕರನು ಕುಳಿತುಕೊಳ್ಳುವ ಮಂಟಪ; ಸರ್ವಾಂಗಪ್ರಣತ – ಸಾಷ್ಟಾಂಗ ನಮಸ್ಕಾರಮಾಡಿದವನು; ಆಸನ್ನಭವ್ಯತೆ – ಬೇಗ ಮುಕ್ತಿಯನ್ನು ಹೊಂದುವ ಬಯಕೆ

೧೦೨. ಅರುಹ – ತೀರ್ಥಂಕರ, ಜಿನ; ಭಗವದ್ರೂಪ – ಗಣಧರರೂಪ; ಕಾಲಲಬ್ಧಿ – ಆಧ್ಯಾತ್ಮಿಕ ಜೀವನ ಆರಂಭವಾಗಲು ಪಕ್ವವಾದ ಕಾಲ

ವ. ಸಪ್ತರ್ಧಿ – ಬುದ್ಧಿ, ತಪಸ್ಸು, ವಿಕ್ರಿಯೆ, ಔಷಧಿ, ರಸ, ಬಲ, ಮತ್ತು ಅಕ್ಷೀಣಗಳೆಂಬ ಏಳು ಸಾಮರ್ಥ್ಯಗಳು; ಜ್ಞಾನಚತುಷ್ಟಯ – ಮತಿ, ಶ್ರುತ, ಅವಧಿ ಮತ್ತು ಮನಃಪರ್ಯಾಯ ಎಂಬ ನಾಲ್ಕು ಬಗೆಯ ಜ್ಞಾನಗಳು; ಶಿರೋವೇಷ್ಟನ ಪ್ರಲಂಬಚೇಳಾಂಚಲಪಿಹಿತವದನ – ತಲೆಗೆ ಕಟ್ಟಿಕೊಳ್ಳುವ ಪೇಟದಿಂದ ಇಳಿಬಿದ್ದ ಚುಂಗಿನಿಂದ ಬಾಯನ್ನು ಮರೆಮಾಡಿಕೊ

೧೦೩. ಭಾಸ್ಕರಚಕ್ರ – ಸೂರ್ಯಮಂಡಲ; ಆತ್ಮಜ – ಮಗ; ಒಸಗೆ – ಶುಭ

೧೦೪. ನೆರ್ಮು – ಆಧಾರ, ಆಶ್ರಯ; ಧರ್ಮಾಂಘ್ರಿಪಫಳ – [ಧರ್ಮ+ಅಂಘ್ರಿಪ] ಧರ್ಮವೆಂಬ ಮರದ ಹಣ್ಣು

೧೦೫. ಪ್ರಣತಿ – ಎರಗುವಿಕೆ, ನಮಸ್ಕಾರ

ವ. ವಿಸ್ಮಯಸ್ಮೇರ – ಆಶ್ಚರ್ಯಸಹಿತವಾದ ಮುಗುಳ್ನಗೆ

೧೦೬. ನೃ – ರಾಜ; ಅಸದಳ – ಅತಿಶಯ; ವಸ್ತುಸ್ಥಿತಿ – ವಸ್ತುಗಳ ಸ್ವರೂಪ

ವ. ಹೇಯೋಪಾದೇಯ – [ಹೇಯ+ಉಪಾದೇಯ] ತ್ಯಾಜ್ಯ ಮತ್ತು ಸ್ವೀಕಾರಾರ್ಹ; ಮಿಥ್ಯಾತ್ವದರ್ಶನಾದಿ ಕರ್ಮಂಗಳ್ – ಮಿಥ್ಯಾತ್ವ, ಅಜ್ಞಾನ, ಅವಿರತಿ, ಯೋಗ, ಮೋಹ, ಕ್ರೋಧ ಮುಂತಾದ ಕಷಾಯಗಳಿಂದ ಉಂಟಾಗುವ ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ, ಆಯುಃಕರ್ಮ, ನಾಮಕರ್ಮ, ಗೋತ್ರಕರ್ಮ, ವೇದನೀಯಕರ್ಮಗಳು; ಅವಿಕಲ್ಪ – ನ್ಯೂನತೆಯಿಲ್ಲದ; ಪದಾರ್ಥಯಾಥಾತ್ಮ್ಯ – ಜೀವಾದಿಗಳ ನಿಜಸ್ವರೂಪ; ಅವಗಮ – ಜ್ಞಾನ, ತಿಳಿವಳಿಕೆ; ಬಾಹ್ಯಾಭ್ಯಂತರ – [ಬಾಹ್ಯ+ಅಭ್ಯಂತರ] ಒಳಗಿನ ಮತ್ತು ಹೊರಗಿನ; ನಿವೃತ್ತಿ – ಬಿಡುಗಡೆ

೧೦೭. ಸುಗಿಸುಗಿದು – ಹೆದರಿ; ಪಾಪಾವಗ್ರಹ – [ಪಾಪ+ಅವಗ್ರಹ] ಪಾಪವೆಂಬ ಬರಗಾಲ; ತಳಿ – ಸಿಂಪಡಿಸು

೧೦೮. ಮಿಳಿರ್ – ಹಾರಾಡಿಸು; ಆಯತಿ – ಮಹಿಮೆ; ವರೂಥಿನಿ – ಸೈನ್ಯ; ಎಱಗಿಸು – ತಲೆಬಾಗುವಂತೆ ಮಾಡು

ವ. ಸಹಸ್ರಾರ – ಸಾವಿರ ಅರ [ಚಕ್ರದ ಅಚ್ಚಿನಿಂದ ಸುತ್ತುಪಟ್ಟಿಯವರೆಗಿನ ಅಡ್ಡಪಟ್ಟಿ] ಗಳುಳ್ಳ;

೧೦೯. ಅನಂತಚತುಷ್ಟಯ – ಇದೇ ಭಾಗದ ೯೭ ನೇ ಪದ್ಯದ ಟಿಪ್ಪಣಿಯನ್ನು ನೋಡಿ; ಚತುಷ್ಷಷ್ಟಿ – ಅರುವತ್ತುನಾಲ್ಕು; ಕುಂದ – ಕುಂದಪುಷ್ಪ, ಕೋಲುಮಲ್ಲಿಗೆ ಹೂ; ದುಗ್ಧಾಬ್ಧಿ – [ದುಗ್ಧ+ಅಬ್ಧಿ] ಹಾಲ್ಗಡಲು; ನಗ – ಪರ್ವತ

* * * * * * *

ಭರತಚಕ್ರವರ್ತಿ ಚರಿತಂ: ಅಹಂಕಾರನಿರಸನಂ

೧. ಮಹೀಪಾಳ – ರಾಜ; ಚಕ್ರ – ಚಕ್ರವರ್ತಿಯ ಆಯುಧಾಗಾರದಲ್ಲಿ ಹುಟ್ಟುವ ಚಕ್ರರತ್ನ; ಕ್ಷ್ಮಾಪ – ರಾಜ

ವ. ಜೀವಾಜೀವ ರತ್ನಂಗಳ್ – ಚಕ್ರವರ್ತಿಗಳಿಗೆ ತಾನಾಗಿಯೇ ಒದಗಿ ಬರುವ ಹದಿನಾಲ್ಕು ರತ್ನಗಳು – ಚಕ್ರ, ಛತ್ರ, ಖಡ್ಗ, ದಂಡ, ಚರ್ಮ, ಮಣಿ ಮತ್ತ ಕಾಕಿಣೀ ಎಂಬ ಏಳು ಅಜೀವರತ್ನಗಳು ಹಾಗೂ ಗೃಹಪತಿ, ಸೇನಾನಿ, ತಕ್ಷಕ, ಪುರೋಹಿತ, ಯಾಗಹಸ್ತಿ, ತುರಗ ಮತ್ತು ಸ್ತ್ರೀ ಎಂಬ ಏಳು ಜೀವರತ್ನಗಳು

೨. ಅಗ್ರತನೂಜ – ಹಿರಿಯ ಮಗ; ಅಮರಮಹೀಜದ ಲೀಲೆ – ಕಲ್ಪವೃಕ್ಷದಂತೆ ಮಾಡುವ ಕೊಡುಗೈ ದಾನ

೩. ಕಟಿಮೆ – ಬತ್ತ; ಶರದ – ಶರತ್‌ಕಾಲ

೪. ಖರಕಿರಣ – ಬಿಸಿಲು; ಖರತನ – ತೀವ್ರತೆ; ಮುಳಿಸು – ಕೋಪ; ಚಕ್ರವರ್ತಿವೃತ್ತ – ಚಕ್ರವರ್ತಿಯ ನಡತೆ

ವ. ಪ್ರಯಾಣ ಭೇರಿ – ಯುದ್ಧಪ್ರಯಾಣ ಆರಂಭಗೊಳ್ಳುವ ಸೂಚನೆಯ ಭೇರೀನಿನದ

೫. ಎಣೆ – ಸರಿದೊರೆ; ಚಕ್ರಯುಗ್ಮ – ಜೋಡಿ ಚಕ್ರಗಳು; ಕನನ್ಮಣಿ – [ಕನತ್+ಮಣಿ] ಹೊಳೆಯುವ ರತ್ನ; ಅಮರೇಂದ್ರಗಿರಿ – ಮೇರುಪರ್ವತ; ವಿಚಂಚಳ – ಹಾರಾಡುವ; ಅಜಿತಂಜಯ – ಭರತನ ರಥದ ಹೆಸರು

ವ. ಮೌಹೂರ್ತಿಕ – ಪುರೋಹಿತ; ವಿಜಯಪ್ರಸ್ಥಾನ – ದಿಗ್ವಿಜಯ ಪ್ರಯಾಣ; ಸಾರೆವರ್ – ಸಮೀಪಿಸು

೬. ರೋದೋಂತ – ದಿಗಂತ, ಕ್ಷಿತಿಜ; ಪ್ರಣಾದ – ಶಬ್ದ; ವಾದಿತ್ರ – ವಾದ್ಯ; ವಂದಿ – ಹೊಗಳುಭಟ; ತಳರ್ – ಹೊರಡು

ವ. ರಾಜಚಕ್ರ – ರಾಜಸಮೂಹ; ವಿಸ್ರಂಭಾಳಾಪ – ವಿಶ್ವಾಸಪೂರ್ವಕ ಸಂಭಾಷಣೆ; ಸ್ಥಪತಿರತ್ನ – ಶ್ರೇಷ್ಠ ಶಿಲ್ಪಿ

೭. ಶಿಬಿರ ನೃಪಮಂದಿರ – ಪ್ರಯಾಣ ಕಾಲದಲ್ಲಿ ರಾಜನಿಗಾಗಿ ನಿರ್ಮಿಸಿದ ಬಿಡಾರ; ವಿಜಿಗೀಷು – ವಿಜಯದ ಅಪೇಕ್ಷೆಯುಳ್ಳವನು

ವ. ಪುರಸ್ಸರಂ – ಸಮೇತ, ಮುಂದಿರಿಸಿಕೊಂಡು

೭. ಘನಘಟೆ – ಮೋಡಗಳ ದಂಡು; ಧಾತ್ರಿ – ಭೂಮಿ; ಸಪ್ತಚ್ಛದ – ಏಳು ಸುತ್ತಿನ ಬಾಳೆ; ಐಳಾವನ – ಏಲಕ್ಕಿ ತೋಟ: ಮದಾಸಾರಾಸವಾಸಕ್ತ – ಮದಧಾರೆಯೆಂಬ ಮದ್ಯದಲ್ಲಿ ಆಸಕ್ತಿ ಹೊಂದಿದ; ಮುಖರಿತ – ಸದ್ದಿನಿಂದ ಕೂಡಿದ

೯. ವನಧಿ – ಸಮುದ್ರ; ಜಾಯಿಲ – ಶ್ರೇಷ್ಠ ಕುದುರೆ, ಜಾತ್ಯಶ್ವ; ತುರಂಗಸಾಧನ – ಅಶ್ವಸೈನ್ಯ

೧೦. ಪ್ರವೀರ – ವೀರ

೧೧. ಉತ್ಪ್ಯತ್ಥಿತ – ಮೇಲೆದ್ದ; ಆಚ್ಛಾದಿತ – ಮುಸುಕಲ್ಪಟ್ಟ; ಪಾದಾತ – ಕಾಲಾಳುದಳ; ಚತುರಶೀತಿ – ಎಂಬತ್ತನಾಲ್ಕು; ಪ್ರಮಿತ – ಗಾತ್ರದ್ದು

೧೨. ಷಡಂಗಬಲ – ರಥ, ಆನೆ, ತುರಗ, ಪದಾತಿ, ದಿವಿಜ, ಖೇಚರ ಎಂಬ ಆರು ಬಗೆಯ ಸೇನೆಗಳು

೧೩. ಉದ್ದ್ಯೋತಿ – ಕಾಂತಿ; ಪೆಂಡವಾಸ – ಅಂತಃಪುರ

೧೪. ಸವನ್ವಿತ – ಸಮನ್ವಿತ, ಕೂಡಿದ; ಅತರ್ಕ್ಯ – ಅಪ್ರತಿಮ; ಉಪನತ – ಬಾಗಿದ

೧೫. ಹೇತಿಮುಕ್ತ – ಆಯುಧಗಳನ್ನು ತೊರೆದ; ಶುಂಭತ್ – ಹೊಳೆಯುವ; ಪಿಂಚಚ್ಛತ್ರ – ನವಿಲುಗರಿಗಳ ಕೊಡೆ; ಅರ್ಘ್ಯಹಸ್ತ – ಕೈಯಲ್ಲಿ ಅರ್ಘ್ಯವನ್ನು ಹಿಡಿದ

ವ. ಅಂತರ್ವಣ – ಅಂತರ್ವನ, ವನದ ಒಳಪ್ರದೇಶ; ತುಂಗ – ಎತ್ತರವಾದ; ಕುಜ – ಮರ; ದರ್ಭಶಯನ – ಹುಲ್ಲಿನ ಹಾಸಿಗೆ; ತ್ರಿರಾತ್ರ – ಮೂರು ರಾತ್ರಿಗಳು; ಶಾಂತಿಕಪೌಷ್ಟಿಕಕ್ರಿಯೆ – ಅನಿಷ್ಟನಿವಾರಣೆಯ ಒಂದು ಕರ್ಮ; ಪಡೆವಳ್ಳ – ಸೈನ್ಯಾಧಿಪತಿ

೧೬. ಖುರ – ಗೊರಸು; ಆಟ್ – ಮುಳುಗು

ವ. ಬಿಣ್ಗುಂಡು – ಲಂಗರು; ಬಹಿತ್ರ – ಹಡಗು; ಕಾರ್ಮುಕ – ಬಿಲ್ಲು; ನೀಡು – ತಡ; ನೀವಿ – ಬಿಲ್ಲಿನ ಹಗ್ಗ; ಜೇವೊಡೆ – ಠೇಂಕಾರ ಮಾಡು; ಬಾಣರ್ಧಿ – ಬತ್ತಳಿಕೆ; ಉರ್ಚಿಕೊ – ಸೆಳೆದುಕೊ

೧೭. ವ್ಯಂತರ – ಕ್ಷುದ್ರ ದೇವತೆ

೧೮. ಉಳ್ಕು – ಉಲ್ಕೆ

೧೯. ಕಾಳಾಂತಪವನ – ಪ್ರಳಯಕಾಲದ ಬಿರುಗಾಳಿ; ನಿರ್ಘಾತ – ಸಿಡಿಲು; ಅಂಬರಘೋಷ – ಗುಡುಗು

೨೦. ರಾಜನಿಕೇತನ – ಅರಮನೆ

೨೧. ಕರವಾಳ – ಕತ್ತಿ; ಪೆಱ – ಬೇರೆಯವನು, ಶತ್ರು

೨೨. ಗಹನಾಂತರ – ಕಾಡಿನ ಒಳಭಾಗ; ದುರ್ಧರ – ಎದುರಿಸಲಾಗದ

ವ. ದೃಷ್ಟಪರಂಪರರ್ – ಪರಂಪರೆಯನ್ನು ಬಲ್ಲವರು; ಪೂಣ್ – ಪ್ರತಿಜ್ಞೆಮಾಡಿ ಪ್ರದರ್ಶಿಸು

೨೩. ಎಚ್ಚಾತಂ – [ಬಾಣ]ಪ್ರಯೋಗಿಸಿದವನು

೨೪. ಚರಮಾಂಗ – ಕೊನೆಯ ಜನ್ಮದವನು; ಮಾಗಧ – ಮಗಧ ದೇಶದ ದೊರೆ

ವ. ಶೌರ್ಯಮದಜ್ವರ – ತನ್ನ ಪ್ರತಾಪದ ಬಗ್ಗೆ ಹೊಂದಿದ ಗರ್ವವೆಂಬ ಜ್ವರ; ಪತ್ತುವಿಡು – ವಾಸಿಯಾಗು

೨೫. ಪಡಲಗೆ – [ಪಟಲಿಕಾ] ಪಡಲ, ಬೆತ್ತದ ತಟ್ಟೆ

೨೬. ಪರಚಕ್ರ – ಶತ್ರುಸೈನ್ಯ; ಚಕ್ರಧರ – ಚಕ್ರವರ್ತಿ

೨೭. ಸಂಘಾತ – ರಾಶಿ; ಆಜ್ಞೆಯಂ ದಾಂಟು – ಆಜ್ಞೆಯನ್ನು ಮೀರು

ವ. ಅಂಬುರಾಶಿ – ಸಮುದ್ರ; ಆವಾಸಿತ – ಬೀಡುಬಿಟ್ಟ

೨೮. ಚೂತಕುಜಾತ – ಮಾವಿನ ಮರ; ಇಂದೊಳ – ಹಿಂದೋಳ ರಾಗ, ಇಂಪಾಗಿ; ಉನ್ಮದ – ಸಂತಸ; ಷಟ್ಪದವೃಂದ – ದುಂಬಿವಿಂಡು; ತಳ್ಕು – ಲೇಪನ; ಪುಗಿಲ್ – ಆಗಮನ

ವ. ವಿಜಯಾರ್ಧಪರ್ವತ – ಭರತಕ್ಷೇತ್ರದ ನಡುವಣ ಪೂರ್ವ–ಪಶ್ಚಿಮವಾಗಿ ಹಬ್ಬಿರುವ ಒಂದು ಪರ್ವತಶ್ರೇಣಿ; ನುಗುಳ್ – ನುಸುಳು

೨೯. ಆಳೆನ್ – ಸೇವಕನಾಗಿದ್ದೇನೆ

೩೦. ವಸಿಯಿಸು – ವಾಸಮಾಡು; ನಿಯೋಗ – ಕಾರ್ಯ

ವ. ಓಲಗಿಸು – ಸಮರ್ಪಿಸು; ಎಡೆ – ನಡುವೆ; ಮೂರ್ಧಾಭಿಷಿಕ್ತ – ಪಟ್ಟಾಭಿಷಷಿಕ್ತ; ಪಾರ್ಥಿವ – ರಾಜ

೩೧. ತಮಿಸ್ರಗುಹೆ – ಕಗ್ಗತ್ತಲೆಯ ಗುಹೆ; ಪಡಿ – [ಪ್ರತಿ] ಬಾಗಿಲು

ವ. ತಾಟಿಸು – ಹೊಡೆ; ಅಳುರ್ – ಹೊಮ್ಮು; ಬಾಯ್ಕೇಳಿಸು – ವಶಪಡಿಸಿಕೊ; ಪತಾಕನೀಪತಿ – ಸೇನಾಧಿಪತಿ; ಪಡೆ – ಸೈನ್ಯ; ಭೃತ್ಯಭಾವ – ಸೇವಕತನ; ಪೂಣಿಸು – ಪ್ರತಿಜ್ಞೆಮಾಡಿಸು; ಪಕ್ಷಗಜ – ಪಕ್ಕದಲ್ಲಿ ಸಾಗುವ ಆನೆ; ಧ್ವಜಿನೀಪತಿ – ಸೇನಾನಾಯಕ; ಕತಿಪಯ ಪ್ರಯಾಣ – ಕೆಲವು [ದಿನಗಳ] ಪ್ರಯಾಣ; ಸಯ್ತು – ನೇರವಾಗಿ; ತೆಂಕಮೊಗ – ಉತ್ತರಾಭಿಮುಖ; ಮೇಖಳಾಭಿತ್ತಿ – ಪರ್ವತಾಗ್ರದ ಗೋಡೆ

೩೨. ಕಲ್ಪ – ಯುಗ, ಅತ್ಯಂತ ದೀರ್ಘ ಕಾಲಪ್ರಮಾಣ; ಕೊಳಗೊಳ್ – ಕೊಳದಲ್ಲಿ ನೀರಿನ ಹಾಗೆ ಸಂಗ್ರಹಗೊಳ್ಳು

ವ. ಗಳಿತ – ಸೋರಿಹೋದ; ಸೀಂಟಿ ಕಳೆ – ಒರೆಸಿ ಹಾಕು; ನಿಜಪ್ರಶಸ್ತಿ – ತನ್ನ ಪ್ರಶಸ್ತಿ

೩೩. ಮಸ್ತಕವಿನ್ಯಸ್ತಶಾಸನ – ತಲೆಯ ಮೇಲೆ ತನ್ನ ಆಜ್ಞೆಯನ್ನು ಹೊರಿಸಿದವನು, ಅನ್ವಯವಿಸ್ತಾರಕ – ವಂಶೋದ್ಧಾರಕ

೩೪. ನವನಿಧಿವಲ್ಲಭ – ಚಕ್ರವರ್ತಿಗೆ ತಾನಾಗಿ ಒದಗಿ ಬರುವ ಕಾಲ, ಮಹಾಕಾಲ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳ, ಮಾಣವಕ, ಶಂಖ ಮತ್ತು ಸರ್ವರತ್ನ ಎಂಬ ಒಂಬತ್ತು ಬಗೆಯ ನಿಧಿಗಳ ಒಡೆಯ; ಮೊಮ್ಮ – ಮೊಮ್ಮಗ

೩೫. ವೇಳಾವನ – ತೀರಪ್ರದೇಶದ ಕಾಡು; ಕುತ್ಕೀಳ – ಪರ್ವತ; ನಿಮಿರ್ – ವಿಸ್ತಾರಗೊಳ್ಳು; ಅವನಿತಳ – ಸಾಮ್ರಾಜ್ಯ

೩೬. ನೆಲಂ – ಭೂಮಿ, ಪ್ರಕೃತಿ

ವ. ವರೂಥಿನೀಪತಿ – ಸೇನಾಧಿಪತಿ; ಪೂರ್ವೋಕ್ತಕ್ರಮ – ಹಿಂದಿನ ರೀತಿ; ಬೆಂಕೆ – ಬೆಂಕಿ

೩೭. ಪದನಖ – ಕಾಲುಗುರು; ದೀಧಿತಿ – ಕಾಂತಿ, ಕಿರಣ;

೩೮. ನಣ್ಪು – ನಂಟಸ್ತಿಕೆ; ಒಡವುಟ್ಟು – ಒಂದೇ ತಾಯಿಯ ಗರ್ಭದಿಂದ ಹುಟ್ಟು; ಈ – ಮದುವೆ ಮಾಡಿಕೊಡು

ವ. ನೆರಪು – [ಮದುವೆಯ ಮೂಲಕ] ಸೇರಿಸು; ಬಟವಟ – ಉಡುಗೊರೆ; ಮ್ಲೇಚ್ಛಖಂಡ – ಮನುಷ್ಯಕ್ಷೇತ್ರದಲ್ಲಿ ಬರುವ ಎರಡು ಭೂಭಾಗಗಳಲ್ಲಿ ಒಂದು, ಇನ್ನೊಂದು ಆರ್ಯಖಂಡ; ಶಾಸನಾಂಕಿತಂ ಮಾಡು – ಆಜ್ಞೆಗೊಳಪಡಿಸು; ನಿಕಟ – ಸಮೀಪ; ಕಟಕ – ಸೈನ್ಯ; ಮಹೀತಳನಿಹಿತ – ನೆಲದಲ್ಲಿರಿಸಿದ

೩೯. ಅಮೇಯ – ಅಸಂಖ್ಯ, ಅಳತೆ ಮೀರಿದ; ಮಿಸಿಸು – ಸ್ನಾನಮಾಡಿಸು; ದುಗ್ಧಪ್ಲವ – ಕ್ಷೀರಸಾಗರ; ಶ್ರಮಾಂಬುಲವ – ಬೆವರ ಹನಿ; ಅಮಾನುಷ – ಮನುಷ್ಯನ ಸಾಮರ್ಥ್ಯವನ್ನು ಮೀರಿದುದು

೪೦. ಅತೀಂದ್ರಿಯ – ಇಂದ್ರಿಯಗಳಿಗೆ ಹೊರತಾದ; ಆತ್ಮತತ್ತ್ವವಿದ – ಆತ್ಮತತ್ವವನ್ನು ಮನಗಂಡವನು; ಕೀಜಿ ಕಾಣ್ – ಭೇದಿಸಿ ನೋಡು, ಪರೀಕ್ಷಿಸಿ ನೋಡು; ಚತುರ್ಗತಿ – ದೇವ, ಮನುಷ್ಯ, ತಿರ್ಯಕ್ ಮತ್ತು ನಾರಕ ಎಂಬ ಗತಿಗಳು; ಬಟ್ಟೆ – ಮಾರ್ಗ, ದಾರಿ; ಕರಸ್ಥಿತಾಮಳಕ – [ಕರಸ್ಥಿತ+ಆಮಳಕ] ಅಂಗೈಯಲ್ಲಿನ ನೆಲ್ಲಿಕಾಯಿ; ಜಱುಚು – ವ್ಯರ್ಥಾಲಾಪ

೪೧. ಜವಂಗಿಡು – ವೇಗ ಕುಂದು; ಜವ – ಯಮ; ಜವಂಗುಂದಿಸು – ರಭಸ ಕಡಿಮೆಗೊಳಿಸು; ತೀರ್ – ಸಾಧ್ಯ; ಜವಜವಾಗು – ಶಕ್ತಿಹೀನವಾಗು; ಮುಟ್ಟುಗಿಡು – ಸತ್ವಹೀನವಾಗು; ಜವಂಜವ – ಹುಟ್ಟುಸಾವು ಪರಂಪರೆ

೪೨. ರಸನಾಳಿ – ನಾಲಗೆಗಳ ಸಾಲು; ಇಂದ್ರನಂತೆ – ಇಂದ್ರನಿಗೆ ಸಾವಿರ ಕಣ್ಣು ಎಂಬ ಕಲ್ಪನೆ

೪೩. ಫಣಿಪ್ರಭು – ಆದಿಶೇಷ; ಅತ್ತಳಗ – ಅಶಕ್ಯ; ಸ್ತವ – ಹೊಗಳಿಕೆ, ವರ್ಣನೆ; ವಸ್ತು – ಸ್ವರೂಪ

ವ. ಸ್ತವನ – ಸ್ತೋತ್ರ, ಸ್ತುತಿ

೪೪. ಅಂಭೋರಾಶಿ – ಸಮುದ್ರ; ಪ್ರತತಿ – ಸಮೂಹ, ರಾಶಿ; ಉಪಕಂಠ – ಸಮೀಪ; ತಣಿಯನೆ – ತಣಿಯಲಾರದೆ ಹೋದ

ವ. ಲೀಲಾಪ್ರಸಾದಿತ – ಲೀಲೆಯಿಂದ [ಸಕಲ ದಿಙ್ಮಂಡಲವನ್ನೂ] ವಶಪಡಿಸಿಕೊಂಡವನು; ಬೆಟ್ಟದ ತಪ್ಪಲು ಮತ್ತು ಸೈನ್ಯ

೪೫. ಮೊಗಸು – ಹಿಂದಿರುಗು

೪೬. ಹತವೈರಿ – ಶತ್ರುಗಳನ್ನು ಕೊಂದ; ವಿನಮ್ರಕ್ಷಿತಿ – ಭೂಮಿಯನ್ನೆಲ್ಲ ವಿಧೇಯವಾಗಿಸಿಕೊಂಡ; ಪ್ರತಿಹತ – ಉಡುಗಿಸಿದ; ದಿನಕೃಚ್ಚಕ್ರತೀವ್ರಾಂಶು – ಸೂರ್ಯಮಂಡಲಕ್ಕಿಂತಲೂ ತೀವ್ರ ಕಿರಣಗಳುಳ್ಳ; ಪುರೋಪಾಂತ – ನಗರದ ಬಳಿ

ವ. ತಱುಂಬಿ ನಿಲ್ – ಸ್ತಂಭನಗೊಳ್ಳು

೪೭. ಪುರಗೋಪುರ – ನಗರದ ಮಹಾದ್ವಾರ; ಮಚ್ಚರಿಸು – ದ್ವೇಷಿಸು
೪೮. ಕಾಲಚಕ್ರ – ಅಪಮೃತ್ಯು; ದವಾನಳ – ಕಾಳ್ಗಿಚ್ಚು
೪೯. ಚಕ್ರಿವೇೞ್ಕುಮೆ – ಚಕ್ರವರ್ತಿ ಬೇಕೆ, ಆವಶ್ಯಕವೇ; ತಳ್ತಿಱಿ – ಎದುರಿಸಿ ಇರಿ; ಉತ್ಪಾತಮರುತ್ – ದುರಂತವನ್ನು ಸೂಚಿಸುವ ಗಾಳಿಪಯೋನಿಧಿ – ಸಮುದ್ರ; ಮಸಗು – ಅಬ್ಬರಿಸು
ವ. ಸ್ಖಳನ – ಗತಿಭಂಗ; ಪುರೋಹಿತರತ್ನ – ಚಕ್ರವರ್ತಿಗೆ ಒದಗಿ ಬರುವ ಏಳು ಜೀವರತ್ನಗಳಲ್ಲಿ ಒಂದಾದ ರತ್ನ
೫೦. ಮೊದಲ್ – ಶ್ರೇಷ್ಠ
೫೧. ಅರಾತಿ – ಶತ್ರು; ಒಳರ್ – ಇದ್ದಾರೆ; ಅಂತಕ – ಯಮ
ವ. ಮಾಣ್ – ನಿಲ್ಲಿಸು; ಅಭಿಮುಖನಾಗು – ಎದುರು ನಿಲ್ಲು
೫೨. ದುರ್ನಿರೀಕ್ಷ್ಯ – ನೋಡಲು ಸಾಧ್ಯವಾಗದ; ಪಜ್ಜಳಿಸು – ಪ್ರಜ್ವಲಿಸು, ಹೊಳೆ
೫೩. ಬಹಿರ್ಮಂಡಲ – ಇತರ ರಾಜರ ಪ್ರದೇಶಗಳು [ಹೊರಗಿನ ರಾಜ್ಯ]; ಸಮಱು – ನಾಶಮಾಡು, ನೆಲಸಮಮಾಡು; ಬರಿಸ – ವರ್ಷಗಳು; ಅಂತರ್ಮಂಡಲ – ಸ್ವಂತ ರಾಜ್ಯ [ಒಳಗಿನ ರಾಜ್ಯ]; ಅಱಿಪುವವೇ – ತಿಳಿಸಬೇಕಾದ ಆವಶ್ಯಕತೆಯಿದೆಯೇ?
೫೪. ಪೊರೆ – ಹೊರೆ, ಭಾರ; ಎಱಗೆವು – ಬಾಗುವುದಿಲ್ಲ
೫೫. ಅನುಜ – ತಮ್ಮ; ಅಗ್ಗಳದದಟ – ಅತಿಶಯ ಶೂರ
೫೬. ಆದಿಬ್ರಹ್ಮ – ಆದಿ ಜಿನ; ಮೇದಿನಿ – ಭೂಮಿ, ರಾಜ್ಯ; ಅರಸು – ಅರಸುತನ
೫೭. ದೋರ್ಗರ್ವವಿಧ್ವಂಸನಕೇಳೀದೋಹಳ – ತೋಳ್ಬಲದ ಗರ್ವವನ್ನು ಸದೆಬಡಿಯುವ ಆಟದಲ್ಲಿ ಆಸಕ್ತ; ವಿದ್ವಿಷತ್ – ಶತ್ರುರಾಜರ; ಇಭಸ್ತಂಭ – ಕಂಬದಂತಹ ದಂತ; ಸಮುತ್ಪಾಟನ – ಕಿತ್ತೊಗೆಯುವಿಕೆ; ಶೌರ್ಯೋನ್ನಮನ್ಮಸ್ತಕಾವರ್ಜನ – ಶೌರ್ಯೋನ್ನಮನ್+ಮಸ್ತಕ+ಆವರ್ಜನ, ಶೌರ್ಯದಿಂದ ಎತ್ತಿದ ತಲೆಗಳ ಬಾಗಿಸುವಿಕೆ; ದುರ್ಲಲಿತಚರಿತ – ಶೂರರ ಚರಿತ್ರೆ; ಸಂಕೇತಗೋಷ್ಠೀನಿಕೇತ – ಪ್ರಶಂಸಿಸುವ ಗೋಷ್ಠಿಗೆ ಆಶ್ರಯ
೫೮. ಪದಾಂಬುರುಹ – ಪಾದಕಮಲ; ಮೇಣ್ – ಅಥವಾ
೫೯. ಕೆಚ್ಚನಾಗು – ಕೆಂಪಾಗು
೬೦. ನಾಸಾಪುಟ – ಮೂಗಿನ ಹೊಳ್ಳೆ; ತಾಮ್ರದಶನವಸನ – ಕೆಂಪಾದ ತುಟಿ; ಬದ್ಧಭ್ರುಕುಟಿ – ಗಂಟಿಕ್ಕಿದ ಹುಬ್ಬು; ಅಕಾಲಯಮ – ಅಪಮೃತ್ಯು
೬೧. ಮದನುಜರ್ – ಮತ್+ಅನುಜರ್, ನನ್ನ ತಮ್ಮಂದಿರು; ಆನತ – ತಲೆಬಾಗಿದವನು; ತೋಱೆನೆ – ತೋರಿಸಲಾರೆನೇ?
೬೨. ಪೊಱಗು – ಹೊರತಾಗು; ಆಳ್ಕೆ – ಅಧೀನ
೬೩. ಏವನ್ – ಏನು ಮಾಡಿಯಾನು, ಮದಾವಷ್ಟಂಭ – ಮದದ ಅತಿಶಯತೆ; ಉಱದೆ – [√ಉಱ] ಲಕ್ಷ್ಯ ಮಾಡದೆ; ಬಾಯ್ಕೇಳಿಸು – ಸೋಲಿಸು, ಅಧೀನಕ್ಕೊಳಪಡಿಸು; ಷಟ್ಖಂಡ – ಆರು ಭೂಭಾಗಗಳು, ಹಿಮವತ್ಪರ್ವತದ

ದಕ್ಷಿಣದಲ್ಲಿ ಲವಣಸಮುದ್ರದವರೆಗೂ ವ್ಯಾಪಿಸಿರುವುದು ಭರತಕ್ಷೇತ್ರ. ಇದರ ನಡುವೆ ವಿಜಯಾರ್ಧಪರ್ವತದ ಪೂರ್ವಪಶ್ಚಿಮವಾಗಿ ಹಬ್ಬಿ ಈ ಕ್ಷೇತ್ರವನ್ನು ಉತ್ತರ ಭರತ, ದಕ್ಷಿಣ ಭರತ ಎಂದು ಎರಡಾಗಿ ಒಡೆಯುತ್ತದೆ. ಹಿಮವತ್ಪರ್ವತದಲ್ಲಿ ಹುಟ್ಟಿದ ಮಹಾಸಿಂಧು ಮಹಾಗಂಗಾ ಎಂಬೆರಡು ನದಿಗಳು ಉತ್ತರದಿಂದ ದಕ್ಷಿಣಕ್ಕೆ ಹರಿದು ಲವಣ ಸಮುದ್ರವನ್ನು ಸೇರುತ್ತವೆ, ವಿಜಯಾರ್ಧಪರ್ವತ ಮತ್ತು ಗಂಗಾಸಿಂಧೂ ನದಿಗಳಿಂದ ಭರತಕ್ಷೇತ್ರ ಆರು ಖಂಡಗಳಾಗಿ ಭಾಗವಾಗಿದೆ. ಉತ್ತರ ಭರತಕ್ಷೇತ್ರದ ಮೂರು ಖಂಡಗಳ ನಡುವೆ ಆರ್ಯಖಂಡವಿವೆ, ಈ ಎರಡೂ ಕ್ಷೇತ್ರದ ಖಂಡಗಳು ಕೂಡಿ ಷಟ್ಖಂಡವೆನಿಸಿವೆ; ಮಂಡಿತ – ಒಳಗೊಂಡ

೬೪. ನಿನತು – ನಿನ್ನ; ತೀರ್ – ಕೊನೆಗೊಳ್ಳು; ಮನೆವಾರ್ತೆ – ಮನೆಯ ವ್ಯವಹಾರ; ಬಳೆಯೆ ನುಡಿ – ಬೆಳಸಿ ಮಾತಾಡು; ಶಾಸನಹರ – ಆಜ್ಞೆಯನ್ನು ಹೊತ್ತೊಯ್ಯುವವನು

೬೫. ಉಪಭೋಗ್ಯ – ಅನುಭವಿಸಬೇಕಾದುದು; ವಸುಧಾ – ಭೂಮಿ; ಕೊಂಡಾಟ – ಗೌರವ; ಸಲ್ವುದು – ತಾಳತಕ್ಕದ್ದು; ಈಶಶಾಸನ – ಒಡೆಯನ ಆಜ್ಞೆ; ನೆತ್ತಿಯೊಳಾನ್ – ತಲೆಯಲ್ಲಿ ಹೊರು

೬೬. ಎಱಗುವಂ – ಬಾಗೋಣ; ವಿಭೇಧ – ತಾರತಮ್ಯ; ಎಱಕ – ಬಾಗುವಿಕೆ, ವಿಧೇಯತೆ; ವಸುಂಧರೆ – ಭೂಮಿ, ರಾಜ್ಯ; ಕಿಂಕರಭಾವ– ದಾಸ್ಯತನ; ಮಡಗೂಟ್ – ಉಳಿದ ಅನ್ನ, ಎಂಜಲನ್ನ

ವ. ಪರಿಚ್ಛೇದಿಸು – ಆಲೋಚಿಸು, ಪರಿಚ್ಛೇದರಾಗು – ನಿರ್ಧರಿಸಿದವರಾಗು

೬೭. ಭವತ್ – ನಿನ್ನ; ಅಂಘ್ರಿಕಮಳರಜ – ಪಾದಕಮಲದ ದೂಳು; ಮಕುಟ – ಕಿರೀಟ; ಪೆಱರ್ – ಬೇರೆಯವರು; ಭವಭಯಹರ – ಇಹಲೋಕದ ಭಯವನ್ನು ತೊಲಗಿಸುವವನು; ಅವಯವದೆ – ಸುಲಭವಾಗಿ

೬೮. ಪೂಣ್ – ನಿಶ್ಚಯದಿಂದ ಕೈಗೊಳ್ಳು, ಪ್ರತಿಜ್ಞೆಮಾಡು; ಪುರುತನಯರ್ – ಪುರುದೇವನ ಮಕ್ಕಳು

ವ. ವ್ಯತಿಕರ – ಸಮಾಚಾರ, ವೃತ್ತಾಂತ

೬೯. ಚಲ – ಹಟ; ಭೂವನಗುರು – ಲೋಕದ ಗುರು, ಜಿನ

೭೦. ಖರಕಿರಣ – ಸೂರ್ಯ; ಸೆಣಸು – ಹೋರಾಟ

೭೧. ಸಾಮ – ಉಪಾಯ; ಅಳವಡಿಸು – ಸಂತಯಿಸು; ಪದವಡು – ಹದಗೊಳ್ಳು, ಸರಿ ಹೋಗು;

ವ. ಮಯೂಖ – ಹೊಳೆಯುವ; ಮಹಾಸಂಧಿವಿಗ್ರಹಿ – ಯುದ್ಧ ಮತ್ತು ಸಂಧಿಗಳ ಉಸ್ತುವಾರಿ ಹೊತ್ತ ಹಿರಿಯ ಸಚಿವ; ಮಹತ್ತರ – ಹಿರಿಯ ಅಧಿಕಾರಿ; ದೌವಾರಿಕ – ದ್ವಾರಪಾಲಕ; ಉಪಾಯನ – ಕಾಣಿಕೆ; ಅಪನೀತಮುದ್ರೆ – ಒಡೆದ ಮುದ್ರೆ; ಬಾಜಿಸು – ವಾಚಿಸು, ಓದು; ವಿಷ್ಟಪ – ಜಗತ್ತು; ಮಕರಿಕಾಚಕ್ರ – ಅಲಂಕಾರಕ್ಕಾಗಿ ರಚಿಸಿದ ಚಿತ್ರ; ಕನಕಪತ್ರಾಂಕಿತ ಕಾರ್ಮುಕಲತಾಲಂಬನ – ಚಿನ್ನದ ತಗಡು ಬಡಿದ ಬಿಲ್ಲೆಂಬ ಬಳ್ಳಿಗೆ ಆಶ್ರಯವಾದ; ಶ್ರೀಖಂಡ – ಶ್ರೀಗಂಧ

೭೨. ಬಹುಚಿಂತಂ – ನಾನಾ ಚಿಂತೆಗಳಲ್ಲಿ ಮುಳುಗಿದವನು; ಎಡಱು – ಅಡ್ಡಿ, ತೊಂದರೆ; ದಕ್ಷಿಣ – ಬಲಗಡೆ
೭೩. ಆಶಾಂತರ – ದಿಕ್ಕುಗಳು; ರಾಗಿಸು – ಸಂತೋಷಿಸು; ತೊದಳು – ಕೊರತೆ
೭೪. ಸಾಧಿಸು – ಗೆಲ್ಲು, ದಾರಿಗೆ ತರು;
೭೫. ಅಣುಗದಮ್ಮ – ಪ್ರೀತಿಯ ತಮ್ಮ; ಬಿನ್ನ – ವ್ಯರ್ಥ
ವ. ಕೋಪಗರ್ಭಸ್ಮಿತ – ಕೋಪವನ್ನು ಹುದುಗಿಸಿಕೊಂಡ ಮುಗುಳ್ನಗೆ
೭೬. ಮನಂ ನೋಡು – ಮನಸ್ಸನ್ನು ಪರೀಕ್ಷಿಸು; ಸಮಱಿಕೊಳ್ – ಒಪ್ಪಗೊಳಿಸು
೭೭. ಮೂರ್ಛೆವೋಗು – ಮೈಮರೆ; ಬನ್ನ – ಭಂಗ, ಅಪಜಯ
೭೮. ತಿರಿತರ್ – ಬೇಡಿ ತಾ; ಪಾಳಮಿರು – ಸರದಿಯಲ್ಲಿರು; ಬೈಕಂಗೊಳ್ – ಭಿಕ್ಷೆ ಸ್ವೀಕರಿಸು; ಉನ್ನತಿ ಮಾಡು – ದೊಡ್ಡದು ಮಾಡು
೭೯. ಪಸಿದುಣ್ಣಪಡು – ಹಸಿದಿದ್ದರೂ ಊಟಮಾಡದೆ ಇರು; ಉದಕಮಂತ್ರ – ಜಳಸ್ತಂಭನವಿದ್ಯೆ
೮೦. ಕುಲಾಲಚಕ್ರ – ಕುಂಬಾರನ ತಿಗುರಿ; ತಿರಿ – ಸುತ್ತು, ತಿರುಗು; ಕುಲಧರಕುಲ – ಶ್ರೇಷ್ಠವಾದ ಮನುಗಳ ವಂಶ ಮತ್ತು ಕುಲಪರ್ವತ; ಅಯಶ – ಅಪಕೀರ್ತಿ
೮೧. ಏಸಾಡಿ – ಆಕ್ರಮಣ ಮಾಡು; ತಿಣಿಕು – ಪೇಚು
೮೨. ಉರಗೌಘ – ನಾಗರ ಸಮೂಹ; ಓಘಮೇಘಮಾಗು – ಧಾರಾಕಾರವಾಗಿ ಸುರಿ; ಬಳವ್ಯಾಘಾತ – ಶೌರ್ಯಕ್ಕೆ ಆಘಾತ
೮೩. ಸುರುಳ್ – ಚೆಲ್ಲಾಪಿಲ್ಲಿಯಾಗು; ಗೂಡುಗೊಳು – ಆಶ್ರಯ ಪಡೆ; ಅಗ್ರಜ – ಅಣ್ಣ
೮೪. ಪರಿಹಸಿತ – ಪರಿಹಾಸ್ಯ, ನಗೆಪಾಟಲು
೮೫. ಕಿಡೆ ಮಾಡು – ನಾಶಗೊಳಿಸು; ನಿಧನ – ವಿನಾಶ
೮೬. ಪರಿಭವ – ಅವಮಾನ; ಕೀಱು – ಗೀರು; ನಿರ್ನೆರಂ – ನಿಷ್ಕಾರಣವಾಗಿ; ಅಂಜುಮೆ – ಹೆದರಿಕೆ
೮೭. ಗೆಂಟಱು – ದೂರ; ನಣ್ಪು – ನಂಟುತನ; ಬೆಸನೇನ್ – ಏನಪ್ಪಣೆ; ಜೀಯ – ಸ್ವಾಮಿ; ಪಂತ – ಸ್ಪರ್ಧೆ
೮೮. ಅಡಕಿಲ್ವೆಸರ್ – ಅಡಕಿಲ್+ಪೆಸರ್, ಒಟ್ಟಿಕೊಂಡ ಹೆಸರು
೮೯. ದೊರೆ – ಸಮರ್ಥ; ಎರಲೆ – ಜಿಂಕೆ; ಗೋರಿ – [ಬೇಟೆಯ ಪ್ರಾಣಿಯನ್ನು] ಆಕರ್ಷಿಸುವ ಹಾಡು, ಶಬ್ದ; ಮೃಗವಿರೋಧಿ – ಸಿಂಹ
೯೦. ದೊರೆಗೆ ವರ್ – ಹೋಲಿಕೆಗೆ ಬರು; ತೂಗು – ತೂಕ ಹಾಕು, ಹೋಲಿಸು; ತುಲಾದಂಡ – ತಕ್ಕಡಿ
೯೧. ಆಱುಂ ಬಲ – ಷಡಂಗಬಲ; ವ್ರಾತ – ಸಮೂಹ; ಸಂಗರನಿಕಷ – ಯುದ್ಧವೆಂಬ ಒರೆಗಲ್ಲು
ವ. ಮನುನರೇಂದ್ರವೃಂದಾರಕಶಿಖಂಡಮಂಡನಮಣಿ – ಮನುಕುಲದಲ್ಲಿ ಜನಿಸಿದ ರಾಜಸಮೂಹದ ಮುಡಿಗೆ ಅಲಂಕಾರಮಣಿ; ರಾಜನ್ಯಕ – ರಾಜಸಮೂಹ ; ವಿಳಯನಿಳ – ಪ್ರಳಯಕಾಲದ ಬೆಂಕಿ; ವಿಸ್ಫುಲಿಂಗ – ಕಿಡಿ, ಕೆಂಡ; ಆಸ್ಥಾಯಿಕೆ – ಆಸ್ಥಾನ, ರಾಜಸಭೆ

೯೨. ತದಿಯೆಯ್ದು – ಕೊನೆ ಮುಟ್ಟು; ವಿಶ್ವಕ್ಷಿತಿಜಯ – ವಿಶ್ವದ ಭೂಮಿಯನ್ನೆಲ್ಲ ಗೆಲ್ಲುವಾಸೆ; ಕಾದಲೆ – ಕಾದಲ್+ಎ, ಹೋರಾಡಲು; ಮಾಣ್ಬುದು – ಸುಮ್ಮನಿರುವುದು; ಸೂಟ್ – ಸೂಕ್ತ, ಕ್ರಮ; ಸಾಪತ್ನ್ಯ – [ತಾಯಿಯ] ಸವತಿಯ ಮಗ, ಮಲಮಗ; ವ್ಯೋಮಚಕ್ರ – ದಿಙ್ಮಂಡಲ

ವ. ದೂತಾಳಾಪ – ದೂತನ ಮಾತುಗಳು; ವಿಳಯಸಮೀರ – ಪ್ರಳಯಕಾಲದ ಬಿರುಗಾಳಿ; ಜಳನಿಧಿಪ್ರಧ್ವಾನ – ಸಮುದ್ರದ ಘೋಷ; ಸನ್ನಾಹಭೇರಿ – ಯುದ್ಧಕ್ಕೆ ಸಜ್ಜಾಗುವ ಸೂಚನೆಯಾದ ಭೇರೀರವ; ಬೆಂಗೆ ವರ್ – ಏರು, ಹತ್ತು

೯೩. ರಜ – ದೂಳು; ಪರುಷವಾತಾಹತಿಪ್ರೋಚ್ಚಳತ್ – ಬಿರುಗಾಳಿಯ ಹೊಡೆತದಿಂದ ಮೇಲೆದ್ದ; ಸಾಮಜಸೇನೆ – ಆನೆಯ ಸಮೂಹ; ದಿಗ್ದಾಹ – ದಿಗಂತದ ಬೆಂಕಿ; ಧ್ವಜಿನೀಸಂಕ್ಷೋಭ – ಸೇನೆಯ ಕಲರವ; ಮಹೀಕಂಪ – ಭೂಕಂಪ

೯೪. ಕ್ಷ್ಮಾಧರ – ಪರ್ವತ; ಗೋತ್ರಾದ್ರಿ – ಕುಲಪರ್ವತ; ತಾಂಗು – ಎರಗು, ಎದುರಿಸು

ವ. ಸೆರೆಗೋಲ್ – ಸೆರೆ+ಕೋಲ್, ಬಿಟ್ಟ ಬಾಣ; ಮುಟ್ಟು – ತಾಗು; ಸಮಕಟ್ಟು – ನಿಶ್ಚಯಿಸು

೯೫. ಜನಕ್ಷಯಕರಣ – ಜನವಿನಾಶ ಮಾಡುವಂತಹ

ವ. ದೋಹಳ – ಆಶೆ; ದರಿದ್ರಗೇಹಿನೀದೋಹಳ – ಬಡ ಗೃಹಸ್ಥೆಯ ಬಸುರಿ ಬಯಕೆ; ಪೂರ್ವೋಕ್ತಕ್ರಮ – ಹಿಂದಿನ ರೀತಿ

೯೬. ಅಸದಾಗ್ರಹ – ಕೆಟ್ಟ ಹಟ; ಮುದುಗಣ್ತನ – ಮುಪ್ಪಿನ ಅನುಭವ

ವ. ರಾಜಲೋಕ – ರಾಜತಂಡ; ಮಧ್ಯಸ್ಥ – ತಟಸ್ಥ; ಪೊಣರ್ – ಎದುರಿಸು; ಎಮೆಯಿಕ್ಕು – ಕಣ್ಣು ರೆಪ್ಪೆ ಮಿಟುಕಿಸು

೯೭. ನಿಶ್ಚಳಪಕ್ಷ್ಮ – ಅಲುಗಾಡದ ರೆಪ್ಪೆ; ತಾರಕ – ಕಣ್ಣು ಗುಡ್ಡೆ; ನಡೆ ನೋಡು – ದಿಟ್ಟಿಸಿ ನೋಡು

೯೮. ಕರಿಯೂಥಪತಿ – ಸಲಗ, ಸರಸೀಜಳ – ಸರೋವರದ ನೀರು; ಅರವಿಂದರಜಃಪಿಶಂಗಿತ – ಕಮಲದ ಕೇಸರಗಳ ದೂಳಿನಿಂದ ಹೊಂಬಣ್ಣವಾದ; ಅಚ್ಛೋದ – ತಿಳಿನೀರು

೯೯. ಖರ – ಉಗ್ರ, ತೀಕ್ಷ್ಣ; ಮರಕತ – ಪಚ್ಚೆ; ಕರಿಕರಪರಿಘ – ಸೊಂಡಿಲೆಂಬ ಪರಿಘಾಯುಧದಂತಿದ್ದ ಕೈ

ವ. ಪಂಚಶತ – ಐನೂರು; ಶರಾಸನ – ಬಿಲ್ಲು; ಉತ್ಸೇಧ – ಎತ್ತರ; ಪಂಚವಿಂಶತ್ಯುತ್ತರಪಂಚಶತ – ಐನೂರ ಇಪ್ಪತ್ತೈದು

೧೦೦. ಉರ – ಎದೆ; ಹಾರಾಂಶುರುಚಿ – [ಮುತ್ತಿನ] ಹಾರದ ಕಿರಣಗಳ ಕಾಂತಿ; ಇರ್ಕುಟಿಗೊಳ್ – ಇಕ್ಕುಳದಿಂದೆಂಬಂತೆ ಹಿಡಿ, ಸೆರೆಹಿಡಿ; ಆದಮ – ಅತಿಶಯವಾದ

ವ. ಸುರಕರಿ – ದೇವಲೋಕದ ಆನೆ, ಐರಾವತ; ಕರ – ಸೊಂಡಿಲು; ಮಲ್ಲಯುದ್ಧ – ಕುಸ್ತಿ

೧೦೧. ಮರಕತಮಣಿಶೈಲ – ಪಚ್ಚೆಯ ಬೆಟ್ಟ, ಶ್ಯಾಮವರ್ಣ

೧೦೨. ಕನಕಾಚಳ – ಚಿನ್ನದ ಬೆಟ್ಟ; ಇಕ್ಕು – ಅಪ್ಪಳಿಸು
೧೦೩. ಗುರು – ಹಿರಿಯ; ಮಹಿಮಾಕರ – ಮಹಿಮವಂತ; ಈ ದೊರೆಯಂ – ಇಂತಹವನು; ಭಂಗ – ಅವಮಾನ
೧೦೪. ಒಯ್ಯನೆ – ನಿಧಾನವಾಗಿ ಹಗುರವಾಗಿ; ಕುಂದು – ದೈನ್ಯ, ಹೀನತೆ
೧೦೫. ಪರಿಭವ – ಸೋಲು, ಅವಮಾನ; ದಳ್ಳುರಿ – ದೊಡ್ಡ ಉರಿ, ಜ್ವಾಲೆ; ಬಗೆ – ಸ್ಮರಿಸಿಕೊ
೧೦೬. ಬೆಸನ – ಆಜ್ಞೆ; ಮಾರ್ಕೊಳ್ – ವಿರೋಧಿಸು; ಬಲವರ್ – ಪ್ರದಕ್ಷಿಣೆ ಬರು; ಅಣಂ – ಸ್ವಲ್ಪವೂ; ಮುಯ್ಪು – ಭುಜ
೧೦೭. ತನಗಲ್ಲದುದು – ತನ್ನ ಮಟ್ಟಕ್ಕೆ ತಕ್ಕುದಲ್ಲದ್ದು; ಅವನತಮಕುಟ – ಬಾಗಿದ ಕಿರೀಟ[ತಲೆ]ಯವನು
೧೦೮. ಕಳೆದಿಡು – ಕಳಚಿ ಹಾಕು; ಅಚಿರರುಚಿಸಂಚಳ – ಮಿಂಚಿನ ಕಾಂತಿಯಂತೆ ಅಸ್ಥಿರ; ಅಳವುಗಿಡಿಸು – ಸಾಮರ್ಥ್ಯ ಕುಂದಿಸು
೧೦೯. ಉತ್ಪಾದಿಸು – ಉಂಟುಮಾಡು; ಅಳವು – [ಅದರ] ಶಕ್ತಿ
೧೧೦. ನಂಜಿನ ಪನಿ – ವಿಷದ ತೊಟ್ಟು; ವಿಷಯಸುಖ – ಇಂದ್ರಿಯಸುಖ
೧೧೧. ಕಿಡು – ನಾಶವಾಗು; ಪಡೆಮಾತು – ವಿಷಯ, ಸುದ್ದಿ, ಪ್ರಸ್ತಾಪ; ಅಗಿ – ನಡುಗು; ಸುರಸಮುದಯ – ದೇವತಾಸಮೂಹ
೧೧೨. ಭರತನಂ – ಭರತನಿಗೆ; ಸಿಗ್ಗನುಟಿ – ನಾಚಿಕೆಯನ್ನು ತೋರೆ; ಕಟ್ಟುವರ್ – ಗಡುಸಾಗು; ಪೆಂಪು – ಹಿರಿಮೆ
೧೧೩. ದೇಹಾದ್ರಿ – ಶರೀರವೆಂಬ ಬೆಟ್ಟ; ನೆಱಿ – ಸಮರ್ಥವಾಗು; ಬಿನ್ನ – ಸುಮ್ಮನೆ, ಮೌನ
೧೧೪. ಭಟಖಡ್ಗಮಂಡಲೋತ್ಪಲವನವಿಭ್ರಮಭ್ರಮರಿ – ಸೈನಿಕರ ಕತ್ತಿಗಳ ಸಮೂಹವೆಂಬ ನೈದಿಲೆಯ ವನದಲ್ಲಿ ಹಾರುವ ದುಂಬಿ; ಅಯ್ಯ – ತಂದೆ; ಇದೇವುದು – ಇದೇನು ಮಾಡಬಲ್ಲುದು, ಇದರಿಂದೇನು ಪ್ರಯೋಜನ; ಲತಾಂಗಿ – ಹೆಣ್ಣು; ನೆಗೞ್ತೆ – ಕೀರ್ತಿ
೧೧೫. ಅವಧರಿಸು – ಯೋಚಿಸು; ನೀಗು – ಹೋಗಲಾಡಿಸು; ಒರ್ಮೆಗೆ – ಇದೊಂದು ಬಾರಿ; ದುರ್ವಿಳಸನ – ಕೆಟ್ಟ ನಡವಳಿಕೆ
ವ. ತಪಶ್ಚರಣ – ತಪಸ್ಸಿನಲ್ಲಿ ತೊಡಗುವುದು
೧೧೬. ತೂಳ್ – ಬಿಸುಡು; ಎತ್ತೆತ್ತ – ಎಂಥದೆಂಥದು; ಉಪಶಮಂ– ತಾಳ್ಮೆ; ಕೈಗಣ್ಮು – ಉಂಟಾಗು; ಲಲಾಮ – ತಿಲಕಸ್ವರೂಪಿ; ಸಾರ್ – [ಹತ್ತಿರ] ಹೋಗು; ಮತ್ – ನನ್ನ; ಪ್ರಾಜ್ಯ – ದೊಡ್ಡ, ವಿಸ್ತಾರವಾದ
೧೧೭. ಪಾದ್ಯವಿಧಿ – ಕಾಲು ತೊಳೆಯುವುದು; ನೇತ್ರಾಂಬು – ಕಣ್ಣೀರು; ಮಸ್ತಕ – ತಲೆ; ಆತ್ಮಬಾಷ್ಪ – ತನ್ನ ಕಣ್ಣೀರು; ಜಳೌಘ – ನೀರ ಧಾರೆ; ವಂಶಜ – ವಂಶಪಾರಂಪರ್ಯವಾದ; ನೆಗೞ್ – ನೆರವೇರಿಸು; ಆಶಂಕೆ – ಶಂಕೆ, ಭಾವನೆ
ವ. ಆತ್ಮೀಯಪದವಿ – ತನ್ನ ಹುದ್ದೆ, ಸ್ಥಾನ

೧೧೮. ಮುಯ್ಯು – ಸೇಡು; ಆನ್ – ಧರಿಸು, ಹೊಂದು; ದರ್ಪಿತದುರಿತಮಲ್ಲ – ದರ್ಪವೆಂಬ ದುಷ್ಟನಾದ ಜಟ್ಟಿ; ಉಡಿ – ಸೋಲಿಸು; ತಕ್ಕು –ಠೀವಿ; ಇಂದ್ರಾರ್ಚಿತ – ಇಂದ್ರನಿಂದ ಪೂಜೆಗೊಳ್ಳುವ [ಆದಿ ಜಿನ]

ವ. ಅರವಿಂದಿನಿ – ಸರೋವರ; ಉಪಕಂಠ – ಸಮೀಪ; ಸರ್ವಾಂಗೋಪನತ – ಸರ್ವಾಂಗ+ಉಪನತ; ಎಲ್ಲ ಅಂಗಗಳನ್ನೂ ಬಾಗಿಸಿದ, ಸಾಷ್ಟಾಂಗವೆರಗಿ; ನಿಟಿಲ ತಟಘಟಿತಕರಕುಶೇಶಯಕುಟ್ಮಲ – ಹಣೆಯ ಮೇಲೆ ಇರಿಸಿದ ಕರದಾವರೆಗಳ ಮೊಗ್ಗು;

೧೧೯. ಪ್ರವ್ರಜ್ಯ – ಸನ್ಯಾಸ

೧೨೦. ಪದಪದ್ಮಾಂತಿಕ – ಪಾದಕಮಲಗಳ ಬಳಿ; ಮನಂಬಿಡು – ಮನಃಪೂರ್ವಕವಾಗಿ; ಪರಿಚ್ಛೇದಿ – ಸ್ಥಿತಪ್ರಜ್ಞ

ವ. ಅನುಮತ – ಅಭೀಷ್ಟ; ದ್ವಾದಶಾಂಗ – ಆಗಮದಲ್ಲಿನ ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃಕ ಧರ್ಮಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ಅನುತ್ತರೋಪಪಾದಿಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ ಮತ್ತು ದೃಷ್ಟಿವಾದಾಂಗ ಎಂಬ ಭಾಗಗಳು; ಚತುರ್ದಶಪೂರ್ವ – ಶ್ರುತಜ್ಞಾನದ ಹನ್ನೆರಡನೇ ಅಂಗವಾದ ದೃಷ್ಟಿವಾದಾಂಗದ ಪೂರ್ವಗತದಲ್ಲಿ ಬರುವ ಉತ್ಪಾದ, ಆಗ್ರಾಯಣೀಯ, ವೀರ್ಯಪ್ರವಾದ, ಅಸ್ತಿನಾಸ್ತಿಪ್ರವಾದ, ಜ್ಞಾನಪ್ರವಾದ, ಸತ್ಯಪ್ರವಾದ, ಆತ್ಮಪ್ರವಾದ, ಕರ್ಮಪ್ರವಾದ, ಪ್ರತ್ಯಾಖ್ಯಾನ, ವಿದ್ಯಾನುವಾದ, ಕಲ್ಯಾಣ, ಪ್ರಾಣಾವಾಯ, ಕ್ರಿಯಾವಿಶಾಲ, ಲೋಕಬಿಂದುಸಾರ ಎಂಬ ಹದಿನಾಲ್ಕು ಪೂರ್ವಗ್ರಂಥಗಳು; ಏಕವಿಹಾರಿ – ಒಬ್ಬನೇ ಸಂಚರಿಸತಕ್ಕವನು; ಪ್ರತಿಮಾಯೋಗ – ಒಂದೇ ಸ್ಥಳದಲ್ಲಿ ನಿಂತು ತಪಸ್ಸು ಮಾಡುವುದು

೧೨೧. ಅಡಿವಿಡಿದು – ಪಾದದಿಂದ ಹಿಡಿದು, ಪ್ರತತಿ – ಸಮೂಹ; ಅಗುರ್ವಿಸು – ಭಯಪಡಿಸು; ಸುಯ್ – ಉಸಿರು; ಉಡಿ – ಮುರಿ; ಉಣ್ಮು – ಹೊಮ್ಮು

೧೨೨. ವಿಷೋರಗ – ವಿಷದ ಹಾವು; ಅನಳಾರ್ಚಿ – ಬೆಂಕಿಯ ಜ್ವಾಲೆ; ಮಿಳಿರ್ – ಹೆಣೆದುಕೊ; ನಿರ್ಯತ್ – ಹೊರಬರುವ; ಧೂಮವೇಣಿಕಾ – ಹೊಗೆಯ ಹಗ್ಗ

ವ. ಉತ್ತು – [√ಉಱು=ಹೊಂದು] ಹೊಂದಿ, ಪಡೆದು; ಮಾನಕಷಾಯ – ಅಭಿಮಾನದ ಕಿಲ್ಬಿಷ; ಪತ್ತುವಿಡು – ನಾಶವಾಗು, ಕೊನೆಗೊಳ್ಳು; ಲಬ್ಧೋಪದೇಶ – ಉಪದೇಶವನ್ನು ಹೊಂದಿದವನಾಗಿ

೧೨೩. ಎನತು – ನನ್ನದು; ಬಗೆಯಲಪ್ಪುದೆ – ಭಾವಿಸಬಹುದೆ; ಬಗೆ – ಧ್ಯಾನಿಸು; ಪೆಱಪೆಱತು – ಬೇರೆಯದು

೧೨೪. ಅಂತಃಕರಣ – ಮನಸ್ಸು; ಅನಂತವಸ್ತುಪ್ರಕಾಶಿ – ಸಮಸ್ತ ವಸ್ತುಗಳನ್ನೂ ಪ್ರಕಾಶಗೊಳಿಸುವ; ಕೇವಳಬೋಧ – ಕೇವಲಜ್ಞಾನ

೧೨೫. ಚಯ – ಸಮೂಹ; ಒರ್ಮೆಯೆ – ಒಟ್ಟಿಗೇ; ಸಕಲೋರ್ವಿ – ಭೂಮಿಯನ್ನೆಲ್ಲ; ಪರ್ವು – ಹಬ್ಬು, ಹರಡು; ಚಿತ್ತೆಯ ಸರಿ – ಚಿತ್ತಾ ನಕ್ಷತ್ರದ ಮಳೆ; ಅಮರಸಮಾಜ – ದೇವತಾಸಮೂಹ

ವ. ವಚೋಮೃತ – ಮಾತಿನ ಅಮೃತ; ಸಾರ್ಥ – ಸಮೂಹ; ತಣಿಸು – ತೃಪ್ತಿಪಡಿಸು
೧೨೬. ಅಗ್ರನಂದನ – ಹಿರಿಯ ಮಗ; ಚಕ್ರನಿಧೀಶ – ಚಕ್ರ ಮತ್ತು ನವನಿಧಿಗಳ ಒಡೆಯ; ವಿಶ್ವಂಭರೆ – ಭೂಮಿ
೧೨೭. ಹಿಮ – ಹಿಮವತ್ಪರ್ವತ; ಅಗುರ್ವುಗೊಳ್ – ಭಯಾನ್ವಿತವಾಗು; ವ್ಯೋಮ – ಆಕಾಶ
ವ. ಏಕಚ್ಛತ್ರಚ್ಛಾಯೆ – ಒಂದೇ ಕೊಡೆಯ ನೆರಳು, ಒಂದೇ ಆಡಳಿತ; ಸಕಲಚಕ್ರವರ್ತಿ – ಎಲ್ಲರಿಗೂ ಮಿಗಿಲು ಚಕ್ರವರ್ತಿಯಾದವನು
೧೨೮. ವರೂಥಿನೀ – ಸೈನ್ಯ; ಪರಿಕರ – ಪಾತ್ರೆ; ದಶಾಂಗಂ ಭೋಗಂ – ಹತ್ತು ಬಗೆಯ ಭೋಗಗಳು ; ಭಾಜನ, ಭೋಜನ, ಶಯ್ಯಾ, ಚಮೂ, ವಾಹನ, ಆಸನ, ನಿಧಿ, ರತ್ನ, ಪುರ ಮತ್ತು ನಾಟ್ಯ ಎಂಬ ಹತ್ತು ಬಗೆಯ ಭೋಗಗಳು
೧೨೯. ಮಹಾಮಹ – ಹತ್ತು ವಿಧವಾದ ಪೂಜೆಗಳಲ್ಲಿ ಒಂದು, ದೇವೇಂದ್ರನು ಮಾಡುವ ಪೂಜೆ; ತಕ್ಕವರು – ಅರ್ಹರು; ಉಪಾಯಾಂತರ – ಉಪಾಯದ ಮೂಲಕ; ಒಸಗೆ – ಉತ್ಸವ; ತದ್ವ್ಯಾಜ – ತತ್+ವ್ಯಾಜ – ಆ ನೆಪ, ಆ ಕಾರಣ
೧೩೦. ಹರಿತ – ಹಸುರಾದ; ಅಂಕುರ – ಚಿಗುರು; ಉತ್ಕರ – ರಾಶಿ, ಸಮೂಹ
೧೩೧. ಬ್ರತ – ವ್ರತ
೧೩೨. ಸಾವದ್ಯಭೀರು – ಪಾಪಕ್ಕೆ ಹೆದರುವವರು; ಪ್ರಸೂನ – ಹೂವು; ಮೆಟ್ಟು – ತುಳಿ
೧೩೩. ಬಟೆಯುಟ್ಟು – ಹೇಳಿ ಕಳಿಸು; ಮಲರಹಿತರ್ – ನಿರ್ಮಲರಾದವರು, ಕಲ್ಮಷರಹಿತರಾದವರು
೧೩೪. ರಾಜಿ – ಸಮೂಹ; ಅಳವಲ್ಲದೆ – ಅಪಾರವಾಗಿ; ಪರ್ವದಿನ – ಹಬ್ಬದ ದಿನ, ವಿಶೇಷ ಸಂದರ್ಭ; ಗಣಾಧಿಪ – ಗಣಧರ; ತೀರ್ಥಂಕರವಾಣಿಯನ್ನು ಜನಗಳಿಗೆ ಪ್ರಸಾರಮಾಡುವ ತೀರ್ಥಂಕರ ಶಿಷ್ಯರು; ಜಿನೇಂದ್ರಸಭೆ – ಸಮವಸರಣ ಸಭೆ
ವ. ಪ್ರವಾಳ – ಚಿಗುರು, ಪತ್ರ – ಎಲೆ; ಪದ್ಮನಿಧಿ – ಚಕ್ರವರ್ತಿಗೆ ತಾನಾಗಿ ಒದಗಿ ಬರುವ ನವನಿಧಿಗಳಲ್ಲಿ ಒಂದು; ತಪನೀಯ – ಚಿನ್ನ; ಸೂತ್ರ – ಎಳೆ, ದಾರ; ಏಕಾದ್ಯೇಕೋತ್ತರದಶಾಂತಂಬರಂ – ಒಂದರಿಂದ ಹನ್ನೊಂದರವರೆಗೆ; ನೆಲೆ – ಶ್ರಾವಕ ಗೃಹಸ್ಥ ನೆಲೆಗಳು: ದರ್ಶನಿಕ, ವ್ರತಿಕ, ಸಾಮಾಯಿಕ, ಪ್ರೇಷಧೋಪವಾಸಿ, ಸಚಿತ್ತವಿರತ, ರಾತ್ರಿಭುಕ್ತಿತ್ಯಾಗ, ಬ್ರಹ್ಮಚಾರಿ, ಆರಂಭವಿರತ, ಪರಿಗ್ರಹವಿರತ, ಅನುಮತಿವಿರತ ಮತ್ತು ಉದ್ದಿಷ್ಟವಿರತ; ಅಭಿಧಾನ – ಹೆಸರು; ಯಜ್ಞೋಪವೀತ – ಜನಿವಾರ; ಪವಿತ್ರಗಾತ್ರ – ಪಾವನ ದೇಹ
೧೩೫. ಕ್ಷಿತಿಪತಿ – ಭೂಮಿಯ ಒಡೆಯ, ಚಕ್ರವರ್ತಿ; ಬಗೆಯಂ ತರ್ – ನಿರ್ಧರಿಸು
ವ. ಭಟ್ಟಾರಕ – ಗುರು, ಕೇವಲಜ್ಞಾನಿ; ಸಮಕ್ಷ – ಎದುರು, ಸನ್ನಿಧಿ; ಸಮಾಕರ್ಣಿತ – ಕೇಳಿದ್ದ; ಉಪಾಸಕಾಧ್ಯಯನ – ದ್ವಾದಶಾಂಗಭೇದಗಳಲ್ಲಿ ಒಂದು, ಶ್ರಾವಕನು ಆಚರಿಸಬೇಕಾದ ಕ್ರಿಯೆಯನ್ನು ತಿಳಿಸುವ ಶಾಸ್ತ್ರ; ಕುಲಾಚಾರ – [ಬ್ರಾಹ್ಮಣಕುಲದವರು ಅನುಸರಿಸಬೇಕಾದ] ಕರ್ತವ್ಯಗಳು; ಅಱಿಯೆ ಪೇೞ್ – ತಿಳಿಯುವಂತೆ ಹೇಳು

೧೩೬. ಆಱುಂ ವೃತ್ತಿ – ಷಟ್ಕರ್ಮಗಳು: ಪೂಜೆ, ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ, ತಪಸ್ಸುಗಳು; ದ್ವಿಜನ್ಮ – ಬ್ರಾಹ್ಮಣ; ದ್ವಿಜ – ಬ್ರಾಹ್ಮಣ; ಉಂತು – ಹೇಗೂ; ಮನುಷ್ಯ ಜಾತಿ – ಮಾನವ ಸಂಕುಲ

೧೩೭. ತಗುಳ್ – ಆರಂಭಿಸು; ಮನಂಗೊಳ್ – ಮನಮುಟ್ಟು

೧೩೮. ವರ್ಣೋತ್ತಮರ್ – ನಾಲ್ಕು ವರ್ಣಗಳಲ್ಲಿ ಶ್ರೇಷ್ಠರಾದವರು; ಇಳಾವಲ್ಲಭ – ಭೂಮಿಯೊಡೆಯ; ಧರಾಮರರ್ – ಭೂಸುರರು; ಕೊಂಡು ಕೊನೆ – ಹೊಗಳು; ಓರಂತೆ – ಅದರಂತೆ; ಅನ್ವಯ – ಕುಲ

ವ. ದೂರಾರಿಷ್ಟಕಾರಕ – ಹಲವುಕಾಲದ ಬಳಿಕ ಅನಿಷ್ಟವನ್ನುಂಟುಮಾಡುವ; ಸಮವಸೃತಿ ಸಮವಸರಣ; ಮರುಳ್ತನ – ಪೆದ್ದುತನ; ಉತ್ಪಾದಿಸು – ಸೃಷ್ಟಿಮಾಡು

೧೩೯. ಅಘವಿಘಟಪಟು – ಪಾಪವನ್ನು ನಾಶಮಾಡುವ ಸಮರ್ಥ

ವ. ಸಾಮಾನ್ಯ – ಸ್ಥೂಲವಾಗಿ; ಉಪಲಕ್ಷಿಸು – ಕಂಡುಕೊ; ಅವಱ – ಅವುಗಳ; ಕನಸುಗಳನಱಿ – ಕನಸುಗಳ ಫಲವನ್ನು ತಿಳಿ

೧೪೦. ಸೃಜಿಯಿಸು – ಸೃಷ್ಟಿಮಾಡು; ಪಾಂಗು – ರೀತಿ; ಆಚರಣ – ನಡವಳಿಕೆ; ನಷ್ಟಾಚರಣ – ಸದಾಚಾರವು ಕಣ್ಮರೆಯಾಗು; ಮಚ್ಚರಿಸು – ವಿರೋಧಿಸು; ಅಭ್ಯರ್ಣ – ಸಮೀಪ, ಹತ್ತಿರ; ದ್ರವ್ಯಲೋಭ – ಹಣದಾಸೆ; ಉನ್ಮಾರ್ಗ – ನಿಯಮಬಾಹಿರ ಮಾರ್ಗ

ವ. ಷೋಡಶ – ಹದಿನಾರು; ಅನಿಬರೆ – ಅಷ್ಟು ಮಂದಿ ಮಾತ್ರ; ಪಾಷಂಡಿ – ಧರ್ಮವಿರಹಿತ; ಅಡಂಗು – ನಾಶವಾಗು; ಕುಲಿಂಗಿ – ಮಿಥ್ಯಾತ್ಮವಾದಿ; ವಿಕೃತಿ – ಕೆಟ್ಟ ಕಾರ್ಯ; ವಿರಹಿತ – ಧರ್ಮವಿರಹಿತ; ದುಷ್ಷಮಯತಿ – ದುಷ್ಷಮವೆಂಬ ಐದನೆಯ ಕಾಲದಲ್ಲಿ ಅಥವಾ ಕೆಟ್ಟ ಕಾಲದಲ್ಲಿ ಹುಟ್ಟಿದ ಯತಿಗಳು; ಅಂಬರಾಂಬರ – ದಿಗಂಬರ ಸನ್ಯಾಸಿ; ಸಮುದಯ – ಗುಂಪು; ಕೈವಲ್ಯಬೋಧ – ಕೇವಲಜ್ಞಾನ; ದಿನಕರಬಿಂಬ – ಸೂರ್ಯಮಂಡಲ; ಸತ್ಯಶೌಚವಿರಹಿತ – ಸತ್ಯ ಮತ್ತು ಪರಿಶುದ್ಧತೆಗಳಿಂದ ದೂರಾದವನು; ಸಮಯಿ – ಜೈನಸಿದ್ಧಾಂತವನ್ನರಿತವನು; ಬಿಸುಟ್ಟು – ಬಿಸುಟು, ತೊರೆದು; ಆದಂ – ಬಹಳವಾಗಿ; ಪೊಲ್ಲಮೆ – ದುರಾಚಾರ; ಆದಿಭೂಪರ್ – ಪುರಾತನ ರಾಜವಂಶದವರು; ಅಕುಲೀನ – ಕೆಟ್ಟ ಜಾತಿಯವನು; ಸೇವಿಸು – ಸೇವೆಮಾಡು; ವ್ಯಂತರ – ಕ್ಷುದ್ರ ದೇವತೆ; ಅಱ – ಧರ್ಮ; ಕಡೆ – ಸೀಮಾಪ್ರಾಂತ; ಪಂಚಮಕಾಳ – ಐದನೆಯದಾದ ದುಷ್ಷಮಕಾಲ; ಅಣಂ – ಕೊಂಚವಾದರೂ; ಋದ್ಧಿಪ್ರಾಪ್ತ – ತಪಸ್ಸಿದ್ಧಿಯಿಂದ ಉಂಟಾಗುವ ಬುದ್ಧಿ ತಪೋ ವಿಕ್ರಿಯ ಔಷಧಿ ರಸ ಬಲ ಅಕ್ಷೀಣ ಎಂಬ ಏಳು ಮಹಿಮೆಗಳನ್ನು ಪಡೆದವನು; ಸನ್ಮಾರ್ಗಪ್ರತಿಕೂಲ – ಒಳ್ಳೆಯ ನಡತೆಯಿಂದ ಚ್ಯುತಿಹೊಂದಿದವನು; ವ್ಯಸನವಶಗತ – ಚಪಲಗಳಿಗೆ ತುತ್ತಾದವನು; ಮೆಯ್ಯಂ ತರ್ – ದೇಹವನ್ನೊಡ್ಡು; ಪರಿಣತವಯಸ್ಕ – ಹಿರಿಯರು; ಧಾನ್ಯಸಮಿತಿ – ಧಾನ್ಯಗಳ ಸಮೂಹ; ನೀರಸ – ರಸಹೀನ

೧೪೧. ದೂರಫಲ – ನಿಧಾನವಾಗಿ ಸಂಭವಿಸುವ ಪರಿಣಾಮ; ತನೂಜ – ಮಗ; ಕೊಕ್ಕರಿಸು – ಜುಗುಪ್ಸೆಪಡು; ವಿಘ್ನೋಪಶಾಂತಿ – ವಿಘ್ನನಾಶ

೧೪೨. ವ. ದುಸ್ಸ್ವಪ್ನದರ್ಶನಕರ್ಷಣಾರ್ಥ – ಕೆಟ್ಟ ಕನಸುಗಳನ್ನು ಕಂಡ ದುಷ್ಫಫಲಗಳ ನಿವಾರಣೆಗಾಗಿ

೧೪೩. ಜಿನಗೃಹ – ಜಿನಾಲಯ, ಬಸದಿ; ದಿಗ್ಭಿತ್ತಿ – ದಿಕ್ಕು ಎಂಬ ಗೋಡೆ; ಜಿನಕೇತನ – ಜಿನಾಲಯ; ಸುಕವಿಜನಮನೋಮಾನಸೋತ್ತಂಸಹಂಸ – ಉತ್ತಮ ಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ವಿಹರಿಸುವ ಶ್ರೇಷ್ಠ ಹಂಸನಾದ [ಭರತ]

೧೪೪. ಯಥಾ ರಾಜಾ ತಥಾ ಪ್ರಜಾ – ರಾಜನು ಹೇಗೆಯೋ ಪ್ರಜೆಗಳು ಹಾಗೆ; ಓಜೆಗೊಳ್ – ಕ್ರಮವನ್ನು ಅನುಸರಿಸು

ವ. ಪೂರ್ವಧರ – ಚತುರ್ದಶಪೂರ್ವಗಳಲ್ಲಿ ಪಾರಂಗತನಾದವನು; ವಿಕ್ರಿಯರ್ಧಿಪ್ರಾಪ್ತ – ಅಣಿಮಾದಿಗಳಿಂದ ಇಷ್ಟಬಂದಂತೆ ದೇಹರೂಪವನ್ನು ಬದಲಾವಣೆ ಮಾಡುವ ಶಕ್ತಿಯನ್ನು ನೀಡುವ ವಿಕ್ರಿಯೆ ಎಂಬ ಋದ್ಧಿಯನ್ನು ಪಡೆದವನು; ಆರ್ಯಿಕಾಗಣ – ಕಂತಿಯರ ಸಮೂಹ; ದೇವನಿಕಾಯ – ದೇವತಾಸಮೂಹ; ಚತುಷ್ಪದ – ನಾಲ್ಕು ಕಾಲುಗಳುಳ್ಳ ಪ್ರಾಣಿ; ಸರೀಸೃಪ – ಉರಗ; ತಿರ್ಯಗ್ಜಾತಿ – ಪಶುಪಕ್ಷಿ ಮೊದಲಾದ ಪ್ರಾಣಿಗಳ ಸಮೂಹ; ಫಲಭರವಿನತ – ಹಣ್ಣುಗಳ ಭಾರದಿಂದ ಬಾಗಿದ; ಯೋಗನಿರೋಧ – ಮನ, ವಚನ, ಕಾಯಗಳ ಕ್ರಿಯೆಯನ್ನು ತಡೆಗಟ್ಟುವಿಕೆ

೧೪೫. ಪೆಱತೇನ್ – ಇನ್ನೇನು; ಅಡರ್ – ಏರು; ಅನಶ್ವರಾಸ್ಪದ – ನಶ್ವರವಲ್ಲದ ಎಂದರೆ ಶಾಶ್ವತವಾದ ಮೋಕ್ಷ

ವ. ಆದಿಭಟ್ಟಾರಕ – ಆದಿ ಜಿನ; ವ್ಯತಿಕರಸ್ಥಿತಿ – ಸ್ಥಿತಿ, ರೀತಿ; ಕೃತಾಭೀಷ್ಟಸ್ತವನ – ಇಷ್ಟವಾದ ರೀತಿಯಲ್ಲಿ ಸ್ತುತಿಮಾಡುವವನು; ಮಹಾಮಹ – ಮಹಾರಾಜನು ಚತುರ್ಮುಖ ಮಂಟಪದಲ್ಲಿ ಮಾಡುವ ಜಿನಪೂಜೆ: ಕಲ್ಪದ್ರುಮ, ಚತುರ್ಮುಖ, ಸರ್ವತೋಭದ್ರ, ಐಂದ್ರಧ್ವಜ, ಅಷ್ಟಾಹ್ನಿಕ, ಬಲಿ, ಸವನ, ತ್ರಿಸಂಧ್ಯಾಸೇವೆ ಎಂಬ ಎಂಟು ಬಗೆಯ ಪೂಜೆಗಳು ಸೇರಿದ ಪೂಜೆ; ವಿಭೂತಿ – ವೈಭವ, ವಿಜೃಂಭಣೆ

೧೪೬. ಗುಣಮೆಂಟುಂ – ಸಮ್ಯಕ್ ಜ್ಞಾನ ದರ್ಶನ ಅನಂತವೀರ್ಯ ಸೂಕ್ಷ್ಮತ್ವ ಅಗುರುಲಘುತ್ವ ಅವಗಾಹ ಅವ್ಯಾಬಾಧಗಳೆಂಬ ಸಿದ್ಧಪರಮೇಷ್ಠಿಗಳು ಗಳಿಸಿಕೊಳ್ಳುವ ಎಂಟು ಗುಣಗಳು; ಸುಖಸಾದ್ಭೂತ – ಸುಖಸ್ವರೂಪ; ಶಶ್ವತ್ – ಪುನಃಪುನಃ; ಪ್ರಣುತ – ಕೀರ್ತಿತನಾದವನು; ಏಕಕ್ಷಣ – ಒಂದೇ ಕ್ಷಣ; ಸದ್ಮ – ಆವಾಸಸ್ಥಾನ

೧೪೭. ಸಮನಿಸು – ಸಲ್ಲು, ಪ್ರಾಪ್ತವಾಗು; ಮುಕ್ತಿವಧೂವರತೆ – ಮೋಕ್ಷಲಕ್ಷ್ಮಿಯನ್ನು ಸೇರುವ ಪಾತ್ರತೆ; ಅಭಿಜಿನ್ಮುಹೂರ್ತ – ಉತ್ತರಾಷಾಢ ಮತ್ತು ಶ್ರವಣ ನಕ್ಷತ್ರಗಳ ನಡುವಣ ಒಂದು ವಿಶಿಷ್ಟ ನಕ್ಷತ್ರ

ವ. ಶಿಖರಿ – ಶಿಖರವುಳ್ಳದ್ದು, ಪರ್ವತ; ಈಷತ್‌ಪ್ರಾಗ್ಭಾರ – ಸಿದ್ಧಕ್ಷೇತ್ರ; ಘನೋದಧಿ ಘನಾನಿಳ ತನುವಾತ – ಈ ಮೂರೂ ಲೋಕವನ್ನು ಸುತ್ತಿರುವ ಗಾಳಿಗಳು: ಇವು ಕ್ರಮವಾಗಿ ಮೂರು ಹರಿದಾರಿಗಳು, ಎರಡು ಹರಿದಾರಿಗಳು ಮತ್ತು ಒಂದು ಹರಿದಾರಿಯಷ್ಟು ದಪ್ಪಗಿದೆ ಎಂಬ ಕಲ್ಪನೆ; ಅವ್ಯಾಬಾಧ – ಬಾಧೆಗೆ

ಒಳಗಾಗದ; ಪರಿನಿರ್ವಾಣ ಮಹಾಕಲ್ಯಾಣ – ತೀರ್ಥಂಕರರ ಬದುಕಿನಲ್ಲಿ ದೇವತೆಗಳು ಮಾಡುವ ಪಂಚ ಮಹಾಕಲ್ಯಾಣಗಳಲ್ಲಿ ಐದನೆಯದು; ನಿರ್ವರ್ತನ – ನೆರವೇರಿಸುವುದು; ನಿರ್ವಾಣಭೂಮಿ – ನಿರ್ವಾಣಕ್ಷೇತ್ರ, ತೀರ್ಥಂಕರನು ಮೋಕ್ಷ ಪಡೆದ ಸ್ಥಳ; ಸುರಭಿ – ಸುವಾಸನಾಯುಕ್ತ

೧೪೮. ಸ್ಫುರಿತ – ಒಗೆದ, ಮೇಲಕ್ಕೆದ್ದ; ಘೃತ – ತುಪ್ಪ; ಪೆರ್ಚು – ಹೆಚ್ಚಾಗು; ರೂಪಾಂತರಕ್ಕೊಯ್ – ಸ್ವರೂಪ ಬದಲಿಸು, ಭಸ್ಮ ಮಾಡು

೧೪೯. ವಿಭೂತಿ – ಐಶ್ವರ್ಯ, ಮಹಿಮೆ; ಮನೋಜಾತ – ಮನಸ್ಸಿನಲ್ಲಿ ಉದಯಿಸಿದ; ತ್ರಿಪುಂಡ್ರ – ಮೂರು ಪಟ್ಟೆಗಳು

ವ. ಒಸಗೆ ಮರುಳ್ಗೊಳ್ – ಸಂತೋಷಪರವಶವಾಗು

೧೫೦. ನಾಟಕ – ನಾಟ್ಯ; ಅೞ್ತಿ – ಭಕ್ತಿ, ಪ್ರೀತಿ

ವ. ಆತ್ಮೀಯ – ತನ್ನ; ದಹ್ಯಮಾನ – ಸುಡಲ್ಪಟ್ಟ; ಮಾನಸ – ಮನಸ್ಸಿನವನು; ಆವೇಗ – ತೀವ್ರತೆ; ಆಜೆಸು – ಶಾಂತಗೊಳಿಸು; ಕರ್ಮಶೈಲೂಷ – ಕರ್ಮವೆಂಬ ನಟ; ಚತುರ್ಗತಿ – ದೇವ, ಮನುಷ್ಯ, ತಿರ್ಯಕ್, ನಾರಕ ಎಂಬ ಗತಿಗಳು; ಉಪಾದಾನ – ಆಶ್ರಯಿಸುವುದು; ಪರಿತ್ಯಜನ – ತ್ಯಜಿಸುವುದು, ಬಿಡುವುದು; ಪರಿಭ್ರಮಿಸು – ಸುತ್ತು, ಅಲೆದಾಡು; ಅನುಭೂತಪೂರ್ವ – ಅನುಭವಕ್ಕೆ ಬಂದಿರುವಂಥದು; ಭವದೀಯ – ನಿನ್ನ

೧೫೧. ಭೋಗಾಕಾಂಕ್ಷೆ – ಭೋಗದ ಅಪೇಕ್ಷೆ; ಸಾಗರಾಂತಂ – ಸಮುದ್ರದವರೆಗಿನ; ಬೆಸಕೈಸು – ಆಜ್ಞೆಗೊಳಪಡಿಸು

ವ. ಅಪಗತ – ಕಳೆದುಕೊಂಡ; ಭೋಗತೃಷ್ಣೆ – ಭೋಗದ ದಾಹ; ಮುಕ್ತ್ಯನುರಕ್ತಚಿತ್ತ – ಮುಕ್ತಿ+ಅನುರಕ್ತಚಿತ್ತ, ಮುಕ್ತಿಯಲ್ಲಿ ಆಸಕ್ತವಾದ ಮನಸ್ಸುಳವನು; ಮಣಿದರ್ಪಣ – ರತ್ನಖಚಿತವಾದ ಕನ್ನಡಿ; ಆದಿಭಟ್ಟಾರಕ – ಆದಿ ತೀರ್ಥಂಕರ; ಸಮೀಪಸ್ಥಿತ – ಸಮೀಪದಲ್ಲಿನ; ಪರಾಯಣ – ಆಸಕ್ತ

೧೫೨. ಶ್ರೀನಾರೀಪತಿ – ಮುಕ್ತ್ಯಂಗನೆಯ ಕಾಂತ; ಭೋಂಕಲ್ – ಒಡನೆಯೇ; ಮನಃಪರ್ಯಯಜ್ಞಾನ – ಬೇರೆಯವರ ಅಂತರಂಗದಲ್ಲಿರುವುದನ್ನು ತಿಳಿದುಕೊಳ್ಳುವ ಜ್ಞಾನ; ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲ ಎಂಬ ಐದು ಜ್ಞಾನಗಳಲ್ಲಿ ನಾಲ್ಕನೆಯದು; ಅಂತರ್ಮುಹೂರ್ತ – ಒಂದು ಗಳಿಗೆಯಿಂದ ನಲವತ್ತೇಳು ನಿಮಿಷಗಳವರೆಗಿನ ಕಾಲ, ಒಂದು ಮುಹೂರ್ತಕ್ಕಿಂತ ಕಡಿಮೆಯ ಅವಧಿ [ಮುಹೂರ್ತ ಎಂದರೆ ಒಂದು ದಿವಸದ ಮೂವತ್ತನೇ ಒಂದು ಭಾಗದಷ್ಟು ಕಾಲ]

೧೫೩. ಮುನ್ನಿನ – ಮೊದಲಿನ, ಈ ಹಿಂದಿನ

ವ. ಪರಿಷತ್ – ಸಮೂಹ; ವಿನೇಯಜನ – ಶಿಷ್ಯಸಮೂಹ; ಸೇಕ – ಸಿಂಚನ, ಸಿಂಪಡಿಸುವಿಕೆ; ನಿರುದ್ಧಯೋಗ – ತಡೆಯಲ್ಪಟ್ಟ ಕಾಯಿಕ ಕ್ರಿಯೆಗಳು; ಯೋಗಗುಣಸ್ಥಾನ – ಮೋಹ ಹಾಗೂ ಯೋಗಗಳ ನಿಮಿತ್ತದಿಂದ ಆಗುವ ಆತ್ಮನ ಗುಣಗಳ ವಿಕಾಸ ಕ್ರಮದಲ್ಲಿನ ಹದಿನಾಲ್ಕು ಅವಸ್ಥೆಗಳಲ್ಲಿ ಹದಿಮೂರನೆಯದು:

ಗುಣಸ್ಥಾನಗಳು: ಮಿಥ್ಯಾತ್ವ, ಸಸಾದನ, ಮಿಶ್ರ, ಅವಿರತ ಸಮ್ಯಕ್ತ್ವ, ದೇಶರತ, ಪ್ರಮತ್ತವಿರತ, ಅಪ್ರಮತ್ತವಿರತ, ಅಪೂರ್ವಕರಣ, ಅನಿವೃತ್ತಿಕರಣ, ಸೂಕ್ಷ್ಮ ಸಂಪರಾಯ, ಉಪಶಾಂತ ಮೋಹ, ಕ್ಷೀಣಮೋಹ, ಸಯೋಗ ಕೇವಲಿ ಮತ್ತು ಅಯೋಗಕೇವಲಿ; ಚತುರ್ಥಧ್ಯಾನ – ಆರ್ತ, ರೌದ್ರ, ಧರ್ಮ ಮತ್ತು ಶುಕ್ಲ ಎಂಬ ನಾಲ್ಕು ಬಗೆಯ ಧ್ಯಾನಗಳಲ್ಲಿ ಕೊನೆಯದು, ಶುಕ್ಲಧ್ಯಾನ: ಅತ್ಯಂತ ಶ್ರೇಷ್ಠ ಧ್ಯಾನ, ಇದರಲ್ಲಿ ಪೃಥಕ್ತ್ವ ವಿತರ್ಕ, ಏಕತ್ವ ವಿತರ್ಕ, ಸೂಕ್ಷ್ಮಕ್ರಿಯಾ ಪ್ರತಿಪಾತಿ ಮತ್ತು ವ್ಯುಪರತಕ್ರಿಯಾನಿವೃತ್ತಿ ಎಂಬ ನಾಲ್ಕು ವಿಧ; ದಗ್ಧ – ಸುಟ್ಟುಹೋದ; ಶೇಷಾಶೇಷ – ಅಳಿದುಳಿದ; ಕರ್ಮೇಂಧನ – ಕರ್ಮ ಎಂಬ ಕಟ್ಟಿಗೆ

೧೫೪. ತೋಯಾಕರ – ಸರೋವರ; ಅಂಭೋರುಹ – ಕಮಲ; ವಿಭ್ರಾಜಿ – ಶೋಭಿಸುವ; ನೀರೇಜಿನೀಷಂಡ – ಕಮಲಿನೀಸಮೂಹ

೧೫೫. ನಂದೀಶ್ವರ – ಒಂದು ಪರ್ವ: ನಂದೀಶ್ವರ ಎಂಬುದು ಮಧ್ಯಮಲೋಕದ ಎಂಟನೆಯ ದ್ವೀಪ, ಇದರಲ್ಲಿ ಐವತ್ತೆರಡು ಪರ್ವತಗಳಿವೆ, ಒಂದೊಂದರಲ್ಲೂ ಒಂದು ಚೈತ್ಯಾಲಯ, ಅಷ್ಟಾಹ್ನಿಕಪರ್ವಗಳಲ್ಲಿ ಅಂದರೆ ಕಾರ್ತಿಕ–ಫಾಲ್ಗುಣ ಮತ್ತು ಆಷಾಢ ಮಾಸದ ಕೊನೆಯ ಎಂಟು ದಿನಗಳಲ್ಲಿ ದೇವತೆಗಳು ಆ ದ್ವೀಪಕ್ಕೆ ಹೋಗಿ ಹಾಗೂ ಮನುಷ್ಯರು ಮಂದಿರಗಳಲ್ಲಿ ಆ ದ್ವೀಪದ ಸ್ಥಾಪನೆ ಮಾಡಿ ಐವತ್ತೆರಡು ಚೈತ್ಯಾಲಯಪೂಜೆ ಮಾಡುತ್ತಾರೆ

೧೫೬. ಸಿತಪಕ್ಷ – ಶುಕ್ಲಪಕ್ಷ; ದಿನಪತಿವಾರ – ಭಾನುವಾರ; ಅನ್ವಿತಮಾಗು – ಕೂಡಿ ಬರು; ಸಾಗರಾಂತಕ್ಷಿತಿ – ಸಮುದ್ರದವರೆಗಿನ ಭೂಮಿ

೧೫೭. ಸ್ಯಂದಿ – ಸುರಿಸುವಂತಹ; ಬುಧರ್ – ವಿದ್ವಾಂಸರು; ಅಪವರ್ಗ – ಮೋಕ್ಷ; ವಸ್ತುಕೃತಿ – ವಸ್ತುಕಾವ್ಯ; ಮಾರ್ಗ – ಸಾಂಪ್ರದಾಯಿಕ [ಸಂಸ್ಕೃತ ಕೃತಿಗಳ ಮಾದರಿಯುಲ್ಲಿನ] ನಿರೂಪಣಾ ಸ್ವರೂಪ; ದೇಸೆ – ದೇಸಿ, ಜನಪದ ಸಂವೇದನೆಗನುಗುಣವಾದ ನಿರೂಪಣೆ

೧೫೮. ಉಪೇತ – ಒಳಗೊಂಡ; ವಿಚ್ಛಿತ್ತಿ – ವಿನಾಶ; ಹೃದ್ಯ – ಹೃದಯಂಗಮ; ವಾಗ್ವಧೂಮುದ್ರೆ – ಸರಸ್ವತಿಯ ಅಂಕಿತ; ವಾಕ್ಯಮಾಣಿಕ್ಯಕೋಶ – ವಾಕ್ಯಗಳೆಂಬ ಮಾಣಿಕ್ಯಗಳ ಭಂಡಾರ

೧೫೯. ವಂದ್ಯ – ನಮಸ್ಕರಿಸಲ್ಪಡುವ; ವಾಕ್ಚಂದ್ರಿಕಾ – ಮಾತೆಂಬ ಬೆಳುದಿಂಗಳು; ಉದೀರ್ಣ – ತುಂಬಿದ; ಕಲ್ಲೋಲಮಾಲಾ – ಅಲೆಗಳ ಪರಂಪರೆ; ಆಕೀರ್ಣ – ಹರಡಿದ; ಪ್ರಣೀತ – ವಿರಚಿತವಾದ

* * * * * * *

ಸಂಕ್ಷಿಪ್ತ ವಿಕ್ರಮಾರ್ಜುನ ವಿಜಯಂ

ಸಂಕ್ಷಿಪ್ತ ವಿಕ್ರಮಾರ್ಜುನ ವಿಜಯಂ

೧. ಭರತವಂಶಾವತಾರಂ

ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ
ಜೀಯೆನೆ ಬೇಡಿ ಕೊಳ್ಳದೆ ವಿರೋಧಿ ನರೇಂದ್ರರನೊತ್ತಿ ಕೊಂಡುಮಾ
ತ್ಮೀಯ ಸುಪುಷ್ಪಪಟ್ಟಮನೊಡಂಬಡೆ ತಾಳ್ದಿಯುಮಿಂತುದಾತ್ತ ನಾ
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ೧

ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತವರಪ್ರಸಾದಮು
ಜ್ವಳ ಜಸಮಂಗಸಂಗತ ಲಸದ್ಭಸಿತಂ ಪ್ರಭುಶಕ್ತಿ ಶಕ್ತಿ ನಿ
ರ್ಮಳ ಮಣಿಭೂಷಣಂ ಫಣಿಭೂಷಣಮಾಗೆ ನೆಗಟ್ತೆಯಂ ಪುದುಂ
ಗೊಳಿಸಿದನೀಶ್ವರಂ ನೆಗಟ್ದುದಾರ ಮಹೇಶ್ವರನೀಗೆ ಭೋಗಮಂ ೨

ಚಂಡವಿರೋಧಿ ಸಾಧನತಮಸ್ತಮಮೋಡೆ ವಿಶಿಷ್ಟಪದ್ಮಿನೀ
ಷಂಡಮರಲ್ದು ರಾಗದಿನೊಱಲ್ದಿರೆ ಯಾಚಕ ಭೃಂಗಕೋಟಿ ಕೈ
ಕೊಂಡು ನಿರಂತರಂ ತಗುಳ್ದು ಕೀರ್ತಿಸೆ ಮಿಕ್ಕೆಸೆವ ಪ್ರಚಂಡಮಾ
ರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜವಾಙ್ಮರೀಚಿಯಿಂ ೩

ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಯೊಳ್ ಪೊದಳ್ದು ಸ
ನ್ನಿಹಿತವೆನಿಪ್ಪಪೂರ್ವ ಶುಭಲಕ್ಷಣದೇಹದೊಳ್ಪನಾಳ್ದು ಸಂ
ದಹಿಕಟಕಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ
ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ ೪

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಳಲ್ದು ತುಂ
ಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ ೫

ಕವಿಗಳ ನಾಮಧಾರಕ ನರಾಧಿಪರೋಳಿಯೋಳೀತನೊಳ್ಪಿದಂ
ಕವಿ ನೃಪನೀತನೊಳ್ಪಿದನೆನಲ್ ದೊರೆಯಲ್ತು ನೆಗಟ್ತೆವೆತ್ತ ಸ
ತ್ಕವಿಗಳ ಷೋಡಶಾವನಿಪರೋಳಿಯೊಳಂ ಕವಿತಾಗುಣಾರ್ಣವಂ
ಕವಿತೆಯೊಳಗ್ಗಳಂ ಗುಣದೊಳಗ್ಗಳನೆಲ್ಲಿಯುಮೀ ಗುಣಾರ್ಣವಂ ೬

ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ ೭

ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ
ವ್ಯಾಸನೆನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಮನೋ
ವಾಸಮನೆಯ್ದೆ ಪೇೞ್ದಪೆನದಲ್ಲದೆ ಗರ್ವಮೆ ದೋಷಮೆತ್ತಿಗಂ
ದೋಷಮೆ ಕಾಣೆನೆನ್ನಱಿವ ಮಾೞ್ಕೆಯೆ ಪೇೞ್ವಿನಿದಾವ ದೋಷಮೋ ೮

ವಿಪುಳ ಯಶೋವಿತಾನಗುಣಮಿಲ್ಲದನಂ ಪ್ರಭು ಮಾಡಿ ಪೂರ್ವಭೂ
ಮಿಪರ ಪದಂಗಳಂ ಪುಗಿಸಿ ಪೋಲಿಪರೀತನುದಾತ್ತಪೂರ್ವಭೂ
ಮಿಪರುಮನೊಳ್ಪಿನೊಳ್ ತಗುಳೆ ವಂದೊಡೆಯೀ ಕಥೆಯೊಳ್ ತಗುಳ್ಚಿ ಪೋ
ಲಿಪೊಡೆನಗಟ್ತಿಯಾದುದು ಗುಣಾರ್ಣವಭೂಭುಜನಂ ಕಿರೀಟಿಯೊಳ್ ೯

ಅದೆಂತೆನೆ ಸಮುನ್ಮಿಷದ್ವಿವಿಧರತ್ನಮಾಲಾಪ್ರಭಾ
ಭಿದಾರುಣಜಲಪ್ಲವಾವಿಳ ವಿಳೋಳ ವೀಚೀರಯ
ಪ್ರದಾರಿತಕುಳಾಚಲೋದಧಿಪರೀತಮಾಗಿರ್ದ ಜಂ
ಬುದೀವಿಯೊಳಗುಂಟು ನಾಡು ಕುರುಜಾಂಗಣಂ ನಾಮದಿಂ ೧೦

ಬೆಳೆದೆಱಗಿರ್ದ ಕೆಯ್ವೊಲನೆ ಕೆಯ್ವೊಲನಂ ಬಳಸಿರ್ದ ಪೂತ ಪೂ
ಗೊಳಗಳೆ ಪೂತ ಪೂಗೊಳಗಳಂ ಬಳಸಿರ್ದ ವಿಚಿತ್ರನಂದನಾ
ವಳಿಗಳೆ ನಂದನಾವಳಿಗಳಂ ಬಳಸಿರ್ದ ಮದಾಳಿಸಂಕುಲಂ
ಗಳೆ ವಿಷಯಾಂಗನಾಲುಳಿತ ಕುಂತಳದಂತೆವೊಲೊಪ್ಪಿ ತೋಱುಗುಂ ೧೧

ಲಳಿತವಿಚಿತ್ರಪತ್ರಫಲಪುಷ್ಪಯುತಾಟವಿ ಸೊರ್ಕಿದಾನೆಯಂ
ಬೆಳೆವುದು ದೇವಮಾತೃಕಮೆನಿಪ್ಪ ಪೊಲಂ ನವಗಂಧಶಾಲಿಯಂ
ಬೆಳೆವುದು ರಮ್ಯನಂದನವನಾಳಿ ವಿಯೋಗಿಜನಕ್ಕೆ ಬೇಟಮಂ
ಬಳೆವುದು ನಾಡ ಕಾಡಂ ಬೆಳಸಿಂಬೆಳಸಾ ವಿಷಯಾಂತರಾಳದೊಳ್ ೧೨

ಅಂತು ಸೊಗಯಿಸುವ ಕುರುಜಾಂಗಣವಿಷಯಕ್ಕೆ ರಾಜದ್ರಾಜಧಾನಿಯಾಗಿರ್ದು ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ ದಿಕ್ಕರಿತಟಕ್ಕೆ ಮದಲೇಖೆಯಿರ್ಪಂತೆ ಕೈಟಭಾರಾತಿಯ ವಿಶಾಲೋರುಸ್ಥಳಕ್ಕೆ ಕೌಸ್ತುಭಮಿರ್ಪಂತೆ ಸೊಗಯಿಸುತಿರ್ದುದು ಹಸ್ತಿನಪುರಮೆಂಬುದು ಪೊಟಲ್, ಅಲ್ಲಿ

ಅದಱ ಪೊಱವೊಟಲ ವಿಶಾಳ ಕನಕಕೃತಕಗಿರಿಗಳಿಂ । ಫಳಪ್ರಕೀರ್ಣ ತರುಗಳಿಂ
ನನೆಯ ಕೊನೆಯ ತಳಿರ ಮುಗುಳ ವನಲತಾನಿಕುಂಜದಿಂ । ಪ್ರಸೂನರಜದ ಪುಂಜದಿಂ
ಗಗನತಳಮೆ ಪಱಿದು ಬಿಟ್ಟುದೆನಿಪ ಬಹುತಟಾಕದಿಂ । ಕುಕಿಲ್ವ ನಲಿವ ಕೋಕದಿಂ
ಸುರಿವ ಸುರಯಿಯರಲ ಮುಗುಳ್ಗೆ ಮೊಗಸದಳಿಕುಳಂಗಳಿಂ । ತೊದಲ್ವ ಶಿಶುಶುಕಂಗಳಿಂ
ತೆಗೆಯೆ ಬೀರರವದೆ ಮೇಲೆ ಪರಿವ ಮದಗಜಂಗಳಿಂ । ಚಳತ್ತುರಂಗಮಂಗಳಿಂ
ಲವಣಜಲಧಿ ಬಳಸಿದಂತೆ ಬಳಸಿದಗಟಿ ನೀಳದಿಂ । ದುದಗ್ರ ಕನಕಶಾಳದಿಂ
ದೊಳಗೆ ಕುಲನಗಂಗಳೆನಿಪ ದೇವಕುಲದ ಭೋಗದಿಂ । ಸರಾಗಮಾದ ರಾಗದಿಂ
ದಿವಮನೇಳಿಪಂತು ಮಿಳಿರ್ವ ವಿವಿಧಕೇತನಂಗಳಿಂ । ಸದಾ ನಿಕೇತನಂಗಳಿಂ ೧೩

ಅಂತು ಮೂಱು ಲೋಕದ ಚೆಲ್ವೆಲ್ಲಮಂ ವಿಧಾತ್ರನೊಂದೆಡೆಗೆ ತೆರಳ್ಚಿದಂತೆ ಸಮಸ್ತವಸ್ತುವಿಸ್ತಾರಹಾರಮಾಗಿರ್ದ ಹಸ್ತಿನಪುರವೆ ನಿಜವಂಶಾವಳಂಬಮಾಗೆ ನೆಗಟ್ದ ಭರತಕುಲತಿಲಕರ ವಂಶಾವತಾರಮೆಂತಾದುದೆದೊಡೆ,

ಕಮಲೋದ್ಭವನಮಳಿನ ಹೃ
ತ್ಕಮಲದೊಳೊಗೆದರ್ ಸುರೇಂದ್ರಧಾರಕರಾ ವಾ
ಗಮಳರ್ ನೆಗಟ್ದಿರ್ದರ್ ಪುಲ
ಹಮರೀಚ್ಯತ್ರ್ಯಂಗೀರಸ ಪುಳಸ್ತ್ಯಕ್ರತುಗಳ್ ೧೪

ಅಂತು ಹಿರಣ್ಯಗರ್ಭಮನಸ್ಸಂಭವದೊಳ್ ಪುಟ್ಟಿದ ಸೂರ್ಯನಿಂದವ್ಯವಚ್ಛಿನ್ನಮಾಗಿ ಬಂದ ವಂಶಂ ಸೂರ್ಯವಂಶಮೆಂಬುದಾಯ್ತು; ಶಂತನುಗಂ ಗಂಗಾಕಾಂತೆಗಂ ಪುಟ್ಟಿದ ಗಾಂಗೇಯಂ ಯುವರಾಜಕಂಠಿಕಾಪರಿಕಲಿತಕಂಠಲುಂಠನುಮಾಗಿ ಸುಖದೊಳರಸುಗೆಯ್ಯುತ್ತಿರ್ಪನ್ನೆಗಂ, ಇತ್ತ ಗಂಗಾದೇಶದೊಳ್ ಉಪರಿಚರವಸುವೆಂಬರಸಂ ಮುಕ್ತಾವತಿಯೆಂಬ ತೊಱೆಯೊಳ್ ವಿಶ್ರಮಿಸಿರ್ದೊಡೆ ಕೋಳಾಹಳಮೆಂಬ ಪರ್ವತಕ್ಕೆ ಪುಟ್ಟಿದ ಗಿರಿಜೆಯೆಂಬ ಕನ್ನೆಯನಾತಂ ಕಂಡು ಕಣ್ಬೇಟಂಗೊಂಡು ಮದುವೆಯಂ ನಿಂದು, ಒಂದು ದಿವಸಂ ಇಂದ್ರನೋಲಗಕ್ಕೆ ಪೋಗಿ ಋತುಕಾಲಪ್ರಾಪ್ತೆಯಾಗಿರ್ದ ನಲ್ಲಳಲ್ಲಿಗೆ ಬರಲ್ ಪಡೆಯದೆ ಆಕೆಯಂ ನೆನೆದಿಂದ್ರಿಯಕ್ಷರಣೆಯಾದೊಡೆ ಅದನೊಂದು ಕದಳೀಪತ್ರದೊಳ್ ಪುದಿದು ತನ್ನನಡಪಿದ ಗಿಳಿಯ ಕೈಯೊಳೋಪಳಲ್ಲಿಗಟ್ಟಿದೊಡೆ, ಅದಂ ತರ್ಪಗಿಳಿಯನೊಂದು ಗಿಡುಗನೆಡೆಗೊಂಡು ಜಗುನೆಯಂ ಪಾಯ್ವಾಗಳ್ ಉಗಿಬಗಿಮಾಡಿದಾಗಳ್ ಅದಱ ಕೈಯಿಂ ಬರ್ದುಂಕಿ ತೊಱೆಯೊಳಗೆ ಬಿಟ್ಟೊಡೆ, ಅದನೊಂದು ಬಾಳೆಮೀನ್ನುಂಗಿ ಗರ್ಭಮಂ

ತಾಳ್ದಿದೊಡೆ, ಒಂದು ದಿವಸಂ ಆ ಮೀನನೊರ್ವ ಜಾಲಗಾಱಂ ಜಾಲದೊಳ್ ಪಿಡಿದು ಅಲ್ಲಿಗರಸಪ್ಪ ದಾಶನಲ್ಲಿಗುಯ್ದು ತೋರಿದೊಡದಂ ವಿದಾರಿಸಿ ನೋೞ್ಪನ್ನೆಗಂ ಬಾಳೆಯ ಗರ್ಭದೊಳಿರ್ದ ಬಾಳೆಯುಂ ಬಾಳನುಮಂ ಕಂಡೆತ್ತಿಕೊಂಡು ಮತ್ಸ್ಯಗಂಧಿಯುಂ ಮತ್ಸ್ಯಗಂಧನುಮೆಂದು ಪೆಸರನಿಟ್ಟು ನಡಪಿ ಯಮುನಾನದೀತೀರದೊಳಿರ್ಪನ್ನೆಗಂ, ಅಲ್ಲಿಗೊರ್ಮೆ ಬ್ರಹ್ಮರ ಮೊಮ್ಮನಪ್ಪ ವೃದ್ಧಪರಾಶಮುನೀಂದ್ರನ್ ಉತ್ತರಾಪಥಕ್ಕೆ ಪೋಗುತ್ತುಂ ಬಂದು ತೊೞೆಯಂ ಪಾಯಿಸೆಂಬುದುಂ ಸಾಸಿರ್ವರೇೞೆದೊಡಲ್ಲದೆ ಈ ಓಡಂ ನಡೆಯದೆಂಬುದುಂ ಆನನಿಬರ ಬಿಣ್ಪುಮಪ್ಪೆಮೇೞಿಸೆಂದೊಡೆ ಅಂತೆ ಗೆಯ್ವೆನೆಂದು ಓಡಮೇೞಿಸಿ ನಡೆಯಿಸುವಲ್ಲಿ ದಿವ್ಯಕನ್ನೆಯನಟ್ಟಿರ್ತು ನೋಡಿ,

ಮನದೊಳ್ ಸೋಲ್ತು ಮನೀಂದ್ರನಾಕೆಯೊಡಲೀ ದುರ್ಗಂಧವೋಪಂತೆ ಯೋ
ಜನಗಂಧಿತ್ವಮನಿತ್ತು ಕಾಂಡಪಟದಂತಿರ್ಪನ್ನೆಗಂ ಮಾಡಿ ಮಂ
ಜನಲಂಪಟ್ಟಿಱಿನೀಯೆ ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾ
ಮುನಿಪಂ ಪುಟ್ಟಿದನಂತು ದಿವ್ಯಮುನಿಗಳ್ಗೇಗೆಯ್ದೊಡಂ ತೀರದೇ ೧೫

ಅಂತು ನೀಲಾಂಬುದಶ್ಯಾಮನುಂ ಕನಕಪಿಂಗಳಜಟಾಬಂಧಕಳಾಪನುಂ ದಂಡಕಪಾಳಹಸ್ತನುಂ ಕೃಷ್ಣಮೃಗತ್ವಕ್ಪರಿಧಾನನುಮಾಗಿ ವ್ಯಾಸಭಟ್ಟಾರಕಂ ಪುಟ್ಟುವುದುಂ, ಆತನನೊಡಗೊಂಡು ಸತ್ಯವತಿಗೆ ಪುನಃಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದಂ; ಇತ್ತಲ್

ಮೃಗಯಾವ್ಯಾಜದಿನೊರ್ಮೆ ಶಂತನು ತೊೞಲ್ತರ್ಪಂ ಪಳಂಚಲ್ಕೆ ತ
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂಬೋಲ್ ಸೋಲ್ತು ಕಂಡೊಲ್ದು ನ
ಲ್ಮೆಗೆ ದಿವ್ಯಂಬಿಡಿವಂತೆವೋಲ್ ಪಿಡಿದು ನೀಂ ಬಾ ಪೋಪಮೆಂದಂಗೆ ಮೆ
ಲ್ಲಗೆ ತನ್ನನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ ೧೬

ಎಂಬುದುಂ ಶಂತನು ಪೊೞಲ್ಗೆ ಮಗುಟ್ಟುವಂದು ಅವರಯ್ಯನಪ್ಪ ದಾಶರಾಜನಲ್ಲಿಗೆ ಕೂಸಂ ಬೇಡೆ ಪೆರ್ಗಡೆಗಳನಟ್ಟಿದೊಡೆ ಗಾಂಗೇಯಂ ದೊರೆಯ ಪಿರಿಯ ಮಗನುಂ ಕ್ರಮಕ್ರಮಾರ್ಹನುಂ ಇರ್ದಂತೆ ಎನ್ನ ಮಗಳಂ ಕುಡೆವು ಎಮ್ಮ ಮಗಳ್ಗೆ ಪುಟ್ಟಿದಾತಂ ರಾಜ್ಯಕ್ಕೊಡೆಯನುಂ ಪಿರಿಯ ಮಗನುಂ ಕ್ರಮಕ್ಕರ್ಹನುಮಪ್ಪೊಡೆ ಕುಡುವೆಮೆನೆ ತದ್ವೃತ್ತಾಂತಮಂ ಮಂತ್ರಿಗಳಿಂ ಶಂತನು ಕೇಳ್ದು ಕ್ರಮಮುಮಂ ವಿಕ್ರಮುಮಂ ತಾಳ್ದುವ ಮಗಂ ಗಾಂಗೇಯನಿರ್ದಂತೆ ತನ್ನದೊಂದು ಸವಿಗಂ ಸೋಲಕ್ಕಂ ಇತ್ತಂ ನಿಜಕ್ರಮಮಂ ತನ್ನಿಯ ಬೇಟದಾಕೆಯ ಮಗಂಗೆ ಎಂಬೊಂದಪಖ್ಯಾತಿಯಂ ಬಗೆದು ಶಂತನು ಕರಂಗೆರ್ದೆಗಿಡೆ ಅದಂ ಗಾಂಗೇಯನಱಿದು ದಾಶರಾಜನಲ್ಲಿಗೆ ವಂದು ಆತನ ಮನದ ತೊಡರ್ಪಂ ಪಿಂಗೆ ನುಡಿದು, ಕೂಡಿದನುಯ್ದು ಸತ್ಯವತಿಯಂ ಸತಿಯುಂ ಪತಿಯೊಳ್; ಅಂತು ಶಂತನುವುಂ ಸತ್ಯವತಿಯುಂ ಅನ್ಯೋನ್ಯಾಸಕ್ತಚಿತ್ತರಾಗಿ ಕೆಲವು

ಕಾಲಮಿರ್ಪನ್ನೆಗಮವರ ಬೇಟದ ಕಂದಲ್ಗಳಂತೆ ಚಿತ್ರಾಂಗದ ವಿಚಿತ್ರವೀರ್ಯರೆಂಬ ಮಕ್ಕಳ್ ಪುಟ್ಟಿ ಪ್ರತಾಪಿಗಳಾಗಿ ಬಳೆಯುತ್ತಿರ್ಪನ್ನೆಗಂ, ಶಂತನು ಪರಲೋಕಪ್ರಾಪ್ತನಾದೊಡೆ ಗಾಂಗೇಯಂ ತದುಚಿತಪರಲೋಕಕ್ರಿಯೆಗಳಂ ಮಾಡಿ ಮುನ್ನೆ ತನ್ನ ನುಡಿದ ನುಡಿವಳಿಯೆಂಬ ಪ್ರಾಸಾದಕ್ಕಧಿಷ್ಠಾನಂಗಟ್ಟುವಂತೆ ಚಿತ್ರಾಂಗದಂಗೆ ಪಟ್ಟಮಂ ಕಟ್ಟಿ ರಾಜ್ಯಂಗೆಯಿಸುತ್ತುಮಿರ್ಪನ್ನೆಗಂ, ಒರ್ವ ಗಂಧರ್ವನೊಳೆ ಚಿತ್ರಾಂಗದಂ ದ್ವಂದ್ವಯುದ್ಧಮಂ ಪೊಣರ್ಚಿ ಕಾದಿ ಸತ್ತೊಡೆ ವಿಚಿತ್ರವೀರ್ಯನಂ ಧರಾಭಾರಧುರಂಧರನಂ ಮಾಡಿ ಗಾಂಗೇಯಂ, ತನ್ನಂಕದೊಂದುಗ್ರಸಾಯಕದಿಂ ನಾಯಕರಂ ಪಡಲ್ವಡಿಸುತುಂ ತಾಂ ಅಂಬೆಯಂಬಿಕೆಯಂಬಾಲಿಕೆಯರೆಂಬ ಬಾಲೆಯರಂ ತಂದು ತನ್ನ ತಮ್ಮಂಗಾ ಮೂವರ್ಕನ್ನೆಯರಂ ಪಾಣಿಗ್ರಹಣಂಗೆಯ್ವಾಗಳ್, ಎಲ್ಲರಿಂ ಪಿರಿಯಾಕೆ ನಿನ್ನನಲ್ಲದೆ ಪೆಜಿರನೊಲ್ಲೆನೆಂದಿರ್ದೊಡೆ, ಮತ್ತಿನಿರ್ವರುಮಂ ಮದುವೆಯಂ ಮಾಡಿ, ಗಾಂಗೇಯಂ ಅಂಬೆಯನಿಂತೆಂದಂ: ಸಮಸ್ತಲೋಕಮಱಿದಂತಿರೆ ಪೂಣ್ದೆನಗಾಗದಂಗಜೋತ್ಪತ್ತಿ ಸುಖಕ್ಕೆ ಸೋಲಲ್ ಅಱಿಗುಂ ಪುರುಷವ್ರತಂ ಎಂದೊಡೆ, ಆಕೆ ಗಾಂಗೇಯನ ನುಡಿಯೊಳವಸರಮಂ ಪಸರಮಂ ಪಡೆಯದೆ ತನಗೆ ಕಿಱಿಯಂದುಂಗುರವಿಟ್ಟ ಸಾಲ್ವಲನೆಂಬನರಸನಲ್ಲಿಗೆ ಪೋಗಿ ನೀನೆನ್ನಂ ಕೈಕೊಳವೇಳ್ಕುಮೆಂದು ಆತನ ಮನಮನೊಡಂಬಡಿಸಲಾಱದೆ ಪರಶುರಾಮನಲ್ಲಿಗೆ ಪೋಗಿ ಭೀಷ್ಮನೆನ್ನ ಸ್ವಯಂವರದೊಳ್ ನೆರೆದರಸುಮಕ್ಕಳೆಲ್ಲರುಮನೋಡಿಸಿ ಕೊಂಡುಬಂದೆನ್ನಂ ಮದುವೆಯಂ ನಿಲಲೊಲ್ಲದಟ್ಟಿ ಕಳೆದೊಡೆನ್ನ ಜವ್ವನಮುಮಡವಿಯೊಳಗೆ ಪೂತ ಪೂವಿನಂತೆ ಕಿಡಲೀಯದೆ ಆತನೆನ್ನಂ ಪಾಣಿಗ್ರಹಣಂಗೆಯ್ವಂತು ಮಾಡು ಮಾಡಲಾಱದೊಡೆ ಕಿಚ್ಚಂ ದಯೆಗೆಯ್ ಎಂದಂಬೆ ಕಣ್ಣ ನೀರಂ ತುಂಬೆ, ಶಂತನುಸುತಂಗೆನ್ನಂ ಕರಂ ನಂಬಿದಂಬೆಯೊಳ್ ವಿವಾಹವಿಧಿಯಂ ಮಾಳ್ಪಂ ಎಂದು ನಾಗಪುರಕ್ಕೆ ವರ್ಪ ಪರಶುರಾಮನ ಬರವಂ ಗಾಂಗೇಯಂ ಕೇಳ್ದು ಇದಿರ್ವಂದು ಅರ್ಘ್ಯಮನಿತ್ತು ಪೊಡೆಮಟ್ಟು ಬೆಸನೇನೆಂದೊಡೆ ಈ ಕನ್ನೆಯಂ ಪಸುರ್ವಂದರ್ ಪಸೆಯೆಂಬಿವಂ ಸಮೆದು ನೀಂ ಕೈಕೊಳ್ ಕೊಳಲ್ಕಾಗದೆಂಬೆಸಕಂ ಚಿತ್ತದೊಳುಳ್ಳೊಡೆ ಕೈದುಗೊಳ್ ಎಂದು ನುಡಿದ ಪರಶುರಾಮನ ನುಡಿಯಂ ಕೇಳ್ದು ಎನಗೆ ವೀರಶ್ರೀಯುಂ ಕೀರ್ತಿಶ್ರೀಯುಮಲ್ಲದುಱಿದ ಪೆಂಡಿರ್ ಮೊಜ಼ೆಯಲ್ಲ ಎನೆ, ಗಾಂಗೇಯನೊಳ್ ಪರಶುರಾಮಂ ಕಾದಿ ಬಸವಱಿದು ಮೂರ್ಛೆವೋಗಿರ್ದನಂ ಕಂಡಂಬೆಯೆಂಬ ದುಂಡುಱುಂಬೆ ನಿನಗೆ ವಧಾರ್ಥವಾಗಿ ಪುಟ್ಟುವೆನಕ್ಕೆ ಎಂದು ಕೋಪಾಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ ಕಾರಣಾಂತರದೊಳ್ ಶಿಖಂಡಿಯಾಗಿರ್ದಳ್;

ಇತ್ತ ಭೀಷ್ಮರ ಬೆಂಬಲದೊಳ್ ವಿಚಿತ್ರವೀರ್ಯನುಂ ಅವಾರ್ಯವೀರ್ಯನುಮಾಗಿ ಕೆಲವು ಕಾಲಂ ರಾಜ್ಯಲಕ್ಷ್ಮಿಯಂ ತಾಳ್ದಿ ರಾಜಯಕ್ಷ್ಮತಪ್ತಶರೀರನಾತ್ಮಜಗತಜೀವಿಯಾಗಿ ಪರಲೋಕಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಮತ್ಯಂತ ಶೋಕಾನಲದಹ್ಯಮಾನಮಾನಸರ್ಕಳಾಗಿ ಆತಂಗೆ ಪರಲೋಕಕ್ರಿಯೆಗಳಂ ಮಾಡಿ, ರಾಜ್ಯಂ ನಷ್ಟರಾಜಮಾದುದರ್ಕೆ ಮಮ್ಮಲ ಮಱುಗಿ, ಸತ್ಯವತಿಯುಂ ಸಿಂಧುಪುತ್ರನನಿಂತೆಂದಳ್:

ಮುನ್ನಿನೊಜಿಂಟುವೇಡ ಮಗನೆ ಕೈಕೊಳ್ ಧರಾಭಾರಮಂ ಎಂದ ಸತ್ಯವತಿಗೆ ಬಿಸುಡೆಂ ಮದೀಯ ಪುರುಷವ್ರತಮಂ ಎಂದಚಲಿತಪ್ರತಿಜ್ಞಾರೂಢನಾದ ಅಮರಾಪಗಾನಂದಂನ ನೇಗೆಯ್ದುವೊಡಂಬಡಿಸಲಾಜಿದೆ ಸತ್ಯವತಿ ತಾನುಮಾಳೋಚಿಸಿ ನಿಶ್ಚಿತಮಂತ್ರರಾಗಿ ಕೃಷ್ಣದ್ವೈಪಾಯನನಂ ನೆನೆದು ಬರಿಸಿ, ಹಿರಣ್ಯಗರ್ಭಬ್ರಹ್ಮರಿಂ ತಗುಳ್ದವ್ಯವಚ್ಛಿನ್ನಮಾಗಿ ಬಂದ ಸೋಮವಂಶಮೀಗಳೆಮ್ಮ ಕುಲಸಂತತಿಗಮಾರುಮಿಲ್ಲದೆಡೆವಜಿದು ಕಿಡುವಂತಾಗಿರ್ದುದು, ಅದುಕಾರಣದಿಂ ನಿಮ್ಮ ತಮ್ಮಂ ವಿಚಿತ್ರವೀರ್ಯನ ಕ್ಷೇತ್ರದೊಳಂಬಿಕೆಗಮಂಬಾಲೆಗಂ ಪುತ್ರರಪ್ಪಂತು ದಯೆಗೆಯ್ವುದೆನೆ, ಅಂತೆ ಗೆಯ್ವೆನೆಂದು ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿಜಿಕೊಳೆ ನಿಂದರಂ ನಯದೆ ನೋಡೆ ಪೊದಳ್ದುದು ಸತಿಯರಿರ್ವರೊಳಂ ನವಗರ್ಭವಿಭ್ರಮಂ;

ಅಂತು ದಿವ್ಯಸಂಯೋಗದೊಳ್ ಇರ್ವರುಂ ಗರ್ಭಮಂ ತಾಳ್ದರ್; ಮತ್ತೊರ್ವಂ ಮಗನಂ ವರಮಂ ಬೇಡೆಂದಂಬಿಕೆಗೆ ಪೇಟ್ದೊಡಾಕೆಯುಂ ವ್ಯಾಸಭಟ್ಟಾರಕರಲ್ಲಿಗೆ ಪೋಗಲಲಸಿ ತನ್ನ ಸೂಳೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡಾಕೆಗೆ ವರದನಾಗಿ ವ್ಯಾಸಮುನೀಂದ್ರಂ ಸತ್ಯವತಿಗಂ ಭೀಷ್ಮಂಗಮಿತೆಂದಂ: ಎನ್ನರಪ್ರಸಾದಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳಪ್ಪುದಜಿಂದಾಕೆಗೆ ಧೃತರಾಷ್ಟ್ರನೆಂಬ ಮಗನತ್ಯಂತಸುಂದರಾಂಗ ನಾಗಿಯುಂ ಜಾತ್ಯಂಧನಕ್ಕುಂ, ಅಂಬಾಲೆ ಮದ್ರೂಪಮಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಜಿಂದಾಕೆಗೆ ಪಾಂಡುರೋಗಸಂಗತನುಂ ಅನೇಕಭದ್ರಲಕ್ಷಣಲಕ್ಷಿತನುಂ ಅತ್ಯಂತಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಂ, ಅಂಬಿಕೆಯ ಸೂಳೆಯಪ್ಪಾಕೆ ದರಹಸಿತವದನಾರವಿಂದೆಯಾಗಿ ಬರವಂ ಕೈಕೊಂಡಳಪ್ಪುದಜಿಂದಾಕೆಯ ಮಗಂ ವಿದುರನೆಂಬನನಂಗಾಕಾರನುಂ ಆಚಾರವಂತನುಂ ಬುದ್ಧಿವಂತನುಮಕ್ಕುಂ ಎಂದು ಪೇೞ್ದು ಮುನಿಪುಂಗವಂ ಪೋದಂ.

ವರಂಬಡೆದ ಸಂತಸಂ ಮನದೊಳಾಗಲೊಂದುತ್ತರೋ
ತ್ತರಂ ಬಳೆದ ಮಾೞ್ಕೆಯಿಂ ಬಳೆವ ಗರ್ಭಮಂ ತಾಳ್ದಿಯಾ
ದರಂ ಬೆರಸು ಪೆತ್ತರಂದು ಧೃತರಾಷ್ಟ್ರವಿಖ್ಯಾತಪಾಂ
ಡುರಾಜವಿದುರರ್ಕಳಂ ಕ್ರಮದೆ ಮೂವರುಂ ಮೂವರಂ ೧೭

ಅಂತವರ್ಗೆ ಜಾತಕರ್ಮನಾಮಕರಣಾನ್ನಪ್ರಾಶನಚೌಲೋಪನಯನಾದಿ ಷೋಡಶಕ್ರಿಯೆಗಳಂ ಗಾಂಗೇಯಂ ಮುಂತಿಟ್ಟು ಮಾಡಿ ಶಸ್ತ್ರಶಾಸ್ತ್ರಂಗಳೊಳತಿಪರಿಣತರಂ ಮಾಡಿ ಮದುವೆಯಂ ಮಾಡಲೆಂದು ಧೃತರಾಷ್ಟ್ರಂಗೆ ಗಾಂಧಾರರಾಜ ಸೌಬಲನ ಮಗಳಪ್ಪ ಗಾಂಧಾರಿಯಂ ಶಕುನಿಯೊಡವುಟ್ಟಿದಳಂ ತಂದುಕೊಟ್ಟು;

ಮತ್ತಿತ್ತ ಕುಂತಿ ಕುಂತಿಭೋಜನ ಮನೆಯೊಳ್ ಬಳೆಯುತ್ತಿರ್ಪನ್ನೆಗಂ, ಆ ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂಗೊಳೆ ದಯೆಯಿಂ ದೂರ್ವಾಸಂ ಐದು

ವಿಳಸಿತಮಂತ್ರಾಕ್ಷರಂಗಳಂ ಕೊಟ್ಟು, ಅವುಗಳನಾಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆಯೆಂದು ಬೆಸಸಿದೊಡೆ, ಒಂದು ದಿವಸಂ

ಬಂದು ಸುರನದಿಯ ನೀರೊಳ್
ಮಿಂದಿನನಂ ನೋಡಿ ನಿನ್ನ ದೊರೆಯನೆ ಮಗನ
ಕ್ಕೆಂದಾಹ್ವಾನಂಗೆಯ್ಯಲೊ
ಡಂ ದಲ್ ಧರೆಗಿಳಿದನಂದು ದಶಶತಕಿರಣಂ ೧೮

ಅಂತು ನಭೋಭಾಗದಿಂ ಭೂಮಿಭಾಗಕ್ಕಿಳಿದು ನಿಂದರವಿಂದಬಾಂಧವನಂ ನೋಡಿ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳಂ ಮನದ ಶಂಕೆಯುಮಂ ಮೆಯ್ಯ ನಡುಕಮುಮಂ ಆದಿತ್ಯಂ ಕಿಡೆ ನುಡಿದು ಬರಿಸಿದ ಕಾರಣಮಾವುದೊ ತರುಣಿ ಇನ್ನೇಳಿಮೆಂದೊಡಾಗದು ಪೋಗಲ್ ಪುತ್ರನೆನ್ನ ದೊರೆಯಂ ನಿನಗಕ್ಕೆಂಬುದುಂ, ಒಡವುಟ್ಟಿದ ಮಣಿಕುಂಡಲವೊಡವುಟ್ಟಿದ ಸಹಜಕವಚವುಮರ್ದಿರೆ ಒದವಿದ ಗರ್ಭದೊಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ; ಆ ಬಾಲಿಕೆಯುಂ ನಡನಡನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್;

ಇತ್ತ ಗಂಗಾದೇವಿಯುಮಾ ಕೂಸಂ ಮುಳುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಟ್ಟೈಸಿ ತರೆ ಗಂಗಾತೀರದೊಳಿರ್ಪ ಸೂತನೆಂಬವಂ ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡಾಕೆ ರಾಗಿಸಿ ಸುತನ ಸೂತಕಮಂ ಕೊಂಡಾಡಿ, ನಿಧಿಗಂಡಂತೆ ವಸುಧೆಗಸದಳಮಾಯ್ತಾ ಮಗನಂದಮೆಂದು ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್; ವಸುಷೇಣಂ ಬಳೆದೆಸಕಮದೋರಂತೆ ಜನಂಗಳ ಕರ್ಣೋಪಾಂತದೊಳೊಗೆದೆಸೆಯೆ ಕರ್ಣನೆಂಬನುಮಾದಂ; ಆತಂ ಶಸ್ತ್ರಶಾಸ್ತ್ರವಿದ್ಯೆಯೊಳತಿಪರಿಣತನಾಗಿ ನವಯೌವನಾರಂಭದೊಳ್ ಭುವನಕ್ಕೆಲ್ಲಂ ನೆಗಳ್ದ ಕರ್ಣನ ಪೊಗಟ್ತೆಯಂ ನೆಗಟ್ತೆಯುಮನಿಂದ್ರಂ ಕೇಳ್ದು ಮುಂದೆ ತನ್ನಂಶದೊಳ್ ಪುಟ್ಟುವರ್ಜುನಂಗಮಾತಂಗಂ ದ್ವಂದ್ವಯುದ್ಧಮುಂಟೆಂಬುದಂ ತನ್ನ ದಿವ್ಯಜ್ಞಾನದಿಂದಮಱಿದು ಇಂತಲ್ಲದೀತನನಾತಂ ಗೆಲಲ್ ಬಾರದೆಂದು

ಬೇಡಿದೊಡೆ ಬಲದ ಬರಿಯುಮ
ನೀಡಾಡುಗುಮುಗಿದು ಕರ್ಣನೆಂದಾಗಳೆ ಕೈ
ಗೂಡಿದ ವಟುವಾಕೃತಿಯೊಳೆ
ಬೇಡಿದನಾ ಸಹಜಕವಚಮಂ ಕುಂಡಳಮಂ ೧೯

ತನ್ನ ಸಹಜಕವಚಮಮಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತುಗಿದು ಕೊಟ್ಟೊಡೆ ಇಂದ್ರನಾತನ ಕಲಿತನಕ್ಕೆ ಮೆಚ್ಚಿ ಕೊಲ್ಲುಗುಮಿದು ನಿಜವಿರೋಧಿಯಂ ಧುರದೊಳೆಂದು ಶಕ್ತಿಯನಿತ್ತಂ, ಅಂತಿಂದ್ರನಿತ್ತ ಶಕ್ತಿಯಂ ಕೊಂಡು ನಿಜಭುಜಶಕ್ತಿಯಂ ಪ್ರಕಟಂ ಮಾಡಲೆಂದು ರೇಣುಕಾನಂದನಲ್ಲಿಗೆ ಪೋಗಿ

ಕೂರಿಸೆ ಗುರುಶುಶ್ರೂಷೆಯೊ
ಳಾ ರಾಮನನುಗ್ರಪರಶುಪಾಟಿತರಿಪುವಂ
ಶಾರಾಮನನಿಷುವಿದ್ಯಾ
ಪಾರಗನೆನಿಸಿದುದು ಬಲ್ಮೆ ವೈಕರ್ತನನಾ ೨೦

ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮಱಿದೊಱಗಿದಾ ಪ್ರಸ್ತಾವದೊಳ್ ಆ ಮುನಿಗೆ ಮುನಿಸಂ ಮಾಡಲೆಂದಿಂದ್ರನುಪಾಯದೊಳಟ್ಟಿದ ವಜ್ರಕೀಟಂಗಳ್ ಕರ್ಣನೆರಡುಂ ತೊಡೆಯುಮನುಳಿಯನೂಱೆ ಕೊಡಂತಿಯೊಳ್ ಬೆಟ್ಟಿದಂತುರ್ಚಿಪೋಗೆಯುಂ ಅದನಱಿಯದಂತೆ ಗುರುಗೆ ನಿದ್ರಾಭಿಘಾತಮಕ್ಕುಮೆಂದು ತಲೆಯನುಗುರಿಸುತ್ತುಮಿರೆಯಿರೆ

ಅತಿವಿಶದವಿಶಾಲೋರು
ಕ್ಷತದಿಂದೊಱೆದನಿತು ಜಡೆಯುಮಂ ನಾಂದಿ ಮನಃ
ಕ್ಷತದೊಡನೆಚ್ಚರಿಸಿದುದು
ಕ್ಷಿತಮಾ ವಂದಸ್ರಮಿಶ್ರಗಂಧಂ ಸಮೀರಂ ೨೧

ಅಂತೆಚ್ಚತ್ತು ನೆತ್ತರ ಪೊನಲೊಳ್ ನಾಂದು ನನೆದ ಮೆಯ್ಯುಮಂ ತೊಯ್ದು ತಳ್ಪೊಯ್ದ ಜಡೆಯುಮಂ ಕಂಡೀ ಧೈರ್ಯಂ ಕ್ಷತ್ರಿಯಂಗಲ್ಲದಾಗದು ಪಾರ್ವನೆಂದೆನ್ನೊಳ್ ಪುಸಿದು ವಿದ್ಯೆಯಂ ಕೈಕೊಂಡುದರ್ಕೆ ದಂಡಂ ಪೆಱತಿಲ್ಲ ನಿನಗಾನಿತ್ತ ಬ್ರಹಾಸ್ತ್ರಮೆಂಬ ದಿವ್ಯಾಸ್ತ್ರಮವಸಾನಕಾಲದೊಳ್ ಬೆಸಕೆಯ್ಯದಿರ್ಕೆ ಎಂದು ಶಾಪಮನಿತ್ತಂ, ಅಂತು ಕರ್ಣನುಂ ಶಾಪಹತನಾಗಿ ಮಗುಟ್ಟು ಬಂದು ಸೂತನ ಮನೆಯೊಳಿರ್ಪನ್ನೆಗಂ;

ಇತ್ತಲ್ ಕುಂತಿಗವರ ಮಾವನಪ್ಪ ಕುಂತಿಭೋಜಂ ಸ್ವಯಂಬರಂ ಮಾಡೆ, ಆಱುಮನೊಲ್ಲದೆ ಚೆಲ್ವಿಡಿದಿರ್ದ ರೂಪು ದೃಷ್ಟಿಗೆ ವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್, ಅಂತು ಸ್ವಯಂಬರದೊಳ್ ಅಪ್ಪುಕೆಯ್ದ ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ ಗಾಂಗೇಯಂ ವಿಧಾತ್ರಂ ಮುಂಡಾಡುವಂತೆ ತಾಂ ಮದುವೆಯಂ ಮಾಡೆ ವಿವಾಹಮಂಗಳಮದು ಅಚ್ಚರಿಯಾದುದು; ಅಂತಾಕೆಗಳಿರ್ವರುಮೆರಡುಂ ಕೆಲದೊಳಿರೆ ಕಲ್ಪಲತೆಗಳೆರಡಱ ನಡುವಣ ಕಲ್ಪವೃಕ್ಷಮಿರ್ಪಂತಿರ್ದ ಪಾಂಡುರಾಜಂಗೆ ಧೃತರಾಷ್ಟ್ರಂ ಅಂಗಹೀನನೆಂದು

ವಿವಾಹದೊಸಗೆಯೊಡನೆ ಪಟ್ಟಬಂಧಧೊಸಗೆಯುಂ ಮಾಡಿ ನೆಲನನಾಳಿಸಿದಂ; ಪಾಂಡುರಾಜನಧಿಕತೇಜನುಮವನತ ವೈರಿಭೂಭೃತ್ಸಮಾಜನುಮಾಗಿ ನೆಗಱ್ತಿರ್ದೊಂದು ದಿವಸಂ ತೋಪಿನ ಬೇಂಟೆಯನಾಡಲಟ್ತೆಯಿಂ ಪೋಗಿ,

ಇನಿಯಳನಟ್ಟೆಯಿಂದೆ ಮೃಗಿಮಾಡಿ ಮನೋಜಸುಖಕ್ಕೆ ಸೋಲ್ತಲಂ
ಪಿನೆ ನೆರಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ ಮೆ
ಲ್ಲನೆ ಮೃಗಮೆಂದು ಸಾರ್ದು ನೆಱನಂ ನೋಡಿ ನರೇಂದ್ರನೆಚ್ಚು ಭೋಂ
ಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ ೨೨

ಆಗಳ್ ಪ್ರಳಯಮುದುಳ್ಕಮುಳ್ಕುವಂತೆ ತನ್ನೆಚ್ಚಂಬು ಮುನಿಕುಮಾರನ ಕಣ್ಣೊಳಮೆರ್ದೆಯೊಳಮುಳ್ಕೆ ಪೇೞೆನ್ನಾವನೆಚ್ಚನೆಂಬ ಮುನಿಯ ಮುನಿದ ಸರಮಂ ಕೇಳ್ದು ಬಿಲ್ಲನಂಬುಮನೀಡಾಡಿ ತನ್ನ ಮುಂದೆ ನಿಂದಿರ್ದ ಭೂಪನಂ ಮುನಿ ನೋಡಿ,

ಸನ್ನತದಿಂ ರತಕ್ಕೆಳಸಿ ನಲ್ಲಳೊಳೋತೊಡಗೂಡಿದೆನ್ನನಿಂ
ತನ್ನೆಯಮೆಚ್ಚುದರ್ಕೆ ಪೆಱತಿಲ್ಲದು ದಂಡಮೊಱಲ್ದು ನಲ್ಲಲೊಳ್
ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋ
ಗಿನ್ನೆನೆ ರೌದ್ರಶಾಪಪರಿತಾಪವಿಳಾಪದೊಳಾ ಮಹೀಶ್ವರಂ ೨೩

ಎತ್ತ ವನಮೆತ್ತ ಮೃಗಯಾ
ವೃತ್ತಕಮೀ ತಪಸಿಯೆತ್ತ ಮೃಗಮೆಂದೆಂತಾ
ನೆತ್ತೆಚ್ಚೆನಾತ್ಮಕರ್ಮಾ
ಯತ್ತಂ ಪೆಱತಲ್ತಿದೆಲ್ಲಮಘಟಿತಘಟಿತಂ ೨೪

ಎಂದು ಚಿಂತಿಸುತ್ತುಂ ಪೊೞಲ್ಗೆ ಮಗುೞ್ದುವಂದು ಗಾಂಗೇಯಧೃತರಾಷ್ಟ್ರವಿ ದುರರ್ಕಳ್ಗೆ ತದ್ವೃತ್ತಾಂತಮೆಲ್ಲಮಂ ಪೇೞ್ದು ಸಮಸ್ತವಸ್ತುಗಳಂ ದೀನಾನಾಥಜನಕ್ಕೆ ಸೂಱೆಗೊಟ್ಟು ನಿಜಪರಿವಾರಮಂ ಬರಿಸಿ, ಸಂಸಾರಸಾರಮಿದೆಂಬುದಿನ್ನೆನಗೆ ತಪ್ಪುದು ಮುನಿಶಾಪದಿಂದಮಿನ್ನಾರುಮಿದರ್ಕೆ ವಕ್ರಿಸದಿರಿಂ ವನವಾಸದೊಳಿರ್ಪೆನೆಂದು ತಳರೆ, ಬಾರಿಸಿ ವಾರಿಸಿ ಕುಂತಿಮಾದ್ರಿಯರ್ ಬೆನ್ನಬೆನ್ನನೆ ಬರೆ, ಬಿನ್ನಬಿನ್ನನೆ ಪೋಗಿ ಉದ್ಯತ್ ಶೃಂಗಮನಾ ಶತಶೃಂಗಮಂ ನೃಪನೆಯ್ದಿದಂ; ತಪೋವನಮೆ ಪಾವನಮೆಂದು ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ ತದಾಶ್ರಮದೊಳಾಶ್ರಮಕ್ಕೆ ಗುರುವಾಗಿ ಪಾಂಡುರಾಜನಿರ್ಪನ್ನೆಗಂ, ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರಮುನೀಂದ್ರನೊಳ್ ಬರಂಬಡೆದಳೆಂದು ಕುಂತಿ ಕೇಳ್ದು ತಾನುಂ ಪುತ್ರಾರ್ಥಿನಿಯಾಗಳ್ ಬಗೆದು,

ವಿಸಸನದೊಳ್ ವಿರೋಧಿನೃಪರಂ ತಱಿದೊಟ್ಟಲುಮರ್ಥಿಗರ್ಥಮಂ
ಕಸವಿನ ಲೆಕ್ಕಮೆಂದು ಕುಡಲುಂ ವಿಪುಳಾಯತಿಯಂ ದಿಗಂತದೊಳ್
ಪಸರಿಸಲುಂ ಕರಂ ನೆಱೆವ ಮಕ್ಕಳನೀಯದೆ ನೋಡೆ ನಾಡೆ ನೋ
ಯಿಸಿದಪ್ಪುದಿಕ್ಷುಪುಷ್ಪದವೊಲೆನ್ನಯ ನಿಷ್ಫಲಪುಷ್ಪದರ್ಶನಂ ೨೫

ಎಂದು ಚಿಂತಾಕ್ರಾಂತೆಯಾಗಿರ್ದ ಕುಂತಿಯಂ ಕಂಡು ಪಾಂಡುರಾಜನೇಕಾಂತದೊಳ್ ಮುನಿಪುಂಗವರಂ ಬಗೆದಿರ್ಪಿನಂ ನಿಜಾತ್ಯಂತಪತಿವ್ರತಾಗುಣದಿನರ್ಚಿಸಿ ಮೆಚ್ಚಿಸು ನೀಂ ದಿಗಂತವಿಶ್ರಾಂತಯಶರ್ಕಳಂ ವರತನೂಭವರಂ ಪಡೆ ಎಂದೊಡೆ, ತನ್ನ ಕನ್ನಿಕೆಯಾ ಕಾಲದೊಳ್ ದುರ್ವಾಸಮುನಿಯರ್ ವರವಿತ್ತು ಅಯ್ದುಮಂತ್ರಕ್ಕಂ ಅಯ್ವರ್ಮಕ್ಕಳಂ ಪಡೆವೆಯೆಂದು [ಪೇೞ್ದುದಂ ಕೇಳ್ದು] ದಿವ್ಯಮುನಿವಾಕ್ಯಮಮೋಘ ವಾಕ್ಯಮಕ್ಕುಂ ಅದರ್ಕೇನುಂ ಚಿಂತಿಸಲ್ವೇಡ ಎಂದೊಡಂತೆಗೆಯ್ವೆನೆಂದು ತೀರ್ಥಜಲಂಗಳಂ ಮಿಂದು ದಳಿಂಬವನುಟ್ಟು ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದು ಯಮರಾಜನನದ್ಭುತತೇಜನಂ ಸರೋಜಾನನೆ ಜಾನದಿಂ ಬರಿಸೆ, ಬಂದು ಯಮಂ ಬೆಸನಾವುದಾವುದಾತ್ಮಾನುಗತಾರ್ಥಮೆಂದೊಡೆ ಎನಗೀವುದು ನಿನ್ನನೆ ಪೋಲ್ವ ಪುತ್ರನಂ ಎಂಬುದುಂ ತಥಾಸ್ತುವೆಂದು ತನ್ನಂಶಮನಾಕೆಯ ಗರ್ಭದೊಳವತರಿಸಿ ಯಮಭಟ್ಟಾರಕನಂತರ್ಧಾನಕ್ಕೆ ಸಂದಂ; ಕೊಂತಿಯ ಗರ್ಭಭಾರಮುಂ ತಾಪಸಾಶ್ರಮದನುರಾಗಮುಮೊಡನೊಡನೆ ಬಳೆಯೆ, ಒಂಬತ್ತು ತಿಂಗಳುಮೊಡನೊಡನೆ ನೆಱೆಯೆ

ವನನಿಧಿಯಿಂದಂ ಚಂದ್ರಂ
ವಿನತೋದರದಿಂ ಗರುತ್ಮನುದಯಾಚಳದಿಂ
ದಿನಪನೊಗೆವಂತೆ ಪುಟ್ಟಿದ
ನನಿವಾರ್ಯಸುತೇಜನೆನಿಪನಿನಜನ ತನಯಂ ೨೬

ಪುಟ್ಟುವುದುಂ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ; ಆ ಕಾಂತೆ ಸುತಭ್ರಾಂತೆ

ಮಂತ್ರಾಕ್ಷರನಿಯಮದಿನಭಿ
ಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದೇಂ
ಮಂತ್ರಂ ಪೇೞೆನೆ ಕುಡು ರಿಪು
ತಂತ್ರಕ್ಷಯಕರನನೆನಗೆ ಹಿತನಂ ಸುತನಂ ೨೭

ಎಂಬದುಂ ಇತ್ತೆನೆಂದು ವಿಯುತ್ತಳಕ್ಕೊಗೆದೊಡಾತನಂಶವಾಕೆಯ ಗರ್ಭ ಸರೋವರದೊಳಗೆ ಚಂದ್ರಬಿಂಬದಂತೆ ಸೊಗಯಿಸೆ, ಗರ್ಭನಿರ್ಭರಪ್ರದೇಶದೊಳರಾತಿಗಳ್ಗಂತಕಾಲಂ ದೊರೆಕೊಳ್ವಂತೆ ಪ್ರಸೂತಿಕಾಲಂ ದೊರೆಕೊಳೆ ಒಗೆದಂ ದಳಿತಶತ್ರುಗೋತ್ರಂ ಪುತ್ರಂ;

ಭೀಮಂ ಭಯಂಕರಂ ಪೆಱ
ತೇಮಾತೀ ಕೂಸಿನಂದಮೀತನ ಪೆಸರುಂ
ಭೀಮನೆ ಪೋಗೆನೆ ಮುನಿಜನ
ಮೀ ಮಾಟ್ಕೆಯಿನಾಯ್ತು ಶಿಶುಗೆ ಪೆಸರನ್ವರ್ಥಂ ೨೮

ಅಂತು ಭರತಕುಲತಿಲಕರಪ್ಪಿರ್ವರ್ಮಕ್ಕಳಂ ಪೆತ್ತು ಕೊಂತಿ ಸಂತಸದಂತಮನೆಯ್ದಿರ್ಪುದುಮತ್ತ ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ಕೇಳ್ದು ತನ್ನ ಗರ್ಭಂ ತಡೆದುದರ್ಕೆ ಕಿನಿಸಿ ಬಸಿಱಂ ಪೊಸೆದಳ್; ಪೊಸೆದೊಡೆ ಒಗೆದುವು ಬಸಿಱಿಂ ನೂಱೊಂದು ಪಿಂಡಮರುಣಾಕೀರ್ಣಂ, ಅವಂ ಕಂಡು ಕಿನಿಸಿ ಪೊಱಗೆ ಬಿಸುಟು ಬನ್ನಿಮೆಂಬುದುಂ ವ್ಯಾಸಭಟ್ಟಾರಕಂ ಮಾಣದೆ ಮುನಿ ನೂಱ್ ಪಿಂಡಮುಮನಾಗಲೆ ತೀವಿದ ಕಮ್ಮನಪ್ಪ ತುಪ್ಪದ ಕೊಡದೊಳ್ ಸಮಂತು ಮಡಗಿಟ್ಟೊಡೆ, ನೂರ್ವರೊಳರ್ವನಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣ ವಯಸ್ಕನಾಗಿ ಘೃತಘಟವಿಘಟನಮುಮಾಗಿ ಪುಟ್ಟುವುದುಂ, ಕೂಸಿಂಗೆ ದುರ್ಯೋಧನನೆಂದು ಪೆಸರನಿಟ್ಟು ಮತ್ತಿನ ಕೂಸುಗಳ್ಗೆಲ್ಲಂ ದುಶ್ಶಾಸನಾದಿಯಾಗಿ ನಾಮಂಗಳನಿಟ್ಟು ಸುಕಮಿರ್ಪನ್ನೆಗಂ ಇತ್ತ ಕುಂತಿ ಶತಶೃಂಗಾದ್ರೀಂದ್ರದೊಳ್ ಸರ್ವಲಕ್ಷಣಸಂಪೂರ್ಣನಪ್ಪ ಮಗನನಮೋಘಂ ಪಡೆವೆನೆಂದು ಪಾಂಡುರಾಜನುಂ ತಾನುಂ ಒಂದು ವರ್ಷಂಬರಂ ಭರಂಗೆಯ್ದು ನೋಂತು, ಪೂರ್ವಕ್ರಮದೊಳೆ ಒಂದು ದಿವಸಂ ಉಪವಾಸಮಿರ್ದು ಅಗಣ್ಯಪುಣ್ಯ ತೀರ್ಥಜಲಂಗಳಂ ಮಿಂದು ದಳಿಂಬಮನುಟ್ಟು ದರ್ಭಶಯನದೊಳಿರ್ದು ಮಂತ್ರಾಕ್ಷರನಿಯಮದೊಳಿಂದ್ರನಂ ಬರಿಸೆ, ಆಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ ಕಲ್ಪತರುವಿನುದಾರಶಕ್ತಿಯುಮನೀಶ್ವರನ ಪ್ರಭುಶಕ್ತಿಯುಮಂ ಜವನ ಬಲ್ಲಾಳ್ತನಮುಮಂ ಸಿಂಹದ ಕಲಿತನಮುಮನವರವರ ದೆಸೆಗಳಿಂ ತೆಗೆದೊಂದು ಮಾಡಿ ಕೊಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋಬಿಂದುವನಿಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದನ್;

ಬಳೆದ ಗರ್ಭದೊಳ್ ಸಂಪೂರ್ಣಪ್ರಸವಸಮಯಂ ದೊರೆಕೊಳೆ ಗ್ರಹಂಗಳೆಲ್ಲಂ ತಂತಮ್ಮುಚ್ಚಸ್ಥಾನಂಗಳೊಳಿರ್ದು ಷಡ್ವರ್ಗಸಿದ್ಧಿಯನುಂಟುಮಾಡೆ ಶುಭಲಗ್ನೋದಯದೊಳ್

ಭರತಕುಲಗಗನದಿನಕರ
ನರಾತಿಕುಳಕಮಳಹಿಮಕರಂ ಶಿಶು ತೇಜೋ
ವಿರಚನೆಯುಂ ಕಾಂತಿಯುಮಾ
ವರಿಸಿರೆ ಗರ್ಭೋದಯಾದ್ರಿಯಿಂದುದಯಿಸಿದಂ ೨೯

ಉದಯಿಸುವುದುಮಮೃತಾಂಶುವಿ
ನುದಯದೊಳಂಭೋಧಿವೇಲೆ ಭೋರ್ಗರೆವವೊಲೊ

ಮೊರ್ದಲೆಸೆದುವು ಘನಪಥದೊಳ್
ತ್ರಿದಶಕರಾಹತಿಯಿನೊಡನೆ ಸುರದುಂದುಭಿಗಳ್ ೩೦

ಅಂತು ಮೊಱಗುವ ಸುರದುಂದುಭಿಗಳುಂ ಪರಸುವ ಜಯಜಯಧ್ವನಿಗಳುಂ ಬೆರಸು ದೇವೇಂದ್ರಂ ಬರೆ ದೇವವಿಮಾನಂಗಳೆಲ್ಲಂ ಶತಶೃಂಗಮಂ ಮುಸುಱಿಕೊಂಡು ಮೂವತ್ತಮೂದೇವರುಂ ಇಂದ್ರಂ ಬೆರಸು ವೈಮಾನಿಕದೇವರುಂ ನೆರೆದು ಪಾಂಡುರಾಜನುಮಂ ಕುಂತಿಯುಮಂ ಪರಸಿ ಕೂಸಿಂಗೆ ಜನ್ಮೋತ್ಸವಂ ಮಾಡಿ, ಸಕಲಭುವನಸಂಸ್ತೂಯಮಾನಂ ಚಾಳುಕ್ಯವಂಶೋದ್ಭವಂ ಶ್ರೀಮದರಿಕೇಸರಿ ವಿಕ್ರಮಾರ್ಜುನನುದಾತ್ತನಾರಾಯಣಂ ಪ್ರಚಂಡ ಮಾರ್ತಾಂಡನುದಾರ ಮಹೇಶ್ವರಂ ಕದನತ್ರಿಣೇತ್ರಂ ಗುಣನಿಧಿ ಗುಣಾರ್ಣವಮೆಂದಿಂತಿವು ಮೊದಲಾಗೆ ಪಲವುಮಷ್ಟೋತ್ತರಶತನಾಮಂಗಳನಿಟ್ಟು ವಿಶೇಷಾಶೀರ್ವಚನಂಗಳಿಂ ಪರಸಿ ಪೋದರ್;

ಗುಣಾರ್ಣವನ ಪುಟ್ಟಿದೊಸಗೆಯೊಳೊಸಗೆವುರುಳ್ಗೊಂಡು ಕುಂತಿಯುಂ ಪಾಂಡುರಾಜನುಮಿರೆ ಮಾದ್ರಿ ತನಗೆ ಮಕ್ಕಳಿಲ್ಲದುದರ್ಕೆ ವಿರಕ್ತೆಯಾಗಿ ಕರಂ ಕೊರಗಿ ಚಿಂತಿಸುತಿರ್ದೊಡಾಕೆಯ ಬಿನ್ನನಾದ ಮೊಗಮಂ ಕಂಡು ಕುಂತಿ ಪುತ್ರೋತ್ಪತ್ತಿನಿಮಿತ್ತಂಗಳಪ್ಪ ಮಂತ್ರಾಕ್ಷರಂಗಳನುಪದೇಶಂಗೆಯ್ದೊಡಾಕೆಯುಂ ತದುಕ್ತಕ್ರಿಯೆಯೊಳಂ ನಿಯಮನಿಯಮಿತೆಯಾಗಿ

ಆಹ್ವಾನಂಗೆಯ್ದಶ್ವಿನಿ
ದೇವರನವರಿತ್ತ ವರದೊಳವರಂಶಮೆ ಸಂ
ಭಾವಿಸೆ ಗರ್ಭದೊಳಮಳರ
ನಾ ವನಜದಳಾಕ್ಷಿ ಪಡೆದು ಸಂತತಿವೆತ್ತಳ್ ೩೧

ಅಯ್ವರ್ ಕೂಸುಗಳುಮೇೞ್ಗೆವಾಡಿವದ ಚಂದ್ರನಂತುತ್ತರಾಭಿವೃದ್ಧಿಯೊಳ್ ಸೊಗಯಿಸಿ ಬಳೆಯೆ

ದೆಯ್ವಬಲಂ ಸೊಗಸಿಕೆ ಮುಂ
ಗೆಯ್ವ ಬಲಂ ಬಾಳಕಾಲದೊಳ್ ತೊಡರ್ದ ಪೊಡ
ರ್ದಯ್ವರ ಬಾಲಕ್ರಿಯೆಯುಂ
ಮುಯ್ವುಂ ನೋಡಿಸಿತು ತಾಯುಮಂ ತಂದೆಯುಮಂ ೩೨

ಅಂತಾ ಕೂಸುಗಳ್ ನಿಜಜನನೀಜನಕರ ಮನಮನಿಟ್ಟುಕಿಳಿಗೊಳಿಸಿಯುಂ ಅರಾತಿಜನಂಗಳ ಮನಮನಸುಂಗೊಳಿಸಿಯುಂ ಬಳೆಯೆ ಬಳೆಯೆ

ಅಲರ್ದದಿರ್ಮುತ್ತೆ ಪೂತ ಪೊಸಮಲ್ಲಿಗೆ ಕಂಪನವುಂಕುತಿರ್ಪ ತೆಂ
ಬೆಲರುಮಿದಂ ಗೆಲಲ್ಬಗೆವ ತುಂಬಿಗಳ ಧ್ವನಿಯಿಂ ಕುಕಿಲ್ವ ಕೋ
ಗಿಲೆ ನನೆದೋಱ್ ನುಣ್ಚಸೆವ ಮಾಮರನೊರ್ಮೊದಲಲ್ಲದುಣ್ಮುವು
ಯ್ಯಲ ಪೊಸಗಾವರಂ ಪುಗಿಲೊಳೇನೆಸೆದತ್ತೊ ಬಸಂತಮಾಸದೊಳ್ ೩೩

ಅಂತು ಬಂದ ಬಸಂತದೊಳ್ ಮಾದ್ರಿ ತಾಂ ಗರ್ವವ್ಯಾಲೆಯುಂ ಕ್ರೀಡಾನು ಶೀಲೆಯುಮಪ್ಪುದಱಿಂ ವನಕ್ರೀಡಾಮಿಮಿತ್ತಂ ಪೋಗಿ,

ವನಕುಸುಮಂಗಳಂ ಬಗೆಗೆ ವಂದುವನಟ್ಟಿಯೊಳಾಯ್ದು ಕೊಯ್ದು ಮೆ
ಲ್ಲನೆ ವಕುಳಾಳವಾಳತಳದೊಳ್ ಸುರಿದಂಬುಜಸೂತ್ರದಿಂದೆ ಮ
ತ್ತನಿತಱೊಳಂ ಮುಗುಳ್ಸರಿಗೆ ತೋಳ್ವಳೆ ಕಂಕಣವಾರಮೆಂದು ಬೇ
ಟ್ಟನಿತನೆ ಮಾಡಿ ತೊಟ್ಟು ಕರಮೊಪ್ಪಿದಳಾಕೆ ಬಸಂತಕಾಂತೆವೋಲ್ ೩೪

ಮದನನ ತೊಟ್ಟ ಪೂಗಣೆಗೆಣೆಯಾಗಿರೆ ಬರ್ಪ ಮಾದ್ರಿಯಂ ತಾಪಸಾಶ್ರಮದಿಂ ಪೊಱಮಟ್ಟಂತೆ ಬನಮಂ ತೊಟಿಲ್ವ ಪಾಂಡುರಾಜಂ ಕಂಡು

ಸೊಗಯಿಸೆ ತೊಟ್ಟ ಪೂದುಡುಗೆ ಮೆಲ್ಲೆರ್ದೆಯೊಳ್ ತಡಮಾಡೆ ಗಾಡಿ ದಿ
ಟ್ಟಿಗಳೊಳನಂಗರಾಗರಸಮುಣ್ಮುವಿನಂ ನಡೆ ನೋಡಿ ನೋಡಿ ತೊ
ಟ್ಟಗೆ ಕೊಳೆ ಮೇಲೆ ಪಾಯ್ದವಳನಪ್ಪಿದನಾ ವಿಭು ತನ್ನ ಶಾಪಮಂ
ಬಗೆಯದೆ ಮಿಟ್ತುದೇವತೆಯನಟ್ಟಿಱಿಳುರ್ಕೆಯಿನಪ್ಪುವಂತೆವೋಲ್ ೩೫

ಅಂತಪ್ಪುವುದುಂ ವಿಷಮವಿಷವಲ್ಲಿಯನಪ್ಪಿದಂತೆ ತಳ್ತ ನಲ್ಲಳ ಮೃದುಮೃಣಾಳ ಕೋಮಳ ಬಾಹುಪಾಶಗಳೆ ಯಮಪಾಶಂಗಳಾಗೆ

ಬಿಗಿದಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ ಮೊಗದಿಂದಮೊಯ್ಯಗೊ
ಯ್ಯಗೆ ನಗೆಗಣ್ಗಳಾಲಿ ಮಗುಟ್ದಿಂತಿರೆ ಮುಚ್ಚಿರೆ ಸುಯ್ಯಡಂಗೆ ಮೆ
ಲ್ಲಗೆ ಮಱಸೊಂದಿದಂದದೊಳೆ ಜೋಲ್ದ ನಿಜೇಶನನಾ ಲತಾಂಗಿ ತೊ
ಟ್ಟಗೆ ಕೊಳೆ ನೋಡಿ ಕೆಟ್ಟೆನಿನಿಯಂ ಮಱಸೊಂದಿದನೋ ಬಟಲ್ದನೋ ೩೬

ಎಂದು ಪಱಿಪಟ್ಟ ಸುಯ್ಯುವುಂ ಕೋಡುವ ಮೆಯ್ಯುವುಂ ಕಂಡು ಪರಲೋಕಪ್ರಾಪ್ತನಾದುದನಱಿತು

ತಾಪಸನ ಶಾಪಮೆಂಬುದು
ಪಾಪದ ರೂಪಱಿತುಮಱಿಯದಂತೇಕೆ ಮನಂ

ಗಾಪಟಿದು ಬಂದು ಮುಟ್ಟಿದೆ
ಯೋಪನೆ ನೀನೆನ್ನ ಪಾಪಕರ್ಮಿಯ ಮೆಯ್ಯಂ ೩೭

ಎಂದು ವನದೇವತೆಗಳ್ಗೆಲ್ಲಂ ಕರುಣಮಾಗೆ ಪಳಯಿಸುವ ಮಾದ್ರಿಯ ಸರಮಂ ಕುಂತಿ ಕೇಳ್ದು ಭೋಂಕನೆರ್ದೆದೆಱೆದು ಕಣ್ಣೀರ್ ಗಱಗಱನೊರ್ಮೊದಲೆ ಸುರಿಯೆ ಪರಿತಂದು ತನ್ನ ನಲ್ಲನ ಕಳೇವರಮಂ ತಟ್ಟೈಸಿಕೊಂಡು ತನ್ನ ಸಾವಂ ಪರಿಚ್ಛೇದಿಸಿ ಪಲ್ಲಂ ಸುಲಿಯುತ್ತುಮಿರ್ದ ಮಾದ್ರಿಯಂ ಕಂಡು ಕುಂತಿ ನೆಲದೊಳ್ ಮೆಯ್ಯನೀಡಾಡಿ ನಾಡಾಡಿಯಲ್ಲದೆ ಪಳಯಿಸಿ ನೀನೀ ಕೂಸುಗಳಂ ಕೈಕೊಂಡು ನಡಪು ನಲ್ಲನನೆನಗೊಪ್ಪಿಸಾ ನಾತನಾದುದನಪ್ಪೆನೆನೆ ಮಾದ್ರಿಯಿಂತೆಂದಳ್

ಎನಗಿಂದಿನೊಂದು ಸೂಱುಮ
ನಿನಿಯಂ ದಯೆಗೆಯ್ದನೆನ್ನ ಸೂಱಿಂ ನಿನ
ನೆನಿತಾದೊಡಮೀವೆನೆ ಮ
ತ್ತನಯರ್ ಕೆಯ್ಯೆಡೆ ಪಲುಂಬದಿರ್ ಪೆಱಪೆಱವಂ ೩೮

ಎಂದು ತಪೋವನದ ಮುನಿಜನಮುಂ ವನದೇವತಾಜನಮುಂ ತನ್ನಣ್ಮಂ ಪೊಗೞೆ ಮಾದ್ರಿ ಪಾಂಡುರಾಜನೊಡನೆ ದಾಹೋತ್ತರದಂತೆ ಕಿರ್ಚಂ ಪುಗೆ, ಮುನಿಜನಮೆಲ್ಲಮಾ ಕೂಸುಗಳುಮಂ ಕುಂತಿಯುಮಂ ಮುಂದಿಟ್ಟೊಡಗೊಂಡು ನಾಗಪುರಕ್ಕೆ ವಂದು ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗಮಂಬಾಲೆಗಂ ಪಾಂಡುರಾಜನ ವೃತ್ತಾಂತಮನಱಿಪಿದೊಡೆ, ಪುತ್ರಸ್ನೇಹದಿಂದತಿಪ್ರಳಾಪಂಗೆಯ್ವಂಬಾಲೆಯುಮಂ ಬಂಧುಜನನಿರೀಕ್ಷಣದಿಂ ಶೋಕಂ ಮಱುಕಣಿಸೆ ಬಾಯಟಿದು ಪಳಯಿಸುವ ಕುಂತಿಯುಮಂ ಗಾಂಗೇಯ ಧೃತರಾಷ್ಟ್ರ ವಿದುರರ್ಕಳುಮಂ ಸತ್ಯವತೀದೇವಿಯುಮಂ ಸಂತೈಸಿ ಪಾಂಡುರಾಜಂಗೆ ಜಳದಾನಾದಿ ಕ್ರಿಯೆಗಳಂ ನಿರ್ವರ್ತಿಸಿ ತದನಂತರದೊಳದುವೆ ನಿರ್ವೇಗಮಾಗೆ ವ್ಯಾಸವಚನದೊಳ್ ಸತ್ಯವತಿಯುಮಂಬಿಕೆಯುಮಂಬಾಲೆಯುಂ ಸಂಸಾರವಿಶೀರ್ಣೆಯರಾಗಿ ಮುನಿವನಮನಾಶ್ರಯಿಸಿದರ್

* * * * * * *

೨. ಮಹಾಭಾರತಕ್ಕಾದಿಯಾಯ್ತು

ಇತ್ತ ಗಾಂಗೇಯನಯ್ವರ್ ಕೂಸುಗಳುಮಂ ತನ್ನ ತೊಡೆಯೆ ತೊಟ್ಟಿಲಾಗಿ ನಡಪುತ್ತುಮಿರೆ ದುರ್ಯೋಧನಪ್ರಭೃತಿಗಳ್ ನೂರ್ವರುಂ ಧರ್ಮಪುತ್ರಾದಿಗಳಯ್ವರುಂ ಸಹಪಾಂಸುಕ್ರೀಡಿತರಾಗಿ

ಒಡನಾಡಿಯುಮೊಡನೋದಿಯು
ಮೊಡವಳೆದುಂ ಗುಳ್ಳೆಗೊಟ್ಟೆ ಬಟ್ಟುಳಿಸೆಂಡುಂ
ಪೊಡೆಸೆಂಡೆಂಬಿವನಾಡು
ತ್ತೊಡವಳೆದರ್ ತಮ್ಮೊಳೆಳಸೆ ತಂತಂಗೆಡೆಗಳ್ ೧

ಮುಂದೆ ತಮ್ಮ ಪಗೆ ಪರ್ವುವಂತೆ ಭೀಮನಂ ಎನಿತಾನುಂ ಉಪದ್ರವಂಗಳೊಳ್ ತೊಡರಿಕ್ಕಿಯುಂ ಗೆಲಲಾಱದೆ ಮನಮಿಕ್ಕಿಯುಮೆರ್ದೆಯಿಕ್ಕಿಯುಮಿರ್ದರ್; ಅಯ್ವರ್ ಕೂಸುಗಳ್ಗಂ ಗಾಂಗೇಯಂ ಚೌಲೋಪನಯನಾದಿ ಕ್ರಿಯೆಗಳಂ ಮಾಡಿ ಕೃಪಾಚಾರ್ಯರ ಪಕ್ಕದೊಳ್ ಕೂಸುಗಳಂ ವಿದ್ಯಾಭ್ಯಾಸಂಗೆಯ್ಸೆ, ಗುಣಾರ್ಣವಂ ವಿವಿಧ ವಿದ್ಯೆಗಳೊಳಂ ವಿವಿಧಾಯುಧಂಗಳೊಳಮತಿಪ್ರವೀಣನುಂ ಆರೂಢಸರ್ವಜ್ಞನುಮಾಗೆ, ಧರ್ಮಪುತ್ರಂ ಧರ್ಮಶಾಸ್ತ್ರಂಗಳೊಳಂ ಶ್ರುತಿಸ್ಮೃತಿಗಳೊಳಂ ಪ್ರವೀಣನಾದಂ, ಭೀಮಸೇನಂ ವ್ಯಾಕರಣದೊಳಾರಿಂದಮಗ್ಗಳಂ ಕುಶಲನಾದಂ, ನಕುಲಂ ಕುಂತಶಸ್ತ್ರದೊಳತಿಪ್ರವೀಣನುಮಾಗಿ ಅಶ್ವವಿದ್ಯೆಯೊಳಾರಿಂದಂ ಪಿರಿಯನಾದಂ, ಸಹದೇವಂ ಜ್ಯೋತಿರ್ಜ್ಞಾನದೊಳತಿಪರಿಣತನಾದಂ; ಅಂತಯ್ವರುಂ ಸಮಶಸ್ತ್ರಶಾಸ್ತ್ರಪ್ರಯೋಗ ಪ್ರವೀಣರಾಗಿ ನವಯೌವನದ ಪರಮಸುಖಮನೆಯ್ದಿ ಸಂತೋಷದಿನಿರ್ದರ್;

ಇತ್ತ ಗಂಗಾದ್ವಾರದೊಳ್ ಭರದ್ವಾಜನೆಂಬ ಬ್ರಹ್ಮಋಷಿ ಸ್ನಾನಾರ್ಥಂ ಒಂದು ಕಳಶಮಂ ಎೞಲೆ ಪಿಡಿದು ಗಂಗಾನದಿಗೆ ವಂದು ಸುರತನಿಧಾನಿಯನಮರಗಣಿಕೆಯಂ ಕಂಡು ಕಂತುಶರಪರವಶನಾಗಿ ಧೈರ್ಯಕ್ಷರಣೆಯುಂ ಇಂದ್ರಿಯಕ್ಷರಣೆಯುಂ ಒಡನೊಡನಾಗೆ ಸೋರ್ವಿಂದ್ರಿಯಮಂ ದ್ರೋಣದೊಳಾಂತಲ್ಲಿಯೊಗೆದ ಶಿಶುವಂ ಕಂಡೀ ದ್ರೋಣದೊಳೆ ಪುಟ್ಟಿದೀತಂ ದ್ರೋಣನೆ ಎಂದು ಪೆಸರನಿಟ್ಟಂ; ಪೆಸರನಿಟ್ಟು ಪಾಂಚಾಳದೇಶದರಸಂ

ಪೃಷತನೆಂಬಾತನ ಮಗಂ ದ್ರುಪದನುಮಂ ದ್ರೋಣನುಮನೊಡಗೂಡಿ ಯಜ್ಞಸೇನನೆಂಬ ಬ್ರಹ್ಮಋಷಿಯ ಪಕ್ಕದೊಳ್ ಬಿಲ್ವಿದ್ದೆಯಂ ಕಲಲ್ವೇೞ್ದು ದ್ರೋಣಂಗೆ ಕೃಪನ ತಂಗೆಯಪ್ಪ ಶಾರದ್ವತೆಯುಂ ತಂದು ಮದುವೆಯುಂ ಮಾಡಿದೊಡೆ ತ್ರಿಣೇತ್ರನಂಶದೊಳೊರ್ವ ಮಗಂ ಪುಟ್ಟೆ [ಶಿಶುಗೆ] ಅಶ್ವತ್ಥಾಮನೆಂದು ಪೆಸರಿಡೆ ನೆಗೞ್ದು ತಮ್ಮಯ್ಯನ ಕೈಯೊಳ್ ಧನುರ್ಧರಾಗ್ರಗಣ್ಯನುಮಾಗಿ ಸಂದಂ;

ದ್ರೋಣನುಂ ತನಗೆ ಬಡತನಮಡಸೆ ಅಶ್ವತ್ಥಾಮನನೊಡಗೊಂಡು ನಾಡುನಾಡುಂ ತೊೞಲ್ದು, ತನ್ನೊಡನಾಡಿಯಪ್ಪ ದ್ರುಪದಂ ಛತ್ರಾವತಿಯೊಳರಸುಗೆಯ್ದಪನೆಂದು ಕೇಳ್ದಾ ಪೊೞಲ್ಗೆವಂದು ದ್ರುಪದನರಮನೆಯ ಬಾಗಿಲೊಳ್ ನಿಂದು ಪಡಿಯಱನಂ ಕರೆದು ನಿಮ್ಮೊಡನಾಡಿದ ಕೆಳೆಯುಂ ದ್ರೋಣನೆಂಬ ಪಾರ್ವಂ ಬಂದನೆಂದು ನಿಮ್ಮರಸಂಗಱಿಯೆ ಪೇೞೆಂಬುದುಂ ಆತನಾ ಮಾೞ್ಕೆಯೊಳೆ ಬಂದಱಿಪುವುದುಂ, ದ್ರುಪದಂ ರಾಜ್ಯಮದಿರಾಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ,

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ೞೆಂತೆನಗೆ ಕೆಳೆಯನೇ ನೂ
ಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ ೨

ಅಂತು ನುಡಿದುದಂ ಪಡಿಯಱಿಂ ಬಂದಾ ಮಾೞ್ಕೆಯೊಳಱಿಪೆ ದ್ರೋಣನೊತ್ತಂಬದಿಂದೊಳಗಂ ಪೊಕ್ಕು ದ್ರುಪದನಂ ಕಂಡು, ಅಱಿಯಿರೇ ನೀಮುಮಾ ಮುಮೊಡನೋದಿದೆವೆಂಬುದಂ ಎನೆ, ನಿನ್ನನಾನಱಿಯೆನದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶಜಂಗಮೇತಱ ಕೆಳೆ ಈ ನಾಣಿಲಿ ಪಾರ್ವನನೆೞೆದು ಕಳೆಯಿಮೆಂಬುದುಂ,

ಖಳ ನೊಳವಿಂಗೆ ಕುಪ್ಪೆವರಮೆಂಬವೊಲಾಂಬರಮುಂಟೆ ನಿನ್ನದೊಂ
ದಳವೊಡನೋದಿದೊಂದು ಬೆರಗಿಂಗೆ ಕೊಲಲ್ಕೆನಗಾಗದೀ ಸಭಾ
ವಳಯದೊಳೆನ್ನನೇಳಿಸಿದ ನಿನ್ನನನಾಕುಳಮೆನ್ನ ಚಟ್ಟರಿಂ
ತಳವೆಳಗಾಗಿ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ ೩

ಎಂದಾರೂಢಪ್ರತಿಜ್ಞನಾಗಿ ನಾಗಪುರಕ್ಕೆ ವಂದು ತಮ್ಮ ಭಾವಂ ಕೃಪನ ಮನೆಯೊಳಪಗತಪರಿಶ್ರಮನಾಗಿರ್ದೊಂದು ದಿವಸಂ ನದೀತನೂಜಂ ಭಾರದ್ವಾಜಂಗೆ ಬೞಿಯನಟ್ಟಿ ಬರಿಸಿ ಪೂರ್ವಸಂಭಾಷಣಾರ್ಘ್ಯಮೆತ್ತಿ ಮಧುಪರ್ಕವೇತ್ರಾಸನತಾಂಬೂಲ ದಾನಾದಿಗಳಿಂ ಸಂತಸಬಡಿಸಿ, ಇದಿಱಿೊಳ್ ನೂಱುವರ್ ಕುಮಾರರುಮನಿಟ್ಟು ಈ ಕೂಸುಗಳ್ ಯೋಗ್ಯರಪ್ಪುದನಿನ್ನೊಲ್ವೊಡೆ ಶಸ್ತ್ರವಿದ್ಯೆಗೊವಜಂ ನೀನಾಗು ಕುಂಭೋದ್ಭವಾ ಎಂಬುದುಂ, ದ್ರೋಣಾಚಾರ್ಯನಾಚಾರ್ಯಪದವಿಯುಂ ಕೈಕೊಂಡು

ಪಾಂಡವಕೌರವರ್ಗೆ ಆಗಾಮಿಕ ಸಂಗ್ರಾಮರಂಗಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧಾರನಂತೆ ಶಸ್ತ್ರವಿದ್ಯಾಭ್ಯಾಸಂಗೆಯ್ಸುತ್ತಿರೆ, ಶಸ್ತ್ರಕಲಾಧರನಾಗಿ ತನ್ನುಮಂ ಗೆಲೆವಂದ ಸಾಮಂತಚೂಡಾಮಣಿಯ ಶರಪರಿಣತಿಯನಾರಯಲೆಂದು ಛಾಯಾಲಕ್ಷ್ಯಮನೊಡ್ಡಿಯು ಮಾಯದ ನೀರೊಳಗೆ ತನ್ನನಡಸಿದ ನೆಗಟಿಂ ಬಾಯಟೆವಿನಮಿಸಿಸಿ ಅಣುಗಿನೊಳೆನ್ನ ಚಟ್ಟರೊಳಗೀತನೆ ಜೆಟ್ಟಿಗನೆಂದು, ನಿನ್ನ ದಕ್ಷಿಣೆಯದು ಬೇಗವಾ ದ್ರುಪದನಂ ಗಡ ಕೋಡಗಗಟ್ಟುಗಟ್ಟಿ ತಂದಣಿಯರಮೊಪ್ಪಿಸಿಂತದನೆ ಬೇಡಿದೆನಾಂ ಪರಸೈನ್ಯಭೈರವಾ ಎಂಬುದುಂ ಈ ಬೆಸನದಾವುದು ಗಹನಂ ಎಂದು ಪೂಣ್ದು ಪೋಗಿ ಮಾಣದುರುಳ್ಚಿ ಕಟ್ಟಿ ಮುಂದಿಕ್ಕಿದ ರಿಪುವಂ ತನ್ನ ಮಂಚದ ಕಾಲೊಳ್ ಕಟ್ಟವೇಟ್ಟು ತಲೆಯ ಮೇಲೆ ಕಾಲನವಷ್ಟಂಭದಿಂ ನೀಡಿ, ನಿನ್ನನಿನಿತು ಪರಿಭವಂಬಡಿಸಿದುದು ಸಾಲ್ಗುಂ ನಿನ್ನಂ ಕೊಲಲಾಗದೆಂದು ಕಟ್ಟಿದ ಕಟ್ಟುಗಳೆಲ್ಲಮಂ ತಾನೆ ಬಿಟ್ಟು ಕಳೆದು ಪೋಗೆಂಬುದುಂ ದ್ರುಪದಂ ಪರಿಭವಾನಳನಳವಲ್ಲದಳುರೆ ನಿನ್ನಂ ಕೊಲ್ವನ್ನನೊರ್ವ ಮಗನುಮಂ ವಿಕ್ರಮಾರ್ಜುನಂಗೆ ಪೆಂಡತಿಯಪ್ಪನ್ನಳೊರ್ವ ಮಗಳುಮಂ ಪಡೆದಲ್ಲದಿರೆನೆಂದು ಮಹಾಪ್ರತಿಜ್ಞಾರೂಢನಾಗಿ ಪೋದಂ;

ಇತ್ತ ಭರದ್ವಾಜಂ ಪಾಂಡವ ಕೌರವರ್ಕಳ ಮೆಯ್ಯೊಳೆ ವಿದ್ದೆಯಂ ಸಂಕ್ರಮಿಸಿದ ತನ್ನ ವಿದ್ಯಾಮಹಿಮೆಯಂ ಮೆಱೆಯಲ್ಕೆ ಪೊಱವೊಟಲೊಳುತ್ತರ ದಿಶಾಭಾಗದೊಳ್ ಸಮೆದ ವ್ಯಾಯಾಮರಂಗಕ್ಕೆ ಗಾಂಗೇಯಂ ಧೃತರಾಷ್ಟ್ರ ವಿದುರ ಸೋಮದತ್ತ ಬಾಹ್ಲೀಕ ಭೂರಿಶ್ರವಾದಿ ಕುಲವೃದ್ಧರುಂ ಕುಂತಿ ಗಾಂಧಾರಿಗಳುಂ ವೆರಸು ಬಂದು ಕುಳ್ಳಿರೆ,

ನೆಗಟ್ದಿರೆ ಪುಣ್ಯಾಹಸ್ವರ
ಮೊಗೆದಿರೆ ಪಟುಪಟಹಕಾಹಳಾರವವಾಗಳ್
ಪುಗವೇಟ್ದಿಂ ವಿವಿಧಾಸ್ತ್ರ
ಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ ೪

ಅಂತು ಧರ್ಮಪುತ್ರನಂ ಮುಂತಿಟ್ಟು ಭೀಮಾರ್ಜುನನಕುಲಸಹದೇವರುಂ ದುರ್ಯೋಧನನಂ ಮುಂತಿಟ್ಟು ನೂರ್ವರುಂ ಬಂದು

ಗದೆಯೊಳ್ ಬಿಲ್ಲೊಳ್ ಗಜದೊಳ್
ಕುದುರೆಯೊಳಂ ರಥಧೊಳಸ್ತ್ರಕೌಶಲದೆ ಬೆಡಂ
ಗೊದವಿರೆ ತೋಱಿದರವರೊ
ರ್ಮೊದಲೆ ಜನ ಪೊಗಟೆ ನೆಗಟೆ ಜಳನಿಧಿನಿನದಂ ೫

ಆಗಳ್ ಕುಂಭಸಂಭವನುಲಿವ ಜನದ ಕಳಕಳರವಮುಮಂ ಮೊಟಗುವ ಪಱೆಗಳುಮಂ ಬಾರಿಸಿ

ಈತಂ ಗುಣಾರ್ಣವಂ ವಿ
ಖ್ಯಾತಯಶಂ ವೈರಿಗಜಘಟಾವಿಘಟನನಿಂ
ತೀತನ ಸಾಹಸಮುಪಮಾ
ತೀತಮಿದಂ ನೋಡಿಮೆಂದು ನೆರವಿಗೆ ನುಡಿದಂ ೬

ಆ ಪ್ರಸ್ತಾವದೊಳ್ ಜೇವೊಡೆದು ಅಸ್ತ್ರಜಾಲದಿಂ ತಡೆಯದೆ ಪಂಜರಂಬಡೆದನಂದು ವಿಯತ್ತಳದೊಳ್ ಗುಣಾರ್ಣವಂ; ಮತ್ತಮೈಂದ್ರವಾರುಣವಾಯವ್ಯಾಗ್ನೇಯ ಪಾರ್ವತಾದಿ ಬಾಣಂಗಳಂ ತುಡೆ, ತೊಳಗುವ ತೇಜಂ ತೊಳಗುವ ದಿವ್ಯಾಸ್ತ್ರಮುಮುರ್ದ ಕೋದಂಡಮುಸುಂಗೊಳಿಸೆ ಕರ್ಣಂ ಬಂದು ದ್ರೋಣಾಚಾರ್ಯಂಗೆ ಪೊಡೆಮಟ್ಟು ಕರ್ಣನಾತ್ಮಶರಪರಿಣತಿಯಂ ತೋಱೆ ವಿದ್ವಿಷ್ಟವಿದ್ರಾವಣಂಗೆ ಸಂಗತದಿನೀಗಳಿಂತೀ ರಂಗಮೆ ರಣರಂಗಮಾಗೆ ಕಾದುವಂ ಎಂಬುದುಂ ಅತಿರಥಮಥನನಿಂತೆಂದಂ: ನೀನೆನ್ನೀ ನಿಡುದೋಳ್ಗಳ ತೀನಂ ಮಟ್ಗಿಸುವೆಯಪ್ಪೊಡಾನೊಲ್ಲದನೇ ಎಂಬುದುಂ ದ್ರೋಣನುಂ ಕೃಪನುಮೆಡೆಗೆ ವಂದು ಕರ್ಣನನಿಂತೆಂದರ್

ಏವದ ಮುಳಿಸಿನ ಕಾರಣ
ಮಾವುದೊ ನೀಂ ನಿನ್ನ ತಾಯ ತಂದೆಯ ದೆಸೆಯಂ
ಭಾವಿಸದೆ ಕರ್ಣ ನುಡಿವಂ
ತಾವುದು ಸಮಕಟ್ಟು ನಿನಗಮರಿಕೇಸರಿಗಂ ೭

ಎಂಬುದುಂ ಆ ಮಾತಿಂಗೆ ಮಱುವಾತುಗುಡಲಱಿಯದಿರ್ದ ಕರ್ಣನಂ ದುರ್ಯೋಧನಂ ಕಂಡು ದ್ರೋಣನುಮಂ ಕೃಪನುಮನಿಂತೆಂದಂ:

ಕುಲಮೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
ಮೊಲಿದೆಲ್ಲಿ ಪುಟ್ಟಿ ಬಳೆದಿರೊ
ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ ೮

ಎಂದು ನುಡಿದು ಕರ್ಣನನೀಗಳೆ ಕುಲಜನಂ ಮಾಡಿ ತೋರ್ಪೆನೆಂದು ಕೆಯ್ಯಂ ಪಿಡಿದೊಡಗೊಂಡು ಪೋಗಿ ಕನಕಪೀಠದ ಮೇಲೆ ಕುಳ್ಳಿರಿಸಿ ಕನಕಕಳಶದಲ್ ತೀವಿದಗಣ್ಯಪುಣ್ಯತೀರ್ಥೋದಕಂಗಳಂ ಚತುರ್ವೇದಪಾರಗರಿಂದಭಿಷೇಕಂಗೆಯ್ಸಿ ಕರ್ಣಂಗಂಗಮಹೀತಳವಿಭೂತಿಯಂ ನೆಱೆಯಿತ್ತು

ಪೊಡಮಡುವರ್ ಜೀಯೆಂಬರ್
ಕುಡು ದಯೆಗೆಯ್ಯೇಂ ಪ್ರಸಾದಮೆಂದಿವು ಪೆಱರೊಳ್

ನಡೆಗೆಮ್ಮ ನಿನ್ನಯೆಡೆಯೊಳ್
ನಡೆಯಲ್ವೇಡೆನಗೆ ಕೆಳೆಯನ್ನೈ ರಾಧೇಯಾ ೯

ಎಂದು ಬೇಡಿಕೊಂಡು ಕರ್ಣನಂ ಮುಂದಿಟ್ಟೊಡಗೊಂಡು ಪೋಗಿ ಧೃತರಾಷ್ಟ್ರಂಗಂ ಗಾಂಧಾರಿಗಂ ಪೊಡಮಡಿಸಿದಂ; ದುರ್ಯೋಧನಂ ಭೀಮನ ಬಲ್ಲಾಳ್ತನದಳವುಮಂ ವಿಕ್ರಮಾರ್ಜುನನ ದಿವ್ಯಾಸ್ತ್ರಕೌಶಳಮುಮಂ ಕಂಡು ಸೈರಿಸಲಾಱದೆ ಕರ್ಣನಂ ಕರೆದಾಳೋಚಿಸಿ ತಮ್ಮಯ್ಯನಲ್ಲಿಗೆ ಪೋಗಿ ಪೊಡೆಮಟ್ಟು ಕಟ್ಟೇಕಾಂತದೊಳಿಂತೆಂದಂ:

ಪಿರಿಯರ್ ನೀಮಿರೆ ಪಾಂಡುರಾಜನೆ ವಲಂ ಮುಂ ಪಟ್ಟಮಂ ಕಟ್ಟೆ ಭೂ
ಭರಮಂ ತಾಳ್ದಿದನೀಗಳಾತನ ಸುತರ್ ತಾಮಾಗಳೇ ಯೋಗ್ಯರಾ
ಗರೆ ಪಟ್ಟಕ್ಕೆ ತಗುಳ್ದು ಪಾಲನೆಱೆವಿರ್ ಪಾವಿಂಗೆ ದಾಯಾದ್ಯರಂ
ಪಿರಿಯರ್ಮಾಡಿದಿರೆಮ್ಮ ಸಾವುಮುಱಿವುಂ ದೈವೇಚ್ಛೆಯಾಯ್ತಾಗದೇ ೧೦

ಎಂದು ತನ್ನ ಮನದೊಳೆಡಂಬಡೆ ನುಡಿದ ಮಗನ ಮಾತಂ ಧೃತರಾಷ್ಟ್ರಂ ಮನದೆಗೊಂಡು ದುರ್ಯೋಧನನಂ ಬೀಡಿಂಗೆ ಪೋಗಲ್ವೇಳ್ದು ಪಾಂಡವರಯ್ವರುಮಂ ಬರಿಸಿ ತೊಡೆಯನೇಱಿಸಿಕೊಂಡು ದುರ್ಯೋಧನನಪ್ಪೊಡೆ ಪೊಲ್ಲಮಾನಸನಾತನುಂ ನೀಮುಮೊಂದೆಡೆಯೊಳಿರೆ ಕಿಸುಱುಂ ಕಲಹಮುಂ ಎಂದುಂ ಕುಂದದದುಕಾರಣಂ ಗಂಗಾನದಿಯ ದಕ್ಷಿಣತಟದೊಳ್ ವಾರಣಾವತಮೆಂಬುದು ಪೊಱಲ್ ಕುರುಜಾಂಗಣವಿಷಯಕ್ಕೆ ತಿಳಕಮಿಪ್ಪಂತಿಪ್ಪುದು ಅಲ್ಲಿಗೆ ಪೋಗಿ ಸುಖಮಿರಿಂ ಎಂದೊಡಂತೆಗೆಯ್ವೆವೆಂದು ಬೀಱ್ಕೊಂಡು ಬೀಡಿಂಗೆ ವಂದು ಗಾಂಗೇಯ ದ್ರೋಣ ಕೃಪ ವಿದುರರ್ಕಳ್ಗಂ ಕುಂತಿಗಂ ತದ್ವೃತ್ತಾಂತಮನಱಿಪಿದರ್;

ಅನ್ನೆಗಮಿತ್ತ ದುರ್ಯೋಧನನವರ ಪೋಗನಱಿದು ಪುರೋಚನನೆಂಬ ತನ್ನ ಮನದನ್ನನಪ್ಪ ಪೆರ್ಗಡೆಯೊಳ್ ಲಾಕ್ಷಾಗೃಹೋಪಾಯಮಂ ಚರ್ಚಿಸಿ ವಾರಣಾವತಮನೊಂದೆ ದಿವಸದೊಳೆಯ್ದುವಂತಾಗೆ ರಥಮಂ ಸಮಕಟ್ಟಿ ನಾಲ್ಕು ಲಕ್ಕ ಬಲಮಂ ನೆರಂಬೇಳ್ದು ಕಱಿಪಿದನ್;

ಇತ್ತಲ್, ಪಾಂಡವರ್ ಪೊಱಲಂ ಪೊಱಮಟ್ಟು ಬಂದೊಂದು ತಾವರೆಗೆಱೆಯ ಮೊದಲೊಳ್ ನಿಂದು ಭೀಷ್ಮ ದ್ರೋಣ ಕೃಪವಿದುರರ್ಕಳನೆಮಗೆ ತಕ್ಕ ಬುದ್ಧಿಯಂ ಪೇಳ್ದು ಮಗುಱಿಮೆಂದೊಡೆ, ವಿದುರಂ ಕೆಲನಱಿಯದಂತುಮವರಱಿವಂತುಂ ಸಾಮಾನ್ಯಸ್ಥಿತಿಯೊಳೆ ಬಟ್ಟೆಯ ನಂಜಿನ ಕಿರ್ಚಿನ ದೆಸೆಗೆ ಕರಂ ಪ್ರಯತ್ನಪರರಾಗಿಮೆಂದೊಡಂತೆಗೆಯ್ವೆಮೆಂದೊಡಂತೆ ಗೆಯ್ವೆಮೆಂದವರನಿರಲ್ವೇಳ್ದು ಪಯಣಂಬೋಗಿ ವಾರಣಾವತಮನೆಯ್ದಿದರ್; ದುರ್ಯೋಧನನ ಸಂಕೇತದೊಳ್ ಮುನ್ನಮೆ ಸಮೆದಿರ್ದ ಪುರೋಚನಂ ಇದಿರ್ವಂದು ಮೆಯ್ಯಿಕ್ಕಿ ಪಾಂಡವರುಮಂ ಮುಂದಿಟ್ಟೊಡಗೊಂಡು ವಂದು ಪೊಱಲಂ ಪುಗಿಸಿ

ಬೀಡನೆಲ್ಲಿ ಬಿಡುವಮೆನೆ ಪಾಂಡವರಯ್ವರುಂ ಕುಂತಿವೆರಸು ಅರಗಿನ ಮನೆಯಂ ಪುಗಿಸಿ ತನ್ನ ಬೀಡಿಂಗೆ ಪೋದನ್; ಧರ್ಮಪುತ್ರನಾ ಮನೆಯಂ ಪರೀಕ್ಷಿಸಿ ನೋಡಲೊಡಮಱಿದು ಕೊಂತಿವೆರಸೇಕಾಂತದೊಳ್ ಪುರೋಚನನೆಂಬ ಬೂತು ಸುಯೋಧನನ ಬೆಸದಿಂ ನಮ್ಮಂ ಮೆಟ್ಟಿಡಿಸಲೆಂದೆ ಮಾಡಿದಂ ನಾಮಿದನಱಿಯದಂತು ಬೇಂಟೆಯ ನೆವದೊಳ್ ಬಟ್ಟೆಗಳಂ ಸೋದಿಸುವಮೆಂದು ನಿಚ್ಚಂ ಬೇಂಟೆವೋಗೆ ಪುರೋಚನನುಂ ಪೆಱಗಣ ಕಾಪಂ ಕಣ್ಗಾಪಿನಲೆ ಕಾದಿರ್ಪನ್ನೆಗಂ, ಉೞಿದೆಲ್ಲರುಂ ಮಱಲುಂದಿರ್ದ ಸಮಯದೊಳ್, ಅರ್ಧರಾತ್ರಿಯಾದಾಗಳ್ ವಿದುರನ ವಿಶ್ವಾಸದಾತಂ ಕನಕನೆಂಬಂ ಕುಂತಿವೆರಸಯ್ವರುಮಂ ಸುರಂಗದಿಂ ಪೊಱಮಡಿಸಿ ಪುರೋಚನಂ ಮಱಕೆಂದಿರ್ದೋವರಿಯೊಳ್ ಕಿಚ್ಚಂ ಕೊಳಿಸಿ ಪಾಂಡವರ್ ಸುರಂಗದಿಂ ಪೊಱಮಟ್ಟು ತೆಂಕಮೊಗದೆ ಪಯಣಂಬೋಗಿ ವನಾಂತರಾಳಮಧ್ಯಸ್ಥಿತ ವಿಶಾಳವಟವಿಟಪಿಯನೆಯ್ತಂದು ಮಱಲುಂದಿದರ್; ಅನ್ನೆಗಂ ಕೋಕನದಬಾಂಧವನುದಯಾಚಳಶಿಖರಶೇಖರನಾದಗಳಾ ಬನಮನಾಳ್ವ ಹಿಡಿಂಬನೆಂಬನವರ ಬರವನಱಿದು ತನ್ನ ತಂಗೆ ಹಿಡಿಂಬೆಯೆಂಬಳಂ ಕರೆದು

ನಿಡಿಯರ್ ಬಲ್ಲಾಯದ ಬ
ಲ್ದಡಿಗರ ವಂದಿರ್ದರಯ್ವರಾಲದ ಕೆೞಗಿಂ
ತೊಡರ್ದರ್ ನಮ್ಮಯ ಭಕ್ಷದೊ
ಳಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ ೧೧

ಎಂಬುದುಮಂತೆ ಗೆಯ್ವೆನೆಂದು ಮಾರುತಿಯಂ ಕಂಡು ಕಾಮನಂಬುವೀಡಿಂಗೊಳಗಾಗಿ ತಾಂ ಕಾಮರೂಪೆಯುಪ್ಪುದಱಿಂ ದಿವ್ಯಕನ್ಯಕಾಸ್ವರೂಪಮಂ ಕೆಯ್ಕೊಂಡು ಮದನನ ಕೆಯ್ಯಿಂ ಬರ್ದುಂಕಿದರಲಂಬು ಬರ್ಪಂತೆ ಬಂದು ಭೀಮಸೇನನ ಕೆಲದೊಳ್ ಕುಳ್ಳಿರೆ, ಹಿಡಿಂಬನಾಡಂಬರಂಗೆಯ್ದು ತುಂಬುರುಗೊಳ್ಳಿಯಂತಂಬರಂಬರಂ ಸಿಡಿಲ್ದು ಪೊತ್ತು ಪಾಸಱೆಯನೆಯ್ತರೆ ಭೀಮಂ ದೈತ್ಯನಂ ಪಿಡಿದು ಸೀಳ್ದು ಬೀಸಿದಂ;

ಆಗಳಾ ಕಳಕಳಕ್ಕೆ ಮಱಲುಂದಿದಯ್ವರುಮೆೞ್ಚತ್ತಿದೇನೆಂದು ಬೆಸಗೊಳೆ ತದ್ವೃತ್ತಾಂತಮೆಲ್ಲಮಱಿಪಿ ಹಿಡಿಂಬೆ ಡಂಬಮಿಲ್ಲದೆ ಭೀಮಸೇನನೊಳಪ್ಪೊಡಂಬಡಂ ನುಡಿಯೆ, ಆಕೆಗಂ ಭೀಮಸೇನಂಗಂ ಗಂಧರ್ವವಿವಾಹಮಂ ಮಾಡಿದೊಡೆ, ಹಿಡಿಂಬೆ ನೀಮಿಲ್ಲಿರಲ್ವೇಡ ಹಿಡಿಂಬಪುರಮೆಂಬುದೆಮ್ಮ ಪುರಮಲ್ಲಿಗೆ ಪೋಪಂ ಬನ್ನಿಮೆಂದು ಮುಂದಿಟ್ಟೊಡಗೊಂಡು ಪೋಗಿ ಮಹಾವಿಭೂತಿಯಿಂ ಪೊೞಲಂ ಪುಗಿಸಿ ತನ್ನ ಸಂಪತ್ತುಮಂ ಶ್ರೀಯುಮಂ ಮೆಱೆದು, ಭೀಮಸೇನನುಂ ತಾನುಂ ರಮಿಯಿಸೆ ಆಕೆಗಂ ಭೀಮಂಗಂ ಪುಟ್ಟಿದ ನಾರುಮಗುರ್ವಿಸೆ ಮಗಂ ಘಟೋತ್ಕಚನೆಂಬಂ; ಈಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಮುಂ ಸದ್ಯಃಪ್ರಸೂತಿಯುಂ ಸದ್ಯೋಯೌವನಮುಮುಳ್ಳ ಕಾರಣದಿಂದಾಗಳೆ ಷೋಡಶವರ್ಷದ ಕುಮಾರನಾಗಿರೆ ಪಾಂಡವರುಮಲ್ಲಿ ಮೂಱುವರ್ಷಮಿರ್ದು ಏಕಚಕ್ರಕ್ಕೆ ಪೋಪ ಕಜ್ಜಮನಾಳೋಚಿಸಿ, ಹಿಡಿಂಬೆಯುಮಂ ಕರೆದು ಇನ್ನಿರಲಾಗದು

ಪೋಪೆವೆಂದು ಪಾಂಡವರೇಕಚಕ್ರಮನೆಯ್ದಿದರ್; ಅಂತು ಬಂದು ಚತುರ್ವೇದಪಾರಗರ ಮನೆಯ ಮುಂದಣ ಚತುಶ್ಶಾಲೆಯೊಳ್ ಬೀಡಂ ಬಿಟ್ಟು ಧರಾಮರವೇಷದೊಳೊಂದು ವರುಷಮಿರ್ಪನ್ನೆಗಂ ಒಂದು ದಿವಸಂ ನಾರಿಯ ಮಮತಾವಿಪೂರಿತೋರ್ಜಿತರವದಿಂ ಕಾರುಣ್ಯಾಕ್ರಂದನಮಂ ಕೇಳ್ದು ಈ ಪುಯ್ಯಲನಾರಯ್ದು ಬರ್ಪೆನೆಂದು ಕೊಂತಿ ತಾನೆ ಪೋಗಿ,

ಅೞ್ ಕುಡಲಾದ ಕೂಸು ನೆಲದೊಳ್ ಪೊರಳುತ್ತಿರೆ ಧರ್ಮಪತ್ನಿ ಬಾ
ಯೞದು ಕೊರಲ್ಗೆ ಪಾಯ್ದು ಪರಿದಾಡುವ ಬಾಲಕನಾದ ಶೋಕದಿಂ
ಗಳಗಳ ಕಣ್ಣ ನೀರ್ ಸುರಿಯೆ ಚಿಂತಿಪ ಪಾರ್ವನ ಶೋಕದೊಂದು ಪೊಂ
ಪುೞಯನೆ ನೋಡಿ ನಾಡೆ ಕರುಣಂ ತನಗಾಗಿರೆ ಕೊಂತಿ ಚಿಂತೆಯಿಂ ೧೨

ಬೆಸಗೊಳೆ ಪಾರ್ವಂ ಇಂತೆಂದು ಬೆಸಸಿದಂ: ಬಕನೆಂಬನೊರ್ವನಸುರಂ ಪೊೞಲ ತೆಂಕಣ ಬೆಟ್ಟದೊಳಿರ್ಪನಾತಂಗೆ ನಿಚ್ಚಮೊಂದು ಮನೆಯೊಳೆರಡೆಮ್ಮೆವೋಜೆಯೊಳ್ ಪೂಡಿದ ಪನ್ನಿರ್ಕಂಡುಗದಕ್ಕಿಯ ಕೂೞುಮನದರ್ಕೆ ತಕ್ಕ ಪರಿಕರಮುಮನೊರ್ವ ಮಾನಸಂ ಕೊಂಡು ಪೋಪನಂತಾತಂ ಬೆರಸದೆಲ್ಲಮಂ ತಿಂದು ತಣಿಯದೆ ಪಲ್ಲಂ ತಿಂಬನ್ ಅದೊಂದು ದಿವಸಂ ತಪ್ಪಿದೊಡೆ ಈ ಪೊೞಲನಿತುಮಂ ತಿಂಬಂ ನಾಳಿನ ಬಾರಿಯೆಮ್ಮ ಮೇಲೆ ಬಂದುದು ಎನೆ, ಕೊಂತಿಯಿಂತೆಂದಳ್: ಇಮ್ಮಿಡುಕಲ್ವೇಡ ಎನಗಯ್ವರ್ ಮಕ್ಕಳೊಳರ್ ಬಕನ ಬಾರಿಗೊರ್ವನನೀವೆಂ ಎಂದು ಬಂದು ಭೀಮಸೇನಂಗಱಿಪಿದೊಡೆ, ನೇಸಱ್ ಮೂಡೆ ಸಾಹಸಭೀಮಂ ಪಾರ್ವನ ಮನೆಯ ಬಂಡಿಯ ಕೂೞಂ ಕೆಯ್ಕೊಂಡು ಮುಂ ಪೊಡೆವೆಂ ಕೂೞಂ ಬೞಯಂ ಪೊಡೆವೆಂ ರಕ್ಕಸನನೆಂದು ತನ್ನ ತಂದ ಬಂಡಿಯ ಕೂೞೆಲ್ಲಮಂ ಪತ್ತೆಂಟು ತುತ್ತಿನೊಳ್ ಸಮಯೆ ತುತ್ತುವುದಂ ಕಂಡು ಬಕಂ ಬಕವೇಷದಿಂ ಮೆಲ್ಲನೋಸರಿಸಿ ಬಂದು

ಎರಡುಂ ಕೆಲನುಮನೆರಡುಂ
ಕರಪರಿಘದಿನಡಸಿ ಗುರ್ದಿ ಪೆಱಪಿಂಗುವನಂ
ಮುರಿದಡಸಿ ಪಿಡಿದು ಘಟ್ಟಿಸಿ
ಪಿರಿಯಱೆಯೊಳ್ ಪೊಯದನಸಗವೊಯ್ಲಂ ಭೀಮಂ ೧೩

ಅಂತು ಕೊಂದು ಕೆಲವು ದಿವಸಮಿರ್ಪನ್ನೆಗಂ ಒಂದು ದಿವಸಂ ಏಕಚಕ್ರಕ್ಕೆ ವಂದ ಪಾರ್ವನಂ ವಿಚಾರಿಸಿದೊಡೆ, ಪಾಂಚಾಳ ದೇಶದರಸಂ ದ್ರುಪದನೆಂಬಂ ಪಯೋವ್ರತನೆಂಬ ದಿವ್ಯಮುನಿಪತಿಯಿಂ ಪುತ್ರಕಾಮೇಷ್ಟಿಗೆಯ್ಸಿ, ಧಗಧಗಿಸುವ ಜ್ವಾಲಾಮಾಲೆಗಳೊಳ್ ಕಿಟ್ಟಿ ಬಾಳುಮುತ್ತಪರಮುಮಭೇದ್ಯಕವಚಮುಂ ಬೆರಸೊಗೆದ ಧೃಷ್ಟದ್ಯುಮ್ನನೆಂಬ ಮಗನುಂ ಜ್ವಾಳಾಮಾಳಿನಿಯೊಗೆವಂತೊಗೆದ ಕೃಷ್ಣೆಯೆಂಬ ಮಗಳುಮಂ ಪಡೆದನಾ ಹೋಮಾಗ್ನಿಯೊಳ್ ಪುಟ್ಟಿ ದಿವ್ಯಚಾಪಮುಮಯ್ದು ದಿವ್ಯಶರಮೊಳವಾ ಬಿಲ್ಲನೇಱಿಸಿ

ಆ ಸರಲ್ಗಳಿಂದಾತನ ಮನೆಯ ಮುಂದೆ ನಭದೊಳ್ ನಲಿನಲಿದಾಡುವ ಜಂತ್ರದ ಮೀನನೆಚ್ಚನುಮಾಕೆಗೆ ಗಂಡನಕ್ಕುಮೆಂದಾದೇಶಂ; ದ್ರುಪದನುಮೀಗಳಾ ಕೂಸಿಂಗೆ ಸಯಂಬರಮಂ ಮಾಡಲೆಂದು ನೆಲದೊಳುಳ್ಳರಸುಮಕ್ಕಳ್ಗೆಲ್ಲಂ ಬಟಿಯನಟ್ಟಿರ್ದಂ ಅವರೆಲ್ಲಂ ಛತ್ರಿವತಿಯೆಂಬ ದ್ರುಪದನ ಪೊಟಿಲ್ಗೆ ವಂದಿರ್ದರ್, ಆನಲ್ಲಿಂ ಬಂದೆನೆಂದನ್;

ಒಂದೆ ಪೊಟಿಲೊಳ್ ಸಂದಿರ್ದ ಭಾಸ್ವತ್ಸುಹೃದ್ಬಲಕಂ ಮಾರ್ವಲಕಂ ಗುಣಾರ್ಣವಶರಪ್ರಾಗಲ್ಭ್ಯಮಂ ತೋಱುವಂ ಎಂದು ನಿಶ್ಚಯಿಸಿ ಪಾಡವರೇಕಚಕ್ರದಿಂ ಪೊಱಮಟ್ಟು ಪಾಂಚಾಲದೇಶದ ಛತ್ರವತೀಪುರಮಂ ಪೊಕ್ಕು ಎಲ್ಲಿಯುಂ ಬೀಡಂಬಿಡಲೆಡೆವಡೆಯದೊಂದು ಭಾರ್ಗವಪರ್ಣಶಾಲೆಯೊಳೆಡೆಮಾಡಿಕೊಂಡು ಬ್ರಹ್ಮಸಭೆಯೊಳಗೆ ದೇವಬ್ರಾಹ್ಮಣರಾಗಿರ್ದರ್;

ನಾಳೆ ಸಯಂಬರಮೆನೆ ಪಾಂ
ಚಾಳಮಹೀಪಾಳನಖಿಳಭೂಭೃನ್ನಿಕರ
ಕ್ಕೋಳಿಯೆ ಸಾಱಿದೊಡವನೀ
ಪಾಲರ್ ಕೆಯ್ಗೆಯ್ಯಲೆಂದು ಪಱಿಮಱಿಯಾದರ್ ೧೪

ಮಱುದಿವಸಂ ನೇಸಱ್ ಮೂಡೆ

ತಂತಮ್ಮ ರಾಜ್ಯಚಿಹ್ನಂ
ತಂತಮ್ಮ ಮಹಾವಿಭೂತಿ ತಂತಮ್ಮ ಬಲಂ
ತಂತಮ್ಮೆಸೆವ ವಿಳಾಸಂ
ತಂತಮ್ಮಿರ್ಪೆಡೆಯೊಳೋಳಿಯಿಂ ಕುಳ್ಳಿರ್ದರ್ ೧೫

ದ್ರುಪದಂ ಅಧಿಕವಿಲಾಸದಿನುಡಲಿಕ್ಕಿ ನೆಱೆಯೆ ಬಿಯಮಂ ಮೆಱೆದು ಕೂಸಂ ನೆಱೆಯೆ ಪಸದನಂಗೊಳಿಸೆ

ಮಸೆದುದು ಮದನನ ಬಾಳ್ ಕೂ
ರ್ಮಸೆಯಿಟ್ಟುದು ಕಾಮನಂಬು ಬಾಯ್ಗೂಡಿದುದಾ
ಕುಸುಮಾಸ್ತ್ರನ ಚಕ್ರಮಿದೆಂ
ಬೆಸಕಮನಾಳ್ದತ್ತು ಪಸದನಂ ದ್ರೌಪದಿಯಾ ೧೬

ಅಂತು ಪಸದನಂಗೊಳಿಸಿ ಬಿಡಮುತ್ತಿನ ಸೇಸೆಯನಿಕ್ಕಿ ತಾಯ್ಗಂ ತಂದೆಗಂ ಪೊಡಮಡಿಸಿ ಸರ್ವತೋಭದ್ರಮೆಂಬ ಸಿವಿಗೆಯನೇಱಿಸಿ ಕರೆತರೆ ಮೊಟಗುವ ಮಂಗಳತೂರ್ಯಗಳೆಸೆಯೆ ದ್ರೌಪದಿ ಶೃಂಗಾರಸಾಗರಮೆ ಮೇರೆದಪ್ಪಿ ಬರ್ಪಂತೆ ಬರೆ

ಒಡನೆ ನೆರೆದರಸುಮಕ್ಕಳ
ನಿಡುಗಣ್ಗಳ ಬಳಗಮೆಱಗೆ ತನ್ನಯ ಮೆಯ್ಯೊಳ್
ನಡೆ ಬಳಸಿ ಪಲರುಮಂಬಂ
ತುಡೆ ನಡುವಿರ್ದೊಂದು ಪುಲ್ಲೆಯಿರ್ಪಂತಿರ್ದಳ್ ೧೭

ಆಗಳಾ ಪಾಂಡವರ್ ತಮ್ಮಂ ಪೆಱರಱಿಯದಂತು ಬ್ರಾಹ್ಮಣವೇಷದೊಳೆ ಬ್ರಹ್ಮಸಭೆಯೊಳ್ ಬಂದಿರೆ, ಆಗಳ್ ವಿದಿತವೃತ್ತಾಂತೆಯಾಗಿ ದ್ರೌಪದಿಯ ಕೆಲದೊಳಿರ್ದ ಸಂದರಮಾಲೆಯೆಂಬ ಚೇಟಿ ಇಂತಿವರನ್ನರೀ ದೊರೆಯರೆಂದಱಿವಂತಿರೆ ಪೇೞ್ದುವೇೞ್ದು ನಯದಿಂದುಯ್ದಳ್; ಅಂತು ನೆರದರಸುಮಕ್ಕಳಾರುಮಂ ಮೆಚ್ಚದೆ ಮಗುೞೆವರೆ ದ್ರುಪದಂ ಇದಱೊಳೆಲ್ಲಮೇನಿಂ ಹೋಮಾಗ್ನಿಸಂಭವಮಪ್ಪ ದಿವ್ಯಚಾಪಮನೇಱಿಸಿಯುಂ ಈ ಅಯ್ದು ಶರದೊಳಾಕಾಶದೊಳ್ ನಲಿದು ಪೊಳೆಯುತ್ತಿರ್ಪ ಜಂತ್ರದ ಮೀನನಿಸಲಾರ್ಪೊಡೆ ಬಂದೇಱಿಸಿಯುಮೆಚ್ಚು ಗೆಲ್ಲಂಗೊಂಡೆನ್ನ ಮಗಳಂ ಮದುವೆಯಪ್ಪುದೆಂಬುದುಂ, ಬಿಲ್ಲನೇಱಿಸಿದಪೆವೆಂದೆನಿಬರಾನುಮರಸು ಮಕ್ಕಳ್ ಬಂದು ಬಿಲ್ಲಂ ಪಿಡಿದವರೆಲ್ಲಂ ಬಿಲ್ಲುಂಬೆಱಗುಮಾಗಿ ಸಿಗ್ಗಾಗಿ ಪೋಗಿ ತಂತಮ್ಮಿರ್ಪೆಡೆಯೊಳಿರೆ ಪಾಂಚಾಳರಾಜನೀ ನೆರದರಸುಮಕ್ಕಳೊಳಾರುಮೀ ಬಿಲ್ಲನೇಱಿಸಲಾರ್ತರಿಲ್ಲಮೀ ಜನವಡೆಯೊಳಾರಾನುಮೀ ಬಿಲ್ಲನೇಱಿಸಲಾರ್ಪೊಡೆ ಬನ್ನಿಮೆಂದು ಸಾಱುವುದುಂ, ಕದನತ್ರಿಣೇತ್ರಂ ಮೂಡುವ ಬಾಳದಿನೇಶಬಿಂಬದೊಂದೆಸಕದಿನಾ ದ್ವಿಜನ್ಮಸಭೆಯಂ ಪೊಱಮಟ್ಟೊಡೆ ಕಡ್ಡುವಂದ ದೊಡ್ಡರೆಲ್ಲಂ

ಸಂಗತಸತ್ವಂ ಕುರುರಾ
ಜಂಗಂ ಕರ್ಣಂಗಮೇಱಿಸಲ್ಕರಿದನಿದಂ
ತಾಂ ಗಡಮೇಱಿಪನೀ ಪಾ
ರ್ವಂಗಕ್ಕಟ ಮೆಯ್ಯೊಳೊಂದು ಮರುಳುಂಟಕ್ಕುಂ ೧೮

ಎಂದು ಬಾಯ್ಗೆವಂದುದನೆ ನುಡಿಯೆ ರಂಗಭೂಮಿಯ ನಡುವೆ ನಿಂದು ದಿವ್ಯಚಾಪಕ್ಕೆ ಪೊಡೆವಟ್ಟದನವಯವದಿನೆಡಗೆಯ್ಯೊಳೆತ್ತಿಕೊಂಡು ತನ್ನ ಬಗೆದ ಕಜ್ಜಮಂ ಗೊಲೆಗೊಳಿಸುವಂತಾ ಬಿಲ್ಲಂ ಗೊಲೆಯನೇಱೆ ನೂಂಕಿ

ದೆಸೆ ಕಂಪಂಗೊಳೆ ಕೊಂಡು ದಿವ್ಯಶರಮಂ ಕರ್ಣಾದಿಗಳ್ ಕಂಡು ಬೆ
ಕ್ಕಸಮಾಗಿರ್ಪಿನಮೊಂದೆ ಸೂೞೆ ತೆಗೆದಾಕರ್ಣಾಂತಮಂ ತಾಗೆ ನಿ
ಟ್ಟಿಸಲಾರ್ಗಾರ್ಗಿಸಲಕ್ಕುಮೆಂಬೆಸಕದಾ ಮೀನಂ ಸಮಂತೆಚ್ಚು ಮೆ
ಚ್ಚಿಸಿದಂ ದೇವರುಮಮಂ ಧನುರ್ಧರರುಮಮಂ ವಿದ್ವಿಷ್ಟವಿದ್ರಾವಣಂ ೧೯

ಆಗಳಾ ಪಿಡಿದ ಬಿಲ್ಲೆ ಕರ್ಬಿನ ಬಿಲ್ಲಾಗೆಯುಮಂಬುಗಳೆ ಪೂವಿನಂಬುಗಳಾಗೆಯುಮೆಚ್ಚ ಮೀನೆ ಮೀನಕೇತನಮಾಗೆಯುಂ ಸಹಜಮನೋಜನಂ ಮನೋಜನೆಂದೆ ಬಗೆದು

ನಡೆ ಕಡೆಗಣ್ ಮನಂ ಬಯಸೆ ತಳ್ತಮರ್ದಪ್ಪಲೆ ತೋಳ್ಗಳಾಸೆಯೊಳ್
ತೊಡರ್ದಿರೆ ಪೊಣ್ಮೆ ಘರ್ಮಜಲಮುಣ್ಮೆ ಭಯಂ ಕಿಡೆ ನಾಣ್ ವಿಕಾರದೊಳ್
ತೊಡರ್ದಿರೆ ಕೆಯ್ತುವುಮ್ಮಳಿಪ ಕನ್ನೆಗೆ ಸುಂದರಮಾಲೆ ಮಾಲೆಯಂ
ತಡೆಯದೆ ನೀಡೆ ಮಾಣದೆ ಗುಣಾರ್ಣವನಂ ಸತಿ ಮಾಲೆಸೂಡಿದಳ್ ೨೦

ಆಗಳ್ ದ್ರುಪದಂ ಬದ್ದವಣದ ಪಱೆಗಳಂ ಬಾಜಿಸಲ್ವೇೞ್ದು ಸುರತಮಕರಧ್ವಜನಂ ದ್ರೌಪದಿಯೊಡನೆ ಸಿವಿಗೆಯನೇಱಿಸಿ ಧೃಷ್ಟದ್ಯುಮ್ನಯುಧಾಮನ್ಯೂತ್ತಮೌಜಶಿಶಿಖಂಡಿಚೇಕಿತಾನರೆಂಬ ತನ್ನ ಮಗಂದಿರುಂ ತಮ್ಮಂದಿರುಂ ಬೆರಸು ಅವರ್ ಪಾಂಡವರಪ್ಪುದುಮಂ ತನ್ನಳಿಯಂ ವಿಕ್ರಮಾರ್ಜುನನಪ್ಪುದುಮಂ ತಪ್ಪಿಲ್ಲದಱಿದು ಮಹಾವಿಭೂತಿಯಿಂ ಪೊೞಲಂ ಪುಗಿಸಿ ಚತುರಾಂತರದೊಳ್ ಮುತ್ತಿನ ಚೌಕದ ನಡುವಣ ಚೆಂಬೊನ್ನ ಪಟ್ಟವಣೆಯ ಮೇಗಣ ದುಗುಲದ ಪಸೆಯೊಳ್ ಗುಣಾರ್ಣವನನಾ ದ್ರುಪದಜೆಯೊಡನೆ ಕುಳ್ಳಿರಿಸಿ ಹಿತಪುರೋಹಿತಪ್ರಾಜ್ಯಾಹುತಿಹುತಹುತವಹಸಮಕ್ಷಮದೊಳ್ ಕೆಯ್ನೀರೆಱೆದು ಪಾಣಿಗ್ರಹಂಗೆಯ್ಸೆ

ಇಡಿದರೆ ಮಂಜಿನೊಳ್ ತುಱುಗಿ ತೆಂಕಣ ಗಾಳಿಯೊಳಾದ ಸೋಂಕಿನೊಳ್
ನಡುಗುವಶೋಕವಲ್ಲರಿಯ ಪಲ್ಲವದೊಳ್ ನವಚೂತಪಲ್ಲವಂ
ತೊಡರ್ದವೊಲಾಗೆ ಘರ್ಮಜಲದಿಂ ನಡುಪಾಕೆಯ ಪಾಣಿಪಲ್ಲವಂ
ಬಿಡಿದು ಬೆಡಂಗನಾಳ್ದುದು ಗುಣಾರ್ಣವನೊಪ್ಪುವ ಪಾಣಿಪಲ್ಲವಂ ೨೧

ಅಂತೊರ್ವರೊರ್ವರ ಕಿಱುಕುಣಿಕೆಗಳಂ ಪಿಡಿದು ಬೇಳ್ವೆಯ ಕೊಂಡದ ಮೊದಲ್ಗೆ ವಂದು ಆ ದಂಪತಿಗಳ್ ಸಪ್ತಾರ್ಚಿಯುಂ ಮೂಱು ಸೂೞ್ ಬಲವಂದು ನಿಂದಿಂ ಬೞಿಯುವಾಕೆ ಪುರೋಹಿತನ ಪೇೞ್ದೋಜೆಯೊಳ್ ಲಾಜೆಯನಗ್ನಿಕುಂಡದೊಳ್ ಸುರಿದು, ಸೊಗಯಿಸೆ ಪಾಡುವ ಮಂಗಳರವಂಗಳುಮೋದುವ ಋಚೆಗಳುಂ ಪರಸುವ ಪರಕೆಗಳುಮೆಸೆಯೆ ಪಸೆಯೊಳಿರೆ, ವಿವಾಹಮಂಗಳದೊಸಗೆಯೊಳ್ ಮಂಗಳಪಾಠಕರೆೞ್ದು ನಿಂದಿರ್ದು ಮಂಗಳವೃತ್ತಂಗಳನೋದೆ ಕಿಱಿದುಂ ಬೇಗಮಿರ್ದೆತ್ತಿದ ಬೋನದೊಳ್ ಕಲ್ಯಾಣಾಮೃತಮನಾರೋಗಿಸಿ ಬೞಿಯಂ ಯಕ್ಷಕರ್ದಮದ ಕೆಯ್ಗಟ್ಟಿಯೊಳ್ ಕೆಯ್ಯಂ ತಿಮಿರ್ದು ತಂಬುಲಮಂ ಕೊಂಡು ಹರಿಗಂ ಅನ್ನವಾಸದೋಲಗದೊಳಿರ್ದನ್; ಖರಾಂಶು ಅಪರವಾರ್ಧಿಯೊಳಾಳ್ವುದುಂ ದ್ರುಪದಂ ನಿಜಾಂತಃಪುರಪರಿವಾರಂಬೆರಸು ಉದಾರಮಹೇಶ್ವರನಲ್ಲಿಗೋಲಗಕ್ಕೆ ವಂದು ನೃತ್ಯವಾದ್ಯಗೀತಾತೋದ್ಯಂಗಳೊಳ್ ಕಿಱಿದುಂ ಬೇಗಮಿರ್ದೋಲಗಮುಮಂ ಪರೆಯಲ್ವೇೞ್ದು ಮತ್ತಿನ ನಾಲ್ವರ್ಗಂ ಕೊಂತಿಗಂ ಬೇಱೆವೇಱೆ ಮಾಡಂಗಳಂ ಬೀಡುವೇೞ್ದು ಗುಣಾರ್ಣವನಂ ಸೆಜ್ಜೆಗೆ ಬಿಜಯಂಗೆಯ್ಯಿಮೆನೆ ಕಾಮಂ ಕಳನೇಱುವಂತೆ ಸೆಜ್ಜೆಯನೇಱೆ ಸೆಡೆದಿರ್ದ ನಲ್ಲಳಂ ನೋಡಿ

ನೋಟದೊಳಟ್ಟಿಜಂಬಡೆದು ಮೆಲ್ನುಡಿಯೊಳ್ ಬಗೆವೊಕ್ಕು ಜಾಣೊಳ
ಳ್ಳಾಟಮನೆಲ್ಲಮಂ ಕಿಡಿಸಿ ಸೋಂಕಿನೊಳೊಯ್ಯನೆ ಮೆಯ್ವೊಣರ್ಚೆ ಬಾ

ಯ್ಪೊಗ್ಗಟದೊಳಟ್ಟಿಱಿಂ ಪಡೆದು ಕೂಟದೊಳುಣ್ಮಿದ ಬೆಚ್ಚ ತಟ್ಕೆಯೊಳ್
ಕೂಟಸುಖಂಗಳಂ ಪಡೆದನೇಂ ಚದುರಂ ಗಳ ಬದ್ದೆದಲ್ಲಱಿಂ ೨೨

ಅಂತು ದ್ರುಪದನ ಪೊೞಲೊಳ್ ಪಾಂಡವರ್ ಚಾಗಕ್ಕೆ ಬೂತುಂ ಭೋಗಕ್ಕೆ ಪೊೞ್ತುಂ ನೆಱೆಯದೆನಿಸಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ಪನ್ನೆಗಮಿತ್ತಲ್ ಪಾಂಡವರ್ ತಮ್ಮುತಯ್ವರುಮಿರ್ದರ್ ದ್ರುಪದಾಧಿರಾಜಪುರದೊಳ್ ಕೆಯ್ಕೊಂಡು ಪಾಂಚಾಳಿಯಂ ಎಂಬ ಮಾತಂ ದುರ್ಯೋಧನಾದಿಗಳ್ ಕೇಳ್ದು ಬಿಲ್ಲುಂ ಬೆಱಗಾಗಿ

ಕಾಯ್ವೞಲುಱೆ ಜತುಗೃಹದೊಳ
ಗಯ್ವರುಮಂ ಮಂತ್ರಬಲದೆ ಸುಟ್ಟೊಡಮವರಂ
ದೆಯ್ವಬಲಮೊಂದೆ ಕಾದುದು
ದೆಯ್ವಮನಾರಯ್ಯ ಮೀಱೆ ಬಾೞಲ್ ನೆಱೆವರ್ ೨೩

ಎಂಬುದುಂ ಭೀಷ್ಮ ದ್ರೋಣಾದಿಗಳ್ ನಿಶ್ಚಿತಮಂತ್ರರಾಗಿ ವಿದುರನಂ ಕರೆದಾಳೋಚಿಸಿ ಪೃಥಾನೂಜರಂ ನಿನ್ನ ಬಲ್ಲ ಪಾಟ್ಕೆಯಿಂ ನುಡಿದೊಡಂಗೊಂಡು ಬರ್ಪುದೆಂದು ಪೇೞ್ದಟ್ಟುವುದುಂ ಆತನಂತೆ ಗೆಯ್ವೆನೆಂದು ರಥಾರೂಢನಾಗಿ ಪಾಂಚಾಳರಾಜಪುರಕ್ಕೆ ವಂದು ಪಾಂಡುಪುತ್ರರಂ ಕಂಡು

ಅದು ಪಿರಿದುಂ ಪ್ರಮಾದಮದುವುಂ ಕುರುರಾಜನಿನಾಯ್ತು ಪೋಯ್ತು ಸಂ
ದುದು ಮಱೆಯಲ್ಕೆ ವೇೞ್ಪುದದನಾಳ್ವುದು ತಪ್ಪದೆ ಪಾಂಡುರಾಜನಾ
ಳ್ದುದನೆಳೆಯಂ ಮನಂಬಸದೆ ಬರ್ಪುದು ನೀಮೆನೆ ಪೋಪ ಕಜ್ಜಮಂ
ವಿದುರನೊಳಯ್ವರುಂ ಸಮೆದು ಪೇೞ್ವುದುಮಾ ದ್ರುಪದಂಗೆ ರಾಗದಿಂ ೨೪

ಆತನ ಬೞವೞಿಗೊಟ್ಟ ಮದಕರಿಕರೇಣುಜಾತ್ಯಶ್ವಶಶಿತಾರಹಾರವಸ್ತುಗಳಂ ಕೆಯ್ಕೊಂಡು ದ್ರುಪದಜೆಯನೊಡಗೊಂಡು ದ್ರುಪದನನಿರವೇೞ್ದು ಕತಿಪಯ ಪ್ರಯಾಣಂಗಳಿಂ ಮದಗಜಪುರಮನೆಯ್ದೆ ವಂದಾಗಳ್

ಘನಪಥಮಂ ಪಳಂಚಲೆವ ಸೌಧಚಯಂಗಳಿನಾಡುತಿರ್ಪ ಕೇ
ತನತತಿಯಿಂ ಕರೀಂದ್ರಗಳಗರ್ಜನೆಯಿಂ ಪಟಹಪ್ರಣಾದಮಂ
ಘನರವಮೆಂದೆ ನರ್ತಿಸುವ ಕೇಕಿಗಳ ಕಡುರಯ್ಯಮಪ್ಪ ಹ
ಸ್ತಿನಪುರಮಂ ಜಿತೇಂದ್ರಪುರಮಂ ಪುರುಪರಮೇಶ್ವರರಾಗಳೆಯ್ದಿದರ್ ೨೫

ಮುನ್ನಮೆ ಸಮೆದ ಬೀಡುಗಳೊಳ್ ಪಾಂಡವರ್ ಕೆಲವು ದಿವಸಮಿರೆ, ದ್ರೋಣ ಭೀಷ್ಮ ಕೃಪ ವಿದುರರ್ಕಳ್ ತಮ್ಮೊಳಾಲೋಚಿಸಿ ಎನ್ನ ನಡಪಿದುದರ್ಕಂ

ಕೂರ್ತುರ್ದರ್ಕಂ ಪಾಂಡುಪುತ್ರರ್ಗೆ ನೆಲನಂ ಪಚ್ಚುಕೊಟ್ಟು ಪಟ್ಟಮಂ ಕಟ್ಟುವೆನೆನೆ ದುರ್ಯೋಧನನೇಗೆಯ್ದುಂ ಒಡಂಬಡದಿರೆ ಭೀಷ್ಮರ್ ಮುನಿದು ಆನವರ್ಗೆ ಪಟ್ಟಮಂ ಕಟ್ಟಿ ನೆಲನಂ ಪಚ್ಚುಕೊಡುವಾಗಳಡ್ಡಂಬರ್ಪ ಗಂಡರಂ ನೋಟ್ಪೆನೆಂದು ಬಗ್ಗಿಸಿದೊಡೆ ದುರ್ಯೋಧನನತಿ ಸಂಭ್ರಮಾಕುಳಿತನಾಗಿ ನೀಮೆಂದುದನೆಂದು ಬಾಳ್ವೆನೆಂದೊಡಪ್ಪುದೆಂದು ಕಲ್ಯಾಣಕಾರ್ಯರತರ್ ಕಟ್ಟಿದರಾ ಯುಧಿಷ್ಠಿರಂಗುತ್ಸಾಹದಿಂ ಪಟ್ಟಮಂ; ಧೃತರಾಷ್ಟ್ರಂ ಪೂರ್ವಸ್ಥಿತಿಯೊಳ್ ಪಚ್ಚುಕೊಟ್ಟು ನಾಗಪುರಕ್ಕೆ ಅಱುವತ್ತು ಯೋಜನದೊಳಿಂದ್ರಪ್ರಸ್ಥಮೆಂಬುದು ಪೊೞಲಲ್ಲಿಗೆ ಪೋಗಿ ಸುಖಂ ರಾಜ್ಯಂಗೆಯ್ಯುತ್ತಿರಿಮೆಂಬುದುಮಂತೆ ಗೆಯ್ವೆಮೆಂದು ಸಮಸ್ತಪರಿವಾರಪರಿವೃತನಾಗಿ ಬಂದು ಧರ್ಮಜಂ ಇಂದ್ರಪ್ರಸ್ಥಮಂ ಶತ್ರುಪಕ್ಷಕ್ಷಯಕರಕರವಾಳದಂಷ್ಟ್ರಾಭೀಳ ಭುಜಂಗಮೂರ್ತಿ ವಿಶ್ವವಿಶ್ವಂಭರಾಧಾರಮಪ್ಪರಿಕೇಸರಿಯು ತೋಳ್ವಲದೊಳ್ ರಾಜ್ಯಂಗೆಯ್ಯುತ್ತಿರ್ಪನ್ನೆಗಂ ವಿಕ್ರಾಂತತುಂಗನೊಂದೆಡೆಯೊಳಿರ್ಪಿರವಿಂಗುಮ್ಮಳಿಸಿ ದಿಗಂಗನಾಮುಖಾವಲೋಕನಂಗೆಯ್ಯಲ್ ಮೇಣ್ ವಿಜಿಗೀಷುವೃತ್ತೋದ್ಯುಕ್ತನಾಗಲ್ ಬಗೆದು ಖಾಂಡವಪ್ರಸ್ಥದಿಂದುತ್ತರಾಭಿಮುಖನಾಗಿ ಕಾಮ್ಯಕವನದೊಳಗನೆ ನೀಲಪರ್ವತದ ಮೇಗೆ ಪೋಗಿ ಗಂಗಾದ್ವಾರದೊಳ್ ಮುನಿಜನಂಗಳ ಬೇಳ್ವೆಗಳ್ಗುಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತಶರಕೋಟಿಯಿಂದಮುಚ್ಚಾಟಿಸಿ ಬಂದು ಅಗಸ್ತ್ಯತೀರ್ಥಮಂ ಕಂಡು ವರ್ಧಮಾನನೆಂಬ ಋಷಿಯ ಶಾಪದೊಳುಗ್ರಗ್ರಾಹಸ್ವರೂಪದೊಳಿರ್ದಚ್ಚರಸೆಯರು ಮಂ ವಿಶಾಪೆಯರ್ ಮಾಡಿ ತೆಂಕನಾಡಂ ನಾಡಾಡಿಯಲ್ಲದೆ ಮೆಚ್ಚುತ್ತುಂ ಆ ನಾಡನೊಂದೆ ಬಿಲ್ಲೊಳುಂಡಿಗೆಸಾಧ್ಯಂ ಮಾಡಿ ಪಶ್ಚಿಮದಿಗ್ವಿಭಾಗಾಭಿಮುಖನಾಗಿ ಬಂದು

ಸಾರವಸ್ತುಗಳಿಂ ನೆಱೆದಂಭೋರಾಶಿಯೆ ಕಾದಿಗೆ ಕಾವನುಂ
ಸೀರಪಾಣಿ ವಿಳಾಸದಿನಾಳ್ದಂ ಚಕ್ರಧರಂ ಬಗೆವಂಗೆ ಸಂ
ಸಾರಸಾರಮಿದೆಂಬುದನಂದೆಯ್ತಂದನಸಂಚಳಕಾಂಚನ
ದ್ವಾರಬಂಧುರಬಂಧಗೃಹೋದ್ಯದ್ದ್ವಾರಾವತೀಪುರಮಂ ನರಂ ೨೬

ನಾರಾಯಣನುದಾತ್ತ ನಾರಾಯಣನ ಬರವನಱಿದು ಬಲದೇವ ಸಾತ್ಯಕಿ ಕೃತವರ್ಮಾದಿಗಳಪ್ಪ ತನ್ನೊಡವುಟ್ಟಿದರುಂ ವೃಷ್ಣಿಕಾಂಭೋಜಕುಳತಿಳಕರಪ್ಪ ಯಾದವರುಂ ಬೆರಸು ಮದಕರಿಕರೇಣುತುರಗಾದಿನಾನಾವಿಧ ವಾಹನಂಗಳನೇಱಿ ಮಯ್ದುನಂಗಿದಿರ್ವಂದು ತಮ್ಮಲಂಪಿನಟ್ಟಿಱಿನ ರೂಪನೆ ಕಾಣ್ಬಂತೆ ಕಂಡು ಪೊೞಲೊಳಗಣಿಂ ಬಂದು ನಿಜಮಂದಿರಮಂ ಪೊಕ್ಕಾಗಳ್, ನಾರಾಯಣನ ತಂಗೆ ಸುಭದ್ರೆಯೆಂಬ ಕನ್ನೆ ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೊಱಮಡುವ ವಿದ್ಯಾಧರಿಯಂತೆ ತನ್ನ ಚೆಂಬೊನ್ನ ಕನ್ನೆಮಾಡದ ಮೇಗಣ ನೆಲೆಯ ಚೌಪಳಿಗೆಯ ಬಾಗಿಲೊಳ್ ನಿಂದು

ಬಳಸಿದ ಗುಜ್ಜುಗಳ್ ನೆರೆದ ಮೇಳದ ಕನ್ನೆಯರೆತ್ತಮಿಕ್ಕೆ ಸಂ
ಚಳಿಸುವ ಚಾಮರಂ ಕನಕಪದ್ಮದ ಸೀಗುರಿ ತೊಟ್ಟ ಮಾಣಿಕಂ

ಗಳ ಬೆಳಗಿಟ್ಟಳಂ ತನಗೊಡಂಬಡೆ ದೇಸೆ ವಿಳಾಸಮಂ ಪುದುಂ
ಗೊಳಿಸೆ ಮರಲ್ದು ಕನ್ನೆ ನಡೆ ನೋಡಿ ಗುಣಾರ್ಣವನೆಂಬನೀತನೇ ೨೭

ಎಂದು ತನ್ನ ಮೇಳದಾಕೆಗಳಂ ಬೆಸಗೊಂಡೊಡಾಕೆ ಸಹಜಮನೋಜನ ಕುಲದ ಚದ ಚಾಗದ ಬೀರದ ಭಾಗ್ಯದ ಸೌಭಾಗ್ಯದಗುಂತಿಗಳನುಂತುಮಳವಲ್ಲದೆ ಪೊಗಟೆ

ಒದವಿದ ತನ್ನ ಜವ್ವನದ ರೂಪಿನ ಮೆಯ್ಯೊಳೆ ತಪ್ಪುದಪ್ಪುನೋ
ಟದೊಳೆ ಪೊಡರ್ಪು ತಪ್ಪು ಬಗೆ ತಪ್ಪು ಮನೋಜನ ಪೂವಿನಂಬು ತೀ
ವಿದ ದೊಣೆ ಕೀೞೆ ತನ್ನನಿಸೆ ಜಾಣದೆ ತಪ್ಪದೆ ತಪ್ಪುದಪ್ಪು ನೋ
ಡಿದುದೞಿಂ ಗುಣಾರ್ಣವನನಾ ಸತಿ ತಪ್ಪದೆ ತಪ್ಪುನೋಟದೊಳ್ ೨೮

ಅಂತು ತಳತಳ ತೊಳಗುವ ದುಕೂಲದ ಸಕಳವಟ್ಟೆಯೊಳೆ ನಿರ್ಮಿದಂತಾನುಮರಲ್ದ ತಾವರೆಯೆಸಳ್ಗಳೊಳ್ ಪುದಿದು ಪುದುಂಗೊಳಿಸಿದಂತಾನುಂ ಅನಂಗಾಮೃತವರ್ಷಮ ನೊದವಿಸಿದಂತಾನುಮೆರ್ದೆಯೊಳೆಡೆವಱಿಯದ ಪೊಳಪಿನೊಳ್ ತಳ್ತೊಯ್ದು ಕಡೆಗಣ್ಣ ಬೆಳ್ಪುಗಳ್ ಸೊಗಯಿಸುವ ಕುವಳಯದಳನಯನೆಯ ನೋಟಂ ತನ್ನ ಮನದೊಳಳ್ಳಾಟಮಂ ಪಡೆಯೆ

ನನೆಯಂಬಂಬನೆ ಕರ್ಚಿ ಪಾಱಿದಪುದೋ ಶೃಂಗಾರವಾರಾಶಿ ಭೋಂ
ಕನೆ ಬೆಳ್ಳಂಗೆಡೆದತ್ತೊ ಕಾಮನೆಱಿ ಮೆಯ್ವೆರ್ಚಿತ್ತೊ ಪೇೞೀಕೆಗೆಂ
ಬಿನೆಗಂ ಸೋಲಮನುಂಟುಮಾಡೆ ಹರಿಗಂ ಕರ್ಣಾಂತವಿಶ್ರಾಂತಲೋ
ಚನನಾ ಲೋಚನಗೋಚರಂಬರೆಗಮೊಲ್ದಾ ಕನ್ನೆಯಂ ನೋಡಿದಂ ೨೯

ಅಂತು ಸುರತಮಕರಧ್ವಜನ ಕಡೆಗಣ್ಣ ನೋಟಂ ಕಾಮನ ಕಿಸುಗಣ್ಚಿದ ನೋಟದಂತೊರ್ಮೊದಲೆ ತನ್ನ ಮನದೊಳಳ್ಳಾಟಮಂ ಪಡೆಯೆ

ಸೋಲದೊಳೆಯ್ದೆ ಪೀರ್ದ ತೆಱದಿಂದೆಮೆಯಿಕ್ಕದೆ ನೋಟ್ಪ ಕಣ್ಗೆ ಕಣ್
ಪೀಲಿವೊಲಾಗೆ ಬಂದು ಪೆಱತೊಂದು ಮನಂಬುಗೆ ಪತ್ತಿ ಚಿತ್ತದೊಳ್
ಕೀಲಿಸೆ ಕಾವನಂಬವಱ ಬಿಣ್ಪಿನೊಳೊಯ್ಯನೆ ಜೋಲ್ದವೋಲೆ ತಾಂ
ಬೂಲಕರಂಕವಾಹಿನಿಯ ಮೇಲೆ ನೆಱಲ್ದಿರೆ ಬಾಲೆಲೀಲೆಯಂ ೩೦

ಆಗಳಾ ನಾರಾಯಣನುಮುದಾತ್ತನಾರಾಯಣನುಮಾನೆಯಿಂದಮಿೞಿದು ನವಕಿಸಲಯವಂದನಮಾಳಾಳಂಕೃತಮಪ್ಪ ಸಪ್ತತಾಳೋತ್ತುಂಗರಮ್ಯಹರ್ಮ್ಯದೆರಡನೆಯ ಮೊಗಸಾಲೆಯೊಳಿಟ್ಟ ಪೞಿಯ ಸುಖಾಸನಂಗಳೊಳಂ ಕಿಱಿದು ಪೊೞ್ತು ಕುಳ್ಳಿರ್ದು ಮಜ್ಜನಭೋಜನತಾಂಬೂಲಾನುಲೇಪನವಿಭೂಷಣಸುರಭಿಕುಸುಮದಾಮಾದಿಗಳಿಂ ಸಂತಸಂಬಡಿಸಿ ಅಪಗತಪರಿಶ್ರಮನಂ ಮಾಡಿ

ಆಯತಿಯಿಂದಂ ನರ ನಾ
ರಾಯಣರೆನೆ ನೆಗಟ್ದಿವರಿಗ ನಾವಿರ್ವರುಮಿಂ
ತೀ ಯುಗದೊಳೀಗಳಾಂ ನಾ
ರಾಯಣನೆಂ ನೀನುದಾತ್ತನಾರಾಯಣನೈ ೩೧

ಅದಱಿಂ ನಿನಗಮೆನಗಮೇತಱೊಳಂ ವಿಕಲ್ಪಮುಂ ವಿಚ್ಛಿನ್ನಮುಮಿಲ್ಲೆಂದು ನುಡಿಯುತ್ತಿರ್ಪನ್ನೆಗಂ ಕಮಳವನಂಗಳಾದಿತ್ಯಂಗೆ ಕೆಯ್ಯಂ ಮುಗಿವಂತೆ ಮುಗಿಯೆ ಸುರತಮಕರಧ್ವಜನ ಸುಭದ್ರೆಯ ವಿರಹಪರಿತಾಪಮಂ ಪಚ್ಚುಕೊಂಡಸುಂಗೊಂಡಗಲೆ ಸಂಧ್ಯಾನುರಾಗಮವರ ಮನದನುರಾಗಮನನುಕರಿಸುವಂತುಟಾಗೆ ಬೞಿಯುಂ ಕ್ರಮಕ್ರಮದೊಳ್ ತನ್ನ ರಾಗಮಂ ರಾಗಿಗಳ್ಗೆಲ್ಲಂ ಪಚ್ಚುಕೊಟ್ಟಂತೆ ಕೆಂಪು ಪತ್ತುವಿಟ್ಟಾಗಳ್

ಆವರಿಸಿತ್ತೊ ನಭೋಂತ
ರ್ಭೂವಿವರಮನಮರ್ದಿನೆಸಕಮೆನೆ ಬಿರಯಿಗಳೋ
ವೋವಿದು ಮದನನ ಸೋದನ
ದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ ೩೨

ಅತ್ತ ಸುಭದ್ರೆಯುಮೊಡಲುರಿ
ಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋ
ಡುತ್ತಿರೆ ಸುಸಾಳಭಂಜಿಕೆ
ಗೆತ್ತುದು ಕೆಳದಿಯರ ತಂಡಮಾಕೆಯ ರೂಪಂ ೩೩

ಅಂತು ಕಾಮದೇವನೆಂಬ ಮಂತ್ರವಾದಿಯ ದಿವ್ಯಮಂತ್ರದಿಂ ಸ್ತೋಭಂಗೊಂಡ ದಿವ್ಯವಿಗ್ರಹದಂತೆ ಕಾಮಗ್ರಹಗೃಹೀತೆಯಾಗಿರೆ ಆಕೆಯ ದಾದಿಯ ಮಗಳ್ ಚೂತಲತಿಕೆಯೆಂಬಳ್ ರಾಜಹಂಸಿ ಮಾನಸಸರೋವರಮನಲ್ಲದೆ ಪೆಱತನೇಕೆ ಬಯಸುಗುಂ ಕಳಹಂಸಗಮನೆಯಾ ಸುರತಮಕರಧ್ವಜನನಲ್ಲದೆ ಪೆಱನನೇಕೆ ಬಯಸುಗುಮೆಂದು ಮನದೊಳೆ ಮಂತಣಮಿರ್ದು, ನೀನಿದರ್ಕೇನುಮಂ ಬಗೆಯಲ್ವೇಡ ನಿನ್ನ ಬಗೆಯಂ ಬಗೆದಂತೆ ತೀರ್ಚುವೆನೆಂದನೇಕ ಪ್ರಕಾರವಚನರಚನೆಗಳಿಂದಂ ಸುಭದ್ರೆಯ ಮನಮನಾಱೆ ನುಡಿಯುತ್ತಿರ್ಪಿನಂ, ಇತ್ತಂ ವಿಕ್ರಮಾರ್ಜುನನುಂ ಓಲಗಂ ಪರೆದಿಂ ಬೞಿಯಂ ತನ್ನ ಪವಡಿಸುವ ಮಾಡಕ್ಕೊಡನೊಡನೋಲಗಿಸುತ್ತುಂ ಬಂದ ಪಂಡಿತರ್ಕಳುಮನುಚಿತಪ್ರತಿಪತ್ತಿಗಳಿಂ ವಿಸರ್ಜಿಸಿ ಸುಭದ್ರೆಯ ರೂಪು ಕಣ್ಣಪಾಪೆಯಂತೆ ಕಣ್ಣೊಳೆ ತೊಟಲೆ ಕಣ್ಮುಚ್ಚದೆ ನಲ್ಲಳಂ ನೆನೆದು ಮಱಿದೊಱಗುವೈರಾವತದಂತೆ ಪವಡಿಸಿ ಕಿಱಿದಾನುಂ ಬೇಗದೊಳ್ ಸುಭದ್ರೆಯಂ ಕನಸಿನೊಳ್ ಕಂಡು ನೆನಸೆಂದು ಬಗೆದು ಮಂಗಳಪಾಠಕರವಂಗಳೊಳ್ ಭೋಂಕನೆಚ್ಚತ್ತಂ; ಅನ್ನೆಗಂ ಇತ್ತ ಸುಭದ್ರೆ

ಶ್ರೀ ವೀರಶ್ರೀ ಕೀರ್ತಿ
ಶ್ರೀ ವಾಕ್‌ಶ್ರೀಯೆಂಬ ಪೆಂಡಿರಗಲದೆ ತನ್ನೊಳ್
ಭಾವಿಸಿದ ಪೆಂಡಿರೆನಿಸಿದ
ಸೌವಾಗ್ಯದ ಹರಿಗನೆಮ್ಮನೇನೊಲ್ದಪನೋ ೩೪

ಎಂಬ ಬಗೆಯೊಳ್ ಬನಮಂ ಪೊಕ್ಕಲ್ಲಿಯುಂ ಮೆಯ್ಯನಾಱಿಸಲಾಱದೆ ಆ ಬಾಲೆ ಕಾಯ್ದ ಪುಡಿಯೊಳಗೆ ಬಿಸುಟ್ಟೆಳವಾಳೆಯಂತೆ ಸುರತಮಕರಧ್ವಜನೊಳಾದ ಬೇಟದೊಳ್ ಮಮ್ಮಲ ಮಱುಗುತ್ತಿರ್ದಳ್; ಅತ್ತ ಮನೋಜನೋಜನುಂ ಮದನಪರಿತಾಪಕ್ಕಾಱದುಮ್ಮಳಿಸಿ ಮಧುಮಥನನ ಕಣ್ಣಂ ಬಂಚಿಸಿ ನಂದನೋಪಕಂಠಂಗಳೊಳನಂಗಶರವಶನಾಗಿ ತೊಳಲ್ದು ನೋಡುತ್ತುಂ ಆಕೆಯಿರ್ದ ಮಾಧವೀಮಂಟಪಕ್ಕೆ ಮೊಗಸಿ ಪಲವುಂ ತೆಱದ ಬೇಟದ ಪಡೆಮಾತುಗಳಂ ಕೇಳ್ದಲ್ಲಿಯಾರಾನುಮೆಮ್ಮಂದಿಗರಿರ್ದರಕ್ಕುಮೆನುತ್ತುಂ ಬರ್ಪ ಗಂದೇಭವಿದ್ಯಾಧರನಂ ಸುಭದ್ರೆ ಭೋಂಕನೆ ಕಂಡು

ಪಡಿದೆಱೆವಂದದಿಂದಮೆರ್ದೆಯುಂ ತೆಱೆದತ್ತು ಪೊದಳ್ದ ಸಂಕೆಯಿಂ
ನಡುಕಮುಮಾಗಳುಬ್ಬದಿಗಮಾದುದು ಸಾಧ್ವಸದಿಂ ಬೆಮರ್ ಬೆಮ
ರ್ವಡೆಗಳಿನುಣ್ಮಿ ಪೊಣ್ಮಿದುದು ಕಣ್ ನಡೆ ನೋಡದೆ ತಪ್ಪು ನೋಡಿ ನಾ
ಣೆಡೆಯೊಳಮಾದುದಾ ಸತಿಗೆ ನೋಡಲೊಡಂ ಪಡೆಮೆಚ್ಚೆಗಂಡನಂ ೩೫

ಆಗಳ್ ಸರತಮಕರಧ್ವಜನುಮನಂಗಾಮೃತಪಯೋಧಿಯೊಳ್ ಮೂಡಿ ಮುೞುಂಕಾಡಿದರಂತೆ ಕಿಱಿದು ಬೇಗಮನಿರ್ದು ತನ್ನಿಂ ತಾನೆ ಚೇತರಿಸಿ ಸುಭದ್ರೆಯ ರೂಪನಾಪಾದಮಸ್ತಕಂಬರಮೆಯ್ದೆ ನೋಡಿ ತನ್ನೊಳಾದ ಬೇಟದೊಳ್ ಬಡವಟ್ಟುಮೇೞ್ಗೆವಾಡಿವದ ಸಸಿಯಂತೆ ಸೊಗಯಿಸುವಸಿಯಳಂ ಕಂಡು ಕಾಮನಚ್ಚೊತ್ತಿದ ಬೇಟದಚ್ಚುಗಳ ಮಾೞ್ಕೆಯೊಳಿರ್ದ ಸುಭದ್ರೆಯಂ ಕಂಡು ಇದೀಕೆಯುಮೆನಗೆರಡಱೆಯದ ನಲ್ಲಮನಂದೋಱುವುದು ಸಲ್ಗೆದಱುವುದುಮಾವುದು ದೋಸಮೆಂದಾಕೆ ಕುಳ್ಳಿರ್ದ ತಳಿರ ಸೆಜ್ಜೆಯೊಡನೆ ಕುಳ್ಳಿರ್ಪುದುಂ ನಾಣ್ಚಿ ಪೋಗಲೆಂದೆೞ್ದ ಕನ್ನೆಯಂ ಚೂತಲತಿಕೆಯೆಂಬ ಕೆಳದಿ ಜಡಿದು ಕುಳ್ಳಿರಿಸಿ ಗಂಧೇಭವಿದ್ಯಾಧರನೊಳಿಂತೆಂದಳ್:

ಮದನನ ಕಾಯ್ಪು ಮಾಣ್ಗೆ ಸರಸೀರುಹಜನ್ಮನ ಮೆಚ್ಚು ತೀರ್ಗೆ ಕೂ
ಟ್ಟುಗ್ದಿ ಮನದಿಂದಮಿಂದು ಪೊಱಮಾಱುಗೆ ಚಂದ್ರಕರಂಗಳಿಂದು ತ
ಣ್ಣಿದುವೆರ್ದೆಗಕ್ಕೆ ಕೆಂದಳಿರ ಸೆಜ್ಜೆಯ ಜಿಂಜಿಣಿ ಪೋಕೆ ನಿನ್ನ ಕೂ
ಟದೊಳಿನಿದಕ್ಕೆ ಮತ್ಸಖಿಗೆ ಬೇಱೆ ಪಳಾಳದೊಳೇಂ ಗುಣಾರ್ಣವಾ ೩೬

ಎಂಬನ್ನೆಗಂ ಸುರತಮಕರಧ್ವಜನ ಸುಭದ್ರೆಯ ವಿರಹಪರಿತಾಪದೊಳಾದ ಪಡೆಮಾತಂ ಕರ್ಣಪರಂಪರೆಯಿಂ ಕೇಳ್ದು ಸಂತಸಂಬಟ್ಟು ಚಕ್ರಿ ಚಕ್ರಿಕಾವರ್ತಿಯಪ್ಪುದಱೆಂದಾ

ವನಾಂತರಾಳಕ್ಕೊರ್ವನೆ ಬಂದು ಮಾಧವೀಮಂಟಪಮಂ ಪೊಕ್ಕು ಅವರಿರ್ವರ ನಾಣುಮಂ ನಡುಕಮಂ ಪತ್ತುವಿಟ್ಟು

ಕುಡಲಿರ್ಪಂ ಬಲದೇವನೆನ್ನನುಜೆಯಂ ದುರ್ಯೋಧನಂಗಾನೊಡಂ
ಬಡೆನೀವಟ್ಟೆಯದಾಗಳುಂ ನಿನಗೆ ದಲ್ ಪದ್ಮಾಸನಂ ತಾನೆ ನೇ
ರ್ಪಡಿಸಲ್ ಕೂಡಿದನಿರ್ಪುದಲ್ತು ನಯಮಿನ್ನೀ ಪೊೞ್ತೆ ಪೊೞ್ತಾಗೆ ನೀ
ನೊಡಗೊಂಡುಯ್ವುದು ಕನ್ನೆಯಂ ತಡೆಯದಿರ್ ವಿದ್ವಿಷ್ಟವಿದ್ರಾವಣಾ ೩೭

ಎಂದು ಶೈಬ್ಯ ಬಳಾಹಕ ಮೇಘವರ್ಣ ಸುಗ್ರೀವಂಗಳೆಂಬ ನಾಲ್ಕು ಕುದುರೆಗಳೊಳ್ ಪೂಡಿದ ದಿವ್ಯರಥಮನೆಸಗಲ್ ದಾರುಕನೆಂಬ ಸಾರಥಿಯನೀವುದುಮಾ ರಥಮಂ ಮನೋರಥಂಬೆರಸೇಱೆ ಚೂತಲತಿಕೆವೆರಸು ಸುಭದ್ರೆಯನೇಱಿಲ್ವೇೞ್ದುದಾತ್ತ ನಾರಾಯಣಂ ನಾರಾಯಣನ ಪರಸಿದ ಪರಕೆಗಳಂ ಕೆಯ್ಕೊಂಡು ಬೀೞ್ಕೊಂಡಿಂದ್ರಪ್ರಸ್ಥದ ಬಟ್ಟೆಯೊಳ್ ಸುಖಪ್ರಯಾಣಂಗೆಯ್ವನ್; ಇತ್ತ ಬಲದೇವಂ ಸುಭದ್ರೆಯುಂ ಸಾಮಂತಚೂಡಾ ಮಣಿಯುಯ್ದನೆಂಬುದಂ ಕೇಳ್ದು ಯಾದವಬಲಜಳನಿಧಿವೆರಸು ಪ್ರಳಯಕಾಲಜಳನಿಧಿಯಂತೆ ತೆರಳಲ್ ಬಗೆದನಂ ವಾಸುದೇವಂ ಬಲದೇವನ ಮನದೊಳಾದ ಮುಳಿಸೆಂಬ ಕಿಚ್ಚಂ ತನ್ನ ಮೃದುಮಧುರವಚನರಚನಾಜಲಂಗಳಂ ತಳಿದು ನದಿಪಿದನ್; ಅತ್ತ ವಿಕ್ರಮಾರ್ಜುನನುಂ ಇಂದ್ರಪ್ರಸ್ಥಮನೆಯ್ದೆವಂದು ಕೊಂತಿಯು ಧರ್ಮಪುತ್ರ ಭೀಮಸೇನಾದಿಗಳ ಪಾದಪದ್ಮಂಗಳಂ ತನ್ನ ಕರಕಮಲಗಳಿಂದರ್ಚಿಸಿ ತದೀಯಾಶೀರ್ವಚನಂಗಳನಾಂತು ತನಗೆ ಪೊಡಮಟ್ಟ ನಕುಲ ಸಹದೇವರಂ ಪರಸಿ ರಾಜಮಂದಿರಮಂ ಪೊಕ್ಕು ಧರ್ಮಪುತ್ರನನಗಲ್ದ ಪನ್ನೆರಡು ಮಾಸದೊಳಾದ ದಿಗ್ವಿಜಯಪ್ರಪಂಚಮುಮಂ ಸುಭದ್ರಾಹರಣಮುಮಂ ಪುರುಷೋತ್ತಮನ ಪರಮಮಿತ್ರತ್ವಮುಮನಱಿದು ಸಂತಸಂಬಟ್ಟು ತಮ್ಮನಿಬರುಮೇಕಸ್ಥರಾಗಿ ನಾಮಿನ್ನಿಳಾಧರನುಂ ಯಾದವವಂಶಜರ್ವೆರಸು ಬರ್ಪಂತಟ್ಟಿ ಮನೋಹರಮಪ್ಪಂತು ವಿವಾಹಮಂಗಳಮನ್ ಮಾಳ್ಪಮೆಂದು ದೂತರಂ ಅಟ್ಟೆ, ಅವರ್ ಪೋಗಿ ಬಲದೇವನುಮಂ ವಾಸುದೇವನುಮಂ ಕಂಡು ತಮ್ಮ ಬಂದ ಕಜ್ಜಮನೊಡಂಬಡಿಸಿ ಮುಂದಿಟ್ಟೊಡಗೊಡು ಬರೆ ಪಾಂಡವರಯ್ವರುಮಿದಿರ್ವೋಗಿ ಯಥೋಚಿತ ಪ್ರತಿಪತ್ತಿಗಳಿಂ ಕಂಡು ಪೊೞಲ್ಗೊಡಗೊಂಡು ಬಂದು ಶುಭದಿನನಕ್ಷತ್ರಯೋಗಕರಣಂಗಳಂ ನಿಟ್ಟಿಸಿ, ಮಂಗಳತೂರ್ಯಮೆಸೆಯುತ್ತಿರ್ಪಿನೆಗಂ ಚಕ್ರಿ ರಾಗಿಸಿ ಗುಣಾರ್ಣವಮಹೀಪಾಲಂಗಮಾ ಕನ್ನೆಯಂ ಕೆಯ್ನೀರೆಱೆದಂ; ಬೞಿಯಂ ಧರ್ಮಪುತ್ರಂ ಬಲದೇವನೆನಿತಾನುಮುಚಿತ ಪ್ರತಿಪತ್ತಿಗಳಿಂ ಸಂತಸಂಬಡಿಸಿ ದ್ವಾರಾವತಿಗೆ ಕೞಿಪಿದಂ; ಅಂತು ಕಾಮದೇವನುಂ ರತಿಯುಂ ವಸಿಷ್ಠನುಮರುಂಧತಿಯುಮೀಶ್ವರನುಂ ಪಾರ್ವತಿಯುಮೆನಿಸಿ ಸಮರೂಪ ಸಮಸತ್ವ ಸಮರತಂಗಳೊಳೆ ಸಮಾನುರಾಗಮಂ ಪಡೆಯೆ ಸುಖಮಿರ್ಪನ್ನೆಗಂ ಸುಭದ್ರೆಗೆ ಗರ್ಭಚಿಹ್ನಂಗಳ್ ತೋಱೆ

ಒಟ್ಟಜೆಯಿಂ ಭಾರತದೊಳ್
ಕಟ್ಟಾಳ್ಗಳನಿಱಿದು ತವಿಸಲಾ ಜೆಟ್ಟಿಗರಂ

ಪುಟ್ಟಿದನೆಂಬವೊಲದಟಂ
ಪುಟ್ಟಿದನಭಿಮನ್ಯು ಕಲಿತನಂ ಪುಟ್ಟುವವೋಲ್ ೩೮

ಅಂತಾತಂ ಪುಟ್ಟುವುದುಂ ತಮಗೆ ಸಂತಸಂ ಪುಟ್ಟಿ ಸುಖಮಿರ್ಪನ್ನೆಗಂ

ಮುಗುಳ್ವದನಾದ ಸಂಪಗೆ ಮಡಲ್ತುದಿರ್ಮುತ್ತೆ ಪರಲ್ದರಲ್ದ ಮ
ಲ್ಲಿಗೆ ನನೆಗರ್ಚಿ ಕಾಕಳಿಯೊಳಾಣತಿಗೆಯ್ವ ಮದಾಳಿ ಪೋ ಪುಗಲ್
ಪುಗಲೆನುತಿರ್ಪ ಪಕ್ಕಿ ಮನಮಂ ಕವರುತ್ತಿರೆ ಯೋಗಿಗಂ ವಿಯೋ
ಗಿಗಮರಿದಾಯ್ತು ಪೊಕ್ಕ ಪುಗಿಲಿಂತು ವಸಂತಚಕ್ರವರ್ತಿಯಾ ೩೯

ಅಂತು ಭುವನಕ್ಕೆಲ್ಲಮೊಸಗೆವರ್ಪಂತೆ ಬಂದ ವಸಂತದೊಳೊಂದು ದಿವಸಮನ್ನ ವಾಸದೋಲಗೊಳ್ ಉದಾತ್ತನಾರಾಯಣನುಂ ನಾರಾಯಣನುಮಿರ್ದಲ್ಲಿಗೊರ್ವಂ ಬೇಂಟೆಯ ವಾರ್ತೆಯಂ ಬಿನ್ನಪಂಗೆಯ್ಯೆ, ನಾರಾಯಣನುಂ ತಾನುಮಂತಃಪುರ ಪರಿವಾರಂಬೆರಸು ಬೇಂಟೆಗೆ ಪೊಱಮಟ್ಟು, ತಾಮಿರ್ವರುಂ ಅನವರತಶರಾಸಾರ ಶೂನ್ಯೀಕೃತಕಾನನಮಾಗೆಚ್ಚು ಮೃಗವ್ಯಾಪಾರದಿಂ ಬೞಲ್ದು ಮನದಂತೆ ಪರಿವ ಜಾತ್ಯಶ್ವಂಗಳನೇಱಿ ಬರೆವರೆ ಯಮುನಾನದೀನಿಕಟತಟವರ್ತಿಗಳಾಗಿ ನಾಡೆಯುಂ ಪೊಟ್ಟು ಜಲಕೇಳೀಲೀಲೆಯೊಳ್ ಮೆಱೆದು ನಿಮಿರ್ದ ಕುರುಳ್ಗಳಂ ಕೆಂಪೇಱಿದ ಕಣ್ಗಳುಂ ಬೆಳ್ಪೇಱಿದ ಬಾಯ್ದೆಱೆಗಳುಂ ಪಳಂಚಿದ ಬಣ್ಣಂಗಳುಮೆಸೆಯೆ ಪೊಱಮಟ್ಟು, ಮಡಿಯ ಭಂಡಾರದ ಮಾಣಿಕ್ಯಭಂಡಾರದ ನಿಯೋಗಿಗಳ್ ತಂದು ಮುಂದಿಟ್ಟ ಪೊನ್ನ ಪಡಲಿಗೆಗಳೊಳೊಟ್ಟಿದ ದೇವಾಂಗವಸ್ತ್ರಂಗಳುಮನನೇಕವಿಧದ ತುಡುಗೆಗಳುಮನೆನಿತಾನುಂ ತೆಱದ ಸುಗಧದ್ರವ್ಯಂಗಳುಮಂ ಇತ್ತು ತಾಮಿರ್ವರುಂ ಉಟ್ಟು ತೊಟ್ಟುಂ ಪೂಸಿಯುಂ ನೆಱೆಯೆ ಕೆಯ್ಗೆಯ್ದು ದಿವ್ಯಾಹಾರಂಗಳನಾರೋಗಿಸಿ ಕೆಯ್ಗಟ್ಟಿಗೊಂಡು ತಂಬುಲಂಗೊಂಡಿಂ ಬೞಿಯುಮಚ್ಯುತಂ ವಿಕ್ರಮಾರ್ಜುನನ ಕೆಯ್ಯಂ ಪಿಡಿದುಕೊಂಡು ವನಾಂತರಾಳಮಂ ತೊೞಲ್ದು ತೋಱುತ್ತಿರ್ಪನೆಗಂ ತೊಟ್ಟನೆ ಕಟ್ಟಿದಿರೊಳ್

ಉರಿವುರಿಯನೆ ತಲೆನವಿರನು
ಕರಿಸಿರೆ ಸಂತಪ್ತ ಕನಕವರ್ಣಮುಮುರಿಯೊಂ
ದುರುಳಿವೊಲಿರೆ ಜಠರಾನಳ
ನುರಿವಿನಮಂತೊರ್ವನುರಿಯ ಬಣ್ಣದ ಪಾರ್ವಂ ೪೦

ಸಾಮಂತಚೂಡಾಮಣಿಯನೆಯ್ದೆವಂದು ನಾಲ್ಕು ವೇದಂಗಳೊಳ್ ಋಚಂಗಳಂ ಪೇೞ್ದು ಸಿತದೂರ್ವಾಂಕುರವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾೞ್ತೆಯಪ್ಪುದಂ ಬೇಡಿಕೊಳ್ಳಿಮೆನೆ

ಮಣಿಕನಕಾದಿ ವಸ್ತುಗಳನೊಂದುಮನೊಲ್ಲೆನವೇವುವಾದವಿ
ನ್ನುಣಿಸೆನಗಟ್ಟಿ ಮೆಯ್ ಪಸಿದು ಜೊಮ್ಮನೆ ಪೋದಪುದೆನ್ನ ವೇಟ್ಟುದಂ
ತಣಿಯಲೀವೊಡೀವುದೆನೆ ಪಾರ್ಥನದೇವಿರಿದಿತ್ತೆನಾವುದು
ಣ್ಬುಣಿಸೆನೆ ಪೇಟ್ವೆನೆಂಬ ಪದದೊಳ್ ನರಕಾಂತಕನಗ್ನಿದೇವನಂ ೪೧

ಕಾಣಲೊಡಮಜೆದು ಶರಣಾಗತಜಳಧಿಯನೆಯ್ದೆವಂದನೀ ಬಕವೇಷಿ ನಿನ್ನನೇನಂ ಬೇಡಿದಂ ನೀನೀತಂಗೇನಿತ್ತೆಯೆನೆ

ಪಸಿದುಣವೇಡಿದಂ ಬಡವನಾನುಣಲಿತ್ತೆನದಲ್ಲದಿಲ್ಲಿ ದಲ್
ಕುಸುರಿಯ ಮಾತುಗಾಣೆನೆನೆ ಕೇಳ್ದು ಮುರಾಂತಕನೇಂ ತಗುಳ್ದೆಯಿ
ನ್ನುಸಿರದಿರೀವ ಮಾತನಿವನುಣ್ಬುದು ಖಾಂಡವಮೀತನಗ್ನಿ ಮುಂ
ಪುಸಿದಿವನಿಂತೆ ಪಾಯಿಸಿದನಿಂದ್ರನೊಳಾದಿನರೇಂದ್ರರೆಲ್ಲರುಂ ೪೨

ಈತನಜಮುಖವ್ಯಾಪ್ರಂ ಶ್ವೇತಕೃಷ್ಣಕಾರಕನೀತನ ಮಾತು ಮಾತಲ್ಲವೆಂದೊಡಾ ಮಾತು ತನ್ನಂ ಮೂದಲಿಸಿದಂತಾಗೆ ವಿದ್ವಿಷ್ಟವಿದ್ರಾವಣನಿಂತೆಂದಂ

ದನುಜಾರೀ ದಿವಿಜೇಂದ್ರ ಶಾಶ್ವತಗುಣಾ ನಿನ್ನಳ್ಕದೇಂ ಬೇಡಿದಾ
ನನಲಂ ತೀರ್ಥಸಮೀಪಮಂಬುನಿವಹವ್ಯಾಳೋಳಕಾಳಿಂದಿಯಾ
ವನಮುಂ ಕೇಳ್ದುವು ಭೂತಮಯ್ದುಮಜೆಗುಂ ಕೊಟ್ಟಿರ್ದುದಾನಂತಜೆ
ದೆನಗಿಂ ಮಾಣ್ಬುದು ಸೂಟಿ ಖಾಂಡವಮನಾಂ ತಳ್ವಿಲ್ಲದಿಂದೂಡುವೆಂ ೪೩

ಒತ್ತಿ ತಱುಂಬಿ ನಿಂದ ರಿಪುಭೂಭುಜಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ಬಂದು ತನ್ನ ಮಱುವೊಕ್ಕೊಡೆ ಕಾಯದೆ ಚಾಗದೊಳ್ಪಿನ
ಚ್ಚೊತ್ತದೆ ಮಾಣ್ದು ಬಾಟ್ವ ಪುಱುವಾನಸನೆಂಬನಂಜಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುಱುವಲ್ಲದೆ ಮಾನಸನೇ ಮುರಾಂತಕಾ ೪೪

ಎಂದು ಮಱುವಾತಿಂಗೆಡೆಯಿಲ್ಲದಂತಿರೆ ನುಡಿದ ಪಡೆಮೆಚ್ಚೆ ಗಂಡನ ಗಂಡವಾತುಮಂ ನನ್ನಿವಾತುಮಂ ಮುರಾಂತಕಂ ಮೆಚ್ಚಿ ಜೀವಮುಳ್ಳಿನಮಿಜೆದರ್ಥಮು ಳ್ಳಿನೆಗಮಿತ್ತು ನೆಗಟ್ತಿಯನಾಂಪುದೆಂಬ ಪೆಂಪಂ ಸಮಕಟ್ಟು ಕಣ್ಗೆ ದೊರೆಯಾರರಿಕೇಸರಿ ನಿನ್ನವೋಲ್ ಪೆಱಂ ಎಂದು ತನಗೆ ಕೊಟ್ಟ ಕೋಡಿಂಗೊಡಂಬಟ್ಟ ದಿತಿಜಕುಲದಾವಾನಲನು ಮರಾತಿಕಾಲಾನಲನುಮನನಲನಿಷ್ಟಾರ್ಥ ಸಿದ್ಧಿಯಕ್ಕುಮೆಂದು ಪರಸಿ ಮನಃಪವನವೇಗದಿಂ ಪಾಲ್ಗಡಲನೆಯ್ದಿ ತನ್ನ ಬಯಿತ್ತಟ್ಟ ದಿವ್ಯಸಂಭವಂಗಳಪ್ಪ ಶ್ವೇತಾಶ್ವಂಗಳೊಳ್ ಪೂಡಿದ ದಿವ್ಯರಥಮುಮಂ ದಧೀಚಿಗಂಡಸ್ಥಮಪ್ಪ ಗಾಂಡೀವಮೆಂಬ ಬಿಲ್ಲುಮಂ ದಿವ್ಯಶರಂಗಳೊಳ್ ತೆಕ್ಕನೆ ತೀವಿದ ತವದೊಣೆಗಳುಮಂ ತಂದೆನ್ನ ಪ್ರತಿಜ್ಞೆಯಂ ತೀರ್ಚುವೊಡಮಿಂದ್ರನಂ

ಗೆಲ್ವೊಡಮಿವನಮೋಘಂ ಕೆಯ್ಕೊಳಲ್ವೇಟ್ಕುಮೆಂದೊಡೆ ಅತಿರಥಮಥನನಗ್ನಿದೇವಂಗೆ ಪೊಡೆವಟ್ಟು ಕೆಯ್ಕೊಂಡು ಬೃಹಂದಳನೆಂಬ ಸಾರಥಿವೆರಸು ರಥಮನೇಱಲೊಡಂ ಯಮುನಾನದಿಯ ತೆಂಕಣದೆಸೆಯೊಳ್ ನೂಱು ಯೋಜನದಗಲದೊಳಮನಿತೆ ನೀಳದೊಳಂ ನೆಱೆದು

ಕಕುಭಾಶೋಕಕದಂಬಲುಂಗಲವಲೀಭೂಜಾರ್ಜುನಾನೋಕಹ
ಪ್ರಕರಂ ಪುಷ್ಪಿತಹೇಮಪಂಕಜರಜಸ್ಸಂಸಕ್ತಭೃಂಗಾಂಗನಾ
ನಿಕರಂ ಸಾರಸಹಂಸಕೋಕಿಳಕುಳಧ್ವಾನೋತ್ಕರಂ ಚೆಲ್ವನಾ
ಯ್ತು ಕರಂ ಸಕ್ತನಿಳಿಂಪದಂಪತಿಗಳಿಂದಾನಂದನಂ ನಂದನಂ ೪೫

ಎನೆ ಸೊಗಯಿಸುವ ಖಾಂಡವವನಮಂ ವನರುಹನಾಭಂ ವಿಕ್ರಮಾರ್ಜುನಂಗೆ ತೊಟಲ್ದು ತೋಱೆ

ಅಲರಂ ನೋಯಿಸದೊಯ್ಯನೊಯ್ಯನಳಿಗಳ್ ಬಂಡುಣ್ಬುವಾಟಂದು ಬಂ
ದಲೆಯಲ್ಕಣ್ಮದು ಗಾಳಿ ಸೂರ್ಯಕಿರಣಾನೀಕಕ್ಕಮೆಂದಪ್ಪೊಡಂ
ಸಲವಿಲ್ಲುದ್ಧತಸಿದ್ಧಖೇಚರರೆ ತಾಮಾಳ್ವೇಲಿಯಾಗಿಂತು ನಿ
ಚ್ಚಲುಮೋರಂತಿರೆ ಕಾವರೀ ದೊರೆತು ಕಾಪೀ ನಂದನಕ್ಕಿಂದ್ರನಾ ೪೬

ಪರಮಾಣುವನಿತು ಬನದೊಳ್
ಚರಾಚರಂಂ ಪೋಗೆ ತಣಿಯನನಲನದರ್ಕಾಂ
ನೆರಮಪ್ಪೆನುಗ್ರಕಿನ್ನರ
ಸುರದನುಜೋರಗರ ಕದನಮೇಂ ನಿನಗರಿದೇ ೪೭

ಎಂಬುದುಮಂತೆ ಗೆಯ್ವೆನೆನ್ನ ಸಾಹಸಮಂ ನೋಡಿಮೆಂದು ವಿಕ್ರಾಂತತುಂಗನುತ್ತುಂಗ ಭುಜಪರಿಘದೆರಡು ದೆಸೆಯೊಳಂ ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು ದಿವ್ಯಾಸ್ತ್ರಂಗಳಂ ಪಿಡಿದು ಕೆಯ್ತೀವಿಕೊಂಡಗ್ನಿದೇವನಂ ನೋಡಿ

ಓಡುಗೆ ನಿಮ್ಮ ಮೆಯ್ಯ ಪಸಿವಾಂತ ವಿರೋಧಿಗಳೆನ್ನ ಕೆಯ್ಯೊಳ
ಟ್ಟಾಡುಗೆ ಕೊಳ್ಳಿಮುಣ್ಣಿಮೆನೆ ಕೇಳ್ದನಲಂ ಪರಸುತ್ತುಮಾ ಲಯ
ಕ್ರೀಡೆಯೊಳೀ ಚರಾಚರಮುಂ ಸುಡುವಂದಿನ ಮೆಯ್ಗುಮಗ್ಗಳಂ
ಮಾಡಿ ತಗುಳ್ದು ನೀಳ್ದು ಬಳೆದರ್ವಿಸೆ ಪರ್ವಿದನಾ ವನಾಂತಮಂ ೪೮

ಆಗಳಾ ಬನಮನಿಂದ್ರನ ಬೆಸದೊಳ್ ಕಾವ ಕಿನ್ನರ ಕಿಂಪುರುಷ ಗರುಡ ಗಂಧರ್ವ ಸಿದ್ಧ ವಿದ್ಯಾಧರಬಲಮನಿತುಮೊಂದಾಗಿ ವಿಕ್ರಮಾಜುನನೊಳ್ ತಾಗೆ

ಕೊಂಡಪುದುರಿ ಬನಮನದಂ
ಕಂಡೆಂತಿರಲಕ್ಕುಮೆಂದು ತಾಗಿದ ನೆಗಱ್ದೊ
ಳ್ಗಂಡರ ಗಂಡೋಡುವಿನಂ
ಕೊಂಡುವು ಗಾಂಡೀವಮುಕ್ತಬಾಣಗಣಂಗಳ್ ೪೯

ಅಂತು ಕಾದೆ ವಿದ್ವಿಷ್ಟವಿದ್ರಾವಣನ ಮೊನೆಯಂಬಿನಂಬೇಱಿಂಗಳ್ಕಿ ಹತವಿಹತಕೋಳಾಹಳರಾಗಿ ಗರ್ವಮನುಱಿದೊಂದೊರ್ವರಂ ಮಿಗೆಯೋಡೆಯುಂ

ಉರಿ ಕೊಳೆ ದೆಸೆಗಾಣದೆ ದೆಸೆ
ವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂ
ಬೆರಸೊಳಱಿ ನೆಗೆದುದಾ ವನ
ಕರಿಶರಭಕಿಶೋರಕಂಠಗರ್ಜನೆ ಬನದೊಳ್ ೫೦

ಸಂಗತಧೂಮಾವಳಿಯನಿ
ಭಂಗಳೆ ಗೆತ್ತೊಳಱಿ ಪಾಯ್ದು ಪೊಗೆ ಪುಗೆ ಕಣ್ಣಂ
ಸಿಂಗಂಗಳಳುರೆ ಗರ್ಜಿಸಿ
ಲಂಗಿಸಿ ಪುಡಪುಡನೆ ಪುಟ್ಗಿ ಸತ್ತುವು ಪಲವುಂ ೫೧

ಅಂತು ಖಾಂಡವಮನೆಲ್ಲಮನನಲಂ ಪ್ರಳಯಕಾಲಾನಳನಂತಳುರ್ದು ಕೊಳೆ ಬಳಸಿ ಬಂದು ಕಾವ ನಾರಾಯಣನ ಸುದರ್ಶನಮೆಂಬ ಚಕ್ರದ ಕೋಳುಮಂ ವಿಕ್ರಮಾರ್ಜುನನ ದಿವ್ಯಾಸ್ತ್ರಂಗಳ ಕೋಳುಮನಗ್ನಿದೇವನ ಶಿಖಾಕಳಾಪದ ಕೋಳುಮನೆಂತಾನುಂ ಬಂಚಿಸಿ ಬಲೆ ಪಱಿದ ಕೋಕನಂತೊರ್ವ ವನಪಾಲಕಂ ಪೋಗಿ ದೇವೇಂದ್ರನಂ ಕಂಡು

ಎರಡು ರಥಮೊಳವು ನೋಟ
ಕ್ಕೆರಡಱೊಳವನೊಂದು ರಥಮೆ ತೋಟಿಗೆ ಪಲವಾ
ಗಿರೆ ಪರಿದು ಕಣ್ಣೊಳಿನ್ನುಂ
ತಿರಿದಪುದುರಿದಪುದು ನಮ್ಮ ಬನಮೆನಿತನಿತಂ ೫೨

ಎಂಬುದುಂ ಪೌಳೋಮೀಪತಿ ತನ್ನ ದಿವ್ಯಜ್ಞಾನದೊಳ್ ನೋಡಿ ಚಕ್ರಿಯುಂ ವಿಕ್ರಮಾರ್ಜುನನುಮಪ್ಪುದನಱಿದು ಗಜಱಿ ಗರ್ಜಿಸಿ ಪ್ರಳಯಕಾಳಾಂಬುದದಂತೆ ಮೊೞಗುಮಂ ಸಿಡಿಲ ಬಳಗಮನೊಳಕೊಂಡ ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸಂವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳವು ವಿಂಧ್ಯಾಚಳಕೂಟಕೋಟಿಗಳೆ ಕಿೞ್ತೆೞ್ದುಬರ್ಪಂತೆ ಬಂದು ದೆಸೆಗಳೆಲ್ಲಮಂ ಮುಸುಱಿ ಕೞ್ತಲಿಸಿ ಕವಿದು

ಕವಿದುವು ಸಪ್ತಸಾಗರಜಲಂಗಳೆ ಲೋಕಮನೀಗಳೆಂಬಿನಂ
ಕವಿದು ಮುಗಿಲ್ಗಳಲ್ಲಿ ಕಱೆಯುತ್ತಿರೆ ಪಾವಕನುರ್ಕುಗೆಟ್ಟದೆಂ
ತುವೊ ತೊದಳಾಯ್ತು ದಾನಮೆನೆ ಮಾರುತಬಾಣದೆ ಮೇಘಮಾಲಿಕಾ
ನಿವಹಮನೆಚ್ಚು ಕೂಡೆ ಶರಪಂಜರಮಂ ಪಡೆದಂ ಗುಣಾರ್ಣವಂ ೫೩

ಅಂತು ಪುಂಖಾನುಪುಂಖಮಾಗೆ ಪಾಯ್ವ ಶರಸಂಧಾನದೊಳೆಡೆವಱೆಯದಂತೆರಡುಂ ಕೆಯ್ಯೊಳ್ ತೋಡುಂ ಬೀಡುಂ ಕಾಣಲಾಗದಂತಿಸೆ ತುಱುಗಿ ಕವಿವಂಬಿನ ಮಱೆಯೆ ಮಱೆಯಂ ಮಾಣಿಸೆ ದಿವ್ಯಾಸ್ತ್ರಂಗಳಿಂ ನೂಱುಯೋಜನದಳವಿಯ ಖಾಂಡವವನೆಲ್ಲಮಂ ತಟ್ಟಿ ಮೆಡಱೆ ಮಶಕಮಾತ್ರಮಪ್ಪೊಡಂ ಮಿಸುಕಲ್ ಛಿದ್ರಮಿಲ್ಲದಂತಾಗೆ

ವನಖಗ ವನಮೃಗ ವನತರು
ವನಚರ ವನವನಜನಿವಹಮುಳ್ಳನಿತುಂ ಸೀ
ರನಿತುಮಣಮುಟಿದುದಿಲ್ಲೆಂ
ಬಿನಮುಂಡಂ ದಹನನಳುರ್ದು ಖಾಂಡವವನಮಂ ೫೪

ಆಗಳ್ ವನಾಂತರಾಳದೊಳಿರ್ಪ ತಕ್ಷಕನ ಮಗನಪ್ಪಶ್ವಸೇನನೆಂಬ ಪನ್ನಗಂ ತನ್ನ ತಾಯುಂ ತನ್ನ ಬಾಲಮಂ ಕರ್ಚಲ್ವೇಟ್ದು ದಹನಾರ್ಚಿಗಳಿಂ ಬರ್ದುಂಕಿ ನೆಗೆದು ಪಾಱುವಾಗಳದನೆರಟ್ಬಿಂಡಮಪ್ಪಿನಮಾಖಂಡಳತನಯನಿಸುವುದುಂ ತನ್ನ ಬಾಲಂಬೆರಸುರಿಯೊಳ್ ಬಿಟ್ದು ಮಿಡುಮಿಡುಮಿಡುಕುತಿರ್ದ ಜನನಿಯಂ ಕಂಡು ಪಾವುಗಳುಳ್ಳ ಪಗೆಯಂ ಮಱೆಯವೆಂಬುದಂ ನನ್ನಿಮಾಡಿ

ಪಗೆ ಸಾಱುವುದುಂ ಕೊಲ್ಲೆಂ
ಪಗೆ ಸಾಱೆದ ನಿನ್ನನಾರ ಮಱೆಯಂ ಪೊಕ್ಕುಂ
ಪಗೆಯಂ ನೆಱಪನೆ ನೆಱಪುವ
ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೊಣೆಯಂ ೫೫

ಅಂತಶ್ವಸೇನನರ್ಧಾವಲಿಕಮೆಂಬಮೋಘಾಸ್ತ್ರಮಾಗಿ ಕರ್ಣನ ದೊಣೆಯೊಳಿರ್ದನ್; ಇತ್ತ ದೇವನಿಕಾಯಂಬೆರಸು ಯುದ್ಧಸನ್ನದ್ಧನಾಗಿ ಪರಸೈನ್ಯಭೈರವನೊಳಿಱೆವೆನೆಂಬ ಪಟುವಗೆಯೊಳ್ ಭೈರವಂಬಾಯ್ವಂತೆ ಬಂದು ನಿಂದ ಪುರಂದರನಲ್ಲಿಗೆ ಸರಸಿಜಸಂಭವಂ ಬಂದು

ಬನಮನೆ ಕಾಯಲೆಂದಿಱೆವೆಯಪ್ಪೊಡೆ ಮುನ್ನಮೆ ಪೋದುದಂದು ಪಾ
ರ್ಥನೊಳೆನಗೇವಮೆಂಬ ಬಗೆಯುಳ್ಳೊಡೆ ನಿನ್ನಯ ಪುತ್ರನಚ್ಯುತಂ
ಗಿನಿಸೆರ್ದೆನೋವೆಯಪ್ಪೊಡದು ಕೂಡದು ಮೂವರೊಳೊರ್ವನೆಮ್ಮ ಮಾ
ತಿನಿತೆ ಗುಣಾರ್ಣವಂಗೆ ಕುಡು ಗೆಲ್ಲಮನಿಂತಿದೆ ಕಜ್ಜದುಜ್ಜುಗಂ ೫೬

ಅಂತು ಕಮಲಾಸನನಾಸೆದೋಱೆ ನುಡಿದುಳ್ಳುದನೆ ನುಡಿದೊಡಂತೆ ಗೆಯ್ವೆನೆಂದು ನರಂಗೆ ಕಿರೀಟಿನಾಮಮಂ ಸರಸದಿನಾಗಳುಚ್ಚರಿಸಿ ಸಾಹಸಮಂ ಸುರಾಧಿಪಂ ಪೊಗೞ್ದಿಂ; ಆಗಳ್ ಸ್ವಾಹಾಂಗನಾನಾಥಂ ಸಂಪೂರ್ಣಮನೋರಥನಾಗಿ ಖಟ್ವಾಂಗನೆಂಬರಸನ ಯಜ್ಞದೊಳಾತನ ತಂದ ಘೃತಸಮುದ್ರಮಂ ಕುಡಿದೊಡಾದ ರೋಗಮಿಂದು ಪೋದುದೆಂದು ನೀರೋಗನಾಗಿ ಮಹಾನುರಾಗಂಬೆರಸು ಪರಸಿ ಪೋದನಾಗಳಿರ್ವರು ಮಿಂದ್ರಪ್ರಸ್ಥಕ್ಕೆಯ್ದೆವಂದರ್;

ಒಂದು ದಿವಸಮೋಲಗಂಗೊಟ್ಟಿರೆ ಧರ್ಮಪುತ್ರನಲ್ಲಿಗೆ ಮಯಂ ಪಂಚರತ್ನಹಿರಣ್ಮಯಂ ಚತುರಶ್ರಂ ಮೂಱುಂ ಯೋಜನದಳವಿಯ ಸಭಾಮಂಟಪಮನೊಂದು ಲಕ್ಕ ರಕ್ಕಸವಡೆಯಿಂ ಪೊತ್ತು ತರಿಸಿ, ಎನ್ನ ಪ್ರಾಣಮೆಂಬುದು ವಿಕ್ರಮಾರ್ಜುನನ ದಯೆಗೆಯ್ದ ಪ್ರಾಣಮೆನ್ನ ಕೊಟ್ಟುದರ್ಕೆ ಮಾರ್ಕೊಳ್ಳದೆ ಕೊಳ್ಳಿಮೆಂದೋಲಗಂಗುಡಲ್ತಕ್ಕುದೆಂದು ಧರ್ಮಪುತ್ರಂಗೆ ಕೊಟ್ಟು ಪರಾಕ್ರಮಧವಳಂಗೆ ದೇವದತ್ತಮೆಂಬ ಶಂಖಮನಿತ್ತು ಮಾಂಧಾತನೆಂಬ ವಿದ್ಯಾಧರನಿಂ ಬಂದ ಗದೆಯಂ ಭೀಮಸೇನಂಗಿತ್ತು ಅವರ ದಾನಸನ್ಮಾನಾದಿಗಳಿಂ ಮಯಂ ರಾಗರಸಮಯನಾಗಿ ಪೋದನ್;

ಮುಂದೊಂದು ದಿವಸಂ ಧರ್ಮರಾಜಂ ತನ್ನ ನಾಲ್ವರ್ ತಮ್ಮಂದಿರೊಡನೆ ದೇವೇಂದ್ರ ಲೀಲೆಯಿನೋಲಗಂಗೊಟ್ಟಿರೆಯಿರೆ, ನೀರದಮಾರ್ಗದಿನಂದು ನಾರದಂ ಸಾರೆವರೆ ಅಬ್ಜಜಪುತ್ರನಂ ಮುಂದಿಟ್ಟೊಡಗೊಂಡು ಬಂದು ಮಣಿಕನಕರಚನವಿಚಿತ್ರವೇತ್ರಾಸನ ದೊಳಿರಿಸಿ ಅರ್ಘ್ಯಮೆತ್ತಿ ಮುನೀಶ್ವರನ ಪಾದಪದ್ಮಮಂ ಕರ್ಚಿ ತತ್ಪವಿತ್ರೋದಕಂಗಳಿಂ ಅಯ್ವರುಂ ಪವಿತ್ರೀಕೃತಮಸ್ತಕರಾಗಿರ್ದು, ಯುಧಿಷ್ಠಿರಂ ಮಹಾಮುನಿಯ ಮೊಗಮಂ ನೋಡಿ ಇಂದ್ರಲೋಕದ ಪಡೆಮಾತಾವುದೆನೆ ಪಾಂಡುರಾಜಂ ಇಂದ್ರನೋಲಗದೊಳ್ ಷೋಡಶರಾಜರಿಂ ಕಡೆಯೊಳಿರ್ಪುದಂ ತಿಳಿಪಿ ಆತಂ ರಾಜಸೂಯಮೆಂಬ ಯಾಗಮಂ ಬೇಳ್ವಂತೆ ಮಾಡಿ ಬನ್ನಿಮೆಂದು ಬೆಸಸಿ ಕಳಿಪಿರ್ಪುದಂ ಅಱೆಪಿ, ರಾಜಸೂಯಮಂ ಮಾಡಲ್ವೇೞ್ದು ಗಗನತಳಕ್ಕೊಗೆದು ಮುಗಿಲ ಮರೆಯೊಳಡಂಗಿದಂ;

ರಾಜಸೂಯಮಂ ಬೇಳಲೆ ಬಗೆವೊಡೆ ಹರಿಯೊಡನಾಳೋಚಿಪಮೆಂದು ಬಱಿಯನಟ್ಟಿ ಬರಿಸಿ ಪೇೞ್ದೊಡೆಲ್ಲಮಂ ನೆಱೆಯೆ ಕೇಳ್ದು

ಗಾಳುಗೊರವಂ ತಗುಳ್ಚಿ ಪ
ಳಾಳಮನೇನೊಂದನಪ್ಪೊಡಂ ಗಳಪಿದೊಡಾ
ಬೇಳುನುಡಿಗೇಳ್ದು ಕೆಮ್ಮನೆ
ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ ೫೭

ರಾಜಸೂಯದ ಮಾತಂ ಕೇಳಿದಲ್ಲಿಯೆ ಮಱೆವುದು ನುಡಿಯಲ್ವೇಡೆನೆ ಮಱುಮಾತುಗುಡಲಱಿಯದೆ ಧರ್ಮಪುತ್ರಂ ಮೌನಂಗೊಂಡುಸಿರದಿರೆ ಪರಾಕ್ರಮಧವಳಂ

ನಾರದಂ ಪೇಸುಗುಂ ಸುರಪನುಂ ನಗುಗುಂ ಕಡುವಿನ್ನನಕ್ಕುಮಯ್ಯನ ಮುಖಮನೆಂತು ಪೇಕ್ಷಿಸುವುದೆಂದೊಡೆ, ಭೀಮಸೇನಂ 'ಬೆಸಸುವುದು ರಾಜಸೂಯಂ ಬೇಳಲ್' ಎಂದು ಗಜಜೆ ಗರ್ಜಿಸುವುದುಂ, ಅಮಳರುಮೀ ಬೇಳ್ವೆಯ ಮಾತಂ ತೆಮಳೆ ನುಡಿದೊಡೆ, ರಾಜಸೂಯಮಂ ಬೇಳ್ದಲ್ಲದಿರಪ್ಪೊಡೆ ಜರಾಸಂಧಂಗಳ್ಕಿ ಮಧುರಾಪುರಮಂ ಬಿಸುಟ್ಟು ಪೋಗಿ ತಾಂ ದ್ವಾರಾವತಿಯಂ ಸಮುದ್ರಮೆ ನೀರ್ಗಾದಿಗೆಯಾಗಿ ಮಾಡಿದೆನಿನ್ನುಂ ಯಾದವರ ಸೆಜೆಗಳೆಲ್ಲಾತನನಲ್ಲಿರ್ದರಾತನುಂ ಭೀಮನ ಕೆಯ್ಯೊಳಲ್ಲದೆ ಸಾಯನೆಂದು ನಾರಾಯಣಂ ಧರ್ಮಪುತ್ರನನೊಡಂಬಡಿಸಿ ಭೀಮಾರ್ಜುನಸಮೇತನಾಗಿ ಮಧುರಾಪುರಮನೆಯ್ದಿ ಬೃಹದ್ಬಳತನೂಜನಪ್ಪ ಜರಾಸಂಧನಲ್ಲಿಗೆ ಧರ್ಮಯುದ್ಧಮಂ ಬೇಡಿಯಟ್ಟಿದೊಡೆ

> ಕಲಿ ಮಾರ್ಕೊಳ್ಳದೆ ಕೊಟ್ಟು ಮೆಯ್ಯೊಳೆ ಸಿಡಿಲ್ ತಾಪಂತೆವೋಲ್ ತಾಗೆ ಮೆ
> ಯ್ಗಲಿ ಭೀಮಂ ಪೆಜಪಿಂಗದಾಂತು ಪಲವುಂ ಬಂಧಂಗಳಿಂ ತಳ್ತು ತ
> ತ್ಕುಲಶೈಲಂ ಕುಲಶೈಲದೊಳ್ ಕಲುಷದಿಂ ಪೋರ್ವಂತೆವೋಲ್ ಪೋರ್ದು ನೆ
> ಯ್ದಿಲ ಕಾವಂ ತುದಿಗೆಯ್ದೆ ಸೀಳ್ವ ತೆಜದಿಂ ಸೀಳ್ದಂ ಜರಾಸಂಧನಂ ೫೮

ಅಂತು ಜರಾಸಂಧನಂ ಕೊಂದುವಾತನ ಮಗಂ ಕ್ಷೇಮಧೂರ್ತಿಯಂ ರಾಜ್ಯದೊಳ್ ನಿಜೆಸಿ ಜರಾಸಂಧನೇಱುವ ರಥಮಂ ತರಿಸಿ ಸಮಸ್ತವಸ್ತುಗಳಂ ಮುಂದಿಟ್ಟು ನಾರಾಯಣಂ ಭೀಮಾರ್ಜುನರ್ವೆರಸು ಸುಖಪ್ರಯಾಣಂಗಳಿಂದ್ರಪ್ರಸ್ಥಕ್ಕೆ ವಂದು, ನಾಲ್ಕುಂ ದೆಸಗೆ ಅನುಜರಂ ಬೆಸಸಲ್ವೇೞ್ದೊಡಂತೆ ಗೆಯ್ಯೆ, ಅವರೆಲ್ಲಂ ಅರಿನೃಪರಂ ಭೇದಿಸಿ ಕಸವರಮಂ ಕೆಯ್ಗೆಮಾಡಿ, ಮೇರುಪರ್ವತದ ತೆಂಕಣ ತಪ್ಪಲಿನ ಜಂಬೂವೃಕ್ಷದ ಕೆಲದೊಳ್ ಪರಿವ ಜಂಬೂನದಮೆಂಬ ತೊಱೆಯೊಳ್ ಪುಟ್ಟಿದ ಜಾಂಬೂನದಮೆಂಬ ಪೊನ್ನ ಪಾಸಱೆಗಳಂ ಕೊಂಡು, ಕುಬೇರನಿಂ ಕಪ್ಪಂಗೊಂಡು, ಅಂತು ನಾಲ್ಕುಂ ಸಮುದ್ರಂಗಳ ನೀರುಟೆಯೆ ರತುನಂಗಳುಮಂ ದಿಶಾಗಜಂಗಳುಟೆಯೆ ಗಜಗಳುಮಂ ಆದಿತ್ಯನ ಕುದುರೆಗಳುಟೆಯೆ ಕುದುರೆಗಳುಮಂ ದೇವೇಂದ್ರನ ಸುರಭಿಯುಮೀಶ್ವರನ ನಂದಿಯುಮುಟೆಯೆ ಗೋವ್ರಜಂಗಳುಮನಿಂದ್ರಪ್ರಸ್ಥಕ್ಕೆ ತೆರಳ್ಚಿ, ಬಟೆಯಂ ನಾರಾಯಣನ ಮತದೊಳ್ ಹಸ್ತಿನಪುರದಲ್ಲಿರ್ದ ಧೃತರಾಷ್ಟ್ರ ಗಾಂಗೇಯಾದಿಗಳ್ಗೆ ಬಟೆಯಟ್ಟಿ, ವ್ಯಾಸರ್ ಮೊದಲಾಗೆ ಬ್ರಹ್ಮರ್ಷಿಯರೆಲ್ಲರಂ ಬರಿಸಿ, ಶುಭದಿನ ವಾರ ನಕ್ಷತ್ರ ಯೋಗ ಕರಣದೊಳ್ ಯಾಗಮಂಟಪಮಂ ಸಮೆದು ಷೋಡಶರ್ತ್ವಿಜರ್ಕಳಂ ಬೇಳಲ್ವೇೞ್ದು ಧರ್ಮಪುತ್ರಂ ಸಪತ್ನಿ ಯಜಮಾನಾಗಿರ್ದಾಗಳ್

> ಚಾರುತರ ಯಜ್ಞವಿದ್ಯಾ
> ಪಾರಗರ ರವಂಗಳಿಂ ಸ್ವಧಾಕಾರ ವಷ
> ಟ್ಕಾರ ಸ್ವಾಹಾಕಾರೋಂ
> ಕಾರಧ್ವನಿ ನೆಗೞೆ ನೆಗೞ್ದುದಾಹುತಿಧೂಮಂ ೫೯

ಗಣನಾತೀತಾಜ್ಯಾಹುತಿ
ಗಣದಿಂದಂ ತಣಿಯೆ ಜಾತವೇದನುಮಾ ಬ್ರಾ
ಹ್ಮಣಸಮಿತಿ ಬೇಳೆ ದೇವರ್
ತಣಿಯುಂಡರ್ ನೆರೆದು ದಿವ್ಯಹವ್ಯಾಮೃತಮಂ ೬೦

ಅಂತು ಪುರೋಡಾಶಾಪವಿತ್ರೋದರನುಂ ಸೋಮಪಾನಕಷಾಯಿತೋದರನುಮಾಗಿ ಮೂವತ್ತೆರಡು ದಿವಸದೊಳ್ ಕ್ರತುವಂ ನಿರ್ವರ್ತಿಸಿ ಮಹಾದಾನಂಗೆಯ್ದು ದಕ್ಷಿಣಾಕಾಲದೊಳ್ ಕಃ ಕೇನಾರ್ಥಿ ಕೋ ದರಿದ್ರಃ ಎನುತುಂ ನಿಜಧವಳಚ್ಛತ್ರಚಾಮರಸಿಂಹಾಸನಾದಿ ರಾಜಚಿಹ್ನಂಗಳುಟಿಯೆ ಸರ್ವಸ್ವಮೆಲ್ಲಮಂ ಧರ್ಮಜಂ ಸೂಱೆಗೊಟ್ಟು, ಕುಲವೃದ್ಧರುಮಂ ದುರ್ಯೋಧನಾದಿಗಳಂ ದಾನಸನ್ಮಾನಾದಿಗಳೊಳಂ ಸಂತಸಂಬಡಿಸಿ ಪೇೞಿಮೀ ಸಭೆಯೊಳಗ್ರಪೂಜೆಗಾರ್ ತಕ್ಕರೆನೆ ಗಾಂಗೇಯನಿಂತೆಂದಂ

ಬಲಿಯ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ
ಚಲದಿಂ ಸೀಳ್ದವನಾವನಬ್ಧಿಮಥನಪ್ರಾರಂಭದೊಳ್ ಮಂದರಾ
ಚಲಮಂ ತಂದನಾವನಾತನೆ ವಲಂ ತಕ್ಕಂ ಪೆಱರ್ ತಕ್ಕರೇ ೬೧

ಎಂದು ತನ್ನ ಮನದೊಳಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು ಯಮನಂದನನಾನಂದಂಬೆರಸಂತೆ ಗೆಯ್ವೆನೆಂದು ಪುರುಷೋತ್ತಮಂ ಗರ್ಘ್ಯಮೆತ್ತಿದಾಗಳ್

ಮುಳಿದು ಶಿಶುಪಾಲನಾ ಸಭೆ
ಯೊಳಗೆ ಮಹಾಪ್ರಳಯಜಳಧಿನಾದದಿನಿರದು
ಚ್ಚಳಿಸಿ ನುಡಿದಂ ತೆ ಕಳೆ ಕಳೆ
ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ ೬೨

ಕುರುವೃದ್ಧಂ ಕುಲವೃದ್ಧಂ
ಸರಿತ್ಸುತಂ ತಕ್ಕನೆಂದು ನಂಬಿದ ಸಭೆಯೊಳ್
ದೊರೆಗಿಡಿಸಿ ನುಡಿದೊಡೇನೊಲ
ವರಮೆನ್ನದೆ ನೀನುಮದನೆ ಕೊಂಡೆಸಗುವುದೇ ೬೩

ಕುಡವೇಟ್ಟನ ಕುಡುವನ ಕುಡೆ
ಪಡೆವನ ಪೆಂಪೇಂ ನೆಗೞ್ತೆವಡೆಗುಮೊ ಪೇಟ್ವಂ
ಕುಡವೇೞ್ಗೆಮ ಕುಡುವಣ್ಣಂ
ಕುಡುಗೆಮ ಕುಡೆ ಕೊಳ್ವ ಕಲಿಯನಱಿಯಲ್ಕಕ್ಕುಂ ೬೪

ದೊರೆಯಕ್ಕುಮೆ ನಿನಗೆ ಯುಧಿ
ಷ್ಠಿರನರ್ಘ್ಯಮೆತ್ತೆ ಶಂಖದೊಳ್ ಪಾಲೆಱೆದಂ
ತಿರೆ ಮಲಿನಮಿಲ್ಲದೊಳ್ಗುಲ
ದರಸುಗಳಿರೆ ನೀನುಮಗ್ರಪೂಜೆಯನಾಂಪಾ ೬೫

ಮನೆ ನಿನಗೆ ನಂದಗೋಪಾ
ಲನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ ಪ
ಚ್ಚನೆ ಪಸಿಯ ಗೋವನ್ನೈ ಕರ
ಮನಯದೆ ನಿನ್ನಳವಿಗಳವನಱಿಯದೆ ನೆಗೞ್ದೈ ೬೬

ಆನಿರ್ದ ಸಭೆಯೊಳರ್ಘ್ಯಮ
ನಾನಲ್ಕಾಟಿಸಿದ ನಿನ್ನ ಬಿಸುನೆತ್ತರನಿಂ
ತೀ ನೆರವಿ ನೋಡೆ ಕುಡಿಯದೊ
ಡೇನೋ ಶಿಶುಪಾಲನೆಂಬ ಪೆಸರೆಸದಪುದೇ ೬೭

ಅಱಿಯದಿದಂ ಮಾಡಿದೆನೆ
ನ್ನಱಿಯಮಿಕೆಗೆ ಸೈರಿಸೆಂದು ನೀನ್ ಸಭೆಯೊಳ್ ಕಾ
ಲ್ಗೆಱಗೆಱಗು ಕೊಲ್ಲೆನೆಂದೆರ್ದೆ
ತೆಱೆವಿನೆಗಂ ಹರಿಯ ನೆಱನನಸುರಂ ನುಡಿದಂ ೬೮

ಆಗಳ್ ಸಭಾಸದರೆಲ್ಲರುಮೆವೆಮಿಡುಕದೆ ಪಂದೆಯಂ ಪಾವರ್ಡದವೊಲುಸಿರದಂತಿರೆ ನಾರಾಯಣಂ ಶಿಶುಪಾಲನನಿಂತೆಂದಂ:

ನಿನ್ನಯ ತಾಯ್ ಸಾತ್ವತಿಯುಂ
ನಿನ್ನಂ ತಂದೆನ್ನ ತೊಡೆಯ ಮೇಲಿಟಿಪುವುದುಂ
ನಿನ್ನ ಲಲಾಟದ ಕಣ್ಣದು
ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೆಯ್ಯೊಳ್ ೬೯

ನೆಱೆದುದನಱಿದೀ ಕಿಱಿಯವ
ನಱಿಯದೆ ಕೆಡೆನುಡಿದನಪ್ಪೊಡಂ ನೂಱುವನಂ
ನೆಱೆ ಸಲಿಸುವುದೆಂದುದನಾಂ
ಮಱೆವೆನೆ ಬಯ್ ಬಯ್ಯೆ ಸಲಿಸುವೆಂ ನೂಱುವರಂ ೭೦

ಎನೆಯೆನೆ ಬಾಯ್ಗೆ ಬಂದನಿ
ತನಿತುಮನಮರಾರಿ ಬಯ್ಯೆ ಸೈರಿಸಿ ನೂಱೆಂ

ಬನಿತುವರಂ ಮನ್ನಿಸಿ ನಸು
ಕಿನಿಸದೆ ಮಿಗೆ ದಿತಿಜಕುಳದವದಹನಂ ೭೧

ಮುಳಿದು ತನಗರ್ಘ್ಯಮೆತ್ತಿದ
ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್
ಕಳಕಳಿಸಿ ನಗುತುಮಿರ್ದುದು
ತಳಿಗೆಯ ಮೇಲಸುರನದಟಿದೇನಚ್ಚರಿಯೋ ೭೨

ಅನಿತೊಂದು ಮಹಾಪ್ರಘಟ್ಟದೊಳಗ್ರಪೂಜೆಯಂ ನಾರಾಯಣಂಗೆ ಕೊಟ್ಟ ವಭೃಥಸ್ನಾನದೊಳ್ ಪಿರಿದುವೊಸಗೆಯಂ ಮಾಡಿ ಯಾಗವಿಧಿಯಂ ನಿರ್ವರ್ತಿಸಿ ನೆರೆದ ರಾಜಕುಲಮೆಲ್ಲಮಂ ಪೂಜಿಸಿ ವಿಸರ್ಜಿಸಿದಾಗಳ್, ಮುರಾಂತಕಂ ನಿನ್ನಯ ಕೀರ್ತಿಮುಖಂ ಕೀರ್ತಿಮುಖಂಬೊಲೇನೆಸೆದುದೋ ದಿಗ್ದಂತಿದಂತಂಗಳೊಳ್ ಎನೆ ನಿನ್ನನುಗ್ರಹದೊಳದೇವಿರಿದೆಂದು ವಸ್ತುವಾಹನಂಗಳನಿತ್ತು ದ್ವಾರಾವತಿಗೆ ಕಟಿಪಿದಂ;

ಪೃಥಾನಂದನರ ಬಲ್ಲಾಳ್ತನದ ಚಾಗದ ಭೋಗದ ಮೈಮೆಗೆ ಸುಯೋಧನಂ ಬೆಱಗಾಗಿ ವ್ಯಸನವಿರಹಿತರಾಗಿರ್ದ ಪಾಂಡವರಂ ಆವ ಮಾಟ್ಕಿಯೊಳ್ ಕೆಯ್ಗೆ ಮಾಡುವಂ ಪೇಟಿಂ ಎಂದು ದುಷ್ಟಚತುಷ್ಟಯದೊಳ್ ಮಂತಣಮಿರೆ ಶಕುನಿಯಿಂತೆಂದಂ: ಯಮನಂದನನಲ್ತೆ ನೆತ್ತದೊಳ್ ಬಸನಿಗನಾತನಂ ಬರಿಸಿ ನೆತ್ತಮನಾಡಿಸಿ ಗೆಲ್ದುಕೊಳ್ವಮೀ ವಸುಮತಿಯಂ ಎಂದು ನಾಟಿವಾಸಗೆಗಳಂ ಮುನ್ನಮೆ ಸಮಕಟ್ಟಿ, ತಾಮುಮಾಮುಂ ಕೆಲವು ದೇವಸಂ ಗೋಷ್ಠಿಯೊಳಿರ್ಪಂ ಬನ್ನಿಮೆಂದು ಬಟಿಯಟ್ಟಿ, ದುರ್ಯೋಧನಂ ತನ್ನ ವಿಭವಮುಮಂ ಪಾಂಡವರ್ಗೆ ಮೆಱೆದು ಕಂದುಕಕ್ರೀಡಾದಿ ನಾನಾವಿನೋದಂಗಳಿಂ ಕೆಲವು ದಿವಸಮನಿರ್ದೊಂದು ದಿವಸಂ ಪಿಂಗಾಕ್ಷನಕ್ಷಕ್ರೀಡೆಯಂ ಸಮಕಟ್ಟಿ ಬನ್ನಿಮೆಂದು ಕರೆದೊಡೆ ಜೂದಿಂಗಂ ಧುರಭರಕಾಖೇಟಕ್ಕೆ ಭೂಭುಜಂಗಾಗದೆಂಬ ಪುರಾತನ ಗುರುವಚನಮಂ ತನಗೆ ನಿಟ್ಟೆಪಟ್ಟುದಱಿಂದಂ ಧರ್ಮಪುತ್ರಂ ನಾಟಿವಾಸಗೆಯನಿಕ್ಕವೇೞ್ದುದುಂ, ದುರ್ಯೋಧನಂ ಮುನ್ನಂ ನೆತ್ತಮನಱಿಯದಂತವರ ದಾಯಮನಾಡಿ ಪತ್ತೆಂಟು ಪಲಗೆಯಂ ಮೆಚ್ಚಿಡಿಸಲೆಂದು ಸೋಲ್ತು ಧರ್ಮಪುತ್ರಂ ಕುಲಧನಸಂಕುಲಂಗಳನೆ ತಂದಿಟ್ಟವನಾಡಿ ಸೋಲ್ತಂ; ಅದಂ ಕಂಡು ಭೀಮಸೇನಂ ಲೋಭಿಯುಂ ಪಂದೆಯುಮಾಗಿ ಬಾೞ್ವಂಗಲ್ಲದೆ ಸೂಳೆಯ ಕಣ್ ಪಾಸಗೆಯ ಕಣ್ಣುಮೇನುಱುಗುಗುಮೇ ಎಂದು ಕಯ್ವಸರಂ ಬೆರಸು ನುಡಿಯೆ ತನ್ನ ಮನಮನೊನಲಿಸೆಯುಮೆರ್ದೆಯಂ ಕನಲಿಸೆಯುಮೇನುಮೆನ್ನದೆ ಮುಂತಣ ಕಜ್ಜಮನೆ ಬಗೆದುಸಿರದಿರ್ದ ದುರ್ಯೋಧನನಲ್ಲಿಗೆ ಗಾಂಗೇಯನುಂ ವಿದುರನುಂ ಬಂದು, ನುಡಿಗಿನ್ನೆಡೆಯಿಲ್ಲ ಪೋಗಿಮಾತ್ಮಾಲಯಕೆಂದೊಡೇನುಮೆನಲಣ್ಮದೆ ಬಾರಿಸಲಣ್ಮದೆ ಇರ್ವರುಂ ಧೃತರಾಷ್ಟ್ರನಲ್ಲಿಗೆ ಪೋಗಿ

ಪುರುಡಿಸಿಕೊಂಡೀಗಳ್ ನೀ
ನರಸಿನ ಗರ್ವದೊಳೆ ಬೀಗಿ ಬೆಸೆಯದೆ ಮಗನಂ

ಕರೆದೊಪ್ಪಿಸವೇಟಿ ಯುಧಿ
ಷ್ಠಿರಂಗೆ ಮುನ್ ಗೆಲ್ದ ವಸ್ತುವಾಹನಚಯಮಂ ೭೩

ಎಂದೆನಿತಾನುಂ ತೆಱದೊಳೆ ಸಾಱೆಯುಂ ಕೀಱೆಯುಂ ನುಡಿದೊಡೆ, ಧೃತರಾಷ್ಟ್ರಂ ಮಗನಲ್ಲಿಗೆ ವಂದು ಜಡಿದು ಜೂದಿನ ಕೇಳಿಯನಿತಱೊಳ್ ಮಾಣಿಸಿದಂ; ಮಾಣಿಸಿದೊಡೆ ಮಾಣದೆ ನೆಲನೊತ್ತೆಯೆಂದೊಡೆ ಗೆಲ್ದಿಂ ಬೞಿಯುಂ ಮುದುಗಣ್ಗಳ್ ಮಗುೞಿ ಕುಡಿಸುವರೆಂಬ ಬಗೆಯೊಳಂ ವಿಕಮಾರ್ಜುನನುಂ ಭೀಮನುಂ ಯಮಳರುಮೆೞ್ದು ಕೊಳ್ವರೆಂಬ ಸಂಕೆಯೊಳಂ, ಅಂತಲ್ತು ನಿನ್ನ ನನ್ನಿಯೊಳಂ ವರ್ಷಾವಧಿಯೊಳಲ್ಲದೆ ನೆಲನನೊತ್ತೆವಿಡಿಯೆಂ ಎಂದೊಡೆ ಧರ್ಮಪುತ್ರಂ ಪನ್ನೆರಡು ವರುಷಂಬರಂ ನಾಡಂ ಪುಗದರಣ್ಯದೊಳಿರ್ಪಂತುಮಜ್ಞಾತವಾಸಮೆಂದೊಂದು ವರುಷದೊಳಾರಾನುಮಱಿದ ರಪ್ಪೊಡೆ ಮತ್ತಂ ದ್ವಾದಶಾಬ್ದಂಬರಂ ನಾಡ ದೆಸೆಯುಂ ನೋಡದಂತಾಗೆಯೊಂದೆ ಪಲಗೆಯೊಳೆ ಗೆಲ್ಲಸೋಲಮಪ್ಪಂತು ನನ್ನಿನುಡಿದು ನೆಲನನೊತ್ತೆಯಿಟ್ಟಾಡಿ

ಆ ಪಲಗೆಯುಮಂ ಸೋಲ್ತು ಮ
ಹೀಪತಿ ಚಲದಿಂ ಬೞಿಕ್ಕೆ ಸೋಲ್ತಂ ಗಡಮಾ
ದ್ರೌಪದಿಯುಮನೇನಾಗದೊ
ಪಾಪದ ಫಳಮೆಯ್ದೆವಂದ ದೆವಸದೊಳಾರ್ಗಂ ೭೪

ಅಂತು ದುರ್ಯೋಧನನಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು ಗೆಲ್ದ ಕಸವರಮೆಲ್ಲಂ ಬಂದುದು ಪಾಂಚಾಳರಾಜತನೂಜೆಯೊರ್ವಳ್ ಬಂದಳಿಲ್ಲಾಕೆಯುಂ ತನ್ನಿಮೆಂದು ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನಱಿದು ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು ಕರ್ಣನ ಲೆಂಕಂ ಪ್ರತಿಕಾಮಿಯೆಂಬನುಮಂ ತನ್ನ ತಮ್ಮಂ ದುಶ್ಶಾಸನನುಮಂ ಪೇೞ್ದೊಡವಂದಿರಾಗಳೆ ಬೀಡಿಂಗೆ ವಂದು ರಜಸ್ವಲೆಯಾಗಿರ್ದಂ ಮುಟ್ಟಲಾಗದೆನೆಯುಮೊತ್ತಂಬದಿಂದೊಳಗಂ ಪೊಕ್ಕು ಪಾಂಚಾಳಿಯಂ ಕಣ್ಗಿಡೆ ಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು

ಮನದೊಳ್ ನೊಂದಮರಾಪಗಾಸುತ ಕೃಪ ದ್ರೋಣಾದಿಗಳ್ ಬೇಡವೇ
ಡೆನೆಯುಂ ಮಾಣದೆ ತೊೞ್ತಿ ತೊೞ್ತುವೆಸನಂಕೆಯ್ ಪೋಗು ನೀನೆಂದು ಬ
ಯ್ದೆನಿತುಂ ತೆಱದಿಂದುಟ್ಟುದುವರಂ ಕೆಯ್ದಂದು ದುಶ್ಶಾಸನಂ
ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದನಾ ಧಮ್ಮಿಲ್ಲಮಂ ಕೃಷ್ಣೆಯಾ ೭೫

ಅಂತು ಕೃಷ್ಣೆಯ ಕೃಷ್ಣಕಬರೀಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗನಂ ಪಿಡಿದ ಬೆಳ್ಳಾಳಂತುಮ್ಮನೆ ಬೆಮರುತ್ತುಮಿರ್ದ ದುಶ್ಶಾಸನನುಮಂ ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು ಕಣ್ಗಳಿಂ ನೆತ್ತರ್ ತುಳುಂಕೆ ವಿಳಯಕಾಳಜಳಧಿಗಳಂತೆ ಮೇರೆದಪ್ಪಲ್ ಬಗೆದ ತನ್ನ ನಾಲ್ವರ್ ತಮ್ಮಂದಿರ ಮುನಿದ ಮೊಗಮಂ ಕಂಡು ತನ್ನ ನುಡಿದ

ನನ್ನಿಯ ಕೇಡಂ ಬಗೆದರೆಂದು ಕಟಾಕ್ಷವಿಕ್ಷೇಪದಿಂ ಬಾರಿಸೆ, ದ್ರೌಪದಿ ತನ್ನ ಕೇಶಪಾಶಮಂ ದುಶ್ಶಾಸನಂ ಪಿಡಿದು ತೆಗೆದನೆಂಬ ಸಿಗ್ಗಗ್ಗಳಂ ಪೆರ್ಚೆ ಸಭೆಯೊಳಿಂತೆಂದಳ್:

ಮುಡಿಯಂ ಪಿಡಿದೆಳೆದವನಂ
ಮಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ
ಮುಡಿಯುಸುವಿನೆಗಂ ಮುಡಿಯಂ
ಮುಡಿಯೆಂ ಗಡ ಕೇಳಿಮೀಗಳಾನ್ ನುಡಿ ನುಡಿದೆಂ ೭೬

ಎಂಬುದುಂ ಭೀಮಸೇನನಾ ಮಾತಂ ಕೇಳ್ದು ಸೈರಿಸಲಾಜಿದೆ

ಮುಳಿಸಂ ಮಾಡಿಯುಮೇವಮಂ ಪಡೆದುಮಿನ್ನೀ ಪಂದೆಗಳ್ ಪ್ರಾಣದಿಂ
ದೊಳರಿನ್ನುಂ ತಲೆ ಮತ್ತಮಟ್ಟೆಗಳ ಮೇಲಿರ್ದಪ್ಪುವೆಂದಂದೆ ದಲ್
ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋೞ್ದಿಕ್ಕಿ ಬಂಬಲ್ಗರು
ಳ್ಗಳಿನಾನಲ್ತೆ ವಿಳಾಸದಿಂ ಮುಡಿಯಿಪೆಂ ಪಂಕೇಜವಕ್ತ್ರೇಕ್ಷಣೇ ೭೭

ಸುರಸಿಂಧುಪ್ರಿಯಪುತ್ರ ಕೇಳ್ ಕಳಶಜಾ ನೀಂ ಕೇಳ್ ಕೃಪಾ ಕೇಳ ಮಂ
ದರಧರದಿಂದಂಬುಧಿಯಂ ಕಲಂಕಿದಸುರಪ್ರಧ್ವಂಸಿವೋಲ್ ಬಾಹುಮಂ
ದರದಿಂ ವೈರಿಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂ
ರ್ವರುಮಂ ಕೊಲ್ವೆನಿದೆನ್ನ ಪೂಣ್ಕೆ ನುಡಿದೆಂ ನಿಮ್ಮೀ ಸಭಾಮಧ್ಯದೊಳ್ ೭೮

ಎನಿತು ನುಡಿದೊಡಂ ಆನೆಯ ಕೋಡು ಬಾಗದೆಂಬಂತೆ ಧೃತರಾಷ್ಟ್ರಂ ದುರ್ಯೋಧನನನೇಗೆಯ್ದುಮೊಡಂಬಡಿಸಲಾಜಿದಿರೆಯುಂ ದ್ರೌಪದಿ ಪರಸ್ತ್ರೀಯಂ ನಮ್ಮ ಮನೆಯೊಳಿರಿಸುವುದುಚಿತಮಲ್ಲೆಂದು ಕಟಿಪಿದೊಡೆ ಪಾಂಚಾಳರಾಜತನೂಜೆವೆರಸು ಬಿನ್ನಬಿನ್ನನೆ ಪೊಱಲಂ ಪೊಱಮಡೆ ಪುರಜನಂಗಳೆಲ್ಲಂ ನೆರೆದವರ ಪೋಗಿಂಗೆ ಸೈರಿಸಲಾಜಿದೆ ತಂತಮ್ಮ ಕಂಡುದನೆ ನುಡಿಯೆಯುಂ ಪೊಱಲಂ ಪೊಱಮಟ್ಟು ಪುರದ ಬಾಹಿಗೆಯನೆಯ್ದುವಾಗಳ್ ಗಾಂಗೇಯ ದ್ರೋಣ ಕೃಪವಿದುರಾದಿಗಳ್ ಕೊಂತಿವೆರಸೆಯ್ದೆವಂದು ಕಿಱಿದಂತರಮಂ ಕಟಿಪುತ್ತುಂ ತಕ್ಕ ಬುದ್ಧಿಯಂ ಪೇಟ್ಟು ಜಯಮಕ್ಕೆ ಶುಭಂ ಮಂಗಳಂ ನಿಮಗಕ್ಕೆ ಎಂದೊಡೆ ಪೊಡೆವಟ್ಟು ಕೊಂತಿಯಂ ವಿದುರನ ಮನೆಯೊಳಿರವೇಟ್ಟು ಸುಭದ್ರೆಯನಭಿಮನ್ಯುವೆರಸು ನಾರಾಯಣನಲ್ಲಿಗೆ ದ್ವಾರಾವತಿಗೆ ಕಟಿಪಿ ನಿಜಪರಿಜನಂಬೆರಸು ಗಂಗೆಯಂ ಪಾಯ್ದುದಱ ಪಡುವಣ ದೆಸೆಯ ಕಾಮ್ಯಕವನದ ಬಟ್ಟೆಯಂ ತಗುಳ್ದು ಪೋದರ್

* * * * * * *

೩. ಭಾರತಂ ಕಲಹಂ

ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆ
ತ್ತು ಸಿಡಿಲ್ದಾಗಸಕೆಯ್ದೆ ಪಾಯ್ವ ಪಲವುಂ ಸಿಂಗಂಗಳಿಂದೆತ್ತಗು
ರ್ವಿಸಿ ಪಾಯ್ವುರ್ವಿಗಳಿಂ ಮದಾಂಧವನಗಂಧೇಭಂಗಳಿಂ ಕಣ್ಣಗು
ರ್ವಿಸೆಯುಂ ಚಿತ್ತದೊಳಂದು ಕಾಮ್ಯಕವನಂ ಮಾಡಿತ್ತತಿಪ್ರೀತಿಯಂ ೧

ಅಂತು ಸೌಮ್ಯಭಯಂಕರಾಕಾರಮಪ್ಪ ಕಾಮ್ಯಕವನಮಂ ಪುಗುತಂದಲ್ಲಿ ತದ್ವನಾಧಿಪತಿಯಪ್ಪ ದೈತ್ಯಂ ಕಿಮ್ಮೀರನವರಂ ಪುಗಲೀಯದಡ್ಡಮಾಗಿರೆ ಭೀಮಂ ಸಿಡಿಲ್ದು ಕಿಮ್ಮೀರನಂ ಕೊಂದು ವನಮಂ ಪೊಕ್ಕು ತದ್ವನತಪೋಧನರ ಗೋಷ್ಠಿಯೊಳಮಾಟವಿಕರ 'ಟ್ಟಟ್ವಿಯೊಳಂ ತಮಗಿಂದ್ರಪ್ರಸ್ಥದ ರಾಜ್ಯಶ್ರೀಯಂ ಮಸುಳಿಸೆ

ಪಿರಿಯ ಮರಂಗಳೆ ಮಾಡಮಾಗೆ ಪೊಳೆವೆಳದಳಿರ್ಗಳೆ ಸೆಜ್ಜೆಯಾಗೆ
ಪಿರಿಯ ಮಡುಗಳೆ ಮಜ್ಜನಮಾಗೆ ಪೊಸನಾರೆ ದೇವಾಂಗವಸ್ತ್ರಮಾಗೆ
ಪರೆದ ತಱಗೆಲೆಯೆ ಪರಿಯಣಮಾಗೆ ಪಣ್ಪಲಮೆತ್ತಿದ ಬೋನಮಾಗೆ
ಸಿರಿಯ ಮಹಿಮೆಯಂ ಮೆಱೆಯಲೇನಾರ್ತುದೊ ಬನದೊಳಿರ್ಪರವಾ
ಪಾಂಡವರಾ ೨

ಅಂತು ಕಾಮ್ಯಕವನದೊಳಯ್ದುವರ್ಷಮಿರ್ದಾಱನೆಯ ವರುಷದೊಳದಱ ಕೆಲದೊಳೊಂದಿ ಸಂದಿಸಿ ಗಗನತಳಮಂ ತಱುಂಬುವಂತಿರ್ದ ಶಿಖರಿಶಿಖರಂಗಳಿಂ ದೆಸೆಗಳಂ ತಡವರಿಸಿಕೊಳ್ವಂತೆ ಬಳ್ವಳ ಬಳೆದು ಸೊಗಯಿಸುವ ಪೆರ್ಮರಗಳಿಂದಂ ವನಲಕ್ಷ್ಮಿಯ ಗೋಮುಂಡಲದಂತಿರ್ದ ಕಡವಿನ ಕಾಡೆರ್ಮೆಯ ಪಿಂಡುಗಳಿಂದಂ ದೆಸೆಗಳ್ಗೆ ಬೆರ್ಚಿ ಮೂಂಕಿಡೆವ ವನಮಹಿಷಿಗಳಿಂ ಮದಹಸ್ತಿಯಂತೆ ಮರವಾಯ್ವ ಪುಲಿಗಳಿನತಿಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು ತದ್ವನೋಪಕಂಠವರ್ತಿಗಳಪ್ಪ ತಾಪಸಾಶ್ರಂಗಳೊಳ್ ವಿಶ್ರಮಿಸಲ್ ಬಗೆದು ದ್ವೈತವನದೊಳದ್ವೈತಸಾಹಸರಿರ್ಪನ್ನೆಗ ಮೊಂದು ದಿವಸಂ

ದುರ್ಯೋಧನನ ಮಯ್ದುನಂ ಸಿಂಧುದೇಶಾಧೀಶ್ವರಂ ಸೈಂಧವನವರಂ ಛಿದ್ರಿಸಲೆಂದು ಮೆಯ್ಗರೆದು ಬಂದು ಮೃಗಯಾಕ್ರೀಡೆಗೆ ಪಾಂಡವರ್ ಪೋಪನ್ನೆಗಂ ಬಂದು ಪಾಂಚಾಳಿಯನೆತ್ತಿ ತನ್ನ ರಥದೊಳ್ ತಂದಿಟ್ಟುಕೊಂಡುಯ್ಯಲ್ ಅಂತಾ ಪಡೆಮಾತುಗೇಳ್ದು ಭೀಮಾರ್ಜುನರ್ ಗದಾಘಾತದೊಳಂ ಬಾಣಾಘಾತದೊಳಂ ಅವನ ರಥಮಂ ಶತಚೂರ್ಣಂ ಮಾಡಿ ಜಯದ್ರಥನಂ ಕೋಡಗಗಟ್ಟುಗಟ್ಟಿ ಪಾಂಚಾಲಿಯಂ ಲೀಲೆಯಿಂದೊಡಗೊಂಡು ಬೀಡಿಗೆ ವಂದು ಧರ್ಮಪುತ್ರಂಗೆ ತೋಹೆದೊಡಾತಂ ದುರ್ಯೋಧನನಲ್ಲಿಗೆ ಪೋಗೆಂದು ಕಟ್ಟಿದ ಕಟ್ಟುಗಳಂ ಬಿಟ್ಟು ಕಳೆದಂ;

ಇತ್ತ ದುರ್ಯೋಧನಂ ಬೇಂಟೆಯ ನೆವದಿಂ ಬಂದು ದ್ವೈತವನದ ಕೆಲದ ನಂದನವನದೊಳ್ ಬೀಡಂ ಬಿಟ್ಟಿರೆ ಪೂರ್ವಜನ್ಮದ ಪಗೆ ಚಿತ್ರಾಂಗದನೆಂಬ ಗಂಧರ್ವನಱುವತ್ತು ಕೋಟಿ ಗಾಂಧರ್ವಬಲಂ ಬೆರಸು ಬಂದು ದುರ್ಯೋಧನ ದುಶ್ಶಾಸನರಿರ್ವರುಮಂ ಕೋಡಗಗಟ್ಟುಗಟ್ಟಿ ಉಯ್ವುದುಂ ಸುಯೋಧನನ ಮಹಾದೇವಿ ಭಾನುಮತಿ ಬಾಯಟಿದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲ ಮೇಲೆ ಕವಿದುಪಟ್ಟು ಪುರುಷಭಿಕ್ಷಮನಿಕ್ಕಿಂ ಎಂದ ಪುಯ್ಯಲಂ ಕೇಳ್ದು ಸುಯೋಧನಂ ಬಂದ ವೃತ್ತಾಂತಮನಱಿದು ಎಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೂರ್ವರೆ ದಲ್ ಕೌರವರಾಮುಮಯ್ವರೆ ವಲಂ ಮತ್ತೊರ್ವರೊಳ್ ತೊಟ್ಟ ಸಂಗರಕ್ಕೆ ಜಸಕ್ಕೆ ಕೂಡುವೆಡೆಯೊಳ್ ನೂಱಯ್ವರಾವಲ್ಲವೇ ಎಂದು ಸಾಹಸಾಭರಣನ ಮೊಗಮಂ ನೋಡಿ ಬೇಗಂ ಬಿಡಿಸಿ ತರ್ಪುದಾತನ ಸೆಱೆಯಂ ಎಂಬುದುಂ ಅಂತೆ ಕೊಂಡುಬಂದಪೆನೆಂದು ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ಗಂಧರ್ವರ ಪೋಪ ಬಟಿಯಂ ಬೆಸಗೊಂಡು ಹಿಮವಂತದಲ್ಲಿ ರಾಕ್ಷಸಿ ಕೊಟ್ಟ ಚಕ್ಷುಸಿಯೆಂಬ ವಿದ್ಯೆಯಿಂ ತನ್ನ ಕಣ್ಣನಭಿಮಂತ್ರಿಸಿಕೊಂಡು ಪಾಱಿ ಗಂಧರ್ವಬಲಮಂ ಜಲಕ್ಕನೆ ಕಂಡು

ಕೊಳ್ ಕೊಳ್ಳೆಂದೆಚ್ಚೊಡೆ ವಿಳ
ಯೋಳ್ಕದ ತೆಱದಿಂದೆ ಮುಸುಱೆ ದಿವ್ಯಾಸ್ತ್ರಚಯಂ
ಗಳ್ ಕೊಳೆ ಗಾಂಧರ್ವಬಲಂ
ಗಳ್ ಕೆಡೆದುವು ಮಿಟ್ಟೆಗೊಂಡ ಚಿಟ್ಟೆಯ ತೆಱದಿಂ ೩

ಅಂತಲ್ಲಿ ಗಂಧರ್ವರಂ ಕೊಂದೊಡೆ ಚಿತ್ರಾಂಗದಂ ಕೊಳ್ ನಿನ್ನ ನೆಚ್ಚಿನ ಸೆಱೆಯನೆಂದು ಬಿಸುಟ್ಟೊಡೆ ನೋಯಲೀಯದೆ ನೆಲದಾಕಾಶದೆಡೆಯೊಳಂಬುಗಳಂ ತರತರದಿಂದೆಚ್ಚು ಸೋಪಾನಂಮಾಡಿ ದುರ್ಯೋಧನ ದುಶ್ಶಾಸನರನಿೞಿಪಿ ಕಟ್ಟುಗಳಂ ಬಿಡದೊಡಗೊಂಡು ಬಂದು ಧರ್ಮಪುತ್ರಂಗೆ ತೋಱಿದೊಡೆ, ಪಾಂಚಾಲರಾಜತನೂಜೆ ಪಗೆವರ ಕಟ್ಟುವಟ್ಟಿರ್ದೇೞಿದಿಕ್ಕೆಗೆ ಸಂತಸಂಬಟ್ಟು ಕಂಡಿರೆ ನಿಮ್ಮಳವಂ ನಿಮಗೀಗಳೀಯೆಡರಾಯ್ತೇ ಎಂದು ಸಾಯೆ ಸರಸಂ ನುಡಿದು ಕಟ್ಟಿದ ಕಟ್ಟುಗಳಂ ತಾನೆ ಬಿಟ್ಟು ಕಳೆದು ಭಾನುಮತಿಗೆ ನಿನ್ನಾಣ್ಮನುಮಂ ನಿನ್ನ ಮಯ್ದುನನುಮಂ ನಿನಗೊಪ್ಪುಗೊಳ್ಳೆಂದವರಂ ಬೀೞ್ಕೊಟ್ಟು ಯಮತನೂಜಂಗಿಂತೆಂದಳ್

ಆ ದುಶ್ಶಾಸನನಿಂದೆನ
ಗಾದ ಪರಾಭವಮನೇನುಮಂ ಬಗೆಯದೊಡಿಂ
ತಾದರಮೆ ತೊವಲ್ನಾರುಮ
ನಾದರದೇಂ ನಿನ್ನ ಮನಕೆ ಚಿಂತೆಯುಮಿಲ್ಲಾ ೪

ಎಮ್ಮಯ್ವರ ಬೇವಸಮಂ
ನೀಂ ಮನದೊಳ್ ನೆನೆಯೆಯಪ್ಪೊಡಂ ನಿನ್ನಿರವಂ
ನೀಂ ಮರುಳೆ ಬಗೆಯದಂತುಂ
ಘುಮ್ಮೆಂಬಡವಿಯೊಳಡಂಗಿ ಚಿಂತಿಸುತಿರ್ಪಾ ೫

ಎಂದ ಪಾಂಚಾಳರಾಜತನೂಜೆಯ ಮಾತಿಂಗೆ ಬೆಂಬಲಂಬಾಯ್ವಂತೆ ಭೀಮಸೇನನಿಂತೆಂದಂ

ನುಡಿಯದೆ ಪೆಱತಂ ದ್ರೌಪದಿ
ನುಡಿದಳ್ ತಕ್ಕುದನೆ ಕೇಳಿಂ ಕೇಳದಿರಿಂ
ನುಡಿಯಲೆಡೆಯಿಲ್ಲ ನಿಮ್ಮಂ
ನುಡಿಯಿಸಿದಪುದೆನ್ನ ಮನದ ಮುನಿಸವನಿಪತೀ ೬

ಅಸಿತೇಂದೀವರಲೋಲಲೋಚನೆಯನಂದಂತಾ ಸಭಾಮಧ್ಯದೊಳ್
ಪಸುವಂ ಮೋದುವವೋಲೆ ಮೋದೆಯುಮದಂ ಕಂಡಂತೆ ಪಲ್ಗರ್ಚಿ ಸೈ
ರಿಸಿದೆಂ ನಿನ್ನಯ ನನ್ನಿಗಿನ್ನೆವರಮಾ ದುಶ್ಶಾಸನೋರಃಸ್ಥಲೋ
ಚ್ಛ್ವಸಿತಾಸೃಗ್ಜಲಪಾನಮಂ ಬಯಸಿ ಬಾಯ್ ತೇರ್ರೈಸೆ ಸೈತಿರ್ಪೆನೇ ೭

ಎಂದು ಗದಾದಂಡಮಂ ಭುಜಾದಂಡದೊಳಳವಡಿಸಿಕೊಂಡು ಪಗೆವರಿರ್ದ ದೆಸೆಯಂ ನೋಡಿ ತೆರಳಲ್ ಬಗೆದ ಭೀಮಸೇನನಂ ಧರ್ಮಪುತ್ರಂ ಕೋಪತಾಪದಿಂ ಮಸಗಿದ ಮದಗಜಮನೆ ಮಾಣಿಸುವಂತೆಂತಾನುಂ ಮೃದುವಚನಂಗಳಿಂ ಮುಳಿಸನಾಱಿಸುತಿರ್ಪನ್ನೆಗಂ

ಕನಕಪಿಶಂಗತುಂಗಜಟಿಕಾವಳಯಂ ಕುಡುಮಿಂಚಿನೋಳಿಯಂ
ನೆನೆಯಿಸೆ ನೀಲನೀರದತನುಚ್ಛವಿ ಭಸ್ಮರಜೋವಿಲಿಪ್ತಮಂ
ಜನಗಿರಿಯಂ ಶರಜ್ಜಳಧರಂ ಕವಿದಂತಿರೆ ಚೆಲ್ವನಾಳ್ದು ಭೋಂ
ಕನೆ ನಭದಿಂದಮಂದಿೞಿದನಲ್ಲಿಗೆ ವೃದ್ಧಪರಾಶರಾತ್ಮಜಂ ೮

ಅಂತಿೞಿತಂದ ಕೃಷ್ಣದ್ವೈಪಾಯನನಂ ಕಂಡಜಾತಶತ್ರು ನಿಜಾನುಜಸಹಿತಮಿದಿರ್ವಂದು

ಸಾಷ್ಟಾಂಗವೆಱಗಿ ಪೊಡೆವಟ್ಟು ತಚ್ಛಿಳಾತಳದೊಳ್ ಕುಳ್ಳಿರಿಸಿ ಪದಪದ್ಮಂಗಂ ಕರ್ಚಿ ತತ್ಪಾದಪವಿತ್ರೋದಕಂಗಳನನಿಬರುಮುತ್ತಮಾಂಗದೊಳ್ ತಳಿದುಕೊಂಡಿರ್ದಾಗಳ್ ಧರ್ಮನಂದನನಿಂತೆಂದಂ

ಆಪತ್ಪಯೋನಿಧಿಯೊಳಗ
ತ್ಯಾಪತ್ತಿಂದಟ್ಟಿಮೆಟ್ಟಿ ನಮವೆಮಗೆ ಶರಣ್
ಪಾಪಹರ ನೀಮೆ ಬಗೆದೆಮ
ಗಾಪತ್ಪ್ರತಿಕಾರಮಾವುದೀಗಳೆ ಬೆಸಸಿಂ ೯

ಎಂಬುದುಮಾ ಮುನೀಂದ್ರನಾಮುಮಂತೆಂದೆ ಬಂದೆವೆಂದು

ನೀಂ ಬೇೞ್ಮಗೆ ಸುಯೋಧನ
ನೇಂ ಬೇೞ್ಯೆ ಕೂಸುತನದೊಳಾದೊಡಮಿನ್ನೇ
ನೆಂಬುದೊ ಪಿರಿದೈವರೊಳಂ
ಪಂಬಲ್ ಗುಣಪಕ್ಷಪಾತಮಪ್ಪುದು ನಿಮ್ಮೊಳ್ ೧೦

ಪನ್ನೆರಡು ವರುಷದವಧಿಯು
ಮಿನ್ನೆಱೆಯಲ್ ಬಂದುದಹಿತನಿಳೆಯಂ ಕುಡನಾ
ಸನ್ನಂ ಕಾಳೆಗಮಱೆಯಿರೆ
ಪನ್ನಗಕೇತನನ ಚಲದ ಕಲಿತನದಳವಂ ೧೧

ಅದು ಕಾರಣದಿಂದವರಂ ಗೆಲ್ವಾಗಳ್ ವಿಕ್ರಮಾರ್ಜುನನಲ್ಲದೆ ಗೆಲ್ಲನದಱಿಂದಾತಂಗೆ ದಿವ್ಯಾಸ್ತ್ರಂಗಳಂ ಪಡೆಯಲ್ವೇೞ್ಪುದದಂ ಪಡೆವುಪಾಯಮುಮಂ ಮಂತ್ರಮುಮನುಪದೇಶಂಗೆಯ್ಯಲ್ ಬಂದೆವೆಂದು ಯುಧಿಷ್ಠಿರಂಗೆ ವೇೞ್ದು ವಿಕ್ರಮಾರ್ಜುನಂಗೆ ಮಂತ್ರಾಕ್ಷರಂಗಳನುಪದೇಶಂಗೆಯ್ದು ಗುಹ್ಯಕನೆಂಬನಂ ಸ್ಮರಣಮಾತ್ರದೊಳ್ ಬರಿಸಿ ಸಾಹಸಾಭರಣನನಿಂದ್ರಕೀಳನಗೇಂದ್ರಮನೆಯ್ದಿಸಿ ಬರ್ಪುದೆಂದು ಪೇೞ್ವುದುಂ ಧರ್ಮಪುತ್ರನಾ ಮುನೀಂದ್ರಂಗೆ ಸಾಷ್ಟಾಂಗವೆಱಗಿ ಪೊಡೆವಡೆ ಪರಸಿ ಪಯೋಧರಪಥಕ್ಕೊಗೆದಂ;

ಇತ್ತ ವಿಕ್ರಾಂತತುಂಗನುಂ ಧರ್ಮಪುತ್ರಂಗಂ ವಾಯುಸುತಂಗಂ ಪೊಡೆವಟ್ಟು ಗುಹ್ಯಕನ ಪೆಗಲನೇಱೆ ಗಂಧೇಭವಿದ್ಯಾಧರಂ ಗಗನತಳಕ್ಕೊಗೆದು ಮಹೇಂದ್ರಕೀಲಮುಖಾಭಿನಾದಾಗಳ್, ಲೋಕಕ್ಕೆ ಕಣ್ ಬರ್ಪಿನಂ ಶರದಂ ಬಂದುದು; ಗುಹ್ಯಕಂ ಹಿಮವನ್ಮಹೀಧರಮುಂ ಕೈಲಾಸಪರ್ವತದೆಲ್ಲೆಗಳುಮಂ ವಿಕ್ರಮಾರ್ಜುನಂಗೆ ತೋಱುತ್ತುಂ ಬಂದು ಇಂದ್ರಕೀಲನಗೇಂದ್ರದ ಚಂದ್ರಕಾಂತಶಿಲಾತಳದೊಳಿೞಿಪಿ ಬೀೞ್ಕೊಂಡು ಪೋದನ್; ಇತ್ತ ವಿಕ್ರಮಾರ್ಜುನಂ ಪರಂತಪಂ ತಪೋನಿಯಮನಿಯಮಿತನಾಗಿ

ಭಸಿತಂ ಕರ್ಪೂರಕಾಳಾಗರುಬಹುಳರಜಂ ವಲ್ಕಲಂ ಕಲ್ಪವೃಕ್ಷ
ಪ್ರಸವಂ ಯಜ್ಞೋಪವೀತಂ ಕನಕಕಮಳನಾಳೋತ್ಕರಂ ನಿಚ್ಚನಿಚ್ಚಂ
ಪೊಸತೆಂಬಂತಾಗೆ ಪಾರ್ಥಂಗೊಸೆದು ತುಡಲುಡಲ್ ಪೂಸಲುಂ ಸಾಲ್ವಿನಂ ಸಾ
ಧಿಸಿತುದ್ಯದ್ಭಕ್ತಿಭಾರಾನತ ವನವನಿತಾವೃಂದಮಾನಂದದಿಂದಂ ೧೨

ಅದಿರದ ಚಿತ್ತಮಳ್ಕದ ಮನಂ ಬಗೆಗೊಳ್ಳದ ಮೋಹಮೆತ್ತಿ ಕ
ಟ್ಟಿದ ಜಡೆ ತೊಟ್ಟ ರತ್ನಕವಚಂ ಕೊರಲೊಳ್ ಸಲೆ ಕೋದ ಬಿಲ್ ಪ್ರಯ
ತ್ನದೆ ಬಿಗಿದಿರ್ದೆರಟಿಳ್ದೊಣೆ ಮಿಸುಪ್ಪಸಿಖೇಟಕಮಿಂತಿವೊಂದುಗುಂ
ದದೆ ನಿಲೆ ನೋೞ್ಪ ನೋಟಕರ್ಗೆ ಸೌಮ್ಯಭಯಂಕರನಾದನರ್ಜುನಂ ೧೩

ಅಂತು ತಪಂಗೆಯ್ಯಲ್ ತಗುಳ್ದೊಡೆ ಗಿರೀಂದ್ರಕಂದರದೊಳ್ ತಪಂಗೆಯ್ವ ತಪೋಧನರ ತಪಂಗಳೆಲ್ಲವಾತನ ತಪೋಮಯಶಿಖಿಗಳಿಂ ಬೆಂದು ಬೆಂದ ನುಲಿಯಂತೇತರ್ಕಂ ಮುಟ್ಟಲ್ಲದೆ ಮುಟ್ಟುಗಿಡೆ, ದೇವೇಂದ್ರಂ ತನಗಾದ ಹೃತ್ಕಂಪದೊಳ ಮಾಸನಕಂಪದೊಳಂ ತನ್ನಿಂದ್ರತ್ವಮಂ ಕೊಳಲೆಂದು ತಪಂಗೆಯ್ದಪನೆಂಬ ಸಂಕೆಯೊಳ್ ತಪೋವಿಘಾತಂ ಮಾಡಿಮೆಂದು ಅಚ್ಚರಸೆಯರುಮಂ ಆಱುಂ ಋತುಗಳುಮಂ ಕಾಮದೇವನಂ ದಂಡನಾಯಕಂ ಮಾಡಿ ಪೇೞ್ದಾಗಳ್

ಆಱುಂ ಋತುಂಗಳ ಪೂಗಳು
ಮಾಱುಂ ಋತುಗಳ ಪೊದಳ್ದ ಚೆಲ್ವುಗಳುಮಣಂ
ಬೇಱಿಲ್ಲದೊಂದು ಸೂೞ್ ಮೆ
ಯ್ದೋಱಿದುವೊಡನೊಡನೆ ನೆಲದೊಳಂ ಗಗನದೊಳಂ ೧೪

ಮೆಯ್ದೋಱಿದೊಡವಱೊಡನೆಯೆ
ಮೆಯ್ದೋಱಲ್ ಬಗೆದನಂಗಜಂಗಮಲತೆಗಳ್
ಮೆಯ್ದೋಱುವಂತೆ ಮೆಲ್ಲನೆ
ಮೆಯ್ದೋಱಿದಮರಗಣಿಕೆಯರ್ ವಂದಾಗಳ್ ೧೫

ಅಂತು ನರೇಂದ್ರತಾಪಸನಂ ಸೋಲಿಸಲೆಂದು ವಂದಾಕೆಗಳ್ ಮುಂದಮುಂದನೆ ಸುೞಿದು ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್, ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್, ಬೀಣೆಯಂ ಮಿಡಿದವೊಲಾಗೆ ಮೇನಕೆ ಪಾಡಿದಳ್; ಅಂತಾಕೆಗಳೆಡೆಯಾಡಿಯುಂ ಮನಂಗೊಳೆ ಪಾಡಿಯುಂ ಮನುಜಮಾಂಧಾತನಂ ಸೋಲಿಸಲಾಱದೆ ಸಹಜಮನೋಜನ ರೂಪಿಂಗೆ ತಾಮೆ ಸೋಲ್ತು

ಕಡುತಪದಿಂದೆ ನಿನ್ನ ಪಡೆಪಾವುದೊ ಗಾವಿಲ ಸಗ್ಗಮಲ್ತೆ ಪೋ
ನುಡಿಯವೊ ಮೂರ್ಖ ಸಗ್ಗದ ಫಲಂ ಸುಖಮಲ್ತೆ ಸುಖಕ್ಕೆ ಪೇೞೊಡಂ

ಬಡದವರಾರೊ ಪೆಂಡಿರೊಳಗಾರ್ ಪೆಱರಾಮೆ ದಲಾಮೆ ಬಂದು ಕಾ
ಲ್ವಿಡಿದಪೆವಿಂಬುಕೆಯ್ವೊಡಿವು ಮೆಲ್ಲಡಿಗಳ್ ಗಡ ಕರ್ಚು ಬೂದಿಯಂ ೧೬

ಎಂದೆನಿತಾನುಂ ತೆಱದೊಳಳಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳಂ ನುಡಿದು ಕಾಲ್ವಿಡಿದುಂ ಅಚಳಿತಧೈರ್ಯನ ಮನಮಂ ಚಲಿಯಿಸಲಾಱದೆ ಪೋಗಿ ಕಾಮದೇವನೇವಮಂ ಕೆಯ್ಕೊಂಡು ದೇವೇಂದ್ರನ ಮೊಗಮಂ ನೋಡಲ್ ನಾಣ್ಚಿದಾಗಳ್, ನರೇಂದ್ರತಾಪಸನ ಧೈರ್ಯಕ್ಕೆ ಮೆಚ್ಚಿ ಧರಾಮರವೇಷದೊಳಿಂದ್ರಕೀಲನಗೇಂದ್ರಮನೆಯ್ದೆವಂದು ಸಾಮಂತಚೂಡಾಮಣಿಯನ ಣಿಯರಂ ಬಂದು ಕಂಡಂ ಸುರೇಂದ್ರಂ

ಕಂಡು ನಿಜತನಯನಳವೆರ್ದೆ
ಗೊಂಡಿರೆ ಮುದುಪಾರ್ವನಾಗಿ ಮೆಲ್ಲನೆ ಸಾರ್ವಾ
ಖಂಡಳನಂ ಕಾಣಲೊಡಂ
ಗಾಂಡಿವಿಗಿರದುರ್ಚಿ ಪಾಯ್ದುವಶ್ರುಜಲಂಗಳ್ ೧೭

ಅಂತು ಮನದೊಳಾದ ಮೋಹರಸಮೆ ಕಣ್ಣಿಂ ತುಳುಂಕುವಂತೆ ಪೊಱ ಪೊಣ್ಮುವ ನಯನಜಲಂಗಳನುತ್ತರೀಯವಲ್ಕಲವಸನೋಪಾಂತದೊಳೊತ್ತುತ್ತುಂ ಅತಿಥಿಗತಿಥಿಸತ್ಕಾರಮೆಲ್ಲಮಂ ನೆಱೆಯೆ ಮಾಡಿದಾಗಳಿಂದ್ರಂ ನರೇಂದ್ರತಾಪಸನನಿಂತೆಂದಂ

ನೀನಾರ್ಗೆ ನಿನ್ನ ಪೆಸರೇ
ನೀ ನಿಯಮಕ್ಕೆಂತು ಮೆಯ್ಯನೊಡ್ಡಿದೆಯಿದು ದಲ್
ತಾನಾಶ್ಚರ್ಯಮಿದೇನ
ಜ್ಞಾನಿಯವೊಲ್ ತಪಕೆ ಬಿಲ್ಲುಮಂಬುಂ ದೊರೆಯೆ ೧೮

ಎನೆ ಸಾಹಸಾಭರಣನಿಂತೆಂದಂ

ನಿನಗಂ ಪೇೞ್ವೊಡೆ ಪಾಂಡುರಾಜತನಯಂ ಗಾಂಡೀವಿಯೆಂ ದಾಯಿಗಂ
ಗೆ ನೆಲಂ ಜೂದಿನೊಳೊತ್ತೆವೋಗೆ ಬನಮಂ ಪೊಕ್ಕಣ್ಣನೆಂದೊಂದು ಮಾ
ತನಣಂ ಮೀಱದೆ ನಿಂದು ಸಂಕರನ ನೀನಾರಾಧಿಸೆಂದಿಂತಿದಂ
ಮುನಿ ಪಾರಾಶರನೊಲ್ದು ಪೇೞೆ ಹರ ಬರ್ಪನ್ನಂ ತಪಂಗೆಯ್ದಪೆಂ ೧೯

ಎನೆಯೆನೆ ರತ್ನರಶ್ಮಿಜಟಿಳಂ ಮಕುಟಂ ಮಣಿಕುಂಡಲಂ ಕನ
ತ್ಕನಕಪಿಶಂಗದೇಹರುಚಿ ನೀಳಸರೋಜವನಂಗಳಾಗಳು
ಳ್ಳನಿತುಮರಲ್ವವೋಲ್ ಪೊಳೆವ ಕಣ್ಗಳುಮಕ್ಕಱನೀಯೆ ವಿಕ್ರಮಾ
ರ್ಜುನನ ಮನಕ್ಕೆ ತೋಱಿದನಿಳಾಮರನಂದಮರೇಂದ್ರರೂಪಮಂ ೨೦

ಅಂತು ತನ್ನ ಸಹಜರೂಪಮಂ ತೋಱಿ ಮನದಟ್ಟಱಿಂ ತೋಱಲೆಂದು ಮಗನನಪ್ಪಿಕೊಂಡು

ಸಾಧಿಸುವೊಡಮರಿನೃಪರಂ
ಸಾಧಿಸುವೊಡಮಸ್ತ್ರಚಯಮನಿನ್ನುಂ ತನುವಂ
ಬಾಧಿಸು ತಪೋಗ್ನಿಯಿಂದಾ
ರಾಧಿಸು ನೀಂ ಮಗನೆ ದುರಿತಹರನಂ ಹರನಂ ೨೧

ಎಂದು ತಿರೋಹಿತನಾದಂ; ಮನುಜಮಾಂಧಾತಂ ಉಗ್ರೋಗ್ರತಪಂಗೆಯ್ಯೆ ತಪೋಧನರೆಲ್ಲಂ ನೆರದು ಬಂದು ಬಾಳೇಂದುಚೂಡಾಮಣಿಗೆ ಸಾಮಂತಚೂಡಾಮಣಿಯ ತಪಃಪ್ರಭಾವಮಂ ಬಿನ್ನಪಂಗೆಯ್ದರ್; ದಿವ್ಯಜ್ಞಾನದೊಳ್ ಮಹೇಶ್ವರನುದಾರಮಹೇಶ್ವರನಪ್ಪುದನಱಿದು ಆತಂಗೆ ತಕ್ಕುದನಾನೆ ಬಲ್ಲೆನೆಂದು ಮುನೀಂದ್ರವೃಂದಮಮಂ ಪೋಗಲ್ವೇೞ್ದು ಮುನ್ನ ದೇವೇಂದ್ರಂ ತನಗೆ ಮೂಕದಾನವನ ಮುಯ್ಯಲಂ ಬಿನ್ನಪಂಗೆಯ್ದುದನವಧಾರಿಸಿ ಮೂಕದಾನವನಾದಿವರಾಹರೂಪದೊಳಿರ್ದುದುಮನಱಿದು ಮನುಜಮಾಂಧಾತನಿಂದಮಾ ಆ ದೈತ್ಯನಂ ಕೊಲಿಸಲುಂ ಬಗೆದು ವನಚರನಾಗಿ ಶಂಭು ಗಿರಿಜೆಯನೋತು ಪುಳಿಂದಿಮಾಡಿ ಭೂತಮುಳ್ಳನಿತುಮನೆಯ್ದೆ ಬೇಡವಡೆ ಮಾಡಿ ಮೃಗಯಾನಿಧಾನಮಂ ಆ ಬನಮಂ ಕವಿದನ್; ಅಂತು ಕವಿದೊಡಾ ಕಳಕಳಕ್ಕೇವಯಿಸಿ ವರಾಹರೂಪದ ಮೂಕದಾನವಂ

ಪೊರಳೆ ವಾರಿಧಿಗಳ್ ಕಲಂಕಿದುವುರ್ದೆ ಮೆಯ್ಯನುದಗ್ರಮಂ
ದರಮದಂದಲುಗಿತ್ತು ಬಾಯ್ಗ್ಗಯೆ ದಿಗ್ಗಜಂ ಪೆಱಗಿಟ್ಟುವಿಂ
ತರದೆ ತೊಟ್ಟನೆ ದಾಡೆಗುಟ್ಟೆ ಕೞಲ್ದು ತಾರಗೆಗಳ್ ನಭಂ
ಬೆರಸು ಬಿೞ್ದುವು ಪೆಂಪಿದೇಂ ಪಿರಿದಾಯ್ತೊ ದೈತ್ಯವರಾಹನಾ ೨೨

ಅಂತಾ ವರಾಹಂ ನೆಲಂ ಕಪ್ಪಂಗವಿಯುಮಾಗೆ ಬರೆ ಪೆಱಗೆ ಕೃತಕಕಿರಾತನಟ್ಟುತ್ತುಂ ಬರೆ ತನ್ನತ್ತ ಮೊಗದೆ ಬರ್ಪುದಂ ಕಂಡು ಧನಂಜಯನೊಂದಮೋಘಾಸ್ತ್ರಮನುರ್ಚಿಕೊಂಡು ಗಾಂಡೀವದೊಳ್ ಪೂಡಿ ತೆಗೆದೆಚ್ಚನ್; ಅಂತು ಮೂಕದಾನವನನಾ ನೆವದೊಳೆ ಕೊಂದು ಆತ್ಮೀಯ ಬಾಣಮಂ ಪರಾಕ್ರಮಧವಳನೊಯ್ಯನೆ ಕೊಂಡು ಬಾಣಧಿಯೊಳಿಟ್ಟು ಪೋಗಿ ಪೂಗೊಳದೊಳ್ ಕರಚರಣಪ್ರಕ್ಷಾಳನಂಗೆಯ್ದು ಮಗುೞ್ದುಮೇಕಪಾದ ತಪದೊಳ್ ನಿಲೆ, ಗೀರ್ವಾಣನಾಥಾತ್ಮಜನಲ್ಲಿಗೆ ಗುಹನನಹಿಭೂಷಣನಂಬಂ ಬೇಡಿಯಟ್ಟಿದೊಡಾತಂ ಬಂದು,

ಗೊರವರೆ ಬೂದಿಯುಂ ಜಡೆಯುಮಕ್ಕೆ ತಪಕ್ಕೆ ತನುತ್ರಮೀ ಭಯಂ
ಕರಧನು ಖಡ್ಗಮತ್ತಪರಮಿಂತೆರಡುಂ ದೊಣೆ ತೀವಿದಂಬುಮೊಂ
ದಿರವು ತಪಕ್ಕಿದೆಂತುಟೊ ತಪಂಗಳುಮಿಲ್ಲಮವುಳ್ಳೊಡೀಗಳೆ
ಮ್ಮರಸರ ನೆಚ್ಚಿನೆಚ್ಚ ಶರಮಂ ಸೆರಗಿಲ್ಲದೆ ಕೊಂಡು ಬರ್ಪಿರೇ ೨೩

ಎಂದು ಕಿರಾತದೂತಂ ತನ್ನನತಿಕ್ರಮಿಸಿ ನುಡಿದುದರ್ಕೆ ಮುಳಿದು, ಬೇಡದಿರು ಬೇಡ ಅಂಬನ್, ಇನ್ ಕಾಱುತೆ ಮೋದಲಾಟಿಪೊಡೆ ನೀಂ ಬರವೇಟ್ಟುದು ನಿನ್ನನಾಳ್ದನಂ ಎಂದು ಕಿರಾತದೂತನಂ ಬಗ್ಗಿಸಿದೊಡೆ ಆ ಮಾತೆಲ್ಲಮನಾ ಮಾಟ್ಕಿಯೊಳೆ ಪೋಗಿ ಕಪಟಕಿರಾತಂಗಱಿಪಿದೊಡಾತಂ ಮಾಯಾಯುದ್ಧಮಂ ಪೊಣರ್ಚಲ್ ಬಗೆದು ಬರೆ, ಶೂನ್ಯಹಸ್ತದೊಳಿರ್ವರುಂ ಪೆಣೆದು ಪಲವುಂ ಗಾಯದೊಳಾಯಂದಪ್ಪದೆ ಪಿರಿದುಂ ಪೊಟ್ತು ಸಲ್ತರ್ಪಿನಂ ಪೋರೆ,

ಇಕ್ಕಿದನಭವಂ ಪಾರ್ಥನ
ನಿಕ್ಕಿದನಾ ತ್ರಿಪುರಹರನನರ್ಜುನನೆನೆ ಗೆ
ಲ್ಲಕ್ಕೆ ಮುಡಿಗಿಕ್ಕುವಂತೆವೊ
ಲಿಕ್ಕಿದನವಯವದೆ ನೆಲದೊಳಗರಿಗಂ ಹರನಂ ೨೪

ಅಂತು ನೆಲಕ್ಕಿಕ್ಕಿ ಗಂಟಲಂ ಮೆಟ್ಟಿದಾಗಳ್

ಪೊಱಕಣ್ಗಂ ಮುನ್ನಂ ತಾ
ಮಱಸಿದ ನೊಸಲೊಂದು ಕಣ್ಣುಮಾಗಳ್ ನೊಸಲಿಂ
ಪೊಱಮಟ್ಟಂತಿರೆ ತೋಱಿದ
ನೆಱಕದೆ ಹರಿಗಂಗೆ ರುದ್ರನಗ್ಗಳಗಣ್ಣಂ ೨೫

ಉರದೊಳ್ ಫಣಿ ಕರದೊಳ್ ಬಿಲ್
ಶಿರದೊಳ್ ತೊಱೆ ತೊಱೆಯ ಕೆಲದೊಳೆಸೆದಿರೆ ಪೆಱೆ ಮುಂ
ಗೊರಲೊಳ್ ಕಱೆ ಮಱೆಯಿಲ್ಲದೆ
ದೊರೆಕೊಳೆ ಮೃಡನಡಿಗೆ ಹರಿಗನೆಱಗಿದನಾಗಳ್ ೨೬

ಕರಕಮಳಂಗಳಂ ಮುಗಿದು ತನ್ನ ಮುಂದಿರ್ದ ಪರಾಕ್ರಮಧವಳನ ಪರಾಕ್ರಮಕ್ಕಂ ವಿನಯಕ್ಕಂ ಮೆಚ್ಚಿ ಬರವಂ ಬೇಡಿಕೊಳ್ಳೆನೆ, ನಿಮ್ಮಡಿ ಪಾಶುಪತಾಸ್ತ್ರಮಂ ದಯೆಗೆಯ್ವುದೆನೆ ಪಾಶುಪತಾಸ್ತ್ರಮನಿತ್ತಾಗಳ್, ಅದರ್ಕೆ ತೆಲ್ಲಂಟಿಯೆಂದು ಗೌರಿದೇವಿಯುಮಂಜರಿಕಾಸ್ತ್ರಮೆಂಬಮೋಘಾಸ್ತ್ರಮಂ ವಿಕ್ರಮಾರ್ಜುನಂಗೆ ಕುಡೆ ಮೂವತ್ತುಮೂದೇವರುಂ ತಂತಮ್ಮ ನಚ್ಚಿನಂಬುಗಳಂ ತಂದಿತ್ತರ್; ಆಗಳಿಂದ್ರಂ ಬಂದು ಉಗ್ರೋಗ್ರ ತಪದೊಳ್ ಮೆಯ್ಯಂ ದಂಡಿಸಿದ ಪರಿಶ್ರಮಂ ಪೋಗೆ ಕೆಲವು ದಿವಸಮನೆಮ್ಮ ಲೋಕದೊಳ್ ವಿಶ್ರಮಿಸಿ ಬಾ ಪೋಪಮೆಂದು ತನ್ನೊಡನೆ ರಥಮನೇಱಿಸಿಕೊಂಡು ಅಮರಾವತೀಪುರಮನೆಯ್ದಿ ಪೊಕ್ಕಾಗಳ್, ಅಮರಾವತೀಪುರದ ವಾರಸ್ತ್ರೀಯರ್ ಮನದೊಳ್ ಸೋಲ್ತಟ್ಟಿಱಿಂ ನೋಡಿದರ್; ದೇವಲೋಕದೊಳ್ ತನ್ನ ಮಾತೆ ಮಾತಾಗಿರ್ದ ಪರಾಕ್ರಮಧವಳನ ಗಂಡಗಾಡಿಗೆ ರಂಭೆ ಸೋಲ್ತು ಸೈರಿಸಲಾಱದೇಕಾಂತದೊಳ್ ಮೇಲೆ ಬಿಱ್ದೊಡೆ

ಎಂದು ಪುರಂದರನರಸಿಯ
ಯಂದು ದಲೆನಗಬ್ಬೆಯೇ ತೊದಳ್ ನುಡಿಯದೆ ಪೋ
ಗೆಂದೊಡದೊಂದಬ್ದದೊಳೆ ಬೃ
ಹಂದಳೆಯಾಗೆಂದು ಮುನಿದು ಶಾಪವನಿತ್ತಳ್ ೨೭

ಇತ್ತ ವಿಕ್ರಾಂತತುಂಗಂ ತಡೆದುದರ್ಕೆ ಯುಧಿಷ್ಠಿರ ಭೀಮಸೇನ ನಕುಳ ಸಹದೇವರುಂ ದ್ರೌಪದಿಯುಂ ಚಿಂತಾಕ್ರಾಂತರಾಗಿ ಮಾರ್ಕಂಡೇಯನೆಂಬ ದಿವ್ಯಜ್ಞಾನಿಗಳ ದಿವ್ಯೋಪದೇಶದೊಳಯ್ವರುಂ ಗಂಧಮಾದನಗಿರಿಗೆ ವಂದು ವಿಕ್ರಮಾರ್ಜುನನ ಬರವನೆ ಪಾರುತ್ತಿರ್ಪನ್ನೆಗಮಿತ್ತ ವಿಬುಧವನಜವನಕಳಹಂಸನುಂ ಪಲವು ದಿನಂಗಳಿರ್ದು ದೇವೇಂದ್ರನಿತ್ತ ಐಂದ್ರಮೆಂಬ ದಿವ್ಯಾಸ್ತ್ರಮುಮಂ ನೈಷ್ಠಿಕಮೆಂಬ ಮುಷ್ಟಿಯುಮಂ ಕೆಯ್ಕೊಂಡು ಇಂದ್ರನಂ ಬೀಟ್ಕೊಂಡು ಗಂಧಮಾದನಗಿರಿಗೆ ವಂದು ಕಾರ್ಗಾಲದ ಬರವಂ ಚಾದಗೆ ಪಾರ್ವಂತೆ ತನ್ನ ಬರವನೆ ಪಾಱುತ್ತಿರ್ದ ಧರ್ಮಪುತ್ರನ ಮರುತ್ಸುತನ ಆಶೀರ್ವಚನಮನಾಂತು ತನಗೆ ಪೊಡೆವಟ್ಟ ನಕುಳಸಹದೇವರಂ ಪರಸಿ, ಬಟಿಯಂ ನಾವಿಲ್ಲಿರಲ್ವೇಡ ಬನ್ನಿಮೆಂದು ದ್ವೈತವನದೊಳಿರ್ಪಮೆಂದು ಬಂದು ಸುಖಮಿರ್ಪನ್ನೆಗಂ ಒಂದು ದೆವಸಮೊಂದು ಮಾಯಾಮತ್ತಹಸ್ತಿ

ಮಸಕಂ ಕಾಯ್ಪು ಜವಂ ಜವಂಗಮಿದಿರೊಳ್ಳೋಡಲ್ಕಗುರ್ವಾಗೆ ಮಾಂ
ದಿಸಿಮೀ ವಂದುದು ಕೊಂದುದೆಂದು ಭಯದಿಂ ವಿಪ್ರರ್ ತೆರಳ್ದೋಡೆ ತಾ
ಪಸರಂ ಬೆರ್ಚಿಸಿ ತೂಳ್ದಿ ಬೇಳ್ವರಣಿಯಂ ಕೊಂಡಾಶ್ರಮಕ್ಕಿಂತು ಬೇ
ವಸಮಂ ಮಾಡುವುದಾಯ್ತದೊಂದು ವಿಭವಂ ಮತ್ತೇಭವಿಕ್ರೀಡಿತಂ ೨೮

ಆಗಳಾ ತಾಪಸರ್ ಬಂದು ಯುಧಿಷ್ಠಿರಂಗಱಿಪಿ ನೀಮೆಮಗದಱಿ ಕೈಗೆ ಪೋದರಣಿಯಂ ತಂದೀಯದಾಗಳಿಷ್ಟಿವಿಘ್ನಂಗಳಂ ಮಾಡಿದಿರೆಂದೊಡಯ್ವರುಂ ತಗುಳ್ವುದುಮಾ ಮಾಯಾಮತ್ತಹಸ್ತಿಯುಂ ಮೂಱುಜಾವಂಬರಂ ರೂಪುದೋಱಿ ಪಱಿದು ಬಳಿಯದೃಶ್ಯಮಾದೊಡಯ್ವರುಂ ಚೋದ್ಯಂಬಟ್ಟೊಂದಾಲದ ಮರದ ಕೆಳಗೆ ವಿಶ್ರಮಿಸೆ, ಧರ್ಮಪುತ್ರಂ ನೀರಡಸಿ ಸಹದೇವನನೆಲ್ಲಿಯಾದೊಡಂ ನೀರಂ ಕೊಂಡು ಬೇಗಂ ಬಾಯೆಂದು ಪೇಳ್ವುದುಮಂತೆಗೆಯ್ವೆನೆಂದು ನೀರದೆಸೆಯನಱಿದು ಪೋಗೆವೋಗೆ

ಬಕಕಲಹಂಸಬಲಾಕ
ಪ್ರಕರಮ್ಮದುಕ್ವಣಿತರಮ್ಯಮಿದಿರೊಳ್ ತೋಱೆ
ತ್ತು ಕೊಳಂ ಪರಿವಿಕಸಿತ ಕನ
ಕಕಂಜಪಿಂಜಲ್ಕಪುಂಜಪಿಂಜರಿತಜಳಂ ೨೯

ಅಂತು ಸೊಗಯಿಸುವ ಸರೋವರಮಂ ಕಂಡು ತಾನುಂ ನೀರಡಿಸಿದನಪ್ಪುದಱಿಂದದಱಿ

ಕೆಲದ ಲತೆಯ ಮೆಳೆಯೊಳ್ ಬಿಲ್ಲುಮಂಬುಮಂ ಸಾರ್ಚಿ ಕೊಳನಂ ಪೊಕ್ಕು ಕರಚರಣವದನಪ್ರಕ್ಷಾಲನಂಗೆಯ್ದು ನೀರಂ ಕುಡಿಯಲೆಂದು ನಿಜಾಂಜಲಿಪುಟಮಂ ನೀಡಿದಾಗಳೊಂದು ದಿವ್ಯವಚನಮಾಕಾಶದೊಳ್

ತೋಯಜಷಂಡಮನಿದನಾ
ನಾಯತಿಯಿಂ ಕಾವೆನೆನ್ನ ಮಾತಿಂಗೆಲೆ ಕೌಂ
ತೇಯ ಮಱುಮಾತನಿತ್ತು ಮ
ದೀಯ ಸರೋವರದ ತೋಯಮಂ ಕುಡಿ ಕೊಂಡುಯ್ ೩೦

ಎಂಬುದುವಾ ದಿವ್ಯವಚನಮನುಲ್ಲಂಘಿಸಿ ನೀರಟ್ಕೆ ಪೋಪಿನಂ ನೀರಂ ಕುಡಿದು ಪದ್ಮಪತ್ರೌಘಂಗಳಿಂ ತಮ್ಮಣ್ಣಂಗೆ ನೀರಂ ತೀವಿಕೊಂಡು ಸರೋವರದಿಂ ಪೊಱಮಟ್ಟೊಂದೆರಡಡಿಯನಿಡುತೆ ಗತಪ್ರಾಣನಾಗಿ ಬಿಟ್ದಂ; ಇತ್ತ ಧರ್ಮಪುತ್ರಂ ಸಹದೇವಂ ತಡೆದುದರ್ಕುಮ್ಮಳಿಸಿ ನಕುಲನ ಮೊಗಮಂ ನೋಡಿ ಸಹದೇವನನೊಡಗೊಂಡು ನೀರಂ ಕೊಂಡು ಬೇಗಂ ಬಾಯೆಂದು ಪೇಟ್ದೊಡಂತೆಗೆಯ್ವೆನೆಂದು ಸಹದೇವನ ಪೋದ ಪಜ್ಜೆಯನೆ ಪೋಗಿ ಕೊಳದ ತಡಿಯೊಳ್ ಬಿಟ್ದಿರ್ದ ತಮ್ಮನಂ ಕಂಡು ಚೋದ್ಯಂಬಟ್ಟು

ತಾನುಂ ಸರೋಜಷಂಡಮ
ನಾನತರಿಪು ಪೊಕ್ಕು ದಿವ್ಯವಚನಮನದಂ
ತೇನುಂ ಬಗೆಯದೆ ಕುಡಿದ
ಜ್ಞಾನತೆಯಿಂ ನಂಜುಗುಡಿದಂತಿರೆ ಕೆಡೆದಂ ೩೧

ಅನ್ನೆಗಂ ಯಮನಂದನನಿರ್ವರ ಬರವುಮಂ ಕಾಣದೆ ಕಿರೀಟಿಯಂ ಕಟಿಪೆ ಆತನುಂ ಬಂದು ನೀರಂ ಕುಡಿದು ಬಟಲ್ದು ಜೋಲ್ದಂ ಧರೆಯೊಳ್; ಅಂತೆ ಭೀಮಸೇನನುಂ ನೀರಂ ಕುಡಿದು ಗದೆವೆರಸು ಭೋಂಕನೆ ಕೆಡೆದಂ ಗಿರಿ ಶಿಖರದೊಡನೆ ಕೆಡೆವಂತಾಗಳ್; ಅಂತು ನಾಲ್ವರುಂ ಕುಲಗಿರಿಗಳಂತೆ ಕೆಡೆದು ವಿಗತಜೀವರಾಗಿರ್ದ ಪದದೊಳ್;

ಅತ್ತ ದುರ್ಯೋಧನನ ಬೆಸದೊಳಾತನ ಪುರೋಹಿತಂ ಕನಕಸ್ವಾಮಿಯೆಂಬಂ ಪಾಂಡವರ್ಗಭಿಚಾರಮಾಗೆ ಬೇಳ್ವ ಬೇಳ್ವೆಯ ಕೊಂಡದೊಳಗಣಿಂದಮಂಜನಪುಂಜ ದಂತಪ್ಪ ಮೆಯ್ಯುಂ ಸಿಡಿಲನಡಸಿದಂತಪ್ಪ ದಾಡೆಯುಮುರಿಯುರುಳಿಯಂತಪ್ಪ ಕಣ್ಣುಂ ಕೃತಾಂತನಂತಾಕಾರಮಾಗಿ ತಟತಟಿಸಿ ಪೊಳೆವ ಕತ್ತಿಗೆಯುಂಬೆರಸು ಪೊಱಮಟ್ಟು ಕೀರ್ತಿಗೆಯೆಂಬುಗ್ರದೇವತೆ ಬೆಸಸು ಬೆಸಸೆಂದು ಬೆಸನಂ ಬೇಡೆ ಪಾಂಡವರನೆಲ್ಲಿವೊಕ್ಕೊಡಂ ಕೊಲ್ಲೆಂದೊಡಂತೆಗೆಯ್ವೆನೆಂದು ಪೋಗೆಲ್ಲಿಯುಮಱಸಿ ಕಾಣದೆ ಕೊಳನ ತಡಿಯೊಳ್ ಬಿಟ್ದಿರ್ದ ನಾಲ್ವರುಮಂ ಕಂಡು ಬಾಪ್ಪು ಬಟ್ದೆನೆಂದು ತಿನಲ್ ಸಾರ್ವಾಗಳವರ್ಗಳ್ಗನಿತಂ ಮಾಡಿದ ದೈವಂ ಪ್ರತ್ಯಕ್ಷಮಾಗಿ ಗಜಱಿ ಗರ್ಜಿಸುತ್ತುಂ ಬಂದು

ಎಲೆ ಪಿಱಿತಿನಿ ಪೋ ಮುಟ್ಟದೆ
ತೊಲಗೀ ನಾಲ್ವರ್ಕಳಸುವನವರ್ಗಳ ಮೆಯ್ಯಿಂ
ತೊಲಗಿಸಿ ಮುನ್ನಮೆ ಕಾದಿ
ರ್ದಲಂಘ್ಯಬಲನೆನಿಸಿದೆನಗೆ ನೀನಗ್ಗಳಮೇ ೩೨

ಅದಲ್ಲದೆಯುಂ ನೀನೆ ಜಾತಿದೇವತೆಯಪ್ಪೊಡೆನ್ನೆಂಜಲನೆಂತು ತಿಂಬೆಯೆಂಬುದುಂ ಪಾಂಡವರ್ ಮುನ್ನಮೆ ನಿನ್ನ ಕೆಯ್ಗೆ ವಂದರೆನಗಮಾ ಬೆಸಂ ತಪ್ಪಿದುದಾನಾರಂ ತಿಂಬೆಂ ಪೇೞೆನೆ ನಿನ್ನನಾವನೊರ್ವನಕಾರಣಂ ಪುಟ್ಟಿಸಿದನಾತನನೆ ತಿನ್ನುಮೆಂಬುದುಮಂತೆ ಗೆಯ್ವೆನೆಂದು ಪೋಗಿ

ಕನಕನ ಬೇಳ್ವೆ ತಗುಳ್ದುದು
ಕನಕನನೆಂಬೊಂದು ಮಾತು ಧರೆಗೆಸೆಯೆ ಸುಯೋ
ಧನನ ಪುರೋಹಿತನಪ್ಪಾ
ಕನಕಸ್ವಾಮಿಯನೆ ಮುನಿದು ಕೀರ್ತಿಗೆ ತಿಂದಳ್ ೩೩

ಅನ್ನೆಗಮಿತ್ತ ಕೃತಾಂತನಂದನಂ ತನ್ನ ನಾಲ್ವರ್ ತಮ್ಮಂದಿರುಂ ಬಾರದೆ ತಡೆದುದರ್ಕೆ ಚಿಂತಾಕ್ರಾಂತನಾಗಿ ಅಬ್ಜಾಕರಕ್ಕೆಯ್ದೆವಂದು ಬೞಿಸಿಡಿಲ್ ಪೊಡೆಯೆ ಕೆಡೆವ ಕಾಲತರುಗಳಿರ್ಪಂತಿರ್ದ ನಾಲ್ವರ್ ತಮ್ಮಂದಿರುಮಂ ಕಂಡು ಬೆಕ್ಕಸಂಬಟ್ಟು ಆರಿಂದಮಿವರ್ಗಿದಾಯ್ತೆಂದು ಬೞಿಯುವಸಾರಂಯ್ವೆನೆಂದು ನೃಪತಿ ನೀರಂ ಕುಡಿಯಲೊಡರಿಸಿದಾಗಳ್

ಮರುಳಾಗದೆನ್ನ ನುಡಿಗು
ತ್ತರಮಂ ಮುನ್ನಿತ್ತು ಕುಡಿಯೆ ಕಜ್ಜಂ ನಿನಗು
ತ್ತರಿಸುಗುಮಂತಲ್ಲದಿವಂ
ದಿರಂತೆ ನೀನುಂತೆ ಮೂರ್ಖನಾಗದಿರರಸಾ ೩೪

ಎಂಬುದುಮೆನ್ನ ತಮ್ಮಂದಿರ್ಗಿನಿತು ಮಾಡಿದ ದಿವ್ಯಮೀ ದಿವ್ಯಮಕ್ಕುಮೆಂದದಱ ಬೆಸಗೊಂಡುದರ್ಕೆಲ್ಲಂ ಮಱುಮಾತುಗುಡುವುದುಂ ಮೆಚ್ಚಿ ತನ್ನ ಸ್ವರೂಪಮಂ ತೋಱಿ

ಕನಕನ ಬೇಳ್ವೆಯಿಂದೊಗೆದ ಕೀರ್ತಿಗೆಯಂ ನಿನಗಪ್ಪಪಾಯಮಂ
ನೆನೆದು ಮದೇಭರೂಪಮನೆ ತೋಱಿ ನಿಜಾಶ್ರಮದಿಂದಗಲ್ಚಿ ನಿ
ನ್ನನುಜರನೀಯುಪಾಯದೊಳೆ ಕೀರ್ತಿಗೆಯೊಡ್ಡಿಸೆ ಕಾದೆನಾಂ ಕೃತಾಂ
ತನೆನೆನಗಮ್ಮ ನೀಂ ಮಗನಯಿನ್ ಪೆಱತೇಂ ನಿನುತ್ತರೋತ್ತರಂ ೩೫

ಎಂದು ಮಱಿಕೆಂದಿದಿರನೆತ್ತುವಂತೆ ನಾಲ್ವರುಮನೆತ್ತಿ ತಾಂ ಮುನ್ನಂ ತಂದರಣಿಯಂ ಕೊಟ್ಟು ಕೃತಾಂತನಂತರ್ಧಾನಕ್ಕೆ ಸಂದಂ; ಧರ್ಮತನೂಜನುಮನುಜರ್ ಸಹಿತಂ ನಿಜನಿವಾಸಕ್ಕೆ ವಂದರಣಿಯಂ ಪಾರ್ವರ್ಗೆ ಕೊಟ್ಟು ಕೆಲವು ದಿವಸಮಿರ್ದು, ವನವಾಸಕ್ಕೆ ವಂದು ಪನ್ನೆರಟ್ಬರಿಸಂ ನೆಱೆಯೆ ಶತ್ರುಗೆ ಶತ್ರು ಮತ್ಸ್ಯನದಱಿಂದಜ್ಞಾತವಾಸಮಂ ರೂಪಪರಾವರ್ತನದಿಂ ವಿರಾಟಪುರಮಂ ಪೊಕ್ಕು ನೀಗಲ್ ಧೌಮ್ಯಪುರೋಹಿತಂಬೆರಸಯ್ವರುಮಾಳೋಚಿಸಿ, ತಮ್ಮಯ್ವರುಂ ಪಾಂಚಾಳಿವೆರಸು ಪೋದ ದೆಸೆಯುನಾರುಮಱಿಯದಂತು ದ್ವೈತವನಮಂ ಪೊಱಮಟ್ಟು ಜಗುನೆಯಂ ಪಾಯ್ದು ಮೂಡವೊಗದೆ ಪಯಣಂಬೋಗಿ ಮತ್ಸ್ಯದೇಶಮಂ ಪುಗುತಂದು ವಿರಾಟಪುರಮನೆಯ್ದೆವಂದು ತಮ್ಮ ದಿವ್ಯಾಯುಧಂಗಳೆಲ್ಲಮನಾ ಪುರೋಪವನದ ಪಿತೃವನದ ಕೆಲದ ಶಮೀವೃಕ್ಷದ ಮೇಲೆ ಪುರುಷಾಕೃತಿಯಾಗಿ ನೇಲ್ಗಟ್ಟಿ ಪೆಣಂಗಳೆಲ್ಲಮನವಱ ಮೇಲೊಟ್ಟಿ ಪರೆದೋರ್ರೋರ್ವರೊಂದೊಂದು ಬಟ್ಟೆಯೊಳ್ ಬೇಱೆವೇಱೆ ಪೋಗಿ ಪೊಟಿಲಂ ಪೊಕ್ಕು, ಧರ್ಮಪುತ್ರಂ ಧರಾಮರವೇಷದೊಳ್ ಕಂಕಭಟ್ಟನೆಂದೆನಿಸಿ ವಿರಾಟನಂ ಕಂಡಾಶೀರ್ವಾದಮಂ ಕುಡೆ ವಿರಾಟನಾತನ ಭದ್ರಾಕಾರಮುಮಂ ಮೃದುಮಧುರ ಗಂಭೀರವಾಣಿಯುಂ ಕಂಡು ಕಂಕಭಟ್ಟನನಿಱಿಸಿದಂ; ಭೀಮಸೇನಂ ಬೋನವೇಟಿಗೆಯಂ ಸಟ್ಟುಗಮುಮನೊರ್ವ ಪರಿಚಾರಕನಿಂ ಪಿಡಿಯಿಸಿಕೊಂಡು ವಲ್ಲಲನಾಮಮಂ ಪೊತ್ತು ಬಂದನಂ ರಾಜಂ ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದಂ; ಅಂತೆ ನಕುಳಂ ವಿರಾಟನಂ ಕಂಡು ತಂತ್ರಪಾಳವೆಸರೊಳ್ ಮಾಸಾದಿಯಾಗಿರ್ದಂ; ಸಹದೇವಂ ಗೋಪಾಳವೇಷದೊಳ್ ಬಂದು ಕಂಡವನ ಗೋಮಂಡಳಾಧ್ಯಕ್ಷನಾಗಿರ್ದಂ; ಮುಳಿಸಿಂ ರಂಭೆಯ ಕೊಟ್ಟ ಶಾಪಮನದಂ ನೀಗಲ್ಕಮಾಗಳ್ ಬೃಹಂದಳೆಯಾಗಿ ವಿಕ್ರಮಾರ್ಜುನಂ ವಿರಾಟನ ಮಗಳಪ್ಪುತ್ತರೆ ಮೊದಲಾಗೆ ಪಲವುಂ ಪಾತ್ರಂಗಳನಾಡಿಸುತ್ತುಮಿರ್ದಂ; ಪಾಂಚಾಳರಾಜತನೂಜೆಯುಂ ರೂಪುಗರೆದು ಸೈರಂಧ್ರೀವೇಷದೊಳ್ ಪೋಗಿ ವಿರಾಟನ ಮಹಾದೇವಿ ಸುದೇಷ್ಣೆಯಂ ಕಂಡು ವಿವಿಧಗಂಧಗಳನವಯವದೊಳ್ ಮಾಡುವ ಘಟ್ಟಿವಳ್ತಿಯೆಂದು ಪೇೞ್ದು

ಪೆಸರೊಳ್ ಸೈರಂಧ್ರಿಯೆನಟಿ
ವೆಸನದೆ ದೆಸೆಯಱಿಯೆನೆನಗೆ ಗಂಧರ್ವರ ಕಾ
ಪಸದಳಮುಂಟಿರಿಸುವೊಡಾಂ
ಬೆಸಕೆಯ್ವೆಂ ನಿನ್ನ ಬೆಸಸಿದಂದದೊಳಿರ್ಪೆಂ ೩೬

ಎಂದು ವಿರಾಟನ ಮಹಾದೇವಿಗಾವಗಮಣುಗೆಯಾಗಿರ್ದಳ್; ಸುದೇಷ್ಣೆಯೊಡವುಟ್ಟಿದಂ ಕೀಚಕನೆಂಬಂ ತಮ್ಮಕ್ಕನಂ ಕಾಣಲ್ ಪೋದಾತಂ ಮಹಾದೇವಿಯ ಕೆಲದೊಳಿರ್ದ ಘಟ್ಟಿವಳ್ತಿಯಂ ಭೋಂಕನೆ ಕಂಡು

ಮಾಸಿದ ರೂಪ ನೋೞ್ಪೊಡರೆಮಾಸಿದ ಚಿತ್ರದ ಪೆಣ್ಣ ರೂಪುಮಂ
ಮಾಸಿಸೆ ನಾಡೆ ಮಾಸರಿಕೆಯಂ ಪಡೆದಪ್ಪುದು ಕಂಡ ಕಣ್ಗಳೊಳ್

ಸೂಸುವ ಮಾಱ್ಕೆಯಿಂ ಪೊಱಗೆ ಪೊಣ್ಮುವುದಂದಮಿದೆಂತೊ ಕಾಯ್ದು ಕೈ
ವೀಸುವ ಕಾವನಂದಮಿವಳೇಂ ಕುಲನಾರಿಯೊ ವಾರನಾರಿಯೋ ೩೭

ಎಂದು ಸೈರಂಧ್ರಿಯಂ ನೋಡಿ ಸೈರಿಸಲಾಱದೆ ಬೇಟಮಗ್ಗಳಿಸೆ ನಿಜನಿವಾಸಕ್ಕೆ ಬಂದಕ್ಕನೆನಗೆ ತನ್ನ ಘಟ್ಟಿವಳ್ತಿಯ ಕೆಯ್ಯೊಳಪೂರ್ವ ವಿಲೇಪನಂಗಳನಟ್ಟುವುದೆಂದಟ್ಟುವುದುಂ ತಮ್ಮನುಪರೋಧಕ್ಕಾಱದೆ ಸೈರಂದ್ರಿಯಂ ಪೋಗಲ್ವೇೞ್ವುದುಮಾಕೆಯವನ ಮನದೊಳ್ ಪಟುವಗೆಯನಱಿಯದಂತೆಗೆಯ್ವೆನೆಂದು ಬರೆ

ಮದನಾಸ್ತ್ರಂ ಖರಸಾಣೆಗಾಣಿಸಿದುದೆಂಬಂತಾಗೆ ನಿನ್ನೊಂದು ಕಂ
ದಿದ ಮೆಯ್ಯೆನ್ನಯ ತೋಳೊಳೊಂದೆ ಸಿರಿಯಂ ನೀನುಯ್ದು ತೊೞ್ತಾಳ್ದು ರಾ
ಗದಿನೆನ್ನೊಳ್ ಸುಕಮಿರ್ಪುದೆನ್ನ ನುಡಿಯಂ ನೀಂ ಕೇಳ್ದುಮೊಂದಂಚೆಯಂ
ಪೊದೆದೊಂದಂಚೆಯನುಟ್ಟ ನಿನ್ನಿರವಿದೇನಂಭೋಜಪತ್ರೇಕ್ಷಣೇ ೩೮

ಎಂದು ಮತ್ತಮೆನಿತಾನುಂ ತೆಱದ ಲಲ್ಲೆಯಿನಳಿವಂ ತೋಱಿ ಬಾಯಟೆದು ತನ್ನ ನುಡಿಗಳಳಿಪಿಳಿವೋಗೆ ಸೈರಿಸಲಾಱದೆ ಪಿಡಿದು ಪೊಯ್ದು ದುರಾತ್ಮನಂ ಎಂತಾನುಂ ಬಾರಿಸಿ ಪರಿಭವಾನಿಲನಿಂ ಶೋಕಾನಲನಿರ್ಮಡಿಸೆ ತಳೋದರಿ ವೃಕೋದರನಲ್ಲಿಗೆ ವಂದು ಕಟ್ಟೇಕಾಂತದೊಳ್ ಈ ಪರಿಭವಮನಿದಂ ನೀಗು ನೀಂ ಭೀಮಸೇನ ಎಂಬುದುಂ

ಮುಳಿಸೆಂಬುದೆನಗೆ ಕೌರವ
ರೊಳೆ ಪಿರಿದಾ ಬಲಿದ ಬಯಕೆಯಂ ಮಾದುರದೊಳ್
ಕಳೆವಂತನ್ನೆಗಮಿವನೊಳ್
ಕಳೆವೆಂ ನಿನ್ನೊಂದು ಮುಳಿಸನಬ್ಜದಳಾಕ್ಷೀ ೩೯

ಎಂದು ನೀನೀ ವಿರಾಟನ ನಾಟಕಶಾಲೆಯುನೆ ಸಂಕೇತನಿಕೇತನಂ ಮಾಡಿ ನೇಸರ್ಪಡಲೊಡಮೆನ್ನಿಂ ಮುನ್ನಮೆ ಪೋಗಿರ್ಪುದಾನಲ್ಲಿಗೆ ವರ್ಪನೆಂದಾ ಪಾಣ್ಬನಂ ನಂಬೆ ನುಡಿದಾ ಪೊೞ್ತಿಂಗೆನ್ನನಲ್ಲಿಗೆ ವರಿಸವಂಗೆ ತಕ್ಕುದನಾನೆ ಬಲ್ಲೆನೆಂದು ನುಡಿದು ಕಟಿಪಲ್, ಮಱುದೆವಸಂ ಕೀಚಕಂಗೆ ನಂಬೆ ನುಡಿದು ವಿರಾಟನ ನಾಟಕಶಾಲೆಯನೆ ಪೂರ್ವಸೂಚಿತಕ್ರಮದೊಳ್ ಕುಱುಪುವೇೞ್ದು ಭೀಮಸೇನಂಗೆ ತದ್ವೃತ್ತಕಮನಱಿಪಿದೊಡೆ ಬಾಹುಯುದ್ಧಸನ್ನದ್ಧನಾಗಿ ಕಲಿಗಂಟಿಕ್ಕಿ ಗಂಡುಡೆಯುಮನುಟ್ಟು ಮೇಲುದನಿಟಿಯೆ ಮುಸುಕಿಟ್ಟು ಪೋಗಿ ಗುಣಣೆಯ ಬಾಗಿಲೊಳ್ ದ್ರೌಪದಿಯನಿಱಿಸಿ ತಾನೊಳಪೊಕ್ಕು ಕಾದಿರ್ದನ್ನೆಗಂ ಕೀಚಕಂ ನಾಟಕಶಾಲೆವೊಕ್ಕು ಎಯ್ದೆವಂದು ಮುಸುಕಂ ತೆಗೆದಾಗಡೆ ಮೇಲೆವಾಯ್ದು ಬಲ್ಲಡಿಗನನವುಂಕಿ ಮಲ್ಲಯುದ್ಧದೊಳ್ ತನಗವಂ ಸಮಾನಬಳನಪ್ಪುದಱಿಂ ಪಿರಿದುಂ ಪೊೞ್ತು ಸಲ್ತರ್ಪಿನಂ ಪೋರ್ದು ಸಹಸ್ರಬಲನೆನಿಪ ಸಿಂಹಬಲನನಶ್ರಮದೊಳೇ ಕೊಂದು ಜವಂಗೆ ಬಾಣಸುಗೆಯ್ದಂದಿನಂದದೊಳೆ ಬಾಣಸಿನ ಮನೆಯೊಳ್ ಬಂದಿರ್ದನಿತ್ತ

ದ್ರೌಪದಿಯುಮುಪಾಯದೊಳ್ ಗುಣಣೆಯ ಮನೆಯ ಮುಂದನೆ ನಿಂದು

ಗಂಧರ್ವವನಿತೆಯೆಂ ನಿ
ರ್ಬಂಧಂ ಬೇಡಳಿಪೆ ಸಾವೆಯೆನೆ ಮಾಣದೆ ಕಾ
ಮಾಂಧಂ ಕೀಚಕನಾಟಿಸಿ
ಗಂಧರ್ವರಿನಟಿದನೆನಗೆ ದೂಱಿಪ್ಪಿನೆಗಂ ೪೦

ಎಂದು ಗಗ್ಗರಿಕೆಗೊಳ್ವ ಸರಮಂ ಕರ್ಣಪರಂಪರೆಯಿಂ ಕೇಳ್ದು ಸಿಂಹಬಲ ನೊಡವುಟ್ಟಿದರ್ ನೂರ್ವರ್ ಕೀಚಕರುಂ ಪರಿತಂದು ಎಲ್ಲಮೀ ಡಾವುರಡಾಕಿನಿಯಿಂದವಾದುದೀಕೆಗೆಮ್ಮಣ್ಣಂಗಮೊಂದೆ ವಿಧಿಯಂ ಮಾಟ್ಟಿಮೆಂದಾಕೆಯಂ ಮುಂದಿಟ್ಟು ಪೋದರ್; ಆ ಕಳಕಳಮಂ ಭೀಮಸೇನಂ ಕೇಳ್ದವಂದಿರೊಡನೆ ರೂಪುಗರೆದು ಪೊಟಿಲಂ ಪೊಱಮಟ್ಟು ಅಳವಿಗಟಿಯೆ ಕೊರ್ವಿದ ಕೀಚಕನಿಕಾಯಧ್ವಂಸಮಂ ಮಾಡಿದಂ

ಪೊಟಿಲ ಜನಂಗಳ್ ಗುಜುಗುಜುಗೊಂಡು ಕೀಚಕನ ಪಡೆಮಾತನೆ ನುಡಿಯೆ ಮಹಾದೇವಿಯುಂ ಪೇಡಿ ಸತ್ತಂತೇನುಮನೆನನಲಱಿಯದೆ ನಾಣ್ಚಿ ತನ್ನೊಳೆ ಮೂಗಟ್ಕಿಯನಟ್ಟು ಕೆಮ್ಮನಿರ್ದಳಿತ್ತ ದುರ್ಯೋಧನನ ಗೂಢಪ್ರಣಿಧಿಗಳಾ ಮಾತಂ ಜಲಕ್ಕನಱಿದು ನಾಗಪುರಕ್ಕೆ ವಂದು ಸುಯೋಧನಸಭಾಮಧ್ಯದೊಳಿಂತೆಂದು ಬಿನ್ನಪಂಗೆಯ್ದರ್: ದೇವರದೊಂದು ಪುಣ್ಯಬಲದಿಂ ಗಂಧರ್ವಯುದ್ಧಾಗ್ರದೊಳ್ ನೂರ್ವರು ಕೀಚಕರುಂ ಮಡಿದರ್, ಅದುಕಾರಣದಿಂದಾ ವಿರಾಟನ ಮಂಡಲಂ ಗೋಮಂಡಲದಂತೆ ಹೇಳಾಸಾಧ್ಯಮಾಗಿ ಕೈಗೆ ವರ್ಕುಮೆಂಬುದುಂ; ಇದು ಚೋದ್ಯಂ ಸಿಂಹಬಲನಂ ಕೊಲ್ವನ್ನರಾರ್ ಭೀಮನಲ್ಲದವರ್, ಅದಱಿಂ ಪಾಂಡವರ್ಯೈವರುಂ ವಿರಾಟಪುರದೊಳಿರ್ದರಾಗಲೆವೇಟ್ಕುಮವರಿರ್ದರಪ್ಪೊಡೆ,

ಅಱಿಯಲೆವೇಟ್ಬುದಿರ್ದೆಡೆಯನಿರ್ದೆಡೆಯಿಂ ತೆಗೆದಾಜಿರಂಗದೊಳ್
ನಿಱಿಸಲೆ ವೇಟ್ಬುದಂತವರನಂತವರಿರ್ಪೆಡೆಯುಂ ವಿರಾಟನಿ
ರ್ಪಱಿಕೆಯ ಪಟ್ಟಣಂ ನಮಗಿದೇವಿರಿದಪ್ಪುದು ತಳ್ವದೆಯ್ದಿ ನಾಂ
ತುಱುವನೆ ಕೊಳ್ವಮಂತು ತುಱುಗೊಂಡೊಡೆ ಪಾಂಡವರಿರ್ಪ ಗಂಡರೇ ೪೧

ಎಂದು ಕೌರವಂ ಗೋಗ್ರಹಣಮನೆ ನಿಶ್ಚಯಿಸಿ ವಿರಾಟನ ದಾಯಿಗಂ ತ್ರಿಗರ್ತಾಧೀಶಂ ಸುಶರ್ಮನುಮಂ ನಾಲ್ಸಾಸಿರ ರಥಂಬೆರಸು ದಕ್ಷಿಣದಿಶಾಭಾಗಕ್ಕೆ ವೇಟ್ದು ತುಱುವಂ ಕೊಳಿಸಿದಾಗಳ್; ಇದು ನಮ್ಮನಾರಯಲೆ ವೈರಿಯ ಮಾಡಿದ ಗೊಡ್ಡಮಿಲ್ಲಿ ಮಾಣ್ದಿರಲಾಗ ಎಂದು ತಮ್ಮಯ್ವರುಮಾಳೋಚಿಸಿ ವಿಕ್ರಮಾರ್ಜುನನಂ ಪೆಱಗಣ ಕಾಪಿಂಗಿರಲ್ವೇಟ್ದು ನಾಲ್ವರುಂ ನಾಲ್ಕುಂ ಸಮುದ್ರಂಗಳೆ ಮೇರೆದಪ್ಪಿದಂತೆ ವಿರಾಟನೊಳ್ ಕೂಡಿ ಪೋಗಿ ತಾಗಿದಾಗಳ್; ಅನ್ನೆಗಮತ್ತ ಸುಯೋಧನಂ ಸಮಸ್ತಸಾಧನಂ ಬೆರಸು ಬಂದು ವಿರಾಟನ

ಗೋಕುಲಮಂ ಮುತ್ತಿ ಮೊಗೆದಂ; ಮಚ್ಚರದಿನೊರ್ವರೊರ್ವರನುಚ್ಚಳಿಸಿ ತಗುಳ್ದು ಗೋವರಾರ್ದಿಸೆ

ತುಱು ಪರಿವಾಗಳೆಮ್ಮ ಪೆಣನಂ ತುೞಿದುಂ ಪರಿಗುಂ ದಲೆಂದು ಚೀಃ
ತುಱುಗೊಳೆ ಬಾೞ್ಮೆಂದು ತುಱುಗೋಳೊಳೆ ಸಾವುದು ಸೈಪಿದೆಂದು ಪಾ
ಯ್ದಜೀಕೆಯ ಗೋವರಣ್ಮಿ ಬರೆ ಪಾಯಿಸಿ ಘೋಷಿಯಿಲರ್ ತಗುಳ್ದು ತ
ತ್ತಱಿ ತಱಿದಿಕ್ಕಿ ದೇಗುಲಕೆ ಪೆರ್ಮರನಂ ಕಡಿವಂತೆ ಮಾಡಿದರ್ ೪೨

ಆಗಳೊರ್ವ ಗೋವಳನನಿಬರ ಸಾವುಮಂ ಕಂಡು ತುಱುವ ಪೋಗಿಂಗಾಱದೆ ವಿರಾಟಪುರಕ್ಕೆ ವಂದುತ್ತರಂಗೆ ಪೇೞ್ದಾಗಳ್ ವಿಕ್ರಮಾರ್ಜುನಂ ಮತ್ಸ್ಯಸುತನುತ್ತರನಂ ಸಾರಥಿಮಾಡಿ ಕಿಱಿದಂತರಮಂ ಪೋಗೆವೋಗೆ ಸುಯೋಧನಸೈನ್ಯಸಾಗರಂ ಕಣ್ಗೆ ಭೀಕರತರಮಾಗೆ ಉತ್ತರಂ ಬೆರ್ಚಿ ಬೆಗಡುಗೊಂಡು ರಥದಿಂದಿೞಿದೋಡೆ ಕಿರೀಟಿ ತನ್ನನಱಿಪುತ್ತೆ ಶಮೀದ್ರುಮದಲ್ಲಿಗಾತನಂ ಉಯ್ದು ಕೈದುವೆಲ್ಲಮಂ ನೀಡಿಸಿ ಮುಂಗೆಯ್ಯ ಬಳೆಗಳನೊಡೆದು ಕಳೆದು

ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಡೆ ಬಿಟ್ಟುದಂದು ಗಂ
ಡುಡೆಯುಡೆ ಗಂಡುಗೆಟ್ಟುದು ನೆಗೞ್ತೆಯ ಗಾಂಡಿವಮಂ ತಗುಳ್ದು ಜೇ
ವೊಡೆಯೆ ಸಿಡಿಲ್ ಸಿಡಿದು ಪೊಡೆವಂತೆವೊಲಾಯ್ತನೆ ಗಂಡಗಾಡಿ ನೂ
ರ್ಮಡಿ ಮಿಗಿಲಾದುದು ರಥಮನೇಱಲೊಡಂ ಪಡೆಮೆಚ್ಚೆಗಂಡನಾ ೪೩

ಅನ್ನೆಗಮತ್ತ ಪರಸೈನ್ಯಭೈರವನ ಬರವಿಗಂಗಳ್ಕಿ ಗಾಳಿಗೊಡ್ಡಿದ ಸೊಡರಂತೆ ನಡನಡನಡುಗೆ, ಸುಯೋಧನಂ ಪಿರಿದುವ್ಯಾಕುಳಂ ಬೆರಸು ಗೋಕುಲಮಂ ಕೊಂಡುಪೋಗೆ ಪೋಗಲೀಯದೆ ಉತ್ತರನಂ ರಥಮಂ ಚೋದಿಸೆಂದು ಮುಟ್ಟೆವಂದು ಆರ್ದೆಚ್ಚು ತನ್ನಂಕದಂಬುಗಳೊಂದೊಂದಱಿಲ್ ಲಕ್ಕ ಬಲಮಂದಟ್ಟಾಡೆ ದುರ್ಯೋಧನಂ ಮಿಗೆ ಸೋಲ್ತೊಡೆ ವಿದ್ವಿಷ್ಟವಿದ್ರಾವಣಂ ತುಱುಗಳಂ ಮಗುೞ್ಚಿ ಮಗುಱದೆ ತನಗಿದಿರೊಡ್ಡಿ ನಿಂದರಿನ್ನೃಪಬಲಮನರೆದು ಸದೆದು ತೇರನೆಯ್ದೆ ಅದಂ ಕಂಡಂಗರಾಜಂ ತನ್ನ ಬಲ್ಲಾಳ್ತನಮಂ ನೆನೆದು ತನ್ನ ತಮ್ಮಂ ವಿಕರ್ಣಂಬೆರಸರ್ಣವನಿನಾದದಿಂದಾರುತ್ತುಂ ಬಂದು ಗುಣಾರ್ಣವನೊಳ್ ತಾಗೆ, ನರಂ ಕರ್ಣನ ವಕ್ಷಮನೆಚ್ಚು ಒಂದೆ ವಿಕರ್ಣದಿಂ ಅಂಕದ ವಿಕರ್ಣನಂ ಕೊಂದೊಡೆ ತಕ್ಕಿನ ಕುಂಭಸಂಭವ ನದೀಜ ಕೃಪ ಪ್ರಮುಖ ಪ್ರವೀರರ್ ಬಿಗುರ್ತಿರದಾಂತು ಕದನತ್ರಿಣೇತ್ರನನಿದಿರ್ಚಲಾಱದೆ ಸೆರಗಂ ಬಗೆದೋಡೆ

ಮನದೊಳ್ ಕರುಣಿಸಿ ಸಂಮೋ
ಹನಾಸ್ತ್ರದಿಂದೆಚ್ಚು ಬೀರರಂ ಬೀರದ ಶಾ
ಸನಮನೆ ನಿಱಿಸುವ ಬಗೆಯಿಂ
ದನಿಬರ ಪಟಿವಿಗೆಯನೞಿದುಕೊಂಡಂ ಹರಿಗಂ ೪೪

ಅಂತು ವರಶಶಿವಿಶದಯಶಃಪಟಂಗಳಂ ನನ್ನಿಪಟಂಗೊಳ್ವಂತೆ ವಿವಿಧ ಧ್ವಜಪಟಂಗಳಂ ಕೊಂಡು ಗೆಲ್ಲಂಗೊಂಡು ತಾನುಮುತ್ತರನುಂ ವಿರಾಟಪುರಕ್ಕೆ ಮಗುಳ್ದುವಂದರ್;

ಗುಡಿಯಂ ಕಟ್ಟಿಸಿ ಪೊಯ್ಸಿ ಬದ್ದವಣಮಂ ಪ್ರಾಣಕ್ಕಮರ್ಥಕ್ಕಮಿ
ನ್ನೆಡಱೇನೇತಱೊಳಪ್ಪುದೆಂದು ಕುರುಡಂ ಕಣ್ಬೆತ್ತವೋಲ್ ರಾಗದಿಂ
ದೊಡೆಯಂ ತಾಂ ಬಗೆದುಳ್ಳ ಸಾರಧನಮಂ ಮುಂದಿಟ್ಟತಿಪ್ರೀತಿಯಿಂ
ಪಡೆದಂ ಮತ್ಸ್ಯಮಹೇಶನಂದು ಮನದೊಳ್ ತತ್ಪಾಂಡುಪುತ್ರರ್ಕಳಾ ೪೫

ಕೇಳಿರೇ ಕಂಕಭಟ್ಟನೆ ಯುಧಿಷ್ಠಿರಂ ವಲಲಂ ವೃಕೋದರಂ
ಬಾಳೆಯರಂ ದಲಾಡಿಪ ಬೃಹಂದಳೆ ಫಲ್ಗುಣನಂಕದಶ್ವಗೋ
ಪಾಳಕರೆಂಬರಾ ನಕುಳನುಂ ಸಹದೇವನುಮಾದರೇಂ ಮಹೀ
ಪಾಳರೊಳಾದ ಕಾರ್ಯಗತಿಗಳ್ ಬಗೆಯಲ್ಕೆ ಬಹು ಪ್ರತಾರಮೋ ೪೬

ಎಂಬ ಪುರಜನಾಳಾಪಂಗಳ್ ನೆಗೞ್ ವಿರಾಟನ ಮಹಾದೇವಿ ಸುದೇಷ್ಣೆ ಕೃಷ್ಣೆಗಾಗಳೆಗೆಱಗಿ ಪೊಡೆವಡೆ ಧರ್ಮತನೂಜಂಗೆ ವಿರಾಟನವನತಮಣಿಮಕುಟನಿಂತೆಂದಂ: ಉತ್ತರೆಗೆ ವಿವಾಹಮಂಗಳಮನಿನ್ನಭಿಮನ್ಯುಗೆ ಮಾಡುವುದೆನೆ ಚಾಣೂರಾರಿಯಂ ಸುಭದ್ರೆಯು ಮನಭಿಮನ್ಯುವುಮನೊಡಗೊಂಡು ಬರ್ಪುದೆಂದು ಬೞಿಯನಟ್ಟೆ ಬರವಱಿದು ಇದಿರ್ವೋಗಿ ಶುಭಲಗ್ನೋದಯದೊಳ್ ವೀರನಂ ವೀರಶ್ರೀಯೊಳ್ ನೆರಪುವಂತುತ್ತರೆಯೊಳ್ ನೆರಪಿ ಕಂಸಧ್ವಂಸಿಯಂ ದ್ವಾರಾವತಿಗೆ ಕೞಿಪಿ;

ತಮ್ಮ ಪೂಣ್ದ ವರ್ಷಾವಧಿ ನೆಱೆದೊಡಮರಾತಿಗಳ್ಗಂತ್ಯಕಾಲಂ ನೆಱೆಯದರ್ಕುಮ್ಮಳಿಸಿ ಯುಧಿಷ್ಠಿರಂ ಪನ್ನಗಶಯನನಂ ನಮಗೆ ಮಾಡುವುದುಚಿತಮೆಂದು ವಿಕ್ರಮಾರ್ಜುನನಂ ದ್ವಾರಾವತಿಗಟ್ಟಿದೊಡೆ [ಅಂಬುಜೋದರಂ] ವಿಕ್ರಮಾರ್ಜುನನುಂ ತಾನುಂ ವಿರಾಟಪುರಕ್ಕೆ ವಂದು ಮಜ್ಜನಭೋಜನಾದಿಗಳೊಳ್ ವಿಗತಪರಿಶ್ರಮರಾಗಿ ಮಱುದೆವಸಂ ಮಂತ್ರಶಾಲೆಯಂ ಪೊಕ್ಕಿರ್ದಾಗಳ್

ಕಾದದೆ ಪನ್ನಗಧ್ವಜನಿಳಾತಳಮಂ ಕುಡನಾನುಮಿರ್ಪುದುಂ
ಸೋದರರೆಂದು ನಾಣ್ಚಿ ಸೆಡೆದಿರ್ದಪೆನಿರ್ದೊಡವಸ್ತುಭೂತನೆಂ
ದಾದಮೆ ಭೂತಳಂ ಪೞಿಯೆ ತೇಜಮೆ ಕೆಟ್ಟಪುದಂತಿದರ್ಕೆ ಪ
ದ್ಮೋದರ ನೀನೆ ಪೇೞ್ ಬಗೆದು ಕಜ್ಜಮನೀಗಳೆ ದಿವ್ಯಚಿತ್ತದಿಂ ೪೭

ಎಂದು ಧರ್ಮತನಯನೆಂಬುದುಂ ಕೃಷ್ಣಂ ಸಾಮಮಂ ಮುಂ ಪ್ರಯೋಗಿಸದೇ ಗೆಟ್ಟಪುದೆಂದು ದಂಡಮನೆ ಮುಂ ಮುಂತಿಕ್ಕುವಂ ಮಂತ್ರಿಯೇ ಅದಱಿಂದಂ ನೀನುಮಿಳೆಯಂ ಮುಂ ಬೇಡಿಯಟ್ಟಟ್ಟೆ ಮಾರ್ಮಲೆದಾತಂ ಕುಡದಿರ್ದೊಡಂದಿಱಿಯ ನೀನೆಂದು ನುಡಿದ ಮಂದರಧರನ ಮುಡಿಗೆ ಕಿನಿಸಿ ಕಿಂಕಿಱಿವೋಗಿ

ತೋಡುವೆನೊರ್ವನೊಳ್ಗರುಳನುರ್ವಿಗೆ ನೆತ್ತರನೆಯ್ದೆ ಪೀರ್ದು ವಿ
ರ್ದಾಡುವೆನೊರ್ವನೂರುಗಳನೆನ್ನ ಗದಾಶನಿಘಾತದಿಂದೆ ನು
ಗ್ಗಾಡುವೆನೆಂದು ಲೋಕಮಱಿಯುತ್ತಿರೆ ಪೂಣ್ದೆನಗಂತೆ ಸಂತಸಂ
ಮಾಡದೆ ಸಂಧಿಮಾಡಿ ಕುರುಪುತ್ರರೊಳೆನ್ನನೆ ಜೋಡುಮಾಟ್ಪಿರೇ ೪೮

ಎಂದು ಮಸಗಿದ ಮದಾಂಧಗಂಧಸಿಂಧುರದಂತೆ ದೆಸೆಗೆ ಮಸಗಿದ ವಾಯುಪುತ್ರನಂ ಧರ್ಮಪುತ್ರಂ ಸಂತೈಸಿ ರಾಜರಾಜನಲ್ಲಿಗೆ ನಿರ್ವ್ಯಾಜದಿಂ ದಿತಿಜಕುಳವಿಜಯಿಯಪ್ಪಜಿತನನೆ ದೂತಕಾರ್ಯಕ್ಕಟ್ಟೆ, ಕತಿಪಯಪ್ರಯಾಣಂಗಳಿಂ ನಾಗಪುರಮನಾ ನಾಗಶಯನಂ ಪೊಕ್ಕು ವಿದುರಂ ಪಾಂಡವಪಕ್ಷಪಾತಿಯಪ್ಪುದಱಿಂದಾತನ ಮನೆಗೆ ವರೆ ಆತನುಂ ಉಚಿತಪ್ರತಿಪತ್ತಿಗಳಿಂ ಸಂತಸಂಬಡಿಸಿ ಬಂದ ಬರವನಾಗಳೆ ಸುಯೋಧನಂಗಱಿಪುವುದುಂ ರಾಜರಾಜನುಱಿದೆ ಕಿಱುನಗೆನಕ್ಕು ನಾಳಿನೋಲಗದೊಳ್ ತಂದು ಕಾಣಿಸೆಂಬುದುಂ, ಮಱುದಿವಸಂ ನೇಸಱ್ ಮೂಡಿದಾಗಳ್ ಯವರಾಜನಪ್ಪಣುಗ ದುಶ್ಶಾಸನನುಮಂಗ ರಾಜನಪ್ಪಣುಗಾಳ್ ಕರ್ಣನುಮೆರಡುಂ ಕೆಲದೊಳಂ ತೊಡೆ ಸೋಂಕೆ ಕುಳ್ಳಿರಿಸಿ ಪಿರಿದೋಲಂಗಂಗೊಟ್ಟಿರ್ಪನ್ನೆಗಂ ಬಾಗಿಲೊಳ್ ಬಂದಿರ್ದನಂತನ ಬರವಂ ಪಡಿಯಱಂ ಬಿನ್ನಪಂಗೆಯ್ಯೆ ಕುರುರಾಜಂ ಬರವೇಟೆಂಬುದುಂ ಬರ್ಪಂಬುಜೋದರನಂ ಮೆಲ್ಲನೆ ನೋಡಿ ಮೆಯ್ಯಲಸಿದಂತೆಂತಾನುಮೆಟ್ದಿರ್ದು ಕೇಸರಿಪೀಠಾಗ್ರದಿನಪ್ಪಿಕೊಂಡು ಪೊಡೆವಟ್ಟು ಚ್ಚಾಸೀನನಾಗಿರವೇಟ್ದರ್ಘ್ಯಮನಿತ್ತು ತಾಂ ಕುಳ್ಳಿರ್ದು

ಸಂಸಾರದೊಳಿನ್ನೆನ್ನವೊ
ಲೇಂ ಸೈಪಂ ಪಡೆದರೊಳರೇ ನೀಂ ಬರೆ ಪೆಱತೇಂ
ಕಂಸಾರೀ ಯುಷ್ಮತ್ಪದ
ಪಾಂಸುಗಳಿಂದಾಂ ಪವಿತ್ರಗಾತ್ರನೆನಾದೆಂ ೪೯

ಬಂದ ಬರವಾವುದು ಬಿಸ
ವಂದಂ ಬೆಸನಾವುದಾವ ಬೆಸನಂ ಬೆಸಸಲ್
ಬಂದಿರ್ ಬರವಿನೊಳೀಗಳ
ಗುಂದಲೆಯಾಯ್ತೆನಗಮೀಗಳೆಂಬುದುಮಾಗಳ್ ೫೦

ಮನಕತದಿಂದೊಂದೊರ್ವರ
ನಿನಿಸನಗಲ್ದಿರ್ದಿರಿನಿಸೆ ನಿಮಗಂ ತಮಗಂ
ಮುನಿಸುಂಟೆ ಕಾಯ್ದು ಬೆನ್ನೀರ್
ಮನೆಸುಡದೆಂಬೊಂದು ನುಡಿಯವೋಲ್ ಕುರುರಾಜಾ ೫೧

ಪಟ್ಟದ ಮೊದಲಿಗರಾಜಿಗೆ
ಜೆಟ್ಟಿಗರವರೆಂದುಮಾಳ್ವ ಮುನ್ನಿನ ನೆಲನಂ

ಕೊಟ್ಟು ಬೞಿಯಟ್ಟು ನಿನಗೊಡ
ವುಟ್ಟಿದರಾ ದೊರೆಯರಾಗೆ ತೀರದುದುಂಟೇ ೫೨

ಮುನ್ನಿನ ನೆಲನಂ ಕುಡುಗೆಮ
ಗೆನ್ನರ್ ದಾಯಿಗರೆಮೆನ್ನರಂತಲ್ತಿಂತ
ಲ್ತೆನ್ನರ್ ಕರುಣಿಸಿ ದಯೆಯಿಂ
ದಿನ್ನಿತ್ತುದೆ ಸಾಲ್ಗುಮೆಂಬರೆಂಬುದನೆಂಬರ್ ೫೩

ಎಂಬುದು ಸುಯೋಧನಂ ಕ್ರೋಧಾನಲೋದ್ದೀಪಿತಹೃದಯನಾಗಿ ಶೌರ್ಯಮದಾಡಂಬರದೊಳಂಬರಂಬರಂ ಸಿಡಿಲ್ದು

ಪಱಿಪಟ್ಟ ಪಗೆವರಂ ನೆಱೆ
ಪಱಿಪಡಲಣಮೀಯದವರನವರ್ಗಳ ಬಾೞೊಳ್
ನಿಱಿಸಲ್ ಬಗೆದೈ ಕರಮೆನ
ಗುಱಿದಿರ್ಕುಮೆ ನಿನ್ನ ಪೇೞ್ದ ಧರ್ಮಶ್ರವಣಂ ೫೪

ಮುಸಿಯೆನೆ ಸಾಮಮಂ ನುಡಿದು ಭೇದಮುಂಟೊಡೆತಾಗೆ ಮಾಡಿ ಭಿ
ದ್ರಸಲೊಳಪೊಕ್ಕು ಮಿಕ್ಕು ನೆಗೞ್ದುಗ್ರವಿರೋಧಿಗಳಿತ್ತನೆಯ್ದೆ ಬಂ
ಚಿಸಿ ಪೊಱಗಣ್ಗೆ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರ
ಕ್ಕಸಿಯರ ಕಂಡ ಕುಂಬಳದ ಮಾೞ್ಕೆವೊಲಾಗಿರೆ ಮಾಡದಿರ್ಪಿರೇ ೫೫

ನಾಮೆಲ್ಲಮೊಂದೆ ಗರುಡಿಯೊಳೋದಿದ ಮಾನಸರೆವೆಮ್ಮಂ ನಿಮ್ಮಡಿ ಕೆಮ್ಮನೆ ಬೞಲಿಸಲ್ವೇಡ ಬಂದ ಬಟ್ಟೆಯಿನೆ ಬಿಜಯಂಗೆಯ್ಯಿಮೆನೆ ಮುರಾಂತಕನಂತಕನಂತೆ ಮಾಮಸಕಂ ಮಸಗಿ ದುರ್ಯೋಧನನಿಂತೆಂದಂ

ಸೀತೆಯ ದೂಸಱಿಂದೞಿದ ರಾವಣನಂತಿರೆ ನೀನುಮೀಗಳೀ
ಸೀತೆಯ ದೂಸಱಿಂದೞಿಯಲಾಟಿಸಿದೈ ನಿನಗಂತು ಸೀತೆಯೇ
ಸೀತೆ ಕಡಂಗಿ ಕಾಯ್ದು ಕಡೆಗಣ್ಚಿದಳಪ್ಪೊಡೆ ಧಾತ್ರನಿಂ ತೊದ
ಳ್ವಾತಿನೊಳೇನೊ ಪಾಂಡವರ ಕೆಯ್ಯೊಳೆ ನಿನ್ನ ನಿಸೇಕಮಾಗದೇ ೫೬

ಬವರಂಗೆಯ್ವುಮಮೋಘಮೆಂಬ ಬಗೆಯಿಂ ನೀಮೆಲ್ಲಮಾದಂ ರಣೋ
ತ್ಸವದಿಂ ನಿನ್ನೆಯೆ ಪೋದ ಗೋಗ್ರಹಣದಂದೇನಾದಿರಂತಾ ಪರಾ
ಭವಮಂ ಚಿಃ ಮಱೆದಿರ್ದಿರಪ್ಪೊಡಮದೇನೇವೋದುದಿನ್ನುಂ ಗುಣಾ
ರ್ಣವನಿಂ ನಾಳೆಯೆ ಕೇಳದಿರ್ಪಿರೇ ಮಹಾಗಾಂಡೀವನಿರ್ಘೋಷಮಂ ೫೭

ಎಂದು ಕಾಳನೀಳಮೇಘದಂತು ಮಸಗಿ ಗರ್ಜಿಸುವಸುರಕುಳವಿಳಯಕೇತುಗೆ ಫಣಿಕೇತು ಮುಳಿದು ತಳಮಳಿಸಿ ಕಣ್ಣಾಗಣದೆ

ಏಟಿಪ್ಪೋಗು ದೂತನಪ್ಪನ
ಬೇಟ್ಪಿನ ನುಡಿಗೇಳ್ದು ಮುಳಿಯಲಾಗದು ನೀನುಂ
ಮೆಟ್ಪಿಟ್ಟು ವಿದುರನೆಂಬೀ
ತೊಟ್ಪುಟ್ಟಿಯ ಮನೆಯ ಕೂಟಿ ನುಡಿಯಿಸೆ ನುಡಿದೈ ೫೮

ಎನೆ ವಿದುರನತಿಕುಪಿಮನನಾಗಿ

ಕಡುಮುಳಿದು ನಿನ್ನ ತೊಡೆಗಳ
ನುಡಿವೆಡೆಯೊಳ್ ಭೀಮಸೇನನಾ ಪದದೊಳ್
ಪಿಡಿಯಲ್ಕೆಂದಿರ್ದೆನಿದಂ
ಪಿಡಿಯೆಂ ಪೋಗೆಂದು ಸಭೆಯೊಳುಡಿದಂ ಬಿಲ್ಲಂ ೫೯

ಅಂತು ವಿದುರಂ ವಿಚ್ಛಿದುರಮನನಾಗಿ ಬಿಲ್ಲನುಡಿವುದುಂ ಸುಯೋಧನಂ ತನ್ನ ಬಲದ ತೋಳುಡಿದಂತಾಗಿ ಸಿಗ್ಗಾಗಿ ಬಾಳಂ ಕಿಟಿಪ್ತೊದಱ್ ಮನದೊಳಾದೇವದಿಂ ದೇವಕೀನಂದನನ ಮೇಲೆ ವಾಯ್ವುದುಂ, ಆಗಳ್ ಗುರುತನೂಜನ ಕೆಯ್ಯಂ ಪಿಡಿದರಮನೆಯಂ ಪೊಱಮಟ್ಟು ಬೀಡಿಂಗೆ ವಂದು ಕುಂತಿಗೇಕಾಂತದೊಳಿಂತೆಂದಂ: ಅಖಿಳಾಸ್ತ್ರವಿಶಾರದನಪ್ಪನುಂ ಗೆಲಲ್ಕರಿಯನುಮೊಂದಿ ಬಾರದನುಮಂಕದ ಕರ್ಣನನಾನುಮೆನ್ನ ಬಲ್ಲ ಮಾಟ್ಕೆಯಿಂ ಭೇದಿಸಿದಪ್ಪೆಂ, ನೀವುಂ ನಿಮ್ಮ ಚೊಚ್ಚಿಲ ಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿಬನ್ನಿಮೆಂದು ಕೊಂತಿಯಂ ಬೀಳ್ಕೊಂಡು ಪರಕೆಯಂ ಕೈಕೊಂಡು ರಥಾಂಗಧರಂ ರಥಮನೇಱಿ ಕರ್ಣನ ಮನೆಯ ಮುಂದನೆ ಬಂದು ಮೇಲೆ ಬಿಟ್ದಿಮ್ಮಂ ಕಿಱಿದಂತರಂ ಕಟಿಪಿ ಮಗುಟ್ವೆ ಬಾ ಪೋಪಮೆಂದು ತನ್ನೊಡನೆ ರಥಮನೇಱಿಸಿಕೊಂಡು ಪೋಗಿ ಮುಂದೊಂದೆಡೆಯೊಳ್ ನಿಂದು

ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ
ನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಹರ್ಪತಿ ಪಾಂಡುನಂದನರ್
ಸೋದರರೆಯ್ದೆ ಮಯ್ದುನನೆನಾಂ ಪೆಱತೇಂ ಪಡೆಮಾತೊ ನಿನ್ನದೀ
ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ ೬೦

ನಿನ್ನುತ್ಪತ್ತಿಯನಿಂತೆಂ
ದೆನ್ನರುಮಣಮಱಿಯರಱಿವೆನಾಂ ಸಹದೇವಂ
ಪನ್ನಗಕೇತು ದಿನೇಶಂ
ನಿನ್ನಂಬಿಕೆ ಕುಂತಿಯಿಂತಿವರ್ ನೆಱೆ ಬಲ್ಲರ್ ೬೧

ದುರ್ಯೋಧನಂ ನಿನ್ನನೇತಱಿಂ ನಂಬಿದನೆಂದೊಡೆ ನೀನುಂ ತಾನುಮೊರ್ಮೆ ಗಂಗಾನದೀತೀರದೊಳ್ ಬೇಂಟೆಯಾಡುವಲ್ಲಿ ತತ್ಸಮೀಪದ ತಾಪಸಾಶ್ರಮದೊಳ್ ಸತ್ಯಂತಪರೆಂಬ ದಿವ್ಯಜ್ಞಾನಿಗಳಂ ಕಂಡು ಪೊಡೆವಟ್ಟಿರ್ವರುಮಂ ಪರಸಿ ನಿನಗೆ ಮುನ್ನಮೇಱಿಲ್ ತರಿಸಿದೊಡೆ ಸುಯೋಧನನೇವಯಿಸಿ ನಿನ್ನಂ ಪೋಗಲ್ವೇೞ್ದು

ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇೞಿಮೆಂ
ದಾ ನರನಾಥನಂ ತಿಳಿಪೆ ತನ್ಮುನಿ ಭೂಭುಜನೆಯ್ದೆ ನಂಬಿ ಕಾ
ನೀನ ಸಮಂತು ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾ
ನೀ ನಯದಿಂದೆ ಪೆರ್ಚಿ ಪೊರೆದಟ್ಟಿಱಿಕೊಳಂದೊಡನುಂಡನಲ್ಲನೇ ೬೨

ಎನೆಯೆನೆ ಬಾಷ್ಪವಾರಿ ಪುಳಕಂಬೆರಸೊರ್ಮೆಯೆ ಪೊಣ್ಮೆ ಮುನ್ನೆ ನೀ
ವೆನಗಿದನೇಕೆ ಪೇೞ್ದಿರೊ ನೆಗೞ್ತೆ ಪೊಗೞ್ತೆಯನಾಂಪಿನಂ ಸುಯೋ
ಧನನೆನಗೊಳ್ಳಿಕೆಯ್ದ ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನ
ಣ್ಪಿನ ನೆವದಿಂದೆ ಪಾಂಡವರನಾನೊಳವೊಕ್ಕೊಡೆ ನೀಮೆ ಪೇಸಿರೇ ೬೩

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆಯೇವಮಿಲ್ಲದಿವನಾಯ್ವುದೊ ತಪ್ಪದೆ ಪೇೞಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ ೬೪

ಎಂಬುದುಂ ಕರ್ಣಂ ತನಗೆಂತುಮೊಡಂಬಡದುದಂ ನಿರ್ಣಯವಾಗಱಿದು ಮಗುೞಲ್ವೇೞ್ದು ನಾರಾಯಣಂ ಪೋದನಿತ್ತಲಂಗರಾಜನುಮಾತ್ಮಾಲಯಕ್ಕೆ ವಂದು ಚಿಂತಾಕ್ರಾಂತನಾಗಿ

ಕುರುಪತಿಗಿಲ್ಲ ದೈವಬಲಮಾಜಿಗೆ ಮೇಲ್ಮಲೆಗೆಯ್ವರಾಗಳುಂ
ಗುರು ಗುರುಪುತ್ರ ಸಿಂಧುಸುತರಾಳ್ದನುಮೆನ್ನನೆ ನಚ್ಚಿ ಪೆರ್ಚಿ ಮುಂ
ಪೊರೆದನಿದಿರ್ಚಿ ಕಾದುವರುಮೆನ್ನಯ ಸೋದರರೆಂತು ನೋಡಿ ಕೊ
ಕ್ಕರಿಸದೆ ಕೊಲ್ವೆನೆನ್ನೊಡಲನಾಂ ತವಿಪೆಂ ರಣರಂಗಭೂಮಿಯೊಳ್ ೬೫

ಎಂದು ಮುಂತಪ್ಪ ಕಜ್ಜಮಂ ತನ್ನೊಳೆ ಬಗೆದವಾರ್ಯವೀರ್ಯಂ ಸೂರ್ಯದಿನದಂದು ಮಂದಾಕಿನಿಯಂ ಮೀಯಲೆಂದು ಬಂದು ದುರ್ಯೋಧನನಟ್ಟಿದ ದೆವಸವಳದ ಪದಿನೆಂಟುಕೋಟಿ ಪೊನ್ನುಮನೊಟ್ಟಿ ಬೆಟ್ಟಾಗೆ ಪುಂಜಿಸಿ ಬೇಡಿದ ಪಾರ್ವರ್ಗಂ ಪಿರಿದನಿತ್ತು ಅಘಮರ್ಷಣಪೂರ್ವಕಂ ಮಿಂದು ಕನಕಪಾತ್ರದೊಳ್ ತೆಕ್ಕನೆ ತೀವಿದ ಕನಕಕಮಳಂಗಳಿಂದಾದಿತ್ಯತೇಜನಾದಿತ್ಯಂಗರ್ಘ್ಯಮೆತ್ತಿ ಸೂರ್ಯಮಂತ್ರಂಗಳನೋದಿ

ನೀರಂ ಸೂಸಿ ತ್ರಿಃಪ್ರದಕ್ಷಿಣಂಗೆಯ್ವಾಗಳ್ ಮುಂದೆ ನಿಂದ ಕೊಂತಿಯನಾಗಳ್ ಕಂಡು ಮನದೊಳಾದೆಱಕದಿಂ ಸಾಷ್ಟಾಂಗಮೆಱಗಿ ಪೊಡೆವಟ್ಟ ನಿಜನಂದನನನಕ್ಕಱಿಂದಪ್ಪಿಕೊಂಡು ಪರಮಾಶೀರ್ವಚನಂಗಳಿಂ ಪರಸಿದಾಗಳ್ ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು ಬಂದು

ಒಪ್ಪಿಸಿದೆಂ ಕೆಯ್ಯೆಡೆಯೆಂ
ದಪ್ಪೈಸಿದ ನಿನ್ನ ಮಗನನೀಗಳೆ ನಿನಗೆಂ
ದಪ್ಪೈಸಿ ಗಂಗೆ ಪೋಪುದು
ಮೊಪ್ಪುವ ನಿಜಬಿಂಬದೊಳಗಣಿಂದಂ ದಿನಪಂ ೬೬

ಪೊಱಮಟ್ಟು ಬಂದು

ನುಡಿಯೆನದಂ ನಿನ್ನಂಬಿಕೆ
ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯ
ಲ್ಕೊಡರಿಸಿ ಬಂದಳ್ ಸುತರಂ
ಕುಡದಿರ್ ಪುರಿಗಣೆಯನೆನಿತು ಲಲ್ಲೈಸಿದೊಡಂ ೬೭

ಎಂದರವಿಂದಪ್ರಿಯಸಖ
ನಂದಂಬರಕ್ಕಡರ್ವುದುಂ ಕೆಯ್ಮುಗಿದಿಂ
ತೆಂದಂ ಕುಂತಿಯನಬ್ಬೇಂ
ವಂದಿರ್ಪುದದೆನಗೆ ಸಯ್ಪು ಬರ್ಪಂತೀಗಳ್ ೬೮

ಚಲಮುಂ ಚಾಗಮುಮಳವುಂ
ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್
ನೆಲಸಿದುವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು ಮಗನೆಂದುದಱಿಂ ೬೯

ಪಡೆದರ್ ತಾಯುಂ ತಂದೆಯು
ಮೊಡಲಂ ಪ್ರಾಣಮುಮನವರವವು ಕೆಯ್ಯೆಡೆಯಂ
ಕುಡುವುದರಿದಾಯ್ತೆ ನೀಮೆನ
ಗೆಡೆಮಡಗದೆ ಬೆಸಪ ತೊಟ್ಟುವೆಸನಂ ಬೆಸಸಿಂ ೭೦

ಎಂಬುದುಮಂಬಿಕೆ ಮಗನೆ ಮ
ನಂಬೆಳಱದೆ ನೀನುಮಿತ್ತೆಯಾನುಂ ಪೆತ್ತೆಂ

ನಂಬಿದ ನಿನ್ನನುಜರ್ ನಿ
ನ್ನಂ ಬೆಸಕೆಯೆ ನೀನೆ ನೆಲನನಾಳ್ವುದು ಕಂದಾ ೭೧

ಎಂಬುದುಮೆಲ್ಲಮಂ ಕೇಳ್ದು ಕರ್ಣಂ ಮುಗುಳ್ನಗೆನಕ್ಕು

ಭಯಮುಂ ಲೋಭಮುಮೆಂಬ ತಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ ಪಾ
ಟೆಯನೊಕ್ಕಾಳ್ದನ ಗೆಯ್ದ ಸತ್ಕೃತಮಂ ಪಿಂತಿಕ್ಕಿ ಜೋಳಕ್ಕೆ ತ
ಪ್ಪಿಯುಮಿಂ ಬಾಳ್ವುದೆ ಪೂಣ್ದು ನಿಲ್ಲದಿಕೆಯಿಂ ಬಾಳ್ವಂತು ವಿಖ್ಯಾತಕೀ
ರ್ತಿಯವೋಲೀಯೊಡಲಬ್ಬೆ ಪೇಟಿಮೆನಗೇಂ ಕಲ್ಪಾಂತರಸ್ಥಾಯಿಯೇ ೭೨

ಎಂಬುದುಂ ಭೋಂಕನೆರ್ದೆದೆಱೆದು

ಅಟಿದೆಂ ನೆಟ್ಟನೆ ಬೆಟ್ಟನಿಂತು ನುಡಿವೈ ನೀಂ ಕಂದ ಪೋಗಿಂದೆ ಕೆ
ಟ್ಟಟಿದತ್ತಾಗದೆ ಸೋಮವಂಶಮೆನಗಿಂ ಬಾಟಿಪ್ಪಾಸೆಯೆಲ್ಲಿತ್ತೊ ಬಿ
ಟ್ಟುಟಿದೆಂ ಮತ್ತಿನ ಮಕ್ಕಳಾಸೆಯುಮನಾನೆಂದಟ್ಗ್ಗಿ ಶೋಕಾಗ್ನಿ ಪೊಂ
ಪುಟಿವೋಗುತ್ತಿರೆ ಕರ್ಣನೆಂದನನಿನಿತೇಂ ಪೇಟಬ್ಬೆ ಚಿಂತಾಂತರಂ ೭೩

ಪಿಡಿಯೆಂ ಪುರಿಗಣೆಯಂ ನರ
ನೆಡೆಗೋದೊಡಮುಟಿದ ನಿನ್ನ ಮಕ್ಕಳನಿನ್ನೇ
ರ್ದೊಡಮಟಿಯೆಂ ಪೆರ್ಜಸಮನೆ
ಪಿಡಿದೆನ್ನನೆ ರಣದೊಳಟಿವೆನಿರದಡಿಯೆತ್ತಿಂ ೭೪

ಎಂದು ಕೊಂತಿಯಂ ವಿಸರ್ಜಿಸಿ ಚಲದ ಚಾಗದ ಕುಲದ ನನ್ನಿಯನಾವರ್ಜಿಸಿ ರಾಧೇಯನೊಳ್ಪಿಂಗಾಧೇಯಮಾಗಿರ್ದಂ

* * * * * * *

೪. ಅಡಂಗಿತ್ತು ಕುರುರಾಜಾನ್ವಯಂ

ದುರ್ಯೋಧನನಟ್ಟಿದ ದೂತಂ ಸಂಜಯನೆಂಬಂ ಬಂದು ಧರ್ಮನಂದನನಂ ಕಂಡು ಎಮ್ಮ ಭೂಭುಜಂ ಕಾದಿದೊಡಲ್ಲದೀಯೆನಱಿದಿರ್ಕೆಂದಾ ಕುರುಕ್ಷೇತ್ರಮಂ ಕಳವೇೞ್ದಿಟ್ಟಿದನ್ ಎಂಬುದುಂ ಯಮನಂದನಂ ಶತ್ರುಪಕ್ಷಕ್ಷಯಂಮಾಡುವುದ್ಯೋಗಮನೆತ್ತಿಕೊಂಡು ಪ್ರಯಾಣಭೇರಿಯಂ ಪೊಯ್ಸಿದಾಗಳ್ ಮಹಾಸಮುದ್ರದೊಳ್ ಮಹಾನದಿಗಳ್ ಕೂಡುವಂತೇೞಕ್ಷೋಹಿಣೀಬಲಂ ಕೂಡಿ ನಡೆಯೆ ತನ್ನ ನಾಲ್ವರ್ ತಮ್ಮಂದಿರೊಡನೆ ಮಂಗಳವಸದನಂಗೊಂಡು ದಕ್ಷಿಣಾವರ್ತಮಪ್ಪ ಹೋಮಾಗ್ನಿಯಂ ಬಲಂಗೊಂಡು ವಿಜಯಗಜಮನೇಱಿ ಮಂಗಳಪಾಠಕರ ಮಂಗಳವೃತ್ತೋಚ್ಚಾರಣೆಗಳೆಸೆಯೆ ಕುರುಕ್ಷೇತ್ರಾಭಿಮುಖನಾಗಿ ಕುರುಕ್ಷೇತ್ರಮನೆಯ್ದೆವಂದು ಪರಶುರಾಮಂ ಮಾಡಿದ ಶಮಂತಪಂಚಕಂಗಳೆಂಬಯ್ದು ಪೆರ್ಮಡುಗಳ ಕೆಲದೊಳೆಡೆಯಱಿದು ಬೀಡಂ ಬಿಡಿಸೆ ವೈರಿಸಂಹಾರಂ ಮಾಡದೆ ಮಾಣೆನೆಂದು ಹರಿಗಂ ಉತ್ಸಾಹಮಂ ಕೆಯ್ಕೊಂಡಂ

ಶ್ರೀನಾರೀವಲ್ಲಭನಭಿ
ಮಾನಧನಂ ಹರಿಗನಾ ಕುರುಕ್ಷೇತ್ರದೊಳಂ
ತೇನುಂ ಮಾಣದೆ ಬಿಟ್ಟುದ
ನಾ ನೆಗೞ್ದ ಸುಯೋಧನಂಗೆ ಚರಱಿಪುವುದುಂ ೧

ಗಾಂಗೇಯರ ಪೇೞ್ದದೊಂದು ತೆಱದಿಂ ನೀಂ ಕಾದು ದುರ್ಯೋಧನ ಎಂಬ ಕುಂಭಸಂಭವನ ಮಾತಂ ಮನದೆಗೊಂಡು ನಿಶಾಸಮಯದೊಳ್ ಪತ್ತೆಂಟು ಕೆಯ್ದೀವಿಗೆಗಳ ಬೆಳಗಿನೊಳಂ ಸಿಂಧುಜನರಮನೆಗೆ ವಂದು ಕುರುಪಿತಾಮಹಂಗೆಱಗಿ ಪೊಡೆವಡುವುದುಂ ಪರಸಿ ಮಂಚದೊಳೇಱಲ್ ಕರೆದೊಡೆಲ್ಲೆಂ ಮಹಾಪ್ರಸಾದಮಿಂತಿರ್ಪೆನೆಂದು ಹೇಮಾಸನದೊಳ್ ಕುಳ್ಳಿರ್ದನಂ ನೋಡಿ ಕಜ್ಜಂ ಪುಟ್ಟಿದೊಡೆಮಗೆ ಬೞಿಯಟ್ಟದೀ ಪೊೞ್ತಿದಾವುದು ಮನೆವಾೞ್ತೆಗೆೞ್ತಂದೆಯೆಂದೊಡೆ

ಕೊರಲೊಳ್ ಕಟ್ಟಿದ ದೇವಿಯಂತಿರುರದೊಳ್ ಶ್ರೀ ತೊಟ್ಟಿಲೊಳ್ ತೊಟ್ಟನಂ
ತರಮೆನ್ನೊಳ್ ನೆಲಸಿತ್ತು ನಿಮ್ಮ ದಯೆಯಿಂ ನಿಮ್ಮಂ ಕರಂ ನಚ್ಚಿ ಸಂ

ಗರಮಂ ಬಲ್ಲಿದರೊಳ್ ಪೊಣರ್ಚಿದೆನದರ್ಕೆನ್ನೊಳ್ ರಣಶ್ರೀ ರಣಾ
ಜಿರದೊಳ್ ಮಾಣದೆ ಪೊರ್ದುವಂತೆ ಬೆಸಸಿಂ ನಿಮ್ಮೊಂದಭಿಪ್ರಾಯಮಂ ೨

ಎಂದು ನುಡಿದ ಮೊಮ್ಮನ ನಯದ ವಿನಯದ ನುಡಿಗಳ್ಗೆ ಕರುಣಿಸಿ ರಣೋದ್ಯತನಾಗೆಂಬುದನೆಮ್ಮನನ್ಯರವೊಲೇಂ ನೀಂ ಪ್ರಾರ್ಥಿಸಲ್ವೇಟ್ಟುದೇ ಎಂಬುದುಂ ಮಹಾಪ್ರಸಾದಮೆಂದು ದುರ್ಯೋಧನಂ ಪೋಗಿ ಸಹಸ್ರಕಿರಣೋದಯದೊಳನೇಕಸಹಸ್ರ ನರಪತಿಪರಿವೃತನುಮಾಗಿ ಮಂದಾಕಿನೀತನೂಜಂಗೆ ಬಟೆಯನಟ್ಟಿ ಬರಿಸಿ ಮಣಿಮಯ ಪೀಠದೊಳ್ ಕುಳ್ಳಿರಿಸಿ ಪೊಂಗಳಸಂಗಳೊಳಿರ್ದ ಪುಣ್ಯತೋಯಂಗಳೊಳಟ್ಕಿಜಿಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ; ಅಂತು ಕಟ್ಟಿ ಪಗೆವರನೆನ್ನ ಮಂಚದ ಕಾಲೊಳ್ ಕಟ್ಟಿದೆನೆಂದು ಪೊಟ್ಟಳಿಸುವ ಸುಯೋಧನನ ನುಡಿಯನವಕರ್ಣಿಸಿ ಕರ್ಣನಿಂತೆಂದಂ

ಭಗವತಿಯೇಱುವೇಟ್ವ ತೆರದಿಂ ಕಥೆಯಾಯ್ತಿವರೇಱು ನೀನಿದಂ
ಬಗೆದಿವರಿನ್ನುಮಾಂತಿಜಿವರೆಂದು ವಿಮೋಹಿಸಿ ವೀರಪಟ್ಟಮಂ
ಬಗೆಯದೆ ಕಟ್ಟಿದೈ ಗುರುಗಳಂ ಕುರುವೃದ್ಧರನಾಜಿಗುಯ್ದು ಕೆ
ಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬದಪುದೇಂ ಸುಯೋಧನಾ ೩

ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ
ಣ್ಗೆಟ್ಟ ಮುದುಪಂಗೆ ಪಗೆವರ
ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ ೪

ಎಂಬುದುಮಾ ನುಡಿಗೆ ಸಿಡಿಲ್ದು ಕುಂಭಸಂಭವನಿಂತೆಂದಂ

ಸಿಂಗದ ಮುಪ್ಪುಂ ನೆಗಟ್ದೀ
ಗಾಂಗೇಯರ ಮುಪ್ಪುಮಿಳಿಕೆವಡೆಗುಮೆ ವನಮಾ
ತಂಗಂಗಳಿನಸುಹೃಚ್ಚತು
ರಂಗಬಲಂಗಳಿನದೆಂತುಮಂಗಾಧಿಪತೀ ೫

ಕುಲಜರನುದ್ಧತರಂ ಭುಜ
ಬಲಯುತರಂ ಹಿತರನೀ ಸಭಾಮಧ್ಯದೊಳ
ಗ್ಗಲಿಸಿದ ಮದದಿಂ ನಾಲಗೆ
ಕುಲಮಂ ತುಬ್ಬುವವೊಲುಱಿದೆ ನೀಂ ಕೆಡೆನುಡಿವೈ ೬

ಎಂದು ನುಡಿದ ಗುರುವಿನ ಕರ್ಣಕಠೋರವಚನಂಗಳ್ಗೆ ಕರ್ಣಂ ಕಿನಿಸಿ

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನಮೊಂದೆ ಕುಲಮಣ್ಣು ಕುಲಂ ಬಗೆವಾಗಳಿಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ ೭

ಗಂಗಾಸುತಂ ಪೃಥಾಸುತ
ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೆಯ್ಯೊಳ್
ಗಾಂಗೇಯನಟಿದೊಡಹಿತರ
ನಾಂ ಗೆಲೆ ತಳ್ತಿಱಿವೆನನ್ನೆಗಂ ಬಿಲ್ವಿಡಿಯೆಂ ೮

ಎಂದು ಕರ್ಣಂ ಪ್ರತಿಜ್ಞೆಗೆಯ್ವುದುಂ ಸಿಂಧುತನೂಜನಿಂತೆಂದಂ

ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲೆದಪೆಯಣ್ಣ ಸೂಟ್ಪಡೆಯಪ್ಪುದು ಕಾಣ ಮಹಾಜಿರಂಗದೊಳ್ ೯

ಎಂದು ಮತ್ತಂ ಮುದುಪರ ಬಿಲ್ಬಲ್ಮೆಯುಮಿಱಿವದಟುಂ ತುಚ್ಛಮಕ್ಕುಮಾದೊಡಂ

ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ ಕರಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ
ಪಡುವಣ್ಗಾವುದು ಪೋಗೆ ಪೋ ಗಡಿಸುವೆಂ ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ ಮಾಟ್ಪೆನೋವದೆ ಪಯಿಂಛಾಸಿರ್ವರಂ ಯುದ್ಧದೊಳ್ ೧೦

ಎಂದು ಪ್ರತಿಜ್ಞಾರೂಢನಾದ ಗಾಂಗೇಯನಳವನಳವಲ್ಲದೆ ಪೊಗಟ್ದವರಂ ಬೀಡಿಂಗೆ ಬಿಜಯಂಗೆಯ್ಯಿಮೆಂದು ಕಟಿಪಿ ಮಱುದಿವಸಂ ಯುದ್ಧಸನ್ನದ್ಧನಾಗಿ ಪ್ರಯಾಣಭೇರಿಯಂ ಪೊಯ್ಸಿದಾಗಳ್

ಕರಿ ಮಕರಂಗಳಂ ಕರಿಘಟಾವಳಿಯಬ್ಧಕುಳಂಗಳಂ ಭಯಂ
ಕರತರಮಾದ ಪೆರ್ದೆರೆಗಳಂ ಹಯಸಂತತಿ ಮತ್ಸ್ಯಕೋಟಿಯಂ
ಸ್ಫುರಿತನಿಶಾತಹೇತಿಯುತಸದ್ಭಟಕೋಟಿ ನಿರಂತರಂ ತಿರ
ಸ್ಕರಿಸಿರೆ ಘೂರ್ಣಿತಾರ್ಣವಮನೊತ್ತರಿಸಿತ್ತು ಚತುರ್ಬಲಾರ್ಣವಂ ೧೧

ಅಂತು ದುರ್ಯೋಧನಂ ತನ್ನ ಬಲದ ಪದೋತ್ಥಿತರಜಮೆ ಮಹಾಸಮುದ್ರಂಗಳಂ

ತೆಕ್ಕನೆ ತೀವೆಯುಂ ನಿಚ್ಚವಯಣದಿಂ ಬಂದು ಕುರುಕ್ಷೇತ್ರದ ಪೂರ್ವದಿಗ್ಭಾಗದೊಳ್ ಪ್ರಳಯಂ ಮೂರಿವಿಟ್ಟಂತೆ ಬೀಡಂಬಿಟ್ಟು ಧರ್ಮಪುತ್ರನಲ್ಲಿಗೆ ಅಟ್ಟಿದ ದೂತಂ ನೆಟ್ಟನೆ ನಾಳೆ ಕಾಳೆಗಂ ಎಂದು ಪೇಟಿ ಆ ದೂತನಂ ವಿಸರ್ಜಿಸಿ ಧರ್ಮಪುತ್ರಂ ಪುಂಡರೀಕಾಕ್ಷಂಗೆ ಬಟಿಯನಟ್ಟಿ ಬರಿಸಿ ಅವನನುಮತದೊಳೆ ವಿರಾಟನಂದನನಪ್ಪ ಶ್ವೇತನಂ ಸೇನಾನಾಯಕನಂ ಮಾಡೆ, ನಾಳೆ ಕಾಳೆಗಮೆಂದು ಪಡೆವಳರ್ ಸಾಱಿಮೆಂಬುದುಮವರ್ ಬೀಡುಬೀಡುಗಳ್ಗೆಲ್ಲಂ ಸಾಱಿ ದಿವಾಕರಂ ಅಸ್ತಮಯಕ್ಕಿೞಿದಂ; ಉಭಯಬಲಂಗಳೊಳಂ ವೀರಜನಿತಾಳಾಪಂಗಳ್ ನೆಗೞೆ ವಿಕ್ರಮಾರ್ಜುನಂ ಅನಂತನುಂ ತಾನುಂ ಜಲಕ್ಕನಿರೆ ಪಲ್ಲಂ ಸುಲಿದಗಣ್ಯಪುಣ್ಯ ತೀರ್ಥೋದಕಂಗಳಂ ಮಿಂದು ಮಂಗಳವಸದನಂಗೊಂಡು ವಿವಿಧಾಸ್ತ್ರಶಸ್ತ್ರಂಗಳಂ ಅರ್ಚಿಸಿ ಪೊಡೆವಟ್ಟು ಆ ಇರುಳಂ ವಿಜಯೋದ್ಯೋಗದೊಳ್ ಕಳೆಯೆ, ಬೆಳಗಪ್ಪ ಜಾವದೊಳ್ ಎರಡುಂ ಪಡೆಗಳುಂ ಪಣ್ಣಪಣ್ಣನೆ ಪಣ್ಣಿ ಕಾಳೆಗಕ್ಕೆ ನಡೆಯಲೊಡರಿಸಿ, ಎರಡುಂ ಪಡೆಗಳ ಪಡೆವರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೊಡ್ಡಿ ನಿಂದರ್; ಯುಧಿಷ್ಠಿರಂ ಶಲ್ಯನ ಮೊನೆಗೆ ನೆಱೆದು ನಿಂದು ಕೆಯ್ವೀಸುವಾ ಪ್ರಸ್ತಾವದೊಳ್ ಶೂರಂ ಭೇದೇನ ಯೋಜಯೇತ್ ಎಂಬ ನಯಮಂ ಕೆಯ್ಕೊಂಡು ವಿನಯಮನೆ ಮುಂದಿಟ್ಟು

ಬಳಮೆರಡುಂ ತನ್ನನೆ ಮಿಳ
ಮಿಳ ನೋಡೆ ನರೇಂದ್ರನೊಂದೆ ರಥದಿಂದಸುಹೃ
ದ್ಬಳಮನಿರದೆಯ್ದೆ ಭೀಷ್ಮರ
ಚಳಣಯುಗಕ್ಕೆಱಗೆ ನಿನಗೆ ಜಯಮಕ್ಕೆಂದರ್ ೧೨

ಅಂತು ಯುಧಿಷ್ಠಿರಂ ಭೀಷ್ಮರ ಪರಕೆಯಂ ಕೆಯ್ಕೊಂಡು ಮಗುಟ್ದು ತನೊಡ್ಡಣಕ್ಕೆ ಬರುತ್ತುಂ ದುರ್ಯೋಧನನ ತಮ್ಮನಪ್ಪ ಯುಯುತ್ಸುವಂ ಕಂಡು ಪವನಜನಿಂದೆ ಕೌರವಕುಲಂ ಪಡಲಿಟ್ಟಂತೆವೊಲಕ್ಕುಂ ಸಂತತಿ ಕೆಟ್ಟಪುದಿವನಂ ಕಾವೆನೀ ಬವರದೊಳೆಂದು ಅವನನೊಳಗೊಂಡು ಬಂದು ಧರ್ಮಪುತ್ರನುತ್ಸಾಹದೊಳಿರ್ಪ ಪದದೊಳ್, ವಿಕ್ರಮಾರ್ಜುನನ ಪದದೊಳಾದ ವ್ಯಾಮೋಹಮಂ ಮುಕುಂದಂ ಕಳೆಯೆ ಪರಸೈನ್ಯಭೈರವಂ ಪುರುಷೋತ್ತಮಂಗೆಱಗಿ ರಥಮಂ ಮುನ್ನಮೇಱಲ್ವೇೞ್ದು ಮೂಱು ಸೂೞ್ ಬಲವಂದು ತಾನೇಱಿ ರಥಮಂ ಚೋದಿಸಲ್ವೇೞ್ದಂ; ಅತ್ತ ರಾಜರಾಜನುಮಿತ್ತ ಧರ್ಮರಾಜನುಮೊಡನೊಡನೆ ಕೆಯ್ವೀಸಿದಾಗಳ್

ಪಿಡಿಕೆಯ್ ತೀವಿದ ಕೂರ್ಗಣೆ
ಮಡಕಾಲ್ವರೆಮಲೆವ ಕಚ್ಚೆ ನಿಡಿಯಸಿಯೊಱೆ ಕ
ರ್ಪಿಡಿದ ಪಣೆಕಟ್ಟು ಕೆಯ್ಪೊಡೆ
ಬೆಡಂಗನೊಳಕೊಳೆ ಧನುರ್ಧರರ್ ಪೆಣೆದೆಚ್ಚರ್ ೧೩

ಅಂತೆರಡುಂ ಬಲದ ದಟಿಂಗಳ್ ಕಿಱಿದಾನುಂ ಬೇಗಂ ತಟ್ಟುಪೊಟೆಂದು

ಕೋಲ್ಗುಟ್ಟೆ, ತಾಗೆ ತುಂಗತುರಂಗಸಾಧನಂ, ಪರ್ವಿ ನಿಲೆ ಉಗ್ರರಥಂ ರಥಾಳಿಯೊಳ್, ದಂತಿಘಟೆಗಳನಾರೋಹಕರ್ ತೋಱಿಕೊಟ್ಟೊಂದೊಂದರ್ಕೆ ವೊಗಂಬುಗಿಸೆ ಬಿಸುನೆತ್ತರರ್ಬಿಗಳುರ್ವಿ ಪಾಯೆ ಜೋದರಟ್ಟೆಗಳ್ ಪಾಱಿ ಪರ್ವತಂಗಳಾಗೆ ಕೆಡೆವಾಗಳ್, ಭೀಮಸೇನಂ ಪೌಂಡ್ರಮೆಂಬ ತನ್ನ ಶಂಖಮನೊತ್ತಿ ಮುಂದೊಡ್ಡಿದೊಡೆ ಭೀಮಸೇನಂಗೆ ದುರ್ಯೋಧನನದಿರದಿದಿರಾಂತಾಗಳ್

ಪಟ್ಟಂಗಟ್ಟಿದ ನೊಸಲಂ
ನಟ್ಟ ಸರಲ್ವಿಡಿದು ನೆತ್ತರಂಬಿರಿವಿಡೆ ಕ
ಣ್ಗೆಟ್ಟಿರ್ದ ನೃಪನನಂಕದ
ಕಟ್ಟಾಳ್ಗಳ್ ಕಾದು ಕಟಿಪೆ ದುರ್ಯೋಧನನಂ ೧೪

ಅವನನುಜರ್ ನೂರ್ವರುಂ ಬಂದು ತನ್ನನೊರ್ವನಂ ತಾಗಿದೊಡನಿಬರುಮಂ ವಿರಥರ್ಮಾಡಿ ಕೋದಂಡಮಂ ಬಿಸುಟು ಗದಾದಂಡಮಂ ಭುಜಾದಂಡದೊಳಳ ವಡಿಸಿಕೊಂಡು ಬರ್ಪ ಭೀಮನಂ ಬರಲೀಯದೆ ಕಳಿಂಗರಾಜನಾಂತಿರೆ ಕೆಯ್ಗೆವಂದು ಬರ್ದುಕಾಡಿದ ಬಲ್ಮುಳಿಸಿಂ ವೃಕೋದರಂ ಗಾಳಿಗೊಡ್ಡಿದ ಘನಘಟೆಯಂತೆ ತನಗೊಡ್ಡಿದ ಕಳಿಂಗ ರಾಜ ಮತ್ತ ಮಾತಂಗ ಘಟೆಗಳಂ ಕಟಿಕುಟಿಂ ಮಾಡಿದನಿತ್ತ ಶಲ್ಯನ ಮೊನೆಯೊಳ್ ಧರ್ಮಪುತ್ರಂ ಕಾದೆ ಅವನಂ ವಿರಥನಂ ಮಾಡಿ ಪಿಡಿಯಲೆಯ್ತರ್ಪ ಮದ್ರರಾಜನಂ ನೃಪನ ಚಕ್ರರಕ್ಷಕಂ ನೀಳನೆಡೆಗೊಂಡು ತಾಗಿದಾಗಳ್ ಶಲ್ಯಂ ನೀಳನ ತಲೆಯುಂ ಉಱದೆಚ್ಚು ವಿಸ್ಫುರಿತ ಶಕ್ತಿಯನಿಟ್ಟು ಉತ್ತರನಂ ಜವಂಗೆ ಮೊಸತಿಕ್ಕುವಂತಿಕ್ಕಿದಂ; ತನ್ನ ತಮ್ಮನತೀತನಾದುದಂ ಕೇಳ್ದು ಶ್ವೇತಂ ಶಲ್ಯನಂ ಮುಟ್ಟೆವಂದಾಗಳ್ ಅವನಂ ಪೆಱಗಿಕ್ಕಿ ಸುರಾಪಗಾತ್ಮಜಂ ಶಕ್ತಿಯಂ ಕೊಂಡಗುರ್ವಿಸಿ ತನ್ನನಿಟ್ಟೊಡದನೀರಯ್ದುಸ್ತ್ರದಿಂದೆಚ್ಚು ಖಂಡಿಸಿ ಪೇರಾಳ್ ತಿಱಿದಿಕ್ಕಿದಂತೆ ಶ್ವೇತನ ತಲೆಯಂ ಪೋಗೆಚ್ಚಂ; ಅಂತೆರಡುಂ ಪಡೆಯ ನಾಯಕರೊರ್ವರೊರ್ವರೊಳ್ ತಲೆಮಟ್ಟು ಕಾದುವಾಗಳ್ ದಿನಪನಪರಜಳಧಿಗಿಳಿಯೆ ಎರಡುಂ ಪಡೆಯ ನಾಯಕರಪಹಾರತೂರ್ಯಂಗಳಂ ಬಾಜಿಸಿ ತಮ್ಮ ತಮ್ಮ ಬೀಡುಗಳ್ಗೆ ಪೋದರ್

ಇತ್ತ ಧರ್ಮನಂದನಂ ಮುಕುಂದಂಗೆ ಬಟಿಯುನಟ್ಟಿ ಬರಿಸಿ ನಮ್ಮ ಸೇನಾನಾಯನುತ್ತಾಯಕನಾಗಿ ಗಾಂಗೇಯರಿಂದಮಟಿದನಿನ್ನಾರ್ಗೆ ವೀರಪಟ್ಟಮಂ ಕಟ್ಟುವಂ ಪೇಟಿಮೆನೆ ವೀರಪಟ್ಟಕ್ಕೆ ದ್ರುಪದನಂದನನಪ್ಪ ಧೃಷ್ಟದ್ಯುಮ್ನಂ ತಕ್ಕನೆನೆ ಆತಂಗೆ ಬಟಿಯನಟ್ಟಿ ಬರಿಸಿ ಪಿರಿದೊಂದೊಸಗೆವೆರಸು ತಾನೆ ವೀರಪಟ್ಟಮಂ ಕಟ್ಟಿಯಜಾತಶತ್ರು ಮುನ್ನಮೆ ಬಂದೊಡ್ಡಿ ಕೆಯ್ವೀಸಿದಾಗಳ್ ಎರಡುಂ ಪಡೆಯ ನಾಯಕರೊಂದೊರ್ವರೊಳ್ ತಾಗಿ ಕಿಡಿಗುಟ್ಟಿದಂತೆ ಕಾದುವಾಗಳಭಿಮನ್ಯು ಮಗಧತನೂಜನನೊಂದೆ ಪಾರೆ ಯುಂಬಿನೊಳ್ಕೆಯ್ಯಿಕೂಸಂತಿಕ್ಕುವುದುಂ; ಅತ್ತ ವಿಕ್ರಮಾರ್ಜುನನ ಬರವಿಂಗೆ ಕುರುಬಲಮೆಲ್ಲಮೊಲ್ಲನುಲಿದೋಡಿ ಸುರಪಗಾನಂದನನ ಮಱಿಯಂ ಪೊಕ್ಕಾಗಳ್

ಧರ್ಮಪುತ್ರಂ ನಿಜಾನುಜಸಹಿತಂ ಬಂದು ಬಲಗೊಂಡು ಕಾಲ ಮೇಲೆ ಕವಿದುಪಟ್ಟು ಶೋಕಂಗೆಯ್ದೊಡೆ ಕ್ಷತ್ರಿಯಧರ್ಮಮಿಂತಿದರ್ಕಱಲ್ವೇಡ ಬೀಡಿಂಗೆ ಪೋಗಿಮೆಂದೊಡೆ ಮಹಾಪ್ರಸಾದಮೆಂದು ಪೊಡೆವಟ್ಟು ಪೋದರಾಗಳ್ ದುರ್ಯೋಧನಂ ಬಂದು ಪೊಡೆವಟ್ಟು

ಇಱಿವುದನಾಂತ ಮಾರ್ವಲಮನಿನ್ನೆಗಮಚ್ಚರಿಯಾಗೆ ತಾಗಿ ತ
ಳ್ತಿಱಿದಿರಿದೊಂದವಸ್ಥೆ ನಿಮಗೆನ್ನಯ ಕರ್ಮದಿಂದಾದುದೆಂದೊಡಿಂ
ಮಱುವುದು ಕಂದ ಪಾಂಡವರ ವೈರಮನೆನ್ನೊಡವೋಕೆ ಕೋಪಮುಂ
ಕಱುಪುಮೆಡಂಬಡೇವುದದನಿನ್ನುಮೊಡಂಬಡು ಸಂಧಿಮಾಡುವೆಂ ೨೨

ಎನೆ ದಾಯಿಗರೊಳಿಂ ಮಗುಟ್ಟುಂ ಪುದುವಾಟ್ಟುವೇ ಎಂಬುದುಮಿಲ್ಲಿಂದಂ ಮೇಲಾದ ಕಜ್ಜಮಂ ನೀನೆ ಬಲ್ಲೆ ಬೀಡಿಂಗೆ ಬಿಜಯಂಗೆಯ್ಯೆನೆ ಪೊಡೆವಟ್ಟು ಸುಯೋಧನಂ ಪೋಗಿ ಆತ್ಮೀಯಪ್ರಭೃತಿಗಳೆಲ್ಲಮಂ ಬರಿಸಿ ಭೀಷ್ಮಾದನಂತರಂ ದ್ರೋಣನೆಂಬುದು ಪರಾಶರವಚನಮೆನೆ ಕರ್ಣನ ನುಡಿಗೊಡಂಬಟ್ಟು ಕಳಶಭವಂ ಬೀರವಟ್ಟಮಂ ಕಟ್ಟಿಸಿಕೊಂಡಂ

ಪಾಂಡವಬಲದ ಸೇನಾನಾಯಕಂ ಧೃಷ್ಟದ್ಯುಮ್ನನೊಡ್ಡಿದ ವಜ್ರವ್ಯೂಹಕ್ಕೆ ಪದ್ಮವ್ಯೂಹಮನೊಡ್ಡಿ ತದ್ವ್ಯೂಹದ ಮೊನೆಗೆ ವಂದು ಪಾಂಡವಬಲಮೆಲ್ಲಮನಲ್ಲೋಲ ಕಲ್ಲೋಲಂ ಮಾಡಿ ಕಳಶಕೇತನನಜಾತಶತ್ರುವಂ ಪಿಡಿಯಲೆಯ್ತರ್ಪಾಗಳ್ ಮಾರ್ತಾಂಡಂ ಅಪರಜಳಧಿಗಿೞಿದನಾಗಳೆರಡುಂ ಪಡೆಗಳಪಹಾರತೂರ್ಯಂಗಳಂ ಬಾಜಿಸಿದಾಗಳ್ ಪಡೆಗಳೆರಡುಂ ಬೀಡಿಂಗೆ ತೆರಳ್ದುವು

ಆದಿತ್ಯಂ ಉದಯಾದ್ರಿಯಂ ಪೊತ್ತಡರೆ ಪೊೞಮಟ್ಟಾಗಳ್ ಧೃಷ್ಟಕೇತು ವೃಷಸೇನನೊಳ್ ಸಾತ್ಯಕಿ ಭಗದತ್ತನೊಳ್ ದ್ರುಪದ ಧೃಷ್ಟದ್ಯುಮ್ನರಿರ್ವರುಂ ದ್ರೋಣಾಚಾರ್ಯನೊಳ್ ಪ್ರತಿವಿಂಧ್ಯಂ ಸೌಬಲನೊಳ್ ಘಟೋತ್ಕಚಂ ಕರ್ಣನೊಳ್ ಪೆಣೆದು ಕಾದೆ, ಭೀಮಸೇನಂ ರಥದಿಂ ಧಾತ್ರಿಗೆ ಪಾಯ್ದು ಗದೆಯಂ ಕೊಂಡು ಸಿಡಿಲ್ ಪೊಯ್ವಂತೆವೋಲ್ ಪೊಯ್ದು ಪದಿನಾಲ್ಸಾಸಿರ ಮದದಾನೆಯುಮಂ ಕಳಿಂಗನಾಯಕಂ ಭಾನುದತ್ತಂ ಮೊದಲಾಗೆ ನೂರ್ವರರಸುಮಕ್ಕಳುಮಂ ಕೊಂದೊಡೆ ಕೌರವಬಲಮೆಲ್ಲವೊಲ್ಲನುಲಿದೋಡಿ ಭಗದತ್ತನಾನೆಯ ಮಱೆಯಂ ಪೊಕ್ಕಾಗಳ್, ಸುಪ್ರತೀಕ ಕರಿಯೆಂಬ ಗಿರಿಯ ಮೇಲೆ ಭೀಮನೆಂಬ ಕಾಲಮೇಘಂ ಸರಲ ಸರಿಯಂ ಸುರಿಯೆ ಕರಿ ನೊಂದು ಕೋಪದಿಂ ಕುರುಕ್ಷೇತ್ರದಿಂದತ್ತ ಪನ್ನೆರಡು ಯೋಜನಂಬರಮೊತ್ತುವುದುಂ, ಇತ್ತ ಹರಿ ರಥಮಂ ಅತ್ತಲ್ ಪರಿಯಿಸೆ ವಿಕ್ರಾಂತತುಂಗಂ ಒಂದೆ ದಿವ್ಯಶರದಿಂ ಪರಿಯೆಚ್ಚೊಡೆ ಭಗದತ್ತನ ತಲೆಯುಂ ಸುಪ್ರತೀಕಕರಿಯ ತಲೆಯುಂ ಧರೆಯೊಳೊಡನುರುಳ್ದುವು; ಅನ್ನೆಗಮರ್ಕನ ಪರಜಳನಿಧಿಗಿೞಿವುದುಂ ಎರಡುಂ ಪಡೆಗಳಪಹಾತೂರ್ಯಂಗಳಂ ಬಾಜಿಸಿ ತಂತಮ್ಮ

ಬೀಡುಗಳ್ಗೆ ಪೋಪುದುಂ, ಇತ್ತ ದುರ್ಯೋಧನಂ ಸಂಸಪ್ತಕರ್ಕಳ್ಗೆ ಬಟೆಯನಟ್ಟಿ ಬರಿಸಿ ನಾಳೆ ನರನಂ ತೆಗೆದುಯ್ವುದು ಧರ್ಮಪುತ್ರನಂ ಗುರು ಪಿಡಿದಪ್ಪನೆಂದವರನಾಗಳೆ ಪೂಣಿಸಿ ಪೋಗವೇೞ್ದಂ

ಪಾಂಡವಪತಾಕಿನಿಯಿರದೆ ಅರ್ಧಚಂದ್ರವ್ಯೂಹಮನೊಡ್ಡಿ ನಿಲೆ ಸಂಸಪ್ತಕರ್ ತಮಗೆ ಮಿಱುಗರೆವಂತೆ ವಿಕ್ರಮಾರ್ಜುನನಂ ಕರೆದುಯ್ದರಿತ್ತ ಚಕ್ರವ್ಯೂಹಮನೊಡ್ಡಿ ಭಾರದ್ವಾಜಂ ಸಿಂಧುರಾಜಂ ಬೆರಸು ಚಕ್ರವ್ಯೂಹದ ಬಾಗಿಲೊಳ್ ನಿಲೆ ಧರ್ಮಪುತ್ರನೇಗೆಯ್ವ ತೆಱನುಮಱೆಯದಭಿಮನ್ಯುವಂ ಕರೆದು ಪಾರ್ಥನೆಂತಾನುಂ ಗೆಂಟಿದನ್ ಎಮ್ಮೀ ನಾಲ್ವರುಂ ಇದಂ ಭೇದಿಸಲಱೆಯೆವೆನೆ ವನ್ಯಗಂಧದ್ವಿರದಮೆ ಕೊಳನಂ ಪೊಕ್ಕವೊಲ್ ಕಾದಿ ತೋರ್ಪೆಂ ಎಂದು ತನ್ನೇಱಿದ ಕನಕರಥಮಂ ಜಯನೆಂಬ ಸಾರಥಿಯಂ ಚೋದಿಸೆಂದು ವಿರೋಧಿಬಳಾಂಬುರಾಶಿಯಂ ಅಭಿಮನ್ಯು ಪೊಕ್ಕು ಮಾರಿ ಪೊಕ್ಕಂತೆ ಪೆಣಮಯಂ ಮಾಡಿ ತೂಱಿಕೊಂಡ ಜೋಳದಂತಿರೆ ಪಡಲ್ವಡಿಸೆ ಸುಯೋಧನನ ಮಕ್ಕಳ್ ಲಕ್ಕಣಂ ಮೊದಲಾಗೆ ನೂರ್ವರುಮೊಂದಾಗಿ ಬಂದು ತಾಗಿದಾಗಳ್ ನೂರ್ವರುಂ ಪೊನ್ನ ತಾೞ್ಗಳ್ ಸೂಟೊಳ್ ಬೀೞ್ವಂತೆ ಬಿೞ್ದಾಗಳ್ ಆಳ್ದನ ಮುಳಿದ ಮೊಗಮನಱೆದು ದ್ರೋಣ ದ್ರೋಣಪುತ್ರ ಕೃಪ ಕೃತವರ್ಮ ಕರ್ಣ ಶಲ್ಯ ಶಕುನಿ ದುಶ್ಶಾಸನ ವೃಷಸೇನಾದಿಗಳ್ ಧರ್ಮಯುದ್ಧಮಂ ಬಿಸುಟು ನರನಂದನನ ರಥಮಂ ಸುತ್ತಿಮುತ್ತಿಕೊಂಡು

ತೇರಂ ಕುದುರೆಯನೆಸಗುವ
ಸಾರಥಿಯಂ ಬಿಲ್ಲನದಱ ಗೋಣೆಯುಮನುಱದಾ
ದೋರ್ಗರೊರ್ವರೊಂದನೆಚ್ಚೊಡೆ
ಬೀರಂ ಗದೆಗೊಂಡು ಬೀರರಂ ಬೆಂಕೊಂಡಂ ೨೩

ಬೆಂಕೊಳೆ ಕಳಿಂಗರಾಜನ
ನೂಂಕಿದ ಕರಿಘಟೆಯನುಡಿಯೆ ಬಡಿಬಡಿದೆತ್ತಂ
ಕಿಂಕೊಟಿಮಾೞ್ಪುದುಮುಱದೆ
ಚ್ಚಂ ಕರ್ಣಂ ನಿಶಿತಶರದಿನೆರಡುಂ ಕರಮಂ ೨೪

ಆಗಳ್ ನರಪ್ರಿಯತನೂಜನಕ್ಷೋಹಿಣಿಯಂ ತನ್ನ ಕುನ್ನಗೆಯ್ಯೊಳೆ ರಥಚಕ್ರದಿಂ ತಿರಿಪಿಟ್ಟೊಡೆ ತನ್ನ ಮಗಂ ಗದಾಯುಧನಟೆಯೆ ದುಶ್ಶಾಸನಂ ಕಿಟ್ಟಿ ಬಾಳ್ವೆರಸು ಪಾಯ್ದು ನೆಲಕಿಕ್ಕಿ ಪತ್ತಿ ಕತ್ತರಿಗೊಳೆ ಅಭಿಮನ್ಯು ಕುಸಿದು ಜೋಲ್ದಂ

ಅಭಿಮನ್ಯುಮರಣವಾರ್ತಾ
ಪ್ರಭೂತಶೋಕಾಗ್ನಿ ಧರ್ಮತನಯನನಿರದಂ
ದಭಿಭವಿಸಿ ತನ್ನನಳುರ್ದಂ
ತೆ ಭಾಸ್ಕರಂ ಕೆಂಕಮಾದನಸ್ತಾಚಲದೊಳ್ ೨೫

ಅನ್ನೆಗಮಿತ್ತ ಸಂಸಪ್ತಕ ಬಳಜಳನಿಧಿಯಂ ಬಡಬಾನಳನಳುರ್ವಂತೞರ್ದು ನಿಜ ವಿಜಯ ಕಟಕಕ್ಕೆ ವಿಜಯಂ ಬೀಡನೆಯ್ದೆ ವಂದು ಶೋಕಸಾಗರದೊಳ್ ಮುೞುಗಾಡುವ ಪರಿಜನಮುಮಂ ತನ್ನ ಮೊಗಂ ನೋಡಲ್ ನಾಣ್ಚಿ ತಲೆಯಂ ಬಾಗಿ ನೆಲನಂ ಬರೆಯುತ್ತುಮಿರ್ದ ವೀರ ಭಟರುಮಂ ಕಂಡು ತನ್ನ ಮಗನ ಸಾವಂ ನಿಶ್ಚಯಿಸಿ ರಾಜಮಂದಿರಮಂ ಪೊಕ್ಕು ರಥದಿಂದಮಿೞಿದು ಧರ್ಮಪುತ್ರಂಗಂ ವಾಯುಪುತ್ರಂಗಂ ಪೊಡೆವಟ್ಟು ಕುಳ್ಳಿರ್ಪುದುಮವರ್ ತಲೆಯಂ ಬಾಗಿ ನೆಲನಂ ಬರೆಯುತ್ತುಮಿರೆ ಕಿರೀಟಿ ಕಂಡಿದೇನೆಂದು ಬೆಸಗೊಳೆ ಧರ್ಮಪುತ್ರನಿಂತೆಂದಂ

ಗುರು ಚಕ್ರವ್ಯೂಹಮಂ ಪಣ್ಣಿದೊಡೆ ಪುಗಲಿದಂ ಬಲ್ಲರಾರೆಂದೊಡಿಂ ನಾ
ನಿರೆ ಮತ್ತಾರ್ ಬಲ್ಲಿದರೆಂದೊರ್ವನೆ ರಿಪುಬಳ ವಾರಾಶಿಯಂ ಪೊಕ್ಕು ಮಿಕ್ಕಾಂ
ತರನಾಟಂದಿಕ್ಕಿ ದುರ್ಯೋಧನನ ತನಯರಂ ನೂರ್ವರಂ ಕೊಂದು ತತ್ಸಂ
ಗರದೊಳ್ ಕಾದೆಮ್ಮನಿಂತಾಂತಿಱಿದು ನಿಜಸುತಂ ದೇವಲೋಕಕ್ಕೆ ಸಂದಂ ೨೬

ಎಂಬುದುಂ ಪ್ರಚಂಡ ಕೋಪಪಾವಕಪ್ರಶಮಿತ ಶೋಕರಸನುಮುನ್ನತ ಲಲಾಟತಟಘಟಿತ ಭೀಷಣಭ್ರುಕುಟಿಯುಂ ಕಲ್ಪಾಂತ ದಿನಕರ ದುರ್ನಿರೀಕ್ಷನುಮುತ್ಪಾತ ಮಾರುತನಂತೆ ಸಕಲ ಭೂಭೃತ್ಕಂಪಕಾರಿಯುಂ ವಿಂಧ್ಯಾಚಳದಂತೆ ವರ್ಧಮಾನೋತ್ಸೇಧ ನುಮಂಧಕಾರಾತಿಯಂತೆ ಭೈರವಾಕಾರನುಮಾಗಿ

ಕೊಂದೆನ್ನ ಮಗನನಿಂ ಭಯ
ದಿಂದಂ ರಸೆವೊಕ್ಕುಮಜನ ಗುಂಡಿಗೆವೊಕ್ಕುಂ
ಮಂದರಧರನೀ ಪೊರ್ಕುೞಿ
ಪೊಂದಾವರೆವೊಕ್ಕು ಮೇಣವಂ ಬರ್ದುಕುವನೇ ೨೭

ನಾಳೆ ದಿನೇಶನಸ್ತದತ್ತುಡುಗದ ಮುನ್ನ ಸೈಂಧವನನಗುರ್ವಿಸೆ ಕೊಲ್ಲದೊಡೇನೋ ಗಾಂಡಿವಂಬಿಡಿದೆನೆ ಚಿಃ ತೊವಲ್ವಿಡಿದೆನಲ್ಲೆನೆ ವೈರಿಗೆ ಯುದ್ಧರಂಗದೊಳ್ ಎಂದು ಕೃತಪ್ರತಿಜ್ಞನಾಗಿರೆ, ಧರ್ಮಾತ್ಮಜಂ ಹರಿ ಪೇೞ್ದುದದೊಂದು ನಯದಿಂದಾ ರಾತ್ರಿ ಕುಂಭಜನಂ ಕಂಡು ವಿನಮ್ರನಾಗಿ ನೀಮಿಂತೆ ಕೆಯ್ಕೊಂಡು ಕಾದೆ ಎಮಗಿಂ ಬಾೞ್ವಾಸೆಯಾವುದೋ

ಎನೆ ಗುರು ಕರುಣಾ ರಸಮದು
ಮನದಿಂ ಪೊಱಪೊಣ್ಮೆ ನಿನಗೆ ಜಯಮಕ್ಕುಮನಂ
ತನ ಪೇೞ್ದ ತೆಱದೆ ನೆಗೞ್ನೆ
ವಿನಯದೆ ಬೀೞ್ಕೊಂಡು ನೃಪತಿ ಬೀಡಂ ಪೊಕ್ಕಂ ೨೮

ಆಗಳಾರೂಢ ಸರ್ವಜ್ಞಂ ಗಂಗಾನದೀ ತರಂಗೋಪಮಾನ ದುಕೂಲಾಂಬರ

ಪರಿಧಾನನುವಾಗಿ ಧವಳ ಶಯ್ಯಾತಳದೊಳ್ ಮಱಿದೊಱಗಿದನನಮೋಘಾಸ್ತ್ರ ಧನಂಜಯನಂ ನೋಡಿ ಪುಂಡರೀಕಾಕ್ಷಂ ಶಿವನಲ್ಲಿಗೆ ಕಿರೀಟಿಯಂ ಕೊಂಡೊಗೆದು ತ್ರಿಣೇತ್ರನ ಮುಂದಿಟೆಪುವುದುಮಭವಂ ತನ್ನ ಪಾದಪದ್ಮಂಗಳ್ಗೆಱಗಿದತಿರಥನುಮಂ ಮಧುಮಥನನುಮನಮೃತ ದೃಷ್ಟಿಯಿಂ ನೋಡಿ ಪಾಶುಪತದ ಮುಷ್ಟಿಯಂ ಬೇಡಲೆಂದು ಬಂದುದಂ ತನ್ನ ದಿವ್ಯಜ್ಞಾನದಿಂದಮಱಿದು ಅದನುಪದೇಶಂಗೆಯ್ದು ಪರಸಿ ಪೋಗೆನೆ ಪೊಡೆಮಟ್ಟು ಮಹಾಪಸಾದಮೆಂದ ಹರಿಗನನುಪೇಂದ್ರನಾ ದರ್ಭಶಯನ ತಳಕಿಟೆಪುದುಂ, ಇನನುದಯಿಸೆ ಪ್ರಧಾನ ನಾಯಕರಂ ತನ್ನೊಡನೆ ಕೂಡಿಕೊಂಡು ತವೆದೊಣೆಗಳನಮರೆ ಬಿಗಿದು ಗಾಂಡಿವಮನೇಱಿಸಿ ಕಿರೀಟಿ ಕುರುಧ್ವಜಿನಿಗೆ ಭಯಜ್ವರಮುಂ ಮಹೇಶ್ವರಜ್ವರಮುಂ ಬರೆ ಬರ್ಪುದುದಾರ ಮಹೇಶ್ವರನ ರಥದ ಬರವಂ ಕಂಡು ಕರ್ಣ ಶಲ್ಯ ಶಕುನಿ ಶಾರದ್ವತ ಕೃತವರ್ಮ ದುರ್ಯೋಧನ ದುಶ್ಶಾಸನರ್ ಮೊದಲಾದತಿರಥ ಸಮರಥ ಮಹಾರಥಾರ್ಧರಥರ್ ಒಂದೆಪಿಂದೆಯಲ್ಲದೊಂದೊಂದೊರ್ವರೊಳ್ ಸಂಧಿಸಿ ಗೊಂದಣಿಸಿ ನಿಂದಾಗಳ್

ಕಲಿಗಂ ಬಲ್ಲಾಳ್ಗಮಂಬೆತ್ತಿದೆನಿದುವೆ ಪದಂ ಮಾರ್ಕೊಳಲ್ ಸಿಂಧುರಾಜಂ
ಗೆಲಲೆಂದಾಂ ಬಂದೆನಿಂ ಕೊಂದಪನೆ ನೆರೆದು ನಿಂದಾನಿಮೆಂದಾಂತರಂ ಮೂ
ದಲಿಸುತೆಚ್ಚಂ ಪ್ರಚಂಡ ಪ್ರಳಯ ಘನಘಟಾರಾವದಿಂದಾರ್ದು ಬಾಣಾ
ವಲಿಯಿಂದಂ ಪೂಟೆ ರೋದೋವಿವರಮನೊದವಿತ್ತೊಂದು ಘೋರಾಂಧಕಾರಂ ೨೯

ಅಂತು ಧನಂಜಯನೆಚ್ಚ ಶರಸಂಘಾತದಿನೊಗೆದ ರಣಗತ್ತಲೆಯಂ ಮಾಡೆ ನೇಸಱ್ ಪಟ್ಟಿತ್ತು ವಿಜಯಂ ಸೋಲ್ತನೆಂದು ಕೌರವಬಲಮಾರ್ದೊಡೆ, ಜ್ವಳನಾಸ್ತ್ರದಿಂದಮಿಸೆ ಕತ್ತಲೆ ತೂಳ್ದು ತೆರಳ್ದಾಗಳ್ ಜಯದ್ರಥಂ ಬಂದಸುಂಗೊಳೆ ಪೊಣರೆ

ತುಡು ಪಾಶುಪತಮನೆನೆ ನರ
ನೆಡೆಮಡಗದೆ ತುಡೆ ದಿಶಾಳಿ ನಡುಗಿದುದು ಸುರು
ಳ್ದುಡುಗಿದುದು ವಿಯತ್ತಳಮೆಳೆ
ಪಿಡುಗಿದುದು ಕಲಂಕಿ ಕದಡಿದುದು ಶಿವನ ಮನಂ ೩೦

ತೆಗೆನೆಱಿದೊಱಿಕೊಂಡಿಸೆ ಶಿರಂ ಪರಿದತ್ತ ವಿಯತ್ತಳಂಬರಂ
ನೆಗೆದೊಡೆ ರಾಹು ಬಾಯ್ದೆಱಿದು ನುಂಗಲೆ ಬಂದಪುದೆಂಬ ಶಂಕೆಯಿಂ
ದಗಿದು ದಿನೇಶನಸ್ತಗಿರಿಯಂ ಮಱಿಗೊಂಡನಮೋಘಮೆಂಬ ಮಾ
ತುಗಳ ನೆಗಟ್ತೆಯಂ ಪಡೆದನಾಹವದೊಳ್ ಪರಸೈನ್ಯಭೈರವಂ ೩೧

ಕುಂಭಸಂಭವಂ ಜಳನಿಧಿಯಂ ಕುಡಿದ ಕುಂಭಸಂಭವನಂತೆ ಪಾಂಡವ ಬಳ ಜಳನಿಧಿಯನಳುರಲ್ ಬಗೆದು ನೇಸಱ್ ಪಟ್ಟೊಡಂ ಪೋಗದೆ ಪಗಲಿನನುವರದೊ

ಳಳ್ಳೆವಿಳ್ಳೆಯಾದ ಪಾಂಡವರನಿರುಳೊಳೆ ಗೆಲ್ವೆನೆಂದು ಚತುರ್ಬಲಂಗಳನೊಂದು ಮಾಡಿ ಕಾದೆ ಯುವುರಾಜನಂದನಂ ಭೀಮನಂದನನಾ ಪದದೊಳ್ ಕರೆದು ನೀನಿಂದಿನಿರುಳಿನುವರಮನೆನಗೆ ಗೆಲ್ದೀಯಲ್ವೇಟ್ಕುಮೆಂದೊಡಿದಾವುದು ಗಹನಮೆಂದು ನಿಶಾಚರಬಲದೊಡನೆ ಕಾಡನಳುರ್ವ ಬೇಗೆಯ ದಳ್ಳುರಿಯಂತೆ ತನ್ನ ಪಡೆಯೆಲ್ಲಮಂ ತೆರಳ್ಚಿ ತೇರಯಿಸಿ ಜೀರಗೆಯೊಕ್ಕಲ್ಮಾಡಿ ತುಟಿದು ಕೊಲೆ ರಾಜರಾಜನ ಬೆಸದೊಳಂಗರಾಜಂ ಬಂದು ತಾಗೆ, ಘಟೋತ್ಕಚಂ ಶೂಲಮಂ ಕೊಂಡು ಎಚ್ಚು ನಚ್ಚುಡುಗಿಸೆ

ನೆಲನದಿರ್ವಿನಮಿದಿರಂ ಬರೆ
ಕುಲಿಶಾಯುಧನಿತ್ತ ಶಕ್ತಿಯಿಂದಾತನುರ
ಸ್ಥಲಮನಿಡೆ ವಜ್ರಹತಿಯಿಂ
ಕುಲಗಿರಿ ಕೆಡೆವಂತೆ ಕೆಡೆದನಾ ದನುತನಯಂ ೩೨

ಆಗಳ್ ರವಿ ಪೂರ್ವಾಚಲಮನೇಱೆ ಕುಂಭಸಂಭವಂ ತನ್ನ ರಥಮನೇಱೆ ಶೃಂಗಾಟಕ ವ್ಯೂಹಮನೊಡ್ಡಿ ನಿಂದಾಗಳ್ ಧೃಷ್ಟದ್ಯುಮ್ನನುಂ ಪಾಂಡವ ಪತಾಕಿನಿಯುಮಂ ವಜ್ರವ್ಯೂಹಮನೊಡ್ಡಿ ನಿಲೆ ಧರ್ಮಪುತ್ರನುಂ ಸುಯೋಧನನುಮೊಡನೊಡನೆ ಕೆಯ್ವೀಸಿದಾಗಳ್ ವಿರಾಟಂ ತನ್ನ ಚತುರ್ಬಲಂಗಳನೊಂದುಮಾಡಿಕೊಂಡು

ಮಗಳಂ ಪಾರ್ಥಾತ್ಮಜಂಗಂ ತಲೆಬಟಿವಟಿಯೆಂದಿತ್ತುದಂ ನೆನೆನೆದು ತನ್ನ ಮಕ್ಕಳ್
ನೆಗಟ್ದಾ ಸಂಗ್ರಾಮದೊಳ್ ಸತ್ತುದುಮನೆ ಮನದೊಳ್ ತಾಳ್ದಿ ತಾಪಾಗಳಾ ಜೆ
ಟ್ಟಿಗನಂ ಕುಂಭೋದ್ಭವಂ ಬಂದದಿರದಿದಿರನಾಂತೊಂದೆ ಕೆಲ್ಲಂಬಿನಿಂ ಮೆ
ಲ್ಲಗೆ ಪಾರ್ದಾರ್ದೆಚ್ಚನೇಸಿಂ ತಲೆಪಱಿದು ಸಿಡಿಲ್ದತ್ತ ಬೀಟ್ವನ್ನಮಾಗಳ್ ೩೩

ಅಂತು ವಿರಾಟನನಿಕ್ಕಿ ವೀರರಸಕೇತನನಾಗಿರ್ದ ಕಳಶಕೇತನನಂ ನೋಡಿ ದ್ರುಪದಂ ಸೈರಿಸದೆ ಒಂದಕ್ಷೋಹಿಣೀ ಬಲಂಬೆರಸು ತಾಗಿ ಪೆರ್ಚಿದುಮ್ಮಚ್ಚದೊಳಚ್ಚರಿಯಾಗೆಚ್ಚೊಡೆ ಪೂಣ್ದೂರ್ತು ಘಟೋದ್ಭವಂ ದ್ರುಪದರಾಜ ಶಿರೋಂಬುಜಮನಾಗಳೇ ಭಾರ್ಗವಾಸ್ತ್ರದಿಂದನ್ನೆಱೆದೆಚ್ಚನ್; ಅಂತು ದ್ರುಪದನಟಿವಂ ಕಂಡಾತನ ಪನ್ನೊರ್ವರ್ ತಮ್ಮಂದಿರುಂ ಅಯ್ವರ್ ಕೈಕಯರುಂ ಕುಂತಿಯ ಮಾವನಪ್ಪ ಕುಂತಿಭೋಜನುಂಬೆರಸು ಪದಿನಾಲ್ಸಾಸಿರ ರಥಂಬೆರಸು ಬಂದು ತಾಗಿದಾಗಳವರೆಲ್ಲರುಮಂ ಪೇಟೆ ಪೆಸರಿಲ್ಲದಂತೆ ಕೊಂದು ಮುಂದಾಂಪರಾರುಮಿಲ್ಲದಿಕ್ಕಿ ಗೆಲ್ದ ಮಲ್ಲನಿರ್ದಂತಾಗಳ್ ಯುಧಿಷ್ಠಿರಂ ನಾರಾಯಣಂ ಪೇಟ್ದ ಕಪಟೋಪದೇಶದಿಂ ದ್ರೋಣನಂ ಕೆಯ್ಗೆಮಾಡಲೆಂದು ಪಾಂಡ್ಯಗಜ ಘಟೆಗಳನಿದಿರೊಳ್ ತಂದೊಡ್ಡಿದಾಗಳ್ ತನಗೆ ಮಾಱಾಂತ ಮದಾಂಧಸಿಂಧುರಂಗಳಂ ಸಿಂಧುರಾರಾತಿಯೆ ಕೊಲ್ವಂತೆ ಕೊಲೆ

ಸಾಮಜಮಶ್ವತ್ಥಾಮಂ
ನಾಮದಿನೊಂದಟಿದೊಡಲ್ಲಿ ಕಂಡು ಹತೋಶ್ವ

ತ್ಥಾಮಾ ಎನೆ ನೃಪನಶ್ವ
ತ್ಥಾಮನೆ ಗೆತ್ತೊಣರ್ದನೊವಜನೊರ್ವೆಸರಿಭಮಂ ३೪

ಒಗೆದ ಸುತ ಶೋಕದಿಂದಾ
ವಗೆಯಂತೊಳಗುರಿಯೆ ಭೋಂಕನೆರ್ದೆ ತೆಱೆಯಲ್ ಹಾ
ಮಗನೇ ಎಂದಶ್ರುಜಲಾ
ರ್ದ್ರ ಗಂಡನಾ ಗಂಡಿನೊಡನೆ ಬಿಸುಟಂ ಬಿಲ್ಲಂ ३೫

ಅಂತು ಬಿಸುಟು ವಿಚ್ಛಿನ್ನವೀರರಸನುಮುತ್ಪನ್ನ ಶೋಕರಸನುಮಾಗಿ ರಣಾಗ್ರದೊಳ್ ಆತ್ಮಯೋಗಿ ಬಿಲ್ಲೊವಜಂ ತನ್ನಸುವಂ ಉದಾತ್ತಯೋಗದೊಳೆ ಬಿಸುಟು ಅಧ್ಯಾತ್ಮವಿಶಾರದನಾಗಿ ಪರಮಾತ್ಮನೊಳ್ ಕೂಡಿದನಾಗಳ್ ಪೆಣನನಿಱಿದು ಪಗೆಗೊಂಡರೆಂಬ ನಾಣ್ಣುಡಿಯಂ ನನ್ನಿಮಾಡಿ ತಮ್ಮಯ್ಯಂ ಸತ್ತ ಮುಳಿಸಿನೊಳ್ ಕಣ್ಗಾಣದೆ ಧೃಷ್ಟದ್ಯುಮ್ನಂ ಶಿರೋಜಮಂ ಪಿಡಿದು ಗುರುವಂ ಪಚ್ಚಂತಿರೆ ಪಿರಿದು ಪೊಯ್ದಂ; ತಮ್ಮಯ್ಯನತೀತಮಾದುದನಱಿದು

ಒಱೆದುಗುತರ್ಪ ಕಣ್ಬನಿಗಳಂ ಬರಲೀಯದೆ ಕೋಪ ಪಾವಕಂ
ನಿಱಿಸೆ ಕನಲ್ದು ರೋಷದಿನಪಾಂಡವಮಾಗಿರೆ ಮಾಡದಂದು ಬಿ
ಲ್ಲೆಱೆಯನ ಪುತ್ರನಲ್ಲೆನೆನುತುಂ ಗುರುಪುತ್ರನಿದಿರ್ಚೆ ಭೀತಿಯಿಂ
ಮಱುಗಿ ತೆರಳ್ದು ತೂಳ್ದಿ ಸುಟಿಗೊಂಡುದು ಪಾಂಡವ ಸೈನ್ಯಸಾಗರಂ ३೬

ಆಗಳುರಿಯುರುಳಿಯುಂತಿರ್ಪ ನಾರಾಯಣಾಸ್ತ್ರಮಂ ತೊಟ್ಟೆಚ್ಚಾಗಳ್ ನಾರಾಯಣಾಸ್ತ್ರಮಂ ನಾರಾಯಣನುಪಾಯದೊಳೆ ಗೆಲ್ದನನ್ನೆಗಂ ನಳಿನೀಜೀವಿತೇಶ್ವರಂ ಅಪರಾಂಬುರಾಶೆಗಿಟಿಯೆ ಎರಡು ಪಡೆಗಳುಂ ಅಪಹಾರ ತೂರ್ಯಂಗಳಂ ಬಾಜಿಸಿ ತಂತಮ್ಮ ಬೀಡುಗಳ್ಗೆ ಪೋದರ್; ಅನ್ನೆಗಂ ಪನ್ನಗಕೇತನಂ ಅಶ್ವತ್ಥಾಮನ ಶೋಕಮನಾಱಿಸಲೆಂದು ಬಂದು

ಎನಗೆ ಕೂರ್ಪುದನಾ ಘಟಸಂಭವಂ
ನಿನಗೆ ಕೂರನಟಿಲ್ ನಿನತಲ್ತು ಕೇ
ಳೆನತುಮಾಱದ ಶೋಕಮನಿರ್ವರುಂ
ಮುನಿವರಂ ತವೆ ಕೊಂದೊಡನೀಗುವಂ ३೭

ಎನೆ ಅಶ್ವತ್ಥಾಮನಿಂತೆಂದಂ

ರಾಯಂಬೀ ಪೆಸರಿಲ್ಲದಂತು ಮುಟಿಸಿಂ ಮುಯ್ಯೇಱು ಸೂಱೆಂತು ಕ
ಟ್ಟಾಯಂ ಪೊಂಪುಟಿವೋಗೆ ತಂದೆಯಟಿವಿಂಗಾ ಭಾರ್ಗವಂ ಕೊಂದನಂ

ತೀಯೆಮ್ಮಯ್ಯನಿನಾದುದೊಂದು ಪಗೆಯಿಂ ಸೀಳ್ದುಗ್ರ ಪಾಂಚಾಳ ರಾ
ಜಾಯುಃಪಾರಮನನ್ಯ ಭೂಪ ಬಲಮಂ ಪರ್ದಿಂಗೆ ಬಿರ್ದಿಕ್ಕುವೆಂ ೩೮

ಎಂಬುದುಂ ತನ್ನಳಿಯನ ನುಡಿಗೆ ಶಾರದ್ವತಂ ಸಂತೋಷಂಬಟ್ಟು ಕೌರವೇಶ್ವರನ ನಿಂತೆಂದಂ: ನೀನೀತಂಗೆ ವೀರಪಟ್ಟಮಂ ಕಟ್ಟಿ ರಿಪು ನೃಪ ಬಲಕ್ಕೆ ತೋಜಿ ಬಿಡುವುದೆನೆ ಕಳಶಜನಿಂ ಬಟಿಕ್ಕೆ ಕರ್ಣಂಗೆಂದು ನುಡಿದ ಬೀರವಟ್ಟಮನೆಂತು ಕಟ್ಟುವೆನೆಂದೊಡಶ್ವತ್ಥಾಮನಿಂತೆಂದಂ

ನಿಜದೊಳೆ ಭೂಪರೆಂಬರವಿವೇಕಿಗಳಪ್ಪರದಕ್ಕೆ ನೀಂ ಫಣಿ
ಧ್ವಜ ಕಡುಕೆಯ್ದು ಕರ್ಣನನೆ ನಚ್ಚುವೆಯಪ್ಪೊಡೆ ಯುದ್ಧದೊಳ್ ವೃಷ
ಧ್ವಜನುಮನಿಕ್ಕಿ ಗೆಲ್ದರಿಗನೊಳ್ ತಲೆವಟ್ಟಿದಿರಾಗಿ ನಿಂದು ಸೂ
ತಜನಿವಂ ಗಡಂ ಪಗೆಯನೇಂ ಗಳ ಪಟ್ಟಮೆ ಪಾಜಿ ತಿಂಬುದೇ ೩೯

ಎಂಬುದುಮಂಗರಾಜಂ ಗುರುತನೂಜನಿಂತೆಂದಂ

ಎನಿತಳವುಳ್ಳೊಡಂ ದ್ವಿಜನ ಗಂಡಗುಣಕ್ಕಗಿವನ್ನರಾರೊ ನೆ
ಟ್ಟನೆ ವಿಷಮೊಳ್ಳೆಗುಳ್ಳೊಡಮದೊಳ್ಳೆಯೆ ಕಾಳಿಯ ನಾಗನಾಗದ
ಣ್ಮಿನ ಪಡೆಮಾತದೊಂದೆ ನೆವಮಾಗಿರೆ ಕೆಯ್ದುವನಿಕ್ಕಿ ಸತ್ತ ಸಾ
ವಿನ ಪಡಿಚಂದಮಾಗಿಯುಮಿದೇಂ ನಿಮಗಟ್ಟಿಯೊ ಗಂಡುವಾತುಗಳ ೪೦

ಎಂಬುದುಂ ತ್ರೈಲೋಕ್ಯ ಧನುರ್ಧರನಪ್ಪೆಮ್ಮಯ್ಯನ ಗಂಡವಾತನೀ ಮೀಂಗುಲಿಗಂ ಮೆಚ್ಚನಿವನಂ ಮುಂ ಕೊಂದು ಬಟಿಯಂ ಪಾಂಡವರಂ ಕೊಲ್ವೆನೆಂದು ಬಾಳಂ ಕಿಟ್ತು ಕರ್ಣನ ಮೇಲೆವಾಯ್ವುದುಮಿದಾಗದೆಂದು ಬಾರಿಸಿ

ಅಸದಳಮಾಗಿಯುಮೀ ನ
ಮ್ಮ ಸೈನ್ಯಮಿಂತೊರ್ವರೊರ್ವರೊಳ್ ಸೆಣಸಿ ಬಳ
ವ್ಯಸನದೊಳೆ ಕೆಟ್ಟುದಲ್ಲದೊ
ಡೆ ಸುಯೋಧನ ನಿನಗೆ ಮಲೆವ ಮಾರ್ವಲಮೊಳವೇ ೪೧

ಎಂಬುದುಮಶ್ವತ್ಥಾಮಂ ಕರ್ಣನೊಳಾದ ಮುಳಿಸನವಧಾರಿಸಲಾಜದೆ ಸುಯೋಧನನನಿಂತೆಂದಂ

ಬೀರವಟ್ಟಮನಾನಿರೆ ನೀನೀ ಸೂತಸುತಂಗೆಡೆಗೊಂಡು ಕೈ
ವಾರದಿಂದೊಸೆದಿತ್ತೊಡಮೇನಾಯ್ತೀ ಖಳನಿಲ್ಲಿ ಧನಂಜಯ

ಕ್ರೂರ ಬಾಣ ಗಣಾವಳಿಯಿಂದಮಟ್ಟಾಡಿದೊಡಲ್ಲದೆ ವೈರಿ ಸಂ
ಹಾರಕಾರಣ ಚಾಪಮನಾನೀ ಸಂಗರದೊಳ್ ಪಿಡಿಯೆಂ ಗಡಾ ೪೨

ಎಂಬುದುಂ ದುರ್ಯೋಧನಂ ಕರ್ಣನುಮನಶ್ವತ್ಥಾಮನುಮಂ ನಿಮ್ಮೊಳಗೆ ನೀಂ ಮುನಿಯಲ್ವೇಡ ನಿಮ್ಮ ಪುರುಷಕಾರಮನೆ ಬಗೆದು ನೆಗಟ್ವುದಾನುಮೆನ್ನೆತ್ತಿಕೊಂಡ ಕಜ್ಜಮಂ ನೆಗಟ್ದಿಲ್ಲದಿರೆನೆಂದಾಯೆಡೆಯಿನೆಟ್ದು ನಾಯಕರಂ ಬೀಡಿಗೆ ಪೋಗಲ್ವೇಟ್ದಿರಮನೆಯಂ ಪೊಕ್ಕು ಸಂಗರ ಪರಿಶ್ರಮಮನಾಜೆಸಿ ಮಂತ್ರಶಾಲೆಗೆ ವಂದು ಶಲ್ಯ ಶಕುನಿ ಶಾರದ್ವತ ಕೃತವರ್ಮ ದುಶ್ಶಾಸನಾದಿಗಳಂ ಬರಿಸಿ ಕರ್ಣನ ಮೊಗಮಂ ನೋಡಿ

ನಡುಗುವುದುಂತೆ ಪಾಂಡವ ಬಲಂ ನಿನಗರ್ಜುನನೆಂಬನೆಂದುಮು
ರ್ಕುಡುಗಿ ಸುರುಳ್ವನೀಯೆಡೆಗೆ ಪೇಟ್ ಪೆಱರಾರ್ ದೊರೆ ವೀರಪಟ್ಟಮಂ
ತಡೆಯದೆ ಕಟ್ಟಿ ವೈರಿಗಳ ಪಟ್ವನೆ ಪಾಜೆಸಿ ಕಾವುದೆನ್ನ ಬೆ
ಳ್ಗೊಡೆಯುಮನೆನ್ನ ಪಟ್ಟಮುಮನೆನ್ನುಮನಂಗ ಮಹೀತಳಾಧಿಪಾ ೪೩

ಎಂದು ಕರ್ಣನಂ ಕನಕಪೀಠದೊಳ್ ಕುಳ್ಳಿರಿಸಿ ತನ್ನ ಕೈಯೊಳೆ ಕರ್ಣಂಗಾ ವೀರಪಟ್ಟಮಂ ಕಟ್ಟಿ ಬೀಡಿಂಗೆ ಪೋಗಲ್ವೇಟ್ದು ನೇಸಱ್ ಮೂಡುವಾಗಳ್ ನಮ್ಮ ಪಡೆಯನೀ ಮಾಟ್ಕೆಯೊಳೊಡ್ಡಿಮೆಂದು ಪಡೆವಳರ್ಗೆ ಬೆಸಸಿ ದರ್ಭಾಸ್ತರಣದೊಳಾಯಿರುಳಂ ಕಳೆದಂ; ಅದಿತಿಪ್ರಿಯಪುತ್ರಂ ಉದಯಗಿರಿಯೊಳುದಯಿಸೆ ಕರ್ಣಂ ರಥಮನೇಜೆ ಮುನ್ನೊರ್ವನೆ ಶರಶಯನದೊಳಿರ್ದ ಗಾಂಗೇಯನಲ್ಲಿಗೆ ಬಂದು ರಥದಿಂದಮಿಟಿದು ಮೂಱು ಸೂಟ್ ಬಲವಂದು ತದೀಯ ಪಾದಪದ್ಮಂಗಳಂ ತಲೆಯೊಳಿಟ್ಟುಕೊಂಡು

ಆಮ್ಮಾತಜೆಯದೆ ಮುಳಿದುಂ
ನಿಮ್ಮಡಿಯಂ ನೋಯೆ ನುಡಿದೆನುಱದೇಳಿಸಲೇ
ನೆಮ್ಮಳವೆ ಮಱೆವುದಾ ಮನ
ದುಮ್ಮಚ್ಚರಮನಜ್ಜ ನಿಮ್ಮನೆರೆಯಲೆ ಬಂದೆಂ ೪೪

ಎಂಬುದುಂ ಕುರುಪಿತಾಮಹನಹರ್ಪತಿ ಸುತನನಿಂತೆದಂ

ನುಡಿವುದಂ ಪತಿಭಕ್ತಿಯಿಂ ನೀಂ ನುಡಿದೈ ಪೆಱತಂದದಿಂ
ನುಡಿದೆಯಲ್ತೆ ಮದಾಯಮಮೋಘಂ ಸೂಟ್ವಿಡೆಯಲ್ಕೆನಗಕ್ಕುಮಿ
ನ್ನೆಡೆಯೊಳೆಂದೆನದೆಂದುದದೇಂ ತಪ್ಪಾದುದೆ ನಮ್ಮೊವಜರ್ ಜಸಂ
ಬಡೆದ ಭಾರ್ಗವರಪ್ಪುದಱಿಂದಂ ನಂಟರುಮಂಗಾಧಿಪತೀ ೪೫

ಅದಲ್ಲದೆಯುಂ ನೀನೆಮಗೆ ಕುಂತಿಯ ಗಾಂಧಾರಿಯ ಮಕ್ಕಳ ಲೆಕ್ಕದೆ ಮೊಮ್ಮನೈ ಎಂದು, ಸಿಂಧುತನೂಜನಂಗಾಧಿರಾಜನ ನಯದ ವಿನಯದ ಪಾಟಿಯ ಪಸುಗೆಯ

ನುಡಿಗಳ್ಗೆ ಮನದೆಗೊಂಡೀತಂ ಕುಲಹೀನನಲ್ಲುಭಯ ಕುಲವಿಶುದ್ಧನಾಗಲೆವೇಱ್ಕುಮೆಂದು ನಿಶ್ಚೈಸಿ ನೀನೆಮಗಿಂಬು ಕೆಯ್ವೊಡಂ ಸುಯೋಧನನ ರಾಜ್ಯಮನೊಲ್ವೊಡಂ ಶಲ್ಯನನೆ ಸಾರಥಿಮಾಡಿ ಕಾದುವುದೆಂದು ಪರಸಿ ಪೋಗೆಂಬುದುಂ ಮಹಾ ಪ್ರಸಾದಮೆಂದು ಪೊಡೆವಟ್ಟು ಕರ್ಣಂ ಸಂಗ್ರಾಮ ಭೂಮಿಗೆ ವಂದು ಹಸ್ತ್ಯಶ್ವರಥಪದಾತಿ ಬಲಂಗಳನೊಂದು ಮಾಡಿ ಮಕರವ್ಯೂಹಮನೊಡ್ಡಿದಾಗಳ್ ಭೀಮಸೇನಂ ರುದ್ರಾವತಾರನ ರಥಕ್ಕದಿರದೆ ತನ್ನ ರಥಮಂ ಪರಿಯಿಸಿದುದನಶ್ವತ್ಥಾಮಂ ಕಂಡು ಭೀಮನೆಮ್ಮಂ ಬಳಸಿದಪ್ಪನೆಂದು ಬಗೆದು

ತೇರಂ ಕುದುರೆಯನೆಸಗುವ
ಸಾರಥಿಯ ಪೊಡರ್ಪನಯ್ದು ಬಾಣದೊಳುಪಸಂ
ಹಾರಿಸಿ ತಟತಟ ತೊಳಗುವ
ನಾರಾಚದಿನೆಚ್ಚನೂಱೆ ಭೀಮನ ನೊಸಲಂ ೪೬

ಅಂತು ಭೀಮಸೇನಂ ನಾರಾಚಘಾತದಿಂ ಪುಣ್ಗೂರ್ತು ಬಸವೞಿದುಸಿರಲ ಪ್ಪೊಡಮಾಱದೆ ಬಿಲ್ಲಂ ಕೊಪ್ಪಂ ಪಿಡಿದೆಱಗಿ ಕಿಱಿದಾನುಂ ಬೇಗಮಿರ್ದು ನೊಸಲೊಳ್ ನಟ್ಟ ನಾರಾಚಮನೆಂತಾನುಂ ಕಿೞ್ತು ತನ್ನಿಂ ತಾನೆ ಚೇತರಿಸಿ ಸಿಂಹನಾದದಿನಾರ್ದು ಅಯ್ದು ಶರಂಗಳಿಂ ಸುರುಳ್ವಿನಮೆಚ್ಚನಾ ದ್ವಿಜನ ಸೂತವರೂಥ ತುರಂಗಮಂಗಳಂ; ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಗಳೆಂಬ ರಥಕಲ್ಪವಿಶೇಷವಿನ್ಯಾಸಗಳನಱಿದು ಸಾರಥಿಗಳ್ ಚೋದಿಸುವಾಗಳ್ ಕಾದೆ ಪತಂಗಮಂಡಲಮಪರ ಗಿರಿತಟಮನೆಯ್ದುವುದುಂ ಎರಡುಂ ಪಡೆಗಳಪಹಾರತೂರ್ಯಂಗಳಂ ಬಾಜಿಸಿ ತಂತಮ್ಮ ಬೀಡುಗಳ್ಗೆ ಪೋದುವಾಗಳ್ ರಾಜರಾಜನಲ್ಲಿಗಂಗರಾಜಂ ಬಂದು ಹಯೋಪಾಯ ಕುಶಲರಪ್ಪ ಗಾಂಗೇಯರಱಿಪಿದ ಮಾತನೇಕಾಂತದೊಳಱಿಪುವುದುಂ ಶಲ್ಯನನೆಂತಾನುಮೊಡಂಬಡೆ ನುಡಿದು ನಿನಗೆ ಸಾರಥಿ ಮಾಡುವೆನೆಂದು ದಿನಕರತನೂಜನಂ ಬೀಡಿಂಗೆ ಪೋಗಲ್ವೇೞ್ದು ರಾಜರಾಜಂ ಮದ್ರರಾಜನ ಮನೆಗೆ ಬರ್ಪುದುಮಾತನತ್ಯಂತ ಸಂಭ್ರಮಾಕ್ರಾಂತ ಹೃದಯನಾಗಿ ಇದಿರ್ಗೊಂಡು ಕುಳ್ಳಿರಿಸಿ ನೀಂ ಬೞಿಯಟ್ಟಲಾಗದೆ ಕೆಮ್ಮನಿನ್ನೆಂತುಮೇಂ ಮನೆವಾೞ್ತೆಯಂ ಬೆಸಸಲ್ಕೆ ಬಂದೆಯಿಳಾಧಿಪಾಯೆನೆ

ಪುಸಿಯೆನೆ ರಥಮಂ ಹರಿ ಚೋ
ದಿಸುವಂತೆವೊಲಿರ್ದದೆಂತು ನರನಂ ಗೆಲಿಪಂ
ವಿಸಸನದೊಳಂತೆ ನೀಮುಂ
ಪೆಸರಂ ಕರ್ಣಂಗೆ ಮಾಡಿ ಗೆಲ್ಲಂಗೊಳ್ಳಿಂ ೪೭

ಎಂಬುದುಂ ಮದ್ರರಾಜನುಮ್ಮಚ್ಚದೊಳುಮ್ಮನೆ ಬೆಮರ್ತು ಕಿನಿಸಿ ಕಿಂಕಿರಿವೋಗಿ

ಕಲಿಯನೆ ಪಂದೆ ಮಾೞ್ಪ ಕಡುವಂದೆಯನೊಳ್ಗಲಿ ಮಾೞ್ಪ ತಕ್ಕನಂ
ಪೊಲೆಯನೆ ಮಾೞ್ಪ ಮುಂ ಪೊಲೆಯನಂ ನೆಱೆ ತಕ್ಕನೆ ಮಾೞ್ಪ ತಮ್ಮೊಳ

ಗ್ಗಲಿಸಿ ಪೊದಳ್ದು ಪರ್ವಿದವಿವೇಕತೆಯಿಂ ನೃಪ ಚಿತ್ತವೃತ್ತಿ ಸಂ
ಚಲಮದಜೆಂದಮೋಲಗಿಸಿ ಬಾಬ್ವುದೆ ಕಷ್ಟಮಿಳಾಧಿನಾಥರಂ ೪೮

ಅನುಪಮ ವಿಕ್ರಮಕ್ರಮಮುದಾರಗುಣಂ ಋತವಾಕ್ಯಮೆಂಬ ಪೆಂ
ಪೆನಲಿವು ಮೂಱ್ ನಾಲ್ಕೆ ಗುಣಮತ್ತ ಮದಾನ್ವಿತ ರಾಜಬೀಜಸಂ
ಜನಿತ ಗುಣಂ ಮದಂ ಮದಮನಾಳ್ದವಿವೇಕತೆಯಿಂದಮಲ್ತೆ ತೊ
ಟ್ಟಿನ ಮೊಲೆವಾಲನುಂಡ ಗುಣಮಿಂತಿವನಾರ್ ಕಿಡಿಪರ್ ನರೇಂದ್ರರೊಳ್ ೪೯

ಪಿಂದೆ ಕಡಂಗಿ ತೇರನೆಸೆಗೆಂಬವನಂಬಿಗನಾಜಿ ರಂಗದೊಳ್
ಮುಂದೆ ಸಮಾನನಾಗಿ ಬೆಸದಿರ್ಪವನುಂ ತುಱುಕಾಱನಾಗೆ ಮ
ತ್ಸ್ಯಂದನ ಚೋದನಕ್ರಮಮದುಂ ಪೊಲೆಯಂಗಮರ್ದಿರ್ಕುಮಂತುಟಂ
ನೀಂ ಗೆಯಗೆಯ್ದು ಪೇೞ್ದಿಯಿದನಾರ್ ಪಡೆವರ್ ಫಣಿರಾಜಕೇತನಾ ೫೦

ನೀನಿನ್ನೆನಿತಂ ಕೂರದೊಡಂ ನಿನ್ನ ನುಡಿಯನಾಜಿರಂಗದೊಳ್ ಮೀಱುವೆನೇ ಎಂದು ನೊಂದು ನುಡಿದ ಮದ್ರರಾಜನ ನುಡಿಗೆ

ಮಣಿಕುಂಡಲಮುಂ ಕವಚಂ
ಮಣಿಯದ ಚಾರಿತ್ರಮುಗ್ರ ತೇಜಮುಮೀಯೊ
ಳ್ಗುಣಮುಂ ಕಲಿತನಮುಮಿವೇಂ
ಪ್ರಣತಾರೀ ಸೂತ ಸುತನೊಳೊಡವುಟ್ಟುಗುಮೇ ೫೧

ಎಂದು ಕುರುಕುಲ ಚೂಡಾಮಣಿ ಶಲ್ಯನ ಹೃಚ್ಛಲ್ಯಮೆಲ್ಲಮುಂ ಕೞಲೆ ನುಡಿದೊಡಾತನಿಂತೆಂದಂ

ಒಂದೆ ಗಡ ಹರಿಯ ಪೇೞ್ದೊಂ
ದಂದದೆ ನರನೆಸಗುವಂತೆ ಕರ್ಣನುಮೆನ್ನಂ
ದೊಂದೋಜೆಯೊಳೆಸಗದೊಡಾಂ
ಸ್ಯಂದನದಿಂದಿೞಿದು ಪೋಪೆನೆಸೆಗೆಂ ತೇರಂ ೫೨

ಎಂಬುದುಮಂಗಮಹೀಪತಿಯುಂ ಬರಿಸಿಯೊರ್ವರೊರ್ವರೊಳೊಡಂಬಡಿಸಿ ಕರ್ಣನುಂ ತಾನುಂ ನಿಜ ನಿವಾಸಂಗಳ್ಗೆ ಪೋದರಾಗಳಾ ಪಡೆಮಾತನಜಾತಶತ್ರು ಕೇಳ್ದು ಮುರಾಂತಕಂಗೆ ಬೞಿಯಟ್ಟಿ ಬರಿಸಿ ಪೇೞ್ದೊಡೆ ನೀನೆಂದಂತೆ ರಥಕಲ್ಪಮೆಂಬುದು ಶಲ್ಯಂ ಗೊಡವುಟ್ಟಿದುದಾದೊಡಮವರಿರ್ವರ್ಗರ್ಮೊರ್ವರೊರ್ವರೊಳ್ ಮೂಗುದುಱಿಸಲಾಗದ ಕಡ್ಡಮುವರ್ಗೆಂತುಮೊಡಂಬಡಾಗದೆಂಬುದುಂ, ನೇಸಱ್ ಮೂಡೆ ಅಂಗರಾಜಂ ನೆಱೆಯೆ ಕೆಯ್ಗೆಯ್ದು ಬಂದು ಮದ್ರರಾಜಂಗೆ ಪೊಡೆವಟ್ಟು ಕುರುರಾಜಧ್ವಜಿನಿಯಂ

ಪದ್ಮವ್ಯೂಹಮನೊಡ್ಡಿದೊಡೆ, ಅನ್ನೆಗಂ ದುರ್ಯೋಧನಂಗಾಪ್ತರಪ್ಪ ಸಂಸಪ್ತಕರತಿರಥಮಥನನ ರಥಮಂ ತಮ್ಮತ್ತ ತೆಗೆಯಲೊಡಮವರ ರಥಕ್ಕೆ ಅಮ್ಮನಗಂಧವಾರಣಂ ಪರಿದು ಸಂಸಪ್ತಕಬಲಕ್ಕಾಳ್ದನಾಗಿರ್ದ ಸುಶರ್ಮನಂ ಕೊಂದೊಡುಟಿದ ನಾಯಕರೆಲ್ಲರ್ ತಮ್ಮಾಳ್ದನ ಸಾವಂ ಕಂಡು ರಿಪುಕುರಂಗಕಂಠೀರವನಂ ಮಾರ್ಕೊಂಡು ಕಾದೆ ಸಂಸಪ್ತಕನಿಕುರುಂಬ ದೊಳಗೊರ್ವರುಮಂ ಕಿಱಿವೀಟಲೀಯದೆ ಕೊಂದು ಕರ್ಣನೊಳ್ ಪೋಣರಲ್ ಬಂದು, ನಕುಳ ಸಹದೇವರಿಂದ ಅರವಿಂದಬಾಂಧವತನೂಜ ಮಹಾಪ್ರಹರಣಹತಿಯೊಳ್ ಯಮನಂದನನ ನೋವುಮನಾತ್ಮೀಯ ನಾಯಕರ ಸಾವುಮನಱಿದು ತಾನುಂ ಹರಿಯುಂ ಭೂಪನನೆಯ್ದೆ ಆತನುಂ ಇವರುಮಂ ಒಸೆದು ಪರಸಿ ಕರ್ಣಂ ಮುಯ್ಯೇಟು ಸೂಟೆಳೆಯಂ ತಳದೊಳೆ ಪಿಟಿದನೆಂಬುದಂ ಪೇಟ್ದು

ಏಮ್ಮೊಗ್ಗೆ ಕರ್ಣನಿಂತೀ
ನಿಮ್ಮಂದಿಗರಿಱಿಯೆ ಸಾವನೇ ಸುಖಮಿರಿಮಿ
ನ್ನಮ್ಮ ಸುಯೋಧನನೊಳ್ ಪಗೆ
ಯಮ್ಮಱಿದಾನುಂ ತಪೋನಿಯೋಗದೊಳಿರ್ಪೆಂ ೫೩

ಎಂದು ತನ್ನ ನೋಯೆ ನುಡಿದ ನಿಜಾಗ್ರಜನ ನುಡಿಗೆ ಮನದೊಳೇವೈಸಿಯುಮೇವೈಸದೆ ವಿನಯಮನೆ ಮುಂದಿಟ್ಟು ನಿಮ್ಮಂ ಮುಳಿಯಿಸಿದ ಕರ್ಣನೆಂಬನೆನಗೇವಿರಿಯಂ ನೇಸಱಿಂದೊಳಗಾಂ ದಿನಕರಸುತನನಿಕ್ಕಿ ಬಂದಲ್ಲದೆ ಕಾಣೆಂ ದಲ್ ಭವತ್ಪಾದಾಬ್ಜಮನೆಂ ದಜಾತಶತ್ರುಗೆ ಪೊಡೆವಟ್ಟು ದೇವದತ್ತ ಶಂಖಮಂ ಪೂರಿಸಿ ಗಾಂಡೀವಮನೇಱಿಸಿ ರಥಮನೇಱಿ ಕೌರಧ್ವಜಿನಿಗೆ ಭಯಜ್ವರಂ ಬರ್ಪಂತೆ ಬರ್ಪುದುಂ, ಮುಗಿಲೂಱಿದ ಮೂಱುಲೋಕಮುಂ ಕರ್ಣಾರ್ಜುನರ ಯುದ್ಧಮಂ ನೋಡಲೆಂದು ನೆರೆದಲ್ಲಿ, ಇತ್ತಲ್ ನೆರವಿವಡೆದೆನ್ನ ಪ್ರತಿಜ್ಞೆಯಂ ನೆಱಪಲಿಂದವಸರಂಬಡೆದೆನೆಂದು ಪವನತನಯಂ ದುರ್ಯೋಧನಾನುಜರಂ ಪೆಸರ್ವೆಸರೊಳೆ ಕರೆದು ಮೂದಲಿಸಿದೊಡೆ ಮುನ್ನೆ ತಮ್ಮೊಡವುಟ್ಟಿದರ್ ಸತ್ತಟಿಲೊಳನಿಬರುಂ ಬಂದು ತಾಗಿದಾಗಳ್ ದುರ್ಯೋಧನ ದುಶ್ಶಾಸನರಿರ್ವರುಮುಟಿಯುಟಿದ ಕೌರವರೆಲ್ಲರುಮಂ ಜೀರಗೆಯೊಕ್ಕಲ್ಮಾಡಿ ಕೆಡೆದ ಪೆಣಂಗಳನೆಡಗಲಿಸಿ ನಿಂದು

ಚಲದಿಂ ಕೃಷ್ಣೆಯ ಕೇಶಮಂ ಪಿಡಿದ ನಿನ್ನಿಂದಾದಟಿಲ್ ನಿನ್ನುರ
ಸ್ಥಲಮಂ ಪೋಟಿದೆ ಪೋಪುದಲ್ತೆನಗದೇಕಳ್ಕಿರ್ದಪೈ ಬಾಟ್ವಿಪಂ
ಬಲದೇನಿಂ ನಿನಗುಂಟೆ ನಿನ್ನನುಜರಂ ಕಂಡೆಂತುಮೇನೆನ್ನ ತೋ
ಳ್ವಲೆಯೊಳ್ ಸಿಲ್ಕಿದೆಯೆಂದು ಮೂದಲಿಪುದುಂ ದುಶ್ಶಾಸನಂ ತಾಗಿದಂ ೫೪

ತಾಗಿದಾಗಳ್ ನಿಶಿತ ಮಾರ್ಗಣಂಗಳಿಂದಮಂಬು ತಪ್ಪೆ ಜಟ್ಟಿಗ ಬಿಲ್ಲಾಳಂತೆಚ್ಚು ಪಾಯ್ವರಾತಿಯ ಮೆಯ್ಯ ನೆತ್ತರಂ ಕಂಡು ಸೂಟೇಸಿನೊಳಿವನ ನೆತ್ತರೊಕ್ಕೊಡಂ ದ್ರೌಪದಿಯ ಕೇಶಪಾಶಮಂ ತೊಯ್ದು ಮುಡಿಯಲ್ ನೆಱಿಯದೆಂದು

ಅವನಂ ಬಂಚಿಸಿ ಗದೆಗೊಂ
ಡವನ ವರೂಥಮನೆ ತಿಣ್ಣಮಿಟ್ಟೊಡೆ ಗದೆಗೊಂ
ಡವನೆಯ್ತರೆ ರಥದಿಂದಿೞೆ
ದವನಿಯೊಳವನುಮನುರುಳ್ಚಿದಂ ಪವನಸುತಂ ೫೫

ಬಳೆ ನುರ್ಗುತ್ತಿರೆ ಮೆಟ್ಟಿ ಗಂಟಲನಿವಂ ದುಶ್ಶಾಸನಂ ಭೀಮನಿಂ
ಬಳ ಸಂಪನ್ನನವುಂಕಿ ಕೊಂದಪೆನಿದಂ ಮಾರ್ಕೊಳ್ವ ಬಲ್ಲಾಳ್ಗಸುಂ
ಗೊಳೆ ಬಾಳೆತ್ತಿದೆನೇಕೆ ಕಣ್ಣ ಮಿಡುಕೈ ಪಿಂಗಾಕ್ಷ ನೀನೇಕೆ ಮಿ
ಳ್ಮಿಳ ನೋಡುತ್ತುಳನಿರ್ದಯೆಂದದಟರಂ ಭೀಮಂ ಪಳಂಚಲ್ವಿದಂ ೫೬

ಅಂತು ಮುಳಿದ ಪವನಜನ ಕೋಪಾಟೋಪಮಂ ಕಂಡು ಕೌರವ ಬಲದ ನಾಯಕರೊರ್ವರಪ್ಪೊಡಂ ಮಿಟ್ಟೆಂದು ಮಿಡುಕಲಣ್ಮದಿರೆ ಪವನಾತ್ಮಜಂ ದ್ರುಪದಾತ್ಮಜೆಗೆ ಬೞಿಯನಟ್ಟುವುದುಮಾ ವನಿತೆ ಜಯವನಿತೆ ಬರ್ಪಂತೆ ಬಂದು

ಉಸಿರೊತ್ತಿಂ ತಿದಿಯಂತಿರೊತ್ತಿದ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್
ಮಸಕಂಗುಂದಿದ ಮೆಯ್ ವಲಂ ಬಡಿವ ಕಾಲ್ ಭೂಭಾಗದೊಳ್ ತಂದು ತಾ
ಟಿಸುತುಂ ಕೋಟಲೆಗೊಳ್ವ ರತ್ನಮಕುಟದ್ಯೋತೋತ್ತಮಾಂಗಂ ವಿರಾ
ಜಿಸುವನ್ನಂ ಪುಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದಳ್ ೫೭

ಆಗಳ್ ವೃಕೋದರಂ ತನ್ನ ತಳೋದರಿಯ ಮುಖಮಂ ನೋಡಿ ನಿನ್ನೆನ್ನ ಪ್ರತಿಜ್ಞೆಯಂ ನೆಱಪುವಂ ಬಾಯೆಂದು ಕೆಲದೊಳ್ ಕುಳ್ಳಿರಿಸಿ ದೃಢಕಠಿನಹೃದಯನಪ್ಪ ಹಿರಣ್ಯಾಕ್ಷನುರಮಂ ಪೋೞ್ವ ನಾರಸಿಂಗನಂತೆ ಸುರಿಗೆಯೊಳುರಮಂ ಬಿಕ್ಕನೆ ಬಿರಿಯಿೞಿದು ಬೆಲಗಸೆಯಿನ್ ನೆತ್ತರಂ ಮೊಗೆಮೊಗೆದು ದ್ರುಪದಜೆಯ ನೆತ್ತಿಯೊಳೆಱೆದೆಱೆದು ಕೇಶಮನೆತ್ತಂ

ಪಸರಿಸಿ ಪಂದಲೆಯಂ ಮೆ
ಟ್ಟಿಸಿ ವೈರಿಯ ಪಲ್ಲ ಪಣಿಗೆಯಿಂ ಬಾರ್ಚಿ ಪೊದ
ಳ್ದೊಸಗೆಯಿನವನ ಕರುಳ್ಗಳೆ
ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ ೫೮

ಅಂತು ತನ್ನ ಪಗೆಯುಂ ಬಗೆಯುಮೊಡನೊಡನೆ ಮುಡಿಯೆ ರಿಪುಬಳರುಧಿರ ಜಲಂಗಳೊಳಂ ರುಚಿರ ತದೀಯಾಂತ್ರ ಮಾಲೆಯನೆ ಮಾಲೆ ಮಾಡಿ ಮುಡಿಯಿಸಿ ಕೃಷ್ಣೆಯ ಮೊಗಮಂ ನೋಡಿ ಮುಗುಳ್ನಗೆ ನಕ್ಕು ಕೌರವಕುಳವಿಳಯಕೇತುವಿಂತೆಂದಂ

ಇದಱೊಳ್ ಶ್ವೇತಾತ್ರಪತ್ರಸ್ಥಗಿತದಿಶಾಮಂಡಲಂ ರಾಜಚಕ್ರಂ
ಪುದಿದಟ್ಟಾಡಿತ್ತಡಂಗಿತ್ತಿದಱೊಳೆ ಕುರುರಾಜಾನ್ವಯಂ ಮತ್ಪ್ರತಾಪ

ಕ್ಕಿದಱಿಂದಂ ನೋಡರ್ಗುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತ
ಬ್ಜದಳಾಕ್ಷೀ ಪೇೞ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶಪ್ರಪಂಚಂ ೫೯

ಎಂದು ನುಡಿದು ದ್ರೌಪದಿಯಂ ಪಿಡಿಯನೇಱಿಸಿ ಬೀಡಿಂಗೆ ಕಳಿಪಿ ಗಜಱಿ ಗರ್ಜಿಸಿ ದಂಡಮಂ ಪೋಲ್ವ ತನ್ನ ಗದಾದಂಡಮಂ ಕೊಂಡು ತಿರಿಪಿ ಬೀಸುತ್ತುಂ ಬರ್ಪ ಭೀಮಸೇನನಂ ಕರ್ಣನ ಮಗಂ ವೃಷಸೇನಂ ಕಂಡು ಮುಟ್ಟೆ ಪೆರ್ಚೆ ಮುರಾಂತಕಂ ಕಪಿಕೇತನನನಿಂತೆಂದಂ

ಇವನ ಶರಕಲ್ಪಮಿವನದ
ಟಿವನಳವಿನಱ್ಮು ನಿನಗಮುಗ್ಗಳಮಿವನಂ
ಪವನ ಸುತಂ ಗೆಲ್ಲಂ ನೀ
ನಿವನೊಳ್ ಪೊಣರೆಂದೊಡವನೊಳರಿಗಂ ಪೊಣರ್ದಂ ೬೦

ತನಗೆ ವಿನಾಯಕಂ ದಯೆಯಿನಿತ್ತ ಜಯಾಸ್ತ್ರಮನುರ್ಚಿಕೊಂಡು ಭೋಂ
ಕೆನೆ ದೊಣೆಯಿಂ ಶರಾಸನದೊಳಂತದನಾಗಡೆ ಪೂಡಿ ಧಾತ್ರಿ ತಿ
ಱ್ಱನೆ ತಿರಿವನ್ನೆಗಂ ತೆಗೆದು ಕಂಧರಸಂಧಿಯನೆಯ್ದೆ ನೋಡಿ ತೊ
ಟ್ಟನೆ ನರನೆಚ್ಚೊಡುಚ್ಚಳಿಸಿ ಬಿಬ್ದುದು ವೈರಿ ಶಿರಸ್ಸರೋರುಹಂ ೬೧

ತನ್ನ ಪಿರಿಯ ಮಗನಪ್ಪ ವೃಷಸೇನನನಂತಕನಣಲೊಳಡಸಿ ವಿಕ್ರಮಾರ್ಜುನನಂ ಕರ್ಣನಸುಂಗೊಳೆ ಬಂದು ತಾಗಿದಾಗಳ್ ಇರ್ವರೊರ್ವರೊರ್ವರಂ ಮುಟ್ಟೆವಂದಲ್ಲಿ ವಿಕ್ರಾಂತತುಂಗನಂಗಾಧಿರಾಜನನಿಂತೆಂದಂ

ಎನ್ನ ಪೆಸರ್ಗೇಳ್ದು ಸೈರಿಸ
ದನ್ನಯದಿಂತೀಗಳೆನ್ನ ರೂಪಂ ಕಂಡುಂ
ನಿನ್ನರಸನಱುಗದಮ್ಮನ
ನಿನ್ನ ತನೂಭವನ ಸಾವುಗಂಡುಂ ಮಾಣ್ಬಾ ೬೨

ಎಂದ ನೃಪಪರಮಾತ್ಮನ ಪಾಟಿಯ ಪಸುಗೆಯ ನುಡಿಗೆ ದಶಶತಕರತನೂಜನಿಂತೆಂದಂ

ಒಡಲುಂ ಪ್ರಾಣಮುಮೆಂಬಿವು
ಕಿಡಲಾದುವು ಜಸಮದೊಂದೆ ಕಿಡದದನಾಂ ಬ
ಲ್ವಿಡಿವಿಡಿದು ನೆಗೞ್ದಿನುೞಿದಱಿ
ವಡೆ ಮಾತಂ ಮಾಡಿ ನೀನೆ ಕೆಮ್ಮನೆ ನುಡಿವೈ ೬೩

ಎಂದೀ ಬಾಯ್ಮಾತಿನೊಳೇ
ವಂದಪುದಮ್ಮಣ್ಮಿ ಕಾದುಕೊಳ್ಳೆನುತುಂ ಭೋಂ
ರೆಂದಿಸೆ ಪೊಸ ಮಸೆಯಂಬಿನ
ತಂದಲ ಬೆಳ್ಸರಿಗಳಿರದೆ ಕವಿದುವು ನರನಂ ೬೪

ಕವಿವ ಶರಾಳಿಯಂ ನಿಜ ಶರಾಳಿಗಳಟ್ಟೆ ತೆರಳ್ದಿ ತೂಳ್ದಿ ಮಾ
ರ್ಕವಿದು ಪಳಂಚಿ ಪಾಯ್ದೊರಸೆ ಪುಟ್ಟಿದ ಕಿರ್ಚಳುರ್ದೆಟ್ಟಿಜಾಂಡದಂ
ತುವರಮುಗುರ್ವು ಪರ್ವಿ ಕರಮರ್ವಿಸೆ ದಳ್ಳುರಿ ಪೆರ್ಚಿ ಕಂಡು ಖಾಂ
ಡವವನದಾಹಮಂ ನೆನೆಯಿಸಿತ್ತು ಗುರ್ಣಾರ್ಣವನಸ್ತ್ರಕೌಶಲಂ ೬೫

ಆಗಳ್ ಮದ್ರರಾಜನಂಗಾಧಿರಾಜನನಿಂತೆಂದನೀಯಂಬುಗಳೊಳೇಂ ತೀರ್ದಪುದು ದಿವ್ಯಾಸ್ತ್ರಂಗಳಿಂದೆಚ್ಚು ಪಗೆಯಂ ಸಾಧ್ಯಂ ಮಾಡೆಂಬುದುಂ ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್

ಮುಳಿಸಂ ನೆಜಿಪಲ್ಕರ್ಧಾ
ವಳೀಕ ಶರರೂಪದಿಂದಸುಂಗೊಳೆ ದೊಣೆಯಿಂ
ಪೊಳೆದು ಬರೆ ಕೆಯ್ಗೆ ತಾಂ ವಿ
ಸ್ಫುಳಿಂಗ ಪಿಂಗಳಿತ ಭುವನಭವನಾಭೋಗಂ ೬೬

ಆಕರ್ಣಾಂತಂ ತೆಗೆ ನೆಜೆ
ದಾ ಕರ್ಣನಿಸಲ್ಕೆ ಬಗೆದೊಡುಡುಗುಡುಗಿಸಲೀ
ಭೀಕರ ಬಾಣಮನಾದ ವಿ
ವೇಕದಿನುರದೆಡೆಗೆ ತುಡದೆ ತಲೆಗೆಯೆ ತುಡುವಾ ೬೭

ಉರದೆಡೆಗೆ ತುಡೆ ಜಯಶ್ರೀ
ಗಿರಲೆಡೆ ನಿನಗಪ್ಪುದಾ ಸುಯೋಧನನೊಳ್ ಶ್ರೀ
ಗಿರಲೆಡೆಯಪ್ಪುದು ಮೇಣ್ ದಿನ
ಕರಸುತ ತೊದಳುಂಟೆ ಬಗೆಯ ಸಂದೆಯಮುಂಟೆ ೬೮

ಎಂಬುದುಂ ಶಲ್ಯನ ನುಡಿದ ನುಡಿಯವಧಾರಿಸಿ ತನ್ನ ಮನದೊಳೆ

ಎನಿತುಂ ಶಲ್ಯನ ಪೇಟ್ದಿ ಪಾಂಗೆ ತೊದಳಿಲ್ಲಿಂತಾದೊಡಾ ಶಕ್ರ ಪು
ತ್ರನನಾಂ ಕೊಂದೊಡೆ ಧರ್ಮಪುತ್ರನಟಿಗುಂ ತಾಯೆಂದೆ ಮುಂ ಕೊಂತಿ ಬಂ

ದಿನಿಸಂ ಪ್ರಾರ್ಥಿಸಿ ಪೋದಳೆನ್ನನದನಾಂ ಮಾಣ್ದಿರ್ದೆನಿರ್ದಾಗಳೊ
ಳ್ಪಿನ ಪೆರ್ಮಾತಿನ ನನ್ನಿ ಬನ್ನದೊಳೊಡಂಬಟ್ಟಿರ್ಪುದಂ ಮಾಟ್ಪೆನೇ ೯೯

ಎಂಬುದನೆ ಬಗೆದು ಪೆಱತನ
ಱಂ ಬಗೆಯದೆ ಮದ್ರಪತಿಯನೆಂದಂಮುಂ ತೊ
ಟ್ಟಂಬನದನುಗಿದು ಕುಂದಿಸಿ
ದಂ ಭಯದಿಂ ಕರ್ಣನೆಂದು ಲೋಕಂ ನಗದೇ ೭೦

ಉಡುಗುಡುಗುಡುಗೆಂದಿಸೆ ಬಱಿ
ಸಿಡಿಲೆಱಪಂತೆಱಪ ಸರಲ ಬರವಂ ಕಂಡಾ
ಗಡೆ ಚಕ್ರಿ ನೆಲದೊಳೆಣ್ಬೆರ
ಲಡಂಗೆ ನರರಥಮನೊತ್ತಿದಂ ನಿಪುಣತೆಯಿಂ ೭೧

ಒತ್ತುವುದುಂ ಶರಮಿರದೆ
ಯ್ದುತ್ತೆ ಕಿರೀಟಿಯ ಕಿರೀಟಮಂ ಕೊಱೆದೊಡೆ ಪ
ರ್ವಿತ್ತು ಭಯಮಿಂದ್ರನಂ ಮು
ತ್ತಿತ್ತಟಿಲೀಶ್ವರನನಾಗಳಾ ಸಂಕಟದೊಳ್ ೭೨

ಅಂತು ರುಂದ್ರ ನೀಳಾದ್ರೀಂದ್ರ ರತ್ನಕೂಟಾಗ್ರಮುದಗ್ರ ವಜ್ರಘಾತದಿಂದುರುಳ್ವಂತೆ ರತ್ನ ಮಕುಟಮರಾತಿ ಶಾತಶರದಿನುಗುಳ್ವುದುಮಳಿನೀಳೋಜ್ವಳ ಸಹಸ್ರಕುಂತಳಂಗಳ್ ಪರಕಲಿಸಿ ಬಂದು ಪೊಱಮುಯ್ವನಳ್ಳಿಱಿಯೆ ಪಚ್ಚುಗಂಟಿಕ್ಕಿ ಗಾಂಡೀವಧನ್ವಂ ಸನ್ನದ್ಧನಾಗಿರ್ಪನ್ನೆಗಂ

ಪುರಿಗಣೆಯಪ್ಪ ಕಾರಣದಿನಂತದು ತಪ್ಪಿದೆನೆಂದು ನೊಂದು ಪ
ಲ್ಮೊರೆದಹಿರೂಪದಿಂ ಮಗುಟ್ದು ಬಂದಿನನಂದನನಲ್ಲಿಗೆನ್ನನಂ
ತರಿಸದೆ ತೊಟ್ಟು ಬೇಗಮಿಸು ವೈರಿಯನೀಗಳೆ ಕೊಂದಪೆಂ ರಸಾಂ
ಬರಧರಣೀ ವಿಭಾಗದೊಳಗಾವೆಡೆವೊಕ್ಕೊಡಮಂಗನಾಯಕಾ ೭೩

ಎಂಬುದುಂ ನೀನಾರ್ಗೆನೆಂಬೆಯದಾವುದು ಕಾರಣದಿಂದಮೆನ್ನ ದೊಣೆಯಂ ಪೊಕ್ಕಿರ್ದೆಯೆಂದೊಡೆ ಆನಶ್ವಸೇನನೆಂಬ ಪನ್ನಗನೆಂದು ತನ್ನ ವೈರಕಾರಣಮನಱಿಯೆ ಪೇೞ್ದೊಡೆ ದರಹಸಿತ ವದನಾರವಿಂದನಾಗಿ

ಶರ ರೂಪದೊಳಿರೆ ನಿನ್ನಂ
ಶರಮೆಂದಾಂ ತೊಟ್ಟೆನಱಿದು ತುಡುವೆನೆ ನಿನ್ನಂ
ನೆರದೊಳ್ ಕೊಲ್ವಂತೆನಗೇ
ನರಿಯನೆ ಗಾಂಡೀವಧನ್ವನೆಂಬುದುಮಾಗಳ್ ೭೪

ನೀಂ ನಿನ್ನ ಪಗೆಯನಾರ್ಪೊಡ
ದಂ ನೆಱಪೆನೆ ನೆಗೆದು ಬರ್ಪ ವಿಷಪನ್ನಗನಂ
ಪನ್ನತನನೆಡೆಯೊಳರಿಗಂ
ತನ್ನಯ ಗರುಡಾಸ್ತ್ರದಿಂದೆ ಕುಱಿದಱಿದಱಿದಂ ೭೫

ಆಗಳಂಗರಾಜಂಗೆ ಶಲ್ಯಂ ಕಿನಿಸಿ ಮುಳಿಸಿನೊಳೆ ಕಣ್ಣಾಗಣದಿಂತಪ್ಪೇಕಗ್ರಾಹಿಗಮೊರಂಟಂಗಂ ರಥಮನೆಸೆಗೆನೆಂದು ವರೂಥದಿಂದಿೞಿದು ಪೋಗೆ

ಅರಿಗನ ಬಟ್ಟಿನಂಬುಗಳ ಬಲ್ಸರಿ ಸೋಂಕುಗುಮೇೞಿಮೆನ್ನ ತೋ
ಳ್ನೆರಮೆನಗೆನ್ನ ಬಿಲ್ಲೆ ನೆರಮೆಂದು ವರೂಥ ತುರಂಗಮಂಗಳಂ
ತುರಿಪದೆ ತಾನೆ ಚೋದಿಸುತುಮಾರ್ದಿಸುತುಂ ಕಡಿಕೆಯ್ದು ಕಾದೆ ಭೀ
ಕರ ರಥಚಕ್ರಮಂ ಪಿಡಿದು ನುಂಗಿದೊಳೊರ್ಮೆಯೆ ಧಾತ್ರಿ ಕೋಪದಿಂ ೭೬

ಅಂತು ತನ್ನಂ ಮುನ್ನೆ ಮುಯ್ಯೇಱು ಸೂೞ್ವರವೊಲ್ಲಣಿಗೆಯುಂ ಪಿಡಿವಂತೆ ಪಿಂಡಿ ಪಿಡಿದ ಪಗೆಗೆ ರಥಚಕ್ರಮಂ ನುಂಗುವುದುಂ ಕರ್ಣಂ ರಥದಿಂದಿೞಿದು ಗಾಲಿಯನೆತ್ತುವಾಗಳಿವನನೀ ಪದದೊಳ್ ಕಡಿದೊಟ್ಟದಾಗಳ್ ಗೆಲಲಾಱೆಯೆಂದು ನುಡಿದ ಮುಕುಂದನ ನುಡಿಗೆ ಕೊಕ್ಕರಿಸಿ ಜಗದೇಕಮಲ್ಲನ್

ಬಱುವಂ ಸಾರಥಿಯಿಲ್ಲ ಮೆಯ್ಗೆ ಮಱೆಯುಂ ತಾನಿಲ್ಲದೆಂತೀಗಳಾ
ನಿಱಿವೆಂ ನೋಡಿರೆ ಮತ್ತಮೊಂದನಿಸಲುಂ ಕೆಯ್ಯೇಱದೇಕೆಂದುಮಾ
ನಱಿಯೆಂ ಕೂರ್ಮೆಯೆ ಮಿಕ್ಕು ಬಂದಪುದಿದರ್ಕೇಗೆಯ್ವೆನೇನೆಂಬೆನಾಂ
ಮಱೆದೆಂ ಮುನ್ನಿನದೊಂದು ವೈರಮನಿದಿಂತೇ ಕಾರಣಂ ಭೂಧರಾ ೭೭

ಎಂಬುದುಮೆನಿತಱಿಯದಿರ್ದೊಡಂ ಸೋದರಿಕೆಯೆ ಮಿಕ್ಕು ಬರ್ಕುಮಾಗದೆಯೆಂದು ತನ್ನಂತರ್ಗತದೊಳ್ ಬಗೆದಸುರಾಂತಕನಿಂತೆಂದಂ

ನೆಗಟ್ದಭಿಮನ್ಯುವಂ ಚಲದಿನಂದಿಱಿದಿಂದು ನಿಜಾಗ್ರಜಾತನಂ
ಸುಗಿವಿನಮೆಚ್ಚು ಬೀರದೊಳೆ ಬೀಗುವ ಸೂತ ಸುತಂಗೆ ನೀನುಮಾ
ಜಿಗೆ ಸೆಡೆದಿರ್ದೆಯಪ್ಪೊಡಿರು ಚಕ್ರನಿಘಾತದಿನಿಕ್ಕಿ ಬೀರಮು
ರ್ವಿಗೆ ಪಡಿಚಂದಮಾಗೆ ತಱಿದೊಟ್ಟಿ ಜಯಾಂಗನೆಗಾಣ್ಮನಾದಪೆಂ ೭೮

ಎಂಬನ್ನೆಗಂ ಧರಾತಳಮಳಱೆ ರಥದ ಗಾಲಿಯಂ ಕಿೞ್ತು ಮತ್ತಂ ರಥಮನಪ್ರತಿರಥನೇಱಿ ನಿಟ್ಟಾಲಿಯಾಗೆ ಮುಟ್ಟೆವಂದು ಕಪಿಧ್ವಜಂ ಧ್ವಾಂಕ್ಷಧ್ವಜಮನುಡಿದು ಕೆಡೆವಿನಮೆಚ್ಚಾಗಳ್

ಪಱಯಿಗೆ ಬಿಟ್ಟೊಡೆ ಬೀರದ
ಪಱವಿಗೆಯಂ ನಿಱಿಸಲೆಂದೆ ಹರಿ ವಕ್ಷಮನ
ಲ್ಲಱವೋಗೆಯೆಚ್ಚು ಮುಳಿಸವ
ಗಱಯಿಸುತಿರೆ ನರನ ಬಿಲ್ಲ ಗೊಣೆಯುಮನೆಚ್ಚಂ ೭೯

ಅಂತು ಕರ್ಣ ನಿಶಿತವಿಕರ್ಣ ಹತಿಯಿಂದಮಸುರಾಂತಕಂ ಕಱಯೆ ನೊಂದು

ಕಸೆಯಂ ಬಿಟ್ಟುಱದಭಿಮಂ
ತ್ರಿಸಿ ಚಕ್ರಮನಸುರವೈರಿಯಿಡುವಾಗಳ್ ಬಾ
ರಿಸಿ ಪೆಱತು ಗೊಣೆಯದಿಂದೇ
ರಿಸಿ ಬಿಲ್ಲಂ ತ್ರಿಭುವನಂಗಳಳ್ಳಾಡುವಿನಂ ೮೦

ಗಿರಿಜೆಯ ಮೆಚ್ಚಿ ಕೊಟ್ಟ ನಿಶಿತಾಸ್ತ್ರಮನಂಜಲಿಕಾಸ್ತ್ರಮಂ ಭಯಂ
ಕರತರಮಾಗೆ ಕೊಂಡು ವಿಧಿಯಿಂದಭಿಮಂತ್ರಿಸಿ ಪೂಡೆ ಬಿಲ್ಲೊಳು
ರ್ವರೆ ನಡುಗಿತ್ತಜಾಂಡಮೊಡೆದತ್ತು ನೆಲಂ ಪಿಡುಗಿತ್ತು ಸಪ್ತ ಸಾ
ಗರಮುಡುಗಿತ್ತು ಸಾಹಸಮದೇಂ ಪಿರಿದೋ ಕದನತ್ರಿಣೇತ್ರನಾ ೮೧

ಮುಳಿದೆಚ್ಚಾಗಳ್ ಮಹೋಗ್ರಪ್ರಳಯ ಶಿಖಿಶಿಖಾನೀಕಮಂ ವಿಸ್ಫುಲಿಂಗಂ
ಗಳುಮಂ ಬೀಱುತ್ತುಮೌರ್ವಜ್ವಳನ ರುಚಿಯುಮಂ ತಾನೆ ತೋಱುತ್ತುಮಾಟಂ
ದಳುರುತ್ತುಂ ಬಂದು ಕೊಂಡಾಗಳೆ ಗಗನ ತಳಂ ಪಾಯ್ದ ಕೆನ್ನೆತ್ತರಿಂದು
ಜ್ಜಳಿಸುತ್ತಿರ್ಪನ್ನೆಗಂ ಬಿಟ್ಟುದು ಭರದೆ ಸಿಡಿಲ್ದತ್ತ ಕರ್ಣೋತ್ತಮಾಂಗಂ ೮೨

ಕುಡುಮಿಂಚಿನ ಸಿಡಿಲುರುಳಿಯೊ
ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್
ನಡೆ ನೋಡೆ ನೋಡೆ ದಿನಪನೊ
ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ೮೩

ಪಿಡಿದನೆ ಪುರಿಗಣೆಯನೆರ
ಟ್ನುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ
ಪಿಡಿದಱಿದನೆಂದು ದೇವರ
ಪಡೆ ಗಡಣದೆ ಪೊಗೞ್ದುದಿನತನೂಜನ ಗಂಡಂ ೮೪

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ

ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ೮೬

ಕರ್ಣನ ಬಟಿವಟಿಯೆನೆ ತನ್ನ ಪೋಪುದನಭಿನಯಿಸುವಂತೆ ಶೋಕೋದ್ರೇಕದೊಳ್ ಮೆಯ್ಯಟಿಯದೆ ಕನಕರಥದೊಳ್ ಮೆಯ್ಯನೀಡಾಡಿ ನಾಡಾಡಿಯಲ್ಲದೆ ಮೂರ್ಛೆವೋದ ದುರ್ಯೋಧನನನಶ್ವತ್ಥಾಮ ಕೃಪ ಕೃತವರ್ಮ ಶಕುನಿಯರ್ ನಿಜ ನಿವಾಸಕ್ಕೊಡಗೊಂಡು ಪೋಗೆ, ಪರಿವಾರಜನೋಪನೀತ ಹಿಮ ಶಿಶಿರ ಧಾರಾ ಪರಿಷೇಕದಿಂದೆಂತಾನುಂ ಮೂರ್ಛೆಯಿಂದೆೞ್ಚಿತ್ತು ಕರ್ಣನಂ ನೆನೆದು ಸ್ಮರಣ ಮಾತ್ರದೊಳೆ ಶೋಕಸಾಗರಂ ಕರೆಗಣ್ಮೆ ಸೈರಿಸಲಾಱದೆ

ಒಡಲೆರಡೊಂದೆ ಜೀವಮಿವರ್ಗೆಂಬುದನೆಂಬುದು ಲೋಕಮೀಗಳಾ
ನುಡಿ ಪುಸಿಯಾಯ್ತು ನಿನ್ನಸು ಕಿರೀಟಿಯ ಶಾತ ಶರಂಗಳಿಂದೆ ಪೋ
ಪೊಡಮೆನಗಿನ್ನಮೀಯೊಡಲೊಳಿರ್ದುದು ನಾಣಿಲಿ ಜೀವಮೆಂದೊಡಾ
ವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಮಳ್ಕಿಱುಮಂಗವಲ್ಲಭಾ ೮೭

ಎಂದು ಕರ್ಣನೊಳಾದ ಶೋಕಾನಲದೊಳ್ ಬಾಯಟಿದು ಪಟಿಯಿಸುವ ನಿಜತನೂಜನ ಶೋಕಮನಾಱಿಸಲೆಂದು ಧೃತರಾಷ್ಟ್ರನುಂ ಗಾಂಧಾರಿಯುಂ ಬರೆವರೆ ಗೆಂಟಱೊಳ್ ಕಂಡು ದುಶ್ಶಾಸನನ ಸಾವಂ ನೆನೆದು ತಾಯ್ತಂದೆಯರಂ ನೋಡಲ್ ನಾಣ್ಚಿ

ಪವನಜನಂತು ಪೂಣ್ದು ಯುವರಾಜನ ನೆತ್ತರನಾರ್ದು ಪೀರ್ದನಿಂ
ತವಗಡದಿಂ ದಿನೇಶನನಂಕದ ಗಾಂಡಿವಿ ಕೊಂದನೆಂತು ಪಾಂ
ಡವರನಿದಿರ್ಚಿ ಸಾಧಿಸುವೆ ಸಂಧಿಯನೊಲ್ವುದೆ ಕಜ್ಜಮೀಗಳೆಂ
ಬವರ್ಗಳ ಮಾತುಗೇಳ್ವನಿತನಿನ್ನೆನಗಂ ಬಿದಿ ಮಾಡಿತಾಗದೇ ೮೮

ಎಂಬನ್ನೆಗಮೆಯ್ದೆವಂದ ಪಿತೃದ್ವಂದ್ವ ಚರಣಕ್ಕೆ ವಿನಮಿತೋತ್ತಮಾಂಗನಾದನನಿರ್ವರುಂ ಪರಸಿ ಕರ್ಣಂಗಸಾಧ್ಯನೊಳಾ ಗಾಂಡಿವಿಯೊಳ್ ಕಱುತ್ತಿಜೆವರಾರಿಂ ಮಾಡುವಂ ಸಂಧಿಯಂ ಕೆಯ್ಯನೊಡ್ಡಿ ಬೇಡಿದಪ್ಪೆನೆಂದ ಧೃತರಾಷ್ಟ್ರನ ನುಡಿಗನುಬಲಮಾಗಿ ಗಾಂಧಾರಿ ನುಡಿಯೆ ಕೇಳ್ದಭಿಮಾನಧನಂ ಸುಯೋಧನನಿತೆಂದಂ

ದೋಷಮೆ ನಿಮ್ಮ ಪೇೞ್ದುದೆನಗೆಂತುಮೊಡಂಬಡಲಪ್ಪುದೊಂದೆ ದು
ಶ್ಶಾಸನ ರಕ್ತಪಾನದೊಳೆ ಸೊರ್ಕಿದ ಪಾತಕನಂ ಪೊರಳ್ಚಿ ಕೊಂ
ದೀ ಸಮರಾವನೀತಳದೊಳಿಂ ಬಲಿಗೆಯ್ವಿನಮೊಲ್ಲೆನಲ್ತೆ ನಿ
ರ್ದೋಷಿಗಳೊಳ್ ಪೃಥಾಸುತರೊಳಿಂ ಮಗುೞ್ದುಂ ಪುದುವಾೞ್ವೆನೆಂಬೆನೇ ೮೯

ನರನಂ ಮುಂ ಕೊಲ್ವೆನಾಂ ಕರ್ಣನನಟಿದುದಜೆಂ ಕೊಲ್ವೆನಾ ಭೀಮನಂ ಸಂ
ಗರದೊಳ್ ಸೀಳ್ದೊಟ್ಟಿ ದುಶ್ಶಾಸನನಟಿಲನದಂ ನೀಗುವೆಂ ಪೋಕುಮಂತಿ
ರ್ವರುಮಂ ಕೊಂದಂದು ಮೇಣಾನವರಿದಿರಿದಿರೊಳ್ ಕಾದಿ ಸತ್ತಂದು ಮೇಣ್ ವಿ
ಸ್ಫುರಿತಂ ಮತ್ಕೋಪಮುಂ ನಿಮ್ಮಡಿಯುಮನಿದೆ ಬೀಟ್ಕೊಂಡೆನಿಂ ಪೋಗಿಮೇಟಿಂ ೯೦

ಎಂದು ತಾಯ್ಗಂ ತಂದೆಗಮೆಱಗಿ ಪೊಡೆವಟ್ಟು ಪೋಗಲ್ವೇಟ್ಟು ಶಲ್ಯ ಶಕುನಿ ಕೃಪ ಕೃತವರ್ಮಾಶ್ವತ್ಥಾಮ ಪ್ರಧಾನ ವೀರಪುರುಷರಂ ಬರಿಸಿ ಯಥೋಚಿತ ಪ್ರತಿಪತ್ತಿಗಳೊಳಿರಿಸಿ ಪೇಟಿಮಿನ್ನೆಮ್ಮ ನಿಯೋಗಮೇನೆನೆ ಶಾರದ್ವತನಿಂತೆಂದಂ

ಇಱಿವೊಡೆ ನೆರವೊಳೆಮಿನಿಬರು
ಮಿಱಿ ಕಲಹಮಪಾಯಬಹುಳಮಿನ್ನುಂ ನಯದ
ತ್ತೆಱಗುವೊಡೆ ಸಂಧಿ ಹರಿಗನೊ
ಳುಱುಗುಂ ನಿನಗಿಂತಿವೆರಡೆ ಕಜ್ಜಂ ನೃಪತಿ ೯೧

ಎಂಬುದುಂ ಬಟಿಕ್ಕಿನ ನುಡಿಗೆ ಸೈರಿಸಲಾಱದೆ ಫಣಿಕೇತನನಿಂತೆಂದಂ

ಪಟಿವಾಡಯ್ದನೆ ಬೇಡೆಯುಂ ಕುಡದ ನಾನೇನೆಂದು ಸಂಧಾನಮಂ
ಗಟಿಯಿಪ್ಪೆಂ ಗಟಿಯಿಪ್ಪೆನಂಗನೃಪನಂ ನೀನೆತ್ತಿ ತಂದೆನ್ನ ಮುಂ
ದಿಟಿಪಲ್ಕಾರ್ಪೊಡಮಾವುದಾಗಿ ಕೃಪ ನೀಂ ಪೇಟ್ದಪ್ಪೆಯೀ ಮಾತನಿ
ನ್ನುಟಿ ದುರ್ಯೋಧನನಲ್ಲನೇ ಕಳದೊಳಂ ಕಾಣ್ಬಂತು ಕೌಂತೇಯರಂ ೯೨

ಎಂಬುದುಂ ಜಳಧರಧ್ವನಿಯಿನಶ್ವತ್ಥಾಮನಿಂತೆಂದಂ

ಅಂಬಿಗನೊಳಾದುದಿದು ಋಣ
ಸಂಬಂಧಂ ನಿನಗದಮೋಘಮಿದನುಟಿದವರಾ
ರ್ಗಂ ಬಿಡಿಸಲ್ಕೇಂ ಬರ್ಕುಮೆ
ನೀಂ ಬೆಸಸುವುದೆನ್ನನಾಂತರಂ ತವೆ ಕೊಲ್ವೆಂ ೯೩

ಎಂದಶ್ವತ್ಥಾಮಂ ಕರ್ಣನಂ ಪಟಿದು ನುಡಿದೊಡಾ ನುಡಿಗೆ ಮುನಿದು ಕೊಲ್ವನಿತುವರಂ ಬಗೆದು ದುರ್ಯೋಧನನಿಂತೆಂದಂ

ನಿನ್ನಿಂದಂ ತ್ರಿಭುವನ ರಾ
ಜ್ಯೋನ್ನತಿ ಬಂದೆನಗೆ ಸಾರ್ಗುಮಪ್ಪೊಡಮೊಲ್ಲೆಂ
ನೀನ್ನುಡಿದು ಬರ್ದುಕಿದ್ದೈ ಪೆಱ
ರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೇ ೯೪

ಎಂಬುದುಮೀನುಡಿಯೆ ನಿನ್ನ ಕೂರ್ಮೆಗಂ ತಕ್ಕೂರ್ಮೆಗಂ ದೊರೆಯಪ್ಪುದಾದೊಡಮರಾತಿ ಸೈನ್ಯಮಂ ತವೆ ಕೊಂದಲ್ಲದೆ ನಿನ್ನ ಮೊಗಮಂ ನೋಡೆನೆಂದಶ್ವತ್ಥಾಮನಾಸ್ಥಾನದಿಂದೆಟ್ಟು ಪೋದನಾಗಳ್ ಭೂನಾಥಂ ಮದ್ರರಾಜನಂ ಬೀರವಟ್ಟಮನಾಂಪುದೆನೆ ಸೇನಾಧಿಪತ್ಯಭರಮಮಂ ಮದ್ರರಾಜಂ ತಾಳ್ದಿ ಅಭಿನವವ್ಯೂಹಮನೊಡ್ಡಿ ಕೆಯ್ವೀಸಿದಾಗಳ್ ಪಾಂಡವ ಕೌರವ ಬಲದ ಕಲಿಕೆಯ ಪ್ರಧಾನ ನಾಯಕರ್ಕಳ್ ಮುಟ್ಟೆವಂದು, ಸಹದೇವಂ ಶಕುನಿಯಂ ತಜೆವುದುಂ, ಭೀಮ ನಕುಳ ಸಹದೇವರುಮಂ ಶಲ್ಯಂ ವಿರಥರ್ಮಾಡಿ ಭೀಮನಂ ಪೊಣರ್ದು ನೆಲಕ್ಕಿಕ್ಕಿ ಬೆನ್ನಂ ಮೆಟ್ಟಿ ದಾಂಟುವ ಮದಗಜದಂತೆ ಕೊಲಲೊಲ್ಲದೆ ದಾಂಟಿದಾಗಳ್ ದುರ್ಯೋಧನನಟಿಲ್ದು ಕಾದುವ ಮಾಟ್ಕೆಯಲ್ಲವಿದುಕೆಮ್ಮನೆ ನಣ್ಪಿನ ಮೇಳಗಾಳೆಗಂ ರಾಜ್ಯೋದಯವಮ್ಮ ನಿಮ್ಮ ಬಲದಿಂದೆನಗಪ್ಪುದೆ ಮದ್ವಿರೋಧಿಯಂ ಭೇದಿಸಲಾನೆ ಸಾಲ್ವೆನಿರಿಮನ್ನೆಗಮೀ ರಣರಂಗಭೂಮಿಯೊಳ್ ಎನೆ, ರಾಜರಾಜಂ ತನ್ನಂ ಮೂದಲಿಸಿ ನುಡಿದುದರ್ಕೆ ಶಲ್ಯಂ ಮನದೊಳೇವಯಿಸಿ ಪಾಂಡವ ಪತಾಕಿನಿಯೊಳೊಂದಕ್ಷೋಹಿಣೀ ಬಲಮಂ ಕೊಂದು ದ್ರುಪದನ ಮಕ್ಕಳಯ್ವರುಮನಾತನ ತಮ್ಮಂದಿರಿರ್ಪತ್ತಯ್ವರುಮಂ ಶಕಟ ವಿಕಟರ್ ಮೊದಲಾಗೆ ಪನ್ನಿರ್ಛಾಸಿರ ಮಕುಟಬದ್ಧರಂ ಕೊಂದು ಅಂತಕಾತ್ಮಜನಂತಸುಂಗೊಳೆ ಕಾದಿ ಪೊಯ್ದೊಡೆ ಮದಾಂಧಗಂಧ ಸಿಂಧುರಂ ಪೊಯ್ದು ಪೆರ್ಮರನಂತೆ ನೆಲನದಿರೆ ಕೆಡೆದ ತನ್ನಳಿಯನಂ ಮದ್ರರಾಜಂ ಕಂಡು ಕರುಣಿಸಿ

ಮುಳಿಯಿಸದನ್ನಮೀ ನೃಪನಿನಾಗದು ಸಾವೆನಗೆಂತುಮೀತನಂ
ಮುಳಿಯಿಪೆನೆಂದುರಃಸ್ಥಳಮನಂತೊದೆದಾಗಡೆ ಕಂತುಗೀಶ್ವರಂ
ಮುಳಿದವೊಲಾ ನೃಪಂ ಮುಳಿದು ನೋಡೆ ವಿಲೋಚನ ಪಾವಕಂ ತಗು
ಳ್ದಳುರ್ದೊಡೆ ಬೂದಿಯಾದುದೊಡಲಾಗಳೆ ಮದ್ರ ಮಹಾಮಹೀಶನಾ ೯೫

ಮದ್ರರಾಜಂ ಭಸ್ಮೀಭೂತನಾದ ಮಾತನಹಿಕೇತನಂ ಕೇಳ್ದು ವಿರೋಧಿ ಸಾಧನಮನೆನ್ನ ಗದಾಶನಿಯಿಂದುರುಳ್ಚುವೆನೆಂದು ವಿಕ್ರಮೈಕ ಸಹಾಯನಾಗಿ ಸಂಗ್ರಾಮ ರಂಗಕ್ಕೆ ನಡೆಯಲೆಂದಿರ್ದ ಕುರುಕುಳ ಚೂಡಾಮಣಿಯ ದಕ್ಷಿಣ ಕರಾಗ್ರಮಂ ಪಿಡಿದು ಸಂಜಯನಿಂತೆಂದಂ ದೇವರ ಬಾಹುಬಳಮಜೇಯಮಪ್ಪುದಾದೊಡಂ ಏನಂ ನೆಗಟ್ದೊಡಂ ಕುರುಪಿತಾಮಹನೊಳಾಳೋಚಿಸಿ ನೆಗಟ್ವುದೆನೆ ಮುಳಿಸಾಜಿ ನುಡಿದು ಕಾಲವಂಚನೆಗೆಯ್ಯಲ್ ಬಗೆದು ಸಂಗ್ರಾಮರಂಗದೊಳಗನೆ ನೆಣದ ಪಳ್ಳಂಗಳಂ ಪಾಯ್ದುಂ ನೆತ್ತರ ತೊಱೆಗಳಂ ಬಂಚಿಸಿಯುಮಡಗಿನಿಡುವುಗಳಂ ದಾಂಟಿಯುಂ ಪೆಣದ ತಿಂತಿಣಿಯಂ ನೂಂಕಿಯುಂ ರಥದ ಘಟ್ಟಣೆಗಳನೇಜಿ ಪಾಯ್ದುಂ ತೇರ ಪಲಗೆಯಂ ಮೆಟ್ಟಿಯುಂ ಪೋಗಿವೋಗಿ ಭೂತ ಪ್ರೇತ ಪಿಶಾಚ ನಿಶಾಚರನಿಚಯನಿಚಿತ ಭೂಭಾಗಮನೆಯ್ದೆವಂದಾಗಳ್

ಬೇಡ ವಿರೋಧಮೆಂತುಮರಿಕೇಸರಿಯೊಳ್ ಸಮಸಂದು ಸಂಧಿಯಂ
ಮಾಡೆನೆ ಮಾಡಲೊಲ್ಲದೆ ಸುಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ
ಮಾಡಿದ ಜಾತಿ ಬೆಳ್ ನಿನಗದೇವಿರಿದೀಯೆಡಱೆಂದು ಮುಂದೆ ಬಂ
ದೇಡಿಸುವಂತಿರಾಡಿದುದೊಂದು ಮರುಳ್ ಫಣಿರಾಜಕೇತುವಂ ೯೬

ಮರುಳೆನೆ ಲೋಕದೊಳ್ ನೆಗೞ್ದ ಕೊಳ್ಗುಳದೊಳ್ ಮರುಳಾಟವಾಡುವಾಂ
ಮರುಳೆನೊ ವಿಕ್ರಮಾರ್ಜುನನೊಳೊಲ್ಲದೆ ಸಂಧಿಯನುರ್ಕಿ ಕೆಟ್ಟ ನೀಂ
ಮರುಳಯೊ ಪೇೞಿ ಪೇೞದೊಡೆ ಪೋಗದಿರೀಶ್ವರನಾಣೆಯೆಂದು ಮ
ಲ್ಮರುಳಿನಿಸಾನುಮಂ ತಗೆದು ಕಾಡಿದುದಲ್ಲಿ ಫಣೀಂದ್ರ ಕೇತುವಂ ೯೭

ಆಗಳಾ ಮರುಳ ಕೆಯ್ತಕ್ಕೆ ದುರ್ಯೋಧನಂ ಮುಗುಳ್ನಗೆ ನಕ್ಕೆನ್ನಂ ವಿಧಾತ್ರಂ ಮರುಳ್ಮಾಡಿದ ಕಾರಣದಿಂದೀ ಮರುಳ ಕಣ್ಗಂ ಮರುಳಾಗಿ ತೋಱಿದೆನೆಂದಲ್ಲಿಂ ತಳರ್ದು ಕಿಱಿದಂತರಂ ನಡೆವಲ್ಲಿ ಧೃಷ್ಟದ್ಯುಮ್ನ ಕಚಗ್ರಹ ವಿಲುಳಿತ ಮೌಳಿಯುಂ ತದೀಯ ಕೌಕ್ಷೇಯಕ ಧಾರಾವಿದಾರಿತ ಶರೀರನುಮಾಗಿ ಬಿೞ್ದಿರ್ದ ಶರಾಚಾರ್ಯರಂ ಕಂಡು

ನೆಗೞ್ದುದು ಬಿಲ್ಲ ಬಿನ್ನಣಮಿಳಾವಳಯಕ್ಕೆ ಸಮಸ್ತ ಧಾತ್ರಿ ಕೆ
ಯ್ಮುಗಿವುದು ನಿಮ್ಮದೊಂದೆ ಪೆಸರ್ಗೇೞೊಡೆ ನಿಮ್ಮ ಸರಲ್ಗೆ ದೇವರುಂ
ಸುಗಿವರಯೋನಿಸಂಭವರಿರೆನ್ನಯ ದೂಸಱಿನೆನ್ನ ಕರ್ಮದಿಂ
ಪಗೆವರಿನಕ್ಕಟಾ ನಿಮಗಮೀಯಿರವಾದುದೆ ಕುಂಭಸಂಭವಾ ೯೮

ಎಂದು ಗುರುವಿನ ಪಾದಕಮಲಂಗಳಂ ತಲೆಯ ಮೇಲಿಟ್ಟು ಪೊಡೆವಟ್ಟು ನಡೆತಂದು ವೃಕೋದರನಿಂ ನಿಶ್ಶೇಷ ಪೀತ ರುಧಿರನಪ್ಪ ದುಶ್ಶಾಸನನಂ ಕಂಡಾತನಂ ಮುತ್ತಿ ಸುತ್ತಿಱಿದ ಮುದುವರ್ದುಗಳನುಮಗಲೆ ಮೆಟ್ಟಿ ಭೀಮಸೇನಂ ಪೋೞ್ದುದೞಿಂ ನೆತ್ತರಂ ಪಡೆಯದಾಕಾಶಕ್ಕೆ ಬಾಯಂ ತೆಱೆದೂಳ್ವ ಬಳ್ಳುಗಳುಂ ನರವುಮಂ ಬಱಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು ಸೋದರನೊಳ್ ಕಣ್ಣ ನೀರ್ಗಳಂ ಸುರಿದು

ನಿನ್ನಂ ಕೊಂದನ ಬಸಿಱಿಂ
ನಿನ್ನಂ ತೆಗೆಯದೆಯುಮವನ ಕರುಳಂ ಪರ್ದಿಂ
ಮುನ್ನುಂಗಿಸಿ ನೋಡದೆಯುಂ
ಮುನ್ನಮೆ ಯುವರಾಜ ನಿನ್ನನಾಂ ನೋಡಿದೆನೇ ೯೯

ಎಂದು ವಿಪ್ರಳಾಪಂಗೆಯ್ದು ಅಲ್ಲಿಂ ತಳರ್ದು ಬಂದಮೋಘಾಸ್ತ್ರ ಧನಂಜಯ ಕರಪರಿಚ್ಯುತ ವಿಕರ್ಣ ವಿಶೀರ್ಣನಾಗಿರ್ದ ಕರ್ಣಸೂನುವಂ ವೃಷಸೇನನಂ ಕಂಡು ನಿಮ್ಮಮ್ಮಂ ಕರ್ಣನೆಲ್ಲಿದನೆಂದು ತೆಕ್ಕನೆ ತೀವಿದ ನೀರೊಳ್ ದೆಸೆಗಾಣದೆ ನಿಂದಿರ್ದ ಸುಯೋಧನನಂ ಸಂಜಯಂ ರವಿನಂದನನಿತ್ತಲಿರ್ದಪನೆನೆ ಕಣ್ಗಳಂ ಮುಚ್ಚಿ ಕೂರ್ಮೆ ಕೆಯ್ಮಿಕ್ಕು ಬರೆ ಸೈರಿಸಲಾಱದೆ

ನೆಲನಂ ಕೊಟ್ಟನಿನಾತ್ಮಜಾತನೆನಗಾಂ ತಕ್ಕೂರ್ಮೆಯಿಂದಂ ಜಳಾಂ
ಆಲಿಯಂ ಕೊಟ್ಟೆನುಮಿಲ್ಲ ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷ

ದ್ದಲಮಂ ಸುಟ್ಟನುದಾತ್ತಪುಣ್ಯನವನಂ ಚೈತಾಗ್ನಿಯಿಂ ಸುಟ್ಟೆನಿ
ಲ್ಲೊಲವಿಂದಿಂತೆರ್ದೆಮುಟ್ಟೆ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ ೧೦೦

ಎಂದು ನೊಂದು ನುಡಿದ ದುರ್ಯೋಧನನಂ ಸಂಜಯನಿಂತೆಂದಂ

ಕೊಟ್ಟೈ ಕಿರ್ಚನುದಗ್ರ ಶೋಕಶಿಖಿಯಿಂ ಕಣ್ಣೀರ್ಗಳಿಂದೆ ನೀ
ರ್ಗೊಟ್ಟೈ ಸೂರ್ಯಸುತಂಗೆ ಲೌಕಿಕಮನೇನಿಂ ದಾಂಟಿದೈ ಪೋಟ್ಬು ಸೀ
ಳ್ದೊಟ್ಟಿದಂ ವೈರಿಯನೊಡ್ಡಿ ತತ್ಪಿಶಿತದಿಂದಾತಂಗೆ ನೀಂ ಕೂರ್ಪೊಡೇ
ಗೆಟ್ಟತ್ತಿನ್ನಡೆ ಮಾಡು ತದ್ದ್ವಿಜ ಗಣಕ್ಕಾಹಾರಮಂ ಭೂಪತೀ ೧೦೧

ಎಂದು ಪೆರ್ಚಿದ ಶೋಕರಸಮಂ ಕೋಪರಸದ ಮೇಲಿಕ್ಕಿ ಭೀಷ್ಮಂ ಶರಶಯನತಳ ವಿಗತನಾಗಿರ್ದಲ್ಲಿವರಮೆಂತಾನುಂ ಒಡಗೊಂಡು ಬಂದಾಗಳ್ ಚಿತ್ತದೊಳ್ ಮೃಡನಂ ತೊಡರ್ದಿರೆ ಶರಶಯ್ಯೆಯೊಳಂದು ಬಿಟ್ದಿರ್ದ ಸಿಂಧುಜಂ ಇರ್ವರ ಕಾಲಸೊಪ್ಪುಳನಾಲಿಸಿ ಪೇಟಿಮೀ ಬಂದರಾರೆಂದನೇಕ ವ್ರಣವೇದನಾ ಪರವಶಶರೀರಂ ಬೆಸಗೊಳ್ವುದುಂ ಸಂಜಯಂ ಕುರುಪಿತಾಮಹನ ಕರ್ಣೋಪಾಂತಮಂ ಸಾರ್ದು ಕುರುಕುಳ ಗಗನಮೃಗಧರಂ ಬಂದನೆಂದು ಬಿನ್ನಪಂ ಗೆಯ್ದುದಂ ಕೇಳ್ದು ಕಣ್ಗಳನೊತ್ತಂಬದಿಂ ತೆಱೆದು ಮಗನೆ ನಿನಗಮೀಯಿರವಾದುದೆ ವೈರಿ ಭೂಪರಿಂ ಎಂದು ಕಣ್ಣ ನೀರಂ ನೆಗಪಿ ನಿನ್ನ ಬಂದ ಬರವೇ ಸಮರ ವೃತ್ತಾಂತಮನಱಿಪಿದಪ್ಪುದು ಮಗನೇ ನಿನಗಪ್ಪೊಡೆ ದೆಯ್ವಂ ಪ್ರತಿಕೂಲಮೆಂತುಂ ಕಾದಿ ಗೆಲಲಾರ್ಪೆಯಲ್ಲೆ ನಿನಗಂ ಮೈತ್ರೇಯರ್ ಕೊಟ್ಟೂರುಭಂಗ ಶಾಪಮನಿವಾರಿತಮೆನ್ನೀ ಪ್ರಾಣಮುಳ್ಳಂತೆ ಸಂಧಿಯಂ ಮಾಡಿ ವಸುಂಧರೆಯಂ ಕೊಂಡು ಕಾಲಮಂ ಕಜ್ಜಮುಮನಱಿದು ಬಟಿಯಂ ನಿನ್ನ ನೆಗೞ್ದುದಂ ನೆಗೞ್ವುದೆಂದು ನುಡಿದ ನುಡಿಗಳ್ಗೆ ಕುರುರಾಜನಿಂತೆಂದಂ

ಶರಶಯ್ಯಾಗ್ರದೊಳಿಂತು ನೀಮಿರೆ ಘಟಪ್ರೋದ್ಭೂತನಂತಾಗೆ ವಾ
ಸರನಾಥಾತ್ಮಜನಂತು ಸಾಯೆ ರಣದೊಳ್ ದುಶ್ಶಾಸನಂ ತದ್ವೃಕೋ
ದರನಿಂದಂತಟಿದಟ್ಗೆ ಸೈರಿಸಿಯುಮಾಂ ಸಂಧಾನಮಂ ವೈರಿ ಭೂಪ
ರೊಳಿಂ ಸಂಧಿಸಿ ಪೇಟಿಮಾರ್ಗೆ ಮೆಱೆವೆಂ ಸಂಪತ್ತುಮಂ ಶ್ರೀಯುಮಂ ೧೦೨

ಬಿಡಿಮೆನ್ನ ನುಡಿಗೆ ಬೀಟಿಕ್ಕೊಳೆ
ನುಡಿಯದಿರಿಂ ಪೆಱತನಜ್ಜ ಮುಂ ನುಡಿದೆರಡಂ
ನುಡಿವೆನೆ ಚಲಮಂ ಬಲ್ವಿಡಿ
ವಿಡಿದೆಂ ತನ್ನಪ್ಪುದಕ್ಕೆ ಸಂಗರಧರೆಯೊಳ್ ೧೦೩

ಎಂಬುದುಂ ನೀನುಮೆಂತುಂ ಕಾದಿಯಲ್ಲದಿರೆಯಪ್ಪೊಡಿಂದಿನೊಂದಿವಸಮ ನೆನ್ನ ಪೇೞ್ವ ಜಳಮಂತ್ರೋಪದೇಶಮಂ ಕೆಯ್ಕೊಂಡು ಕುರುಕ್ಷೇತ್ರದುತ್ತರ ದಿಗ್ಭಾಗದ

ವೈಶಂಪಾಯನ ಸರೋವರದೊಳ್ ಮುಳುಗಿ ನಿನ್ನವಸರಕ್ಕೆ ಬಂದು ಕೂಡುವ ಬಲದೇವನುಮಂ ನಿನ್ನಿರ್ದೆಡೆಯಱಿಯದಱಿಸುವಶ್ವತ್ಥಾಮ ಕೃಪ ಕೃತವರ್ಮರುಮಂ ಕೂಡಿಕೊಂಡು ಪಗೆವರಂ ನಾಳೆ ಕಾದಿ ಗೆಲ್ವುದೆಂದು ಹಿತೋಪದೇಶಮಂ ಕಿವಿಯೊಳ್ ಪರ್ಚಿ ಪೇೞ್ದು ಕುರುಪಿತಾಮಹಂ ಸಂಜಯನಂ ಧೃತರಾಷ್ಟ್ರನಲ್ಲಿಗಟ್ಟಿ ದುರ್ಯೋಧನನಂ ಪರಸಿ ಪೋಗಲ್ವೇೞ್ ಗದಾದಂಡಮಮಂ ಕೊಂಡೊರ್ವನೆ ವೈಶಂಪಾಯನ ಸರೋವರದ ಬಟ್ಟೆಯಂ ನಡೆಗೊಂಡು ಕೊಳುಗುಳವಂ ಕಟಿದು ಪೋಗಿ ವಿಳಯವಿಘಟ್ಟಿತಾಷ್ಟದಿಗ್ಭಾಗಸಂಧಿ ಬಂಧನ ಗಗನ ತಳಮೆ ಧರಾತಳಕ್ಕೆ ಪಱಿದು ಬಿಱ್ದಂತಾನುಮಾಗಿ

ಇದು ಪಾತಾಳ ಬಿಲಕ್ಕೆ ಬಾಗಿಲಿದು ದಲ್ ಘೋರಾಂಧಕಾರಕ್ಕೆ ಮಾ
ಡಿದ ಕೂಪಂ ಪೆಱತಲ್ತಿದುಗ್ರಲಯ ಕಾಳಾಂಭೋಧರಚ್ಛಾಯೆ ತಾ
ನೆ ದಲೆಂಬಂತಿರೆ ಕಾಚ ಮೇಚಕ ಚಯಚ್ಛಾಯಾಂಬುವಿಂ ಗುಣ್ಪಿನಿಂ
ಪುದಿದಿರ್ದತ್ತು ಸರೋವರಂ ಬಕ ಬಳಾಕಾನೀಕ ರಾವಾಕುಳಂ ೧೦೪

ಅಂತೆಸೆವ ಪುಂಡರೀಕಷಂಡೋಪಾಂತಮನೆಯ್ದೆವಂದು ಅನೇಕ ವ್ರಣಗಳಿತ ನವರುಧಿರವಾಗಿರ್ದ ತನ್ನ ಮೆಯ್ಯನೊರಸಿ ಕರ್ಚಿ ಮುಕ್ಕುಳಿಸಿಯುಗುೞ್ದಾಚಮಿಸಿ ಜಳ ದೇವತೆಗಳ್ಗೆ ಪೊಡೆವಟ್ಟು ಜಳಮಂತ್ರಾಕ್ಷರಗಂಗಳಿಂ ಸರೋವರಮನಭಿಮಂತ್ರಿಸಿ ಚಳಿತೆಯ್ದಿ ಬಟಿಲ್ದಪರಾಂಬುರಾಶಿಯೊಳ್ ಮುಳುಗುವ ತೀವ್ರದೀಧಿತಿವೊಲಾ ಕೊಳದೊಳ್ ಫಣಿರಾಜಕೇತನಂ ಮುಳುಗಿದಂ; ಅನ್ನೆಗಮಿತ್ತ ಧರ್ಮಪುತ್ರಂ ಶಲ್ಯವಧೆಯಿಂ ಬೞಿಯಂ ರಾಜರಾಜನಂ ಕೊಳುಗುಳದೊಳಱಿಸಿಯುಂ ಕಾಣದೆ ನಮ್ಮ ಮಾಡುವ ಕರ್ತವ್ಯಮಾವುದೇಗೆಯ್ವಂ ಪೇೞಿಮೆಂದು ನಾರಾಯಣನಂ ಬೆಸಗೊಳೆ

ಇಂದಿನ ನೇಸಱಿಂದೊಳಗರಾತಿಯನಿಕ್ಕದೆ ಮಾಣ್ದೆಮಪ್ಪೊಡಿ
ನ್ನೆಂದುಮಸಾಧ್ಯನಿಂದೆ ಹಳಿಯುಂ ಗಡ ಕೂಡುವನಾತನಂ ಗೆಲಲ್
ಬಂದಪುದೇ ಬೞಿಕ್ಕದುವೆ ಕಾರಣಮಾಗುಳಿದಿರ್ದನಂಧರಾ
ಣ್ನಂದನನಲ್ಲದುಂತೆ ತಲೆಯುರ್ಚುಗುಮೇ ರಣರಂಗಭೂಮಿಯೊಳ್ ೧೦೫

ಎಂಬುದುಂ ಜಳಧರಸಮಯ ನಿಶಾಸಂಚಲಿತ ವಿದ್ಯುತ್ಪಿಂಗಳಾಕ್ಷಪಾತಂಗಳಿಂ ದೆಸೆಗಳಂ ನುಂಗುವಂತೆ ಮುಳಿದು ನೋಡಿ ಜರಾಸಂಧಸಂಧಿಬಂಧವಿಘಟನನಿಂತೆಂದಂ

ಕಡಲಂ ಪೊಕ್ಕೊಡೆ ಪೀರ್ದಪೆಂ ಕಡಲನಾ ಪಾತಾಳಮಂ ಪೊಕ್ಕನ
ಪ್ಪೊಡೆ ಶೇಷಾಹಿಯುಂ ಪಲ್ಗಳಂ ಮುಱಿದಪೆಂ ಬ್ರಹ್ಮಾಂಡಮಂ ಪೊಕ್ಕನ
ಪ್ಪೊಡಮಾ ಬ್ರಹ್ಮನ ಗಂಟಲಂ ಮುಱಿದಪೆಂ ದುರ್ಯೋಧನಂಗಿಂ ಪುಗ
ಲ್ಕೆಡೆ ತ್ರೈಭೂಭುವನಂಗಳಿಂ ಪೊಱಗೆ ಮತ್ತೆಲ್ಲಿತ್ತೊ ಬಾಣಾಂತಕಾ ೧೦೬

ಎಂಬನ್ನೆಗಂ ವೃಕೋದರನಟ್ಟಿದ ಕಿರಾತಂ ವಿಂಧ್ಯಕನೆಂಬಂ ಬಂದು ದುರ್ಯೋಧನನನೆಲ್ಲಿಯುಂ ಕಾಣದೆ ವೈಶಂಪಾಯನ ಸರೋವರಕ್ಕೆ ನೀರ್ಗುಡಿಯಲೆಂದು ಪೋಗಿ ಕೊಳದ ತಡಿಯೊಳ್ ಹಳಿ ಕುಳಿಶ ಚಕ್ರ ಲಾಂಛಿತಮಪ್ಪಡಿಗಳಡಿವಜ್ಜೆಯಂ ಕಂಡು ಬಂದೆನೆಂದು ಪೇಳ್ವುದುಮಂಬುಜನಾಭನವನ ಮಾತಿನೊಳ್ ಯುಕ್ತಿಯುಂಟೆಂದು ಕೊಳನಂ ಮುಟ್ಟೆವಂದು ಅಡಿವಜ್ಜೆಯಂ ನೋಡಿ ದುರ್ಯೋಧನನ ಪಜ್ಜೆಯಪ್ಪುದೇನುಂ ತಪ್ಪಿಲ್ಲೆಂದು ಶಂಖಂಗಳಂ ಪೂರಿಸಿಯುಂ ಭೇರಿಯುಂ ತಾಡಿಸಿಯುಮೇಗೆಯ್ದುಂ ಪೊಱಮಡದಿರೆ, ಈತಂಗಾನೆ ಬಲ್ಲೆನುಸಿರದಿರಿಮೆಂದು

ಕುಡಿದೆಂ ದುಶ್ಶಾಸನೋರಸ್ಥಳ ವಿಗಳದಸೃಗ್ವಾರಿಯಂ ಕಂಡದಂ ಮು
ನ್ನಡೆ ನೋಡುತ್ತಳ್ಕಿ ಮಾಣ್ದೈ ನಿನಗಿಜೆವದಟಂ ಕೊಟ್ಟರಾರಿಂದು ಮಾಣ
ಲ್ಕೆಡೆಯುಂಟೇ ಸಿಲ್ಕಿದೈ ಪೋ ಪೊಱಮಡು ಕೊಳದಿಂ ಸತ್ತೊಡಂ ಪುಟ್ಟ ನೀನೀ
ಗಡೆ ದಲ್ ಕೊಂದಪ್ಪೆನೆನ್ನಂ ಮುಳಿಯಿಸಿ ನಿನಗಿಂ ದ್ರೋಹ ಬಾಳ್ವಾಸೆಯುಂಟೇ ೧೦೭

ಮಾನಸಿಕೆಯೆ ದೊರೆಗಿಡೆ ನೀಂ
ಮಾನಸನೆನೆ ನೀರೊಳೆಲವೊ ನೀನುಂ ಮೀನೆಂ
ಬೀ ನೆವದಿರ್ದಯಿದೇನಭಿ
ಮಾನದ ಕಲಿತನದ ಪರಮ ಪದಮೆಯ್ದಿದುದೋ ೧೦೮

ಎಂದು ವಿಳಯಕಾಳ ಜಳಧರನಿನಾದದಿಂ ಗಜಜಿ ಗರ್ಜಿಸಿದ ಭೀಮನ ಗಳಗರ್ಜನೆಗೆ ಕರಿ ಕಳಭ ಗರ್ಜನೆಗೇಳ್ವ ಮೃಗರಾಜನಂತೆ ರಾಜರಾಜಂ ಸೈರಿಸದೆ ಚಿತ್ತಸ್ಖಲನೆಯಾಗೆ ಜಳಸ್ತಂಭಮಂತ್ರಮೆಲ್ಲಂ ಮಾಯಾಮಂತ್ರಮಾಗೆ, ಇಂತು ಮೂದಲಿಸೆಯುಂ ಕಿವುಟ್ಗೇಳ್ದು ಕೆಮ್ಮಗೆ ನೀರೊಳ್ ಮುಳುಗಿರ್ದೊಡಟ್ಟು ಮಚ್ಚೌರ್ಯಂ ಕಿಡುಗುಮೆಂದು

ನೆಗೆಯೆ ಪೊದಳ್ದ ಬೊಬ್ಬುಳಿಕೆಗಳ್ ನೆಗೆದಂತೆರಡುಂ ಕೆಲಕ್ಕೆ ನೀ
ರುಗಿಯೆ ಗದಾಭಿಘಾತ ಪರಿಪೂರಿತ ತೋಯಜಷಂಡಮಲ್ಲಿಗ
ಲ್ಲಿಗೆ ಕದಡೇಟ್ ಭೀಮ ಭುಜ ಮಂದರ ಘಟ್ಟನೆಯಿಂದಮಲ್ಲಿ ತೊ
ಟ್ಟಗೆ ಕೊಳೆ ಕಾಳಕೂಟಮೊಗೆವಂತೊಗೆದಂ ಫಣಿರಾಜಕೇತನಂ ೧೦೯

ಅಂತೊಗೆದು ದಿಕ್ಕರಿಕರಾನುಕಾರಿ ಕರಪರಿಘೋತ್ತಂಸಿತ ತೋರಣೀಕೃತ ರೌದ್ರ ಗದಾದಂಡನುಂ ಪ್ರಚಂಡನುಮಾಗಿ ಸೆರಗಿಲ್ಲದೆ ಕೊಳದಿಂ ಪೊಱಮಟ್ಟು ಬರ್ಪ ದುರ್ಯೋಧನನಂ ಧರ್ಮಪುತ್ರಂ ನೋಡಿ

ಬಿಸುಡಿನ್ನಪ್ಪೊಡಮೇವಮಂ ಧರಣಿಯಂ ಪಚ್ಚಾಳ್ವಮೇನಪ್ಪುದೀ
ಕಿಸುರೊಳ್ ಕೆಮ್ಮನೆ ಪಾಪಕರ್ಮ ಚಲಮಂ ಕೊಂಡಾಡದೆಮ್ಮಯ್ವರುಂ

ಬೆಸಕೆಯ್ಯುತ್ತಿರೆ ನೀನೆ ಮೇಣರಸುಗೆಯ್ ಸೌದರ್ಯದಿಂದೊಳ್ಳಿತೇ
ವಸುಧಾಮಂಡಳಮಿಂಬುಕೆಯ್ವುದಿದನಾಂ ಕೆಯ್ಯೊಡ್ಡಿದೆಂ ಬೇಡಿದೆಂ ೧೧೦

ಎಂಬುದುಮಾ ಮಾತಂ ಕೇಳಗಿವಿಗೆಯ್ದು ತನ್ನ ಗದಾದಂಡಮಂ ಭುಜಾದಂಡದೊಳಳವಡಿಸಿ ನೋಡಿ ದುರ್ಯೋಧನನಿಂತೆಂದಂ

ಆ ದುಶ್ಶಾಸನನಂ ಪೊರಳ್ಚಿ ಕೊಂದೀ ಮರುತ್ಪುತ್ರನಿಂ
ತಾದಂ ದಳ್ಳಿಸೆ ನೋಡಿ ಪುದುವಾೞ್ಕೆಂತಕ್ಕುಮಿಂತೀಗಳಾ
ನಾದೆಂ ಮೇಣಿವನಾದನೇಕೆ ತಡೆವಿರ್ ಕೆಯ್ವೊಯ್ದೆವಿನ್ನಿಂ ಕರಂ
ಸೌದರ್ಯಕ್ಕೆ ಕನಲ್ವೊಡಿಂತಿನಿಬರುಂ ಕಾದಿಂ ಭರಂಗೆಯ್ದಪೆಂ ೧೧೧

ಎಂಬನ್ನೆಗಂ ತೀರ್ಥಯಾತ್ರೆಯೊಳ್ತೊಡರ್ದು ತಡೆದ ಬಲದೇವಂ ದುರ್ಯೋಧನಂಗಾಯು ಬರ್ಪಂತೆ ಬಂದು ತನಗೆ ಪೊಡೆವಟ್ಟ ದುರ್ಯೋಧನನಂ ಪರಸಿ ಪಾಂಡವರಂ ಪರಸಲೊಲ್ಲದಿದೇನಂ ಮಾಡಿದಿರೆಂದೊಡೆ ಮಧುಮಥನನಣ್ಣನ ಮೊಗಮನಱಿದು ಸುಯೋಧನನುದ್ಧತ ವೃತ್ತಿಯಿಂ ಸುಹೃದ್ಬಳಮೞಿದಟ್ಟಿಗೆ ಕಾದಿ ಪುದುವಾೞ್ಕೆಗೊಡಂಬಡದೊಲ್ಲದಿನ್ನುಮವ್ವಳಿವನೀಗಳಾತನನೆ ನೀಂ ಬೆಸಗೊಳ್ ಎನೆ ನೀಂ ಮರುಳ್ತನಮನೇಕೆ ಮಾಡಿದೆಯೆಂದು ತನ್ನ ಮೊಗಮಂ ನೋಡಿದ ಹಲಾಯುಧಂಗೆ ದುರ್ಯೋಧನಂ, ಹರಿಯೆಂದಂತೆ ಪಾಂಡುತನಯರ್ ನಿರ್ದೋಷಿಗಳ್ ಮದ್ಬಂಧು ಶೋಕಾಗ್ನಿಯಿಂದುರಿದಪ್ಪೆಂ ತೊಡರ್ದೆನ್ನನಿಂ ಬಿಡು ಎಂಬುದುಂ ಸಂಕರ್ಷಣನಾತನ ಮನದುತ್ಕರ್ಷತೆಯನಱಿದು ಪೆಱತನಿನ್ನೆನಗೆ ನುಡಿಯಲೆಡೆಯಿಲ್ಲ ಧರ್ಮಯುದ್ಧಮಂ ನೋಡಲ್ವೇೞ್ಕುಮೆಂದು, ಆರ್ ಕಾದಪಿರೆನೆ ಭೀಮಸೇನಂ, ತೊಡರ್ದು ಬಿಡಿಂ ಸುಯೋಧನನೆನ್ನುಮಂ ಮಹಾಪ್ರತಿಜ್ಞೆಯೊಳ್ ತೊಡರ್ದನುಮಾನೆ ಎಂದೊಡಂಬಡಿಸಿ ಕೊಳುಗುಳಮಂ ಸಮೆದಿದಂ; ಅಂತು ಸಮೆದಿದ ಸಂಗ್ರಾಮರಂಗದೊಳ್ ಭೀಮ ದುರ್ಯೋಧನರಿರ್ವರುಮೊರ್ವರೊರ್ವರಂ ಮೂದಲಿಸಿ ಮೂವತ್ತೆರಡು ಗದಾವಿಕ್ಷೇಪದೊಳಮತಿ ಪರಿಚಿತರಾಗಿ ಕಾದುವಾಗಳ್

ಗದೆಯೊಳ್ ಘಟ್ಟಿಸೆ ಪುಟ್ಟಿದುಳ್ಕ ತತಿ ನೀಳ್ದಾಕಾಶಮಂ ತಾಪಿನಂ
ಪುದಿದಾ ದೇವರ ಕಣ್ಣೊಳುಳ್ಕಿ ವಿಳಯೋಳ್ಕಾಶಂಕೆಯಂ ಮಾಡೆ ಮೆ
ಟ್ಟಿದ ಸೂೞ್ಮೆಟ್ಟುಗಳಿಂದೆ ಬೆಟ್ಟು ಕೞಲಲ್ಕಾಡೆ ಭೂಭಾಗಮಾ
ದುದು ದುರ್ಯೋಧನ ಭೀಮಸೇನರ ಗದಾಯುದ್ಧಂ ಮಹಾಭೈರವಂ ೧೧೨

ಸಿಡಿಲೆಱಗುವಂತೆ ಘೋರಂ
ದೊಡನೆಱಗಿ ಮಹೋಗ್ರ ಘನ ಗದಾಪರಿಘದಿನಾ
ರ್ದಡೆಗಿಡೆ ಪೊಯ್ದೊಡೆ ಭೀಮಂ
ಕೆಡೆದಂ ಧರೆ ನಡುಗೆ ನೀಳಕುತ್ಕೀಳಂಬೋಲ್ ೧೧೩

ಅಂತು ದುರ್ಯೋಧನ ಗದಾಪ್ರಹರಣದಿಂದಚೇತನ ನಾಗಿರ್ದೊಡೆ ಬಿಟ್ಟಿನನಿಱಿಯೆನೆಂದು ಪವಮಾನ ಮಾರ್ಗದೊಳಲ್ಪಾಂತರದೊಳ್ ಗದೆಯಂ ಬೀಸುವಾಗಳ್ ಸುಯೋಧನನ ಗದೆಯ ಗಾಳಿಯೊಳ್ ಮೂರ್ಛೆಯಿಂದೆಟ್ಟಿತ್ತು ತನ್ನ ಗದಾದಂಡಮಂ ಭುಜಾದಂಡದೊಳಳವಡಿಸಿಕೊಂಡ ವೃಕೋದರನನಂಬುಜೋದರಂ ಬಿಚ್ಚಳಿಸುವ ನೆವದೊಳೆಮ್ಮಮ್ಮಂಗಕ್ಕುಮೆಂದು ತೊಡೆಯಂ ಪೊಯ್ದಾರ್ವುದುಂ ದುರ್ಯೋಧನನ ನೆಱಿನದೆಂದಱಿದು ಗದೆಯನಣಂ ಪಾಡುಗೆಯ್ದಿರ್ದು ಘೋರೆಂದೆಱಿ ಪುಗ್ರಾರಾತಿಯೂರುದ್ವಯಮನಿಡೆ ಗದಾಘಾತದಿಂದೂರುಯುಗ್ಮಂ ಮುಱಿದೆತ್ತಂ ನುಚ್ಚು ನೂಱಾಗಿರೆ ಧಾರ್ತರಾಷ್ಟ್ರಂ ಕೆಡೆದನಿಳಾಭಾಗದೊಳ್

ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ ಮಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದ ಪೂಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮುಗುಂದನೆ ದಲೇನಭಿಮಾನಧನಂ ಸುಯೋಧನಂ ೧೧೪

ಅಂತು ನೆಲನಂ ಪತ್ತಿ ಮೂರ್ಛಾಗತನಾಗಿರ್ದ ಕುರುಕುಳಚೂಡಾಮಣಿಯಂ ಪರಾಭವಂಬಡಿಸದಿರೆಂದು ಬಲದೇವಂ ಬಾರಿಸೆ ವಾರಿಸೆಯುಂ

ಇದಱೊಳ್ ಮೂರ್ಧಾಭಿಷೇಕಂ ತನಗೆ ಗಡ ಸಮಂತಾಯ್ತು ಪಿಂಭಾತ ಪತ್ರಂ
ಪುದಿದೆತ್ತಂ ತಣ್ಣೆೞಲ್ಮಾಡುವುದು ಗಡಮಿದೆಂತೆಂದುಮಾರ್ಗಮಪ್ಪೊಡಂ ಪ
ರ್ವಿದ ಗರ್ವೋದ್ರೇಕದಿಂ ಬಾಗದು ಗಡಮೆನುತುಂ ಮಾಣಿಕಂ ಸೂಸೆ ಬಲ್ಪಿಂ
ದೊದೆದಂ ಸಾರ್ತಂದು ದುರ್ಯೋಧನನ ಮಕುಟಮಂ ಕೋಪದಿಂ ಭೀಮಸೇನಂ ೧೧೫

ಒದೆವುದುಂ ದುರ್ಯೋಧನಂಗಾದವಸ್ಥೆಯಂ ನೋಡಲಾಱದೆಯುಂ ತನ್ನ ತಮ್ಮನ ಮನಮಂ ನೋಯಿಸಲಾಱದೆಯುಂ ಬಲದೇವಂ ಭಗ್ನಮನೋರಥನಾಗಿ ದ್ವಾರಾವತಿಗೆ ಪೋದನನ್ನೆಗಂ ವೇಣೀಸಂಹಾರೋರುಭಂಗ ಮಕುಟಭಂಗಂಗಳೆಂಬ ತನ್ನ ಮಹಾ ಪ್ರತಿಜ್ಞೆಯಂ ನೆಱಪಿದ ಭೀಮಸೇನನಳವನಳವಲ್ಲದೆ ಪೊಗೞ್ದು ಚಕ್ರಿ ಪಾಂಡವರಯ್ವರುಮಂ ನೀಲಗಿರಿಗೊಡಗೊಂಡು ಪೋದನನ್ನೆಗಮಿತ್ತ ಕೃಪ ಕೃತವರ್ಮ ಸಮೇತನಶ್ವತ್ಥಾಮಂ ದುರ್ಯೋಧನನಿರ್ದೆಡೆಯಱಿಯದೆ ಗಾಂಗೇಯರಿಂದಮಿರ್ದೆಡೆಯನಱಿದು ಕೊಳಕ್ಕೆ ವಂದಲ್ಲಿಯುಂ ಕಾಣದೆ ಅಱಸುತ್ತುಂ ಬರ್ಪಂ ತೊಟ್ಟನೆ ಕಟ್ಟಿದಿರೊಳ್

ಪಿಡಿದೆಡಗೆಯ್ಯ ಚಾಮರದ ದಕ್ಷಿಣ ಹಸ್ತದ ಪದ್ಮದೊಳ್ಪೊಡಂ
ಬಡೆ ನಸು ಮಾಸಿ ಪಾಡೞಿದ ರೂಪಿನೊಳುಣ್ಮುವ ಗಾಡಿ ನಾಡೆ ಕ
ಣ್ಗೆಡಱೆ ತೊಡಂಕಿ ಪೀಱಿದ ಕುರುಳ್ಗಳೆ ಚಿತ್ತದೊಳಾದ ಬೇಸಱಂ
ನುಡಿವವೊಲಾಗೆ ಬರ್ಪ ಕಮಳಾಯತ ನೇತ್ರೆಯನಿಂದುವಕ್ತ್ರೆಯಂ ೧೧೬

ಕಂಡು ನೀನಾರ್ಗೇನೆಂಬೆಯೆಲ್ಲಿಗೆ ಪೋಪೆಯೆನೆ

ಪೆಸರೊಳ್ ಲಕ್ಷ್ಮಿಯೆನ್ನಿನ್ನೆಗಂ ನೆಲಸಿ ತಾಂ ದುರ್ಯೋಧನೋರಸ್ಸ್ಥಳಾ
ವಸಥಂ ದ್ರೋಣ ನದೀಜ ಕರ್ಣ ಭುಜವೀರ್ಯಾವೇಷ್ಟಿತಂ ಮಾಡೆ ಸಂ
ತಸದಿಂದಿರ್ದೆಂ ಬಿಸುಟಾ ಧರಾಧಿಪತಿಯಂ ನಾರಾಯಣಾದೇಶಮೊ
ಡ್ಡಿಸೆ ಪಾಂಡು ಪ್ರಿಯಪುತ್ರರೊಳ್ ನೆರೆಯಲೆಂದಿಂತೀಗಳಾಂ ಪೋದಪೆಂ ೧೧೭

ಎಂಬುದುಮಶ್ವತ್ಥಾಮನಿಂತೆಂದಂ

ಕುರುವಂಶಾಂಬರ ಭಾನುವಂ ಬಿಸುಡಿಸಲ್ಕಾನುಳ್ಳಿನಂ ತೀರದಾ
ನಿರೆ ನಾರಾಯಣನೆಂಬನುಂ ಪ್ರಭುವೆ ಪೇೞ್ ನೀನೀ ಮರುಳ್ಮಾತನಂ
ಬುರುಹಾಕ್ಷಿ ಬಿಸುಡಂಜದಿರ್ ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆಂ
ದರವಿಂದಾಲಯೆಯಂ ಮಗುೞ್ಚಿದನೇನಾ ದ್ರೌಣಿ ಶೌರ್ಯಾರ್ಥಿಯೋ ೧೧೮

ಅಂತು ಕಮಳನಯನೆಯಂ ಮುಂದಿಟ್ಟು ಕುರು ಕುಟುಂಬ ಘಟಚೇಟಿಕೆಯಂ
ತರ್ಪಂತೆ ತಂದು ಶೋಣಿತಾರ್ದ್ರಮೌಳಿಯಾಗಿ ಕೋಟಲೆಗೊಳ್ವ ಕೌರವೇಶ್ವರನನೆಯ್ದೆ
ಪೋಗಿ ಶೋಕವ್ಯಗ್ರನಾಗಿ ಆದಿತ್ಯ ತೇಜ ಬೆಸಸಿದಿರಾದ ಪೃಥಾಸುತರನುೞಿಯಲೀಯದೆ
ಕೊಲ್ವೆಂ ಎಂಬುದುಂ ಫಣಿಕೇತನಂ ನೆತ್ತಿಯಿಂದೊಱೆದುಗುವ ನೆತ್ತರ ಧಾರೆಯಿಂ
ಮೆತ್ತಿದ ಕಣ್ಗಳನೊತ್ತಂಬದಿಂ ತೆಱೆದಶ್ವತ್ಥಾಮನ ಮೊಗಮಂ ನೋಡಿ ಮುರಾರಿ
ಕೆಲದೊಳ್ ನಿಲೆ ನೀಂ ಪಾಂಡವರಂ ಗೆಲಲಾಗದಾರ್ಪೊಡಾಗದೆಂಬೆನೆ ಎಂಬುದುಂ
ಪಾಂಡವರನಿಕ್ಕಿದೊಸಗೆವಾತನೀಗಳೆ ಕೇಳಿಸುವೆನೆಂದು ಸರೋಜನಿಳಯೆಯನೆನ್ನ
ಬರ್ಪನ್ನಮರಸನನಗಲದೆ ವಿಕಸಿತ ಶತಪತ್ರಾತಪತ್ರದ ತಣ್ಣೆೞಲುಮಂ ಕುಂದಲೀಯದಿರೆಂದು
ನಿಯಮಿಸಿ ರುದ್ರಾವತಾರಂ ಕೃಪ ಕೃತವರ್ಮರುಂಬೆರಸು ಹಸ್ತಿನಪುರದೊಳ್
ಪಾಂಡವರಿರ್ದರೆಗೆತ್ತು ನಿಟ್ಪಾಲಿಯಾಗಿ ದಾೞಿಯನಿಟ್ಟು ಮುಟ್ಟೆವಂದು ಧೃಷ್ಟದ್ಯುಮ್ನ
ಶಿಖಂಡಿ ಚೇಕಿತಾನ ಯುಧಾಮನ್ಯೂತ್ತಮೌಜಸರಂ ಕೊಂದು ಶ್ರುತಸೋಮಕ ಪ್ರಮುಖರಪ್ಪ
ಪಂಚ ಪಾಂಡವರಂ ಪಾಂಡವರೆಗೆತ್ತು ಕೊಂದು ತದುತ್ತಮಾಂಗಂಗಳಂ ಕೊಂಡು
ತೞತೞನೆ ನೇಸಱ್ಮೂಡುವಾಗಳೆಯ್ದೆ ವಂದು ದುರ್ಯೋಧನನಂ ಕಂಡು ಕೊಳ್ ನಿನ್ನ
ನೆಚ್ಚಿನ ಪಾಂಡವರ ತಲೆಗಳನೆಂದು ಮುಂದಿಕ್ಕಿದಾಗಳ್ ದುರ್ಯೋಧನಂ ನೋಡಿ

ಬಾಳಕಮಳಂಗಳಂ ಕಮ
ಳಾಲಯದಿಂ ತಿಱಿದು ತರ್ಪವೋಲ್ ತಂದೈ ನೀಂ
ಬಾಲಕರ ತಲೆಗಳಕ್ಕಟ
ಬಾಲಕವಧದೋಷಮೆಂತು ನೀಂ ನೀಗಿದಪಯ್ ೧೧೯

ಎಂಬುದುಮಶ್ವತ್ಥಾಮನಂತೆಂಬುದೇನೆನೆ ದುರ್ಯೋಧನನೆಂದಂ ಪಾಂಡವರ ತಲೆಗಳಲ್ಲಮಿವು ಪಾಂಡವರ ಸೂನುಗಳಪ್ಪ ಪಂಚ ಪಾಂಡವರ ತಲೆಗಳೆಂಬುದುಮಿದರ್ಕೆ ಕರ್ತವ್ಯಮಾವುದೆಂದೊಡೆ ಹಿಮವತ್ಪರ್ವತದೊಳ್ ತಪಶ್ಚರಣ ಪರಾಯಣನಾಗಿಮೆನ ಗಂತ್ಯಕಾಲಮೆಂದು ದುರ್ಯೋಧನಂ ಪ್ರಾಣಪರಿತ್ಯಾಗಂಗೆಯ್ದಂ; ಅಶ್ವತ್ಥಾಮನುಂ ಕೃಪನುಂ ಸಿಗ್ಗಾಗಿ ಹಿಮವತ್ಪರ್ವತಕ್ಕೆ ನಡೆಗೊಂಡರಿತ್ತ ಕೃತವರ್ಮನುಂ ದ್ವಾರಾವತಿಗೆ ಪೋದಂ

ಅನ್ನೆಗಂ ಧೃತರಾಷ್ಟ್ರನುಂ ಗಾಂಧಾರಿಯುಮೊಂದಾಗಿ ಬರೆ ದುರ್ಯೋಧನನ ಪೆಂಡಿರಪ್ಪ ಭಾನುಮತಿಯುಂ ಚಂದ್ರಮತಿಯುಂ ಮೊದಲಾಗೆ ಸಮಸ್ತಾಂತಃಪುರಂ ಬಾಯಟಿದು ಪಳಯಿಸುತ್ತುಂ ಬರೆ ಧರ್ಮಪುತ್ರಂ ಪಿರಿಯರ್ಗೆ ಪೊಡೆವಟ್ಟು

ಏಗೆಯ್ದುಮೆನ್ನ ಧರೆಯೊ
ರ್ವಾಗಮುಮಂ ನೀಮೆ ಬೆಸಸೆಯುಂ ಕುಡದಿನಿತಂ
ಮೇಗಿಲ್ಲದೆ ನೆಗಟ್ದಿಟಿದಂ
ನಾಗಧ್ವಜನಯ್ಯ ನೀಮಿದರ್ಕಟಲದಿರಿಂ ೧೨೦

ಎಂಬುದುಂ ಧೃತರಾಷ್ಟ್ರಂ ಸಂಸ್ಕಾರಿಸಲೀ ವನಿತೆಯರ್ಗವರವರ ಪುರುಷರಂ ಕುಡಮೇಟ್ಟುಮೆಬುದುಮದಾವುದು ದೋಷಮವರ್ಗೆಲ್ಲಂ ಸಂಸ್ಕಾರವಿಧಿಯಂ ನಾನೆ ಪಕ್ಕದೊಳಿರ್ದು ಮಾಡಿಸುವೆನೆಂಬನ್ನೆಗಂ ಕೊಂತಿ ಕರ್ಣನ ಕಳೇವರಮಂ ತಟ್ಕೈಸಿಕೊಂಡು ಪಾಂಡವರಯ್ವರುಮನಲ್ಲಿಗೆ ಬರಿಸಿ

ನಿಮ್ಮಣ್ಣನೆನ್ನ ಪಿರಿಯ ಮ
ಗಮ್ಮಾತೇಂ ಕರ್ಣನಾಂ ಮಹಾಪಾತಕಿಯೆಂ
ನಿಮ್ಮಯ ಮೋಹದಿನೀತಂ
ಗಾಮ್ಮಾಡಿದೆನಿನಿತನೆಂದು ಶೋಕಂಗೆಯ್ದಳ್ ೧೨೧

ಆಗಳಯ್ವರುಮಾ ಮಾತಂ ಕೇಳ್ದು ಸಹೋದರ ಶೋಕದೊಳವರ್ ಭೋಂಕನೆರ್ದೆ ದೆಜ಼ಿಯೆ ನಾರಾಯಣನವರಂ ಸಂತೈಸಿ ದುಃಖೋಪಶಮನಮಂ ಮಾಡಿದೊಡೆ ಸಮಾಹಿತಚಿತ್ತರಾಗಿ ಜಳದಾನಾದಿಕ್ರಿಯೆಗಳಂ ನಿರ್ವರ್ತಿಸೆ ಧೃತರಾಷ್ಟ್ರನುಂ ಗಾಂಧಾರಿಯುಂ ಪುತ್ರವಿಯೋಗ ದುಃಖದಿಂ ಮುನಿವನಮನಾಶ್ರಯಿಸಿದರ್, ಕೊಂತಿಯುಂ ಕರ್ಣನ ಶೋಕದೊಳ್ ಧರ್ಮಪುತ್ರನಂ ಬೀಟ್ಕೊಂಡವರೊಡನೆ ತಪಶ್ಚರಣೆಯಾದಳಿತ್ತ ಅನೇಕ ಮುಕುಂದಬೃಂದಂಗಳ್ ಮೊಟಗೆ ಶುಭ ಮುಹೂರ್ತದೊಳರಿಕೇಸರಿಯಂ ಮುಂದಿಟ್ಟು ಹಸ್ತಿನಪುರಮನೆಯ್ದಿ ಪುರಜನ ಜನಿತಾಶೀರ್ವಾದಸಹಸ್ರಂಗಳೊಡನೆ ಸೂಸುವ ಶೇಷಾಕ್ಷತಂಗಳನಾನುತ್ತುಂ ರಾಜಮಂದಿರಮಂ ಪೊಕ್ಕು ಧರ್ಮನಂದನಂ ದೇವಕೀನಂದನನೊಳ್ ಪರಮಾನಂದಂಬೆರಸು ಸಾಮಂತ ಚೂಡಾಮಣಿಯ ಪಟ್ಟ

ಬಂಧನ ಮಹೋತ್ಸವಮಂ ಸಮಕೊಳಿಸಿ ಅರಿಕೇಸರಿಯಂ ಕೇಸರಿವಿಷ್ಟರದೊಳ್ ಕುಳ್ಳಿರಿ ಪಂಚರತ್ನ ಶಿಖಾವಿರಾಜಮಾನಮಪ್ಪ ಪಟ್ಟಮನೆತ್ತಿ ಯಾದವವಂಶಸಂಭೂತೆಯುಮನೇಕ ಲಕ್ಷಣೋಪೇತೆಯುಮಪ್ಪ ಸುಭದ್ರೆಗೆ ಮಾಹಾದೇವಿ ಪಟ್ಟಮಂ ಕಟ್ಟಿದಾಗಳ್ ನೆಗಳ್ದು ದೇವದುಂದುಭಿ ರವಂ

ಪುದಿದಿರೆ ರಾಗಮುರ್ಕೆ ಪೊಸವೇಟದಲಂಪುಗಳೆಲ್ಲಮೋದಿದ
ರ್ಗಿದಱನುಯಾಯಿಗಳ್ಗೆಸೆವುದಾರ ಗುಣಂ ಸಕಳಾವನೀಶ್ವರ
ರ್ಗದಟನಳುರ್ಕೆ ಭೃತ್ಯನಿವಹಕ್ಕೆ ಚದುರ್ ಗಣಿಕಾಜನಕ್ಕೆ ಕುಂ
ದದೆ ನೆಲಸಿರ್ಕೆಯೀ ಮಹಿತಳಕ್ಕೆ ಮದೀಯ ಕೃತಿಬಂಧದಿಂ ೧೨೨

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ ೧೨೩

ಕರಮಟ್ಟಿರ್ತು ಸಮಸ್ತ ಭಾರತ ಕಥಾಸಂಬಂಧಮಂ ಬಾಜಿಸಲ್
ಬರೆಯಲ್ ಕೇಳಲೊಡರ್ಚುವಂಗಮಿದಱೊಳ್ ತನ್ನಿಷ್ಟವಪ್ಪನ್ನಮು
ತ್ತರಮಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಮಿಷ್ಟಾಂಗನಾ
ಸುರತಂ ಕಾಂತಿಯಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ ೧೨೪

ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರವಚನರಚನ
ಚತುರಕವಿತಾ ಗುಣಾರ್ಣವ ವಿರಚಿತಮಪ್ಪ
ಸಂಕ್ಷಿಪ್ತ ವಿಕ್ರಮಾರ್ಜುನ ವಿಜಯಂ
ಸಂಪೂರ್ಣಂ

* * * * * * *

ಟಿಪ್ಪಣಿಗಳು

೧. ಭರತವಂಶಾವತಾರಂ

೧. ಶ್ರೀ – ಜಯ[ಲಕ್ಷ್ಮಿ]; ಅರಾತಿ – ಶತ್ರು; ಸಾಧನ – ಸೈನ್ಯ; ಪಯೋನಿಧಿ – ಸಮುದ್ರ; ಜೀಯೆನೆ – ಜೀಯ [ಸ್ವಾಮಿ] ಎಂದು; ಆತ್ಮೀಯ – ತನ್ನ; ಸುಪುಷ್ಪಪಟ್ಟ – ರಾಜರೂ ದೇವತೆಗಳೂ ಧರಿಸುವ ಹನ್ನೆರಡು ಬಗೆಗಳಲ್ಲಿ ಒಂದಾದ ಪಟ್ಟವೆಂಬುದರ ಒಂದು ರೂಪ, ಪಟ್ಟಭಾಜ್ ವರ್ಗದವರು ಈ ಕಿರೀಟ ಧರಿಸುವ ಅಧಿಕಾರ ಪಡೆದಿದ್ದರು

೨. ಮುಳಿಸು – ಕೋಪ; ಲಲಾಟನೇತ್ರ – ಹಣೆಗಣ್ಣು; ಅಂಗಸಂಗತ – ದೇಹದಲ್ಲಿ ಸೇರಿಕೊಂಡಿರುವ; ಭಸಿತ – ವಿಭೂತಿ, ಬೂದಿ; ಶಕ್ತಿ – ಶಕ್ತಿದೇವತೆ; ಪುದುಂಗೊಳಿಸು – ಸೇರಿಸು

೩. ಚಂಡ – ತೀಕ್ಷ್ಣವಾದ; ತಮಸ್ತಮ – ಕತ್ತಲೆಯ ರಾಶಿ; ಪದ್ಮಿನೀ – ತಾವರೆ ಅಥವಾ ಪದ್ಮಿನೀ ಜಾತಿಯ ಹೆಂಗಸು; ಯಾಚಕ – ಬೇಡುವವನು; ತಗುಳ್ – ಹಿಂಬಾಲಿಸು; ಅಲರ್ಚು – ಅರಳಿಸು; ವಾಙ್ಮರೀಚಿ – ಮಾತೆಂಬ ಕಿರಣ

೪. ಸೋಲದ ಕೇಳಿ – ಒಲುಮೆಯ ಆಟ; ಒಳ್ಪನಾಳ್ – ಸೊಗಸನ್ನು ಪಡೆ; ಅಹಿಕಟಕ – ಶಿವ; ಮನೋಜ – ಮನ್ಮಥ; ವಿಚಿತ್ರ ರತೋತ್ಸವ – ಆನಂದಕರವಾದ ಸಂಭೋಗಸುಖ

ಈ ಮೇಲಿನ ನಾಲ್ಕು ಪದ್ಯಗಳಲ್ಲಿ ಪಂಪ ಕ್ರಮವಾಗಿ ನಾರಾಯಣ, ಮಹೇಶ್ವರ, ಮಾರ್ತಾಂಡ ಹಾಗೂ ಮನೋಜರನ್ನು ಸ್ತುತಿಸಿ ಅವರೊಡನೆ ತನ್ನ ಆಶ್ರಯದಾತನನ್ನು ಸಮೀಕರಿಸಿದ್ದಾನೆಂಬ ಭಾವನೆಯಿದೆ. ಆದರೆ ವಾಸ್ತವವಾಗಿ ಅಲ್ಲಿ ನಡೆದಿರುವುದು ಈ ದೇವತೆಗಳ ಸ್ತುತಿಯಲ್ಲ, ಬದಲಿಗೆ ಅವರಿಗಿಂತ ಮಿಗಿಲಾದ ತನ್ನ ಆಶ್ರಯದಾತ ಅರಿಕೇಸರಿಯ ಸ್ತುತಿ. (ಹೋಲಿಕೆಯಿಂದಾಗಿ ದೇವತೆಗಳ ಗೇಲಿ!) ಮೊದಲ ಪದ್ಯದಲ್ಲಿ ನಾರಾಯಣನಿಗಿಂತ ಮಿಗಿಲಾದ **"ಉದಾತ್ತ ನಾರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯುಂ"** ಎಂದೂ; ಎರಡನೆಯುದರಲ್ಲಿ **"ಉದಾರ ಮಹೇಶ್ವರನೀಗೆ ಭೋಗಮಂ"** ಎಂದೂ; ಮೂರನೆಯ ಪದ್ಯದಲ್ಲಿ **"ಪ್ರಚಂಡ ಮಾರ್ತಾಂಡನಲರ್ಚುಗೆನ್ನ**

ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ" ಎಂದೂ; ಹಾಗೂ ನಾಲ್ಕನೆಯದರಲ್ಲಿ **"ಸಹಜಮನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ"** ಎಂದೂ ಕವಿ ಪ್ರಾರ್ಥಿಸುತ್ತಾನೆ. ವೈದಿಕ ದೇವರು ನಾರಾಯಣನಾದರೆ ತನ್ನ ಆಶ್ರಯದಾತ 'ಉದಾತ್ತ ನಾರಾಯಣ'; ಅವನು ಮಹೇಶ್ವರನಾದರೆ, ತನ್ನ ಪ್ರಭು 'ಉದಾರ ಮಹೇಶ್ವರ'; ಆತ ಮಾರ್ತಾಂಡನಾದರೆ ತನ್ನ ಯಜಮಾನ 'ಪ್ರಚಂಡ ಮಾರ್ತಾಂಡ'; ಹಾಗೆಯೇ ಮೂಲದವನು ಮನೋಜನಾದರೆ, ತನ್ನೊಡೆಯ 'ಸಹಜಮನೋಜನೋಜ' [ನೋಡಿ, ಅನುಬಂಧ]

೫. ಬಗೆ – ಆಲೋಚನೆ ಅಥವಾ ಚಿಂತನೆ; ಒಂದು – ಸೇರು; ಪುಗು – ಹೊಗು, ಪ್ರವೇಶಮಾಡು; ತಳ್ವು – ನಿಲ್ಲು; ಎಳಮಾವು – ಚಿಗುರಿದ ಮಾವಿನ ಮರ; ಬಿಣ್ಪೊಜೆ – ಬಹುಭಾರ; ಬಗ್ಗಿಸು – ಕೂಜನ ಮಾಡು, ಕೂಗು

ಪಂಪನ 'ದೇಸಿ'ಯ ಬಗ್ಗೆ ಹಿಂದಿನ ಕವಿಗಳು ಮೆಚ್ಚಿಕೆಯ ಮಾತನ್ನಾಡಿದ್ದಾರೆ, ಹೊಸ ಕಾಲದಲ್ಲಿಯೂ ಈ ಕುರಿತು ಸಾಕಷ್ಟು ಚರ್ಚೆ ನಡೆದಿದೆ. ಆದರೆ ದೇಸಿಯ ಸ್ವರೂಪವೇಂದರೇನೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಅದೊಂದು ಅಮೂರ್ತ ಪರಿಕಲ್ಪನೆ. ಸಂಸ್ಕೃತ ಮಾದರಿಯ ಕಾವ್ಯವಸ್ತು ಮತ್ತು ಆಕಾರಗಳ ನಡುವೆಯೇ ಕನ್ನಡದ ಸತ್ವವನ್ನು ಪ್ರಕಟಿಸುವ ಬಗೆ, ಮಾತಿನ ಬಳಕೆಯ ಪರಿ, ಕನ್ನಡದ್ದಲ್ಲದ ಅಕ್ಷರ ಛಂದಸ್ಸಿಗೆ ಅಚ್ಚಗನ್ನಡವನ್ನು ಒಗ್ಗಿಸುವ ಬಗೆ, ಕನಕಸ್ವಾಮಿಯ ಪ್ರಸಂಗದಂತಹ ಸನ್ನಿವೇಶಗಳಲ್ಲಿ ಸೇರಿಸಿರುವ ಜಾನಪದ ಸಂಸ್ಕೃತಿ ವಿವರಗಳು ಮತ್ತು, ಎಲ್ಲಕ್ಕಿಂತ ಮಿಗಿಲಾಗಿ, ತನ್ನ ಕಾಲದ ಜನರ ತಲ್ಲಣಗಳು ತವಕಗಳು, ಭಾವನೆ–ನಂಬಿಕೆಗಳು, ನೋವು ನಲಿವುಗಳು, ಆಸೆ ಆಕಾಂಕ್ಷೆಗಳನ್ನೊಳಗೊಳ್ಳುವುದು – ಇವೆಲ್ಲ ಒಗ್ಗೂಡಿ ಪ್ರಾಯಶಃ ದೇಸಿಯಾಗುತ್ತದೆ.

೬. ನಾಮಧಾರಕ – ಬರೀ ಹೆಸರು ಹೊತ್ತ; ಓಳಿ – ಸಾಲು; ದೊರೆಯಲ್ತು – ಯೋಗ್ಯವಲ್ಲ; ತಾನು ಕವಿಗಳ ಹೆಸರುಮಾತ್ರದವನಲ್ಲ, ಅರಿಕೇಸರಿಯು ನರಾಧಿಪ ಎಂಬ ಹೆಸರು ಮಾತ್ರ ಪಡೆದವನಲ್ಲ; ಗುಣಾರ್ಣವ ಮತ್ತು ಕವಿತಾಗುಣಾರ್ಣವ – 'ಆದಿಪುರಾಣ'ದಲ್ಲಿ ಪಂಪ ತನ್ನ ಕವಿತ್ವವು ಅರ್ಣವದಂತೆ 'ನಿಚ್ಚಂ ಪೊಸತಾ'ದುದುರಿಂದ ತಾನು 'ಕವಿತಾಗುಣಾರ್ಣವ' ಎಂದು ಹೇಳಿಕೊಳ್ಳುತ್ತಾನೆ. ಅಂದರೆ ರಾಜಾಶ್ರಯಕ್ಕೆ ಬರುವ ಮುಂಚೆಯೇ ಅವನಿಗೆ ಈ ಬಿರುದು ಇತ್ತು. ಇದು ಬೇರೆ ಯಾರಾದರೂ ಕೊಟ್ಟ ಬಿರುದಾಗಿರದೆ ತನ್ನನ್ನು ತಾನು ವಿಶೇಷಿಸಿಕೊಂಡ ರೀತಿಯಾಗಿದ್ದಂತೆ ಕಾಣುತ್ತದೆ. ಏಕೆಂದರೆ ಅವನು ಆಗ ರಾಜಾಶ್ರಯದಲ್ಲಿ, ಅಥವಾ ಇನ್ನಾವುದೇ ಆಶ್ರಯದಲ್ಲಿ ಇರಲಿಲ್ಲ; ಹಾಗೂ ಅವನಿನ್ನೂ ಏನನ್ನೂ ಬರೆದೇ ಇರಲಿಲ್ಲ. ಹೀಗಾಗಿ ಇದು ಸ್ವಯಂವರ್ಣನೆ ಎಂದು ಭಾವಿಸಬಹುದು. ತಾನು 'ಕವಿತಾಗುಣಾರ್ಣವ', ಅರಿಕೇಸರಿಯು 'ಗುಣಾರ್ಣವ'. ಅಂದರೆ ರಾಜಾಶ್ರಯಕ್ಕೆ ಬರುವ ಮುಂಚೆ ತನ್ನನ್ನು ಬಣ್ಣಿಸಿಕೊಂಡಿದ್ದಂತೆಯೇ ತನ್ನ ಆಶ್ರಯದಾತನನ್ನೂ ಕರೆದ. ಅಂದರೆ ಅರಿಕೇಸರಿಯ ಈ ವಿಶೇಷಣ

ಕವಿ ಇತ್ತುದು; ಅದೂ ತನ್ನದರಂತೆಯೇ ಇರುವಂಥದು. ಎಂದರೆ ತನ್ನ ಗುಣಕ್ಕನುಗುಣನಾದವನು ಅರಿಕೇಸರಿ ಎಂಬ ಭಾವವಿಲ್ಲಿದೆ.

೭. ಸಮಸ್ತಭಾರತ – ಈ ಶಬ್ದದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. 'ದೇಸಿ'ಯ ಬಗೆಗಿನ ಟಿಪ್ಪಣಿಯನ್ನಿಲ್ಲಿ ನೆರವಿಗೆ ಪಡೆಯಬಹುದು; ಮಾರ್ಗ ಹಾಗೂ ದೇಸಿಗಳು ಸೇರಿರುವುದನ್ನೇ ಈ ಶಬ್ದ ಸೂಚಿಸುತ್ತಿರಬಹುದು; ವರ್ಣಕ – ವಸ್ತುಕ ಎನ್ನುವುದಕ್ಕೆ ಪ್ರತಿಸಂವಾದಿ ಪದ; ವರ್ಣಕ ಎಂದರೆ ದೇಸಿಯೇ; ವಸ್ತುವಿಗಿಂತ [ಭಾವ] ವರ್ಣನೆಗೇ ಇಲ್ಲಿ ಪ್ರಾಧಾನ್ಯ; ತಗುಳ್ದು – ಮತ್ತೆ ಮತ್ತೆ; ಬಿಚ್ಚಳಿಸು – ವಿಸ್ತರಿಸು, ಹೊಗಳು

೮. ರುಂದ್ರ – ವಿಸ್ತಾರವಾದ; ವಾರ್ಧಿ – ಸಮುದ್ರ; ವ್ಯಾಸನೆನ್ – ವ್ಯಾಸನೇ ಆಗಿದ್ದೇನೆ; ಒಳ್ಪು – ಒಳ್ಳೆಯತನ

೯. ಯಶೋವಿತಾನ – ಕೀರ್ತಿರಾಶಿ; ಪದಂಗಳಂ ಪುದಿಸು – ಪದವಿ ಅಥವಾ ಗುಣಗಳನ್ನು ಆರೋಪಿಸು; ತಗುಳೆವರ್ – ಅಟ್ಟಿಸಿಕೊಂಡು ಹೋಗು, ಸೋಲಿಸು; ತಗುಳ್ಚು – ಸೇರಿಸು; ಕಿರೀಟಿ – ಅರ್ಜುನ

೧೦. ಸಮುನ್ಮಿಷತ್ – ಪ್ರಕಾಶಿಸುತ್ತಿರುವ; ಪ್ರಭಾಭಿದ್ – ಕಾಂತಿಯಿಂದ ಸೀಳಲ್ಪಟ್ಟ; ಅರುಣಜಲ – ಕೆಂಪು ನೀರು; ವೀಚೀರಯ – ಅಲೆಗಳ ವೇಗ; ಪ್ರದಾರಿತ – ಸೀಳಲ್ಪಟ್ಟ; ಕುಳಾಚಲ – ಕುಲಪರ್ವತ; ಉದಧಿ – ಸಮುದ್ರ; ದೀವಿ – ದ್ವೀಪ

೧೧. ಎಱಗು – ಬಾಗು; ಕೆಯ್ವೊಲ – ಗದ್ದೆ; ವಿಷಯಾಂಗನಾ – ದೇಶವೆಂಬ ಹೆಣ್ಣು; ಲುಳಿತ – ಕೊಂಕಾದ, ಸುಂದರವಾದ; ಕುಂತಳ – ಮುಂಗುರುಳು ಮತ್ತು ಕುಂತಳ ದೇಶ

೧೨. ಪತ್ರಫಲಪುಷ್ಪಯುತಾಟವಿ – ಎಲೆ ಹಣ್ಣು ಹೂಗಳಿಂದ ಕೂಡಿದ ಕಾಡು; ದೇವಮಾತೃಕ – ದೇವತೆಗಳು ಸುರಿಸುವ ಮಳೆಯ ನೀರಿನಿಂದ ಕೃಷಿಗೊಳ್ಳುವ ಪ್ರದೇಶ; ಗಂಧಶಾಲಿ – ಸುಗಂಧಭರಿತ ಬತ್ತ; ವಿಷಯಾಂತರಾಳ – ನಾಡಿನ ಒಳಭಾಗ

ವ. ಕೈಟಭಾರಾತಿ – ಕೈಟಭನೆಂಬ ರಾಕ್ಷಸನ ಶತ್ರು, ವಿಷ್ಣು; ಕೌಸ್ತುಭ – ಸಮುದ್ರ ಮಥನ ಕಾಲದಲ್ಲಿ ಹುಟ್ಟಿದ ಆ ಹೆಸರಿನ ರತ್ನ; ಪೊೞಲ್ – ನಗರ

೧೩. ಪೊಱವೊೞಲ್ – ನಗರದ ಹೊರಭಾಗ; ಕೃತಕಗಿರಿ – ಕ್ರೀಡೆಗಾಗಿ ನಿರ್ಮಿಸಿದ ಬೆಟ್ಟ; ಪ್ರಕೀರ್ಣ – ತುಂಬಿರುವ; ಕೊನೆ – ಕುಡಿ; ನಿಕುಂಜ – ಬಳ್ಳಿಮಾಡ; ಪ್ರಸೂನರಜ – ಹೂವಿನ ಪರಾಗ; ತಟಾಕ – ಕೆರೆ; ಕುಕಿಲ್ – ಕೂಗು, ಶಬ್ದ ಮಾಡು; ಕೋಕ – ಕೋಗಿಲೆ; ಸುರಯಿಯರಲ್ – ಸುರಗಿ ಹೂ; ಮೊಗಸು – ಮುತ್ತಿಕೊ; ಶಿಶುಶುಕ – ಮರಿಗಿಳಿ; ತುರಂಗಮ – ಕುದುರೆ; ಅಗೞ್ – ಕಂದಕ; ಕನಕಶಾಳ – ಚಿನ್ನದ ಕೋಟೆಗೋಡೆ; ಎಳಿಸು – ಅಪಹಾಸ್ಯಮಾಡು

ವ. ವಿಧಾತ್ರ – ಸೃಷ್ಟಿಕರ್ತ, ಬ್ರಹ್ಮ; ತೆರಳ್ಚು – ರಾಶಿಮಾಡು; ಅವಳಂಬ – ಆಶ್ರಯಸ್ಥಾನ

೧೪. ಕಮಲೋದ್ಭವ – ಬ್ರಹ್ಮ; ಸುರೇಂದ್ರಧಾರಕ – ಇಂದ್ರನನ್ನೂ ನಿಯಂತ್ರಿಸುವವನು

ವ. ಹಿರಣ್ಯಗರ್ಭ – ಬ್ರಹ್ಮ; ಅವ್ಯವಚ್ಛಿನ್ನ – ತುಂಡರಿಸಲ್ಪಡದ; ಪರಿಕಲಿತ – ಸೇರಿದ; ಕಂಠಲುಂಠಿತ – ಕೊರಳ ಅಲುಗಾಟ; ಕಣ್ಬೇಟ– [ಮೊದಲ] ನೋಟದಲ್ಲಿನ ಪ್ರೀತಿ; ಇಂದ್ರಿಯಕ್ಷರಣೆ – ವೀರ್ಯಪಾತ; ಕದಳೀಪತ್ರ – ಬಾಳೆಯೆಲೆ; ತನ್ನ ನಡಪಿದ – ತಾನು ಸಾಕಿದ; ಜಗುನೆ – ಯಮುನಾ ನದಿ; ಉಗಿಬಗಿಮಾಡು – ಉಗುರಿನಿಂದ ಪರಚಿ ಗಾಯಗೊಳಿಸು; ಬರ್ದುಂಕು – ಜಾರಿಕೊ, ತಪ್ಪಿಸಿಕೊ; ಬಾಳೆಮೀನ್ – ಬಾಳೆ ಎಂಬ ಮೀನು, ಹೆಣ್ಣು ಮೀನು; ಜಾಲಗಾಜಿ – ಬೆಸ್ತ; ಬಾಳೆ – ಬಾಲೆ, ಹೆಣ್ಣು ಮಗು; ವಿದಾರಿಸು – ಸೀಳು; ಓಡು – ದೋಣಿ; ಬಿಣ್ಪು – ಭಾರ; ಅಟ್ಟಿಕೊರ್ತು – ಪ್ರೀತಿಸಿ

೧೫. ಕಾಂಡಪಟ – ತೆರೆ; ಮಂಜು – ಕಾವಳ; ಅಲಂಪು – ಸಂತೋಷ; ಕೂಡುವೆಡೆ – ಬೆರೆಯುವ ಸಮಯ; ತೀರದೇ – ಸಾಕಾಗುವುದಿಲ್ಲವೇ ಅಂದರೆ ಪರವಾಯಿಲ್ಲ

ವ. ನೀಲಾಂಬರ – ಕಪ್ಪು ಮೋಡ; ಕನಕಪಿಂಗಳ – ಕೆಂಪು ಹಳದಿ; ದಂಡ ಕಪಾಳಹಸ್ತ– ಕೈಯಲ್ಲಿ ಯೋಗದಂಡ ಹಾಗೂ ಭಿಕ್ಷಾಪಾತ್ರೆ ಹಿಡಿದವನು; ಕೃಷ್ಣಮೃಗತ್ವಕ್ಪರಿಧಾನ – ಕಪ್ಪು ಜಿಂಕೆಯ ಚರ್ಮವನ್ನು ಹೊದ್ದ

೧೬. ಮೃಗಯಾವ್ಯಾಜ – ಬೇಟೆಯ ಕಾರಣ; ತೊಟಿಲ್ತರ್ – ಸುತ್ತಾಡಿ ಬಾ; ಪಳಂಚು – ತಾಗು, ಮುಟ್ಟು; ಮಧುಪ ದುಂಬಿ; ದಿವ್ಯ – 'ದಿವ್ಯ' ಎಂದರೆ ಆರೋಪವನ್ನು ನಿರಾಕರಿಸಲು ಅಥವಾ ನಿರಪರಾಧಿತ್ವವನ್ನು ಸಾಬೀತುಮಾಡಲು ಆಚರಿಸುವ ನಾನಾ ಬಗೆಯ ಪರೀಕ್ಷೆಗಳು; ಇವು ಐದರಿಂದ ಒಂಬತ್ತು ಬಗೆ ಎಂದು ಸ್ಮೃತಿಕಾರರು ಹೇಳುತ್ತಾರೆ. ಕನ್ನಡ ನಾಡಿನಲ್ಲಿ ಹಿಂದೆ ಸಾಮಾನ್ಯವಾಗಿ ಪ್ರಚಲಿತವಾಗಿದ್ದ ದಿವ್ಯಗಳು ಏಳು: ಕೋಶ, ರವಿ, ತಂಡುಲ, ಅಗ್ನಿ, ತಪ್ತಮಾಷ, ಜಲ ಮತ್ತು ವಿಷ; ಬೇಡು – ಬಯಸು ಮತ್ತು ಕೇಳು

ವ. ಕ್ರಮಕ್ರಮಾರ್ಹ – ವಂಶಕ್ರಮಕ್ಕನುಗುಣವಾಗಿ ಬರುವ ಹಕ್ಕಿಗೆ ತಕ್ಕವನು; ತೊಡರ್ಪು – ಗೋಜಲು, ಸಿಕ್ಕು; ಕಂದಲ್ – ಮೊಳಕೆ, ಚಿಗುರು; ನುಡಿವಳಿ – ಕೊಟ್ಟ ಮಾತು, ವಾಗ್ದಾನ; ಅಧಿಷ್ಠಾನಂಗಟ್ಟು – ತಳಹದಿ ಹಾಕು; ಪೋಣರ್ಚು – ಸ್ಪರ್ಧಿಸು; ಸಾಯಕ – ಬಾಣ; ಪಡಲ್ವಡಿಸು – ಕತ್ತರಿಸಿ ಹಾಕು; ಅಂಗಜೋತ್ಪತ್ತಿಸುಖ – ಕಾಮಸುಖ; ಪುರುಷವ್ರತ – ಬ್ರಹ್ಮಚರ್ಯ; ಅವಸರ – ಅವಕಾಶ; ಪಸರ – ಸಲಿಗೆ; ಉಂಗುರವಿಡು – ಮದುವೆಯಾಗುವೆನೆಂದು ಉಂಗುರ ತೊಡಿಸು; ಕಿಚ್ಚಂ ದಯೆಗೆಯ್ – ಅಗ್ನಿಪ್ರವೇಶ ಮಾಡಿ ಪ್ರಾಣಬಿಡಲು ಬೆಂಕಿಯನ್ನು ದಯಪಾಲಿಸು; ನಾಗಪುರ – ಹಸ್ತಿನಾವತಿ; ಅರ್ಘ್ಯ – ಕೈ ತೊಳೆಯುವ ನೀರು; ಪಸುರ್ವಂದರ್ – ಹಸಿರುವಾಣಿ ಚಪ್ಪರ; ಸಮೆ – ಮಾಡಿಸು; ಕೈದುಗೊಳ್ – ಆಯುಧ ಹಿಡಿದು [ಯುದ್ಧಕ್ಕೆ] ಸಿದ್ಧವಾಗು; ಮೊಜಿ – ಸಂಬಂಧ; ದುಂಡುರುಂಬೆ – ದಿಟ್ಟ ಹೆಂಗಸು, ಗಯ್ಯಾಳಿ

ಅವಾರ್ಯವೀರ್ಯ – ತಡೆಯಲಾಗದಂತಹ ಸಾಮರ್ಥ್ಯವಿರುವ; ರಾಜಯಕ್ಷ್ಮ – ಕ್ಷಯ ರೋಗ; ಆತ್ಮಜಗತಜೀವಿ – ಮಕ್ಕಳಿಲ್ಲದವನು; ದಹ್ಯಮಾನ – ಸುಡಲ್ಪಟ್ಟ; ಮದೀಯ – ನನ್ನ; ಅಮರಾಪಗಾನಂದನ – ದೇವನದೀಪುತ್ರ, ಭಿಷ್ಮ; ಎಡೆವಜಿ – ನಡುವೆ ಹರಿದುಹೋಗು

ಸೂಳೆ – ದಾಸಿ; ಕೆಯ್ಗೆಯ್ – ಅಲಂಕರಿಸು; ಜಾತ್ಯಂಧ – ಹುಟ್ಟು ಕುರುಡ; ಪಾಂಡುರಂ ಮಾಡು – ಬೆಳ್ಳಗಾಗಿಸಿಕೊ, ಬಿಳಿಚಿಕೊ; ದರಹಸಿತವದನ – ಮುಗುಳ್ನಗೆಯುಳ್ಳ ಮುಖ

೧೭. ಉತ್ತರೋತ್ತರ – ಸಂತತವಾದ ಅತಿಶಯ; ತಾಳ್ದು – ಧರಿಸು

ವ. ಷೋಡಶಕ್ರಿಯೆ – ಹದಿನಾರು ಸಂಸ್ಕಾರಗಳು: ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ಪ್ರಾಜಾಪತ್ಯ, ಸಾಮ್ಯ, ಆಗ್ನೇಯ, ವೈಶ್ವದೇವ, ಗೋದಾನ, ಸಮಾವರ್ತನ, ವಿವಾಹ, ಅಂತ್ಯೇಷ್ಟಿ – ಇವುಗಳು; ನಳಿನಾಸ್ಯೆ – ಕಮಲದಂತಹ ಮುಖವುಳ್ಳವಳು, ಸುಂದರಿ; ಮನಂಗೊಳ್ – ಮನಸ್ಸನ್ನು ಆಕರ್ಷಿಸು, ಮೆಚ್ಚಿಸು

೧೮. ಸುರನದಿ – ಗಂಗಾನದಿ; ದೊರೆಯನೆ – ಸಾಟಿಯಾದ; ದಶಶತಕಿರಣ – ಸೂರ್ಯ

ವ. ಇನ್ನೇಟಿಂ – ಇನ್ನು ಮೇಲೇಳಿ, ಹೋಗಿರಿ; ನಿಧಾನ – ನಿಧಿ; ಈಡಾಡು – ಬಿಸಾಡು

ತಟ್ಕೈಸು – ಅಪ್ಪಿಕೊ; ಸೋಂಕಿಲ್ – ಉಡಿ, ಮಡಿಲು; ರಾಗಿಸು – ಸಂತೋಷಪಡು; ಸೂತಕ – ಮಗು ಹುಟ್ಟಿದಾಗಿನ ಸೂತಕ, ಪುರುಡು

೧೯. ಬರಿ – ಪಕ್ಕೆ; ವಟು – ಬ್ರಹ್ಮಚಾರಿ

ವ. ತಿದಿಯುಗಿ – ಚರ್ಮವನ್ನು ಸುಲಿ; ಶಕ್ತಿ – ಶಕ್ತ್ಯಾಯುಧ; ರೇಣುಕಾನಂದನ – ರೇಣುಕೆಯ ಮಗ, ಪರಶುರಾಮ

೨೦. ಕೂರಿಸು – ಆದರವುಂಟಾಗುವಂತೆ ಮಾಡು; ಪಾಟಿತರಿಪು – ಸೀಳಲ್ಪಟ್ಟ ವೈರಿ; ಇಷುವಿದ್ಯಾ – ಧನುರ್ವಿದ್ಯೆ; ವೈಕರ್ತನ – ಕರ್ಣ

ವ. ಪ್ರಸ್ತಾವ – ಸಂದರ್ಭ; ಕೊಡಂತಿ – ಕೊಡತಿ; ಬೆಟ್ಟು – ಹೊಡೆ; ಅಭಿಘಾತ – ಭಂಗ; ಉಗುರಿಸು – ಉಗುರಿನಿಂದ ಕೆರೆದುಕೊ

೨೧. ಒಜಿ – ಜಿನುಗು; ಮನಃಕ್ಷತ – ಮನಸ್ಸಿನ ಗಾಯ, ಕೋಪ; ಉತ್ಥಿತಂ – ಅಧಿಕವಾಗುತ್ತಿರುವ; ಅಸ್ರಮಿಶ್ರಗಂಧ – ರಕ್ತದಿಂದ ಕೂಡಿದ ವಾಸನೆ

ವ. ತಳ್ಪೊಯ್ – ತಟ್ಟು; ಅವಸಾನಕಾಲ – ಕೊನೆಗಾಲ; ಶಾಪಹತ – ಶಾಪದಿಂದ ಘಾತಿತನಾದವನು

ಮಾಲೆಸೂಡು – ಮಾಲೆ ಹಾಕು, ವರಿಸು; ಒಂದೆ ಪಸೆ – ಒಂದೇ ಹಸೆ, ಒಟ್ಟಿಗೇ; ವಿಧಾತ್ರ – ಬ್ರಹ್ಮ; ಮುಂಡಾಡು – ಮುದ್ದಾಡು; ಪಟ್ಟಬಂಧ – ರಾಜ್ಯಾಭಿಷೇಕ: ಭೂಭೃತ್ – ರಾಜ

೨೨. ಮೃಗಿ – ಹೆಣ್ಣು ಜಿಂಕೆ; ನೆಱನಂ ನೋಡು – ಮರ್ಮಸ್ಥಾನವನ್ನು ಗುರಿಯಾಗಿರಿಸಿಕೊ; ಮೃಗಚಾರಿ – ಜಿಂಕೆಯಾಗಿ ಸಂಚರಿಸುತ್ತಿದ್ದ; ಮಾರಿ – ಮೃತ್ಯು

ವ. ಉಳ್ಕ – ಉಲ್ಕೆ; ಉಳ್ಕು – ಪ್ರಕಾಶಿಸು; ಮುನಿದ ಸರ – ಕೋಪದ ಧ್ವನಿ

೨೩. ರತ – ಸಂಭೋಗ; ಅನ್ನೆಯಂ – ಅನ್ಯಾಯವಾಗಿ; ನಡೆ ನೋಡು – ಚೆನ್ನಾಗಿ ನೋಡು

೨೪. ವೃತ್ತಕ – ಕಾರ್ಯ; ಆತ್ಮಕರ್ಮಾಯತ್ತ – ತನ್ನ ಕರ್ಮಕ್ಕೆ ಅಧೀನವಾದುದು; ಅಘಟಿತಘಟಿತಂ – ಒಂದೊಂದಕ್ಕೆ ಸಂಬಂಧವಿಲ್ಲದ್ದು

ವ. ತಪ್ಪುದು – ತಪ್ಪಿಹೋಯಿತು; ವಕ್ರಿಸದಿರಿಂ – ಅಡ್ಡಿ ಮಾಡಬೇಡಿ; ಬಾರಿಸಿ ವಾರಿಸು – ಬೇಡಬೇಡವೆಂದು ತಡೆ; ಬಿನ್ನಬಿನ್ನನೆ – ಮೌನವಾಗಿ

೨೫. ವಿಸಸನ – ಯುದ್ಧ; ಅರ್ಥಿ – ಬೇಡುವವನು; ಕಸವು – ಕಸ; ವಿಮುಳಾಯತಿ – ಅತಿಶಯವಾದ ಶಕ್ತಿ; ಇಕ್ಷುಪುಷ್ಪ – ಕಬ್ಬಿನ ಹೂ; ಪುಷ್ಪದರ್ಶನ – ಮುಟ್ಟಾಗುವಿಕೆ

ವ. ಅಮೋಘವಾಕ್ಯಂ – ವ್ಯರ್ಥವಲ್ಲದ ಮಾತು; ದಳಿಂಬ – ದಣಿಬ, ಮಡಿ ಬಟ್ಟೆ; ದರ್ಭಶಯನ – ಹುಲ್ಲಿನ ಹಾಸಿಗೆ; ಜಾನ – ಧ್ಯಾನ; ಆತ್ಮಾನುಗತಾರ್ಥ – ತನ್ನ ಮನದಲ್ಲಿರುವ ಅಭಿಲಾಷೆ; ತಥಾಸ್ತು – ಹಾಗೆಯೇ ಆಗಲಿ; ಅವತರಿಸು – ಇಳಿಸು; ಅಂತರ್ಧಾನಕ್ಕೆ ಸಲ್ – ಮಾಯವಾಗು, ಕಣ್ಮರೆಯಾಗು

೨೬. ವನನಿಧಿ – ಸಮುದ್ರ; ಗರುತ್ಮ – ಗರುಡ; ಇನಜ – ಸೂರ್ಯನ ಮಗ, ಯಮ

೨೭. ಏಂ ಮಂತ್ರಂ – ಏನು ಆಲೋಚನೆ; ರಿಪುತಂತ್ರಕ್ಷಯಕಾರಕ – ವೈರಿ ಸೈನ್ಯವನ್ನು ನಾಶಮಾಡುವವನು

ವ. ವಿಯತ್ತಳ – ಆಕಾಶ; ಅರಾತಿ – ಶತ್ರು; ಪ್ರಸೂತಿಕಾಲ – ಹೆರಿಗೆಯ ಸಮಯ

೨೮. ಪೆಸರನ್ವರ್ಥಂ – ಅರ್ಥಕ್ಕನುಗುಣವಾದ ಹೆಸರು

ವ. ಕಿನಿಸು – ಕೋಪಗೊಳ್ಳು; ಅರುಣಾಕೀರ್ಣಂ – ರಕ್ತದಿಂದ ತುಂಬಿದವು; ಅಗುರ್ಬು – ಭಯ; ಪರಕಲಿಸು – ಹರಡು, ವ್ಯಾಪಿಸು; ಘೃತಘಟವಿಘಟನ – ತುಪ್ಪದ ಕೊಡವನ್ನು ಒಡೆದುಕೊಂಡು; ಬಿಣ್ಪು – ಭಾರ; ತಿಣ್ಪು – ತೂಕ; ಅಗುಂತಿ – ಅತಿಶಯತೆ; ಜವ – ಯಮ; ಬಲ್ಲಾಳ್ತನ – ಶೌರ್ಯ; ಶಕ್ತಿಪುಟ – ಮುತ್ತಿನ ಚಿಪ್ಪು; ಮುಕ್ತಾಫಲೋದಬಿಂದು – ಮುತ್ತು ಎಂಬ ನೀರಿನ ಹನಿ; ಸಂಕ್ರಮಿಸು – ಬೆರಸು

ಷಡ್ವರ್ಗ – ಲಗ್ನ, ಹೋರೆ, ದ್ರೇಕ್ಕಾಣ, ನವಾಂಶ, ದ್ವಾದಶಾಂಶ, ತ್ರಿಂಶಾಂಶ ಎಂಬಿವು

೨೯. ದಿನಕರ – ಸೂರ್ಯ; ಹಿಮಕರ – ಚಂದ್ರ

೩೦. ಅಮೃತಾಂಶು – ಚಂದ್ರ; ಅಂಬೋಧಿವೇಲೆ – ಸಮುದ್ರದ ಕರೆ, ತೀರ; ಘನಪಥ – ಮೋಡಗಳ ಮಾರ್ಗ, ಆಕಾಶ; ಎಸೆ – ಶಬ್ದಮಾಡು; ತ್ರಿದಶ – ದೇವತೆ; ಕರಾಹತಿ – ಕೈಯ ಹೊಡೆತ

ವ. ಅಷ್ಟೋತ್ತರಶತ – ನೂರೆಂಟು

೩೧. ಪುಟ್ಟಿದೊಸಗೆ – ಹುಟ್ಟಿನ ಉತ್ಸವ; ಮರುಳ್ಗೊಳ್ – ಸಂಭ್ರಮಗೊಳ್ಳು; ಬಿನ್ನನಾಗು – ಮೌನವಾಗು; ತದುಕ್ತಕಿಯೆ – [ಮಂತ್ರಗಳಿಗೆ] ವಿಧಿಸಿದ ಕಾರ್ಯ

೩೨. ಅಮಳರ್ – ಅವಳಿ ಮಕ್ಕಳು, ನಕುಲ–ಸಹದೇವರು; ಸಂತತಿವೆಱು – ಮಕ್ಕಳನ್ನು ಹೊಂದು

ವ. ಏಱ್ಗೆವಾಡಿವ – ಏಳಿಗೆಯನ್ನು ಹೊಂದುತ್ತಿರುವ ಪಾಡ್ಯ, ಶುಕ್ಲಪಕ್ಷದ ಪಾಡ್ಯ; ಉತ್ತರಾಭಿವೃದ್ಧಿ – ದಿನದಿನಕ್ಕೂ ಹೆಚ್ಚುವ ಬೆಳವಣಿಗೆ

೩೩. ಮುಂಗೆಯ್ವಬಲ – ಮುಂದೆ ಕಾರ್ಯಸಾಧನೆ ಮಾಡುವ ಸಾಮರ್ಥ್ಯ; ಬಾಳಕಾಲ – ಶಿಶುತನ; ಪೊಡರ್ – ಸ್ಫುರಿಸು; ಮುಯ್ವಂ ನೋಡಿಸು – ಹೆಗಲನ್ನು ಕಾಣಿಸು, ಹೆಮ್ಮೆಪಡು

ವ. ಇಬ್ಬಿಕ್ಕಿಳಿಗೊಳಿಸು – ಆಕರ್ಷಿಸು; ಅಸುಂಗೊಳಿಸು – ಪ್ರಾಣಾಪಹಾರ ಮಾಡು, ಎದೆಗೆಡಿಸು [ಮನಸ್ಸನ್ನಾಕ್ರಮಿಸು ಎಂದೂ ಆಗಬಹುದೆಂದು ಡಿಎಲ್‌ಎನ್ ಅವರು ಹೇಳುತ್ತಾರೆ – 'ದೀಪಿಕೆ']

೩೪. ಅಲರ್ – ಅರಳು; ಅವುಂಕು – ಹಿಸುಕಿ ತೆಗೆ; ತೆಂಬೆಲರ್ – ತೆಂಕಣ ಗಾಳಿ; ಗೆಲಲ್ ಬಗೆ – [ಗಾಳಿಯನ್ನು] ಗೆಲ್ಲಲು ಆಲೋಚಿಸು; ಕುಕಿಲ್ – [ಕೋಗಿಲೆ] ಶಬ್ದಮಾಡು; ನುಣ್ಪೆಸೆ – ನಯವಾಗಿ ಸೊಗಸಾಗಿರು; ಉಣ್ಮು – ಚಿಮ್ಮು; ಪೊಸಗಾವರ – ಹೊಸತಾದ ನಾದ; ಪುಗಿಲ್ – [ವಸಂತದ] ಆರಂಭ

ವ. ಗರ್ವವ್ಯಾಲೆ – ಗರ್ವದಿಂದ ತೊಂಡಾದವಳು; ವನಕ್ರೀಡೆ – ಕಾಡಿನಲ್ಲಿ ವಿಹಾರ

೩೫. ಬಗೆಗೆವರ್ – ಮನಸ್ಸಿಗೆ ಬರು, ಆಕರ್ಷಿಸು; ವಕುಳವಾಳ – ಬಕುಲವೃಕ್ಷದ ಪಾತಿ; ಅಂಬುಜಸೂತ್ರ – ತಾವರೆಯ ದಂಟು; ಮುಗುಳ್ಸರಿಗೆ – ಮೊಗ್ಗಿನ ಸರಿಗೆ; ಕಂಕಣವಾರ – ಕಂಕಣ+ಆರ, ಬಳೆ ಮತ್ತು ಹಾರ; ಬೇಟ್ಪಿನಿತು – ಬೇಕಾದಷ್ಟು

ವ. ಪೂಗಣೆ – ಹೂವಿನ ಬಾಣ; ತೊಟಿಲ್ – ಸುತ್ತಾಡು

೩೬. ಪೂದುಡುಗೆ – ಹೂವಿನ ಅಲಂಕಾರ; ತಡಮಾಡು – ತಡಂ+ಆಡು, ಮೆಲ್ಲಗೆ ಆಡು; ಅನಂಗರಾಗರಸ – ಕಾಮಪ್ರೇಮದ ರಸ; ಕೊಳ್ – ಹಿಡಿ, ಮನಸೆಳೆ; ಮಿಟ್ಟುದೇವತೆ – ಮೃತ್ಯುದೇವತೆ; ಅಟ್ಟಿಱಿಳುರ್ಕೆ – ಪ್ರೀತಿಯ ಅತಿಶಯ

ವ. ವಿಷಮ – ಕೇಡುಂಟುಮಾಡುವ; ಮೃದುಮೃಣಾಳ – ಕೋಮಲವಾದ ತಾವರೆ ದಂಟು

೩೭. ಆಲಿಮಗುಟ್ – ಕಣ್ಣಪಾಪೆಯು ಹಿಂಜರಿ; ಸುಯ್ಯಡಂಗು – ಉಸಿರಾಟ ನಿಲ್ಲು; ಮಱಸೊಂದು – ಮೈಮರೆ, ಪ್ರಜ್ಞೆ ತಪ್ಪು

ವ. ಪಱಿಪಡು – ಕತ್ತರಿಸಿಹೋಗು, ನಿಂತುಹೋಗು; ಕೋಡು – ತಣ್ಣಗಾಗು

೩೮. ಮನಂಗಾಪಟಿ – ಮನಂ+ಕಾಪಟಿ, ಮನಸ್ಸಿನ ರಕ್ಷಣೆ ನಾಶವಾಗು; ಓಪ – ಪ್ರಿಯಕರ

ವ. ಪಳಯಿಸು – ಪ್ರಲಾಪಿಸು, ಗೋಳಾಡು; ಕಳೇವರ – ಮೈ, ಹೆಣ; ಪರಿಚ್ಛೇದಿಸು – ನಿಶ್ಚಯಿಸಿಕೊ; ಪಲ್ಲಂ ಸುಲಿ – ಹಲ್ಲುಜ್ಜಿ ಶುಭ್ರಗೊಳಿಸು; ನಾಡಾಡಿಯಲ್ಲದೆ – ಅಸಾಮಾನ್ಯವಾಗಿ; ನಡಪು – ಕಾಪಾಡು, ಸಾಕು;

೩೯. ಸೂಟ್ – ಸರದಿ; ಮತ್ತನಯರ್ – ಮತ್+ತನಯರ್, ನನ್ನ ಮಕ್ಕಳು; ಪೆಱಪೆಱವಂ – ನಾನಾ ರೀತಿಯಲ್ಲಿ

ವ. ದಾಹೋತ್ತರ – ಪುಟಕ್ಕಿಡಲು [ಚಿನ್ನವನ್ನು] ಬೆಂಕಿಯಲ್ಲಿಡುವುದು; ಮಱುಕಣಿಸು – ಮರುಕಳಿಸು, ಮತ್ತೆ ಉಂಟಾಗು; ಜಳದಾನ – ತರ್ಪಣ; ವಿಶೀರ್ಣೆ – ಭಂಗಿಸು, ತಿರಸ್ಕರಿಸಿದವಳು.

* * * * * * *

೨. ಮಹಾಭಾರತಕ್ಕಾದಿಯಾಯ್ತು

ವ. ಕೂಸು – ಮಗು; ಪ್ರಭೃತಿ – ವ್ಯಕ್ತಿ; ಸಹಪಾಂಸುಕ್ರೀಡೆ – ದೂಳಿನಲ್ಲಿ ಒಟ್ಟಿಗೇ ಆಡುವ ಆಟ

೧. ಒಡೆವಳೆ – ಜೊತೆಯಲ್ಲಿ ಬೆಳೆ; ಗುಳ್ಳೆಗೊಟ್ಟೆ – ಗುಳ್ಳೆಗೋಷ್ಠಿ ಎಂಬ ಆಟ; ಬಟ್ಟು – ಬಿಲ್ಲೆಯ ಆಟ; ಉಳಿಸೆಂಡು – ಚೆಂಡನ್ನು ಬಚ್ಚಿಡುವ ಆಟ; ಪೊಡೆಸೆಂಡು – ಚೆಂಡಿನಲ್ಲಿ ಹೊಡೆಯುವ ಆಟ; ಎಳಸು – ವ್ಯಾಪಿಸು; ತಂತಂಗೆಡೆಗಳ್ – ತಮ್ಮ ತಮ್ಮ ಸ್ನೇಹಗಳು

ವ. ಉಪದ್ರವ – ತೊಂದರೆ; ಚೌಲ – ಜುಟ್ಟು ಬಿಡಿಸುವುದು; ಉಪನಯನ – ಜನಿವಾರಧಾರಣೆಯ ಸಮಾರಂಭ; ಆರೂಢಸರ್ವಜ್ಞ – ಆರೋಹಿಸಲ್ಪಟ್ಟ ಸರ್ವಜ್ಞತ್ವವುಳ್ಳವನು

ಕಳಶ – ಗಡಿಗೆ, ಕೊಡ; ಎಟಿಲ್– ಜೋತುಬೀಳುವ; ಕಂತುಪರವಶ – ಕಾಮಪರವಶ; ಇಂದ್ರಿಯ – ವೀರ್ಯ; ದ್ರೋಣ – ಗಡಿಗೆ

ಪಡಿಯಱ – ಬಾಗಿಲು ಕಾಯುವ ಸೇವಕ; ಮೇಗು – ಉತ್ತಮಿಕೆ

೨. ಆರ್ಗೆ – ಯಾರು?

ವ. ಒತ್ತಂಬ – ಒತ್ತಾಯ; ನಾಣಿಲಿ – ನಾಚಿಕೆಯಿಲ್ಲದವನು

೩. ನೊಳವಿಂಗೆ ಕುಪ್ಪೆ ವರಂ – ನೊಣಕ್ಕೆ ಕಸದ ರಾಶಿಯೇ ಶ್ರೇಷ್ಠ; ಏಳಿಸು – ಅವಮಾನಿಸು; ಅನಾಕುಳಂ – ತೊಂದರೆಯಿಲ್ಲದೆ, ಅನಾಯಾಸವಾಗಿ; ಚಟ್ಟರ್ – ಶಿಷ್ಯರು; ಎಳವೆಳಗಾಗು – ಗಾಬರಿಯಾಗು; ಕೆಮ್ಮನೆ – ಸುಮ್ಮನೆ

ವ. ಅಪಗತಪರಿಶ್ರಮ – ಆಯಾಸವನ್ನು ಹೋಗಲಾಡಿಸಿಕೊ, ದಣಿವಾರಿಸಿಕೊ; ಮಧುಪರ್ಕ – ಸ್ವಾಗತಿಸಲು ನೀಡುವ ಜೇನುತುಪ್ಪ ಮತ್ತಿತರ ಸಿಹಿಪದಾರ್ಥಗಳ ಮಿಶ್ರಣ; ವೇತ್ರಾಸನ – ಬೆತ್ತದ ಚಾಪೆ; ಒವಜ – ಉಪಾಧ್ಯಾಯ, ಗುರು; ಆಗಾಮಿಕ – ಮುಂದೆ ಸಂಭವಿಸಲಿರುವ; ಸಮೆಯಿಸು – ಸಿದ್ಧಮಾಡು; ಸೂತ್ರಧಾರ – ನಾಟಕದ ನಿರ್ದೇಶಕ; ಛಾಯಾಲಕ್ಷ್ಯ – ಪ್ರತಿಬಿಂಬವನ್ನೇ ಗುರಿಯಾಗಿಸುವುದು; ಅಡಸು – ಹಿಡಿದುಕೊ; ನೆಗಟಿ್ – ಮೊಸಳೆ; ಬಾಯಟಿವಿನಂ – [ಮೊಸಳೆಯ] ಬಾಯಿ ಒಡೆಯುವಂತೆ; ಇಸಿಸು – ಬಾಣಪ್ರಯೋಗ ಮಾಡಿಸು; ಅಣುಗು – ಶಿಷ್ಯಪ್ರೇಮ; ಅವಷ್ಟಂಭ – ಹೆಮ್ಮೆ, ಗರ್ವ; ಅಳರ್ – ಸುಡು

ಪೊಱವೊೞಲ್ – ನಗರದ ಹೊರಭಾಗ; ಸಮೆ – ಸಿದ್ಧಪಡಿಸು

೪. ಪುಣ್ಯಾಹಸ್ವರ – ಪುಣ್ಯಾಹ ಮಾಡುವಾಗಿನ ಮಂತ್ರದ ಧ್ವನಿ; ಪ್ರಗಲ್ಭ – ಪ್ರವೀಣ:

೫. ಒರ್ಮೊದಲೆ – ಒಟ್ಟಿಗೇ; ಜಳಧಿನಿನದ – ಸಮುದ್ರದ ಮೊರೆತ

ವ. ಪೞ್ – ತಮಟೆ; ಬಾರಿಸು – ನಿಲ್ಲಿಸು

೬. ಗುಣಾರ್ಣವ – ಗುಣಗಳ ಸಮುದ್ರ, ಅರ್ಜುನ; ಗಜಘಟಾವಿಘಟನ – ಆನೆಗಳ ಸೈನ್ಯವನ್ನು ಭೇದಿಸುವವನು; ಉಪಮಾತೀತ – ಹೋಲಿಕೆಗೆ ಮೀರಿದುದು; ನೆರವಿ – ಜನಸಮೂಹ

ವ. ವಿಯತ್ತಳ – ಆಕಾಶ; ಐಂದ್ರ – ಇಂದ್ರಾಸ್ತ್ರ; ಪೊಡೆಮಡು – ನಮಸ್ಕರಿಸು; ಆತ್ಮಶರಪರಿಣತಿ – ತನ್ನ ಶಸ್ತ್ರಸಾಮರ್ಥ್ಯ; ವಿದ್ವಿಷ್ಟವಿದ್ರಾವಣ – ಶತ್ರುಗಳನ್ನು ಸದೆಬಡಿಯುವವನು; ಸಂಗತ – [ಎಲ್ಲರೂ] ಸೇರು; ರಂಗ – ವ್ಯಾಯಾಮದ ಮೈದಾನ; ಕಾದುವಂ – ಯುದ್ಧಮಾಡೋಣ; ತೀನ್ – ತೀಟೆ; ಮಟ್ಗಿಸು – ಕಡೆಮೆಗೊಳಿಸು; ಎಡೆಗೆ ವರ್ – ಮಧ್ಯೆ ಪ್ರವೇಶಿಸು

೭. ಏವ – ಅಸಮಾಧಾನ; ದೆಸೆ – ದಿಕ್ಕು, ಪೂರ್ವಾಪರ; ಭಾವಿಸು – ಎಣಿಸು, ತಿಳಿದುಕೊ; ಸಮಕಟ್ಟು – ಸಮಾನತೆ, ಈಡುಜೋಡು

ವ. ಮಱುವಾತುಗುಡು – ಮಾರುತ್ತರ ನೀಡು

೮. ಪಿಕ್ಕು – ಹಿಂಜಿ ನೋಡು, ಕೆದಕು; ಶರಸ್ತಂಬ – ಜೊಂಡು ಹುಲ್ಲು

ವ. ಕುಲಜ – ಒಳ್ಳೆಯ ಕುಲದವನು; ಅಗಣ್ಯ – ಅಳತೆಗೆ ಮೀರಿದಂತಹ; ಪಾರಗ – ವಿದ್ವಾಂಸ; ನೆಱೆಯೀ – ಪೂರ್ಣವಾಗಿ ಕೊಡು

೯. ಪ್ರಸಾದ – ಅನುಗ್ರಹ; ನಡೆಗೆ – ನಡೆಯಲಿ; ಎಮ್ಮ ನಿನ್ನೆಡೆ – ನನ್ನ ನಿನ್ನ ನಡುವೆ; ನಡೆಯಲ್ವೇಡ– ನಡೆಯದಿರಲಿ

ವ. ಬಲ್ಲಾಳ್ತನ – ಶೌರ್ಯ; ಅಳವು – ಅಳತೆ, ಪ್ರಮಾಣ; ಕಟ್ಟೇಕಾಂತ – ಕಡಿದು ಏಕಾಂತ, ಅತ್ಯಂತ ರಹಸ್ಯ

೧೦. ತಾಳ್ದು – ತಾಳು, ಹೊಂದು; ತಗುಳ್ – ಹಿಂದೆ ಹೋಗು

ವ. ಎಡಂಬಡು – ಗಾಸಿಯಾಗು, ತಾಗು; ಮನದೆಗೊಳ್ – ಮನಸಾರೆ ಒಪ್ಪು; ಪೊಲ್ಲಮಾನಸ – ಕೆಟ್ಟ ಮನುಷ್ಯ; ಕಿಸುಱು – ಅಸಹನೆ

ಪೋಗು – ಹೋಗುವಿಕೆ; ಮನದನ್ನ – ಮನಸ್ಸಿಗನುಗುಣನಾದವನು; ಲಾಕ್ಷಾಗೃಹ – ಅರಗಿನ ಮನೆ; ನೆರಂಬೇೞ್ – ಸಹಾಯಕ್ಕಾಗಿ ನೇಮಿಸು

ಮೊದಲ್ – ಅಂಚು; ನೋಡಲೊಡಂ – ನೋಡಿದ ತಕ್ಷಣವೇ; ಮೆಟ್ಟಿಡಿಸು – ಮೋಸಗೊಳಿಸು; ಸೋದಿಸು – ಹುಡುಕು; ಪೆಱಗಣ ಕಾಪು – ಹಿಂದಿನಿಂದಲೇ ನೋಡುವುದು; ಮಱಲುಂದು – ಮೈಮರೆತು ನಿದ್ರಿಸು; ಕೋಕನದಬಾಂಧವ – ತಾವರೆಯ ಬಂಧು, ಸೂರ್ಯ

೧೧. ನಿಡಿಯರ್ – ನೀಳವಾಗಿರುವವರು; ಬಲ್ಲಾಯ – ವಿಶಾಲವಾದ; ಬಲ್ದಡಿಗರ್ – ಮಹಾ ದಾಂಡಿಗರು; ಭಕ್ಷ್ಯ – ಆಹಾರ; ಅಡು – ಬೇಯಿಸು; ಪಣ್ಣಿಡು – ಸಿದ್ಧಪಡಿಸು

ವ. ಮಾರುತಿ – ಭೀಮ; ಅಂಬುವೀಡು – ಬಾಣಬಿಡುವಿಕೆ; ಕಾಮರೂಪೆ – ಬೇಕಾದ ರೂಪವನ್ನು ಧರಿಸಬಲ್ಲವಳು; ಬರ್ದುಂಕು – ಜಾರು, ನುಸುಳು; ಆಡಂಬರಂಗೆಯ್ – ಅಬ್ಬರಿಸು; ತುಂಬುರುಗೊಳ್ಳಿ – ತೂಬರೆ ಮರದ ಸೌದೆಯ ಕೊಳ್ಳಿ; ಪಾಸಱೆ – ಹಾಸುಬಂಡೆ; ಡಂಬ – ಕಪಟತನ; ವಿಭೂತಿ – ವೈಭವ, ಸಡಗರ; ಸದ್ಯಃಪ್ರಸೂತಿ – ಕೂಡಲೆ ಹೆರುವುದು; ಸದ್ಯೋಯೌವನ – ತಕ್ಷಣವೇ ಯೌವನ ಮೂಡುವುದು; ಷೋಡಶ – ಹದಿನಾರು; ಕಜ್ಜ – ಕಾರ್ಯ; ಚತುಶ್ಶಾಲೆ – ಅಂಗಳ; ಧರಾಮರ – ಬ್ರಾಹ್ಮಣ; ಪುಯ್ಯಲ್ – ಗೋಳು

೧೨. ಕುಡಲಾದ ಕೂಸು – ಕನ್ಯಾದಾನ ಮಾಡಲು ತಕ್ಕ ವಯಸ್ಸಿನ ಹೆಣ್ಣುಮಗು, ಕೊಡಗೂಸು; ಪೊಂಪುೞಿ – ಆಧಿಕ್ಯ

ವ. ಎಮ್ಮೆವೋೞೆ – ಕೋಣ; ಪನ್ನಿರ್ಕಂಡುಗ – ಹನ್ನೆರಡು ಖಂಡುಗ; ಪರಿಕರ – ನಂಜಿಕೊಳ್ಳುವ ಪದಾರ್ಥ; ತಣಿ – ತೃಪ್ತಿಹೊಂದು; ಪಲ್ಲಂ ತಿನ್ – [ಅಸಮಾಧಾನದಿಂದ] ಹಲ್ಲು ಕಡಿ; ಬಾರಿ – ಸರದಿ; ಪೊಡೆ – ಬಾರಿಸು, ತಿಂದು ಹಾಕು; ಸಮೆ – ಮುಗಿಸು

೧೩. ಕರಪರಿಘ – ಪರಿಘಾಯುಧದಂತಹ ಕೈ; ಮುರಿದಡಸಿಪಿಡಿ – ತಿರುಗಿ ಗಟ್ಟಿಯಾಗಿ ಹಿಡಿದುಕೊ; ಅಱೆ – ಬಂಡೆ ಅಸಗವೊಯ್ಲು – ಅಗಸನ ಹೊಡೆತ, ಅಗಸ ಬಟ್ಟೆ ಒಗೆಯುವಂತಹ ರೀತಿ

ವ. ಅತ್ತಪರ – ಗುರಾಣಿ; ಸಯಂಬರ – ಸ್ವಯಂವರ; ಬೞೆಯಟ್ಟು – ಸಂದೇಶ ಕಳಿಸು; ಭಾಸ್ವತ್ಸುಹೃದ್ಬಲ – ಭಾಸ್ವತ್+ಸುಹೃತ್+ಬಲ, ಹೊಳೆಯುವ ಮಿತ್ರಸೈನ್ಯ; ಭಾರ್ಗವ ಪರ್ಣಶಾಲೆ – ಕುಂಬಾರನ ಗುಡಿಸಿಲು; ಬ್ರಹ್ಮಸಭೆ – ಬ್ರಾಹಣರ ಗುಂಪು

೧೪. ಭೂಭೃನ್ನಿಕರ – ಭೂಭೃತ್+ನಿಕರ, ರಾಜಸಮೂಹ; ಸಾಱು – ಡಂಗುರ ಹೊಯಿಸಿ ತಿಳಿಸು; ಪೞೆಮೞೆಯಾಗು – ಸಡಗರಗೊಳ್ಳು

೧೫. ಓಳಿ – ಸಾಲು

ವ. ಬಿಯಮಂ ನೆಱೆ – ವೆಚ್ಚಮಾಡಿ [ಧಾರಾಳತನವನ್ನು] ಪ್ರಕಟಿಸು; ನೆಱೆಯೆ ಪಸದನಂಗೊಳಿಸು – ಚೆನ್ನಾಗಿ ಅಲಂಕರಿಸು

೧೬. ಮಸೆ – ಹರಿತಗೊಳಿಸು; ಬಾಳ್ – ಕತ್ತಿ; ಬಾಯ್ಗೂಡು – ಹರಿತವಾದ ಬಾಯಿ [ಅಲಗು]ಯಿಂದ ಕೂಡು

ವ. ಸಿವಿಗೆ – ಮೇನೆ

೧೭. ನಿಡುಗಣ್ – ನೀಳ ಕಣ್ಣು, ನಿಡು ನೋಟ; ಮಲ್ಲೆ – ಜಿಂಕೆ

ವ. ವಿದಿತವೃತ್ತಾಂತೆ – [ಅಲ್ಲಿದ್ದ ರಾಜರ] ವಿಷಯುವನ್ನೆಲ್ಲ ತಿಳಿದವಳು; ಮಗುೞೆವರ್ – ವಾಪಸ್ಸು ಬಾ; ಇಸು – [ಬಾಣದಿಂದ] ಹೊಡೆ; ಗೆಲ್ಲಂಗೊಳ್ – ಗೆಲವನ್ನು ಪಡೆ; ಬಿಲ್ಲುಂಬೆಱಗಾಗು – ಕಕ್ಕಾಬಿಕ್ಕಿಯಾಗು; ಜನವಡೆ – ಜನರ ಗುಂಪು; ಕಡ್ಡುವರ್ – ಗಡ್ಡ ಬರು; ದೊಡ್ಡವರ್ – ವೃದ್ಧರು

೧೮. ಸಂಗತಸತ್ವ – ಸಾಮರ್ಥ್ಯದಿಂದ ಕೂಡಿದವನು; ಮರುಳ್ – ದೆವ್ವ
ವ. ಅವಯವ – ಕಷ್ಟವಿಲ್ಲದೆ; ಗೊಲೆಗೊಳಿಸು – [ಬಿಲ್ಲಿನ ತುದಿಗೆ ಹೆದೆ ಕಟ್ಟುವಂತೆ] ಕೊನೆಮುಟ್ಟಿಸು
೧೯. ಒಂದೆ ಸೂಟಿ – ಒಂದೇ ಬಾರಿಗೆ; ಆಕರ್ಣಾಂತಂ – ಕಿವಿಯವರೆಗೂ; ಸಮಂತೆಚ್ಚು – ಸಮಂತು+ಎಚ್ಚು, ಚೆನ್ನಾಗಿ ಹೊಡೆದು
ವ. ಮೀನಕೇತನ – ಮನ್ಮಥ; ಮನೋಜ – ಮನ್ಮಥ
೨೦. ಘರ್ಮಜಲ – ಬೆವರನೀರು; ನಾಣ್ – ಲಜ್ಜೆ; ಕೆಯ್ತ – ಮಾಟ, ಚೇಷ್ಟೆ
ವ. ಬದ್ದವಣದ ಪಱೆ – ಮಂಗಳವಾದ್ಯ; ಸುರತಮಕರಧ್ವಜ – [ಸಂಭೋಗದಲ್ಲಿ ಮನ್ಮಥ] ಅರಿಕೇಸರಿಯ ಬಿರುದು; ಚತುರಾಂತರ – ಹಸೆಯ ವೇದಿಕೆ; ಚೆಂಬೊನ್ – ಕೆಂಪುಛಾಯೆಯ ಚಿನ್ನ; ಪಟ್ಟವಣೆ – ಪಟ್ಟದ ಮಣೆ; ದುಗುಲ – ರೇಷ್ಮೆ; ಆಜ್ಯಾಹುತಿ – ತುಪ್ಪದ ಹವಿಸ್ಸು; ಹುತವಹ – ಅಗ್ನಿ; ಕೆಯ್ನೀರೆಱೆ – ಧಾರೆಯ ನೀರನ್ನು ಸುರಿ
೨೧. ಚೂತಪಲ್ಲವ – ಮಾವಿನ ಚಿಗುರು; ಬೆಡಂಗನಾಳ್ – ಚೆಲುವನ್ನು ಪಡೆ
ವ. ಕಿಱುಕುಣಿಕೆ – ಕಿರು ಬೆರಳು; ಬೇಳ್ವೆಯ ಕೊಂಡ – ಹೋಮಕುಂಡ; ಸಪ್ತಾರ್ಚಿ – ಅಗ್ನಿ; ಬಲವರ್ – ಪ್ರದಕ್ಷಿಣೆ ಮಾಡು; ಓಜೆ – ರೀತಿ; ಲಾಜೆ – ಬತ್ತದ ಅರಳು; ಓದು – ಪಠಿಸು, ಹೇಳು; ಋಚೆ – ಋಗ್ವೇದ ಸೂಕ್ತಗಳು; ಎತ್ತಿದ ಬೋನ – ಬಡಿಸಿದ ಭೋಜನ; ಯಕ್ಷಕರ್ದಮ – ಕರ್ಪೂರ, ಅಗರು, ಕಸ್ತೂರಿ, ಶ್ರೀಗಂಧ ಮತ್ತು ಕೇಸರಿಗಳನ್ನು ಸಮಪ್ರಮಾಣದಲ್ಲಿ ಸೇರಿಸಿ ಅರೆದ ಸುಗಂಧ; ಕೆಯ್ಗಟ್ಟೆ – ಗಂಧದುಂಡೆ; ತಿಮಿರ್ – ಲೇಪಿಸಿಕೊ; ಅನ್ನವಾಸ – ಊಟದ ಶಾಲೆ; ಓಲಗ – ಸಭೆ; ಖರಾಂಶು – ಸೂರ್ಯ; ಅಪರವಾರ್ಧಿ – ಪಶ್ಚಿಮಸಮುದ್ರ; ಆೞ್ – ಮುಳುಗು; ಆತೋದ್ಯ – ವಾದ್ಯ; ಬೀಡುವೇೞ್ – ಉಳಿದುಕೊಳ್ಳಲು ಏರ್ಪಡಿಸು; ಸೆಜ್ಜೆ – ಮಲಗುವ ಕೋಣೆ; ಕಳನೇಱು – ಯುದ್ಧರಂಗವನ್ನು ಪ್ರವೇಶಿಸು; ಸೆಡೆ – ಸಂಕೋಚಗೊಳ್ಳು
೨೨. ಅಚ್ಚಿಜ – ಆಶ್ಚರ್ಯ, ವಿಸ್ಮಯ; ಅಳ್ಳಾಟ – ನಡುಕ; ಮೆಯ್ವೊಣರ್ಚು – ಮೈಗೆ ಮೈ ಸೇರಿಸು; ಬಾಯ್ಗೂಟ – ಬಾಯಿಗಳ ಸೇರುವಿಕೆ, ಚುಂಬನ; ಬೆಚ್ಚ ತಕ್ಕೆ – ಬಿಸುಪಾದ ಅಪ್ಪುಗೆ; ಕೂಟಸುಖ – ಒಡಗೂಡುವ ಸುಖ
ವ. ಬೂತು– ಭೂತ, ಪ್ರಾಣಿ; ನೆಱೆ – ಸಾಕಾಗು
೨೩. ಮಂತ್ರಬಲ – ಯುಕ್ತಿ; ನೆಱೆವರ್ – ಸಮರ್ಥರು
ವ. ನಿಶ್ಚಿತಮಂತ್ರ – ನಿರ್ಣಯಿಸಿದ ಆಲೋಚನೆ, ಆಲೋಚಿಸಿ ತೆಗೆದುಕೊಂಡ ನಿರ್ಧಾರ; ಪೃಥಾತನೂಜರ್ – ಕುಂತಿಯ ಮಕ್ಕಳಾದ ಪಾಂಡವರು
೨೪. ಆಯ್ತು ಪೋಯ್ತು – ಆದದ್ದು ಆಗಿಹೋಯಿತು; ಎಳೆ – ಇಳೆ, ಭೂಮಿ, ರಾಜ್ಯ; ಮನಂಬಸದೆ – ಮನಸ್ಸನ್ನು ವಿಭಾಗಿಸದೆ, ಒಂದೇ ಮನಸ್ಸಿನಿಂದ; ಸಮೆ – ಏರ್ಪಡಿಸು
ವ. ಶಶಿತಾರಹರ – ಚಂದ್ರಂತೆ ಹೊಳೆಯುವ ಮುತ್ತಿನ ಹಾರ; ಕತಿಪಯ ಪ್ರಯಾಣ – ಕೆಲವು [ಕಾಲದ] ಪ್ರಯಾಣ; ಮದಗಜಪುರ – ಹಸ್ತಿನಾವತಿ

೨೫. ಘನಪಥ – ಆಕಾಶ; ಪ್ರಣಾದ – ಶಬ್ದ; ಕೇಕಿ – ನವಿಲು; ರಯ್ಯ – ರಮ್ಯ, ಸುಂದರ; ಜಿತೇಂದ್ರಪುರ – ಇಂದ್ರನ ನಗರಿ [ಅಮರಾವತಿ]ಯನ್ನು ಗೆದ್ದ; ಪರಮೇಶ್ವರರ್ – ಚಕ್ರವರ್ತಿ [ಸಮಾನರು]

ವ. ನೀಮೆಂದುದನೆಂದು – ನೀವು ಹೇಳಿದ ಹಾಗೆಯೇ; ಪಚ್ಚುಕೊಡು – ಹಂಚಿಕೊಡು; ಕರವಾಳ – ಕತ್ತಿ; ಆಭೀಳ – ಭಯಂಕರವಾದ; ವಿಶ್ವಂಭರಾಧಾರ – ಸಮಸ್ತ ಭೂಮಿಗೂ ಆಧಾರವಾದ; ವಿಜಿಗೀಷುವೃತ್ತಿ – ಜಯಿಸಲು ಇಚ್ಛಿಸುವವನ ನಡವಳಿಕೆ; ನಿಶಾಟ – ರಾಕ್ಷಸ; ಉಗ್ರಗ್ರಾಹಸ್ವರೂಪ – ಭಯಂಕರವಾದ ಮೊಸಳೆಯ ಆಕಾರ; ವಿಶಾಪೆ – ಶಾಪವಿಮೋಚಿತೆ; ಉಂಡಿಗೆಸಾಧ್ಯಂ ಮಾಡು – ತನ್ನ ಹೆಸರಿನ ಮುದ್ರೆ ಚಲಾವಣೆಯಲ್ಲಿ ಬರುವಂತೆ ಮಾಡು, ಕೈವಶಮಾಡಿಕೊ

೨೬. ಅಂಭೋರಾಶಿ – ಸಮುದ್ರ; ಕಾದಿಗೆ – ಖಾತಿಕಾ, ಕಂದಕ; ಸೀರಪಾಣಿ – ನೇಗಿಲನ್ನು ಹಿಡಿದವನು, ಬಲರಾಮ; ಚಕ್ರಧರಂ – ಶ್ರೀಕೃಷ್ಣ; ಅಸಂಚಳ – ಅಲುಗಾಡದಿರುವ; ಉದ್ಯತ್ – ಎತ್ತರವಾದ; ನರಂ – ಅರ್ಜುನ

ವ. ಕೆಮ್ಮುಗಿಲ್ – ಕೆಂಪಾದ ಮೋಡ; ಕನ್ನೆಮಾಡ – ಅಂತಃಪುರ; ಚೌಪಳಿಗೆ – ಹಜಾರ, ತೊಟ್ಟಿ

೨೭. ಗುಜ್ಜುಗಳ್ – [ಅಂತಃಪುರದ ಸೇವಕರಾದ] ಕುಬ್ಜರು; ಮೇಳದ ಕನ್ನೆಯರ್ – ಒಡನಾಡಿ ಕನ್ನಿಕೆಯರು; ಸೀಗುರಿ – ಕೊಡೆ; ಇಟ್ಟಳಂ – ಚೆಲುವಾಗಿ; ದೇಸೆ – ಸೊಗಸು

೨೮. ಪೊಡಪು – ಸ್ಫುರಣೆ, ಎಂದರೆ ಮೈಯ ನಡುಕ; ತಪ್ಪುದು [√ತವು], ನಾಶಮಾಡಿತು; ಪೂವಿನಂಬು – ಹೂಬಾಣ; ದೊಣೆ – ಬತ್ತಳಿಕೆ; ಕೀಱು – ಗರ್ಜಿಸು

ವ. ಸಕಳವಟ್ಟೆ – ಬಣ್ಣಬಣ್ಣದ ಬಟ್ಟೆ; ಪುದುಂಗೊಳಿಸು – ಹುದುವಾಗಿ ಮಾಡು, ಸೇರಿಸು; ಎಡೆವಱಿಯದೆ – ತುಂಡರಿಸದೆ, ಒಂದೇ ಸಮನಾಗಿ; ತಳ್ಪೊಯ್ – ಸಂಘಟ್ಟಿಸು; ಅಳ್ಳಾಟ – ಅಲುಗಾಟ

೨೯. ಕರ್ಚು – ಕಚ್ಚಿಕೊ; ವಾರಾಶಿ – ಸಮುದ್ರ; ಬೆಳಗೆಡೆ – ಪ್ರವಾಹವಾಗಿ ಹರಿ; ಎಱಿ – ಒಡೆತನ; ಸೋಲ – ಬೇಟ; ಆಲೋಚನ ಗೋಚರಂ – ಕಣ್ಣಿಗೆ ಕಾಣುವವರೆಗೂ

೩೦. ಪೀಲಿ – ನವಿಲುಗರಿಯ ಕಣ್ಣು; ಕೀಲಿಸು – ನಾಟು; ಕಾವನಂಬು – ಕಾಮನ ಬಾಣ; ತಾಂಬೂಲಕರಂಕವಾಹಿನಿ – ಎಲೆಯಡಕೆಯ ಭರಣಿಯನ್ನು ಹೊತ್ತ ದಾಸಿ; ನೆಱಿಲ್ – ಒರಗಿಕೊ

ವ. ಕಿಸಲಯ – ಚಿಗುರು; ಸಪ್ತತಾಳೋತ್ತುಂಗ – ಏಳು ತಾಳೆಯ ಮರದಷ್ಟು ಎತ್ತರವಾದ; ಮೊಗಸಾಲೆ – ಮುಖಮಂಟಪ; ಅನುಲೇಪನ – ಪರಿಮಳವನ್ನು ಹಚ್ಚುವುದು; ಸುರಭಿ – ಪರಿಮಳಯುಕ್ತ; ಅಪಗತಪರಿಶ್ರಮ – ನೀಗಿಕೊಂಡ ಆಯಾಸ

೩೧. ಆಯತಿ – ಪರಸ್ಪರ ಅವಲಂಬನೆ; ಅರಿಗ – ಅರ್ಜುನ

ವ. ವಿಕಲ್ಪ – ಭೇದ; ವಿಚ್ಛಿನ್ನ – ಅಗಲುವಿಕೆ; ಮುಗಿ – ಮುಚ್ಚಿಕೊ; ಪಚ್ಚುಗೊ – ಹಂಚಿಕೊ; ಅಸುಂಗೊಳ್ – ಬೇಗ; ಪತ್ತುವಿಡು – ಹರಡಿಕೊ

೩೨. ನಭೋಂತರ್ಭೂವಿವರ – ಆಕಾಶ ಮತ್ತು ಭೂಮಿಗಳ ನಡುವಣ ಪ್ರದೇಶ; ಬಿರಯಿ – ವಿರಹಿ; ಸೋದ ದೀವಿಗೆ – ಹುಡುಕಲು ಹಿಡಿದುಕೊಳ್ಳುವ ದೀಪ; ತುಹಿನಕರ – ಚಂದ್ರ

೩೩. ಮರವಡು – ಮರದ ಹಾಗೆ ಜಡತೆಗೊಳ್ಳು; ವಿಜಯ – ಅರ್ಜುನ; ಸುಸಾಳಭಂಜಿಕೆ – ಸೊಗಸಾದ ಬೊಂಬೆ

ವ. ಸ್ತೋಭಂಗೊಳ್ – ತಡೆಯಲ್ಪಡು; ಕಾಮಗ್ರಹಗೃಹೀತೆ – ಕಾಮವೆಂಬ ಗ್ರಹದಿಂದ ಹಿಡಿಯಲ್ಪಟ್ಟವಳು; ಮಂತಣಮಿರ್ – ಆಲೋಚನೆ ಮಾಡು; ಆಱ್ – ಸಮಾಧಾನಗೊಳ್ಳು; ಪ್ರತಿಪತ್ತಿ – ಸನ್ಮಾನ, ಮರ್ಯಾದೆ

೩೪. ವೀರಶ್ರೀ – ಜಯಲಕ್ಷ್ಮಿ; ವಾಕ್‌ಶ್ರೀ– ಸರಸ್ವತಿ; ಸೌವಾಗ್ಯ – ಸೌಭಾಗ್ಯ

ವ. ಮೆಯ್ಯನಾಱಿಸು – ದೇಹದ ತಾಪವನ್ನು ನೀಗಿಕೊ; ಎಳವಾಳೆ – ಎಳೆಯ ಮೀನು; ಅನಂಗಶರವಶ – ಕಾಮಬಾಣಗಳಿಗೆ ತುತ್ತಾದ

೩೫. ಪಡಿದೆಱೆ – ಬಾಗಿಲು ತೆಗೆ; ಸಂಕೆ – ಭಯ; ಉಬ್ಬದಿಗವಾಗು – ಅತಿಶಯವಾಗು; ಸಾಧ್ವಸ – ಸಡಗರ

ವ. ಅನಂಗಾಮೃತಪಯೋಧಿ – ಕಾಮದ ಹಾಲ್ಗಡಲು; ಆಪಾದಮಸ್ತಕ – ಕಾಲಿಂದ ತಲೆಯವರೆಗೆ; ಬಡವಡು – ಕೃಶವಾಗು, ಬಡವಾಗು; ಸಸಿ – ಶಶಿ, ಚಂದ್ರ; ಅಸಿಯಳ್ – ಕೃಶಾಂಗಿ, ಸುಂದರಿ; ಎರಡಱಿಯದ – ಕಪಟವಿಲ್ಲದ; ಜಡಿ – ಗದರಿಸಿಕೊ

೩೬. ಕಾಯ್ಪು – ಕೋಪ, ತಾಪ; ಸರಸೀರುಹಜನ್ಮ – ಬ್ರಹ್ಮ; ತೀರ್ಗೆ – ಸಫಲವಾಗಲಿ; ಕೂಟ್ಗುದಿ – [ಪ್ರೇಮದ] ಕುದಿತ; ಪೋಱಮಾಱು – ಹಿಂದೆಗೆ; ತಣ್ಣಿದು – ತಂಪಾದುದು; ಜಿಂಜಿಣಿ – ತಾಪ; ಪಳಾಳ – ಜಳ್ಳುಮಾತು

ವ. ಪಡೆಮಾತು – ವದಂತಿ, ಸುದ್ದಿ; ಕರ್ಣಪರಂಪರೆ – ಕಿವಿಯಿಂದ ಕಿವಿಗೆ; ನಾಣ್ – ನಾಚಿಕೆ

೩೭. ಅನುಜೆ – ತಂಗಿ; ಪದ್ಮಾಸನ – ಬ್ರಹ್ಮ; ನಯ – ನೀತಿ; ಈ ಪೊೞ್ತು – ಇವತ್ತು, ಈ ಕ್ಷಣ

ವ. ತಳಿ – ಎರಚು, ಸಿಂಚನೆ ಮಾಡು; ನದಿಪು – ಆರಿಸು

೩೮. ಒಟ್ಟಜೆ – ಪರಾಕ್ರಮ; ತವಿಸು – ನಾಶಮಾಡು, ಅಡಗಿಸು

೩೯. ಮುಗುಳ್ವದ – ಮೊಗ್ಗಿನ ಹದ; ಮಡಲ್ – ಹಬ್ಬು; ಕಾಕಳಿ – ಇಂಪಾದ ಧ್ವನಿ; ಮದಾಳಿ – ಮದ+ಅಳಿ, ಕೊಬ್ಬಿದ ದುಂಬಿ; ಪುಗಲ್ – ಪ್ರವೇಶಿಸಬೇಡ; ಕವರ್ – ಸೂರೆ ಮಾಡು; ಪುಗಿಲ್ – ಪ್ರವೇಶ

ವ. ಅನವರತ – ನಿರಂತರವಾದ; ಶರಾಸಾರ – ಬಾಣಗಳ ಮಳೆ; ಶೂನ್ಯೀಕೃತ – ಬರಿದಾಗಿ ಮಾಡಲ್ಪಟ್ಟ; ಮೃಗವ್ಯ ವ್ಯಾಪಾರ – ಬೇಟೆಯ ಕಾರ್ಯ; ಬಾಯ್ದೆಱೆ

– ತುಟಿ; ಪಳಂಚು – ತಾಗು, ಅಂಟಿಕೊ; ನಿಯೋಗಿ – ಕೆಲಸಗಾರ, ಅಧಿಕಾರಿ; ಪಡಲಿಗೆ – ತಟ್ಟೆ; ಪೂಸು – ಲೇಪಿಸು, ಲೇಪಿಸಿಕೊ; ಕೆಯ್ಗಟ್ಟಿ – ಸುಗಂಧದ್ರವ್ಯ

೪೦. ತಲೆನವಿರ್ – ತಲೆಗೂದಲು; ಸಂತಪ್ತ– ಕಾಸಿದ; ಉರುಳಿ – ಉಂಡೆ; ಜಠರಾನಳ – ಹೊಟ್ಟೆಯ ಉರಿ

ವ. ಸಿತದೂರ್ವಾಂಕುರ – ಬಿಳಿಯ ಚಿಗುರು [ಎಳೆಯ] ಗರಿಕೆಯ ಚಿಗುರು; ಶೇಷಾಕ್ಷತೆ – ಆಶೀರ್ವಾದದ ಅಕ್ಷತೆ; ಬಾಟ್ತೆಯಪ್ಪುದು – ಪ್ರಯೋಜನಕಾರಿಯಾದುದು, ಬೇಕಾದುದು

೪೧. ಏವುವು – ಏನು ಮಾಡಬಲ್ಲವು, ಏನು ಮಹಾ, ಏನು ಪ್ರಯೋಜನ; ಜೊಮ್ಮನೆ ಪೋ – ಜಡ್ಡುಗಟ್ಟು; ಏವಿರಿದು – ಏ[ನ್]+ಪಿರಿದು, ಯಾವ ಮಹಾ; ನರಕಾಂತಕ – ಕೃಷ್ಣ

೪೨. ಕುಸುರಿಯ ಮಾತು – ಸೂಕ್ಷ್ಮ ಮಾತು; ತಗುಳ್ – ಅನುಸರಿಸು, ಮಾಡು; ಮುಂದೆ – ಈ ಮುಂಚೆ; ಪಾಯಿಸು – ನುಗ್ಗುವಂತೆ ಮಾಡು, ಹೋರಾಡುವಂತೆ ಮಾಡು

ವ. ಅಜಮುಖವ್ಯಾಘ್ರ – ಮೇಕೆಯ ಮುಖದ ಹುಲಿ, ಕಪಟಿ; ಶ್ವೇತಕೃಷ್ಣಕಾರಕ – ಬಿಳಿದನ್ನು ಕರಿದನ್ನಾಗಿ ಮಾಡುವವನು

೪೩. ಅಳ್ಕು – ಅಂಜಿಕೆ; ಬೇಡಿದಾನ್ – ಬೇಡಿದವನು; ಅನಲ – ಅಗ್ನಿ; ವ್ಯಾಳೋಳ – ಸಂಚರಿಸುವ; ಭೂತಮಯ್ದುಂ – ಪಂಚಭೂತಗಳು [ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶ]; ಮಾಣ್ಬುದು – ನಿರಾಕರಿಸುವುದು; ಸೂಟಿ – ತಕ್ಕುದೇ; ತಳ್ವು – ತಡ

೪೪. ಸಮಾಜ – ಸಮೂಹ; ಕಾ – ಕಾಪಾಡು; ಮಾಣ್ದು – ಬಿಟ್ಟು; ಪುಟಿವಾನಸ – ಹುಳುವಿಗೆ ಸಮಾನನಾದ ಮನುಷ್ಯ; ಅಜಾಂಡ – ಬ್ರಹ್ಮಾಂಡ

ವ. ಪಡೆಮೆಚ್ಚೆಗಂಡ – [ವಿರೋಧಿ] ಪಡೆಗಳೂ ಮೆಚ್ಚುವಂತಹ ವೀರ; ನನ್ನಿವಾತು – ಸತ್ಯದ ಮಾತು; ಇಜಿ – ಹೋರಾಡು; ಈ – ದಾನ ಮಾಡು; ಸಮಕಟ್ಟು – ವ್ಯವಸ್ಥೆ; ದೊರೆ – ಸಮಾನ; ಪೆಱಂ – ಬೇರೆಯವನು; ಕೋಡು – ಕೊಡುಗೆ, ದಾನ; ಮನಃಪವನವೇಗ – ಮನಸ್ಸು ಮತ್ತು ಗಾಳಿಯ ವೇಗ; ಗಂಡಸ್ಥ – ಕಪೋಲಪ್ರದೇಶದ; ತವದೊಣೆ – ತವದ [ಅಕ್ಷಯವಾದ] ಬತ್ತಳಿಕೆ

೪೫. ಕಕುಭ – ಕೆಂಪು ಮತ್ತಿಯ ಮರ; ಲುಂಗ – ಮಾತುಲುಂಗ; ಲವಲೀಭೂಜ – ಅರನೆಲ್ಲಿಯ ಮರ; ಅರ್ಜುನ – ಬಿಳಿಮತ್ತಿ; ಆನೋಕಹ – ಮರ; ಹೇಮಪಂಕಜ – ಹೊಂದಾವರೆ; ರಜಸ್ಸಂಸಕ್ತ – ಪರಾಗದಲ್ಲಿ ಆಸಕ್ತವಾದ; ಭೃಂಗಾಂಗನಾ – ಹೆಣ್ಣು ದುಂಬಿ; ಸಾರಸ – ಬಕ; ಧ್ವಾನೋತ್ಕರ – ಧ್ವನಿಸಮೂಹ; ಸಕ್ತ – ಆಶಕ್ತರಾದ; ನಿಳಿಂಪದಂಪತಿ – ದೇವತೆಗಳ ಜೋಡಿ

೪೬. ಒಯ್ಯನೊಯ್ಯನೆ – ಮೆಲುಮೆಲುವಾಗಿ; ಆಟರ್ – ಮೇಲೆ ಬೀಳು; ಉದ್ಧತ – ಶ್ರೇಷ್ಠ; ಆಳ್ವೇಲಿ – ಮನುಷ್ಯ ಬೇಲಿ

೪೭. ಉರಗ – ನಾಗ

೪೮. ಆನ್ – ಎದುರಿಸು; ಲಯಕ್ರೀಡೆ – ವಿನಾಶದ ಆಟ

೪೯. ಗಾಂಡೀವಮುಕ್ತ – ಗಾಂಡೀವದಿಂದ ಬಿಡಲ್ಪಟ್ಟ

ವ. ಅಂಬೇಱ್ – ಅಂಬು+ಏಱ್; ಬಿಲ್ಲು ಯುದ್ಧ; ಹತವಿಹತ – ಹೊಡೆತ ಮರುಹೊಡೆತ

೫೦. ಕುಜ – ಮರ; ದೆಸೆವರಿ – ದಿಕ್ಕು ದಿಕ್ಕಿಗೆ ಓಡು; ಒಳಱ್ – ಅರಚು

೫೧. ಇಭ – ಆನೆ; ಪುಟ್ಟು – ಬೇಯು

ವ. ಕೋಳು – ಆಕ್ರಮಣ

೫೨. ತೋಟಿ – ಕಾಳಗ

ವ. ಪೌಲೋಮೀಪತಿ – ಇಂದ್ರ; ವಿಳಯಕಾಳಾಂಬುದ – ಪ್ರಳಯಕಾಲದ ಮೋಡ

೫೩. ಕಱೆ – [ಮಳೆ] ಸುರಿಸು; ಪಾವಕ – ಅಗ್ನಿ

ವ. ತೋಡುಂ ಬೀಡುಂ – [ಬಾಣವನ್ನು] ತೊಡುವುದು ಬಿಡುವುದು; ಮಶಕ – ಸೊಳ್ಳೆ; ಛಿದ್ರ – ಬಿರುಕು, ಸಂದಿ

೫೪. ಸೀರನಿತು – ಸೀರು ಎಂಬ ಕ್ರಿಮಿಯಷ್ಟು, ಅತಿ ಸ್ವಲ್ಪ; ದಹನ – ಅಗ್ನಿ; ಅಳುರ್ – ವ್ಯಾಪಿಸು

ವ. ಪನ್ನಗ – ಹಾವು; ಬರ್ದುಂಕು – ತಪ್ಪಿಸಿಕೊ; ಆಖಂಡಳತನಯ – ಇಂದ್ರನ ಮಗ, ಅರ್ಜುನ; ನನ್ನಿ – ನಿಜ

೫೫. ಪಗೆಯಂ ನೆಱಪು – ಹಗೆಯನ್ನು ತೀರಿಸು; ಕಡಂಗು – ಉತ್ಸಾಹಗೊಳ್ಳು

ವ. ಪಟುವಗೆ – ಕೆಟ್ಟ ಹಗೆ; ಸರಸಿಜಭವ – ಬ್ರಹ್ಮ

೫೬. ಏವ – ಅಸಮಾಧಾನ; ಎರ್ದೆನೋವೆಯಪ್ಪೊಡೆ – ಎದೆಯಲ್ಲಿ ನೋವಿರಿಸಿಕೊಂಡಿರುವೆಯಾದರೆ; ಗೆಲ್ಲ – ಜಯ, ಗೆಲವು

ವ. ಸ್ವಾಹಾಂಗನಾನಾಥ – ಅಗ್ನಿ; ನೀರೋಗ – ರೋಗರಹಿತ
ಚತುರಶ್ರ – ಚಚ್ಚೌಕ; ಅಳವಿ – ವಿಸ್ತಾರ, ಹರಹು; ಮಾರ್ಕೊಳ್ – ವಿರೋಧಿಸು, ಬೇಡವೆನ್ನು
ನೀರದಮಾರ್ಗ – ಆಕಾಶ; ಅಬ್ಜಜಪುತ್ರ – ಬ್ರಹ್ಮನ ಮಗ, ನಾರದ; ಕರ್ಚು – ತೊಳೆ, ಶುಚಿಗೊಳಿಸು; ಪವಿತ್ರೀಕೃತಮಸ್ತಕ – ಪಾವನಗೊಂಡ ತಲೆ; ಪಡೆಮಾತು – ಸುದ್ದಿ; ಷೋಡಶರಾಜರು – ಕೀರ್ತಿಶಾಲಿಗಳಾದ ಮರುತ್ರ, ಸುಹೋತ್ರ, ಅಂಗ, ಶಿಬಿ, ದೌಷ್ಯಂತಿ ಭರತ, ದಾಶರಥಿರಾಮ, ಭಗೀರಥ, ದಿಲೀಪ, ಮಾಂಧಾತ, ಯಯಾತಿ, ಅಂಬರೀಷ, ಶಶಬಿಂದು, ಗಯ, ರಂತಿದೇವ, ಸಗರ, ಪೃಥು ಎಂಬ ಹದಿನಾರು ಮಂದಿ ರಾಜರು; ಬೇಳ್ – ಯಜ್ಞ ಮಾಡು

೫೭. ಗಾಳುಗೊರವ – ಕಪಟ ಸನ್ಯಾಸಿ; ಪಳಾಳ – ಪೊಳ್ಳು ಕೆಲಸ, ತರಲೆ; ತಗುಳ್ಚು – ಅಂಟಿಸು; ಗಱಪು – ಹರಟು; ಮೊಗ್ಗು – ಸಾಧ್ಯ

ವ. ತೆಮಳ್ – ಜಾರಿಹೋಗು; ನೀರ್ಗಾದಿಗೆ – ನೀರಿನ ಕಂದಕ

೫೮. ಕೊಡು – [ಧರ್ಮಯುದ್ಧವನ್ನು] ಕೊಡು; ತಾಪು – ಎರಗು; ಪೆಱಪಿಂಗು –

ಹಿಂಜರಿ; ಬಂಧ – [ಕುಸ್ತಿಯ] ಪಟ್ಟು, ವರಸೆ; ತುದಿಗೆಯ್ದೆ – ಕೊನೆಯವರೆಗೂ ಬರುವಂತೆ

ವ. ಕಸವರ – ಹಣ, ಸಂಪತ್ತು; ಕೆಯ್ಗೆಮಾಡು – ವಶಪಡಿಸಿಕೊ; ಪೊನ್ನ ಪಾಸಱೆ – ಚಿನ್ನದ ಬಂಡೆ; ಷೋಡಶರ್ತ್ವಿಜರ್ಕಳ್ – ಷೋಡಶ+ಋತ್ವಿಜರ್ಕಳ್, ಯಜ್ಞಕಾರ್ಯದಲ್ಲಿ ವಿವಿಧ ಪಾತ್ರಗಳನ್ನು ವಹಿಸುವ ಹದಿನಾರು ಮಂದಿ [**ಹೋತೃಗಣ**: ಹೋತೃ, ಮೈತ್ರಾವರುಣ, ಅಚ್ಛಾವಾಹ ಮತ್ತು ಗ್ರಾವಸ್ತುತ್; **ಅಧ್ವರ್ಯುಗಣ**: ಅಧ್ವರ್ಯು, ಪ್ರತಿಪಸ್ಥಾತಾ, ನೇಷ್ಟಾ ಮತ್ತು ಉನ್ನೇತಾ; **ಉದ್ಗಾತೃಗಣ**: ಉದ್ಗಾತೃ, ಪ್ರಸ್ತೋತೃ, ಪ್ರತಿಹರ್ತೃ ಮತ್ತು ಸುಬ್ರಹ್ಮಣ್ಯ; **ಬ್ರಹ್ಮಗಣ**: ಬ್ರಹ್ಮ, ಬ್ರಾಹ್ಮಣಾಚ್ಛಂಸಿ, ಅಗ್ನೀಧ್ರ ಮತ್ತು ಪೋತೃ]; ಯಜಮಾನ – ದೀಕ್ಷೆ ವಹಿಸಿ ಯಜ್ಞ ಮಾಡುವವನು

೫೯. ಚಾರುತರ – ರಮಣೀಯವಾದ; ಸ್ವಧಾಕಾರ ಸ್ವಧಾ ಎಂಬ ಶಬ್ದದ ಉಚ್ಚಾರಣೆ; ವಷಟ್ಕಾರ – ವಷಟ್ ಎಂಬ ಶಬ್ದೋಚ್ಚಾರಣೆ; ಸ್ವಾಹಾಕಾರ – ಸ್ವಾಹಾ ಎಂಬ ಶಬ್ದದ ಉಚ್ಚಾರಣೆ

೬೦. ಜಾತವೇದ – ಅಗ್ನಿ; ತಣಿಯುಣ್ – ತೃಪ್ತಿಯಾಗುವಂತೆ ಸೇವಿಸು

ವ. ಪುರೋಡಾಶಾ – ಹುರಿದ ಹಿಟ್ಟು; ಕಷಾಯಿತ – ಕದಡಿದ; ಕ್ರತು – ಯಜ್ಞ; ನಿರ್ವರ್ತಿಸು – ಮಾಡು; ಕಃ ಕೇನಾರ್ಥಿ ಕೋ ದರಿದ್ರಃ – ಯಾರು ಏನನ್ನು ಬೇಡುತ್ತಾನೆ, ಯಾರು ಬಡವ

೬೧. ವಿಕ್ರಾಂತ – ಪರಾಕ್ರಮ; ಅಬ್ಧಿಮಥನ – ಸಮುದ್ರ ಮಥನ

ವ. ಮನದೆಗೊಳ್ – ಮನಸ್ಸಿಗೆ ತಂದುಕೊ, ಒಪ್ಪು

೬೨. ತೆ – ಛೆ ಎಂಬ ತಿರಸ್ಕಾರಸೂಚಕ ಉದ್ಗಾರ; ಅನರ್ಘ್ಯ – ಶ್ರೇಷ್ಠವಾದ

೬೩. ಸರಿತ್ಸುತಂ – ಭೀಷ್ಮ; ದೊರೆಗಿಡಿಸು – ಯೋಗ್ಯತೆಯನ್ನು ಕಳೆದುಕೊ

೬೪. ಕುಡವೇಟ್ಗೆಮ – ಕೊಡುವಂತೆ ಹೇಳಲಿ; ಕುಡುಗೆಮ – ಕೊಡಲಿ

೬೫. ದೊರೆಯಕ್ಕುಮೆ – [ನಿನ್ನ] ಯೋಗ್ಯತೆಗೆ ತಕ್ಕುದಾಗುವುದೇ; ಆಂಪಾ – [√ಆನ್=ಸ್ವೀಕರಿಸು] ಸ್ವೀಕರಿಸುವೆಯಾ

೬೬. ತುಱುಗಾರ್ತಿ – ದನ ಕಾಯುವವಳು; ಪಚ್ಚನೆ ಪಸಿ – ಹಚ್ಚ ಹಸಿ, ಅಪ್ಪಟ

೬೭. ನೆರವಿ – ಜನಸಮೂಹ

೬೮. ಅಱಿಯಮಿಕೆ – ಅಜ್ಞಾನ, ತಿಳಿಗೇಡಿತನ; ಎರ್ದೆ ತೆಱೆ – ಎದೆ ಬಿರಿ

ವ. ಪಂದೆಯಂ ಪಾವಡರ್ದವೊಲ್ – ಹೇಡಿಯ ಮೇಲೆ ಹಾವು ಬಿದ್ದ ಹಾಗೆ [ಎಂಬ ಗಾದೆ]

೬೯. ಲಲಾಟ – ಹಣೆ

೭೦. ಕೆಡೆನುಡಿ – ಕೆಟ್ಟ ಮಾತಾಡು, ತೆಗಳು

೭೧. ನಸು ಕಿನಿಸದೆ – ಸ್ವಲ್ಪವಾದರೂ ಕೋಪಮಾಡಿಕೊಳ್ಳದೆ; ದವದಹನ – ಕಾಳ್ಗಿಚ್ಚು

೭೨. ತಳಿಗೆ – ತಟ್ಟೆ; ತಿಱೆ – ಕತ್ತರಿಸು

ವ. ಅವಭೃಥಸ್ನಾನ – ಯಾಗದ ಕೊನೆಯಲ್ಲಿ ಮಾಡುವ ಮಂಗಳಸ್ನಾನ; ಕೀರ್ತಿಮುಖ – [ಪೋಣಿಸಿದ] ಬಳೆಗಳು

ಕೆಯ್ಗೆಮಾಡು – ವಶಪಡಿಸಿಕೊ: ಮಂತಣ – ಸಮಾಲೋಚನೆ; ನೆತ್ತ – ಲೆತ್ತ, ಪಗಡೆಯಾಟ; ಬಸನಿಗ – ವ್ಯಸನಿ; ನಾಟಿವಾಸಗೆ – ನಾಟಿ+ಪಾಸಗೆ, ಮೋಸದ ದಾಳ; ಸಮಕಟ್ಟು – ಏರ್ಪಾಟು ಮಾಡು; ಕಂದುಕಕ್ರೀಡೆ – ಚೆಂಡಾಟ; ಅಕ್ಷಕ್ರೀಡೆ – ಪಗಡೆಯಾಟ; ಧುರಭರ – ಯುದ್ಧಕಾರ್ಯ; ಆಖೇಟ – ಬೇಟೆ; ನಿಟ್ಟೆಪಡು – ನಿಷ್ಠೆಯಾಗಿರು, ವಿಧೇಯವಾಗಿರು; ದಾಯಮನಾಡು – ಗರ ಹಾಕು; ಮೆಟ್ಟಿಡಿಸು – ಮೋಸಗೊಳಿಸು; ಉಱುಗು – ಬಾಗು, ಮೆಲುವಾಗು; ಕಯ್ಪೆಸರ – ಕಹಿಯಾದ ಧ್ವನಿ; ಒನಲಿಸು – ಮೂದಲಿಸು; ಬಾರಿಸು – ತಪ್ಪಿಸು, ನಿಲ್ಲಿಸು; ಅಣ್ಮು – ಸಮರ್ಥವಾಗು

೭೩. ಪುರುಡಿಸಿಕೊಳ್ – ಅಸೂಯೆಯಿಂದ ಕೂಡು; ಒಪ್ಪಿಸವೇೞ್ – ವಾಪಸ್ಸು ನೀಡುವರತೆ ಹೇಳು

ವ. ಮುದುಗಣ್ಣಳ್ – ಮುದುಕರು; ಸಂಕೆ – ಸಂದೇಹ; ಒಂದೆ ಪಲಗೆ – ಒಂದೇ ಹಲಗೆ, ಒಂದು ಆಟ

೭೪. ಮಹೀಪತಿ – ರಾಜ

ವ. ಲಯ – ಕೇಡು, ಸೋಲು; ಗೊಡ್ಡಾಟ – ತುಂಟಾಟ; ಲೆಂಕ – ಸೇವಕ; ಒತ್ತಂಬ – ಬಲವಂತ; ಕಣ್ಗಿಡೆ ಜಡಿ – ಕಂಗೆಡುವಂತೆ ಗದರಿಸು

೭೫. ಅಮರಾಪಗಾಸುತ – ಅಮರ+ಆಪಗಾಸುತ, ದೇವಗಂಗೆಯ ಮಗನಾದ ಭೀಷ್ಮ; ತೊೞ್ತುವೆಸನಂಕೆಯ್ – ತೊತ್ತು ಕೆಲಸವನ್ನು ಮಾಡು; ಉಟ್ಟುದುವರಂ – ಉಟ್ಟ ಬಟ್ಟೆಯವರೆಗೂ; ಕೆಯ್ದರ್ – ಕೈಹಾಕು; ಧಮ್ಮಿಲ್ಲ – ತುರುಬು; ಕೃಷ್ಣೆ – ದ್ರೌಪದಿ

ವ. ಕೃಷ್ಣಕಬರೀಭಾರ – ಕಪ್ಪಾದ ಕೂದಲರಾಶಿ; ಮೇಗಿಲ್ಲದೆ – ಕೀಳ್ತನದಿಂದ; ಬೆಳ್ಳಾಳ್ – ಅಂಜುಬುರುಕ; ಬಿನ್ನ – ಶೂನ್ಯ; ವಿಳಯಕಾಳಜಳಧಿ – ಪ್ರಳಯಕಾಲದ ಸಮುದ್ರ; ನನ್ನಿಯ ಕೇಡು – ಸತ್ಯನಾಶ; ಕಟಾಕ್ಷವಿಕ್ಷೇಪ – ಕಡೆಗಣ್ಣ ನೋಟದ ಅಲುಗಾಟ

೭೬. ಮಡಿಯಿಸು – ಸಾಯಿಸು, ಸಾಯುವಂತೆ ಮಾಡು; ಪಿಣಿಲ್ – ಜಡೆ, ಬಳ್ಳಿ; ನುಡಿನುಡಿ ಪ್ರತಿಜ್ಞೆ ಮಾಡು

೭೭. ಏವ – ದುಃಖ; ಅಟ್ಟೆ – ಮುಂಡ; ಬಂಬಲ್ಗುರುಳ್ – ಸುರುಳಿಸುರುಳಿಯಾದ ಕರುಳು

೭೮. ಕಳಶಜಾ – ದ್ರೋಣನೇ; ಅಸುರಧ್ವಂಸಿ – ರಾಕ್ಷಸಸಂಹಾರಕ, ವಿಷ್ಣು; ಬಿಗುರ್ – ಬೆದರು

ವ. ಕೋಡು – ದಂತ; ಪೋಗು – ಹೋಗುವಿಕೆ, ನಿರ್ಗಮನ; ಬಾಹಿಗೆ – [ಊರಿನ] ಹೊರಪ್ರದೇಶ; ನಾರಾಯಣ – ಶ್ರೀಕೃಷ್ಣ; ಬಟ್ಟೆ – ದಾರಿ

* * * * * * *

೩. ಭಾರತಂ ಕಲಹಂ

೧. ನೀಳಾಭ್ರ – ಕಪ್ಪಾದ ಮೋಡ; ದಂತಿ – ಆನೆ; ಗೆತ್ತು – [√ಗೆಱು] ಭ್ರಮಿಸಿ; ಅರ್ವಿ – ಝುರಿ; ಗಂಧೇಭ – ಮದ್ದಾನೆ; ಅಗುರ್ವಿಸು – ಭಯಗೊಳಿಸು

ವ. ಆಟವಿಕ – ವನವಾಸಿ; ಅಟ್ಟಟ್ಟಿ – ಸೇವೆ; ಮಸುಳಿಸು – ವಾಪಸಾಗಿಸು

೨. ಮಾಡ – ಮನೆ; ಸೆಜ್ಜೆ – ಹಾಸಿಗೆ; ಮಜ್ಜನ – ಸ್ನಾನಘಟ್ಟ; ದೇವಾಂಗವಸ್ತ್ರ – ರೇಷ್ಮೆ ಬಟ್ಟೆ; ಪರಿಯಣ – [ಊಟದ] ತಟ್ಟೆ; ಬೋನ – ಭೋಜನ

ವ. ತಱುಂಬು – ನೂಕು, ತಳ್ಳು; ಶಿಖರಿ – ಬೆಟ್ಟ; ಗೋಮಂಡಲ – ದನಗಳ ಮಂದೆ; ಮೂಂಕಿಱಿ – [ವಾಸನೆ ನೋಡಲು] ಮೂಗು ಚಾಚು; ಉಪಕಂಠ – ಹತ್ತಿರ;

ಛಿದ್ರಿಸು – ರಹಸ್ಯ ಭೇದಿಸು; ಮೆಯ್ಗರೆ – ಮೈಮರೆಸಿಕೊ; ಮೃಗಯಾ – ಬೇಟೆ; ಶತಚೂರ್ಣ – ನೂರಾರು ಚೂರು; ಕೊಪ್ಪು – [ಬಿಲ್ಲಿನ] ತುದಿ

ಬಾಯಟಿ – ಗೋಳಾಡು; ಕವಿದುಪಡು – ಎರಗಿ ಬೀಳು; ಸಂಗರ – ಕಲಹ, ಯುದ್ಧ; ಜಲಕ್ಕನೆ – ಸ್ಪಷ್ಟವಾಗಿ

೩. ವಿಳಯೋಳ್ಕ – ಪ್ರಳಯಕಾಲದ ಉಲ್ಕೆ; ಮುಸುಱು – ಆವರಿಸು; ಮಿಟ್ಟೆ – ಮಣ್ಣುಹೆಂಟೆ

ವ. ಸೋಪಾನ – ಮೆಟ್ಟಿಲು; ಯಮತನೂಜ – ಯುಧಿಷ್ಠಿರ

೪. ತೊವಲ್ನಾರು – ತೊಗಟೆ ಮತ್ತು ನಾರು

೫. ಬೇವಸ – ಕಷ್ಟ

೬. ಪೆಱತು – ಬೇರೇನು

೭. ಅಸಿತೇಂದೀವರ – ಬಿಳಿಯ ನೈದಿಲೆ; ಮೋದು – ಹೊಡೆ; ಅಸೃಗ್ಜಲ – ರಕ್ತ; ತೇರೈಸು – ತವಕಪಡು; ಸೈತಿರ್ – ಸುಮ್ಮನಿರು

೮. ಕನಕಪಿಶಂಗ – ಹೊಂಬಣ್ಣ ಕಂದು ಬಣ್ಣಗಳು; ಜಟಿಕಾವಳಯ – ಜಟೆಗಳ ಸಮೂಹ; ತನುಚ್ಛವಿ – ದೇಹಕಾಂತಿ; ವಿಲಿಪ್ತ – ಬಳಿಯಲ್ಪಟ್ಟ, ಲೇಪಿತವಾದ; ಅಂಜನಗಿರಿ – ಕಾಡಿಗೆಯ ಬೆಟ್ಟ; ಶರಜ್ಜಳಧರ – ಶರತ್ಕಾಲದ ಮೋಡ; ಪರಾಶರಾತ್ಮಜ – ವ್ಯಾಸ

ವ. ಕೃಷ್ಣದ್ವೈಪಾಯನ – ವ್ಯಾಸಮಹರ್ಷಿ

೯. ಆಪತ್ಪಯೋನಿಧಿ – ಕಷ್ಟಗಳೆಂಬ ಸಾಗರ; ಅಟ್ಟಿಮೆಟ್ಟು – ನಾಶವಾಗು; ಪ್ರತೀಕಾರ – ನಿವಾರಣೆ

೧೦. ಕೂಸುತನ – ಎಳವೆ

೧೧. ನೆಱೆ – ಪೂರ್ಣಗೊಳ್ಳು

ವ. ನಗೇಂದ್ರ – ಬೆಟ್ಟ; ಪಯೋಧರಪಥ – ಮೋಡಗಳ ದಾರಿ, ಆಕಾಶ ವಾಯುಸುತ – ಭೀಮ; ಮಹೀಧ – ಪರ್ವತ; ಪರಂತಪ – ಶತ್ರುಗಳನ್ನು ಸುಡುವವನು

೧೨. ಕಲ್ಪವೃಕ್ಷಪ್ರಸವಂ – ಕಲ್ಪವೃಕ್ಷದಲ್ಲಿ ಹುಟ್ಟಿದ; ವಲ್ಕಲ – ನಾರುಬಟ್ಟೆ; ವನವನಿತಾ – ಅರಣ್ಯಾಭಿಮಾನಿ ದೇವತೆ

೧೩. ಬಗೆಗೊಳ್ – ಮನವನ್ನಾಕ್ರಮಿಸು; ಕೋ – ಪೋಣಿಸು; ಅಸಿಖೇಟಕ – ಕತ್ತಿ ಗುರಾಣಿ

ವ. ಶಿಖಿ – ಬೆಂಕಿ; ನುಲಿ – ಹಗ್ಗ; ಮುಟ್ಟುಗಿಡು – ಪ್ರಯೋಜನಕ್ಕೆ ಬಾರದೆ ಹೋಗು; ತಪೋವಿಘಾತ – ತಪಸ್ಸನ್ನು ಹಾಳುಮಾಡು; ಅಚ್ಚರಸೆ – ಅಪ್ಸರೆ

೧೪. ಪೊದಳ್ – ವ್ಯಾಪಿಸು; ಒಂದು ಸೂಟ್ – ಒಂದೇ ಬಾರಿಗೆ; ಮೆಯ್ದೋಱು – ಕಾಣಿಸಿಕೊ

೧೫. ಅನಂಗಜಂಗಮಲತೆ – ಕಾಮನ ಓಡಾಡುವ ಬಳ್ಳಿ

ವ. ದೇಸಿ – ದೇಸಿ ನೃತ್ಯ ಹಾಗೂ ಚೆಲುವು; ಮನುಜಮಾಂಧಾತ – ಮಾನವರಲ್ಲಿ ಮಾಂಧಾತನಾದವನು [ಇಂದ್ರನ ಬೆರಳು ಚೀಪಿ ಹಾಲು ಕುಡಿದವನು ಮಾಂಧಾತ]

೧೬. ಪಡೆಪು – ಇಷ್ಟಾರ್ಥ; ಗಾವಿಲ – ಮೂರ್ಖ; ಇಂಬುಕೆಯ್ – ಆಶ್ರಯಿಸು; ಕರ್ಚು – ತೊಳೆದುಕೊ

ವ. ಅಳಿಪು – ಪ್ರೇಮ; ಚೆಲ್ಲ – ಚೆಲ್ಲಾಟ; ಏವಮಂ ಕೈಕೊಳ್ – ಅಸಮಾಧಾನ ಹೊಂದು; ಧರಾಮರ – ಬ್ರಾಹ್ಮಣ

೧೭. ಉರ್ಚಿ ಪಾಯ್ – ಚಿಮ್ಮಿ ಹರಿ

ವ. ವಲ್ಕಲವಸನೋಪಾಂತ – ನಾರುಬಟ್ಟೆಯ ಅಂಚು

೧೮. ದೊರೆ – ತಕ್ಕುದು

೧೯. ದಾಯಿಗ – ದಾಯಾದಿ; ಜೂದು – ಜೂಜು; ಸಂಕರ – ಶಂಕರ, ಶಿವ

೨೦. ರತ್ನರಶ್ಮಿಜಟಿಲ – ರತ್ನಗಳ ಕಿರಣಗಳೊಡನೆ ಹೆಣೆದುಕೊಂಡಿರುವ

೨೧. ಸಾಧಿಸು – ಗೆಲ್ಲು; ಬಾಧಿಸು – ದಂಡಿಸು

ವ. ತಿರೋಹಿತ – ಅದೃಶ್ಯ; ವನಚರ – ಬೇಡರವನು; ಪುಳಿಂದಿ – ಬೇಡಿತಿ; ಮೃಗಯಾನಿಧಾನ – ಬೇಟೆಗೆ ಆಕರವಾದ; ಕಳಕಳ – ಕೋಲಾಹಲ

೨೨. ವಾರಿಧಿ – ಸಮುದ್ರ; ಉರ್ದು – ಉಜ್ಜು; ಉದಗ್ರ – ತುಂಬ ಎತ್ತರವಾದ; ಬಾಯ್ಗೆಯ್ – ಅರಚು, ಕೂಗು; ಪೆಱಗಿಡು – ಹಿಂದೆ ಸರಿ; ಕಟಿಲ್ – ಸಡಿಲವಾಗು; ಪೆಂಪು – ಹಿರಿಮೆ

ವ. ಕಪ್ಪಂಗವಿ – ಮುಚ್ಚುವ ಮುಚ್ಚಳ; ತೆಗೆದಿಸು – ಜೋರಾಗಿ ಪ್ರಯೋಗಿಸು; ಆತ್ಮೀಯ – ತನ್ನ; ಬಾಣಧಿ – ಬತ್ತಳಿಕೆ; ಪ್ರಕ್ಷಾಳನಂಗೆಯ್ – ತೊಳೆದುಕೊ; ಏಕಪಾದತಪ – ಒಂದೇ ಕಾಲಿನ ಮೇಲೆ ನಿಂತು ಮಾಡುವ ತಪಸ್ಸು; ಅಹಿಭೂಷಣ – ಹಾವನ್ನೇ ಆಭರಣವಾಗುಳ್ಳವನು, ಶಿವ

೨೩. ಗೊರವ – ತಪಸ್ವಿ, ಬೂದಿಬಡಕ; ತನುತ್ರ – ಕವಚ; ಖಟ್ಗಿ – ಖಡ್ಗ, ಕತ್ತಿ; ಅತ್ತಪರ – ಗುರಾಣಿ; ಸೆರಗು – ಭಯ

ವ. ಅತಿಕ್ರಮಿಸು – ಮೀರು, ಛೇಡಿಸು; ಆಟಿಸು – ಬಯಸು; ಬಗ್ಗಿಸು – ಗದರಿಸು; ಪೊಣರ್ಚು – ಗಂಟಿಕ್ಕು, ಸೇರಿಸು; ಶೂನ್ಯಹಸ್ತ – [ಆಯುಧಗಳಿಲ್ಲದ] ಬರಿಗೈ

೨೪. ತ್ರಿಪುರಹರ – ಶಿವ; ಮುಡಿಗಿಕ್ಕು – ಮುಡಿಗೆ ಹಾಕು, ಸವಾಲು ಎಸೆ

೨೫. ಮಱಿಸು – ಮರೆಮಾಡು; ನೊಸಲ್ – ಹಣೆ; ಎಱಕ – ಪ್ರೀತಿ

೨೬. ಫಣಿ – ಹಾವು; ತೊಱೆ – [ಗಂಗಾ] ನದಿ; ಪೆಱೆ – ಚಂದ್ರ; ಕಱೆ – ಕಪ್ಪು [ಮಚ್ಚೆ]; ಮಱೆಯಿಲ್ಲದೆ – ಮರೆಮಾಚದೆ, ಹೊರಗೆ

ವ. ಬರ – ವರ, ಇಷ್ಟಾರ್ಥ; ತೆಲ್ಲಂಟಿ – ಬಳುವಳಿ; ಗಂಡಗಾಡಿ – ಪುರುಷ ಸೌಂದರ್ಯ

೨೭. ಅಬ್ಬೆ – ತಾಯಿ; ಅಬ್ದ – ವರುಷ; ಬೃಹಂದಳೆ – ನಪುಂಸಕ

ವ. ತಡೆ – ತಡಮಾಡು; ಕಾರ್ಗಾಲ – ಮಳೆಗಾಲ; ಚಾದಗೆ – ಚಾತಕ ಪಕ್ಷಿ, ಮಳೆಯ ನೀರನ್ನೇ ಕುಡಿಯುವ ಪಕ್ಷಿ; ಮರುತ್ಸುತ – ಭೀಮ

೨೮. ಮಸಕ – ರಭಸ; ಕಾಯ್ಪು – ಕೋಪ; ಜವ – ವೇಗ ಮತ್ತು ಯಮ; ಅಗುರ್ವು – ಭಯ; ತೆರಳ್ದು – ಗುಂಪಾಗು; ತೂಳ್ದು – ನೂಕು, ತಳ್ಳು; ಬೇಳ್ವರಣೆ – ಹೋಮ ಮಾಡಲು ಬೇಕಾದ ಸಮಿತ್ತು, ಸೌದೆ; ಬೇವಸ – ಸಂಕಟ; ಮತ್ತೇಭ ವಿಕ್ರೀಡಿತ – ಮದ್ದಾನೆಯ ಆಟ

ವ. ಇಷ್ಟಿವಿಘ್ನ – ಯಜ್ಞಕ್ಕೆ ಅಡಚಣೆ; ಜಾವ – ಯಾಮ, ಮೂರು ಗಂಟೆಯ ಅವಧಿ; ರೂಪುದೋಱು – ಕಣ್ಣಿಗೆ ಕಾಣಿಸು

೨೯. ಬಲಾಕ – ಬೆಳ್ಳಕ್ಕಿ; ಕ್ವಣಿತ – ಶಬ್ದ, ಧ್ವನಿ; ಪರಿವಿಕಸಿತ – ಚೆನ್ನಾಗಿ ಅರಳಿದ; ಕನಕಕಂಜ – ಹೊಂದಾವರೆ; ಕಿಂಜಪುಂಜಲ್ಕ – ಕೇಸರಗಳ ರಾಶಿ; ಪಿಂಜರಿತ – ಕೆಂಪು ಹಳದಿ ಮಿಶ್ರ ಬಣ್ಣ

ವ. ನೀರಡಸು – ಬಾಯಾರು; ಮೆಳೆ – ಗುಂಪು; ಸಾರ್ಚು – ಸೇರಿಸಿಡು; ಅಂಜಲಿಪುಟ – ಬೊಗಸೆ

೩೦. ತೋಯಜಷಂಡ – ಸರೋವರ; ಆಯತಿ; ವೈಭವ, ಎಚ್ಚರಿಕೆ; ಮಱುಮಾತು – ಉತ್ತರ; ತೋಯ – ನೀರು

ವ. ಪದ್ಮಪತ್ರ – ತಾವರೆಯೆಲೆ; ಓಘ – ಸಮೂಹ; ತೀವು – ತುಂಬು; ಉಮ್ಮಳಿಸು – ಕಳವಳಗೊಳ್ಳು

೩೧. ಸರೋಜಷಂಡ – ಸರೋವರ; ಆನತರಿಪು – ಬಾಗಿದ ಶತ್ರುಗಳುಳ್ಳವನು; ನಂಜು – ವಿಷ

ವ. ಯಮನಂದನ – ಯುಧಿಷ್ಠಿರ; ಜೋಲ್ – ಬೀಳು; ವಿಗತಜೀವ – ಹೋದ ಪ್ರಾಣವುಳ್ಳವನು, ಸತ್ತವನು; ಪದ – ಸನ್ನಿವೇಶ
ಅಭಿಚಾರ – ಮಾಟ; ಕೊಂಡ – [ಅಗ್ನಿ] ಕುಂಡ; ಅಂಜನಪುಂಜ – ಕಾಡಿಗೆಯ ರಾಶಿ; ಅಡಸು – ತುರುಕು; ಕೃತಾಂತ – ಯಮ; ಕತ್ತಿಗೆ – ಕಿರುಗತ್ತಿ; ಬೆಸಸು – ಆಜ್ಞೆ ಮಾಡು; ಬಾಪ್ಪು – ಭೇಷ್

೩೨. ಪಿಶಿತಾಶಿನಿ – ಮಾಂಸಭಕ್ಷಕಳು; ಅಲಂಘ್ಯಬಲ – ಮೀರಲಾಗದ ಶಕ್ತಿ

ವ. ಜಾತಿದೇವತೆ; ಶ್ರೇಷ್ಠ ದೇವತೆ; ಕೆಯ್ಗೆವರ್ – ವಶವಾಗು

೩೩. ಬೇಳ್ವೆ – ಯಜ್ಞ; ಮಾತು – ಗಾದೆ

ವ. ಕೃತಾಂತನಂದನ – ಯಮನ ಮಗ, ಧರ್ಮರಾಯ; ಅಬ್ಜಾಕರ – ತಾವರೆಗಳ ಮನೆ, ಸರೋವರ; ಬೆಕ್ಕಸ – ಆಶ್ಚರ್ಯ

೩೪. ಕಜ್ಜ – ಕಾರ್ಯ

೩೫. ಮದೇಭ – ಮದ್ದಾನೆ; ಒಡ್ಡಿಸು – ಪ್ರತೀಕಾರ ಮಾಡು

ವ. ಮುಱಿಕೆಂದು – ಮೈಮುರೆತು ನಿದ್ರಿಸು; ಪನ್ನೆರಡು – ಹನ್ನೆರಡು; ರೂಪಪರಾವರ್ತನ – ಬದಲು ರೂಪ; ಪಿತೃವನ – ಶ್ಮಶಾನ; ನೇಲ್ಗಟ್ಟು – ಜೋತು ಹಾಕು; ಬೋನವೇಟಿಗೆ – ಊಟದ [ಅಡುಗೆ] ಪೆಟ್ಟಿಗೆ; ಸಟ್ಟುಗ – ಸೌಟು; ಬಾಣಸಿನ ಕರಣ – ಅಡುಗೆಯ ಕೆಲಸ; ಮಾಸಾದಿ – ಮಹಾಸಾದಿ, ಅಶ್ವಾರೋಹಿ; ಗೋಮಂಡಲಾಧ್ಯಕ್ಷ – ದನದ ಮಂದೆಯ ಮುಖ್ಯಸ್ಥ; ರೂಪುಗರೆ – ರೂಪವನ್ನು ಮರೆಸಿಕೊ; ಘಟ್ಟಿವಳ್ತಿ – ಸುಗಂಧ ತೇಯುವವಳು

೩೬. ಅಟಿವೆಸನ – ಕೆಟ್ಟ ಕೆಲಸ; ಕಾಪು – ರಕ್ಷಣೆ

ವ. ಅಣುಗೆ – ಮೆಚ್ಚಿನವಳು

೩೭. ಮಾಸಿಸು – ಮಸುಕಾಗಿಸು; ಮಾಸರಿಕೆ – [ಮಾಧುರ್ಯ<ಮಾದರ+ಇಕೆ =ಮಾದರಿಕೆ<ಮಾಸರಿಕೆ] ಮಧುರ ರೂಪು

ವ. ಬೇಟ – ಪ್ರಣಯದಾಸೆ; ವಿಲೇಪನ – ಪರಿಮಳದ್ರವ್ಯ; ಉಪರೋಧ – ಒತ್ತಾಯ; ಪಟುವಗೆ – ಕಾಡುಬುದ್ಧಿ

೩೮. ಖರಸಾಣೆ – [ಖರಶಾಣಾ] ಹರಿತವಾದ ಸಾಣೆ; ತೊಟ್ಟಿಡಾಳ್ – ತೊತ್ತುಮಾಡು; ಅಂಚೆ – ವಸ್ತ್ರ

ವ. ಅಳಿಪಿಳಿವೋಗು – [ಅಳಿಪು+ಇಳಿವೋಗು] ಆಸೆ ತಿರಸ್ಕೃತವಾಗು; ಬಾರಿಸು – ನಿವಾರಿಸಿಕೊ; ಪರಿಭವಾನಿಲ – ಅವಮಾನವೆಂಬ ಬೆಂಕಿ; ಕಟ್ಟೇಕಾಂತ – [ಕಡಿದು ಏಕಾಂತ] ಅತ್ಯಂತ ರಹಸ್ಯ

೩೯. ಮಾದುರ – [ಮಹಾಧುರ] ದೊಡ್ಡ ಯುದ್ಧ

ವ. ಸಂಕೇತನಿಕೇತನ – [ಪ್ರಣಯಿಗಳ] ಭೇಟಿಯ ಗುರುತಿನ ಜಾಗ; ಪಾಣ್ಬ – ಹಾದರಿಗ; ಕುಱುಪು – ಗುರುತು; ವೃತ್ತಕ – ಸಮಾಚಾರ; ಮೇಲುದ – ಸೆರಗು; ಅಶ್ರಮ – ಕಷ್ಟವಿಲ್ಲದೆ; ಜವಂಗೆ ಬಾಣಸುಗೆಯ್ – ಯಮನಿಗೆ ಔತಣ ಮಾಡು; ಗುಣಣೆಯ ಮನೆ – ನಾಟ್ಯಶಾಲೆ

೪೦. ನಿರ್ಬಂಧ – ಒತ್ತಾಯ; ದೂಱಪ್ಪಿನೆಗಂ – ಅಪವಾದವುಂಟಾಗುವ ರೀತಿ

ವ. ಡಾಮರ ಡಾಕಿನಿ – ಕ್ಷೋಭೆಯುಂಟುಮಾಡುವ ಪಿಶಾಚಿ
ಮೂಗಟ್ಟಿ – ಮೂಕವೇದನೆ, ಹೇಳಿಕೊಳ್ಳಲಾರದ ಸಂಕಟ; ಗೂಢಪ್ರಣಿಧಿ – ಗೂಢಚಾರ; ಹೇಳಾಸಾಧ್ಯ – ಆಟದಲ್ಲಿನಂತೆ ಗೆಲ್ಲಲು ಸುಲಭವಾಗು

೪೧. ನಿಱಿಸು – ನಿಲ್ಲಿಸು; ತಳ್ವು – ತಡಮಾಡು; ತುಱು – ದನಕರು

ವ. ಮುತ್ತಿ ಮೊಗೆ – ಆಕ್ರಮಿಸಿ ತುಂಬಿಕೊ [ಸೆರೆಹಿಡಿ]; ಉಚ್ಚಳಿಸು – ಹಾರಿಸು; ತಗುಳ್ – ಅಟ್ಟಿಸಿಕೊಂಡು ಹೋಗು; ಆರ್ – ಗರ್ಜಿಸು

೪೨. ಬಾೞೆಂ – ಬದುಕುವುದಿಲ್ಲ; ತುಱುಗೋಳ್ – ದನಕರುಗಳನ್ನು ಕದ್ದೊಯ್ಯುವಾಗ ಅವನ್ನು ಬಿಡಿಸಲು ಮಾಡುವ ಕಾಳಗ; ಸೈಪು – ಪುಣ್ಯ; ಅಱಿಕೆ – ಪ್ರಸಿದ್ಧ; ಘೋೞಯಿಲ – ಕುದುರೆ ಸವಾರ ಸೈನಿಕ; ದೇಗುಲ – ದೇವಾಲಯ

ವ. ಪೋಗು – ಹೋಗುವಿಕೆ, ವಿನಾಶ, ಸಾವು; ಬೆಗಡುಗೊಳ್ – ಗಾಬರಿಯಾಗು; ತನ್ನನಱಿಪು – ತನ್ನ ಗುರುತನ್ನು ತಿಳಿಸು; ನೀಡಿಸು – ನೀಡುವಂತೆ [ತೆಗೆದು ಕೊಡು] ಮಾಡು

೪೩. ಧ್ವಜಿನಿ – ಸೈನ್ಯ; ಪೊಡೆವಂತೆ – ಬೀಳುವಂತೆ

ವ. ಆಕುಳ – ಗಾಬರಿ; ಮುಟ್ಟೆವರ್ – ಹತ್ತಿರಕ್ಕೆ ಬರು; ಒಂದೊಂದಱಲ್ – ಒಂದೊಂದರಲ್ಲಿಯೂ; ಅರ್ಣವನಿನಾದ – ಸಮುದ್ರದ ಮೊರೆತ; ಆರ್ – ಗರ್ಜಿಸು; ವಿಕರ್ಣ – ಬಾಣ; ಪ್ರವೀರ – ಶ್ರೇಷ್ಠ ವೀರ; ಬಿಗುರ್ – ಎದುರಿಸು

೪೪. ನಿಱಿಸು – ಸ್ಥಾಪಿಸು; ಪೞವಿಗೆ – ಧ್ವಜ

ವ. ಶಶಿವಿಶದ – ಚಂದ್ರನಂತೆ ಬೆಳ್ಳಗಿರುವ; ನನ್ನಿಪಟ – ಸತ್ಯದ ಪಟ್ಟ

೪೫. ಬದ್ದವಣ – ಮಂಗಳವಾದ್ಯ; ಸಾರಧನ – ಉತ್ಕೃಷ್ಟ ದ್ರವ್ಯ

೪೬. ಬಾಳೆ – ಬಾಲೆ, ಹೆಣ್ಣು; ಅಂಕದ – ಹೆಸರುವಾಸಿಯಾದ; ಕಾರ್ಯಗತಿ – ಕಾರ್ಯಗಳ ಪರಿಣಾಮ; ಬಗೆ – ಯೋಚಿಸು, ಊಹಿಸು

ವ. ಚಾಣೂರಾರಿ – ಶ್ರೀಕೃಷ್ಣ; ಕಂಸಧ್ವಂಸಿ – ಶ್ರೀಕೃಷ್ಣ
ಮಂತ್ರಶಾಲೆ – ಸಮಾಲೋಚನ ಕೋಣೆ

೪೭. ಪನ್ನಗಧ್ವಜ – ಸರ್ಪಧ್ವಜ, ದುರ್ಯೋಧನ; ಅವಸ್ತುಭೂತ – ಯಾವ ಆಸ್ತಿಯೂ ಇಲ್ಲದವನು

ವ. ಸಾಮ – ಸಾಮೋಪಾಯ; ಮುಂತಿಕ್ಕು – ಎದುರಿಗೆ ಒಡ್ಡು; ಅಟ್ಟಟ್ಟು – ದೂತನನ್ನು ಕಳಿಸು; ಕಿಂಕಿಱಿವೋಗು – ಕಿರಿಕಿರಿಗೊಳ್ಳು

೪೮. ತೋಡು – ಬಗೆ, ಸೀಳು; ವಿರ್ದಾಡು – ಔತಣ ಮಾಡು; ಗದಾಶನಿಘಾತ – ಗದೆಯೆಂಬ ಸಿಡಿಲಿನ ಹೊಡೆತ

ವ. ಮಸಗು – ಅಬ್ಬರಿಸು; ಪ್ರತಿಪತ್ತಿ – ಸತ್ಕಾರ; ಉಱಿದೆ – ಇರದೆ; ಪಡಿಯಱ – ಬಾಗಿಲು ಕಾಯುವ ಸೇವಕ; ಅಂಬುಜೋದರ – ಶ್ರೀಕೃಷ್ಣ; ಕೇಸರಿಪೀಠ – ಸಿಂಹಾಸನ

೪೯. ಯುಷ್ಮತ್ – ನಿನ್ನ; ಪದಪಾಂಸು – ಕಾಲಿನ ದೂಳು; ಪವಿತ್ರಗಾತ್ರ – ಪಾವನವಾದ ಶರೀರ

೫೦. ಬಿಸವಂದ – ಆಶ್ಚರ್ಯ; ಅಗುಂದಲೆ – ಹೆಚ್ಚಳ, ಅತಿಶಯ

೫೧. ಮನಕತ – ಮನಃಕ್ಷತ, ಮನಸ್ಸಿನ ನೋವು; ಬೆನ್ನೀರ್ – ಬಿಸಿನೀರು

೫೨. ಆ ದೊರೆಯರ್ – ಅಂಥವರು, ಅಂಥ ಯೋಗ್ಯರು

೫೩. ದಾಯಿಗ – ದಾಯಾದಿ

೫೪. ಪಱಿಪಡು – ಕತ್ತರಿಸಿ ಹೋಗು, ಸಂಬಂಧ ಹರಿ; ಬಾಟ್ – ಏಳಿಗೆ

೫೫. ಉಂಟೊಡೆತಾಗಿ ಮಾಡು – ಇದೆ ಎಂಬಂತೆ ತೋರಿಸು; ಸಯ್ದ – ಸಭ್ಯ; ರಕ್ಕಸಿಯರ ಕಂಡ ಕುಂಬಳ – ರಾಕ್ಷಸಿಯರ ದೃಷ್ಟಿಯಿಂದ ಕುಂಬಳ ಕೊಳೆಯುವುದೆಂಬ ನಂಬಿಕೆ

ವ. ಅಂತಕ – ಯಮ; ಮಾಮಸಕ – ಮಹಾ ಕೋಪ

೫೬. ಸೀತೆ – ಸೀತಾದೇವಿ ಮತ್ತು ಉತ್ತ ನೆಲ ಅಥವಾ ನಾಡು; ಸೀತೆಯೇ – ತಂಪಾದವಳೇ; ನಿಸೇಕ – ಪ್ರಸ್ತ

೫೭. ಬವರ – ಯುದ್ಧ; ಅಮೋಘ – ವ್ಯರ್ಥವಾಗದ; ನಿರ್ಘೋಷ – ಶಬ್ದ, ಠೇಂಕಾರ

ವ. ಕಣ್ಣಾಗಿಱು – ವಿವೇಕ ಹೊಂದು

೫೮. ಏಟಿಳ್ವೋಗು – ಎದ್ದು ಹೋಗು; ಬೇಟ್ಪನ್ – ಬೇಡುವವನು; ತೊಟ್ಟುಟ್ಟಿ – ತೊತ್ತಿನ ಮಗ

೫೯. ಉಡಿ – ಮುರಿ; ಪದ – ಸಂದರ್ಭ

ವ. ವಿಚ್ಛಿದುರಮನ – ಒಡೆದುಹೋದ ಮನಸ್ಸಿನವನು; ಒಂದು ಬರು – [ನಮ್ಮ ಜೊತೆ] ಕೂಡಿ ಬರು; ಸೂರ್ಯಸೂನು – ಕರ್ಣ; ರಥಾಂಗಧರ – ಚಕ್ರಧರ, ಶ್ರೀಕೃಷ್ಣ

೬೦. ಅಹರ್ಪತಿ – ಸೂರ್ಯ; ಪಡೆಮಾತು – ವಿಚಾರ, ಹೆಚ್ಚಿನ ಮಾತು; ಪೆಱರ್ – ಬೇರೆಯವರು

೬೧. ಉತ್ಪತ್ತಿ – ಹುಟ್ಟು; ಎನ್ನರುಂ – ಎಂತಹವರೂ; ಪನ್ನಗಕೇತು – ಸರ್ಪಧ್ವಜ, ದುರ್ಯೋಧನ

ವ. ಏಱಲ್ ತಱಿಸು – ಕುಳಿತುಕೊಳ್ಳಲು [ಪೀಠವನ್ನು] ನೀಡು

೬೨. ಮೀಂಗುಲಿಗ – ಬೆಸ್ತ; ಕಾನೀನ – ಕನ್ಯೆಯ ಮಗ, ಮದುವೆಯಾಗದ ಕನ್ಯೆಯಲ್ಲಿ ಹುಟ್ಟಿದವನು; ಸಮಂತು – ಚೆನ್ನಾಗಿ, ಪೂರ್ತಿಯಾಗಿ; ಪಾಟಿಸು – ಕೀಳು, ತೆಗೆದುಹಾಕು

೬೩. ಬಾಷ್ಪವಾರಿ – ಕಣ್ಣೀರು

೬೪. ನೆತ್ತ – ಪಗಡೆಯಾಟ; ಲಂಬಣ – [ಮುತ್ತಿನ] ಹಾರ; ಕೇಡು – ಬೀಳುವಿಕೆ; ಬಳ್ಕು – ನಡುಗು

೬೫. ಆಜಿ – ಯುದ್ಧ; ಮೇಲ್ಮಲೆಗೆಯ್ – ಮೇಲೆ ಮೇಲೆ ಮಾತ್ರ ಉತ್ಸಾಹ ತೋರು; ತವಿಸು – ನಾಶಮಾಡಿಕೊ

ವ. ಅವಾರ್ಯವೀರ್ಯ – [ಇತರರು] ಎದುರಿಸಲಾಗದ ಪರಾಕ್ರಮದವನು; ದೆವಸವಳ – ನಿತ್ಯದ ಕೊಡುಗೆ; ಬೆಟ್ಟಾಗು – ಬೆಟ್ಟದಂತಾಗು; ಪುಂಜಿಸು – ರಾಶಿಮಾಡು; ಅಘಮರ್ಷಣಪೂರ್ವಕ – ಪಾಪನಿವಾರಕ ಮಂತ್ರೋಚ್ಚಾರಣೆಯ ಮೂಲಕ; ತೆಕ್ಕನೆ – ಪೂರ್ತಿ; ಎಱಕ – ಪ್ರೀತಿ

೬೬. ಕೆಯ್ಯೆಡೆ – ನ್ಯಾಸ, ಒತ್ತೆ; ಅಪ್ಪೈಸು – ಒಪ್ಪಿಸು

೬೭. ಪಡೆಮಾತು – ಬೇರೆ ಮಾತು; ಪುರಿಗಣೆ – ದಿವ್ಯಾಸ್ತ್ರ

೬೮. ಸಯ್ಪು – ಪುಣ್ಯ

೬೯. ಅಳವು – ಯೋಗ್ಯತೆ

೭೦. ಎಡೆಮಡಗು – ದಾಕ್ಷಿಣ್ಯವಿಡು; ತೋಟ್ಟುವೆಸನ – ತೊತ್ತಿಗೆ ಹೇಳಬಹುದಾದ ಕೆಲಸ

೭೧. ಬೆಳಱ್ – ಬೆದರು; ಬೆಸಕೆಯ್ – ಆಜ್ಞೆ ಪಾಲಿಸು

೭೨. ಪಾಟಿಯನೊಕ್ಕು – ಕ್ರಮವನ್ನು ಬಿಡು; ಪಿಂತಿಕ್ಕು – ಕಡೆಗಣಿಸು; ಜೋಳಕ್ಕೆ ತಪ್ಪು – ಅನ್ನದ ಋಣವನ್ನು ಮೀರು; ನಿಲ್ಲದಿಕೆ – ನಿಲ್ಲದಿರುವಿಕೆ; ಕಲ್ಪಾಂತರಸ್ಥಾಯಿ – ಕಲ್ಪಗಳಷ್ಟು ದೀರ್ಘಕಾಲ ಉಳಿಯುವಂಥದು

ವ. ಎರ್ದೆದೆಱ್ – ಎದೆ ಬಿರಿ

೭೩. ಬೆಟ್ಟನೆ – ಬಿರುಸಾಗಿ, ನಿಷ್ಠುರವಾಗಿ; ಅಟ್ಟು – ಧೈರ್ಯಗುಂದು; ಪೊಂಪುಟಿವೋಗು – ಅಧಿಕವಾಗು; ಚಿಂತಾಂತರ – ಬೇರೆ ಚಿಂತೆ

೭೪. ಎಡೆಗೋ – ನಡುವೆ ಪೋಣಿಸಿಕೊಳ್ಳು; ಏರ್ದೊಡಂ – ಯುದ್ಧಮಾಡಿದರೂ; ಅಟೆ – ಕೊಲ್ಲು, ನಾಶಮಾಡು; ಪೆರ್ಜಸ – ಹಿರಿದಾದ ಕೀರ್ತಿ

ವ. ವಿಸರ್ಜಿಸು – ಕಳಿಸಿ ಕೊಡು; ಆವರ್ಜಿಸು – ಎಳೆದುಕೊ, ಗಳಿಸಿಕೊ; ಆಧೇಯ – ಆಶ್ರಯ

* * * * * * *

೪. ಅಡಂಗಿತ್ತು ಕುರುರಾಜಾನ್ವಯಂ

ವ. ಅಱಿದಿರ್ಕೆ – ತಿಳಿದಿರಲಿ; ಕಳವೇೞ್ – ಯುದ್ಧರಂಗವೆಂದು ನಿರ್ಧರಿಸು; ಮಂಗಳವಸದನ – ಮಂಗಳಕರವಾದ
ಅಲಂಕಾರ; ದಕ್ಷಿಣಾವರ್ತ – ಬಲಗಡೆಯ ಸುಳಿ; ಬಲಗೊಳ್ – ಪ್ರದಕ್ಷಿಣೆ ಹಾಕು; ಪೆರ್ಮಡು – ದೊಡ್ಡ ಕೊಳ

೧. ಹರಿಗ – ಅರ್ಜುನ; ಏನುಂ ಮಾಣದೆ – ಸ್ವಲ್ಪವೂ ತಡಮಾಡದೆ; ಬಿಡು – ಪಾಳೆಯ ಬಿಡು

ವ. ಕುಂಭಸಂಭವ – ದ್ರೋಣ; ಹೇಮಾಸನ – ಚಿನ್ನದ ಪೀಠ; ಕಜ್ಜಂ ಪುಟ್ಟು – ಕೆಲಸವಿರು; ಮನೆವಾೞ್ತೆ – ಮನೆಯ ಕೆಲಸ

೨. ಬಲ್ಲಿದ – ಶೂರ; ಪೊಣರ್ಚು – ಹೂಡು; ಪೊರ್ದು – ಸೇರು

ವ. ಮೊಮ್ಮ – ಮೊಮ್ಮಗ; ಸಹಸ್ರಕಿರಣ – ಸೂರ್ಯ; ಮಂದಾಕಿನೀತನೂಜ – ಭೀಷ್ಮ; ತೋಯ – ತೀರ್ಥ, ನೀರು; ಮಿಸಿಸು – ಸ್ನಾನಮಾಡಿಸು, ಅಭಿಷೇಕಮಾಡು; ಪಗೆವರ್ – ಹಗೆಗಳು; ಅವಕರ್ಣಿಸು – ಕೇಳು

೩. ಏಱುವೇೞ್ – ಯುದ್ಧದ ಬಗ್ಗೆ ಹೇಳು; ಕೆಮ್ಮಗೆ – ಸುಮ್ಮನೆ; ಪಗೆವಾಡಿ – ಶತ್ರುಪಾಳೆಯ

೪. ಸರವಿ – ಹಗ್ಗ; ಮುದುಪ – ಮುದುಕ; ನಿಟ್ಟೆಲ್ವು – ನಿಡಿದು ಎಲುಬು, ಬೆನ್ನೆಲುಬು

೫. ಇಳಿಕೆವಡೆ – ತಿರಸ್ಕೃತವಾಗು, ಗಮನಕ್ಕೆ ಬಾರದಿರು; ವನಮಾತಂಗ – ಕಾಡಾನೆ; ಅಸುಹೃತ್ – ಶತ್ರು

೬. ಉದ್ಧತ – ಘನತೆಯುಳ್ಳವರು; ತುಬ್ಬು – ಸೂಚಿಸು; ಕಡೆನುಡಿ – ಹೀಯಾಳಿಸು

೭. ಉಗ್ಗಡಿಸು – ಕೂಗಿ ಹೇಳು, ಮುಖ್ಯವಾಗಿ ಮಾಡಿಕೊ; ಆನ್ – ಎದುರಿಸು; ಕಲಹ – ಯುದ್ಧ; ಆಕುಲ – ದುಃಖ

೮. ಗಂಗಾಸುತ – ಭೀಷ್ಮ; ಪೃಥಾಸುತ – ಪಾಂಡವ; ಗೆಲೆ – ಗೆಲ್ಲಲು, ಗೆಲುವು ಸಾಧಿಸಲು

೯. ನಚ್ಚು – ನಂಬಿಕೆ; ಪೊಡರ್ಪು – ಸಾಮರ್ಥ್ಯ; ಮೊಕ್ಕಳಂ – ವಿಶೇಷವಾಗಿ; ಪಳಂಚಲೆ – ಜಗಳವಾಡಿ ಪೀಡಿಸು; ಸೂೞ್ – ಸರದಿ

೧೦. ಚಕ್ರಿ – ಶ್ರೀಕೃಷ್ಣ; ಇಳಾಚಕ್ರ – ಭೂಮಂಡಲ; ಕರಚಕ್ರ – ಸುದರ್ಶನಚಕ್ರ; ತೂಳ್ದು – ತಳ್ಳಲ್ಪಟ್ಟು; ಪಡುವು – ಪಶ್ಚಿಮ; ಪಯಿಂಛಾಸಿರ – ಹನ್ನೆರಡು ಸಾವಿರ

೧೧. ಘಟಾವಳಿ – ಆನೆಗಳ ಸಾಲು; ಪೆರ್ದೆರೆ – ದೊಡ್ಡ ಅಲೆ; ಸ್ಫುರಿತ – ಹೊಳೆಯುವ; ತಿರಸ್ಕರಿಸು – ಕೀಳುಮಾಡು; ನಿಶಾತ – ಹರಿತವಾದ; ಘೂರ್ಣಿತ – ಮೊರೆಯುವ; ಅರ್ಣವ – ಸಮುದ್ರ

ವ. ಪದೋತ್ಥಿತ – ಪಾದಗಳ ತುಳಿತದಿಂದ ಮೇಲೆದ್ದ; ಮೂರಿವಿಡು – ಗುಂಪಾಗು; ಪುಂಡರೀಕಾಕ್ಷ – ಶ್ರೀಕೃಷ್ಣ; ಪಡೆವಳ – ಸೇನಾನಾಯಕ; ಜಲಕ್ಕನಿರು – ನಿರ್ಮಲವಾಗಿರು; ಸುಲಿ – ತೊಳೆ, ಉಜ್ಜು; ಪಣ್ಣಪಣ್ಣನೆ – ಮೆಲ್ಲ ಮೆಲ್ಲಗೆ; ನೆಱೆದು ನಿಲ್ – ಸಿದ್ಧವಾಗಿ ನಿಲ್ಲು; ಕೆಯ್ವೀಸು – ಯುದ್ಧ ಆರಂಭವಾಗಲು ನೀಡುವ ಸೂಚನೆ; ಪ್ರಸ್ತಾವ – ಸಂದರ್ಭ; ಶೂರಂ ಭೇದೇನ ಯೋಜಯೇತ್ – ಶೂರನನ್ನು ಭೇದೋಪಾಯದಿಂದ ಗೆಲ್ಲಬೇಕು; ನಯ – ನೀತಿ

೧೨. ಅಸುಹೃತ್ – ಶತ್ರು

ವ. ಒಡ್ಡಣ – ಸೈನ್ಯ; ಪಡಲಿಡು – ನಾಶವಾಗು; ಬವರ – ಯುದ್ಧ

೧೩. ಪಿಡಿಕೆಯ್ – ಕೈಯ ಹಿಡಿ, ಮುಷ್ಟಿ; ಮಡಕಾಲ್ – ಕಾಲಿನ ಹರಡು; ಕೆಯ್ವೊಡೆ – ಕೈಚೀಲ

ವ. ಕೋಲ್ಕುಟ್ಟು – ಬಾಣಗಳಿಂದ ಹೊಡೆ; ಅರ್ಬಿ – ಬೆಟ್ಟದಿಂದ ದುಮುಕುವ ನದಿ; ಜೋದ – ಯೋಧ, ಶೂರ

೧೪. ನೊಸಲ್ – ಹಣೆ; ಅಂಬಿರಿವಿಡು – ಧಾರೆಯಾಗಿ ಸುರಿ

ವ. ಬರ್ದುಕಾಡು – ತಪ್ಪಿಸಿಕೊ; ಘನಘಟೆ – ಮೋಡಗಳ ರಾಶಿ; ವಿಸ್ಫುರಿತ – ಹೊಳೆಯುವ; ಅತೀತನಾಗು – ಸಾಯು; ಮುಟ್ಟೆವರ್ – ಸಮೀಪಿಸು; ತಲೆವುಡು – ಎದುರಾಗು; ಅಪರಜಳಧಿ – ಪಶ್ಚಿಮ ಸಮುದ್ರ; ಅಪಹಾರತೂರ್ಯ – ಯುದ್ಧ ನಿಲ್ಲುವ ಕಹಳೆಯ ಧ್ವನಿ
ಉತ್ತಾಯಕನಾಗು – ಪ್ರತಾಪ ಮೆರೆದವನಾಗು; ಪಾರೆಯಂಬು – ಹಾರೆಯಾಕಾರದ ಬಾಣ; ಒಲ್ಲನುಲಿ – ಒಲ್ಲನೆ+ಉಲಿ, ಮೆಲ್ಲಗೆ ಕಿರಿಚು; ಕಡಂಗು – ಉತ್ಸಾಹಗೊಳ್ಳು; ಪೇಸೇಱು – ಜುಗುಪ್ಸೆಯುಂಟಾಗು

೧೫. ನುಡಿವಳಿ – ಪ್ರತಿಜ್ಞೆ, ಕೊಟ್ಟ ಮಾತು; ಅಚ್ಚುಡಿ [ರಥದ] ಅಚ್ಚು ಮುರಿ

೧೬. ದೇವಾಸುರ – ದೇವತೆಗಳು ಮತ್ತು ರಾಕ್ಷಸರ [ಯುದ್ಧ]; ನೆರಗಂ ಬಗೆ – ನೆರವನ್ನು ಅಪೇಕ್ಷಿಸು; ಚಕ್ರಿ – ಶ್ರೀಕೃಷ್ಣ

೧೭. ತೊಡು – [ಬಾಣವನ್ನು ಬಿಲ್ಲಿಗೆ] ಹೂಡು

ವ. ತಱಿ – ಕತ್ತರಿಸು; ಬಾಜಿಸು – ಶಬ್ದ ಮಾಡು; ಮಂದರಧರ – ಶ್ರೀಕೃಷ್ಣ; ಭೇದಿಸು – ಛಿದ್ರಿಸು, ಭೇದೋಪಾಯವನ್ನು ಬಳಸು

೧೮. ನಿಮತು – ನಿಮ್ಮ; ಸುಗತಿ – ಸದ್ಗತಿ, ಮೋಕ್ಷ

೧೯. ಅವಧ್ಯ – ಕೊಲ್ಲಲಾಗದವನು; ಕೊಳ್ – ಎದುರಿಸಿ ನಿಲ್ಲು

ವ. ಪೊಟ್ರಿಜ್ – ಹೊತ್ತಾರೆ, ಬೆಳಿಗ್ಗೆ; ಅಂತಕಾತ್ಮಜ – ಯಮಸುತ, ಧರ್ಮರಾಯ ಮಕುಟಬದ್ಧ – ರಾಜ; ಪೆಂಕುಳಿಗೊಳ್ – ಹುಚ್ಚೇರು, ಹುಚ್ಚು ಹಿಡಿ; ಅಲ್ಲಳಿಗಾಳೆಗ – ವಿನೋದಯುದ್ಧ; ಅಡಿಗಿಡು – ಹೆಜ್ಜೆ ತಪ್ಪು; ಇಡಿವೋಗು – ಕಿಕ್ಕಿರಿ; ಅಗಿ – ಹೆದರು; ಸುಗಿ – ಬೆದರು

೨೦. ಮೆಯ್ಗಲಿ – ಶೂರ; ಸಮರೈಕಮೇರು – ಯುದ್ಧದಲ್ಲಿ ಮೇರುಪರ್ವತದಂತೆ ಸ್ಥಿರನಾದವನು; ಅಳುರ್ಕೆ – [ಸಾಮರ್ಥ್ಯದ] ವ್ಯಾಪ್ತಿ; ಬಿಣ್ಪೊಱೆ – ಭಾರವಾದ ಹೊರೆ; ಸಿಡುಂಬು – ಮೆಳೆ, ಪೊದರು;

೨೧. ತಿಂತಿಣಿ – ತಿಣಿ+ತಿಣಿ, ಗುಂಪು; ಅಕ್ಕರ – ಅಕ್ಷರ, ಬರಹ; ಕಲ್ಲಿಂ – ಕಲಿಯಿರಿ; ಅಟ್ಟವಣೆಕೋಲ್ – ವ್ಯಾಸಪೀಠ, ಪುಸ್ತಕವಿಡುವ ಪೀಠ; ವೀರಸಿದ್ಧಾಂತ – ಪ್ರತಾಪದ ತತ್ವ; ಪೊತ್ತಗೆ – ಹೊತ್ತಗೆ, ಪುಸ್ತಕ; ಅಮರಾಪಗಾತ್ಮಜ – ದೇವನದಿಯ ಮಗ, ಭೀಷ್ಮ

ವ. ಸ್ವಚ್ಛಂದಮಿಟ್ಯು – ಬೇಕಾದಾಗ ಸಾಯಬಹುದಾದ ಮನಸ್ಸಂಕಲ್ಪವುಳ್ಳವನು, ಇಚ್ಛಾಮರಣಿ; ಬಲಗೊಳ್ – ಪ್ರದಕ್ಷಿಣೆ ಬರು

೨೨. ಮಾರ್ವಲ – ಶತ್ರುಸೈನ್ಯ; ಎನ್ನೊಡವೋಕೆ – ನನ್ನ ಜೊತೆಯಲ್ಲಿಯೇ ಹೋಗಲಿ; ಕಱುಪು – ಅಸಂತೋಷ; ಎಡಂಬಡು – ಅಸಮಾಧಾನ; ಒಡಂಬಡು – ಒಪ್ಪಿಕೊ

ವ. ಪುದುವಾೞ್ – ಕೂಡಿ ಬಾಳು; ಕಳಶಭವ – ದ್ರೋಣ

ಮೊನೆ – ಅಗ್ರಭಾಗ; ಮಾರ್ತಾಂಡ– ಸೂರ್ಯ

ಧಾತ್ರಿ – ಭೂಮಿ; ಸರಲ್ – ಬಾಣ; ಅರ್ಕ – ಸೂರ್ಯ; ಸಂಸಪ್ತಕರ್ – ಶಪಥಮಾಡಿ ಯುದ್ಧಮಾಡುವ ಸುಶರ್ಮ, ಸತ್ಯೇಷು, ಸತ್ಯಕರ್ಮ, ಸತ್ಯದೇವ, ಸತ್ಯರಥ ಎಂಬ ತ್ರಿಗರ್ತರಾಜನ ಐವರು ಮಕ್ಕಳು; ಪೂಣಿಸು – ಶಪಥ ಮಾಡಿಸು

ಪತಾಕಿನಿ – ಸೈನ್ಯ; ಭರದ್ವಾಜ – ದ್ರೋಣ; ಗೆಂಟಿದನ್ – ದೂರದಲ್ಲಿದ್ದಾನೆ; ವನ್ಯಗಂಧದ್ವಿರದ – ಕಾಡಿನ ಮದ್ದಾನೆ; ತಾೞ್ – ತಾಳೆಯ ಮರ; ಬಿಸುಡು – ಬಿಟ್ಟುಬಿಡು; ನರನಂದನ – ಅರ್ಜುನನ ಮಗ, ಅಭಿಮನ್ಯು

೨೩. ಗೊಣೆ – [ಬಿಲ್ಲಿನ] ಹೆದೆ

೨೪. ಬೆಂಕೊಳ್ – ಬೆನ್ನಟ್ಟು; ಕಿಂಕೊಟಿ ಮಾಡು – ಹಿಂಸಿಸು; ಉಱದೆ – ಇರದೆ

ವ. ಕುನ್ನಗ್ಗೈ – ಮುರಿದ ಕೈ; ಕತ್ತರಿಗೊಳ್ – ಕತ್ತರಿಯಂತೆ ಹಿಡಿದುಕೊ

೨೫. ಪ್ರಭೂತ – ಉಂಟಾದ; ಅಭಿಭವಿಸು – ಆಕ್ರಮಿಸು; ಕೆಂಕಮಾಗು – [ಸೂರ್ಯ ಮುಳುಗುವಾಗ] ಕೆಂಪಾಗು

ವ. ಅಳುರ್ – ಸುಟ್ಟು ಹೋಗು

೨೬. ಪಣ್ – ರಚನೆ ಮಾಡು; ಆಟರ್ – ಮೇಲೆ ಬೀಳು; ಸಂಗರ – ಯುದ್ಧ

ವ. ಕೋಪಪಾವಕ – ಕೋಪವೆಂಬ ಬೆಂಕಿ; ಉತ್ಪಾತ ಮಾರುತ – ಪ್ರಳಯಕಾಲದ ಬಿರುಗಾಳಿ; ಉತ್ಸೇಧ – ಎತ್ತರ

೨೭. ರಸೆ – ಭೂಮಿ, ಪಾತಾಳ; ಅಜ – ಬ್ರಹ್ಮ; ಗುಂಡಿಗೆ – ಕಮಂಡಲು, ಎದೆ
ವ. ತೊವಲ್ – ಚಿಗುರು [ಚಿಗುರು ಹಿಡಿಯುವುದು ಶರಣಾಗತಿಯ ಸೂಚಕ]
೨೮. ಬೀಡು – ಪಾಳೆಯ
ವ. ಪರಿಧಾನ – ಹೊದಿಕೆ; ತ್ರಿಣೇತ್ರ – ಶಿವ; ಮಧುಮಥನ – ಶ್ರೀಕೃಷ್ಣ; ಮುಷ್ಟಿ – ಮಂತ್ರ [?]; ಮಹೇಶ್ವರಜ್ವರ – ಶಿವನ ಹಣೆಗಣ್ಣಿನಿಂದ ಉಂಟಾದ ತಾಪ; ಒಂದೊರ್ವರ್ – ಒಬ್ಬರೊಬ್ಬರು
೨೯. ಅಂಬೆತ್ತು – ಬಾಣವನ್ನು ಮೇಲೆತ್ತು [ಸವಾಲೆಸೆಯುವುದು]; ರೋದೋವಿವರ – ಆಕಾಶ ಪ್ರದೇಶ
ವ. ರಣಗಟ್ಟಿಲೆ – ಯುದ್ಧದ ಕತ್ತಲೆ; ನೇಸಱ್ ಪಡು – ಸೂರ್ಯ ಮುಳುಗು; ಜ್ವಳನಾಸ್ತ್ರ – ಆಗ್ನೇಯಾಸ್ತ್ರ; ಅಸುಂಗೊಳ್ – ಪ್ರಾಣ ತೆಗೆ
೩೦. ಎಡೆಮಡಗು – ಅವಕಾಶ ನೀಡು; ವಿಯತ್ತಳ – ಆಕಾಶ; ಎಳೆ – ಇಳೆ, ಭೂಮಿ; ಪಿಡುಗು – ಒಡೆ
೩೧. ತೆಗೆ ನೆಱೆ – [ಕಿವಿಯವರೆಗೂ] ಪೂರ್ತಿ ಎಳೆ; ಅಗಿ – ಹೆದರು
ವ. ಕುಂಭಸಂಭವ – ಅಗಸ್ತ್ಯ; ಅಳುರ್ – ವ್ಯಾಪಿಸು; ಅಳ್ಳೆವಿಳ್ಳೆಯಾಗು – ಜರ್ಜರಿತವಾಗು; ನಿಶಾಚರಬಲ – ರಾಕ್ಷಸರ ಸೈನ್ಯ; ತೆರಳ್ಚು – ಒಗ್ಗೂಡಿಸು; ತೇರಯಿಸು – ಹಾಹಾಕಾರ ಮಾಡು; ಜೀರಗೆಯೊಕ್ಕಲ್ಮಾಡು – ಜೀರಿಗೆಯನ್ನು ಒಕ್ಕಣೆ ಮಾಡುವ ಹಾಗೆ ಸದೆ
೩೨. ಕುಲಿಶಾಯುಧ – ಸಿಡಿಲಿನ ಆಯುಧದವನು, ಇಂದ್ರ; ಉರಸ್ಥಲ – ಎದೆಯ ಪ್ರದೇಶ; ಇಡು – ಹೊಡೆ
೩೩. ಪಾರ್ಥಾತ್ಮಜ – ಅರ್ಜುನನ ಮಗ, ಅಭಿಮನ್ಯು; ತಾಪು – ತಾಗು; ಕೆಲ್ಲಂಬು – ಈಟಿಯಂತಹ ಬಾಣ; ಏಸು – ಹೊಡೆತ
ವ. ಉಮ್ಮಚ್ಚ – ಕೋಪ; ಪೂಣ್ಗೂರ್ – ಚಲ ತೊಡು [?]; ಕೆಯ್ಗೆಮಾಡು – ವಶಪಡಿಸಿಕೊ; ಸಿಂಧುರಾರಾತಿ – ಸಿಂಧುರ+ಆರಾತಿ, ಆನೆಯ ವೈರಿಯಾದ ಸಿಂಹ
೩೪. ಸಾಮಜ – ಆನೆ; ನಾಮದಿಂದೆ – ಹೆಸರಿನಿಂದ; ಹತೋಶ್ವತ್ಥಾಮಾ – ಅಶ್ವತ್ಥಾಮ ಹತನಾದ [ಆಯಿತು]; ಗೆತ್ತು – [√ಗೆಱು] ಭಾವಿಸಿ; ಒಣರ್ – ಚಿಂತಿಸು; ಇಭ – ಆನೆ
೩೫. ಆವಗೆ – ಕುಂಬಾರನು ಮಡಕೆ ಸುಡುವ ಒಲೆ; ಅಶ್ರುಜಲಾರ್ದ್ರಗಂಡಂ – ಕಣ್ಣೀರಿನಿಂದ ತೊಯ್ದ ಕೆನ್ನೆಯುಳ್ಳವನು; ಗಂಡು – ಪೌರುಷ
ವ. ವಿಚ್ಛಿನ್ನ – ಕತ್ತರಿಸಿದ, ಸೋರಿಹೋದ; ಬಿಲ್ಲೊವಜ – ಧನುರ್ವಿದ್ಯಾ ಗುರು; ಉದಾತ್ತಯೋಗ – ಉತ್ಕೃಷ್ಟವಾದ ಯೋಗ ಸಮಾಧಿ
೩೬. ಒಱೆ – ಸೋರು; ಅಪಾಂಡವ – ಪಾಂಡವರಿಲ್ಲದ ಹಾಗೆ; ಬಿಲ್ಲೆಱೆಯ – ಧನುರ್ವಿದ್ಯೆಗೆ ಒಡೆಯನಾದ [ಗುರುವಾದ] ದ್ರೋಣ
ವ. ಉರುಳಿ – ಉಂಡೆ; ನಳಿನೀಜೀವಿತೇಶ್ವರ – ಸೂರ್ಯ

೩೭. ಕೂರ್ – ಪ್ರೀತಿಸು; ಘಟಸಂಭವ – ದ್ರೋಣ; ಎನತು – ನನ್ನದು; ಒಡನೀಗು – ಜೊತೆಯಲ್ಲಿ ಹೋಗಲಾಡಿಸು

೩೮. ರಾಯ – ರಾಜ, ಕ್ಷತ್ರಿಯ; ಮುಯ್ಯೇೞು – ಇಪ್ಪತ್ತೊಂದು; ಕಟ್ಟಾಯ – ಕಡಿದು ಆಯ, ತೀವ್ರವಾದ ಪರಾಕ್ರಮ; ಭಾರ್ಗವ – ಪರಶುರಾಮ; ಆಯುಃಪಾರ – ಆಯುಸ್ಸಿನ ಕೊನೆ; ಪರ್ದು – ಹದ್ದು, ಬಿರ್ದಿಕ್ಕು – ಔತಣ ಮಾಡಿಸು

ವ. ಶಾರದ್ವತ – ಶಲ್ಯ

೩೯. ಫಣಿಧ್ವಜ – ದುರ್ಯೋಧನ; ವೃಷಧ್ವಜ – ಶಿವ; ತಲೆಮಡು – ಎದುರಾಗು

೪೦. ಅಗಿ – ಹೆದರು; ಒಳ್ಳೆ – ಕೇರೆ ಹಾವು; ಕೆಯ್ದು – ಆಯುಧ; ಪಡಿಚಂದ – ಪ್ರತಿಕೃತಿ; ಗಂಡುವಾತು – ಪೌರುಷದ ಮಾತು

ವ. ಮೀಂಗುಲಿಗ – ಬೆಸ್ತ; ಬಾಳ್ – ಕತ್ತಿ

೪೧. ಬಳವ್ಯಸನ – ಸೈನ್ಯದ [ಒಳ] ಜಗಳ; ಮಾರ್ವಲ – ಶತ್ರು ಸೈನ್ಯ

ವ. ಅವಧಾರಿಸು – ತಾಳಿಕೊ

೪೨. ಕೈವಾರ – ಹೊಗಳಿಕೆ; ಅೞ್ಕಾಡು – ನಾಶವಾಗು; ಚಾಪ – ಶಸ್ತ್ರ

ವ. ಪುರುಷಕಾರ – ಪೌರುಷ ಪ್ರಯತ್ನ; ಮಂತ್ರಶಾಲೆ – ಸಮಾಲೋಚನ ಕೋಣೆ

೪೩. ಸುರುಳ್ – ಸಂಕೋಚಗೊಳ್ಳು; ಪಟ್ಟನೆ ಪಾಱಿಸು – ಫಟ್ ಎಂದು ಹಾರಿಸು

ವ. ದರ್ಭಾಸ್ತರಣ – ದರ್ಭೆ ಹುಲ್ಲಿನ ಚಾಪೆ; ಅದಿತಿಪ್ರಿಯಪುತ್ರ – ಸೂರ್ಯ; ತದೀಯ – ಅವನ

೪೪. ಏಳಿಸು – ತಿರಸ್ಕರಿಸು; ಎರೆ – ಬೇಡಿಕೊ

೪೫. ಮದಾಯ – ನನ್ನ ದರ್ಶನ [ಲಾಭ]; ಅಮೋಘ – ವ್ಯರ್ಥವಲ್ಲದ್ದು; ಒವಜ – ಗುರು

ವ. ಪಸುಗೆ – ವಿವೇಕ; ಮನದೆಗೊಳ್ – ಮನಸ್ಸಿನಲ್ಲಿ ಮೆಚ್ಚು; ಎಂಬುಕೆಯ್ – ಹೇಳಿದ್ದನ್ನು ಮಾಡು

೪೬. ಪೊಡರ್ಪು – ಪರಾಕ್ರಮ; ಉಪಸಂಹಾರಿಸು – ಕೊನೆಗೊಳಿಸು; ನಾರಾಚ – ಬಾಣ

ವ. ಪುಣ್ಗೊಳ್ – ಗಾಯವನ್ನು ಹೊಂದು; ಸವ್ಯ – ಎಡದಿಂದ ಬಲಕ್ಕೆ; ಅಪಸವ್ಯ – ಬಲದಿಂದ ಎಡಕ್ಕೆ; ಭ್ರಾಂತ – ತಿರುಗುವ; ಉದ್ಭ್ರಾಂತ – ಮೇಲೆ ಗಿರ್ರೆಂದು ಹಾರುವ; ರಥಕಲ್ಪ – ರಥಚೋದನಾ ವಿದ್ಯೆ; ಪತಂಗಮಂಡಲ – ಸೂರ್ಯಮಂಡಲ

೪೭. ವಿಸಸನ – ಯುದ್ಧ

೪೮. ಪಂದೆ – ಹೇಡಿ; ತಕ್ಕ – ಯೋಗ್ಯ; ಪೊಲೆಯ – ಕೀಳು; ಓಲಗಿಸು – ಸೇವೆ ಮಾಡು

೪೯. ಋತವಾಕ್ಯ – ನೇರ ಮಾತು; ಪೆಂಪು – ಹಿರಿಮೆ; ಸಂಜನಿತ – ಹುಟ್ಟಿದ; ಆಳ್ – ಹೊಂದು; ಕಿಡಿಸು – ಹೋಗಲಾಡಿಸು

೫೦. ಕಡಂಗು – ಉತ್ಸಾಹಿಸು; ಅಂಬಿಗ – ಬೆಸ್ತ; ತುಱುಕಾಱ – ದನ ಕಾಯುವವನು;

ಮತ್ಸ್ಯಂದನ ಚೋದನಕ್ರಮ – [ಮತ್+ಸ್ಯಂದನ] ನನ್ನ ರಥ ನಡೆಸುವ ರೀತಿ; ಅಮರ್ದಿರ್ಕುರ್ – ಅಮರ್ದುರ್+ಇರ್ಕುರ್, ಒಪ್ಪುತ್ತದೆ; ಇದಂ – ಇಂಥ ಅದೃಷ್ಟವನ್ನು

೫೧. ಪ್ರಣತಾರಿ – ವಿಧೇಯರಾದ ಶತ್ರುಗಳುಳ್ಳವನು; ಒಡವುಟ್ಟು – ಜೊತೆಯಲ್ಲಿ ಹುಟ್ಟು, ಸಹಜ

ವ. ಹೃಚ್ಛಲ್ಯ – ಹೃತ್+ಶಲ್ಯ, ಎದೆಗೆ ನಾಟಿದ ಮುಳ್ಳು; ಕಟಿಲ್ – ಸಡಿಲವಾಗು, ಕಳಚಿ ಹೋಗು

೫೨. ಒಂದೆ ಗಡ – ಒಂದೇ ವಿಷಯ; ಓಜೆ – ರೀತಿ, ಕ್ರಮ; ಎಸಗು – ಮಾಡು, ಅನುಸರಿಸು ಮತ್ತು ಚೋದಿಸು

ವ. ಮೂಗುದುಱಿಸು – ಮೂಗನ್ನು ಕೆರೆ, ಸಹಕರಿಸು; ಕಡ್ಡ – ದ್ವೇಷ; ಒಡಂಬಡು – ಹೊಂದಿಕೆ; ರಿಪುಕುರಂಗಕಂಠೀರವ – ಶತ್ರುವೆಂಬ ಜಿಂಕೆಗೆ ಸಿಂಹದಂತಿರುವವನು; ಕಿಱಿವೀಟ್ – ತಪ್ಪಿಸಿಕೊ; ತಳ – ಅಂಗೈ; ಪಿಟಿ – ಹಿಂಡು

೫೩. ಏಂ ಮೊಗ್ಗೇ – ಏನು ಸಾಧ್ಯವೇ? ತಪೋನಿಯೋಗ – ತಪಸ್ಸಿನ ಕಾರ್ಯ

ವ. ಏವೈಸು – ಕೋಪಿಸಿಕೊ; ಭವತ್ಪಾದಾಬ್ಜ – ತಮ್ಮ ಪಾದಕಮಲ; ಪೂರಿಸು – ಊದು; ನೆರವಿವಡೆ – ಪ್ರೇಕ್ಷಕಸಮೂಹವನ್ನು ಹೊಂದು; ಪವನತನಯ – ಭೀಮ; ಅಟಿಲ್ – ದುಃಖ; ಕೆಡೆ – ಬೀಲು; ಎಡೆಗಲಿಸು – ದಾಟು

೫೪. ಕೃಷ್ಣೆ – ದ್ರೌಪದಿ; ಪಂಬಲ್ – ಹಂಬಲ, ಆಸೆ; ತೋಳ್ವಲೆ – ತೋಳುಗಳ ಬಲೆ

ವ. ಅಂಬು ತಪ್ಪು – ಬಾಣಗಳು ಮುಗಿದುಹೋಗು; ಸೂಟೀಸು – ಪ್ರತಿ ಬಾರಿಯ ಹೊಡೆತ; ಮುಡಿ – [ತುರುಬು] ಕಟ್ಟು; ನೆಱಿ – ಸಾಕಾಗು

೫೫. ತಿಣ್ಣಮಿಡು – ತೀಕ್ಷ್ಣವಾಗಿ ಹೊಡೆ

೫೬. ಬಳೆ – [ಗಂಟಲ] ಬಳೆ; ಮಾರ್ಕೊಳ್ – ಪ್ರತಿಭಟಿಸು, ಅಡ್ಡಿಮಾಡು; ಕಣ್ಣ ಮಿಡುಕೈ – ಕಣ್ಣು ಮಿಟುಕಿಸುವುದಿಲ್ಲ; ಪಿಂಗಾಕ್ಷ – ಕೆಂಪಾದ ಕಣ್ಣುಗಳವನು, ದುರ್ಯೋಧನ; ಉಳನೆ – [ಸೈನ್ಯದ] ಒಳಗಡೆಯೇ; ಪಳಂಚು – ಪ್ರತಿಭಟಿಸು; ಅಲ್ಬು – ಗರ್ಜಿಸು

ವ. ಮಿಟ್ಟೆಂದು ಮಿಡುಕು – ಮಿಟ್ಟೆಂದು ಅಲುಗಾಡು

೫೭. ಒತ್ತು – ಒತ್ತಡ; ಪೋತರ್ – ಹೊರಕ್ಕೆ ಹೊರಡು; ದ್ಯೋತ – ಪ್ರಕಾಶಿಸು; ಪುಡಿ – ಮಣ್ಣ ಹುಡಿ; ಕಣ್ಣಾರ್ – ಕಣ್ಣು ತುಂಬು

ವ. ನೆಱಪು – ಪೂರೈಸು; ಸುರಿಗೆ – ಕಿರುಗತ್ತಿ; ಬೆಲಗಸೆ – ಬೊಗಸೆ

೫೮. ಪಂದಲೆ – ಹಸಿಯ ತಲೆ; ಪಣಿಗೆ – ಬಾಚಣಿಗೆ; ಪೊದಳ್ – ತುಂಬು, ಹಬ್ಬು; ಒಸಗೆ – ಸಂತೋಷ; ಬಾಸಿಗ – ಹೂದಂಡೆ

ವ. ಬಗೆ – ಮನೋರಥ; ಮುಡಿ – ನೆರವೇರು; ಅಂತ್ರ – ಕರುಳ

೫೯. ಶ್ವೇತಾತಪತ್ರ – ಬೆಳ್ಗೊಡೆ; ರಾಜಚಕ್ರ – ರಾಜಸಮೂಹ; ಅಟ್ಟಾಡು – ನಾಶವಾಗು; ಅಡಂಗು – ಮರೆಯಾಗು; ಅಗುರ್ವು – ಅತಿಶಯತೆ; ಉರ್ವು – ಹೆಚ್ಚಾಗು; ಭವತ್ – ನಿನ್ನ; ಕೇಶಪಾಶಪ್ರಪಂಚ – ಕೂದಲ ವಿಸ್ತಾರ

ವ. ಪಿಡಿ – ಹೆಣ್ಣಾನೆ; ಮುರಾಂತಕ – ಶ್ರೀಕೃಷ್ಣ

೬೦. ಶರಕಲ್ಪ – ಬಾಣವಿದ್ಯೆ; ಅಗ್ಗಳ – ಅತಿಶಯ, ಮೀರಿದುದು; ಕಪಿಕೇತನ – ಅರ್ಜುನ

೬೧. ಉರ್ಚಿಕೊಳ್ – ಸೆಳೆದುಕೊ; ಶರಾಸನ – ಬಿಲ್ಲು; ಕಂದರಸಂಧಿ – ಕೊರಳ ಕೀಲು; ಶಿರಸ್ಸರೋರುಹ – ತಲೆಯೆಂಬ ತಾವರೆ; ಉಚ್ಚಳಿಸು – ಮೇಲಕ್ಕೆ ನೆಗೆ

ವ. ಅಂತಕ – ಯಮ; ಅಣಲ್ – ಗಂಟಲು; ಅಡಸು – ತುರುಕು

೬೨. ಸೈರಿಸದಂ – ಸಹಿಸದವನು; ಮಾಣ್ಬಾ – ಸುಮ್ಮನಿರುವೆಯಾ

೬೩. ಕಿಡಲಾಗು – ನಾಶವಾಗುವುದಕ್ಕೇ ಹುಟ್ಟು; ಬಲ್ವಿಡಿವಿಡಿ – ಬಲ್+ಪಿಡಿ+ಪಿಡಿ, ಬಲವಾದ ಮುಷ್ಟಿಯಿಂದ ಹಿಡಿ; ಅಟಿವಡೆಮಾತು – ಹೀನವಾದ ಮಾತು

೬೪. ತಂದಲ್ – ಧಾರೆ; ಬೆಳ್ಸರಿ – ಬಿಳಿಯ ಮಳೆ

೬೫. ಅಟ್ಟು – ಆಕ್ರಮಿಸು; ತೆರಳ್ಚು – ಓಡಿಸು; ಒರಸು – ಉಜ್ಜು; ಅಜಾಂಡ – ಬ್ರಹ್ಮಾಂಡ; ಅಂತು – ಕೊನೆ; ಅರ್ವಿಸು – ಸುಡು

ವ. ಏಂ ತೀರ್ – ಏನು ಸಾಧ್ಯವಾಗುತ್ತದೆ; ಸಾಧ್ಯಂ ಮಾಡು – ಸಾಧಿಸು, ಗೆಲ್ಲು; ನುಡಿವಳಿ – ಭಾಷೆ; ಪುರಿಗಣೆ – ದಿವ್ಯಾಸ್ತ್ರ

೬೬. ವಿಸ್ಫುಲಿಂಗ – ಕೆಂಡ; ಪಿಂಗಳಿತ – ಕಂದು ಬಣ್ಣದ; ಆಭೋಗ – ವಿಸ್ತಾರ

೬೭. ಆಕರ್ಣಾಂತಂ ತೆಗೆ ನೆಜೆ – ಕಿವಿಯವರೆಗೂ ಬಾಣವನ್ನು ಸೆಳೆ; ಉಡುಗುಡುಗು – ತಡೆ ತಡೆ; ಇಸಲ್ – ಪ್ರಯೋಗಿಸಬೇಡ; ತುಡುವಾ – ಹೂಡುತ್ತೀಯಾ?

೬೮. ತೊದಳ್ – ಸುಳ್ಳು

ವ. ಅವಧಾರಿಸು – ಕೇಳು

೬೯. ಪಾಂಗು – ರೀತಿ; ಶಕ್ರಪುತ್ರ – ಇಂದ್ರನ ಮಗ, ಅರ್ಜುನ; ತಾಯೆಂದೆ – ತಾಯಿ ಎಂದು ಹೇಳಿಕೊಂಡು; ಮಾಣ್ದಿರ್ – ಬಿಟ್ಟುಬಿಡು; ಬನ್ನ – ನಾಶ

೭೦. ಅಣಂ – ಸ್ವಲ್ಪವೂ; ತೊಟ್ಟಂಬು – ಹೂಡಿದ ಬಾಣ; ಉಗಿ – ಕೀಳು

೭೧. ಎಱಪು – ಎರಗು, ಅಪ್ಪಳಿಸು; ಎಣ್ಬೆರಲ್ – ಎಂಟು ಬೆರಳಷ್ಟು

೭೨. ಕೊಱೆ – ಕತ್ತರಿಸು

ವ. ರುಂದ್ರ – ವಿಸ್ತಾರವಾದ; ರತ್ನಕೂಟಾಗ್ರ – ರತ್ನಮಯವಾದ ಶಿಖರದ ತುದಿ; ವಜ್ರಾಘಾತ – ಸಿಡಿಲಿನ ಹೊಡೆತ ಅಥವಾ ಇಂದ್ರಾಯುಧದ ಹೊಡೆತ; ಶಾತಶರ – ಹರಿತವಾದ ಬಾಣ; ಅಳಿನೀಳೋಜ್ವಳ – ದುಂಬಿಯಂತೆ ಹೊಳೆಯುವ ಕಪ್ಪು ಬಣ್ಣದ; ಪರಕಲಿಸು – ಕೆದರು; ಪೊಱಮುಯ್ – ಹೆಗಲ ಹೊರಭಾಗ; ಅಳ್ಳಿಜೆ – ಉಜ್ಜಿಕೊಂಡು ಹೋಗು; ಪಚ್ಚು ಗಂಟಿಕ್ಕು – ಎರಡು ಭಾಗ ಗಂಟು ಹಾಕು; ಗಾಂಡೀವಧನ್ವ – ಗಾಂಡೀವವನ್ನು ಹಿಡಿದ ಅರ್ಜುನ

೭೩. ಪಲ್ಮೊರೆ – ಹಲ್ಲು ಕಡಿ; ಅಹಿರೂಪ – ಹಾವಿನ ರೂಪ; ಅಂತರಿಸು – [ಬಾಣಗಳ] ನಡುವೆ ಇಡು

೭೪. ನೆರ – ಸಹಾಯ; ಅರಿಯನೆ – ಅಸಾಧ್ಯನೇ

೭೫. ಆರ್ಪೊಡೆ – ಸಮರ್ಥನಾದರೆ; ನೆಱಪು – ಪೂರ್ಣಗೊಳಿಸು; ಪನ್ನತ –

ಶೂರ; ಕುಱಿದಱಿದಱಿ – ಕುರಿಯನ್ನು ಕತ್ತರಿಸುವಂತೆ ಕತ್ತರಿಸು

ವ. ಏಕಗ್ರಾಹಿ – ಒಂದೇ ಪಟ್ಟು ಹಿಡಿಯುವವನು; ಒರಂಟ – ಒರಟ

೭೬. ಬಟ್ಟಿನಂಬು – ದುಂಡು ಮೊನೆಯ ಬಾಣ; ತುರಿಪ – ವೇಗ; ಕಡುಕೆಯ್ – ತೀವ್ರವಾಗಿ; ಧಾತ್ರಿ – ಭೂಮಿ

ವ. ಒಲ್ಲಣಿಗೆ – ಒದ್ದೆ ಬಟ್ಟೆ; ಕೊಕ್ಕರಿಸು – ಹೇಸಿಕೆಪಡು

೭೭. ಬಱುವಂ – ಬರಿ[ಗೈ]ಯಾದವನು; ಮಱಿ – ಕವಚ; ಕೂರ್ಮೆ – ಪ್ರೀತಿ; ಭೂಧರ – ಶ್ರೀಕೃಷ್ಣ

೭೮. ನಿಜಾಗ್ರಜಾತ – ನಿನ್ನ ಅಣ್ಣ; ಸುಗಿ – ಹೆದರು; ಸೆಡೆ – ಭಯಪಡು; ಚಕ್ರನಿಘಾತ – [ಸುದರ್ಶನ] ಚಕ್ರದ ಏಟು; ಪಡಿಚಂದ – ಮಾದರಿ

ವ. ನಿಟ್ಟಾಲಿ – ನೀಳ ನೋಟ; ಧ್ವಾಂಕ್ಷಧ್ವಜ – ಕಾಕಧ್ವಜ; ಉಡಿ – ಮುರಿ

೮೦. ಪೞಯಿಗೆ – ಧ್ವಜ; ಅೞ್ದು – ನಾಟಿಕೊ; ಅಲ್ಲಱಿವೋಗು – ಹೊರಬರು; ಅವಗಱಿಯಿಸು – ಅಧಿಕವಾಗು

ವ. ನಿಶಿತವಿಕರ್ಣ – ಹರಿತವಾದ ಬಾಣ; ಅಸುರಾಂತಕ – ಶ್ರೀಕೃಷ್ಣ; ಕೞಿ – ಸಾಯು

೮೧. ಕಸೆ – ಚಾವಟಿ; ಅಭಿಮಂತ್ರಿಸು – ಮಂತ್ರಹಾಕು; ಬಾರಿಸು – ತಡೆ

೮೨. ವಿಧಿ – ಯಥಾಕ್ರಮ; ಉರ್ವರೆ – ಭೂಮಿ; ಪಿಡುಗು – ಸಿಡಿ; ಕದನತ್ರಿಣೇತ್ರ – ಯುದ್ಧದಲ್ಲಿ ರುದ್ರ

೮೩. ಶಿಖಿಶಿಖಾನೀಕ – ಬೆಂಕಿಯು ಜ್ವಾಲೆಗಳ ಸಮೂಹ; ಔರ್ವಜ್ವಳನ – ಬಾಡಬಾಗ್ನಿ; ಆಟರ್ – ಮೇಲೆ ಹಾಯಿ; ಅಳರು – ವ್ಯಾಪಿಸು; ಉತ್ತಮಾಂಗ – ಶಿರಸ್ಸು

೮೪. ಒಡಂಬಡಂ ಪಡೆ – ಒಪ್ಪುವುದಾಗು, ಹೊಂದಿಕೊ; ತೇಜೋರೂಪ – ತೇಜಸ್ಸಿನ ರೂಪ

೮೫. ಎರಟ್ನುಡಿ – ಎರಡು ಮಾತಾಡು, ಮಾತಿಗೆ ತಪ್ಪು; ಅೞಿ – ಕೊಂದುಕೊ; ಗಡಣ – ಗುಂಪು

೮೬. ದೊರೆ – ಸಮಾನ; ಏಱು – ಕಾಳಗ; ಕಡುನನ್ನಿ – ತೀವ್ರ ಸತ್ಯವಂತಿಕೆ; ಅಂಕ – ಹೆಸರುವಾಸಿ; ಪಡೆಮಾತು – ವೃತ್ತಾಂತ, ಗಾದೆಮಾತು; ಪುದಿ – ತುಂಬು

ವ. ಬೞಿವೞಿ – ಬೞಿ+ಬೞಿ, ದಾರಿ; ಮೈಯಱಿಯದೆ – ಎಚ್ಚರವಿಲ್ಲದೆ, ಪ್ರಜ್ಞೆತಪ್ಪಿ; ನಾಡಾಡಿ – ಸಾಧಾರಣ; ಉಪನೀತ – ತರಲ್ಪಟ್ಟ; ಪರಿಷೇಕ – ಚಿಮುಕಿಸುವಿಕೆ; ಕರೆಗಣ್ಮು – ಉಕ್ಕೇರು

೮೭. ನಾಣಿಲಿ – ನಾಚಿಕೆಯಿಲ್ಲದ

ವ. ಬಾಯಱಿ – ಅತ್ತು ಆಯಾಸಪಡು

೮೮. ಅವಗಡ – ಮೋಸ

ವ. ಪಿತೃದ್ವಂದ್ವ – ತಾಯ್ತಂದೆಯರು; ಕಱುತ್ತು – ರೋಷಗೊಳ್ಳು; ಅನುಬಲ – ಬೆಂಬಲ

೮೯. ದೋಷ – ತಪ್ಪು; ಒಂದೆ – ಒಂದು ಮಾತು; ಪುದುವಾೞ್ – ಕೂಡಿ ಬಾಳು
೯೦. ಸೀಳ್ದೊಟ್ಟು – ಸೀಳಿ ರಾಶಿ ಹಾಕು; ವಿಸ್ಫುರಿತ – ಉರಿಯುವ
೯೧. ನೆರವೊಳೆಂ – ನೆರವು+ಒಳೆಂ, ಸಹಾಯಕ್ಕಿದ್ದೇವೆ; ಎಱಗು – ಬಾಗು, ಒಲಿ; ಉಱುಗುಂ – ಇರುತ್ತದೆ, [ಸಂಧಿಮಾಡುವ ಪಕ್ಷದಲ್ಲಿ ಅರ್ಜುನನ ಸಮ್ಮತಿ]ಯಿರುತ್ತದೆ
೯೨. ಪಟಿವಾಡ – ಕುಗ್ರಾಮ; ಗಟಿಯಿಸು – ಘಟಿಸು, ಮಾಡು
ವ. ಜಳಧರಧ್ವನಿ – ಗುಡುಗು
೯೩. ಋಣಸಂಬಂಧ – ಕರ್ಮಾಯತ್ತ; ಬೆಸಸು – ಅಪ್ಪಣೆ ಕೊಡು; ತವೆ – [√ತವು] ನಾಶವಾಗುವಂತೆ
ವ. ಪಟಿ – ಹಳಿ, ನಿಂದಿಸು; ಕೊಲ್ವನಿತುವರಂ – ಕೊಲ್ಲುವಷ್ಟರ ಮಟ್ಟಿಗೆ
೯೪. ತ್ರಿಭುವನ ರಾಜ್ಯೋನ್ನತಿ – ಮೂರು ಲೋಕಗಳ ಆಧಿಪತ್ಯದ ಆಧಿಕ್ಯ
ವ. ಕಲಿಕೆ – ಚಾತುರ್ಯ; ಪತಾಕಿನಿ – ಸೈನ್ಯ
೯೫. ಮುಳಿಯಿಸು – ಕೋಪ ಬರಿಸು; ಕಂತು – ಮನ್ಮಥ; ವಿಲೋಚನಪಾವಕ – ಕಣ್ಣ ಬೆಂಕಿ
ವ. ಭಸ್ಮೀಭೂತ – ಬೂದಿಯಾದ; ಅಹಿಕೇತನ – ದುರ್ಯೋಧನ; ಅಶನಿ – ವಜ್ರಾಯುಧ; ದಕ್ಷಿಣ – ಬಲಭಾಗದ; ಕಾಲವಂಚನೆಗೆಯ್ – ಕಾಲವನ್ನು ನೂಕು; ನೆಣ – ಕೊಬ್ಬು; ಅಡಗು – ಮಾಂಸ; ಇಡುವು – ಒಟ್ಟಿಲು, ರಾಶಿ
೯೬. ಸಮಸಲ್ – ಸಮನಾಗಿ ಸೇರು; ಸುಹೃದ್ಬಲ – ಮಿತ್ರಸೈನ್ಯ; ಜಾತಿ ಬೆಳ್ – ಹುಟ್ಟು ದಡ್ಡ; ಏಡಿಸು – ಹೀಯಾಳಿಸು
೯೭. ಕೊಳ್ಗುಳ – ಯುದ್ಧರಂಗ; ಮರುಳಾಟ – ಹುಚ್ಚಾಟ; ಪುಲ್ಮರುಳ್ – ಹುಲು ಪಿಶಾಚಿ; ತಗೆ – ಅಡ್ಡಗಟ್ಟು
ವ. ಕೆಯ್ತ – ಮಾಡಿದುದು, ಕೆಲಸ; ವಿಧಾತ್ರ – ಬ್ರಹ್ಮ; ವಿಲುಳಿತ – ತಿರುಗಿದ; ಕೌಕ್ಷೇಯಕ – ಕತ್ತಿ; ವಿದಾರಿತ – ಸೀಳಿದ; ಶರಾಚಾರ್ಯ – ದ್ರೋಣ
೯೮. ಸುಗಿ – ಹೆದರು; ಅಯೋನಿಸಂಭವ – ಎಲ್ಲರಂತೆ ಹುಟ್ಟು ಪಡೆಯದವನು; ದೂಸಱ್ – ಕಾರಣ
ವ. ಅಗಲೆ ಮೆಟ್ಟು – ದೂರ ಹೋಗುವಂತೆ ಕಾಲನ್ನಪ್ಪಳಿಸಿ ಸದ್ದು ಮಾಡಿ; ಬಳ್ಳು – ಗುಳ್ಳೆನರಿ; ನರವು – ನರಿ; ಬರಿ – ಪಕ್ಕೆ; ಪೆಡಸಾಱ್ – ಹಿಂದೆ ಸರಿ; ಸೋ – ಓಡಿಸು
೯೯. ಕೊಂದನ – ಕೊಂದವನ [ಭೀಮನ]
ವ. ವಿಪ್ರಳಾಪ – ವಿಶೇಷ ರೋದನ; ವಿಶೀರ್ಣ – ಜರ್ಜರಿತ; ಕರ್ಣಸೂನು – ಕರ್ಣನ ಮಗ; ಕೆಯ್ಮಿಗು – ಮಿತಿ ಮೀರು
೧೦೦. ಇನಾತ್ಮಜಾತ – ಇನ+ಆತ್ಮಜಾತ, ಸೂರ್ಯಪುತ್ರ, ಕರ್ಣ; ತಕ್ಕೂರ್ಮೆ – ತಕ್ಕು+ಊರ್ಮೆ, ಅಧಿಕ ಯೋಗ್ಯತೆ; ದ್ವಿಷದ್ಬಲ – ಶತ್ರುಸೈನ್ಯ; ಚೈತಾಗ್ನಿ – ಚಿತೆಯ ಬೆಂಕಿ

೧೦೧. ಕಿರ್ಚಂ ಕೊಡು – [ಸಂಸ್ಕಾರ ಮಾಡಲು] ಬೆಂಕಿಯಿಡು; ನೀರ್ಗುಡು – ತರ್ಪಣ ಬಿಡು; ತತ್ಪಿಶಿತ – ತತ್+ಪಿಶಿತ, ಅವರ ಮಾಂಸ

ವ. ಕರ್ಣೋಪಾಂತ – ಕಿವಿಯ ಬಳಿ; ಒತ್ತಂಬ – ಬಲವಂತ; ಪ್ರತಿಕೂಲ – ವಿರೋಧ; ಅನಿವಾರಿತ – ನಿವಾರಿಸಲಾಗದ್ದು

೧೦೨. ಘಟಪ್ರೋದ್ಭೂತ – ಕುಂಭಸಂಭವ, ದ್ರೋಣ; ವಾಸರನಾಥಾತ್ಮಜ – ದಿನನಾಥನಾದ ಸೂರ್ಯನ ಪುತ್ರ, ಕರ್ಣ

೧೦೩. ಬಿಡಿಂ ಎನ್ನ ನುಡಿಗೆ – ನನ್ನನ್ನು ನನ್ನ ಮಾತಿಗೆ [ಪಾಡಿಗೆ] ಬಿಟ್ಟು ಬಿಡಿ; ತನ್ನಪ್ಪುದಕ್ಕೆ – ತಾನಾಗುವುದಾಗಲಿ

ವ. ಅವಸರ – ಸಮಯ; ಪರ್ಚಿ ಪೇಟಿ – ಪಿಸುಗುಟ್ಟು

೧೦೪. ಕಾಳಾಂಭೋಧರಚ್ಛಾಯೆ – [ಭಯಂಕರವಾದ] ಪ್ರಳಯಕಾಲದ ಮೋಡಗಳ ನೆರಳು; ಕಾಚಮೇಚಕಚಯಚ್ಛಾಯಾಂಬು – ಕಾಚದಂತೆ ಕಪ್ಪು ನೀಲಿ ಮಿಶ್ರಿತ ಬಣ್ಣ; ಗುಣ್ಪು – ಆಳ; ರಾವಾಕುಳ – ಶಬ್ದದ ಮೊರೆತ

ವ. ಪುಂಡರೀಕಷಂಡ – ಸರೋವರ; ಉಪಾಂತ – ಹತ್ತಿರ; ಆಚಮಿಸು – ಆಚಮನ ಮಾಡು; ಚಳಿತು – ಪ್ರಭಾವಹೀನವಾಗಿ, ದಣಿದು; ತೀವ್ರದೀಧಿತಿ – ಸೂರ್ಯ; ಕೊಳುಗುಳ – ಯುದ್ಧರಂಗ

೧೦೫. ಹಳಿ – ಬಲರಾಮ; ಅಂಧರಾಣ್ಣಂದನ – ಕುರುಡ ರಾಜನ ಮಗ, ದುರ್ಯೋಧನ; ತಲೆಯುರ್ಚು – ತಲೆತಪ್ಪಿಸಿಕೊ

ವ. ಜಳಧರಸಮಯ – ಮಳೆಗಾಲ; ಪಿಂಗಳಾಕ್ಷಪಾತ – ಹೊಂಬಣ್ಣದ ಕಣ್ನೋಟ; ವಿಘಟನ – ಸೀಳಿದವನು

೧೦೬. ಶೇಷಾಹಿ – ಆದಿಶೇಷ; ಬಾಣಾಂತಕ – ಶ್ರೀಕೃಷ್ಣ

ವ. ಹಳಿಕುಳಿಶಶಂಖವಜ್ರಲಾಂಛಿತ – ನೇಗಿಲು, ವಜ್ರ, ಶಂಖ ಮತ್ತು ಚಕ್ರಗಳ ಗುರುತುಳ್ಳ; ಮುಟ್ಟೆವರ್ – ಸಮೀಪಿಸು; ತಾಡಿಸು – ಹೊಡೆಸು

೧೦೭. ಉರಃಸ್ಥಳವಿಗಳತ್ – ಎದೆಯ ಪ್ರದೇಶದಿಂದ ಸುರಿಯುವ; ಅಸೃಗ್ವಾರಿ – ಅಸೃಕ್+ವಾರಿ, ರಕ್ತವೆಂಬ ನೀರು; ಪುಟ್ಟ – ಹುಟ್ಟೆಯಾ?

೧೦೮. ಮಾನಸಿಕೆ – ಮನುಷ್ಯತ್ವ; ಪರಮಪದ – ಉತ್ಕೃಷ್ಟ ಸ್ಥಿತಿ

ವ. ಚಿತ್ತಸ್ಖಲನೆ – ಮನಸ್ಸು ಅಸ್ಥಿರಗೊಳ್ಳುವುದು

೧೦೯. ಬೊಬ್ಬುಳಿಕೆ – ನೀರಗುಳ್ಳೆ; ಫಣಿರಾಜಕೇತನ – ದುರ್ಯೋಧನ

ವ. ಕರಪರಿಘೋತ್ತಂಸ – ಪರಿಘಾಯುಧದಂತಹ ಕೈಗಳಿಗೆ ಆಭರಣದಂತಿರುವ; ತೋರಣೀಕೃತ – ತೋರಣವಾಗಿ ಮಾಡಲ್ಪಟ್ಟ; ಸೆರಗು – ಭಯ

೧೧೦. ಪಚ್ಚಾಳ್ – ಹಂಚಿಕೊಂಡು ಆಳು; ಕಿಸುರು – ಕಲಹ, ದ್ವೇಷ; ಸೌದರ್ಯ – ಸೋದರಿಕೆ; ಇಂಬುಕೆಯ್ – ಅಂಗೀಕರಿಸು, ಒಪ್ಪು

ವ. ಕೆಟಿಗಿವಿಗೆಯ್ – ಕಿವಿಯ ಕೆಳಕ್ಕೆ ಹಾಕು, ಕೇಳದಿರು

೧೧೧. ಮರುತ್ಪುತ್ರ – ಭೀಮಸೇನ; ದಳ್ಳಿಸು – ಉರಿಯುತ್ತಿರು; ಕೆಯ್ವೊಯ್ – ಕೈತಟ್ಟು, ಯುದ್ಧಾರಂಭದ ಸೂಚನೆ

ವ. ತಡೆ – ತಡಮಾಡು; ಸಂಕರ್ಷಣ – ಬಲರಾಮ; ಉತ್ಕರ್ಷತೆ – ಶ್ರೇಷ್ಠತೆ; ಸಮಜು – ಸಮಗೊಳಿಸು; ಗದಾವಿಕ್ಷೇಪ – ಗದೆಯನ್ನು ತಿರುಗಿಸುವ ವಿಧಾನಗಳು

೧೧೨. ಉಳ್ಕತತಿ – ಉಳ್ಕೆಗಳ ಸಮೂಹ; ತಾಪು – ತಾಕು; ಉಳ್ಕು – ತೊಳಗು, ಪ್ರಕಾಶಿಸು; ಸೂಟ್ಸೋಟ್ಟು – ಸರದಿಯ ತುಳಿತ, ಒಬ್ಬರನಂತರ ಒಬ್ಬರ ತುಳಿತ; ಕಟಿಲ್ – ಸಡಿಲಗೊಳ್ಳು

೧೧೩. ಎಡೆಗಿಡು – ಎಡೆ+ಕಿಡು, [ಇದ್ದ] ಸ್ಥಳದಿಂದ ಕದಲು; ನೀಳಕುತ್ಕೀಳ – ನೀಲಗಿರಿ

ವ. ಅಚೇತನ – ಎಚ್ಚರತಪ್ಪು; ಪವಮಾನಮಾರ್ಗ – ಆಕಾಶ; ಬಿಚ್ಚಳಿಸು – ಹೊಗಳು; ನೆಜಿನ್ – ಮರ್ಮಸ್ಥಾನ; ಊರುಯುಗ್ಮ – ಎರಡು ತೊಡೆಗಳು; ಧಾರ್ತರಾಷ್ಟ್ರ – ದುರ್ಯೋಧನ

೧೧೪. ಪೂಣ್ದ ಪೂಣ್ಕೆ – ಮಾಡಿದ ಪ್ರತಿಜ್ಞೆ; ಪಡಲ್ವಡು – ನಾಶವಾಗು

ವ. ಬಾರಿಸೆ ವಾರಿಸು – ಬೇಡವೆಂದು ತಡೆ

೧೧೫. ಮೂರ್ಧಾಭಿಷೇಕ – ಪಟ್ಟಾಭಿಷೇಕ; ಪಿಂಛಾತಪತ್ರ – ನವಿಲುಗರಿಗಳ ಕೊಡೆ; ಬಲ್ಪು – ರಭಸ

ವ. ವೇಣೀಸಂಹಾರ – ತುರುಬು ಕಟ್ಟುವುದು; ಊರುಭಂಗ – ತೊಡೆ ಮುರಿಯುವುದು; ಕಟ್ಟಿದಿರು – ನೇರವಾಗಿ ಎದುರಿನಲ್ಲಿ

೧೧೬. ಒಡಂಬಡು – ಒಪ್ಪು, ಶೋಭಿಸು; ಗಾಡಿ – ಚೆಲುವು; ನಾಡೆ – ನೋಡಲು; ಕಣ್ಗೆಡಜು – ಕಣ್ಣಿಗೆ ಸಿಲುಕು; ಪೀಜಿ – ಕೆದರು; ಕಮಳಾಯತನೇತ್ರೆ – ತಾವರೆಯೆಸಳಂತೆ ಅಗಲವಾದ ಕಣ್ಣುಳ್ಳವಳು; ಇಂದುವಕ್ತ್ರೆ – ಚಂದ್ರಮುಖಿ

೧೧೭. ಅವಸಥ – ಆವಾಸ, ಮನೆ; ಆವೇಷ್ಟಿತ – ರಕ್ಷಿಸಲ್ಪಟ್ಟ; ನಾರಾಯಣ – ವಿಷ್ಣು, ಶ್ರೀಕೃಷ್ಣ

೧೧೮. ಬಿಸುಡಿಸು – ಬಿಡುವಂತೆ ಮಾಡು, ಬಿಡಿಸು; ಕುರುಕ್ಷ್ಮಾಪಾಳ – ಕುರುರಾಜ; ಅರವಿಂದಾಲಯೆ – ತಾವರೆಯನ್ನೇ ಮನೆಯಾಗುಳ್ಳವಳು, ಲಕ್ಷ್ಮಿ; ಮಗುಟ್ಚು – ಹಿಂತಿರುಗಿಸು; ದ್ರೌಣಿ – ದ್ರೋಣನ ಮಗ, ಅಶ್ವತ್ಥಾಮ

ವ. ಘಟಚೇಟಿಕೆ – ಮಡಕೆ ಹೊರುವ ತೊತ್ತು; ಶೋಣಿತಾರ್ದ್ರಮೌಳಿ – ರಕ್ತದಿಂದ ತೊಯ್ದ ತಲೆ; ಒಸಗೆವಾತು – ಶುಭವಾರ್ತೆ; ಪಂಚ ಪಾಂಡವರು – ದ್ರೌಪದಿಯಲ್ಲಿ ಪಾಂಡವರು ಧರ್ಮರಾಯನೇ ಮೊದಲಾಗಿ ಕ್ರಮವಾಗಿ ಪಡೆದ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ ಮತ್ತು ಶ್ರುತಸೇನ ಎಂಬ ಮಕ್ಕಳು; ಉತ್ತಮಾಂಗ – ತಲೆ

೧೧೯. ಬಾಳಕಮಳ – ತಾವರೆಯ ಮೊಗ್ಗು; ಬಾಲಕವಧದೋಷ – ಹಸುಮಕ್ಕಳನ್ನು ಕೊಲ್ಲುವುದರಿಂದ ಅಡರುವ ಪಾಪ

ವ. ಕರ್ತವ್ಯ – ಪ್ರಾಯಶ್ಚಿತ್ತ; ಅಂತ್ಯಕಾಲ – ಸಾವಿನ ಗಳಿಗೆ
ಪಳಯಿಸು – ಪ್ರಲಾಪಿಸು, ಗೋಳಾಡು

೧೨೦. ಒರ್ವಾಗ – ಒಂದು ಭಾಗ; ಮೇಗಿಲ್ಲದೆ – ಒಳಿತಾಗದೆ; ನಾಗಧ್ವಜ – ದುರ್ಯೋಧನ

ವ. ಪುರುಷ – ಗಂಡ; ಕಳೇವರ – ಹೆಣ; ತಟ್ಟೈಸು – ಅಪ್ಪಿಕೊ

೧೨೧. ಇನಿತು – ಇಷ್ಟು

ವ. ಸಮಾಹಿತಚಿತ್ತ – ಸಮಾಧಾನಮನಸ್ಕ; ಜಳದಾನ – ತರ್ಪಣ; ಮುಕುಂದಬೃಂದ – ಹರೆಯ ಸಮೂಹ; ಸಾಮಂತ ಚೂಡಾಮಣಿ – ಅರಿಕೇಸರಿ, ಅರ್ಜುನ; ಸಮಕೊಳಿಸು – ನೆರವೇರಿಸು

೧೨೨. ಅನುಯಾಯಿ – ಅನುಸರಿಸುವವನು; ಅಳುರ್ಕೆ – ಆಧಿಕ್ಯ; ಮದೀಯ – ನನ್ನ

೧೨೩. ಇನತನಯ – ಕರ್ಣ; ಮದ್ರೇಶ – ಶಲ್ಯರಾಜ; ಸಿಂಧೂದ್ಭವ – ಭೀಷ್ಮ; ಚಾಪವಿದ್ಯೆ – ಬಿಲ್ವಿದ್ಯೆ; ಫಲ್ಗುಣ – ಅರ್ಜುನ; ಮಿಗಿಲ್ – ಅಧಿಕರಾದವರು

೧೨೪. ಅಟ್ಟಿಜ಼್ – ಪ್ರೀತಿಸು; ಕಥಾಸಂಬಂಧ – ಕಥಾಪ್ರಬಂಧ; ಬಾಜಿಸು – ವಾಚಿಸು, ಓದು; ಉತ್ತರ – ಅತಿಶಯವಾಗಿ; ಧೃತಿ – ಧೈರ್ಯ; ತುಷ್ಟಿ – ತೃಪ್ತಿ; ಪುಷ್ಟಿ – ಬಲ; ಇಷ್ಟಾಂಗನಾಸುರತ – ಮೆಚ್ಚಿದ ಹೆಣ್ಣಿನಲ್ಲಿ ಸಂಭೋಗಸುಖ

* * * * * * *

ಅನುಬಂಧಗಳು

೧. ಕನ್ನಡ ಚಂಪೂ ಕಾವ್ಯ ಪರಂಪರೆ

ಮೊತ್ತ ಮೊದಲು ಚಂಪೂ ಕಾವ್ಯ ಲಕ್ಷಣವನ್ನು ಹೇಳಿದವನು ದಂಡಿ. ತನ್ನ 'ಕಾವ್ಯಾದರ್ಶ'ದಲ್ಲಿ ಅವನು 'ಗದ್ಯಪದ್ಯಮಯೇ ಕಾಚಿತ್ ಚಂಪೂರಿತ್ಯಭಿಧೀಯತೇ' ಎಂಬ ಸೂತ್ರವನ್ನಿತ್ತ. ಅದರ ಪ್ರಕಾರ ಚಂಪೂ ಎಂಥರೆ ಗದ್ಯಪದ್ಯಗಳು ಸೇರಿದ ಹಾಗೂ ಇತರ ಕೆಲವು ಲಕ್ಷಣಗಳುಳ್ಳ ಕಾವ್ಯಪ್ರಕಾರ. ಆದರೆ ಆ ಇತರ ಲಕ್ಷಣಗಳು ಯಾವುವೆಂದು ಅವನು ಸ್ಪಷ್ಟಪಡಿಸಿಲ್ಲ, ಬಲದೇವ ಉಪಾಧ್ಯಯರು ತಮ್ಮ 'ಸಂಸ್ಕೃತ ಸಾಹಿತ್ಯದ ಇತಿಹಾಸ' ಎಂಬ ಗ್ರಂಥದಲ್ಲಿ ದಂಡಿಯ ಚಂಪೂ ಕುರಿತ ಈ ಸೂತ್ರವಾಕ್ಯಕ್ಕೆ ಒಂದು ಪಾಠಾಂತರವಿದೆಯೆಂದು ತಿಳಿಸುತ್ತಾರೆ. ಅದೆಂದರೆ, "ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿವಿದ್ಯತೇ" ಎಂದು ಉಲ್ಲೇಖಿಸುತ್ತಾರೆ.[೧] ದಂಡಿಯ ಸ್ವತಃ ಚಂಪೂ ಕಾವ್ಯವಾವುದನ್ನೂ ನೋಡಿರಲಿಲ್ಲ. ಹಾಗಾಗಿ ಅವನ ವ್ಯಾಖ್ಯೆಯು ಇತರರ ಹೇಳಿಕೆಗಳನ್ನು ಆಧರಿಸಿದ್ದು ಎಂದು ಅದಕ್ಕೆ ಅವರು ವ್ಯಾಖ್ಯಾನಿಸುತ್ತಾರೆ. ಅದೇನೇ ಇರಲಿ, ಕನ್ನಡ ಚಂಪೂ ಕಾವ್ಯಗಳ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು; ಗದ್ಯಪದ್ಯ ಮಿಶ್ರಣ; ಗದ್ಯಪ್ರಾಚುರ್ಯ; ಇತರ ಛಂದೋವೃತ್ತಗಳಿದ್ದರೂ ಕಂದಗಳ ಬಳಕೆ ಹೆಚ್ಚು; ಬಳಸುವ ಅಕ್ಷರವೃತ್ತಗಳಲ್ಲಿ 'ಖ್ಯಾತ ಕರ್ಣಾಟಕಗಳು' (ಚಂಪಕಮಾಲಾ, ಉತ್ಪಲಮಾಲಾ, ಮತ್ತೇಭ ವಿಕ್ರೀಡಿತ, ಶಾರ್ದೂಲ ವಿಕ್ರೀಡತ, ಸ್ರಗ್ಧರಾ ಹಾಗೂ ಮಹಾಸ್ರಗ್ಧರಾ) ಬಹುಸಂಖ್ಯೆಯವು, ಆದರೆ ಕನ್ನಡ ದೇಶೀ ಛಂದೋರೂಪಗಳಾದ ತ್ರಿಪದಿ, ಅಕ್ಕರ ಮತ್ತಿತರವುಗಳ ಬಳಕೆಯೂ ಉಂಟು; ವಸ್ತು ಮಹಾಕಾವ್ಯದ್ದು; ಕಾವ್ಯವನ್ನು ಲಂಬ ಅಥವಾ ಆಶ್ವಾಸಗಳಾಗಿ ವಿಂಗಡಿಸಲಾಗಿರುತ್ತದೆ; ಮತ್ತು ಕಾವ್ಯದ ಭಾಷೆ ಹಳಗನ್ನಡ. ಸಂಸ್ಕೃತ ಕಾವ್ಯ ಮಾದರಿಯನ್ನನುಸರಿಸಿ ಸಂಸ್ಕೃತಕ್ಕೆ ಸಹಜವಾದ ಅಕ್ಷರ ವೃತ್ತಗಳನ್ನು ಬಳಸುವುದರಿಂದಾಗಿ ಭಾಷೆ ದೀರ್ಘಸಮಾಸಗಳಿಂದ ಕೂಡಿದ ಶೈಲಿಯಲ್ಲಿರುತ್ತದೆ. ಕವಿಗಳು ದೇಸೀ ಛಂದೋರೂಪಗಳಲ್ಲಿ ಕಾವ್ಯ ರಚಿಸ ತೊಡಗಿದ ಮೇಲೆ ಶೈಲಿಯೂ ಸಹಜವಾಗಿ ಹೆಚ್ಚು ತಿಳಿಯಾಯಿತು ಎಂಬುದನ್ನು ಗಮನಿಸಬಹುದು.

ಚಂಪೂ ಪ್ರಕಾರದ ಮೂಲದ ಬಗ್ಗೆ ವಿವಾದವಿದೆ. ಡಾ. ರಂ.ಶ್ರೀ. ಮುಗಳಿ ಮತ್ತು

---

೧. ಬಲದೇವ ಉಪಾಧ್ಯಾಯ : 'ಸಂಸ್ಕೃತ ಸಾಹಿತ್ಯದ ಇತಿಹಾಸ' (ಅನುವಾದ: ಎಸ್. ರಾಮಚಂದ್ರಶಾಸ್ತ್ರೀ): ಪು. ೬೪೭

ಡಾ.ಸಿ.ಆರ್. ದೇಶಪಾಂಡೆ ಅವರ ನಡುವೆ ಈ ಬಗ್ಗೆ ದೀರ್ಘಕಾಲ ಚರ್ಚೆ ನಡೆಯಿತು. ಮುಗಳಿಯವರು ಚಂಪೂ ಕನ್ನಡ ಮೂಲದ್ದು ಎಂದು ಪ್ರತಿಪಾದಿಸಿದರೆ, ದೇಶಪಾಂಡೆ ಅದು ಸಂಸ್ಕೃತದಲ್ಲಿ ಜನ್ಮ ತಾಳಿದ್ದು ಎಂದು ವಾದಿಸಿದರು. 'ಚಂಪೂ' ಎಂಬ ಶಬ್ದಕ್ಕೆ 'ಚೆನ್' ಎಂಬ ಕನ್ನಡ ಪದವೇ ಮೂಲ; ಕಿಸ್ತಶಕ ಒಂಬತ್ತನೇ ಶತಮಾನದ ಕನ್ನಡ ಕವಿ ಗುಣವರ್ಮನು ಮೊತ್ತಮೊದಲ ಚಂಪೂ ಕವಿಯಾಗಿರುವ ಸಾಧ್ಯತೆಯಿದೆ, ಅನಂತರವಷ್ಟೇ ಸಂಸ್ಕೃತದಲ್ಲಿ ಚಂಪೂಕಾವ್ಯಗಳು ಜನ್ಮತಾಳಿದವು; ಸಂಸ್ಕೃತದಲ್ಲಿ ಚಂಪೂಕಾವ್ಯಗಳನ್ನು ಬರೆದ ಆದ್ಯರೂ ಕರ್ನಾಟಕದವರು; ಈ ಪ್ರಕಾರದಲ್ಲಿ ರಚಿತ್ವಾದ ಕಾವ್ಯಗಳಲ್ಲಿ ಕನ್ನಡ ಕಾವ್ಯಗಳೇ ಶ್ರೇಷ್ಠವಾದವು – ಇವು ಮುಗಳಿಯವರು ತಮ್ಮ ವಾದಕ್ಕೆ ಪೂರಕವಾಗಿ ಮುಂದಿಟ್ಟ ಕಾರಣಗಳು.[೨] ಆದರೆ ಈ ಬಗ್ಗೆ ಹೆಚ್ಚಿನ ವಿವಾದಕ್ಕೆ ತೊಡಗದೆ ಕನ್ನಡ ಚಂಪೂ ಕಾವ್ಯ ಪರಂಪರೆಯ ಬಗ್ಗೆ ಚರ್ಚೆಯನ್ನು ಮುಂದುವರೆಸಬಹುದು.

ಕ್ರಿ.ಶ. ಶಕ ೮೫೦ರಲ್ಲಿ ರಚಿತವಾಗಿರಬಹುದಾದ ಕನ್ನಡದ ಅತ್ಯಂತ ಹಳೆಯ ಉಪಲಬ್ಧ ಗ್ರಂಥವಾದ 'ಕವಿರಾಜಮಾರ್ಗ' ದಲ್ಲಿ ಅ ಕಾಲಕ್ಕೆ ಹಿಂದಿದ್ದ ಅನೇಕ ಗದ್ಯಪದ್ಯ ಕವಿಗಳ ಉಲ್ಲೇಖವಿರುವುದು ಸರ್ವವಿದಿತ. ಆ ಕವಿಗಳಲ್ಲಿ ಕೆಲವರಾದರೂ ಚಂಪೂ ಕಾವ್ಯಗಳನ್ನು ರಚಿಸಿದವರಿರಬೇಕು ಎಂಬುದು ವಿದ್ವಾಂಸರ ಊಹೆ. 'ಕವಿರಾಜಮಾರ್ಗ'ವು ಹೆಸರಿಸುವ ಇತರ ಕಾವ್ಯಪ್ರಕಾರಗಳ ಜೊತೆಗೆ 'ಗದ್ಯಕಥಾ' ಎಂಬುದೂ ಸೇರಿದೆ. ಇದೇ ಚಂಪೂವಿಗೆ ಮೂಲವಿರಬೇಕು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ.[೩]

'ಮಹೇಂದ್ರಾಂತದ' ಎಂಬ ಬಿರುದಿದ್ದ ಹನ್ನೊಂದನೆಯ ಶತಮಾನದ ಎರೆಯಪ್ಪ ಎಂಬ ಗಂಗರಾಜ್ನ ಆಸ್ಥಾನಕವಿಯಾದ ಗುಣವರ್ಮನೆಂಬುವವನು 'ಹರಿವಂಶ' ಮತ್ತು 'ಶೂದ್ರಕ' ಎಂಬ ಎರಡು ಕಾವ್ಯಗಳನ್ನು ರಚಿಸಿರುವನೆಂದು ಹೇಳುತ್ತಾರೆ. ಮೊದಲನೆಯದು ಇಪ್ಪತ್ತೆರಡನೆಯ ನೇಮಿನಾಥನ ಬಗೆಗಿನ ಪುರಾಣಕಾವ್ಯವಾದರೆ, ಎರಡನೆಯದು ಆ ಹೆಸರಿನ ಒಬ್ಬ ರಾಜನನ್ನು ನಾಯಕನನ್ನಾಗಿ ಮಾಡಿಕೊಂಡಿರುವ ಕಾವ್ಯವಾಗಿರಬಹುದು. ಇದರಲ್ಲಿ ಕಾವ್ಯನಾಯಕನೊಡನೆ ತನ್ನ ಆಶ್ರಯದಾತನನ್ನು ಸಮೀಕರಿಸಿರುವ ಸಂಭವವಿದ್ದು, ಇದೇ ಮುಂದಿನ ಪಂಪ ಮುಂತಾದ ಕವಿಗಳಿಗೆ ಹಾಗೆ ಮಾಡಲು ಪ್ರೇರಣೆಯಿತ್ತಿರಬಹುದು. ಅಲ್ಲದೆ, ಗುಣವರ್ಮನು ಒಂದು ಪುರಾಣ ಕಾವ್ಯ ಮತ್ತೊಂದು ಲೌಕಿಕ ಕಾವ್ಯ ಹೀಗೆ ಎರಡು ಕಾವ್ಯಗಳನ್ನು ರಚಿಸುವ ಪರಂಪರೆಗೂ ಆದ್ಯನಾಗಿರಬಹುದು. ಇವೆರಡೂ ಕಾವ್ಯಗಳು ಈಗ ಉಪಲಬ್ಧವಿಲ್ಲ; ಆದರೆ, ವಿದ್ವಾಂಸರು ಮೇಲಿನ ಊಹೆಗಳನ್ನು ಮಾಡುವುದು ಆ ಕಾವ್ಯಗಳದ್ದೆಂದು ಭಾವಿಸಲಾಗಿರುವ ಆನಂತರದ ಸಂಕಲನಗಳಲ್ಲಿ ಸೇರ್ಪಡೆಯಾದ ಪದ್ಯಗಳನ್ನು ಆಧಾರವಾಗಿರಿಸಿಕೊಂಡು.

ಕ್ರಿ.ಶ. ೯೫೦ರಲ್ಲಿ 'ಶಾಂತಿಪುರಾಣ'ವನ್ನು ಬರೆದ ಪೊನ್ನ ಹಾಗೂ ಕನ್ನಡ ಛಂದಸ್ಸಿನ ಬಗ್ಗೆ ಸಂಸ್ಕೃತದಲ್ಲಿ 'ಛಂದೋನುಶಾಸನ'ವೆಂಬ ಹೆಸರಿನ ಗ್ರಂಥ ರಚಿಸಿರುವ ಜಯಕೀರ್ತಿಯಂತಹವರು ತಮ್ಮ ಕೃತಿಗಳಲ್ಲಿ ಅಸಗನೆಂಬ ಕವಿಯ ಬಗ್ಗೆ ಗೌರವದಿಂದ ಉಲ್ಲೇಖ ಮಾಡುತ್ತಾರೆ. ಅಸಗನು 'ಕುಮಾರಸಂಭವ' ವೆಂಬ ಕನ್ನಡ ಕಾವ್ಯವನ್ನು

೨. ರಂ. ಶ್ರೀ. ಮುಗಳೀ: 'ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಾರಗಳು' (೧೯೮೫) : ಪು. ೨೫-೩೦

೩. ಎಂ.ಎಂ. ಕಲಬುರ್ಗಿ : 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' (೧೯೭೩) : ಪು: ೫೩.

ರಚಿಸಿರುವನೆಂದು ಇವರು ಸ್ಪಷ್ಟವಾಗಿ ನುಡಿಯುತ್ತಾರೆ. ಈ ಅಸಗನು ಒಬ್ಬ ಜೈನಕವಿಯೆಂದೂ ಹಾಗಾಗಿ ಈ ಕಾವ್ಯವು ಶಿವ–ಪಾರ್ವತಿಯರ ಜನಜನಿತ ವಸ್ತುವನ್ನು ಕುರಿತಾಗಿರದೆ ಜೈನಸಂಬಂಧೀ ವಸ್ತುವನ್ನು ಒಳಗೊಂಡಿರುಬಹುದೆಂದೂ ವಿದ್ವಾಂಸರು ಭಾವಿಸುತ್ತಾರೆ. ಅಸಗನೆಂಬ ಒಬ್ಬ ಸಂಸ್ಕೃತ ಕವಿಯು ರಚಿಸಿರುವ 'ವರ್ಧಮಾನ ಪುರಾಣ' ಮತ್ತು 'ಶಾಂತಿಪುರಾಣ' ಎಂಬ ಎರಡು ಕಾವ್ಯಗಳು ಉಪಲಬ್ಧವಿವೆ. ಕನ್ನಡ ಕವಿಯೂ ಈ ಪುರಾಣಗಳನ್ನು ಬರೆದ ಸಂಸ್ಕೃತ ಕವಿಯೂ ಅಭಿನ್ನರು ಎಂಬುದಕ್ಕೆ ಆಧಾರಗಳಾವುವೂ ಇಲ್ಲ. ಆದರೆ ಕನ್ನಡ ಕಾವ್ಯವಾದ 'ಕುಮಾರಸಂಭವ'ವು ಒಂದು ಚಂಪೂ ಕಾವ್ಯವಾಗಿರುವ ಸಂಭವಗಳು ಹೆಚ್ಚು ಎಂದು ವಿದ್ವಾಂಸರು ಭಾವಿಸುತ್ತಾರೆ.

ಹದಿಮೂರನೆಯ ಶತಮಾನದ ಪ್ರಸಿದ್ಧ ವ್ಯಾಕರಣಕಾರನಾದ ಕೇಶಿರಾಜನು ತನ್ನ 'ಶಬ್ದಮಣಿದರ್ಪಣ'ದಲ್ಲಿ ವ್ಯಾಕರಣ ಸೂತ್ರಗಳಿಗೆ ನೀಡಿರುವ ಪ್ರಯೋಗ ಪದ್ಯಗಳಲ್ಲಿ ಕೆಲವು ಗುಣನಂದಿಯ ಕೃತಿಯಿಂದ ಆರಿಸಿದವು ಎಂದು ಹೇಳುತ್ತಾನೆ; ಆದರೆ ಆ ಕೃತಿಯ ಹೆಸರನ್ನು ಉಲ್ಲೇಖಿಸುವುದಿಲ್ಲ. ಅಂತೆಯೇ, 'ಸೂಕ್ತಿ ಸುಧಾರ್ಣವ' ವೆಂಬ ಸಂಕಲನ ಗ್ರಂಥದ ಕರ್ತೃವಾದ ಮಲ್ಲಿಕಾರ್ಜುನನೂ ತನ್ನ ಕೃತಿಯಲ್ಲಿ ಗುಣನಂದಿಯ ಕಾವ್ಯದಿಂದ ಆರಿಸಿದ ಪದ್ಯಗಳಿವೆಯೆಂದು ಹೇಳಿಕೊಳ್ಳುತ್ತಾನೆ; ಅವನೂ ಆ ಕೃತಿಯ ಹೆಸರನ್ನು ನೀಡುವುದಿಲ್ಲ; ಹಾಗಾಗಿ ಈ ಗುಣನಂದಿಯ ಕೃತಿ,ಕಾಲಗಳ ಬಗ್ಗೆ ಯಾವುದೇ ಖಚಿತ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

ಮೇಲೆ ಉಲ್ಲೇಖಿಸಿದವರೆಲ್ಲ 'ಕವಿರಾಜಮಾರ್ಗ' ಹಾಗೂ ಪಂಪನ ಕಾಲ – ಈ ನಡುವಣ ಅವಧಿಗೆ ಸೇರಿದವರು. 'ಕವಿರಾಜಮಾರ್ಗ' ವು ವಿಮಲೋದಯ, ನಾಗಾರ್ಜುಜ, ಜಯಬಂಧು, ದುರ್ವಿನೀತ ಮುಂತಾದ ಗದ್ಯಕಾರರನ್ನೂ; ಶ್ರೀವಿಜಯ, ಕವೀಶ್ವರ ಪಂಡಿತಚಂದ್ರ, ಲೋಕಪಾಲ ಮುಂತಾದ ಪದ್ಯರಚನಕಾರರನ್ನೂ ಹೆಸರಿಸುತ್ತದೆ.[೪] ಅದರಲ್ಲಿಯೇ, 'ಗದ್ಯಕಥಾ' ಮತ್ತು 'ಗದ್ಯಪದ್ಯಸಮ್ಮಿಶ್ರಿತ' ಎಂಬ ಎರಡು ಪದ್ಯಕಾವ್ಯ ಪ್ರಭೇದಗಳ ಉಲ್ಲೇಖವೂ ಇದೆ. ಪ್ರಾಯಶ; 'ಗದ್ಯಕಥಾ' ಎಂಬ ದೀರ್ಘಗದ್ಯವೂ ಗದ್ಯಪದ್ಯಗಳ ಸಮ್ಮಿಶ್ರಣವಾದ 'ಚಿತ್ತಾಣ' ದಂತಹ ಸಣ್ಣ ರಚನೆಗಳೂ ಸೇರಿ ಚಂಪೂವಿನ ರೂಪವನ್ನು ಪಡೆದಿರಬಹುದು. ಕನ್ನಡದಲ್ಲಿ ಚಂಪೂ ಕೃತಿಗಳನ್ನು ವಸ್ತುಕ ಹಾಗೂ ಮಾರ್ಗ ಕಾವ್ಯಗಳೆಂದೂ ಕರೆಯುವ ಪರಿಪಾಠವಿದೆ.

ಕನ್ನಡದಲ್ಲಿ ಚಂಪೂ ಕಾವ್ಯವಾಹಿನಿಯು ಮೂರು ಧಾರೆಗಳಲ್ಲಿ ಹರಿದಿದೆ;

---

೪. ವಿಮಲೋದಯನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೇ
ಕ್ರಮದೊಳ್ ನೆಗಳ್ಚಿ ಗದ್ಯಾ
ಶ್ರಮಪದ ಗುರುತಾ ಪ್ರತೀತಿಯಂ ಕೈಕೊಂಡಲ್ – ಕವಿರಾಜಮಾರ್ಗ ೧, ೨೯
ಪರಮ ಶ್ರೀ ವಿಜಯಕವೀ
ಶ್ವರ ಪಂಡಿತಚಂದ್ರ ಲೋಕಪಾಲಾದಿಗಳಾ
ನಿರತಿಶಯ ವಸ್ತುವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ – ಅದೇ ೧, ೩೨

ಅವೆಂದರೆ, ಜೈನ, ಬ್ರಾಹ್ಮಣ ಮತ್ತು ವೀರಶೈವ. ಇವುಗಳಲ್ಲಿ ಜೈನ ಧಾರೆಯು ಅತ್ಯಂತ ಹೆಚ್ಚಿನ ಸ್ವಂತಿಕೆಯನ್ನು ಪಡೆದ ಮತ್ತು ಅತ್ಯಂತ ಸಾರ್ಥಕವಾದ ಕಾವ್ಯಗಳನ್ನು ನೀಡಿದೆ. ಕನ್ನಡದಲ್ಲಿ ದೊರಕುವ ಅತ್ಯಂತ ಪ್ರಾಚೀನ ಚಂಪೂ ಕಾವ್ಯಗಳೆಂದರೆ ಪಂಪನವೇ. ಅವನ 'ಆದಿಪುರಾಣ' ವು ಮೊದಲ ತೀರ್ಥಂಕರನಾದ ಋಷಭದೇವನ ಬಗ್ಗೆ ಬರೆದ ಪುರಾಣಕಾವ್ಯವಾದರೆ, 'ವಿಕ್ರಮಾರ್ಜುನ ವಿಜಯ'ವು ವ್ಯಾಸನ ಸಮಸ್ತಭಾರತವನ್ನು ಸಂಗ್ರಹವಾಗಿ ಹೇಳಿದ ಲೌಕಿಕ ಕೃತಿಯಾಗಿದೆ. ಪಂಪನನ್ನು ಕನ್ನಡದ 'ಆದಿಕವಿ' ಯೆಂದು ಕರೆಯುವುದು. ಅವನ ಕಾವ್ಯಗಳು ಅತ್ಯಂತ ಪ್ರಾಚೀನ ಉಪಲಬ್ಧ ಕೃತಿಗಳೆಂಬ ಕಾರಣದಿಂದ ಮಾತ್ರವಲ್ಲ, ಅವನ ಕಾವ್ಯಗಳ ಗುಣಗಳಿಂದ ಮತ್ತು ಮುಂದಿನ ಜೈನ ಕವಿಗಳಿಗೆ ಹಾಕಿಕೊಟ್ಟ ರಾಜಮಾರ್ಗದಿಂದ ಹಾಗೂ ಸಾಧಿಸಿರುವ ಹಿರಿಮೆಯಿಂದಲೂ ಹೌದು.

ಚಂಪೂ ಪ್ರಕಾರವು ಪಂಪನ ಕಾವ್ಯಗಳಲ್ಲಿ ತನ್ನ ಸಾಧನೆಯ ಶಿಖರಸ್ಥಿತಿಯನ್ನು ತಲುಪಿತು; ಅಂದರೆ ಆ ಪ್ರಕಾರಕ್ಕೆ ಅತ್ಯಂತ ನವಿರಾದ ಪರಿಷ್ಕರಣವನ್ನೂ, ವಸ್ತುವಿಗೆ ಗಾಂಭೀರ್ಯವನ್ನೂ ತಂದುಕೊಟ್ಟವನು ಅವನು. ಅವನ ಮೊದಲ ಕಾವ್ಯ 'ಆದಿಪುರಾಣ'ವು ಆದಿನಾಥನ ಕತೆಯಲ್ಲಿ ಭೋಗದ ನಿಷ್ಫಲತೆಯನ್ನೂ, ಭರತ – ಬಾಹುಬಲಿಗಳ ಪ್ರಸಂಗದಲ್ಲಿ ಅಹಂಕಾರ ನಿರಸನವನ್ನೂ ವರ್ಣಿಸಿದ. ('ಭೋಗ' 'ಅಹಂಕಾರ' ಗಳು ಆಧುನಿಕ ಮನಃಶಾಸ್ತ್ರ ಪರಿಕಲ್ಪನೆಗಳಾದ 'libido' ಮತ್ತು 'id' ಗಳನ್ನು ಹೋಲುವುದನ್ನು ಗಮನಿಸಿ) ಆದರೆ ತನ್ನ 'ಸಮಸ್ತ ಭಾರತ' ದಲ್ಲಿ ಪಂಪ ತನ್ನ ಪಾತ್ರಗಳಲ್ಲಿ ಸಮಕಾಲೀನ ಲೌಕಿಕ ಮೌಲ್ಯಗಳನ್ನು ಸಂಕೇತಿಸಿದ. ಕರ್ಣ ಮತ್ತು ದುರ್ಯೋಧನರ ಪಾತ್ರಗಳ ಮಾನವೀಕರಣ ಪಂಪನ ದೊಡ್ಡ ಸಾಧನೆ. ಅರ್ಜುನನನ್ನು ತನ್ನ ಕಾವ್ಯನಾಯಕನನ್ನಾಗಿ ಮಾಡಿ ಕೊಂಡಿದ್ದರೂ, ಕವಿಯು ಅವನ ಎದುರಾಳಿಯಾದ ಕರ್ಣನ ಬಗ್ಗೆ ಅಪರಿಮಿತ ಸಹಾನುಭೂತಿಯನ್ನು ಪ್ರದರ್ಶಿಸಿದ; ಏಕೆಂದರೆ ಪರಿಸ್ಥಿತಿ ಹಾಗೂ ದುಷ್ಟ ಜಾತಿಪದ್ಧತಿಗಳಿಂದಾಗಿ ಕರ್ಣ ತಾನು ಮಾಡಿದ ಅಪರಾಧಗಳಿಗಿಂತಲೂ ಬಹು ಮಿಗಿಲಾಗಿ ದಂಡವನ್ನು ತೆರಬೇಕಾಯಿತು. ತನ್ನ ಮಹಾಭಾರತವನ್ನು ಪಂಪ 'ಕರ್ಣರಸಾಯನ' ಎಂದೇ ಕರೆದುಕೊಳ್ಳುತ್ತಾನೆ. 'ವಿಕ್ರಮಾರ್ಜುನ ವಿಜಯ'ದ ಕೊನೆಯಲ್ಲಿ ಮಹಾಭಾರತದ ಒಂದೊಂದು ಮುಖ್ಯ ಪಾತ್ರವನ್ನೂ ತನ್ನ ಕಾಲದ ಒಂದೊಂದು ಆದರ್ಶದ ಸಂಕೇತವೆಂಬಂತೆ ವರ್ಣಿಸುತ್ತಾನೆ.[೫] ಪಂಪನ ಬಹು ಮುಖ್ಯವಾದ ಸಾಧನೆಯೆಂದರೆ, ತನ್ನ ಪಾತ್ರಗಳನ್ನು ನಾಯಕ ಮತ್ತು ಖಳ ಎಂಬ ರೀತಿಯಲ್ಲಿ ವರ್ಗೀಕರಿಸುವ ಸಂಪ್ರದಾಯವನ್ನು ಮುರಿದುದು. ಪಾತ್ರಗಳನ್ನು ಕಪ್ಪು ಬಿಳುಪಾಗಿ ಕಾಣುವ ಈ ಬಗೆಯ ಅಸಹಜವೆಂದು ಅರಿತ ಪಂಪು, ತನ್ನ ಪ್ರತಿನಾಯಕನಲ್ಲಿಯೂ ಇರುವ ಮನವೀಯ ಅಂಶಗಳನ್ನು ಗುರುತಿಸಿದ. 'ವಿಕ್ರಮಾರ್ಜುನವಿಜಯ'ದ ಹದಿಮೂರು ಮತ್ತು ಹದಿನಾಲ್ಕನೆಯ ಆಶ್ವಾಸಗಳನ್ನು ಅನುಸರಿಸಿಯೇ ರನ್ನನು ದುರ್ಯೋಧನನನ್ನು ತನ್ನ

---

೫. ಚಲದೊಳ್ ದುರ್ಯೋಧನಂ ನನ್ನಿಯೊಳನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶಂ ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್
ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್ ಇವರ್ಗಳಿನೀ ಭಾರತಂ ಲೋಕಪೂಜ್ಯಂ

ಪಂಪಭಾರತ: ೧೪.೬೪.

'ಗದಾಯುದ್ಧ'ದ ದುರಂತ ನಾಯಕನನ್ನಾಗಿ ಮಾಡಿಕೊಂಡುದು, ಇದು ಪಂಪನ ಪ್ರಭಾವವು ಅವನ ತರುವಾಯದ ಕವಿಗಳ ಮೇಲೆ ಮಾಡಿದ ಅಗಾಧ ಪರಿಣಾಮದ ಸೂಚಿಯಾಗಿದೆ. ಪಂಪನು ತನ್ನ ಕಥಾವಿನ್ಯಸದಲ್ಲಿ ವ್ಯಾಸಭಾರತವನ್ನೇ ಅನುಸರಿಸಿದರೂ, ಕೃಷ್ಣನ ಪಾತ್ರವನ್ನು ದೈವಿಕವೆಂದಾಗಲೀ ಯಾವುದೇ ಲೌಕಿಕ ಮೌಲ್ಯದ ಸಂಕೇತವಾಗಿಯಾಗಲೀ ಭಾವಿಸುವುದಿಲ್ಲ. ಪ್ರಾಯಶಃ ಅವನ ದೃಷ್ಟಿಯಲ್ಲಿ ಕೃಷ್ಣನು ಒಬ್ಬ ತಂತ್ರ ರಾಜಕಾರಣಿಗಿಂತ ಹೆಚ್ಚಿನವನಲ್ಲ. ಹಾಗಾಗಿ ತನ್ನ ಕಾವ್ಯದ ಕೊನೆಯಲ್ಲಿ ಇತರ ಪಾತ್ರಗಳ ವಿಶೇಷವನ್ನು ಹೇಳುವಾಗ ಕೃಷ್ಣನ ಬಗ್ಗೆ ಒಂದು ಮಾತನ್ನೂ ಆಡುವುದಿಲ್ಲ.

ಪಂಪವನ್ನು ಆನಂತರದ ಕವಿಗಳು ಅವನ "ದೇಸಿ"ಗಾಗಿ ಮುಕ್ತಕಂಠದ ಪ್ರಶಂಸೆ ಮಾಡುತ್ತಾರೆ. ಪಂಪನೇ ತನ್ನ 'ವಿಕ್ರಮಾರ್ಜುನವಿಜಯ' ದ ಪೀಠಿಕಾ ಸಂಧಿಯಲ್ಲಿ ಶ್ರೇಷ್ಠ ಕಾವ್ಯ್ವ "ದೇಸಿಯೊಳ್ ಪುಗುವುದು" ಎಂದು ಹೇಳಿಕೊಳ್ಳುತ್ತಾನೆ. ಅವನ ದೇಸಿಯ ಲಕ್ಷಣಗಳೆಂದರೆ, ಆಡುಮಾತಿಗೆ ಹತ್ತಿರವಾದ ಕನ್ನಡವನ್ನು ಬಳಸುವುದು; ಸಮಾಕಾಲೀನ ಸಾಮಾಜಿಕ ಮೌಲ್ಯಗಳನ್ನೂ ಆಶೋತ್ತರಗಳನ್ನೂ ಪಾತ್ರಗಳ ಮುಲಕ ಪ್ರತಿಪಾದಿಸುವುದು; ತನ್ನ ಕಾಲದ ಸಮಾಜಿಕ ಹಾಗೂ ರಾಜಕೀಯ ಸಂಘರ್ಷವನ್ನು ಚಿತ್ರಿಸುವುದು; ಮತ್ತು ಸನ್ನಿವೇಶಗಳನ್ನು ಜಾನಪದೀಯ ಸೊಗಡಿನಿಂದ ವರ್ಣಿಸುವುದು. ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಪಂಪನು ಅರ್ಜುನನೊಡನೆ ಸಮೀಕರಿಸಿ ಕಾವ್ಯರಚನೆ ಮಾಡಿದ್ದರೂ, ಅವನ ಪಾತ್ರಗಳ ಬಾಯಲ್ಲಿ ರಾಜರ ಅವಿವೇಕದ ಟೀಕೆಯನ್ನು ಮಾಡಿಸಿದ್ದಾನೆ. ಪ್ರಜ್ಞಾಪೂರ್ವಕವಾಗಿ ತನ್ನ ಕುಲಮತಗಳ ಬಗ್ಗೆ ಅತೀವ ಪ್ರೇಮವನ್ನು ವ್ಯಕ್ತಮಾಡಿದರೂ, ಅವನ ಪಾತ್ರಗಳು ಜಾತಿಪದ್ಧತಿಯನ್ನು ತೀವ್ರವಾಗಿ ಖಂಡಿಸುತ್ತವೆ. ಅವನ ಸಂಗ್ರಹಗುಣವೂ, ಪ್ರಖ್ಯಾತವಾದುದು; ಆದರೆ ಇದರಿಂದ ಸನ್ನಿವೇಶದ ಬನಿ ಕಡಿಮೆಯಾಗುವುದಿಲ್ಲ ಎಂಬುದೇ ಕವಿಯ ವೈಸಿಷ್ಟ್ಯ. ಚಂಪೂ ಕಾವ್ಯಗಳ ವಸ್ತುವು ಸಂಸ್ಕೃತ ಮಾದರಿಗಳನ್ನು ಅನುಸರಿಸಿದರೂ, ಅದು ಕನ್ನಡ ಸಂವೇದನೆಯನ್ನು ಒಳಗೊಳ್ಳುವಂತೆ ಸಂಯೋಜಿಸುತ್ತಾನೆ; ಅಕ್ಷರವೃತ್ತಗಳ ಬಳಕೆಯಿಂದಾಗಿ ಹೆಚ್ಚು ಸಮಾಸ ಪದಗಳನ್ನು ಬಳಸಬೇಕಾಗಿ ಬಂದರೂ, ಪಂಪನು ತನ್ನ ಭಾಷೆಯಲ್ಲಿ ದೇಸಿ ಮತ್ತು ಸ್ವೀಕರಣ ಶಬ್ದಗಳ ಹದವನ್ನು ಸಾಧಿಸುತ್ತಾನೆ. ಇದರಿಂದಾಗಿಯೇ ಅವನು ಮುಂದಿನ ಚಂಪೂ ಕವಿಗಳಿಗೆ ಆದರ್ಶಪ್ರಾಯ ನಾದುದು.

ಪೊನ್ನ ಮತ್ತು ರನ್ನರು ಪಂಪನನ್ನು ಅನೇಕ ವಿಧಗಳಲ್ಲಿ ಅನುಸರಿಸಿದರು; ಎರಡು ಕಾವ್ಯಗಳ ರಚನೆ; ಅವುಗಳಲ್ಲಿ ಒಂದು ಜೈನಪುರಾಣ ಮತ್ತೊಂದು ಲೌಕಿಕ ಕಾವ್ಯ ; ತಮ್ಮ ಆಶ್ರಯದಾತನನ್ನು ಲೌಕಿಕ ಕಾವ್ಯದ ನಾಯಕನೊಡನೆ ಸಮೀಕರಿಸುವುದು; ತನ್ನ ಕಾಲದ ಮೌಲ್ಯಗಳನ್ನು ಎತ್ತಿ ಹಿಡಿಯುವುದು – ಹೀಗ, ಪೊನ್ನನು ಕ್ರಿ.ಶ. ೯೩೯–೯೬೮ರ ನಡುವಣ ಕಾಲದಲ್ಲಿ ಆಳಿದ ರಾಷ್ಟ್ರಕೂಟ ಚಕ್ರವರ್ತಿ ಎರಡನೇ ಕೃಷ್ಣನ ಆಸ್ಥಾನಕವಿಯಾಗಿದ್ದವನು. ಅವನು 'ಶಾಂತಿ ಪುರಾಣ' ಮತ್ತು 'ಭುವನೈಕ ರಾಮಾಭ್ಯುದಯ' ಎಂಬ ಎರಡು ಕಾವ್ಯಗಳ ಕರ್ತೃ. ಆದರೆ ಎರಡನೆಯದು ದೊರಕಿಲ್ಲ. 'ಭುವನೈಕ ರಾಮಾಭ್ಯುದಯ'ವು ಲೌಕಕಿ ದೃಷ್ಟಿಯಿಂಧ ರಚಿಸಿರುವ ರಾಮಕಥೆಯಾಗಿದ್ದು, ಕಾವ್ಯನಾಯಕನೊಡನೆ ತನ್ನ ಆಶ್ರಯದಾತನನ್ನು ಸಮೀಕರಿಸಿರಬೇಕೆಂಬುದು ವಿದ್ವಾಂಸರ ಊಹೆ. 'ಶಾಂತಿಪುರಾಣ'ವು ಪೂರ್ಣವಾಗಿ ದೊರಕಿದ್ದರೂ, ಅದೊಂದು ಸಾಮಾನ್ಯ ಕಾವ್ಯ ಎನಿಸಿಕೊಂಡಿದೆ. ಅದರಲ್ಲಿ

ಶಾಂತಿನಾಥನ ಕತೆಗಿಂತ ಭವಾವಳಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿದೆ. ಆದರೆ ಚಕ್ರವರ್ತಿಯ ಕತೆ ಹೇಳುವುದನ್ನು ಈ ಕವಿ ಕೈ ಬಿಟ್ಟಿದ್ದಾನೆ.

ರನ್ನನು ಕ್ರಿ.ಶ.೯೪೯ರಲ್ಲಿ ಜನಿಸಿದ. ಚಾಲುಕ್ಯ ಚಕ್ರವರ್ತಿಗಳಾದ ತೈಲಪ ಮತ್ತವನ ಮಗ ಸತ್ಯಾಶ್ರಯನಲ್ಲಿ ಆಸ್ಥಾನಕವಿಯಾಗಿದ್ದ. ಅವನೂ ಎರಡು ಕಾವ್ಯಗಳನ್ನು ರಚಿಸಿದ್ದಾನೆ. 'ಅಜಿತ ತೀರ್ಥಕರಪುರಾಣ ತಿಲಕ' ಮತ್ತು 'ಗದಾಯುದ್ಧ' ವೆಂದು ಪ್ರಖ್ಯಾತವಾಗಿರುವ 'ಸಾಹಸಭೀಮ ವಿಜಯ' ರನ್ನನು ತನ್ನ ಕಾವ್ಯದಲ್ಲಿ ಸಮಕಾಲೀನ ಚರಿತ್ರೆಯನ್ನು ಸೇರಿಸುವ ವಿಷಯದಲ್ಲಿ ಪಂಪನಿಗಿಂತ ಒಂದು ಹೆಜ್ಜೆ ಮುಂದೆ ಇಟ್ಟವನು. ತನ್ನ ಪುರಾಣದ ಪೀಠಿಕಾ ಸಂಧಿಯಲ್ಲಿ ಆತ ತನ್ನ ಕಾಲದ ಒಬ್ಬ ಅದ್ವಿತೀಯ ಜನೋಪಕಾರಿ ಮಹಿಳೆಯಾಗಿದ್ದ ಅತ್ತಿಮಬ್ಬೆಯನ್ನು ಅಮರಗೊಳಿಸಿದ್ದಾನೆ. ಆ ಕಾವ್ಯದಲ್ಲಿ, 'ಸಗರ ಚಕ್ರವರ್ತಿಯ ಕತೆಯ ಮೂಲಕ ಸಾವಿನ ಬಗ್ಗೆ ಚಿಂತನೆ ನಡೆಸಿದ್ದಾನೆ. 'ಗದಾಯುದ್ಧ'ದಲ್ಲಿ ರನ್ನನು ತನ್ನ ಆಶ್ರಯದಾತನಾದ ಸತ್ಯಾಶ್ರ ಯನನ್ನು ಕಾವ್ಯನಾಯಕನಾದ ಭೀಮನೊಡನೆ ಸಮೀಕರಿಸಿದ್ದಾನೆ. ಮಹಾಭಾರತ ಕತೆಯನ್ನು ಹೇಳಲು ಅವನು ಬಳಸಿದ ತಂತ್ರ ಹೊಸದು; ಭಾರತ ಯುದ್ಧದ ಹದಿನೆಂಟನೆಯ ದಿನ ಮಹಾಭಾರತದ ಮುಖ್ಯ ಪಾತ್ರಗಳು ಹಿಂದಿನ ಕತೆಯನ್ನು ನೆನೆಯುವ ಮೂಲಕ ಕತೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ; ಇದನ್ನು ರನ್ನ 'ಸಿಂಹಾವಲೋಕನ ಕ್ರಮ' ಎಂದು ಕರೆದಿದ್ದಾನೆ. ರನ್ನನ ಕಾವ್ಯಕ್ಕೆ ಪಂಪಭಾರತದ ಹದಿಮೂರು ಮತ್ತು ಹದಿನಾಲ್ಕನೇ ಆಶ್ವಾಸಗಳೇ ಆಧಾರವಾದರೂ, ಅವನ ಸ್ವಂತಿಕೆಯಿರುವುದು ದುರ್ಯೋಧನ ಪಾತ್ರವನ್ನು ಮತ್ತಷ್ಟು ಮಾನವೀಕರಿಸಿರುವುದರಲ್ಲಿ ಹಾಗೂ ಭಾಷೆಯ ಬಳಕೆಯಲ್ಲಿ. ಯುದ್ಧದ ಹದಿನೇಳನೇ ದಿನ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ಕಂಡು ಅವರ ಸಲಹೆ ಪಡೆಯಲು, ಕುರುಕ್ಷೇತ್ರದ ಒಂದು ತುದಿಯಿಂದ ಮತ್ತೊಂದಕ್ಕೆ ಹೋಗುವಾಗ, ತನ್ನ ಪ್ರಿಯರಾದವರೆಲ್ಲರ ಹೆಣಗಳು ಅವನ ಕಣ್ಣಿಗೆ ಬೀಳುತ್ತವೆ. ದ್ರೋಣ, ದುಃಶ್ಯಾಸನ, ಕರ್ಣ ಮತ್ತು ಲಕ್ಷಣಕುಮಾರರಿಗೆ ತನ್ನ ಗೌರವಸಮರ್ಪಣೆ ಮಾಡುವುದಲ್ಲದೆ, ತನ್ನ ವೈರಿಯ ಮಗನಾದ ಅಭಿಮನ್ಯವನ್ನು ಕುರಿತು "ನಿಜಸಾಹಸೈಕ ದೇಶಾನುಮರಣಮೆಮಗಕ್ಕೆ ಗಡಾ" ಎಂದು ಮನಸಾರೆ ನುಡಿಯುತ್ತಾನೆ. ಅವನ್ ದುಃಖದಲ್ಲಿ ಅವನ ಹೆಂಗರುಳು ತೆರೆದುಕೊಳ್ಳುತ್ತದೆ. ಅಲ್ಲದೆ, ಸಾವು ಸನ್ನಿಹಿತವಾಗಿರುವ ಅರಿವಾದಾದ ಎಂಥವನ್ ಮನಸ್ಸೂ ವಿನೀತವಾಗುವ ಭಾವ ಇಲ್ಲಿ ಚಿತ್ರಿತವಾಗಿದೆ. ಅವನು ಬಳಸುವ ಭಾಷೆ ಅದ್ಭುತ ಶಕ್ತಿಯುಳ್ಳದ್ದು; ಅದಕ್ಕಾಗಿಯೇ ಕುವೆಂಪು ಅವರು ಅವನನ್ನು "ಶಕ್ತಿಕವಿ" ಎಂದೇ ಕರೆಯುತ್ತಾರೆ. ಅವನು ದುರ್ಯೋಧನ ಪಾತ್ರವನ್ನು ಮಾನವೀಕರಿಸುವುದಲ್ಲದೆ, ಅವನನ್ನು 'ಮಹಾನುಭಾವ' ಎಂದು ಕರೆದು ಗೌರವಾರ್ಪಣೆ ಮಾಡುತ್ತಾನೆ. ಅವನ ಬಗ್ಗೆ ಕವಿಗೆ ಅಷ್ಟು ಕಕ್ಕುಲತೆ. ಮುಂದಿನ ಜೈನ ಕವಿಗಳು ಪಂಪ, ಪೊನ್ನ ಮತ್ತು ರನ್ನರ್ರು 'ರತ್ನತ್ರಯ'ರೆಂದು ಪರಿಗಣಿಸುವ ಪರಿಪಾಠವಿದೆ. ಆದರೆ ಈ ಮೂವರ ಕಾವ್ಯಸಾಮರ್ಥ್ಯದಲ್ಲಿ ವ್ಯತ್ಯಾಸಗಳಿವೆಯೆಂಬುದನ್ನು ಮರೆಯಲಾಗದು.

ಮುಂದೆ ಬಂದ ಮುಖ್ಯ ಕವಿಯೆಂದರೆ ನಾಗಚಂದ್ರ; ಅವನು ಸುಮಾರು ಕ್ರಿ.ಶ. ೧೧೨೦ರ ಹೊತ್ತಿಗೆ ಸೃಜನಶೀಲನಾಗಿದ್ದವನು. ಈತ ತನ್ನನ್ನು "ಅಭಿನವ ಪಂಪ" ಎಂದು ಹೆಮ್ಮೆ ಯಿಂದ ಕರೆದುಕೊಳ್ಳುತ್ತಾನೆ. ತನ್ನ ಹಿಂದಿನ್ ಕವಿಗಳಂತೆಯೇ ನಾಗಚಂದ್ರನೂ

ಎರಡೂ ಕಾವ್ಯಗಳನ್ನು ರಚಿಸಿದರೂ, ಎರಡರ ಮಸ್ತುವೂ ಪೌರಾಣಿಕವಾಗಿರುವುದು ಕೇವಲ ಆನುಷಂಗಿಕವಲ್ಲ. 'ಮಲ್ಲಿನಾಥಪುರಣ'ವು ಹತ್ತೊಂಬತ್ತನೇ ತೀರ್ಥಂಕರನ ಕತೆಯನ್ನು ನಿರೂಪಿಸುತ್ತದೆ. ಇದರಲ್ಲಿ ತನ್ನ ಹಿಂದಿನ 'ರತ್ನತ್ರಯರು' ಅನುಸರಿಸಿದ ಕೆಲವು ಅಂಶಗಳನ್ನು ಕೈ ಬಿಟ್ಟಿದ್ದಾನೆ. 'ಮಲ್ಲಿನಾಥ ಪುರಾಣ'ದಲ್ಲಿ ಭವಾವಳಿಯ ಗೋಜಲಿಲ್ಲ; ಮತ್ತು ಚಕ್ರವರ್ತಿಕತೆಯ ಜೋಡಣೆಯಿಲ್ಲ. 'ರಾಮಚಂದ್ರಚರಿತಪುರಾಣ' ಅಥವಾ 'ಪಂಪ ರಾಮಾಯಣ' ಎಂದು ಪ್ರಸಿದ್ಧವಾಗಿರುವ ಕಾವ್ಯವು ಜೈನ ಪರಂಪರೆಯಲ್ಲಿ ಹೇಳಲಾಗಿರುವ ರಾಮಾಯಣದ ಕತೆ. ನಾಗಚಂದ್ರನು ರಾವಣನ ಪತ್ರವನ್ನು ಚಿತ್ರಿಸುವುದರಲ್ಲಿ ಹೊಸತನವನ್ನು ಮೆರೆದಿದ್ದಾನೆ, ತನ್ನ ಹಿಂದಿನ ಕವಿಗಳಿಗಿಂತ ಭಿನ್ನನಾಗಿದ್ದಾನೆ. ಈ ಕಾವ್ಯದ ರಾವಣನು ಜಿನಧರ್ಮದ ನಿಷ್ಠಾವಂತ ಅನುಯಾಯಿ, ಅವನು ಯುದ್ಧಗಳನ್ನು ಮಾಡುವುದು ಜೈನಧರ್ಮವನ್ನು ಸ್ಥಾಪನೆ ಮಾಡಲು. ಅವನು "ಪರಾಂಗನಾವಿರತಿವ್ರತ" ವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದ ಸಂಯಮಿ. ರಾಮ ಮತ್ತು ಲಕ್ಷ್ಮಣರ ಜೊತೆ ಕಾಡಿನಲ್ಲಿರುವ ಸೀತೆಯಲ್ಲಿ ಕಾಣುವ ತನಕ ಅವನ ಈ ವ್ರತಕ್ಕೆ ಚ್ಯುತಿ ಬಂದಿರುವುದಿಲ್ಲ. ಅವನು ಸೀತೆಯಲ್ಲಿ ಮೋಹಗೊಳ್ಳುವಂತೆ ವಿಧಿಯೇ ಅವನ ಮೇಲೆ ಸಂಚು ಮಾಡುತ್ತದೆ. ಕೊನೆಯಲ್ಲಿ, ರಾಮನ ಮೇಲೆ ಯುದ್ಧ್ ಮಾಡಿ ಗೆದ್ದನಂತರ ಸೀತೆಯನ್ನು ಅವನಿಗೊಪ್ಪಿಸುವ ನಿರ್ಧಾರ ಮಾಡುತ್ತಾನೆ ರಾವಣ. ಅದರೆ ಅದೇ ವಿಧಿಯ ಹುನ್ನಾರದಿಂದಾಗಿ ಅನಿರೀಕ್ಷಿತ ಬೆಳವಣಿಗೆಗಳಾಗಿ ರಾಮನಿಂದ ಹತನಾಗುತ್ತಾನೆ. ವಿಧಿ ಅಥವಾ 'ಕಾಲ'ವು ಮನುಷ್ಯನ ಬಾಳಿನಲ್ಲಿ ವಹಿಸುವ ಪಾತ್ರದ ಬಗ್ಗೆ ಕವಿ ಚಿಂತನೆ ನಡೆಸುತ್ತಾನೆ. ನಾಗಚಂದ್ರನ ರಾವಣ ಪಾತ್ರವನ್ನು ಬಿಎಂಶ್ರೀ ಅವರು "ದುರಂತ" ಪಾತ್ರವೆಂದು ಕರೆದರು; ಅದಕ್ಕೆ ಕಾರಣ ಅವನು ಸಹಜವಾಗಿ ಉದಾತ್ತನಾಗಿದ್ದರೂ ವಿಧಿಯ ವಿರುದ್ಧ ಸೆಣೆಸಬೇಕಾದುದು. ಶ್ರೀ ಅವರಿಗೆ ರಾವಣನ ದುರಂತವು ಗ್ರೀಕ್ ದುರಂತ ನಾಯಕರದರಂತೆಯೇ ಕಾಣಿಸಿತು.

ನಾಗಚಂದ್ರನು ತನ್ನ ಎರಡು ಕಾವ್ಯಗಳನ್ನೂ ಜೈನ ಧರ್ಮ ಪ್ರತಿಪಾದನೆಗೆ ಮೀಸಲಿಟ್ಟನೆಂಬುದು ಗಮನಾರ್ಹ ಅಂಶ. ಅವನ ಕಾಲಕ್ಕೆ ಜೈನಧರ್ಮದ ಭದ್ರ ನೆಲೆಗಟ್ಟು ಸಡಿಲಗೊಳ್ಳುತ್ತಿದ್ದುದು ಇದಕ್ಕೆ ಕಾರಣವಿರಬೇಕು. ಈ ಮಾತು ಅವನ ನಂತರ ಬಂದ ಪ್ರಮುಖ ಕವಿ ಜನ್ನನಿಗೂ ಅನ್ವಯಿಸುತ್ತದೆ. ಹನ್ನೊಂದನೆಯ ಶತಮಾನದ ಕೊನೆ ಮತ್ತು ಹನ್ನೆರಡರ ಪ್ರಾರಂಭ ಕಾಲದಲ್ಲಿ ಜೀವಿಸಿದ್ದ ಜನ್ನನು ಕೂಡ ಎರಡು ಕಾವ್ಯಗಳನ್ನು ರಚಿಸಿದ; "ಅನಂತನಾಥಪುರಾಣ' ಮತ್ತು 'ಯಶೋಧರ ಚರಿತ್ರೆ'. 'ಯಶೋಧರ ಚರಿತ್ರೆ' ಯು ವಾದಿರಾಜನ ಸಂಸ್ಕೃತ ಕಾವ್ಯದ ಮನೋಹರವಾದ ಪುನಃಸೃಷ್ಟಿ, ಸುಮಾರು ಇನ್ನೂರೈವತ್ತು ಕಂದಪದ್ಯಗಳು ಮತ್ತು ಕೆಲವು ವೃತ್ತಗಳನ್ನು ಒಳಗೊಂಡ ಈ ಪುಟ್ಟ ಕಾವ್ಯವು "ಅಹಿಂಸೆ" ಕುರಿತು ಚಿಂತಿಸುವ ಕೃತಿ. ಅಣುಕು ಪ್ರಾಣಿ ಬಲಿಗೆ ನಿರ್ಧರಿಸಿದ ಯಶೋಧರನೆಂಬ ರಾಜನು ಅದಕ್ಕೆ ಪ್ರೇರಿಸಿದ ತನ್ನ ತಾಯ ಜೊತೆಯಲ್ಲಿ ಮತ್ತೆ ಮಾನವ ಜನ್ಮವನ್ನು ಪಡೆಯುವ ಮುಂಚೆ ಎಂಟು ಜನ್ಮಗಳಲ್ಲಿ ವಿವಿಧ ಜಂತುಗಳಾಗಿ ಹುಟ್ಟುವ ಕತೆ ಇದರದ್ದು. ಆದರೆ ರಾಣಿ ಅಮೃತಮತಿ ಮತ್ತು ಅರಮನೆಯ ಲಾಯದ ಕೆಲಸಗಾರ ಅಷ್ಟಾವಂಕರ ನಡುವಣ ಧರ್ಮವಿರೋಧಿ ಪ್ರಣಯವು ಆಕರ್ಷಕವಾಗಿರುವ ಭಾಗ. ಹೆಣ್ಣು ಬಯಸಬಹುದಾದ ಎಲ್ಲ ಗುಣಗಳನ್ನು ಪಡೆದ ರಾಜನಾದ ಗಂಡನಿರುವಾಗ, ಮಧುರ ಕಂಠದಿಂದ ಆಕರ್ಷಿತಳಾಗಿ

ಒಬ್ಬ ವಿಕಾರರೂಪವನ್ನು ಒಲಿದು, ಗಂತ–ಅತ್ತೆಯನ್ನು ವಿಷವಿಕ್ಕಿ ಕೊಂದು, ಕೊನೆಯವರೆಗೆ ಅವನೊಡನಿದ್ದುದು ಅಚ್ಚರಿಯುಂಟು ಮಾಡುವಂಥದು. ಈ ಸಂಬಂಧದ ಮೂಲಕ ಕವಿ ಲೈಂಗಿಕತೆಯನ್ನು ಕುರಿತ ಅನೇಕ ಪ್ರಶ್ನೆಗಳನ್ನು ಎತ್ತುತ್ತಾನೆ. ಇದನ್ನು ಕುವೆಂಪು ಕರೆದಂತೆ "ಕಾಮವಿಕಾರ" ಎಂದು ಸರಳೀಕರಿಸುವುದು ಸರಿಯಲ್ಲ. ಈ ಸಮಸ್ಯೆಯ ಸಂಕೀರ್ಣತೆಯ ಬಗ್ಗೆ ಕವಿಯ ಮನದಾಳದಲ್ಲಿ ಅತೀವ ಆಸಕ್ತಿಯಿದ್ದುದು ಸ್ಪಷ್ಟ. ಏಕೆಂದರೆ ಗಂಡು–ಹೆಣ್ಣಿನ ವಿವಾಹೇತರ ಸಂಬಂಧವು ಅಧಾರ್ಮಿಕವಾದುದಾದರೂ, ಅದರ ಅದಮ್ಯತೆ ಕವಿಯ ಕುತೂಹಲವನ್ನು ಮತ್ತೊಮ್ಮೆ ಕೆರಳಿಸುತ್ತದೆ. ಈ ಬಾರಿ, 'ಅನಂತನಾಥ ಪುರಾಣ'ದ ಅನುಷಂಗಿಕ ಕತೆಯಾದ ಚಂಡಶಾಸನ – ಸುನಂತೆಯರ ಪ್ರಸಂಗದಲ್ಲಿ, ತೀರ್ಥಂಕರನ ಕತೆಗೆ ಪಂಪನಲ್ಲಿ ಪೂರಕವಾದ ಚಕ್ರವರ್ತಿಯ ಕತೆ ಬಂದಿದ್ದರೆ, ಇಲ್ಲಿ ಹಾಗಿದರೆ ಬೇರೊಂದು ರೀತಿಯಲ್ಲಿದೆ. ತನ್ನ ಬಾಲ್ಯದ ಗೆಳೆಯ ವಸುಷೇಣದ ಅರಮನೆಗೆ ಒಮ್ಮೆ ಭೇಟಿ ನೀಡಿದಾಗ, ಚಂಡಶಾಸನನೆಂಬುವವನು ಗೆಳೆಯನ ಹೆಂಡತಿಯಾದ ಸುನಂದೆಯನ್ನು ಏಕಮುಖವಾಗಿ ಪ್ರೀತಿಸುತ್ತಾನೆ. ಅವನದು ಅದಮ್ಯ ಮೋಹ. ಅವಳನ್ನು ಅಪಹರಿಸಿಕೊಂಡು ಚಂಡಶಾಸನನು ತನ್ನ ಊರಿಗೆ ಬಂದು ಅವಳನ್ನು ಬಂಧನದಲ್ಲಿಡುತ್ತಾನೆ. ಈ ಸುದ್ದಿ ತಿಳಿದ ವಸುಷೇಣನು ಇವನ ಮೇಲೆ ದಂಡೆತ್ತಿ ಬರುತ್ತಾನೆ. ಸುನಂದೆಯನ್ನು ಒಲಿಸಿಕೊಳ್ಳಲು ಚಂಡಶಾಸನನು ಮಾಟದಿಂದ ವಸುಷೇಣನದರಂತೆಯೇ ಇದ್ದ ರಕ್ತಸಿಕ್ತ ತಲೆಯೊಂದನ್ನು ಸೃಷ್ಟಿಸಿ ಅವಳೆದುರು ಹಿಡಿಯುತ್ತಾನೆ. ಅದನ್ನು ಕಂಡ ಸುನಂದೆಯು ಗಂಡ ಸತ್ತನೆಂದೇ ಭಾವಿಸಿ ಎದೆಯೊಡೆದು ಸಾಯುತ್ತಾಳೆ. ಚಂಡಶಾಸನನು ಚಿತೆಯಲ್ಲಿಯೂ ಅವಳನ್ನು ಅನುಸರಿಸಿ ತನ್ನ ಪ್ರೀತಿಯ ಆಳವನ್ನು ತೋರಿಸುತ್ತಾನೆ. ಅಮೃತಮತಿ – ಅಷ್ಟಾವಂಕ ಹಾಗೂ ಚಂಡಶಾಸನ – ಸುನಂದೆಯರದು ವಿಭಿನ್ನ ಬಗೆಯ ಸಂಬಂಧಗಳು, ಆದರೂ ಎರಡೂ ಧರ್ಮ ವಿರುದ್ಧವಾದವು. ಇದನ್ನು ಬರಿಯ ಮೋಹವೆಂದು ಕರೆಯಬಹುದೋ? ಅಮೃತಮತಿ ಮತ್ತು ಚಂಡಶಾಸನರು ತಾವು ಪ್ರೀತಿಸಿದ ವ್ಯಕ್ತಿಗಳ ಬಗ್ಗೆ ತೋರಿಸುವ ಆದಮ್ಯ ನಿಷ್ಠೆಯು ಅಚ್ಚರಿ ಹುಟ್ಟಿಸುವಂಥದು. ಈ ನಿರೂಪಣೆಗಳಿಂದಾಗಿ ಜನ್ನನು ಚಂಪೂ ಕಾವ್ಯಗಳಲ್ಲಿನ ಚಿಂತನಪರತೆಗೆ ಹೊಸ ವಸ್ತುವನ್ನು ಒದಗಿಸಿದ್ದಾನೆ ಮತ್ತು ವಿವಾಹೇತರ ಸಂಬಂಧದ ಬಗೆಗಿನ ಚಿಂತನಶೀಲತೆಗೆ ಹೊಸ ಆಯಾಮವನ್ನು ಜೋಡಿಸುತ್ತಾನೆ.

ಈ ಮಧ್ಯೆ ಇಬ್ಬರು ಜೈನ ಕವಿಗಳು ಕನ್ನಡ ಕಾವ್ಯದಲ್ಲಿ ಸಂಸ್ಕೃತ ಬಳಕೆ ಅತಿಯಾದುದನ್ನು ದೊಡ್ಡ ದನಿಯಲ್ಲಿ ಪ್ರತಿಭಟಸಿದರು, ಕನ್ನಡತನವನ್ನು ಮೆರೆದರು. ಅವರುಗಳೆಂದರೆ, ಹನ್ನೆರಡನೆಯ ಶತಮಾನದ ನಯಸೇನ ಮತ್ತು ಹದಿಮೂರನೆಯ ಶತಮಾನದ ಅಂಡಯ್ಯ. ನಯಸೇನನ ಏಕೈಕ ಕವ್ಯ, 'ಧರ್ಮಾಮೃತ'; ಇದರ ರಚನೆಯ ಕಾಲ ಕ್ರಿ.ಶ. ೧೧೧೨; ಜೈನಮತದ ಪ್ರಸಾರಕ್ಕೆಂದೇ ನಿರೂಪಿತವಾದ ಕೃತಿ. ಈ ಕಾರಣಕ್ಕಾಗಿಯೇ ಅವನು ಚಂಪೂ ಕಾವ್ಯದ ವಸ್ತು ಮತ್ತು ರೂಪಗಳಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಿದ. ಒಂದೇ ದೀರ್ಘ ಕತೆಯನ್ನು ಹೇಳಿದೆ, ಕಥಾಗುಚ್ಛವನ್ನು ಸೃಷ್ಟಿಸಿದ. ಗದ್ಯದ ಬಳಕೆ ತುಂಬ ಹೆಚ್ಚಾಗಿ, ಅದರಲ್ಲಿ ಗಾದೆ, ನಾಣ್ಣುಡಿ, ನುಡಿಗಟ್ಟುಗಳು ತುಂಬಿ ಜನನುಡಿಗೆ

---

೬. ಸಮ್ಯಕ್‌ದರ್ಶನ ನಿಶ್ಯಂಕೆ, ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ, ಅಮೂಢದರ್ಶಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಧರ್ಮ ಪ್ರಭಾವನೆ ಹಾಗೂ ಪಂಚಾಣುವ್ರತಗಳಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯೆ ಮತ್ತು ಅಪರಿಗ್ರಹ – ಎಂಬ ಹದಿನಾಲ್ಕು ತತ್ವಗಳು.

ಬಹು ಹತ್ತಿರವಾಗುವಂತೆ ಬರೆದ. ಪ್ರಾಯಶಃ ತಾನೇ ಕತೆಗಳನ್ನು ಸೃಷ್ಟಿಸಿ (ಇವನ ಕಾವ್ಯದ ಕತೆಗಳಿಗೆ ಮೂಲ ಯಾವುದು ಎಂಬುದು ತಿಳಿದಿಲ್ಲ. ಪ್ರಾಯಶಃ ಇಲ್ಲವೇ ಇಲ್ಲ) ಹದಿನಾಲ್ಕು ಆಶ್ವಾಸಗಳಲ್ಲಿ, ಒಂದೊಂದರಲ್ಲಿ ಒಂದೊಂದು ಜೈನತತ್ವದ ಪ್ರಮುಖ ಪರಿಕಲ್ಪನೆಗಳ ಶ್ರೇಷ್ಠತೆಯನ್ನು ಸಾರಿದ.[೬] ನಯಸೇನನು ಕತೆ ಹೇಳುವ ರೀತಿ ತುಂಬ ಚೇತೋಹಾರಿಯಾದುದು. ಕೆಲವು ಕಡೆಗಳಲ್ಲಿ, ಒಂದು ಕತೆಯನ್ನು ಹೇಳುವ ಮೂಲಕ ಒಂದು ಅಭಿಪ್ರಾಯವನ್ನು ನಿರೂಪಿಸಿ ಅದಕ್ಕೆ ಉತ್ತರವಾಗಿ ಮತ್ತೊಂದು ಕತೆಯನ್ನು ಹೇಳುವ ತಂತ್ರವನ್ನು ಬಳಸಿ ಕತೆಯ ಸರಪಳಿಯನ್ನು ಸೃಷ್ಟಿಸುವ ಹೊಸ ತಂತ್ರವನ್ನೂ ನಯಸೇನ ಬಳಸುತ್ತಾನೆ. ಹೊಸಗನ್ನಡದಲ್ಲಿ ಕಾವ್ಯವನ್ನು ನಿರೂಪಿಸುವೆನೆಂದು ಹೊರಟ ಕವಿಗಳು ಸಂಸ್ಕೃತವನ್ನು ಬೆರೆಸುವುದನ್ನು ಅವನು ಟೀಕಿಸಿದ[೭], ಕನ್ನಡದಲ್ಲಿ ಆಲೋಚಿಸುತ್ತ ಸಂಸ್ಕೃತ ಶಬ್ದಗಳನ್ನು ಬಳಸುವಾಗ ಉಂಟಾಗುವ ಗೊಂದಲವನ್ನು ಪ್ರಾಯಶಃ ಕವಿ ಇಲ್ಲಿ ಸೂಚಿಸುತ್ತಾನೆ. ಹಾಗೆಂದು ಇವನಿಗೆ ಸಂಸ್ಕೃತದ ಬಗ್ಗೆ ದ್ವೇಷವೇನಿಲ್ಲ; ಅದು ಕನ್ನಡದ ಹದಗೆಡಿಸಬಾರದು ಅಷ್ಟೆ. ಅಚ್ಚಗನ್ನಡದಲ್ಲಿ ಸಂಸ್ಕೃತ ಬೆರೆಸುವುದುನ್ನು ಇವನು ತುಪ್ಪದಲ್ಲಿ ಎಣ್ಣೆಯನ್ನು ಬೆರೆಸುವುದಕ್ಕೆ ಹೋಲಿಸುತ್ತಾನೆ.[೮] ಮಾಲೋಪಮೆಯ ಬಳಕೆ ನಯಸೇನನ ಮತ್ತೊಂದು ಪ್ರಯೋಗ. ಜೈನಮತದ ಶ್ರೇಷ್ಠತೆಯನ್ನು ಎತ್ತಿ ತೋರಿಸುವುದೇ ಅವನ ಕಾವ್ಯರಚನೆಯ ಉದ್ದೇಶವಾದ್ದರಿಂದ, ಅವನ ಶೈಲಿ ಸರಳವಾಯಿತು; ಅವನನ್ನು ಕೆಲವರು ಜಾನಪದ ಕವಿಯೆಂದು ಕರೆಯುವಷ್ಟರ ಮಟ್ಟಿಗೆ ಜನರಿಗೆ ಅವನು ಹತ್ತಿರವಾದ.

ಅಚ್ಚಗನ್ನಡದ ಮತ್ತೊಬ್ಬ ಪ್ರತಿಪಾದಕನೆಂದರೆ ಆಂಡಯ್ಯ, ಇವನು ಹದಿಮೂರನೇ ಶತಮಾನದ ಮೊದಲ ಭಾಗದಲ್ಲಿ ಕಾರ್ಯಶೀಲನಾಗಿದ್ದವನು. ಅವನೂ ಒಂದೇ ಕಾವ್ಯವನ್ನು ಬರೆದಿದ್ದಾನೆ; ಅದೆಂದರೆ 'ಕಬ್ಬಿಗರ ಕಾವ' ಎಂಬ ಇನ್ನೂರೆಪ್ಪತ್ತು ವೃತ್ತಗಳ ಪುಟ್ಟ ಕಾವ್ಯ. ಜೈನನಾದರೂ ವೈದಿಕ ವಸ್ತುವಾದ ಶಿವ-ಕಾಮರ ಯುದ್ಧದ ಬಗ್ಗೆ ಕಾವ್ಯ ಬರೆದು ಒಂದು ರೀತಿಯಲ್ಲಿ ಧಾರ್ಮಿಕ ಸಾಹಚರ್ಯವನ್ನು ಮರೆಯುತ್ತಾನೆ. ಆದರೆ ಇಲ್ಲಿ ಗೆಲವು ಪಡೆಯುವವನು ಕಾಮ, ಶಿವನಲ್ಲ! ಕಾಮನನ್ನು ಗೆಲ್ಲುವವರು ಜೈನಮುನಿಗಳು; ಈ ಬಗೆಯಲ್ಲಿ ಕವಿ ಜೈನಶ್ರೇಷ್ಠತೆಯನ್ನು ಸಾಧಿಸುತ್ತಾನೆ. ಅಲ್ಲದೆ, ಬದುಕಿನಲ್ಲಿ ಕಾಮದ ಸ್ಥಾನವೆಂತಹುದೆಂಬುದನ್ನು ಕಾಮವಿಜಯದಿಂದ ಎತ್ತಿ ಹಿಡಿಯುತ್ತಾನೆ. ಇವನ ಕನ್ನಡ ನಿಷ್ಠೆ ಅದ್ವಿತೀಯವಾದುದು. ತನ್ನ ಕಾವ್ಯದಲ್ಲಿ ಕೇವಲ ದೇಸಿ ಶಬ್ದಗಳು ಮತ್ತು ತದ್ಭವಗಳನ್ನು ಮಾತ್ರ ಬಳಸುತ್ತೇನೆಂದು ಪಣ ತೊಟ್ಟು ಅಂತೆಯೇ ನಿರ್ವಹಿಸಿದವನು. ಸಂಸ್ಕೃತ ಶಬ್ದಗಳನ್ನು ಬಳಸದಿದ್ದುದರಿಂದಾಗಿ ಇವನ ಕಾವ್ಯವೇನೂ ಅರ್ಥೈಸಿಕೊಳ್ಳಲು ಸರಳವಾಗಲಿಲ್ಲ; ಬದಲಿಗೆ ಕಠಿಣವೇ ಆಯಿತು. ತನ್ನ ಹಟ ಸಾಧಿಸಿದ್ದಷ್ಟೆ ಇವನ ಸಾಧನೆ. ಸಂಸ್ಕೃತ ವ್ಯಾಮೊಹದ ಅತಿರೇಕಕ್ಕೆ ಕವಿ ಪ್ರತಿಕ್ರಿಯಿಸಿದ ರೀತಿ ಇದೆಂದು ಭಾವಿಸಬಹುದು

---

೭. ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕಲಿಯೆ : ಧರ್ಮಾಮೃತ ೧.೪೧

೮. ಅದೇ ೧.೪೨

"ಶಠಸ್ಯ ಪ್ರತಿ ಶಾಠ್ಯಂ!" (ಇವನು ರೀತಿಯಲ್ಲಿ ತಾನೇ ತದ್ಭವಗಳನ್ನು ಸೃಷ್ಟಿ ಮಾಡಿದ ಮತ್ತೊಬ್ಬ ಪ್ರಮುಖ ಕವಿ, ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿಬಂದ ಮುದ್ದಣ.). ಕನ್ನಡ ಚಂಪೂವಿನ ಎರಡನೆಯ ಧಾರೆ ಎಂದರೆ ಬ್ರಾಹ್ಮಣ ಕವಿಗಳದು. ಬ್ರಾಹ್ಮಣ ಕವಿಗಳು ಕನ್ನಡದಲ್ಲಿ ಕಾಣಿಸಿಕೊಂಡದ್ದು ಹತ್ತನೇ ಶತಮಾನದ ಕೊನೆಯಷ್ಟು ತಡವಾಗಿ, 'ಕರ್ನಾಟಕ ಕಾದಂಬರಿ'ಯ ಕರ್ತೃವಾದ ಮೊದಲನೆಯ ನಾಗವರ್ಮನು ಬಾಣ (ಮತ್ತು ಭೂಷಣಭಟ್ಟ) ಕೃತ ಸಂಸ್ಕೃತ ಗದ್ಯಕೃತಿಯಾದ 'ಕಾದಂಬರಿ'ಯನ್ನು ಚಂಪೂರೂಪದಲ್ಲಿ ಕನ್ನಡಕ್ಕೆ ತಂದ. ನಾಗವರ್ಮನ ಮತ್ತೊಂದು ಕೃತಿ 'ಛಂದೋಂಬುಧಿ' ಯೆಂಬ ಶಾಸ್ತ್ರ ಗ್ರಂಥ. ಬ್ರಾಹ್ಮಣರಿಗೆ ಜೈನ ಕವಿಗಳಿಗಿದ್ದಂತೆ ತಮ್ಮ ಮತವನ್ನು ಪ್ರಸಾರ ಮಾಡುವ ಅಥವಾ ಜನಪ್ರಿಯಗೊಳಿಸುವ ಸವಾಲು ಮುಂದಿರಲಿಲ್ಲ. 'ಕಾದಂಬರಿ'ಯು ತುಂಬ ಸುಂದರವಾದ ಅನುವಾದವಾದರೂ, ಅದರಿಂದ ಚಂಪೂ ಸ್ವರೂಪಕ್ಕೆ ಯಾವ ಹೊಸತನವೂ ಪ್ರಾಪ್ತವಾಗಲಿಲ್ಲ. ಇವನಂತೆಯೇ ಸಂಸ್ಕೃತದಿಂದ ಅನುವಾದ ಮಾಡಿದ ಮತ್ತೊಬ್ಬ ಬ್ರಾಹ್ಮಣ ಕವಿಯೆಂದರೆ ದುರ್ಗಸಿಂಹ. ಇವನು ವಸಭಾಗಭಟ್ಟನ 'ಪಂಚತಂತ್ರ'ವನ್ನು ಸುಂದರವಾದ ಗದ್ಯಭೂಯಿಷ್ಠ ಶೈಲಿಯಲ್ಲಿ ಕನ್ನಡಿಸಿದ. ಇಡೀ ಜಗತ್ತಿನಲ್ಲೇ ಉಪಲಬ್ಧವಿರುವ ವಸುಭಾಗಭಟ್ಟ ಪ್ರಣೀತ ಪಂಚತಂತ್ರದ ಮಾದರಿಯೆಂಬ ಕಾರಣಕ್ಕಾಗಿ ಇದಕ್ಕೆ ವಿಶೇಷ ಮಹತ್ವವೂ ಇದೆ. ಕವಿಯು ನೀತಿಯನ್ನು ನಿರೂಪಿಸಲು ಪದ್ಯರಚನೆಯನ್ನೂ ಕಥಾನಿರೂಪಣೆಗೆ ಗದ್ಯವನ್ನೂ ಬಳಸಿಕೊಳ್ಳುತ್ತಾನೆ; ಪದ್ಯಗಳಲ್ಲೂ ವಿಶೇಷವಾಗಿ ಕಂದಗಳು ಹಾಗೂ ಗದ್ಯ ಹೆಚ್ಚು. ಶೈಲಿಯು ಸರಳವಾಗಿಯೂ ಆಕರ್ಷಕವಾಗಿಯೂ ಇದೆ. ಕತೆಗಳ ನಿರೂಪಣೆ ಮನಂಬುಗುವಂತಿದೆ. ಕನ್ನಡ ಸಾಹಿತ್ಯದಲ್ಲಿ 'ವಡ್ಡಾರಾಧನೆ' ಯ ನಂತರ ಗದ್ಯ ಹಾಗೂ ಕಥೆ ಹೇಳುವ ಸಂಪ್ರದಾಯಕ್ಕೆ ಗಟ್ಟಿತನವನ್ನೊದಗಿಸಿದ ಕೃತಿ 'ಕರ್ನಾಟಕ ಪಂಚತಂತ್ರ'.

ಕನ್ನಡದಲ್ಲಿ ಮೊತ್ತ ಮೊದಲ ಸ್ವತಂತ್ರ ಕಾವ್ಯವನ್ನು ಬರೆದ ಬ್ರಾಹ್ಮಣ ಕವಿ ಎಂಬ ಹೆಗ್ಗಳಿಕೆಗೆ ಪಾತ್ರನಾದವನು ರುದ್ರಭಟ್ಟ, ಹನ್ನೆರಡನೇ ಶತಮಾನದ ಉತ್ತರಾರ್ಧದಲ್ಲಿ ಕ್ರಿಯಾಶೀಲನಾಗಿದ್ದ ಈ ಕವಿಯ ಕಾವ್ಯ, 'ಜಗನ್ನಾಥ ವಿಜಯ'; ಇವನು 'ರಸಕಲಿಕೆ' ಎಂಬ ಲಕ್ಷಣಗ್ರಂಥವೊಂದನ್ನೂ ಬರೆದಿರುವುದಾಗಿ ಹೇಳಲಾದರೂ, ಅದು ಸಿಕ್ಕಿಲ್ಲ, 'ಜಗನ್ನಾಥ ವಿಜಯ'ವು ಕೃಷ್ಣನ ಕತೆಯನ್ನು ಹೇಳುವ ಹದಿನಾಲ್ಕು ಆಶ್ವಾಸಗಳ ದೀರ್ಘ ಕಾವ್ಯ. ವಿಷ್ಣುಪುರಾಣ ಹಾಗೂ ಭಾಗವತಗಳಲ್ಲಿ ಹೇಳಲಾದ ಕೃಷ್ಣಕತೆಯ ಭಾಗಗಳನ್ನು ಆರಿಸಿಕೊಂಡ ರುದ್ರಭಟ್ಟ ಕವಿಯು ಕೃಷ್ಣನ ಹುಟ್ಟಿನಿಂದ ಹಿಡಿದು ಬಾಣಾಸುರ ಸಂಹಾರದವರೆಗಿನ ಕತೆಯುನ್ನು ಹೇಳಿದ್ದಾನೆ. ಕೃಷ್ಣನ ಬಾಲಲೀಲೆಗಳು ಹಾಗೂ ಪಾರಿಜಾತಾಪಹರಣದಂತಹ ಸನ್ನಿವೇಶಗಳಲ್ಲಿ ಕವಿಯ ಕಲ್ಪನಾಶಕ್ತಿ ಗೋಚರವಾಗುತ್ತದೆ. ಕೃಷ್ಣನನ್ನು ವಿಷ್ಣುವಿನ ಅವತಾರ ಎಂದು ಭಾವಿಸಿದ ಕವಿಯು ಭಕ್ತಿಯಿಂದ ಅವನ ಸ್ತುತಿ ಮಾಡುತ್ತಾನೆ. ಇವನು ಸಾಮಾನ್ಯರಿಗೆ ಸುಲಭವಾಗಿ ದಕ್ಕುವ ಕವಿಯಲ್ಲ; ಅವನ ಮಂಗಳಾ ಚರಣೆಯ ಐದು ಪದ್ಯಗಳ ಅರ್ಥವನ್ನು ವಿವರಿಸಲು ಅಜ್ಞಾತ ಕವಿಯೊಬ್ಬ 'ಪಂಚಪಾಷಾಣ ವಾಖ್ಯಾ' ಎಂಬ ಟೀಕೆಯನ್ನು ಸಂಸ್ಕತದಲ್ಲಿ ಬರೆದಿದ್ದಾನೆ ಎಂದರೆ ಈ ಕವಿಯ ಶೈಲಿ ಎಂಥದು ಎಂಬ ಊಹೆಯನ್ನು ಮಾಡಬಹುದು. ಆದರೂ ಕೃಷ್ಣ ಬಾಲಲೀಲೆಗಳು ಮತ್ತು ಕೆಲವು ಪಾತ್ರಗಳು ಹಾಗೂ ಸನ್ನಿವೇಶಗಳು ಯಕ್ಷಗಾನದಂತಹ ಮಾಧ್ಯಮಗಳ್ ಮೂಲಕ ಸಮಾನ್ಯರವರೆಗೆ ಇಳಿದು ಬಂದಿವೆ.

ಕನ್ನಡ ಚಂಪೂವಿನ ಮೂರನೆಯ ಧಾರೆಯೆಂದರೆ ವೀರಶೈವ ಕವಿಗಳದು. ಈ ಧಾರೆಯ ಮೊದಲ ಮತ್ತು ಶ್ರೇಷ್ಠ ಕವಿ ಎಂದರೆ ಹದಿಮೂರನೇ ಶತಮಾನದ ಮೊದಲ ಭಾಗದಲ್ಲಿದ್ದ ಹರಿಹರ. ಅವನ ಚಂಪೂ ಕೃತಿಯಾದ 'ಗಿರಿಜಾ ಕಲ್ಯಾಣ'ವು ಪ್ರಾಯಶಃ ಅವನ ಮೊದಲ ಕೃತಿ; ಮುಂದೆ ಅವನು ಚಂಪೂವನ್ನು ಕೈಬಿಟ್ಟು ರಗಳೆಗಳಲ್ಲಿ ಹೊಸ ಬಗೆಯ ಕಾವ್ಯ ರಚನೆ ಮಾಡಿ ಕನ್ನಡದ ಅಪ್ರತಿಮ ಕವಿಗಳಲ್ಲಿ ಒಬ್ಬನೆನಿಸಿದ್ದಾನೆ. ಹೀಗಾಗಿ ಅವನನ್ನು ಸಮಕಾಲೀನರು 'ರಗಳೆ ಕವಿ' ಎಂದೇ ಗೇಲಿ ಮಾಡಿದರಂತೆ. ಅವನ 'ಗಿರಿಜಾ ಕಲ್ಯಾಣ'ವು ಕಾಳಿದಾಸನ 'ಕುಮಾರ ಸಂಭವ'ಕ್ಕೆ ಋಣಿಯಾಗಿದ್ದರೂ, ವಸ್ತುವನ್ನು ನಿಭಾಯಿಸುವ ರೀತಿ ಸ್ವಂತಿಕೆಯಿಂದ ಕೂಡಿದೆ. ಉಮೆಯು ತನ್ನ ಭಕ್ತಿಯಿಂಥ ಶಿವನನ್ನು ಒಲಿಸಿಕೊಂಡ ಕತೆ ಇದು. ಈ ಕಾವ್ಯ ಚೆನ್ನಾಗಿದ್ದರೂ, ಒಟ್ಟು ಚಂಪೂ ಪರಂಬರೆಗೆ ಹೊಸ ಆಯಾಮವನ್ನೇನೂ ಜೋಡಿಸಲಿಲ್ಲ, ಅವನ ಸಾಧನೆಯೇ ನಿದ್ದರೂ ರಗಳೆಯ ರಚನೆಯಲ್ಲಿ; ಇದರಲ್ಲಿ ಅವನ ಹತ್ತಿರ ಸುಳಿಯುವಷ್ಟೂ ಶಕ್ತಿಯಿರುವ ಇತರ ಕವಿಗಳಿಲ್ಲ. ಹರಿಹರನು ಮಾರ್ಗ ಮತ್ತು ದೇಸಿಗಳ ಕೊಂಡಿಯಾಗಿದ್ದಾನೆ; ವಸ್ತುಕವನ್ನು ತೊರೆದು ಕನ್ನಡ ಕಾವ್ಯವು ವರ್ಣಕದತ್ತ ಒಲೆದದ್ದು ಹರಿಹರನ ಮೂಲಕ ಎಂಬುದು ಅವನ ಹೆಗ್ಗಳಿಕೆಯನ್ನು ಹೇಳುತ್ತದೆ.

ಚಂಪೂ ಕಾವ್ಯಗಳನ್ನು ಬರೆದ ಇತರ ಕವಿಗಳೂ ಇದ್ದಾರೆ. ಹದಿನೇಳನೇ ಶತಮಾನದ ಬ್ರಾಹ್ಮಣ ಕವಿಯಾದ ಚಿಕುಪಾಧ್ಯಾಯ, ಹದಿನಾರು ಮತ್ತು ಹದಿನೇಳನೇ ಶತಮಾನದ ವೀರಶೈವ ಕವಿಗಳಾದ ಸುರಂಗ ಮತ್ತು ಷಡಕ್ಷರದೇವ್ – ಇವರನ್ನು ಆ ಪ್ರಕಾರದಲ್ಲಿ ಕಾವ್ಯರಚನೆ ಮಾಡಿದರು ಎಂಬುದರಿಂದ ಹೆಸರಿಸಬೇಕೇ ಹೊರತು, ಅದಕ್ಕೆ ಏನನ್ನಾದರೂ ಹೊಸದನ್ನು ಸೇರಿಸಿದರು ಎಂಬ ಕಾರಣಕ್ಕಲ್ಲ.

ಈ ಮೂರೂ ಧಾರೆಗಳಲ್ಲಿ ಜೈನ ಕವಿಗಳು ಚಂಪೂವಿನ ರೂಪ ಮತ್ತು ವಸ್ತುಗಳಿಗೆ ಹೊಸ ಹಸೊ ಅಯಾಮಾಗಳನ್ನು ಜೋಡಿಸುತ್ತ ಅದರ ಸಮೃದ್ಧ ಬೆಳವಣಿಗೆಗೆ ಕಾರಣರಾದರು ಎಂಬುದು ಈ ಸಮೀಕ್ಷೆಯಿಂದ ಗೊತ್ತಾಗುತ್ತದೆ. ಬ್ರಾಹ್ಮಣ ಮತ್ತು ವೀರಶೈವ ಕವಿಗಳು ಈ ಪ್ರಕಾರವನ್ನು ಆಯ್ದುಕೊಂಡದ್ದು, ಅದು ಆ ಕಾಲದಲ್ಲಿ ಚಾಲತಿಯಲ್ಲಿದ್ದ ಕಾರಣದಿಂದಾಗಿ. ಈ ಎರಡೂ ವರ್ಗದ ಕವಿಗಳು ಬೇರೆ ಬೇರೆ ಪ್ರಕಾರಗಳಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ್ದಾರೆಂಬುದನ್ನು ಮರೆಯುವಂತಿಲ್ಲ. ಚಂಪೂವಿನ ಹೆಸರು ಹೇಳಿದಾಗ, ಸಹಜವಾಗಿಯೇ ಅನೇಕ ಸಮೀಕರಣಗಳು ಗೋಚರಿಸುತ್ತವೆ; ಹಳಗನ್ನಡದ ಬಳಕೆ, ರಾಜಾಶ್ರಯ, ಆಶ್ರಿತರನ್ನು ಕಾವ್ಯನಾಯಕನೊಂದಿಗೆ ಸಮೀಕರಿಸುವುದು, ಪೌರಾಣಿಕ ಪಾತ್ರಗಳನ್ನು ಮಾನವೀಕರಣಗೊಳಿಸುವುದು, ಮಾನವನ ಬಾಳಿನಲ್ಲಿ ವಿಧಿ – ಕಾಲ – ಕಾಮ – ಮುಂತಾದ ನೈಸರ್ಗಿಕ ತತ್ವಗಳ ಪಾತ್ರದ ಬಗೆಗಿನ ಚಿಂತನೆ ಇವುಗಳು. ಜೈನ ಕವಿಗಳು ಈ ಪ್ರಕಾರಕ್ಕೆ ಒಂದು ಗೌರವಯುತ ಸ್ಥಾನವನ್ನು ಗಳಿಸಿಕೊಟ್ಟು ಕನ್ನಡ ಕಾವ್ಯದಲ್ಲಿ ಅದ್ಭುತ ಒಳನೋಟಗಳನ್ನ ತುಂಭಿ ಅದರ ಮಹತ್ತನ್ನು ಎತ್ತರಕ್ಕೇರಿಸಿದರು.

* * * * * * *

೨. ಪಂಪನ 'ಆದಿಪುರಾಣ'ದಲ್ಲಿ ಜೀವ ಮಾಗುವ ಪರಿ

ಬದುಕಿನ ಸಾಫಲ್ಯದ ಬಗ್ಗೆ, ಜೀವನ ಸಾರ್ಥಕತೆಯ ಬಗ್ಗೆ ನಾವು ಮಾತನಾಡುತ್ತೇವೆ. ಪ್ರಾಕೃತಿಕ ಜೈವಿಕ ಕ್ರಿಯೆಯಾದ ಸಂತಾನಾಭಿವೃದ್ಧಿಯಲ್ಲದೆ ನಮ್ಮ, ಅಂದರೆ ಮಾನವನ ಬದುಕಿನ ಗುರಿಯೇನು ಅಥವಾ ಅದಕ್ಕೊಂದು ಗುರಿ ಇದೆಯೇ? ಗುರಿ ಎಂಬುದು ಇರುವುದು ನಿಶ್ಚಿತವಾದರೆ ಅದರ ಸ್ವರೂಪವೇನು? ಅಂಥ ಗುರಿ ಮಾನವನ ಬಾಳಿಗೆ ಮಾತ್ರ ಅನ್ವಯಿಸುವಂಥದೇ ಅಥವಾ ಮಿಕ್ಕ ಜೀವಜಾತಿಗಳಿಗೂ ಗುರಿ ಎಂಬುದಿದೆಯೇ – ಇಂಥ ಪ್ರಶ್ನೆಗಳ ಮಾಲೆಯು ಅನಾದಿ ಕಾಲದಿಂದಲೂ ಮಾನವನನ್ನು ಕಾಡುತ್ತಲೇ ಬಂದಿದೆ. ಇತರ ಪ್ರಾಣಿಗಳ ಬಗ್ಗೆ ನಾವೇನೂ ಹೇಳಲಾರೆವು. ಆ ಬಗ್ಗೆ ಹೇಳುವುದಾದರೆ ಆಯಾ ಪ್ರಾಣಿಗಳೇ ಹೇಳಬೇಕು. ಹೀಗಾಗಿ ನಾವು ಮಾನವ ಕುಲದ ಗುರಿಯ ಬಗ್ಗೆ ಮಾತ್ರ ಆಲೋಚನೆ ಮಾಡಬಹುದೇನೋ? ಆಲೋಚನೆ, ಎಂದೆ, ಇರುವುದೆಲ್ಲ ನಮ್ಮ 'ದೃಷ್ಟಿ'ಯಲ್ಲಿ ಇರುವುವು, ನಮ್ಮ ಅನಿಸಿಕೆಯ ಹೊರತಾಗಿ ಅದು ಇದೆಯೋ ಇಲ್ಲವೋ ಪತ್ತೆ ಹಚ್ಚುವುದು ಹೇಗೆ. ಆಲೋಚನೆ ಇಲ್ಲದಿದ್ದರೆ ಇರುವಿಕೆಯೂ ಇಲ್ಲ. "Cogito, ergo, sum" ಅಂದರೆ ನಾನು ಯೋಚಿಸುತ್ತೇನೆ, ಆದ್ದರಿಂದ, ನಾನು ಇದ್ದೇನೆ ಎಂದು ಡೆಕಾರ್ಟ್ ಹೇಳಿದನಂತೆ. ಎಲ್ಲ ಇರುವಿಕೆಯೂ ನಮ್ಮ ಆನೋಚನೆಯಿಂದ ಹುಟ್ಟಿದಂಥವೇ ಎನ್ನಬಹುದೇನೋ. ಆದ್ದರಿಂದ ಮಾನವ ಬದುಕಿನ ಗುರಿಯೂ ನಮ್ಮ ಆಲೋಚನೆಯ ಫಲವೇ. ಅಲ್ಲದೆ ಎಲ್ಲರೂ ಒಂದೇ ಬಗೆಯಲ್ಲಿ ಈ ಗುರಿಯನ್ನು ನಿರ್ದೇಶಿಸುವುದಿಲ್ಲ. ಅಥವಾ ಎಲ್ಲ ಮಾನವರ ಆದರ್ಶವೂ ಒಂದೇ ರೂಪದ್ದಲ್ಲ, ಏಕೆಂದರೆ ಇಡೀ ಮಾನವ ಕುಲದ ಆದರ್ಶ ಇಂಥರು ಎಂದು ಎಲ್ಲರ ಪರವಾಗಿ ಯಾರೋ ಒಬ್ಬ ಹೇಗೆ ನಿರ್ಧರಿಸಬಲ್ಲ? ಹಾಗೆಂದು ಎಷ್ಟು ಜನರಿದ್ದಾರೆಯೋ ಅಷ್ಟೊಂದು ಗುರಿಗಳಿರುವಂತೆ ನಮಗೆ ಕಾಣುವುದಿಲ್ಲ. ಯಾಕೆಂದರೆ ಎಲ್ಲರೂ ಆಲೋಚಿಸುವುದಿಲ್ಲವಲ್ಲ. ಅಥವಾ ಈ ಕುರಿತು ಆಲೋಚನೆ ಮಾಡಲಾರರೇನೋ, ಹಾಗಾಗಿ ಯಾವನೋ ಆಳವಾಗಿ ಚಿಂತಿಸಿ ಒಂದು ನಿರ್ಧಾರಕ್ಕೆ ಬಂದು "ಇದು ಮಾನವನ ಗುರಿ" ಎಂದು ಹೇಳಿ ಅದನ್ನು ಇತರರ ಬಳಿ ವಿವರಿಸಿದಾಗ ಅನೇಕರು ಅದರ ತಾರ್ಕಿಕತೆಯಿಂದಲೋ, ರೋಚಕತೆಯಿಂದಲೋ, ಅದು ನೀಡಬಹುದಾದ ಭರವಸೆಯಿಂದಲೋ ಪ್ರಭಾವಿತರಾಗಿ "ಹೌದು, ಇದು ನಮ್ಮ ಆದರ್ಶ, ಇದನ್ನು ಸಾಧಿಸುವುದು ನಮ್ಮ ಬಾಳಿನ ಗುರಿ" ಎಂದು ಒಪ್ಪಬಹುದು. ಇಂಥ ಪ್ರಭಾವಶಾಲಿಗಳಾದ ಅನೇಕ ಚಿಂತಕರು ಬಂದು ಹೋಗಿರುವುದರಿಂದ ವಿವಿಧ ಬಣದವರಿಗೆ ವಿಭಿನ್ನ ಗುರಿಗಳು ಇರುವಂತೆ ನಂಬುತ್ತೇವೆ. ಜೀವನದ ಆತ್ಯಂತಿಕ ಗುರಿ ಯಾವುದು,

ನಾವು ತಲುಪಬೇಕಾದ ಬಿಂದು ಯಾವುದು ಎಂದರೆ ಒಬ್ಬರು ಮೋಕ್ಷ ಎನ್ನಬಹುದು, ಮತ್ತೊಬ್ಬರು ನಿರ್ವಾಣ ಎನ್ನಬಹುದು, ಮಗುದೊಬ್ಬರು ಪ್ರಪತ್ತಿ ಎನ್ನಬಹುದು, ಇನ್ನೂ ಒಬ್ಬರು ಸಾಮರಸ್ಯ ಎನ್ನಬಹುದು. ಇಂಥ ಗುರಿಗಳನ್ನು ನಾವು ತಲುಪಬೇಕಾಗಿರುವುದು ಇಲ್ಲಿ ಬದುಕಿರುವಾಗಲೋ ಅಥವಾ ತೀರಿದ ಬಳಿಕವೋ ಎಂಬುದೂ ನಮ್ಮ ಮುಂದೆ ಏಳುವ ಪ್ರಶ್ನೆ. ಇಲ್ಲಿಯೇ ಇದನ್ನು ಸಾಧಿಸಬಹುದಾದರೆ, ಅದನ್ನು ತಲುಪಿದ್ದೇವೆ ಎಂದು ತೀರ್ಪು ಕೊಡುವವರು ಯಾರು? ಅಥವಾ ತೀರಿದ ಮೇಲೆ ಅದನ್ನು ತಲುಪಬಹುದೇ ಹೊರತು ಇರುವಾಗಲಲ್ಲ, ಬದುಕಿರುವಾಗ ಆ ಗುರಿ ತಲುಪಲು ಸಾಧನೆ ಮಾಡಬೇಕು ಎಂದು ಹೇಳಿದರೆ, ಅದನ್ನು ಒಬ್ಬ ಅಥವಾ ಒಂದು ಚೇತನ ತಲುಪಿದೆಯೋ ಇಲ್ಲವೋ ಎಂದು ನಿರ್ಧರಿಸುವುದು ಹೇಗೆ? ಆ ಬಗ್ಗೆ ಖಚಿತವಾಗಿ ನಮಗೆ ತಿಳಿವಳಿಕೆಯನ್ನು ಯಾರು ಕೊಡಬೇಕು? ಬರೀ ಪ್ರಶ್ನೆಗಳು. ಪ್ರಾಯಶಃ ಬದುಕಿನ ಬಹು ಪ್ರಮುಖವಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಮಾತ್ರ ಸಾಧ್ಯ, ಉತ್ತರ ನಮ್ಮ ಆಲೋಚನೆಗೆ ತಕ್ಕಂತೆ.

ಈ ಸಂದರ್ಭದಲ್ಲಿ ನನಗೆ ಬಸವಣ್ಣನ ಒಂದು ವಚನ ನನ್ನ ನೆನಪಗೆ ಬರುತ್ತದೆ. ಅದು ಹೀಗಿದೆ:

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ
ತನಗೆ ಬೇಕೆಂದು ಎತ್ತಿಕೊಂಡ.

ಮರದ ರೂಪಕದ ಮೂಲಕ ತನ್ನ ಪರಿಕಲ್ಪನೆಯ ಮಾನವನ ಆಯುಷ್ಯದ ಸಾರ್ಥಕ್ಯವನ್ನು ಕುರಿತು ವಚನಕಾರ ಇಲ್ಲಿ ಮಾತನಾಡುತ್ತಿದ್ದಾನೆ. ಒಂದು ಹೂವಿನ ಸಾರ್ಥಕ್ಯವಿರುವುದು ಅದು ಕ್ರಮೇಣ ತನ್ನ ಅವರಣ ಆಕಾರ ಸತ್ವಗಳನ್ನು ಬದಲಿಸಿಕೊಳ್ಳುತ್ತ ಕೊನೆಗೆ ಹಣ್ಣಾಗಿ ತೊಟ್ಟು ಕಳಚಿ ಬೀಳುವುದರಲ್ಲಿ. ಆಗ ಕೂಡಲಸಂಗಮದೇವ ಆ ಹಣ್ಣನ್ನು ತನಗೆ ಬೇಕು ಎಂದು ಎತ್ತಿಕೊಳ್ಳುವುದರಲ್ಲಿ. ಇಡೀ ಮನುಷ್ಯ ಸಂಕುಲವೇ ಒಂದು ಮರ. ವ್ಯಕ್ತಿಯೇ ಬೀಜ. ಆ ಬೀಜದ ಸಾರ್ಥಕ್ಯವಿರುವುದು ಮರದ ಯಜಮಾನ ಪ್ರೀತಿಯಿಂದ ಎತ್ತಿಕೊಳ್ಳುವಂತೆ ಪೂರ್ಣ ಮಾಗಿ ಕೆಳಕ್ಕೆ ಬೀಳುವುದರಲ್ಲಿ. ಹೂ ಹಣ್ಣಾಗುವ ಪರಿಯಲ್ಲಿ, ಅಂದರೆ ಜೀವ ಮಾಗುವ ಪ್ರಕಿಯೆಯಲ್ಲಿ ಮೂರು ಮುಖ್ಯ ಹಂತಗಳನ್ನು ವಚನಕಾರ ಇಲ್ಲಿ ಗುರುತಿಸುತ್ತಿದ್ದಾನೆ. ಅವುಗಳೆಂದರೆ; ಭಕ್ತಿ ವಿಚಾರ ಮತ್ತು ಆಚಾರ ಎಂಬ ನೆಲೆಗಳು. ಮೊದಲು ನಂಬಿಕೆ, ಆನಂತರ ಅದರ ಫಲವಾಗಿ ಪಡೆದ ತಿಳಿವಳಿಕೆ, ಅದಕ್ಕೆ ಅನುಸಾರವಾಗಿ

ಮಾಡುವ ಸಾಧನೆ. ಭಕ್ತಿ ಅಥವಾ ನಂಬಿಕೆಯೇ ಇದರ ನೆಲೆಗಟ್ಟು, ಅದಿಲ್ಲದಿದ್ದಲ್ಲಿ ಈ ಪರಿಯ ಗುರಿ ಎಂಬುದು ಇರಲು ಸಾಧ್ಯವಿಲ್ಲ. ಮಾನವನ ಬಾಳಿಗೆ ಗುರಿಯೊಂದಿದೆಯೆಂದು ಹೇಳುವವರೆಲ್ಲರಲ್ಲಿಯೂ ಆಯಾ ಗುರಿಯ ಬಗೆಗಿನ ನಂಬಿಕೆ ಸಮಾನ; ಆದರೆ ಬಾಳಿನ ಗುರಿ ಯಾವುದು ಎಂಬ ಬಗೆಗಿನ ತಿಳಿವಳಿಕೆಯ ವಿಭಿನ್ನತೆಯ ಕಾರಣದಿಂದ ಬೇರೆ ಬೇರೆ ಪಂಥಗಳವರು ಬೇರೆ ಬೇರೆ ಬಗೆಯಾಗಿ ಬದುಕಿನ ಗುರಿಯನ್ನು ಗುರುತಿಸುತ್ತಾರೆ.

ಈ ತಾತ್ವಿಕತೆಯ ಹಿನ್ನೆಲೆಯಲ್ಲಿ ನಾನು ಪಂಪನ 'ಆದಿಪುರಾಣ'ದ ಬಗ್ಗೆ ಪ್ರಸ್ತಾಪಿಸುತ್ತೇನೆ. ಪಂಪನ ಕಾಲ ಕ್ರಿ.ಶ. ಹತ್ತನೆಯ ಶತಮಾನ; ಕನಿಷ್ಠ ಪಕ್ಷ, ಕನ್ನಡ ನಾಡಿನ ಮಟ್ಟಿಗೆ, ನಂಬಿಕೆಗಳ ಪಲ್ಲಟದ ಕಾಲವೇನೋ, ಅದರಿಂದಾರಿಯೇ ಪಂಪನ ತಂದೆ ಭೀಮಪಯ್ಯ ಬ್ರಾಹ್ಮಣನಾಗಿದ್ದವನು ಜೈನ ಮತಾವಲಂಬಿಯಾದ. ಪಂಪ ತನ್ನ ಸುಮಾರು ಮೂವತ್ತೊಂಬತ್ತು – ನಲವತ್ತರ ಪ್ರಾಯದಲ್ಲಿ ಮೊದಲ ಕಾವ್ಯವಾದ 'ಆದಿಪುರಾಣ'ವನ್ನು ಬರೆದ. ಅವನು ಆರಿಸಿಕೊಂಡದ್ದು ಇಪ್ಪತ್ತನಾಲ್ಕು ಮಂದಿ ತೀರ್ಥಂಕರರಲ್ಲಿ ಮೊದಲನೆಯವನಾದ ಆದಿದೇವ ಅಥವಾ ವೃಷಭನಾಥನ ಕಥಾನಕವನ್ನು, ಜೈನರಲ್ಲಿ ದೇವರ ಬಗ್ಗೆ ಶ್ರದ್ಧೆಯಿಲ್ಲ, ಸಾಧನೆಯಿಂದ ಆದರ್ಶವನ್ನು ತಲುಪಿದ ತೀರ್ಥಂಕರರು ಅವರಿಗೆ ಪೂಜ್ಯರು. ತೀರ್ಥಂಕರ ಎಂದರೆ ಬದುಕನ್ನು ಪವಿತ್ರ ತೀರ್ಥವನ್ನಾಗಿ ಮಾಡಿಕೊಂಡವನು. ದೇಹ ಮತ್ತು ಮನಸ್ಸುಗಳನ್ನು ಶುಭ್ರಗೊಳಿಸಿ ಬಾಳನ್ನು ಉನ್ನತಿಗೇರಿಸಿಕೊಂಡವನು. ಅಂತಹವನ ಬಗ್ಗೆ ತನ್ನ ಕಾವ್ಯವಿದ್ದರೂ ಪಂಪ ಮೂಲತಃ ಒಬ್ಬ ಕವಿ, ಹೀಗಾಗಿ ಅವನು ಈ ಕಾವ್ಯವನ್ನು ರಚಿಸಿದ್ದು ಇಬ್ಬಗೆಯ ಗುರಿಗಳ ಸಾಧನೆಗಾಗಿ. ಅವನೇ ಹೇಳಿಕೊಳ್ಳುತ್ತಾನೆ.

ಇದುವೆ ಸುಕವಿಪ್ರಮೋದ
ಪ್ರದಂ ಇದುವೆ ಸಮಸ್ತ ಭವ್ಯಲೋಕಪ್ರಮದ
ಪ್ರದಂ ಎನೆ ನೆಗಳ್ದಿ ಆದಿಪುರಾ
ಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ

ಎಂದು. ತನ್ನ ರಚನೆಯು ಕವಿಹೃದಯದ ಜನರಿಗೂ ಭವ್ಯಜನ ಅಂದರೆ ಜೈನರಿಗೂ ಸಂತೋಷ ತರುತ್ತದೆ ಎಂಬವುದು ಅವನ ವಿಶ್ವಾಸ. ಪಂಪನದೇ ಆಯ್ಕೆಯೆಂದರೆ, ತನ್ನ ಕಾವ್ಯವು ಹವಿಹೃದಯದವರಿಗೆ ಸಂತೋಷವುಂಟುಮಾಡವುದು ಮೊದಲ ಗುರಿ, ಜೈನರಿಗೆ ಸಂತೋಷಕರವಾಗಬೇಕಾದದಕ್ಕೆ ಎರಡನೆಯ ಸ್ಥಾನ. ಏಕೆಂದರೆ ತನ್ನ ಕಾವ್ಯದಲ್ಲಿ ಓದುಗರು ಅರಿಯಬೇಕಾದುದು ಕಾವ್ಯಧರ್ಮವನ್ನು, ಜೊತೆಗೆ ಧರ್ಮವನ್ನೂ. ಆದರೆ ಈ ಎರಡರ ನಡುವಣ ವ್ಯತ್ಯಾಸವೇನು ಎಂಬುದನ್ನು ಕವಿ ಸ್ಪಷ್ಟಪಡಿಸುವುದಿಲ್ಲ. ಆದರೆ ನಾವು ಅದನ್ನು ಅರ್ಥವಿಸಬೇಕಾಗುತ್ತದೆ; ಇಲ್ಲದಿದ್ದರೆ ಕವಿಯ ಆಶಯವನ್ನು ತಿಳಿಯಲು ಸಾಧ್ಯವಿಲ್ಲ. ತೀರ್ಥಂಕರನ ಚರಿತೆಯನ್ನು ಜೈನಮತದ ಚೌಕಟ್ಟು ಮತ್ತು ಪರಿಭಾಷೆಯ ಹಿನ್ನೆಲೆಯಲ್ಲಿ ನಿರೂಪಿಸಿದ್ದರೂ, ಅದು ಮತಧರ್ಮಾತೀತವಾಗಿ ಎಲ್ಲ ಕವಿಮನೋಭಾವದವರಿಗೆ ಸಂತೋಷ ತರಬೇಕು ಎಂಬುದು ಕವಿಯ ಆಶಯ. ಹಾಗಾದರೆ ಕಾವ್ಯಧರ್ಮ

ಎಂದರೇನು? ಇದೂ ವ್ಯಾಖ್ಯಾನಕ್ಕೆ ಬಿಟ್ಟ ವಿಚಾರ. ಹಾಗಾಗಿ ಅದಕ್ಕೆ ನನ್ನದೇ ಅರ್ಥವನ್ನು ನೀಡಿ ಮುಂದುವರಿಯಬೇಕು. ನನ್ನ ಪ್ರಕಾರ, ಬದುಕಿನ ನಿಗೂಢಗಳನ್ನು ವೈಯಕ್ತಿಕ ಅನುಭವದ ಮೂಲಕ ಶೋಧಿಸುವುದೇ ಕಾವ್ಯದ ಕೆಲಸ. ಹಾಗಾಗಿ ಬದುಕು ಒಂದೆಡೆ ಜೈನಮತದ ಪಾರಂಪರಿಕ ಕಲ್ಪನೆಯ ಪ್ರಕಾರ ಹೇಗೆ ಸಾರ್ಥಕವಾಗುತ್ತದೆ ಎಂಬುದನ್ನು ಹೇಳುವುದರ ಜೊತೆಗೆ, ಎಲ್ಲ ಮಾನವರಿಗೂ ಅನ್ವಯಿಸುವಂತೆ ಬದುಕಿನ ಸಾರ್ಥಕ್ಯದ ಸ್ವರೂಪವೇನು ಎಂಬುದನ್ನು ತನ್ನ ತಿಳಿವಳಿಕೆ ಮತ್ತು ಅನುಭವಗಳ ಹಿನ್ನೆಲೆಯಲ್ಲಿ ಶೋಧಿಸುವುದು ಈ ರಚನೆಯ ಹಿಂದಿರುವ ಕವಿಯ ಮೂಲ ಆಶಯ.

'ಆದಿಪುರಾಣ'ದಲ್ಲಿ ಮೂರು ಭಾಗಗಳಿವೆ; ನಡುವಿನದು ತೀರ್ಥಂಕರ ಜನ್ಮದ ಕಥಾನಕ; ಅದು ಜೈನಕಲ್ಪನೆಯಂತೆ ಗರ್ಭಾವತರಣ, ಜನನ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿನಿರ್ವಾಣಗಳೆಂಬ ಐದು ಹಂತಗಳ ಮೂಲಕ ನಿರೂಪಿತವಾಗಿದ್ದರೆ; ಮೊದಲಿನ ಭಾಗ ಅವನ ಹಿಂದಿನ ಹತ್ತು ಜನ್ಮಗಳ ಅಥವಾ ಭವಾವಳಿಯ ಕತೆ; ಮೂರನೆಯದು, ಅವನ ಮುಂದಿನ ಪೀಳಿಗೆಯಾದ ಅವನ ಮಕ್ಕಳ ಕತೆ; ಈ ಮೂಲಕ ಇಡೀ ಕಥಾನಕಕ್ಕೆ ಒಂದು ಏಕಕೇಂದ್ರ ಲಭ್ಯವಾಗುತ್ತದೆ. ಎಲ್ಲವನ್ನೂ ಒಟ್ಟಾರೆ ಪರಿಭಾವಿಸಿದಾಗ, ಇಲ್ಲಿನ ಜನ್ಮಾಂತರದ ಕತೆಗಳು ಒಬ್ಬನೇ ವ್ಯಕ್ತಿಯ ಬೆಳವಣಿಗೆಯ ವಿವಿಧ ಹಂತಗಳನ್ನು ಸೂಚಿಸುತ್ತವೆ, ಅವನ ಮಕ್ಕಳ ಕತೆ ಅವನ ವ್ಯಕ್ತಿತ್ವದ ಮತ್ತೊಂದು ವಲಯದ ಅಭಿವ್ಯಕ್ತಿಯಾಗುತ್ತದೆ. ಹೀಗಾಗಿ ಇದು ವ್ಯಕ್ತಿತ್ವವಿಕಾಸದ ಕತೆ. ಋಷಭನಾಥನಿಗೆ ನೇರವಾಗಿ ಸಂಬಂಧಿಸಿದ ಮೊದಲೆರಡು ಭಾಗಗಳು ಭೋಗನಿರಸನವನ್ನೂ, ಅವನ ಮಕ್ಕಳಿಗೆ ಸಂಬಂಧಿಸಿದ ಮೂರನೆಯ ಭಾಗವು ಅಹಂಕಾರನಿರಸನವನ್ನೂ ಸೂಚಿಸುತ್ತದೆ ಎಂದು ವಿಮರ್ಶಕರು ಈಗಾಗಲೇ ಗುರುತಿಸಿದ್ದಾರೆ. ಅದು ಸರಿಯೇ. ವ್ಯಕ್ತಿಯ ವ್ಯಕ್ತಿತ್ವದ ವಿಕಸನ ಎಂದರೆ ಭೋಗ-ಅಹಂಕಾರಗಳನ್ನು ದೂರೀಕರಿಸುವುದೇ ಆಗಿದೆ. ಹಾಗೆ ಸಂಪೂರ್ಣವಾಗಿ ಮಾಡುವುದರ ಮೂಲಕವಾಗಿಯೇ ತೀರ್ಥಂಕರ ಚೇತನವು ತನ್ನ ಬದುಕನ್ನು ತೊಳೆದು ಪವಿತ್ರವನ್ನಾಗಿ ಮಾಡುತ್ತದೆ. ಕವಿಯ ಆಶಯವೂ ಇದೇ ಆಗಿದೆ; ತೀರ್ಥಂಕರನ ಬಾಳು ಎಂದರೆ ಕೇವಲ ಜೈನ ಪರಿಕಲ್ಪನೆಗೆ ಅನುಗುಣವಾಗಿರುವುದು ಮಾತ್ರವಲ್ಲದೆ, ಜೈನ ಆವರಣವನ್ನು ಕಳಚಿದರೆ ಋಷಭನಾಥನ ಬದುಕು ಒಟ್ಟಾರೆ ಮನುಷ್ಯನ ಬದುಕು ಸಾರ್ಥಕವಾಗುವುದರ ಪರಿಯನ್ನು ಸಂಕೇತಿಸುತ್ತದೆ ಎಂಬುದು. ಇದೇ ಪ್ರಾಯಶಃ ಪಂಪನ ಮನಸ್ಸಿನಲ್ಲಿದ್ದ ಕಾವ್ಯಧರ್ಮದ ಸ್ವರೂಪ.

ಜಯವರ್ಮನೆಂಬುವನು ಮಹಾಬಳ, ಲಲಿತಾಂಗ, ವಜ್ರಜಂಘ, ಆರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರ – ಈ ಜನ್ಮಗಳನ್ನು ಪೂರೈಸಿ ಹತ್ತನೆಯ ಜನ್ಮದಲ್ಲಿ ಆದಿನಾಥನಾಗಿ ಹುಟ್ಟುತ್ತಾನೆ. ಇವರೆಲ್ಲ ರಾಜರು, ಚಕ್ರವರ್ತಿಗಳು, ಅಷ್ಟೇ ಅಲ್ಲ, ಅವರ ವಾಸ ವಿವಿಧ ದೇವಲೋಕಗಳಲ್ಲಿ, ಎಲ್ಲ ಬಗೆಯ ಭೋಗಸುಖಗಳನ್ನು ಯಥೇಚ್ಛವಾಗಿ ಸವಿಯುವವರು. ಜನ್ಮದಿಂದ ಜನ್ಮಕ್ಕೆ ಭೋಗಲಾಲಸೆಯ ತೀವ್ರತೆಯು ಕಡಿಮೆಗೊಳ್ಳುವ ಪ್ರಕ್ರಿಯೆಯ ಮೂಲಕ ಇದರ ಆಶಾಶ್ವತತೆಯನ್ನೂ ಅಸಾರ್ಥಕತೆಯನ್ನೂ ಚಿತ್ರಿಸುವುದು ಇಲ್ಲಿನ ಪರಿ. ಹಾಗೆ ನೋಡಿದರೆ, ತೀರ್ಥಂಕರನ ಕಥೆಯು ಚಿತ್ರಣಗೊಳ್ಳುವ ಐದು ಹಂತಗಳು ಎಲ್ಲರ ಬದುಕಿನಲ್ಲೂ ಇರುವ ಹಂತಗಳೇ, ಜೀವ ಗರ್ಭದಲ್ಲಿ ಸೇರುವುದು,

ಹುಟ್ಟು, ಒಂದು ಸನ್ನಿವೇಶದಲ್ಲಿ ಬದುಕಿನ ನಶ್ವರತೆಯ ಬಗ್ಗೆ ಬರಬಹುದಾದ ತಿಳಿವು. ವ್ಯಕ್ತಿಯ ಅಸಹಾಯಕತೆಯ ಪರಿಜ್ಞಾನ ಮತ್ತು ಸಾವು – ಇವೆಲ್ಲ ಎಲ್ಲರಿಗೂ ಇದ್ದದ್ದೇ. ಏರುಂಜವ್ವನದಲ್ಲಿರುವ ಭೋಗಪ್ರಿಯತೆ ವಯಸ್ಸಾದಂತೆ ತಾನಾಗಿ ಕಡಿಮೆಯಾಗುವುದು, ಇಂದ್ರಿಯಗಳ ಪಟುತ್ವ ಮೊನಚನ್ನು ಕಳೆದುಕೊಳ್ಳುವುದು ಇವೆಲ್ಲ ಎಲ್ಲರ ಬದುಕಿನ ವಿವಿಧ ಮಜಲುಗಳೇ. ಆದರೆ ತೀರ್ಥಂಕರನ ಸತ್ವ ದೊಡ್ಡದು, ಮತ್ತು ಅರಿವಿನ ಹಿನ್ನೆಯಲ್ಲಿ ಅದನ್ನು ಸಾಧಿಸಲು ಪ್ರಯತ್ನಿಸುವುದು – ಇದರಿಂದಾಗಿ ಅದು ಭಿನ್ನವಾಗುತ್ತದೆ. ಹತ್ತು ಜನ್ಮಗಳಲ್ಲಿ ಭೋಗಲಾಲಸೆಯು, ದೊಡ್ಡ ವಿಚಾರಗಳು ಕಿವಿಯ ಮೇಲೆ ಬೀಳುವ ಮೂಲಕ ಉಂಟಾಗುವ, ತಿಳಿವಳಿಕೆಯ ಕಾರಣದಿಂದಾಗಿ ಕಡಿಮೆಯಾಗುತ್ತ ಹೋಗುವ ಮತ್ತು ಅದರ ಸ್ವರೂಪ ಬದಲಾವಣೆಗೊಳ್ಳುವ ಸೂಕ್ಷ್ಮತೆಗಳು ಪಂಪನ ನಿರೂಪಣೆಯ ಹೈಲೈಟ್‌ಗಳು.

ಇದನ್ನು ಭೋಗನಿರಸನದ ಪ್ರಕ್ರಿಯೆಯ ಮೂರು ಮಜಲುಗಳನ್ನು ಪರಿಶೀಲಿಸುವ ಮೂಲಕ ತಿಳಿಯಬಹುದು. ಮೊದಲನೆಯ ಹಂತ ಮಹಾಬಳನದು; ಅವನ ಭೋಗಾಪೇಕ್ಷೆಯ ತೀವ್ರತೆ ಎಷ್ಟೆಂದರೆ ವಯಸ್ಸಾದರೂ ಅವನ ಲಾಂಪಟ್ಯ ಕಡಿಮೆಯಾಗದ ಪ್ರಮಾಣದ್ದು. ಅವನ ಅಮಾತ್ಯರಲ್ಲೊಬ್ಬನಾದ ಸ್ವಯಂಬುದ್ಧ ಎನ್ನುವವನು ತನ್ನ ರಾಜ ಇಳಿವಯಸ್ಸಿನಲ್ಲಿಯೂ ಹೊಂದಿದ್ದ ಲಾಂಪಟ್ಯವನ್ನು ಕಂಡು ಈ ರೀತಿ ಕಳವಳ – ಅಚ್ಚರಿಗಳಿಗೊಳಗಾಗುತ್ತಾನೆ;

ಮುಸು ಮುತ್ತಂತೆ ತೆರಳ್ದ ತನ್ನ ಮೊಗಂ ಕಂಡಳ್ಕನೋ ಕೂಡೆ ಜೋ
ಲ್ದು ಸಡಿಲ್ದಿರ್ದ ಒಡಲ ಅಳ್ಳೆತನಮಂ ಕಾಣನೋ ಸಂತತ
ವ್ಯಸನೋದ್ರೇಕದ ಕುಂದಂ ಏನೋಣರನೋ ಶಕ್ತಿಕ್ಷಯಂ ಕಾಣನೋ
ಬಿಸುಡಂ ಮುನ್ನಿನ ತನ್ನ ಲಂಪಳಿಕೆಯಂ ಮತ್ತಂ ಜರಾಜರ್ಜರಂ

(ಮುದಿತನದಿಂದ ಮುದ್ದೆಯಾಗಿ ಕಪಿಯದರಂತೆ ಕಾಣುವ ತನ್ನ ಮುಖವನ್ನು ಕಂಡೂ ಅಳುಕನಲ್ಲ! ಜೋತುಬಿದ್ದಿರುವ ತನ್ನ ಮೈಯ ಅಳ್ಳೆಗಳ ಟೊಳ್ಳುತನವನ್ನು ಗಮನಿಸದೆ ಇರುವನಲ್ಲ! ವ್ಯಸನೋದ್ರೇಕದಿಂದ ಆದ ಕುಂದನ್ನು ಅವನು ಕಾಣನೇ! ಶಕ್ತಿಯು ಕಡಿಮೆಯಾಗಿರುವುದನ್ನು ಅನುಭವಿಸನೇ! ಮುಪ್ಪಿನಿಂದ ತರತರಿಸುತ್ತಿದ್ದರೂ ಲಂಪಟತೆಯನ್ನು ಮಾತ್ರ ಬಿಡನಲ್ಲ!)

ಮಹಾಬಳನ ಈ ಸಾಮಾನ್ಯ ಭೋಗಾಪೇಕ್ಷೆಯು ಸ್ವಲ್ಪ ಉತ್ತಮಗೊಂಡು ಮುಂದಿನ ಲಲಿತಾಂಗನ ಜನ್ಮದಲ್ಲಿ ಮನಃಪ್ರಿಯೆಯಾದ ಸ್ವಯಂಪ್ರಭೆಯಲ್ಲಿನ ತೀವ್ರಾನುರಕ್ತಿಯಾಗಿ ಮಾರ್ಪಡುತ್ತದೆ. ದೀರ್ಘಕಾಲ ದೇವಲೋಕದಲ್ಲಿ ಅವಳೊಡನೆ ಲೈಂಗಿಕಸುಖವನ್ನು ಅನುಭವಿಸಿದ ಬಳಿಕ ಅವನಿಗೆ ಸ್ವರ್ಗಚ್ಯುತಿಯಾಗುವ ಕಾಲ ಸನ್ನಿಹಿತವಾಗುತ್ತದೆ. ಆಗ ಅವನು ತನ್ನ ಸುಖವು ಕೊನೆಗೊಳ್ಳುವುದಲ್ಲ ಎಂಬ ಅಳಲಿನಿಂದ ಈ ರೀತಿ ಪ್ರಲಾಪಿಸುತ್ತಾನೆ;

ಸಂತಸದ ಅಂತಮನೆಯ್ದಿ ಸುರತಾಮೃತದೊಳ್ ತಣೆದು ಅಟ್ಟಿಜಿಂ ಜಗಿ
ಲ್ದಂತಿರೆ ಪತ್ತಿ ಮೆಯ್ಗಳ್ ಎರಡಾದೊಡಂ ಏನಸುವೊಂದೇ ನೋಟಿಪ್ಪೊಡೆ

ಎಂಬಂತಿರೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆ ಎನ್ನಂ ಉಯ್ವ
ಅಂತಕನೆಂಬ ಬೂತನೆಲೆ ಮಾಣಿಸಲಾಗದೇ ಪೇೞ್ ಸ್ವಯಂಪ್ರಭೇ

(ಸುರತಸುಖದಲ್ಲಿ ಸಂತೋಷದ ತುತ್ತತುದಿಯನ್ನು ಮುಟ್ಟಿ ನಮ್ಮ ಮನಸ್ಸುಗಳು ತಣಿದಿವೆ. ದೇಹಗಳು ಎರಡಾದರೂ ಪ್ರಾಣ ಒಂದೇ ಎಂಬ ರೀತಿಯಲ್ಲಿ ಅವು ಒಂದರೊಡನೊಂದು ಬೆಸೆದುಕೊಂಡಿವೆ. ಹೀಗಿದ್ದರೂ, ಯಮನೆಂಬ ಭೂತವು ನಿನ್ನೊಡನೆ ಭೋಗಿಸಲು ಅವಕಾಶವೀಯದೆ ನನ್ನನ್ನು ಎಳೆದೊಯ್ಯುತ್ತಿರುವಾಗ ನಿನಗೆ ಬಿಡಸಲಾಗದೆ ಸ್ವಯಂಪ್ರಭೇ!)

ಅವನಂತೆಯೇ ಅವನ ನಲ್ಲೆ ಸ್ವಯಂಪ್ರಭೆ ಅವನ ಬಗ್ಗೆ ಇಟ್ಟಿರುವ ಪ್ರೀತಿಯೂ. ಲಲಿತಾಂಗ – ಸ್ವಯಂಪ್ರಭೆಯರ ಅನುರಾಗ ಎಷ್ಟು ತೀವ್ರವೆಂದರೆ ಅದು ಮುಂದಿನ ಜನ್ಮದಲ್ಲಿಯೂ ಮುಂದುವರಿಯುತ್ತದೆ. ಬೇರೆ ಬೇರೆ ಕಡೆಗಳಲ್ಲಿ ಅವರು ವಜ್ರಜಂಘ ಮತ್ತು ಶ್ರೀಮತಿಯರಾಗಿ ಹುಟ್ಟುತ್ತಾರೆ. ಪ್ರಾಪ್ತವಯಸ್ಕರಾಗುತ್ತಾರೆ. ಆದರೆ ಅವರಿಬ್ಬರನ್ನೂ ಹಿಂದಿನ ಜನ್ಮದ ನೆನಪು ಕಾಡುತ್ತದೆ. ಶ್ರೀಮತಿ ತನ್ನ ಪೂರ್ವಜನ್ಮದ ನೆನಪಿನಿಂದಲೇ ವಜ್ರಜಂಘನ ಚಿತ್ರವನ್ನು ಬರೆಯುತ್ತಾಳೆ, ಅವರಿಂದಾಗಿ ಅವರಿಬ್ಬರೂ ಮತ್ತೆ ಒಂದಾಗುವಂತಾಗುತ್ತದೆ. ಆ ಬಳಿಕ ಅವರಿಬ್ಬರೂ ಗಾಢ ಪ್ರೇಮದಿಂದ ಕೆಲಕಾಲ ಬಾಳುತ್ತಾರೆ. ಒಂದು ರಾತ್ರಿ ಅವರ ಮಲಗುವ ಮನೆಯನ್ನು ಸಿದ್ಧಪಡಿಸಿದ ಸೇವಕನು ಕೃಷ್ಣಾಗರುವಿನ ಧೂಪವನ್ನು ಕೆಂಡದಲ್ಲಿ ಹಾಕಿ ಗವಾಕ್ಷಿಯನ್ನು ತೆರೆಯುವುದನ್ನು ಮರೆತು ಹೋಗುತ್ತಾನೆ. ಗಂಡಹೆಂಡಿರಿಬ್ಬರೂ ಒಳಬಂದು ಅಪ್ಪಿಕೊಂಡು ಮಲಗುತ್ತಾರೆ. ಒಳಗೆ ಕೃಷ್ಣೋರಗನಂತೆ ಅಗರುವಿನ ಹೊಗೆ ಎಲ್ಲೆಡೆ ಆವರಿಸಿ ಅವರಿಬ್ಬರೂ ನಿದ್ರಾಪರವಶರಾಗಿರುವಾಗ ಉಸಿರುಕಟ್ಟಿ ಅಪ್ಪಿಕೊಂಡಿರುವಂತೆಯೇ ಸಾಯುತ್ತಾರೆ. ಆ ದೃಶ್ಯವನ್ನು ಕವಿ ಹೀಗೆ ವರ್ಣಿಸಿ ಉದ್ಗರಿಸುತ್ತಾನೆ:

ಬಿಡದೆ ಪೊಗೆ ಸುತ್ತೆ ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮಂ ಅಂದು
ಒಡಗಳೆದರ್ ಓಪರ್ ಓಪರೊಳ್
ಒಡಸಾಯಲ್ ಪಡೆದರ್ ಇನ್ನವೇಂ ಸಯ್ಪು ಒಳವೇ

(ದಟ್ಟವಾಗಿ ಅಗರುವಿನ ಹೊಗೆ ಅವರಿಸಿ ಆ ಪ್ರಾಣವಲ್ಲಭರು ಜೊತೆಗೆ ಅಪ್ಪುಗೆಯಲ್ಲಿಯೇ ಸತ್ತರು. ಅದಕ್ಕಿಂತ ಪುಣ್ಯವಿನ್ನೇನಿದೆ!)

ಮೊದಲು ಕೇವಲ ಲೈಂಗಿಕ ಅಪೇಕ್ಷೆಯಾಗಿದ್ದುದು ಜನ್ಮಾಂತರದಲ್ಲಿ ಕ್ರಮೇಣ ಅನುರಾಗವಾಗಿ ಗಾಢ ಪ್ರೇಮವಾಗಿ ಮಾರ್ಪಟ್ಟಿದೆ. ಹೀಗೆ ಭವಾವಳಿಯು ಮುಂದುವರಿದು ಹತ್ತನೆಯ ಜನ್ಮದಲ್ಲಿ ಈ ಚೇತನ ನಾಭಿರಾಜ – ಮರುತಾದೇವಿಯರ ಮಗ ಆದಿನಾಥ ಅಥವಾ ಋಷಭನಾಗಿ ಜನ್ಮ ತಳೆಯುತ್ತದೆ. ಇದು ಎಲ್ಲರಂತಹ ಮನುಷ್ಯ ಜನ್ಮವೇ, ಹೊರಗೆ ನೋಡಲು. ಆದರೆ ಒಳಗೆ ಪಕ್ವತೆಯನ್ನು ಪಡೆದಂತಹುದು. ಈ ಜನ್ಮದಲ್ಲಿಯೂ ಅವನು

ಯಥಾಪ್ರಕಾರವೇ ಬೆಳೆಯುತ್ತಾನೆ. ಅವನಿಗೆ ಯೌವನೋದಯವಾಗುತ್ತದೆ, ಮಗನಿಗೆ ಮದುವೆ ಮಾಡುವ ಅಪೇಕ್ಷೆ ತಂದೆತಾಯಿಗಳಿಗೆ, ಅವನನ್ನು ಕೂಡಿಸಿಕೊಂಡು ತಂದೆ ಹೀಗೆ ಕೇಳಿಕೊಳ್ಳುತ್ತಾನೆ:

ಶಾಂತಾತ್ಮಾ ಮದುವೆ ನಿಲ್ ನೀಂ
ಇಂತೆನ್ನ ಗೃಹಸ್ಥಧರ್ಮದಿಂದಂ ನೀನೆಂ
ತಂತೆ ಸಲೆ ನೆಗಟ್ಟೆಜಗತೀ
ಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಗುಂ

(ಶಾಂತಾತ್ಮನೇ ಮದುವೆಯಾಗು. ನನ್ನ ಹಾಗೆ ನೀನೂ ಗೃಹಸ್ಥಧರ್ಮವನ್ನು ಅನುಸರಿಸಿದರೆ ಜಗತ್ತಿಗೂ ಸಂತತಿಯು ನಿಲ್ಲುತ್ತದೆ. ನಿನಗೂ ಧರ್ಮಸಂತತಿ ನಿಲ್ಲುತ್ತದೆ). ಅದಕ್ಕನುಗುಣವಾಗಿ ಆದಿನಾಥ ಮದುವೆಯಾಗುತ್ತಾನೆ. ಈಗ ಅವನಲ್ಲಿ ಭೋಗಾಪೇಕ್ಷೆಯೂ ಇಲ್ಲ, ಅನುರಾಗವೂ ಇಲ್ಲ. ಅವನು ಮದುವೆಯಾಗುವುದು ಗೃಹಸ್ಥಧರ್ಮಪಾಲನೆಗಾಗಿ ಮಾತ್ರ. ಮುಂದೆ ಅವನು ಅರಮನೆಯಲ್ಲಿ ನಡೆಯುವ ನೀಲಾಂಜನೆ ಎಂಬುವವಳ ನೃತ್ಯವನ್ನು ನೋಡುತ್ತಿರುವಾಗ, ಅವಳು ನರ್ತಿಸುತ್ತಲೇ ಬಿದ್ದು ಸಾಯುತ್ತಾಳೆ, ಇಂದ್ರ ರಸಭಂಗವಾಗದಿರಲೆಂದು ಯಾರಿಗೂ ತಿಳಿಯದಂತೆ ಅವಳಂತೆಯೇ ಮತ್ತೊಬ್ಬಳನ್ನು ಕ್ಷಣಾರ್ಧದಲ್ಲಿ ಸೃಷ್ಟಿಸಿ ನೃತ್ಯ ಮುಂದುವರಿಯುವಂತೆ ಮಾಡುತ್ತಾನೆ. ಈ ಬದಲು ಬೇರಾರಿಗೂ ತಿಳಿಯದಿದ್ದರೂ ಆದಿನಾಥನ ಸೂಕ್ಷ್ಮತೆಯಿಂದ ಅವನ ಅರಿವಿಗೆ ಬಂದು, ಅವನ ಪಕ್ವ ಜೀವದಲ್ಲಿ ಮಡುಗಟ್ಟಿದ್ದ ವೈರಾಗ್ಯಪರತೆಯು ಹೊರಬರಲು ನೆಪವಾಗುತ್ತದೆ. ಅವನು ದೀಕ್ಷೆ ವಹಿಸಿ ತಪಸ್ಸಿಗೆ ತೆರಳುತ್ತಾನೆ.

ಹೀಗೆ ಜನ್ಮಾಂತರಗಳ ಚಿತ್ರಣದ ಮೂಲಕ ಭೋಗನಿರಸನವನ್ನು ನಿರೂಪಿಸುವ ಕವಿಯು ಮುಂದೆ ಅವನ ಮಕ್ಕಳೇ ಆದ ಭರತ ಮತ್ತು ಬಾಹುಬಲಿಗಳು ರಾಜ್ಯಕ್ಕಾಗಿ ಹೋರಾಡುವ ಪ್ರಸಂಗವನ್ನು ಚಿತ್ರಿಸುವ ಮೂಲಕ ಅಹಂಕಾರದ ಎರಡು ಮಗ್ಗುಲುಗಳನ್ನು ನಮ್ಮ ಮುಂದಿಡುತ್ತಾನೆ. ಹಿರಿಯನೆಂಬ ಕಾರಣದಿಂದ ಚಕ್ರವರ್ತಿಯಾದ ಅಣ್ಣ ಭರತನ ದಬ್ಬಾಳಿಕೆಯನ್ನು ತಮ್ಮ ಬಾಹುಬಲಿ ಪ್ರತಿಭಟಿಸಿ ಅವನೊಡನೆ ಯುದ್ಧಕ್ಕೆ ನಿಲ್ಲುತ್ತಾನೆ. ತಿಳಿವಳಿಕಸ್ಥರು ಅವರಿಗೆ ಸಾಮಾನ್ಯ ಯುದ್ಧವನ್ನು ಬಿಟ್ಟು ಪರಸ್ಪರ ಬಲಪ್ರದರ್ಶನಕ್ಕೆ ಏರ್ಪಾಟು ಮಾಡುತ್ತಾರೆ. ದೃಷ್ಟಿಯುದ್ಧ, ಜಲಯುದ್ಧ ಮತ್ತು ಮುಷ್ಟಿಯುದ್ಧ – ಈ ಮೂರರಲ್ಲಿಯೂ ಹೆಚ್ಚು ಎತ್ತರವಾಗಿದ್ದ ತಮ್ಮ ಬಾಹುಬಲಿ ಅಣ್ಣನನ್ನು ಮಣಿಸುತ್ತಾನೆ. ತೀವ್ರ ಅವಮಾನ, ಆಕ್ರೋಶಗಳಿಂದ ಕೂಡಿದ ಭರತ ತಮ್ಮನನ್ನು ಕೊಲ್ಲಲು ಸಿದ್ಧನಾಗುತ್ತಾನೆ. ಇಡೀ ಬೆಳವಣಿಗೆಯು ಬಾಹುಬಲಿಯಲ್ಲಿ ಐಹಿಕತೆಯ ಬಗ್ಗೆ ತೀವ್ರ ಜಿಹಾಸೆ ತಳೆಯುವಂತೆ ಮಾಡುತ್ತದೆ. ತಾನು ಯುದ್ಧದಲ್ಲಿ ಗೆದ್ದ ರಾಜ್ಯವನ್ನು ಅಣ್ಣನಿಗೇ ಕೊಟ್ಟು ಹೇಳುವ ಮಾತುಗಳಿವು:

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಂ ಈ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ

ವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನ್
ಒಳಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗಟ್ತೆ ಮಾಸದೇ

(ಸೈನಿಕರ ಖಡ್ಗಸಮೂಹವೆಂಬ ಸರೋವರದಲ್ಲಿ ಸುಳಿದಾಡುವ ದುಂಬಿಯಂತಹ ರಾಜ್ಯಲಕ್ಷ್ಮಿಯು ನಿನ್ನ ಎದೆಯಲ್ಲಿಯೇ ಶಾಶ್ವತವಾಗಿ ನೆಲಸಲಿ. ಇದರಿಂದ ಏನಾದೀತು! ಅಲ್ಲದೆ, ಅಣ್ಣನಾದ ನೀನು ಒಲಿದ ಹೆಣ್ಣಿಗಾಗಲೇ ಮಣ್ಣಿಗಾಗಲೀ ಆಸೆಪಟ್ಟರೆ ನನಗೆ ಕೆಟ್ಟ ಹೆಸರು ಬಾರದೇ).

ಆ ಬಳಿ ಅವನು ತಪಸ್ಸಿಗೆ ತೆರಳುತ್ತಾನೆ. ಭರತ ಚಕ್ರವರ್ತಿಯಾಗಿ ಮುಂದುವರಿದರೂ ಕ್ರಮೇಣ ಅವನೂ ಪಕ್ವಗೊಳ್ಳುತ್ತಾನೆ. ಈ ಅಣ್ಣತಮ್ಮಂದಿರ ಮೂಲಕ ಕವಿ ಅಹಂಕಾರದ ಎರಡು ಮಗ್ಗುಲುಗಳ ಪರಿಚಯ ಮಾಡಿಸುತ್ತಿದ್ದಾನೆ. ಇಬ್ಬರೂ ಒಬ್ಬನ ಮಕ್ಕಳು. ಭರತನ ಅಹಂಕಾರದ ಸ್ವರೂಪವು ಮಿಕ್ಕವರನ್ನೆಲ್ಲ ಗೆದ್ದು ತನ್ನ ಹಿರಿಮೆಯನ್ನು ಸ್ಥಾಪಿಸಬೇಕೇಂಬ ಬಗೆಯದಾದರೆ, ಬಾಹುಬಲಿಯದು ಯಾರಿಗೂ ಬಾಗೆನೆಂಬ ಸ್ವಾಭಿಮಾನಸ್ವರೂಪದ್ದು. ಒಂದು ಎಲ್ಲರ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವ ಬಗೆಯದಾದರೆ, ಮತ್ತೊಂದು ತನ್ನತನವನ್ನು ಬಲಿಗೊಡದೆ ಎಲ್ಲರಿಗಿಂತ ತಾನು ಭಿನ್ನ ಎಂಬುದನ್ನು ತೋರಿಸುವುದು, ಎರಡೂ ಒಂದೇ ಭಾವನೆಯ ಮಗ್ಗಲುಗಳು, ಅಲ್ಲದೆ ಇವರಿಬ್ಬರೂ ಆದಿನಾಥನ ಮಕ್ಕಳು, ಅಂದರೆ ಅವನಿಂದಾದವರು, ಅಂದರೆ ಅವನ ಅಹಂಕಾರದ ಹೊರರೂಪಗಳು. ಹೀಗೆ 'ಆದಿಪುರಾಣ'ವನ್ನು ಒಂದು ಚೇತನದ ಮಹಾಪಯಣ ಎಂದು ಪರಿಭಾವಿಸಿದರೆ, ಒಂದೆಡೆ ತನ್ನ ಸುಖದಲ್ಲಿ ಕೇಂದ್ರೀಕೃತವಾಗುವ ಭೋಗಾಕಾಂಕ್ಷೆ, ಮತ್ತೊಂದೆಡೆ ತನ್ನ ಹಿರಿಮೆಯ ಭಾವನೆಯ ಅಹಂಕಾರ – ಇವೆರಡೂ ಅದೇ ಚೇತನದ್ದೇ. ಪ್ರಾಯಶಃ ಆ ಕಾರಣಕ್ಕಾಗಿಯೇ ಕವಿ ಆದಿನಾಥ ಕೇವಲಜ್ಞಾನವನ್ನು ಪಡೆದು ಕೊನೆಗೆ ಪರಿನಿರ್ವಾಣ ಹೊಂದುವ ಸನ್ನಿವೇಶವನ್ನು ಭರತ – ಬಾಹುಬಲಿಗಳ ಯುದ್ಧದ ನಂತರವೇ ಚಿತ್ರಿಸುವುದು. ಭೋಗ – ಅಹಂಕಾರಗಳೂ ಬೇರೆ ಬೇರೆಯಲ್ಲ, ಒಂದೇ ಸ್ವಕೇಂದ್ರಿತ ಆಲೋಚನೆಯ ಎರಡು ಮಗ್ಗುಲಗಳು; ಎರಡರಲ್ಲಿಯೂ ತಾನೇ ಕೇಂದ್ರ, ಅನ್ಯವನ್ನು ಕಡೆಗಣಿಸಿ ತನ್ನ ಬಗ್ಗೆ ಮಾತ್ರ, ತನ್ನ ಸುಖವನ್ನು ಮಾತ್ರ, ತನ್ನ ಶ್ರೇಷ್ಠತೆಯನ್ನು ಮಾತ್ರ ಆಲೋಚಿಸುವ ಪರಿ. ತೀರ್ಥಂಕರತ್ವ ಪ್ರಾಪ್ತವಾಗಬೇಕಾದರೆ ಇವೆರಡೂ ಸಂಪೂರ್ಣವಾಗಿ ಇಲ್ಲವಾಗಬೇಕು.

ಪಂಪನ ವಿಷಯದಲ್ಲಿ ನಾವು ಒಂದಂಶವನ್ನು ಗಮನಿಸಬೇಕು, ಅಥವಾ ಇದು ಜೈನ ಮನೋಭಾವವೂ ಇದ್ದೀತು. ಅವನು ಭೋಗ, ಎಂದರೆ ಲೈಂಗಿಕತೆಯನ್ನು ಸಂಪೂರ್ಣವಾಗಿ ನಿರಾಕರಿಸುವುದಿಲ್ಲ. 'ಆದಿಪುರಾಣ'ವನ್ನು ಬರೆದಾಗ ಪಂಪನಿಗೆ ಮೂವತ್ತೊಂಬತ್ತು – ನಲವತ್ತು ವರ್ಷಗಳು, ಅಂದರೆ ಎಲ್ಲ ಚೈತನ್ಯಗಳೂ ತಮ್ಮ ಉಚ್ಛ್ರಾಯಸ್ಥಿತಿಯಲ್ಲಿರುವ ವಯಸ್ಸು. ಈ ಕಾವ್ಯದ ಆರಂಭದಲ್ಲಿ ಪಂಪ ತನ್ನ ರೂಪದ ಬಗ್ಗೆ, ರಸಿಕತೆಯ ಬಗ್ಗೆ ದೀರ್ಘವಾಗಿ ಹೇಳಿಕೊಳ್ಳುತ್ತಾನೆ. ಮುಂದೆ ಅವನು ಬರೆದ 'ವಿಕ್ರಮಾರ್ಜುನ ವಿಜಯ'ದಲ್ಲಿ ಯಂತೂ ಕಾವ್ಯದ ಆರಂಭದಲ್ಲಿನ ಪ್ರಾರ್ಥನೆಯಲ್ಲಿಯೂ, ಕೊನೆಯ ಫಲಶ್ರುತಿಯಲ್ಲಿಯೂ ಅವನು ಅಪೇಕ್ಷಿಸುವುದು ಮಿಕ್ಕೆಲ್ಲದರ ಜೊತೆಗೆ ಭೋಗವನ್ನೇ. ಕಾವ್ಯದ ಆರಂಭದಲ್ಲಿ ಅವನು ಪ್ರಾರ್ಥಿಸುವುದು ಐವರು ದೇವತೆಗಳನ್ನು,

ಅವರಲ್ಲಿ ಒಬ್ಬನೆಂದರೆ ಸಹಜ ಮನೋಜ, ಅವನನ್ನು ಕವಿ ಕೇಳಿಕೊಳ್ಳುವುದು "ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ" ಎಂದು. ಹಾಗೆಯೇ ಕಾವ್ಯದ ಕೊನೆಯ ಫಲಶ್ರುತಿಯ ಪದ್ಯದಲ್ಲಿ 'ಲೋಕಪೂಜ್ಯವಾದ' ಭಾರತವನ್ನು ಓದಿದವರಿಗೆ, ಕೇಳಿದವರಿಗೆ, ಬರೆದವರಿಗೆ ಅವನ ಪ್ರಕಾರ ಸಿಕ್ಕುವ ಫಲಗಳೆಂದರೆ "ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಾಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ". ಹಾಗಾಗಿ ಪಂಪನ ದೃಷ್ಟಿಕೋನ ಅನುಭವಿಸುವ ಮೊದಲೇ ಐಹಿಕತೆಯನ್ನು ನಿರಾಕರಿಸುವಂಥದಾಗಿರದೆ, ಅವುಗಳನ್ನು ಆರೋಗ್ಯಕರವಾಗಿ ಅನುಭವಿಸುತ್ತ ಕ್ರಮೇಣ ಅವುಗಳನ್ನೇ ಹಿರಿಯ ಆದರ್ಶಗಳಾಗಿ ಮಾರ್ಪಡಿಸಿಕೊಳಬೇಕು, ಇಹವೇ ಪರವಾಗಿ ಅರಳಬೇಕು ಎಂಬುದು. ಕವಿಯ ಕಾವ್ಯವು ಕಂಡುಕೊಂಡ 'ಕಾವ್ಯಧರ್ಮ' ಇದೇ ಅನ್ನಿಸುತ್ತದೆ.

ಆಧುನಿಕ ಮನೋವಿಜ್ಞಾನದ ಕೆಲವು ಪರಿಕಲ್ಪನೆಗಳೂ ಇವಕ್ಕೆ ಸಂವಾದಿಯಾಗಿವೆ ಎಂದು ನನ್ನ ಭಾವನೆ. ನನ್ನ ಸೀಮಿತ ತಿಳಿವಳಿಕೆಯಲ್ಲಿ ವ್ಯಕ್ತಿತ್ವದ ಎರಡು ಪ್ರಮುಖ ಅಂಶಗಳು ಮೂಲಕಾಮ (libido) ಮತ್ತು ಅಹಂಕಾರ (ego) ಇವುಗಳು. ಸಿಗ್ಮಂಡ್ ಫ್ರಾಯ್ಡ್ ಪ್ರಕಾರ ಆದಿಕಾಮವು ಬದುಕಿನ ಮೂಲ ಶಕ್ತಿ. ಆದರೆ ಅವನೇ sublimation ಎಂಬ ಪರಿಕಲ್ಪನೆಯ ಮೂಲಕ ಅದು ಉದಾತ್ತಗೊಳ್ಳುವ ಪರಿಯನ್ನು ಪ್ರತಿಪಾದಿಸುತ್ತಾನೆ. ಯೂಂಗ್ ಲಿಬಿಡೊ ಎಂಬುದು ಮಾನವನ ಸೃಜನಶಕ್ತಿಯೆಂದು ಹೇಳುತ್ತಾನೆ. ಅದರಿಂದಲೇ ಕಲೆ, ಸಾಹಿತ್ಯ ಮುಂತಾದವು ಹೊಮ್ಮುವುದು. ಹೀಗಾಗಿ ಆಧುನಿಕ ಪರಿಭಾಷೆಯ ದೃಷ್ಟಿಯಿಂದಲೂ 'ಆದಿಪುರಾಣ'ವನ್ನು ಅರ್ಥವಿಸಿಕೊಳ್ಳುವುದು ಅನುಕೂಲ. ಮುಕ್ತಿ, ತೀರ್ಥಂಕರತ್ವ, ಪ್ರಪತ್ತಿ – ಇವನ್ನೆಲ್ಲ ಕಂಡವರಾರು? ಹಿಂದೆಯೇ ಹೇಳಿದಂತೆ ನಾವು ಹೊರಡುವ ಆಲೋಚನೆಯ ನೆಲೆಯೇ ನಮ್ಮ ನಿಲವಿನ ಸ್ವರೂಪವನ್ನು ನಿರ್ಧರಿಸುವುದು. ಬದುಕಿನ ಗುರಿಯನ್ನು ಬೇರೆ ಬೇರೆಯವರು ವಿಭಿನ್ನವಾಗಿ ಪರಿಭಾವಿಸಲು ಕಾರಣ ಅವರ ಆಲೋಚನೆಯ ವಿಭಿನ್ನ ನೆಲೆಗಳು. ಅವುಗಳಲ್ಲಿ ಯಾವುದು ಸಮರ್ಪಕವೋ ಯಾರಿಗೆ ಗೊತ್ತು? ಸ್ವಕೇಂದ್ರಿತವಾದ ಪ್ರಜ್ಞೆಯು ಸುತ್ತಲೂ ಹರಡಿಕೊಂಡಾಗ ಉಂಟಾಗುವ ಅನುಭವವೇ ಬೇರೆ. ತನ್ನ ಚೈತನ್ಯವನ್ನು ಸರ್ವಹಿತಕ್ಕಾಗಿ ಬಳಸಿದಾಗ ಉಂಟಾಗುವ ಕೃತಕೃತ್ಯ ಭಾವನೆಯೇ ಬೇರೆ. ಇಂಥ ಕೃತಕೃತ್ಯತೆಯನ್ನು ಅನುಭವಿಸುವ ಕ್ಷಣವು ಬದುಕಿನ ಸಾರ್ಥಕ ಕ್ಷಣ. ಬದುಕಿನುದ್ದಕ್ಕೂ ಇದೇ ಬಗೆಯಲ್ಲಿ ಮುನ್ನಡೆಯುವುದು ಪ್ರಾಯಶಃ ಬದುಕಿನ ಸಾರ್ಥಕ್ಯವೇನೋ.

* * * * * * *

೩. ಪಂಪ ಹಾಗೂ ರಾಜತ್ವ

ನಮ್ಮ ಚಂಪೂ ಕವಿಗಳೆಲ್ಲರೂ ಬರೆದ ಕಾವ್ಯಗಳು ರಾಜಸಂಬಂಧಿಯಾದ ಕತೆಗಳನ್ನೊಳಗೊಂಡವೇ ಆಗಿವೆ. ಇದಕ್ಕೆ ಕಾರಣ ಅವರಲ್ಲಿ ಬಹುತೇಕ ಮಂದಿ ರಾಜಾಶ್ರಯದಲ್ಲಿದ್ದವರು ಎಂಬುದು ಮಾತ್ರವೇ ಆಗಿರದೆ ಅವರ ಕಾಲವು 'ರಾಜಾ ಪ್ರತ್ಯಕ್ಷ ದೇವತಾ' ಅಥವಾ 'ನಾ ವಿಷ್ಣುಃ ಪೃಥಿವೀಪತಿಃ' ಎಂಬ ಅಚಲ ನಂಬಿಕೆ ಹೊತ್ತಂತಹುದು. ಜನಸಾಮಾನ್ಯರಲ್ಲಿ ಮಾತ್ರವಲ್ಲದೆ ಬುದ್ಧಿಜೀವಿ ವರ್ಗದಲ್ಲಿಯೂ ಈ ನಂಬಿಕೆಯಿತ್ತು. ಹಾಗೆ ನೋಡಿದರೆ ಈ ನಂಬಿಕೆಯನ್ನು ಬಿತ್ತಿ ಬೆಳೆದವರು ಬುದ್ಧಿಜೀವಿವರ್ಗದವರೇ. ಕನ್ನಡದ ಎಲ್ಲ ಚಂಪೂ ಕವಿಗಳಿಗೂ, ಅದರಲ್ಲೂ ಮೊದಲ ಧಾರೆಯಾದ ಜೈನ ಕವಿಗಳಿಗೆ ಪಂಪನೇ 'ಆಶ್ರಯದಾತ–ಕಥಾನಾಯಕ ಸಮೀಕರಣ'ದ ಕಾವ್ಯಾದರ್ಶವನ್ನು ಒದಗಿಸಿದವನು.

ತನ್ನ ಕಾಲದ ರಾಜದೈವತ್ವದ ನಂಬಿಕೆ ವೈಯಕ್ತಿಕವಾಗಿ ಪಂಪನಲ್ಲಿಯೂ ತುಂಬಿಕೊಂಡಿತ್ತು. ವೈಯಕ್ತಿಕವಾಗಿ ಎಂದರೆ ವ್ಯಕ್ತಿಯಾಗಿ ಅವನನ್ನು ರೂಪಿಸಿದ್ದ ಗುಣಗಳಲ್ಲಿ ಈ ನಂಬಿಕೆಯೂ ಸೇರಿತ್ತು ಎಂದರ್ಥ. ಅರಿಕೇಸರಿಯ ಬಗ್ಗೆ ಅವನಿಗೆ ಸಂಪರ್ಕ ಯಾವ ರೀತಿಯಿಂದಲೇ ಬಂದಿರಲಿ, ಅವನು ತನಗೆ ಗೌರವಾರ್ಹನಾಗಲು ಪ್ರಮುಖ ಕಾರಣ ರಾಜನಾಗಿದ್ದುದು ಎಂಬುದು. ಒಂದೆಡೆ ಜೈನಧರ್ಮದ ಪರಂಪರೆಯಲ್ಲಿಯೇ ಇದ್ದ ರಾಜತ್ವದ ಬಗೆಗಿನ ಅನನ್ಯ ಗೌರವ, ಮತ್ತೊಂದೆಡೆ ತನ್ನ ಕಾಲದ ಗಾಳಿಯಲ್ಲಿದ್ದ ರಾಜಭಕ್ತಿ ಇವುಗಳು ಪಂಪನ ವ್ಯಕ್ತಿತ್ವದ ಭಾಗವಾಗಿ ತನ್ನ ಕಾವ್ಯದಲ್ಲವನು ರಾಜತ್ವಕ್ಕೆ ಅಪಾರ ಗೌರವವನ್ನು ತೋರಿಸಲು ಕಾರಣವಾಗಿವೆ. ಅಂದರೆ ಅವನು ಬೆಳಗಿದ 'ಜಿನಾಗಮ' ಹಾಗೂ 'ಲೌಕಿಕ'ಗಳೆರಡಲ್ಲಿಯೂ ರಾಜತ್ವವು ವಿಜೃಂಭಿಸುವಂತೆ ಮಾಡುವುದು ಅವನ ಧ್ಯೇಯವೇ ಆಯಿತೋ ಏನೋ.

ಹೀಗಾಗಿ ಪಂಪನಿಗೂ ರಾಜತ್ವಕ್ಕೂ ಎಲ್ಲಿಲ್ಲದ ನಂಟು. ಪಂಪನ ಎರಡೂ ಕಾವ್ಯಗಳು ರಾಜರನ್ನು ಕುರಿತವು. ಪಂಪನ ಮೊದಲ ಕಾವ್ಯವಾದ 'ಆದಿಪುರಾಣ'ವು ಮೊದಲನೆಯ ತೀರ್ಥಂಕರನ ಚರಿತೆ. ಜೈನಪರಂಪರೆಯ ಪ್ರಕಾರ ಎಲ್ಲ ತೀರ್ಥಂಕರರೂ ರಾಜರುಗಳೇ, ಮೊದಲನೆಯ ತೀರ್ಥಂಕರನೂ ಇದಕ್ಕೆ ಹೊರತಲ್ಲ. ಜೊತೆಗೆ 'ಭವಾವಳಿ'ಯಲ್ಲಿ ಚಿತ್ರಿತವಾಗಿರುವ ಹಿಂದಿನ ಜನ್ಮಗಳೆಲ್ಲದರಲ್ಲಿಯೂ ಅವನು ರಾಜನಾಗಿದ್ದವನನು. ಇನ್ನು ಎರಡನೆಯ ಕಾವ್ಯ 'ವಿಕ್ರಮಾರ್ಜುನ ವಿಜಯಂ'ನಲ್ಲಿ ತನ್ನ ಆಶ್ರಯದಾತ ರಾಜನನ್ನು ಕಥಾನಾಯಕನಾದ ಅರ್ಜುನನೊಡನೆ ಸಮೀಕರಿಸಿ ಅವನಿಗೆ ಅರೆದೈವತ್ವವನ್ನು ಒದಗಿಸಿದವನು. ಇದರಿಂದ ಉಭಯತ್ರರಿಗೂ ಲಾಭವಾಯಿತು.

ಮೊದಲು 'ಆದಿಪುರಾಣ'ದ ಕಡೆ ಗಮನ ಹರಿಸೋಣ. ಆದಿ ತೀರ್ಥಂಕರನ ಕಾಲಕ್ಕೆ ಇದ್ದುದು ಮೂರೇ ವರ್ಣಗಳು: ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ. ಈ ಅನುಕ್ರಮದಲ್ಲಿ ಕ್ಷತ್ರಿಯನೇ ಅತ್ಯಂತ ಶ್ರೇಷ್ಠ; ಹಾಗಾಗಿಯೇ ತೀರ್ಥಂಕರರೆಲ್ಲ ಕ್ಷತ್ರಿಯರು ಅರ್ಥಾತ್ ರಾಜರು. ಅವನಿಗಿಂತ ಮುಂಚೆ ಈ ತ್ರಿವರ್ಣಗಳಲ್ಲಿನ ಕರ್ತವ್ಯಗಳ ಹಾಗೂ ಕೊಳುಕೊಡುಗೆಗಳ ವಿಷಯದಲ್ಲಿ ಗೊಂದಲವಿತ್ತೆಂದು ಕಾಣುತ್ತದೆ; ಹೀಗಾಗಿ ಪುರುದೇವನು ಈ ಮೂರೂ ವರ್ಣಗಳವರಿಗೆ ನಿರ್ದಿಷ್ಟ ಕೆಲಸಗಳನ್ನು ನಿಯಮಿಸಿದ. ಅಲ್ಲದೆ "ವರ್ಣಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ"ದನಂತೆ. ಇದರಿಂದ ವರ್ಣಗಳು ತಮ್ಮ ಶುದ್ಧತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿ ಎಂಬುದು ಅವನ ಉದ್ದೇಶವಾಗಿದ್ದಿರಬೇಕು. ಆನಂತರದಲ್ಲಿ "ಫಳಕುಸುಮ ಪ್ರವಾಳಹರಿತಾಂಕುರ ರಾಜಿಯೊಳಲ್ಲಿ ಜೀವಸಂಕುಳಮಳವಲ್ಲದುಂಟು" ಎಂಬ ಪ್ರಜ್ಞೆಯನ್ನು ತೋರಿಸಿದ ಜನರನ್ನು ಬ್ರಾಹ್ಮಣ ಎಂಬ ಹೊಸ ವರ್ಣದಿಂದ ಗುರುತಿಸಿದವನು ಭರತ ಚಕ್ರವರ್ತಿ. ಆದರೆ ಈ ಬ್ರಾಹ್ಮಣ ವರ್ಣದವರು

ಧರೆಯೊಳ್ ಧರ್ಮಾರ್ಥದಿಂ ನೀಂ ಸೃಜಿಯಿಸಿ ನೆಗಟ್ದೀ ವಿಪ್ರಸಂತಾನದೊಂದಾ
ಚರಣಂ ನೀನೆಂದ ಪಾಂಗಿಂ ಕೃತಯುಗದೊಳೆ ದಲ್ ಸಲ್ಗುಮಿನ್ನತ್ತ ನಪ್ಪಾ
ಚರಣಂ ಸನ್ಮಾರ್ಗದೊಳ್ ಮಚ್ಚರಿಸಿ ಕಲಿಯುಗಾಭ್ಯರ್ಣದೊಳ್ ದ್ರವ್ಯಲೋಭಾ
ತುರರುನ್ಮಾರ್ಗೋಪದೇಶೋದ್ಯತ ಮತಿಗಳತಿ ಕ್ರೂರಪ್ಪರ್ ದ್ವಿಜನ್ಮರ್

ಎಂದು ಆದಿತೀರ್ಥಂಕರನು ಭವಿಷ್ಯ ನುಡಿದ. ಹೀಗಾಗಿ ವರ್ಣಗಳಲ್ಲೆಲ್ಲ ಕ್ಷತ್ರಿಯವೇ ಶ್ರೇಷ್ಠ, ಅದೆಂದೂ ಕೆಡದು ಎಂಬ ವಿಶ್ವಾಸವಿದೆ. ಜೈನರು ಮೂಲತಃ ದೇವರಲ್ಲಿ ನಂಬಿಕೆಯಿಲ್ಲದವರು; ಹಾಗಾಗಿ ರಾಜರ ದೈವತ್ವದ ಪರಿಕಲ್ಪನೆ ಅವರಲ್ಲಿಲ್ಲ. ಆದರೆ ತೀರ್ಥಂಕರರೆಲ್ಲ ರಾಜ(ಕ್ಷತ್ರಿಯ)ರು; ಹೀಗಾಗಿ ರಾಜರಲ್ಲಿ ತೀರ್ಥಂಕರಾಂಶವಿದೆಯೆಂಬ ಭಾವನೆ ಜೈನರಲ್ಲಿದ್ದಿರಬಹುದು[೧].

ಆದಿ ತೀರ್ಥಂಕರ ಚರಿತೆಯಲ್ಲಿ ವೈರಾಗ್ಯಭರದಿಂದ ರಾಜರು ತಮ್ಮ ಸ್ಥಾನವನ್ನು ತೆರವುಗೊಳಿಸುವ ಪ್ರಸಂಗಗಳಿವೆ. ಆದರೆ ಬಾಲ್ಯದಿಂದಲೇ ರಾಜತ್ವದ ಬಗೆಗಿನ ನಿರಸನ ಎಲ್ಲಿಯೂ ಕಾಣಿಸುವುದಿಲ್ಲ. ಪುರುದೇವನು "ಅಱುವತ್ತುಮೂಱು ಲಕ್ಕೆ ಪುಬ್ಬಂ ರಾಜ್ಯಕಾಲಂ ಸಲೆ" ರಾಜ್ಯಭಾರ ಮಾಡಿದನಂತೆ. ತಾನು ರಾಜ್ಯತ್ಯಾಗ ಮಾಡಿ ಜೈನದೀಕ್ಷೆಯನ್ನು ಪಡೆಯುವ ಸಂದರ್ಭದಲ್ಲಿ "ವೃಷಭನಾಥಂ ಭರತ

---

೧. ತನ್ನ 'ಸಮಯ ಪರೀಕ್ಷೆ'ಯಲ್ಲಿ ಬ್ರಹ್ಮಶಿವ ಈ ಬಗ್ಗೆ ಸ್ಪಷ್ಟವಾಗಿಯೇ ಹೇಳುತ್ತಾನೆ:

ಕ್ಷತ್ರಿಯನೆ ಧಾತ್ರಿಗೊಡೆಯಂ
ಕ್ಷತ್ರಿಯನಾರ್ಗೇನನಿತ್ತನದು ದೆಯ್ವಕೃತಂ।
ಕ್ಷತ್ರಿಯನೆ ತೀರ್ಥಕರನಾ
ಕ್ಷತ್ರಿಯನದಱಿಂದೆ ಪಿರಿಯನೆಲ್ಲಂದದೊಳಂ॥ (ಸಮಯ ಪರೀಕ್ಷೆ: ೨. ೨೩)

ರಾಜನಂ ಬರಿಸಿ ರಾಜ್ಯಾಭಿಷೇಕಂಗೆಯ್ದು ಬಾಹುಬಲಿಗಂ ಯುವರಾಜ ಪದವಿಯಂ ದಯೆಗೆಯ್ದಯೋಧ್ಯಾ ಪೌದನಪುರಾಧಿಪತ್ಯದೊಳಿರ್ವರುಮಂ ನಿಜಿಸಿ ಉಟಿದಪತ್ಯವರ್ಗಕ್ಕೆಲ್ಲಮಿಳಾತಳ ವಿಭಾಗಮುಮಂ ಪಚ್ಚುಕೊಟ್ಟು" ಹೋದನಂತೆ. ಅಂದರೆ ವೈರಾಗ್ಯ ವೈಯಕ್ತಿಕವಾದದ್ದು; ಅದನ್ನು ಮಿಕ್ಕವರಲ್ಲಿ ನಿರೀಕ್ಷಿಸದೆ ತನ್ನ ದೀಕ್ಷಾಸಮಯದಲ್ಲಿಯೂ ಆಸ್ತಿಯನ್ನು ಎಚ್ಚರಿಕೆಯಿಂದ ವಿಭಾಗ ಮಾಡಿಕೊಡುವ ವ್ಯಾವಹಾರಿಕತೆಯನ್ನಿಲ್ಲಿ ಪ್ರದರ್ಶಿಸುತ್ತಾನೆ. ಹೀಗಾಗಿ ರಾಜತ್ವ ತನ್ನಲ್ಲಿಯೇ ತ್ಯಾಜ್ಯವೇನಲ್ಲ, ವೈರಾಗ್ಯವಿಲ್ಲದೆ ಅದನ್ನು ಬಿಡಬೇಕಾದ್ದಿಲ್ಲ ಎಂಬುದು ವ್ಯಾಪಕವಾದ ಜೈನ ನಂಬಿಕೆ.

ಪಂಪನಿಗೆ ತನ್ನ ಆಶ್ರಯದಾತನ ಜೊತೆಗಿದ್ದ ಸಂಬಂಧ ಅನನ್ಯವಾದುದು; ಜೊತೆಗೆ ಅವನ ಮೇಲೆ ಪ್ರಭಾವ ಬೀರುವಂತಹುದು. ಎಷ್ಟೆಂದರೆ, ರಾಜ ತನಗೆ ಬಿರುದು ನೀಡುವ ಬದಲು ತಾನೇ ತನ್ನ ಬಿರುದನ್ನು ರಾಜನಿಗೆ ಅಳವಡುವಂತೆ ಮಾಡುವಷ್ಟು ಅವನು ಪ್ರಭಾವಶಾಲಿಯಾಗಿದ್ದ. 'ಆದಿಪುರಾಣ'ದ ರಚನೆಯ ಕಾಲಕ್ಕೆ ಪಂಪ ರಾಜಾಶ್ರಯದಿಲ್ಲಿರಲಿಲ್ಲವೆನಿಸುತ್ತದೆ. ಇದ್ದಿದ್ದರೆ ಅದರ ಪ್ರಸ್ತಾಪ ಆ ಕಾವ್ಯದಲ್ಲಿರುತ್ತಿತ್ತು. 'ಆದಿಪುರಾಣ'ದ ಮೊದಲ ಆಶ್ವಾಸದ ಇಪ್ಪತ್ತೇಳನೆಯ ಪದ್ಯವನ್ನು ನೋಡಿ:

ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗ
ಕ್ಕದಱಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ
ಭ್ಯುದಯಪ್ರಾಪ್ತಿಮಿತ್ರಮುತ್ತಮಯಶಂ ಸಂಸಾರದೊಳ್ಸಾರಮ
ಪ್ಪುದಱಿಂ ಧರ್ಮಮಂ ನಿಮಿರ್ಚುವುದಱಿಂ ಸಂಸಾರ ಸಾರೋದಯಂ

ತನ್ನ ಕವಿತ್ವವು ಅರ್ಣವದಂತೆ 'ನಿಚ್ಚಂ ಪೊಸತಾ'ದುದುರಿಂದ ತಾನು 'ಕವಿತಾಗುಣಾರ್ಣವ' ಎಂದು ಕವಿ ಹೇಳಿಕೊಳ್ಳುತ್ತಾನೆ ಪಂಪ. ಅಂದರೆ ರಾಜಾಶ್ರಯಕ್ಕೆ ಬರುವ ಮುಂಚೆಯೇ ಅವನಿಗೆ ಈ ಬಿರುದು ಇತ್ತು. ಇದು ಬೇರೆ ಯಾರಾದರೂ ಕೊಟ್ಟ ಬಿರುದಾಗಿರದೆ ತನ್ನನ್ನು ತಾನು ವಿಶೇಷಿಸಿಕೊಂಡ ರೀತಿಯಾಗಿದ್ದಂತೆ ಕಾಣುತ್ತದೆ. ಏಕೆಂದರೆ ಅವನು ಆಗ ರಾಜಾಶ್ರಯದಲ್ಲಿ, ಅಥವಾ ಇನ್ನಾವುದೇ ಆಶ್ರಯದಲ್ಲಿ ಇರಲಿಲ್ಲ; ಹಾಗೂ ಅವನಿನ್ನೂ ಏನನ್ನೂ ಬರೆದೇ ಇರಲಿಲ್ಲ. ಹೀಗಾಗಿ ಇದು ಸ್ವಯಂವರ್ಣನೆ ಎಂದು ಭಾವಿಸಬಹುದು.

ಈಗ 'ವಿಕ್ರಮಾರ್ಜುನ ವಿಜಯಂ'ನಲ್ಲಿ ಕಾಣಬರುವ ರಾಜತ್ವ ಸಂಬಂಧೀ ಅಂಶಗಳನ್ನು ಗಮನಿಸಬಹುದು. ಮೊದಲ ಆಶ್ವಾಸದ ಹತ್ತನೆಯ ಪದ್ಯವನ್ನು ನೋಡೋಣ:

ಕವಿಗಳ ನಾಮಧಾರಕ ನರಾಧಿಪರೋಳಿಯೊಳೀತನೊಳ್ಳಿದಂ
ಕವಿ ನೃಪನೀತನೊಳ್ಳಿದನೆನಲ್ ದೊರೆಯಲ್ತು ನೆಗಟ್ಟಿತ್ತೆವೆತ್ತ ಸ
ತ್ಕವಿಗಳ ಷೋಡಶಾವನಿಪರೋಳಿಯೊಳಂ ಕವಿತಾ ಗುಣಾರ್ಣವಂ
ಕವಿತೆಯೊಳಗ್ಗಳಂ ಗುಣದೊಳಗ್ಗಳಮೆಲ್ಲಿಯುಮೀ ಗುಣಾರ್ಣವಂ

ತಾನು ಕವಿಗಳ ಹೆಸರುಮಾತ್ರದವನಲ್ಲ, ಅರಿಕೇಸರಿ ನರಾಧಿಪ ಎಂಬ ಹೆಸರು ಮಾತ್ರ ಪಡೆದವನಲ್ಲ; ತಾನು 'ಕವಿತಾಗುಣಾರ್ಣವ' ಈತ 'ಗುಣಾರ್ಣವ'. ಅಂದರೆ ರಾಜಾಶ್ರಯಕ್ಕೆ ಬರುವ ಮುಂಚೆ ತನ್ನನ್ನು ಬಣ್ಣಿಸಿಕೊಂಡಿದ್ದಂತೆಯೇ ತನ್ನ ಆಶ್ರಯದಾತನನ್ನೂ ಕರೆದ. ಅಂದರೆ ಅರಿಕೇಸರಿಯ ಈ ವಿಶೇಷಣ ಕವಿ ಇತ್ತುದು; ಅದೂ ತನ್ನದರಂತೆಯೇ ಇರುವಂಥದು. ಎಂದರೆ ತನ್ನ ಗುಣಕ್ಕನುಗುಣನಾದವನು ಅರಿಕೇಸರಿ ಎಂಬ ಭಾವವಿಲ್ಲಿದೆ.

ಅಲ್ಲದೆ, ಅದೇ ಕಾವ್ಯದ ಹದಿನಾಲ್ಕನೆಯ ಆಶ್ವಾಸದ ಐವತ್ತನಾಲ್ಕನೇ ಪದ್ಯವು ಮತ್ತೊಂದು ಕಾರಣದಿಂದ ಉಲ್ಲೇಖನೀಯ. ಆ ಪದ್ಯ ಹೀಗಿದೆ:

ಎನೆ ಸಕಲಾವನೀತಳ ಜನಂ ಪಿರಿದುಂ ದಯೆಗೆಯ್ದು ಸಾರ್ಚೆ ಮೆ
ಲ್ಲನೆ ಪಿರಿದಪ್ಪ ಗೌರವದ ಮೈಮೆಯ ಮನ್ನಣೆಯೋಳಿಗಳ್ ಕರಂ
ಮನಮನಲರ್ಚೆ ಕೀರ್ತಿ ಜಗದೊಳ್ ನಿಲೆ ಪೇಟಿಸಿದಂ ಜಗಕ್ಕೆ ನ
ಚ್ಚಿನ ಕವಿತಾಗುಣಾರ್ಣವನಿನೀ ಕೃತಿ ಬಂಧನಮಂ ಗುಣಾರ್ಣವಂ

ತಾನು ಈ ಕಾವ್ಯವನ್ನು ಈ ಬಗೆಯಲ್ಲಿ ರಚಿಸುವ ಮೂಲಕ ತನ್ನ ಆಶ್ರಯದಾತನ ಕೀರ್ತಿಯನ್ನು ಚಿರಸ್ಥಾಯಿಯಾಗಿ ಮಾಡುತ್ತಿದ್ದೇನೆ ಎಂಬ ಪ್ರಜ್ಞೆ ಪಂಪನಿಗಿತ್ತೆಂಬುದು ಇಲ್ಲಿ ವಿದಿತವಾಗುತ್ತದೆ. ಎಂದರೆ ರಾಜನಿಂದ ತನಗಾದ ಉಪಯೋಗಕ್ಕಿಂತಲೂ ತಾನು ಅವನಿಗೆ ಸಲ್ಲಿಸುತ್ತಿರುವ ಸೇವೆ ಹೆಚ್ಚು ಮೌಲಿಕವಾದುದೆಂಬ ಅರಿವು ಅವನಲ್ಲಿತ್ತು. (ತಮ್ಮಿಬ್ಬರ ಪ್ರಸ್ತಾಪ ಒಟ್ಟಿಗೆ ಬಂದಾಗ ಪಂಪ ತನ್ನ ವಿಶೇಷಣವನ್ನು ಮೊದಲು ಹೇಳಿಕೊಂಡು ಆನಂತರ ಅರಿಕೇಸರಿಯದನ್ನು ಉಲ್ಲೇಖಿಸುತ್ತಾನೆ ಎಂಬ ಅಂಶವೂ ಗಮನಾರ್ಹ).

ಇಡೀ 'ವಿಕ್ರಮಾರ್ಜುನ ವಿಜಯ'ವು ಪ್ರಜ್ಞಾಪೂರ್ವಕ ನೆಲೆಯಲ್ಲಿ ರಾಜತ್ವದ ವೈಭವೀಕರಣಕ್ಕೆ ಮತ್ತು 'ವೀರ ಭೋಜ್ಯಾ ವಸುಂಧರಾ' ಎಂಬ ರಾಜರ ಆದರ್ಶನಿರೂಪಣೆಗೆ ಮೀಸಲಾಗಿದೆ. ಆ ಕಾಲವು 'ವೀರಯುಗ' ಎನ್ನಿಸಿಕೊಳ್ಳಲು ಆಗಿನ ಸಾಮ್ರಾಜ್ಯಶಾಹಿ ಆಕಾಂಕ್ಷೆಗೆ ಸಾಧನವಾದ ಯುದ್ಧದ ಬಗೆಗಿನ ಮನೋಭಾವ. ಸಾಮಾನ್ಯ ಜನಕ್ಕೆ ಇದು ಬೇಕಿತ್ತೋ ಇಲ್ಲವೋ (ಪ್ರಾಯಶಃ ಇಲ್ಲ), ರಾಜರಿಗಂತೂ ಇದು ಆವಶ್ಯಕವಾಗಿತ್ತು. ರಾಜರಿಗೆ ಪ್ರಿಯವಾದುದು ಲೌಕಿಕ ದೃಷ್ಟಿಕೋನದಿಂದಾಗಿ, ಅಂದರೆ ಹಣ ಮತ್ತು ಮಾನ್ಯತೆಗಳ ಕಾರಣದಿಂದ, ಜನರಿಗೂ ಬೇಕಾಗಿದ್ದಿತು. ಈ ಕಾರಣದಿಂದ ರಾಜತ್ವಪೂರಕ ಮೌಲ್ಯಗಳಿಗೆ ಬಹು ಬೆಲೆ ಬಂತು. "ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ। ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ" ಎಂಬ ಮನೋಭಾವವನ್ನು ಈ ಕಾರಣದಿಂದಲೇ ಜನರಲ್ಲಿ ಬಿತ್ತಲಾಯಿತು. ಕವಿಗಳೂ ತಮ್ಮ ಕಾವ್ಯಗಳಲ್ಲಿ ಇದನ್ನು ವೈಭವೀಕರಿಸಿದರು.

ಪಂಪ ಇದಕ್ಕೆ ಹೊರತಲ್ಲ. ತನ್ನ 'ವಿಕ್ರಮಾರ್ಜುನವಿಜಯ'ದಲ್ಲಿ ಅವನು ಉದ್ದಕ್ಕೂ ಮಾಡಿಕೊಂಡು ಬಂದಿರುವುದು ಇದನ್ನೇ. ಕಾವ್ಯದ ಹೆಸರೇ ಇದನ್ನು ಸೂಚಿಸುತ್ತದೆ; ಅದು ಭಾರತವಲ್ಲ, ವಿಕ್ರಮಾರ್ಜುನವಿಜಯ. ಅಲ್ಲಿನ ಮೊದಲ ಪದ್ಯದಿಂದ ಕೊನೆಯದರವರೆಗೆ ಕವಿ ಇದನ್ನು ಮಾಡಿದ್ದಾನೆ. ಕಾವ್ಯಗಾತ್ರದಲ್ಲಿ ಸುಮಾರು ಶೇಕಡ ನಲವತ್ತೈದರಷ್ಟು

ಯುದ್ಧವರ್ಣನೆಗೆ ಮೀಸಲಾಗಿದೆ. ಮೊದಲ ಆಶ್ವಾಸದ ಮೂವತ್ತೇಳು ಪದ್ಯಗಳು (೧೪ ರಿಂದ ೫೧) ಕವಿಯು ತನ್ನ ಆಶ್ರಯದಾತನ ವಂಶಜರು ನಡೆಸಿದ ವೀರಕೃತ್ಯಗಳ ವರ್ಣನೆಗೆ ಮೀಸಲಾಗಿವೆ. ಹದಿನಾಲ್ಕನೆಯ ಆಶ್ವಾಸದ ಇಪ್ಪತ್ತಾರರಿಂದ ಮೂವತ್ತನೇ ಪದ್ಯದವರೆಗಿನ ಸಂಸ್ಕೃತ ವೃತ್ತಗಳಲ್ಲಿ ವೈತಾಳಿಕನ ಮಾತುಗಳ ಮೂಲಕವೂ, ಮುಂದಿನ ಏಳು ಕನ್ನಡ ಪದ್ಯಗಳಲ್ಲಿ ಮಂಗಳಪಾಠಕರ ಮೂಲಕವೂ ಅರಿಕೇಸರಿಯ ಶೌರ್ಯವನ್ನು ವೈಭವೀಕರಿಸಿ ವರ್ಣಿಸುತ್ತಾನೆ. ಅಲ್ಲದೆ ಅರ್ಜುನ ನಡೆಸಿದ ದಾಳಿಗಳೆಲ್ಲ ಅರಿಕೇಸರಿಯವೇ ಎಂಬಂತಿದೆ ಇಡೀ ಕಾವ್ಯದ ಚಿತ್ರಣ

ಕಾವ್ಯದ ಮೊದಲ ಪದ್ಯದಿಂದ ಕೊನೆಯವರೆಗೂ ಕವಿ ವೀರತ್ವದ ವೈಭವೀಕರಣ ಮಾಡಿದ್ದಾನೆಂಬ ಪ್ರಸ್ತಾಪ ಹಿಂದೆಯೇ ಬಂದಿದೆ. ಈಗ 'ವಿಕ್ರಮಾರ್ಜುನ ವಿಜಯ'ದ ಪ್ರಾರ್ಥನಾ ಪದ್ಯಗಳನ್ನು ನೋಡೋಣ. ಮೊದಲ ಆಶ್ವಾಸದ ಮೊದಲ ನಾಲ್ಕು ಪದ್ಯಗಳಲ್ಲಿ ಕವಿಯು ಕ್ರಮವಾಗಿ ನಾರಾಯಣ, ಮಹೇಶ್ವರ, ಮಾರ್ತಾಂಡ ಹಾಗೂ ಮನೋಜರನ್ನು ಸ್ತುತಿಸಿದಂತೆ ಕಾಣುತ್ತದೆ. ಆ ಪದ್ಯಗಳ ಪೂರ್ಣ ಪಾಠ ಹೀಗಿದೆ:

ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ
ಜೀಯನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ
ತ್ಮೀಯ ಸುಪುಷ್ಪಪಟ್ಟಮನೊಡಂಬಡೆ ತಾಳ್ದಿಯುಮಿಂತುದಾತ್ತನಾ
ರಾಯಣನಾದ ದೇಮನೆಮಗೀಗರಿಕೇಸರಿ ಸೌಖ್ಯಕೋಟಿಯಂ

ಮುಳಿಸು ಲಲಾಟ ನೇತ್ರಶಿಖಿ ಮೆಚ್ಚೆ ವಿನೂತರಸಪ್ರಸಾದಮು
ಜ್ವಳ ಜಸಮಂಗಸಂಗತ ಲಸದ್ಭಸಿತಂ ಪ್ರಭುಶಕ್ತಿ ಶಕ್ತಿ ನಿ
ರ್ಮಳಮಣಿಭೂಷಣಂ ಫಣಿಭೂಷಣಮಾಗೆ ನೆಗಟ್ತೆಯಿಂ ಪುದುಂ
ಗೊಳಿಸಿದನೀಶ್ವರಂ ನೆಗಟ್ಟುದಾರ ಮಹೇಶ್ವರನೀಗೆ ಭೋಗಮಂ

ಚಂಡವಿರೋಧಿ ಸಾಧನ ತಮಸ್ತಮಮೋಡೆ ವಿಶಿಷ್ಟ ಪದ್ಮಿನೀ
ಷಂಡಮರಲ್ದು ರಾಗದಿನೊಱಲ್ದಿರೆ ಯಾಚಕ ಭೃಂಗಕೋಟಿ ಕೈ
ಕೊಂಡು ನಿರಂತರಂ ತಗುಳ್ದು ಕೀರ್ತಿಸೆ ಮಿಕ್ಕೆಸೆವ ಪ್ರಚಂಡ ಮಾ
ರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ

ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಯೊಳ್ ಪೊದಳ್ದು ಸ
ನ್ನಿಹಿತವೆನಿಪ್ಪಪೂರ್ವ ಶುಭಲಕ್ಷಣ ದೇಹದೊಳೊಳ್ಪನಾಳ್ದು ಸಂ
ದಹಿಕಟಕ ಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ
ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ

ಆದರೆ ಅಲ್ಲಿ ನಡೆದಿರುವುದು ಈ ದೇವತೆಗಳ ಸ್ತುತಿಯಲ್ಲ, ಬದಲಿಗೆ ಅವರಿಗಿಂತ

ಮಿಗಿಲಾದ ತನ್ನ ಆಶ್ರಯದಾತ ಅರಿಕೇಸರಿಯ ಸ್ತುತಿ. (ಹೋಲಿಕೆಯಿಂದಾಗಿ ದೇವತೆಗಳ ಗೇಲಿ!) ಮೊದಲ ಪದ್ಯದಲ್ಲಿ ನಾರಾಯಣನಿಗಿಂತ ಮಿಗಿಲಾದ "ಉದಾತ್ತ ನಾರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ" ಎಂದೂ; ಎರಡನೆಯದರಲ್ಲಿ "ಉದಾರ ಮಹೇಶ್ವರನೀಗೆ ಭೋಗವಮಂ" ಎಂದೂ; ಮೂರನೆಯ ಪದ್ಯದಲ್ಲಿ "ಪ್ರಚಂಡ ಮಾರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ" ಎಂದೂ; ಹಾಗೂ ನಾಲ್ಕನೆಯದರಲ್ಲಿ "ಸಹಜಮನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ" ಎಂದೂ ಕವಿ ಪ್ರಾರ್ಥಿಸುತ್ತಾನೆ. ವೈದಿಕ ದೇವರು ನಾರಾಯಣನಾದರೆ ತನ್ನ ಆಶ್ರಯದಾತ 'ಉದಾತ್ತ ನಾರಾಯಣ'; ಅವನು ಮಹೇಶ್ವರನಾದರೆ, ತನ್ನ ಪ್ರಭು 'ಉದಾರ ಮಹೇಶ್ವರ'; ಆತ ಚಂಡವಿರೋಧಿಯಾದರೆ ತನ್ನ ಯಜಮಾನ 'ಪ್ರಚಂಡ ಮಾರ್ತಾಂಡ'; ಹಾಗೆಯೇ ಮೂಲದವನು ಮನೋಜನಾದರೆ, ತನ್ನೊಡೆಯ 'ಸಹಜಮನೋಜ' [೨].

ಶ್ರೀತಳ್ತುರದೊಳ್ ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವನನಗಲಳ್
ನೀತಿನಿರತರನುದಾರನಾ ನೃಪತುಂಗಂ

ಕೃತಕೃತ್ಯಮಲ್ಲನಪ್ರತಿ
ಹತವಿಕ್ರಮನೊಸೆದು ವೀರನಾರಾಯಣನ
ಪ್ರತಿಶಯಧವಳಂ ನಮಗೀ
ಗತರ್ಕಿತೋಪಸ್ಥಿತ ಪ್ರತಾಪೋದಯಮಂ

---

೨ ಪಂಪನು ನಿರೀಶ್ವರನಾದ ನವಜೈನನಾದುದರಿಂದ ವೈದಿಕ ದೇವರುಗಳ ಬಗ್ಗೆ ಅಂಥ ಭಕ್ತಿಯಿರಲಿಲ್ಲವೇ, ಅಥವಾ ದೈವಭಕ್ತಿಯನ್ನೂ ಮೀರಿಸಿದ ಅವನ ಸ್ವಾಮಿಭಕ್ತಿ ಕಾರಣವೇ, ಅಂತೂ ತನಗೆ ಸೌಖ್ಯಕೋಟಿ, ಭೋಗ, ಹೃದಯಾಂಬುಜದ ಅಲರ್ಚುಗೆ ಹಾಗೂ ವಿಚಿತ್ರ ರತೋತ್ಸವಗಳನ್ನು ನೀಡುವವನು ಅರಿಕೇಸರಿ ಎಂಬ ಭಾವನೆ ಪಂಪನಲ್ಲಿದ್ದಂತಿದೆ. ವೈದಿಕ ದೇವರೊಡನೆ ಹೋಲಿಸಿ ತನ್ನ ಆಶ್ರಯದಾತನೇ ಅವರಿಗಿಂತ ಮಿಗಿಲು ಎಂಬ ರೀತಿಯ ವರ್ಣನೆ ಮಾಡಲು ಪಂಪನಿಗೆ ಕವಿರಾಜಮಾರ್ಗಕಾರ ಮಾದರಿಯಾಗಿರುವಂತಿದೆ. 'ಕವಿರಾಜಮಾರ್ಗ'ದ ಮಂಗಳಾಚರಣೆಯ ಎರಡು ಪದ್ಯಗಳಲ್ಲಿ ಕವಿ ನಾರಾಯಣನಿಗೂ ನೃಪತುಂಗನಿಗೂ ಹೋಲಿಕೆಯನ್ನು ಮಾಡುತ್ತಿದ್ದಾನೆ ಕವಿ.

ಇನ್ನು ಕಾವ್ಯದ ಕೊನೆಯ ಕಡೆ ಗಮನ ಹರಿಸೋಣ. ಹದಿನಾಲ್ಕನೆಯ ಆಶ್ವಾಸದ ಅರವತ್ತನಾಲ್ಕನೆಯ ಪದ್ಯವನ್ನು (ಅಂದರೆ ಇಡೀ ಕಾವ್ಯದ ಕೊನೆಯ ಪದ್ಯದ ಹಿಂದಿನದು) ನೆನಪಿಸಿಕೊಳ್ಳೋಣ:

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪ ವಿದ್ಯಾ

ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ

ಭಾರತವನ್ನು ಲೋಕಪೂಜ್ಯವಾಗಿ ಮಾಡಿರುವ ಪಾತ್ರಗಳಿವು: ದುರ್ಯೋಧನ, ಇನತನಯ, ಭೀಮಸೇನ, ಮದ್ರೇಶ (ಶಲ್ಯರಾಜ), ಅಮರಸಿಂಧೂದ್ಭವ (ಭೀಷ್ಮ), ಕುಂಭೋದ್ಭವ (ದ್ರೋಣ), ಫಲ್ಗುಣ ಹಾಗೂ ಧರ್ಮಪುತ್ರ. ಕವಿ ಇಲ್ಲಿ (ಪಾಂಡವ-ಕೌರವ) ಉಭಯಪಕ್ಷಗಳ ಪಾತ್ರಗಳನ್ನೂ ಒಂದೆಡೆ ಉಲ್ಲೇಖಿಸಿ ಇವರು ಭಾರತದ 'ಪೂಜ್ಯತೆ'ಗೆ ಕಾರಣ ಎನ್ನುತ್ತಿದ್ದಾನೆ. ಅಲ್ಲದೆ, ಈ ಒಂದೊಂದು ಪಾತ್ರವೂ ಒಂದೊಂದು ಗುಣದ ಪ್ರತೀಕವೆಂದಿಲ್ಲಿ ವರ್ಣಿತವಾಗಿದೆ. ಆ ಗುಣಗಳು ಚಲ, ನನ್ನಿ, ಗಂಡು, ಬಲ, ಅತ್ಯುನ್ನತಿ, ಚಾಪವಿದ್ಯಾಬಲ, ಸಾಹಸ, ನಿರ್ಮಲಚಿತ್ತ - ಇವುಗಳು. ಈ ಗುಣಗಳ ಸ್ವರೂಪವೆಂತಹುದು? ಪಾತ್ರಗಳೂ ಮತ್ತವು ಸಂಕೇತಿಸುವ ಗುಣಗಳು - ಇವುಗಳನ್ನು ಒಟ್ಟು ಕತೆಯ ಹಿನ್ನೆಲೆಯಲ್ಲಿ ಪರಿಕಿಸಿದರೆ ಅವುಗಳ ಸ್ವರೂಪ ಕಣ್ಮುಂದೆ ನಿಲ್ಲುತ್ತದೆ. ಚಲವನ್ನು ತೆಗೆದುಕೊಳ್ಳಿ; ಚಲವೆಂದರೆ ಸ್ವಾಭಿಮಾನ, ಮಣಿಯದ ಸ್ವಭಾವ ಇದು ದುರ್ಯೋಧನನ ವಿಶಿಷ್ಟ ಲಕ್ಷಣ. ಎಲ್ಲವನ್ನೂ ಎಲ್ಲರನ್ನೂ ಕಳೆದುಕೊಂಡಾಗಲೂ ಅವನು ಆಡುವ ಮಾತು "ಚಲಮನೆ ಬಲ್ವಿಡಿವಿಡಿದೆಂ" ಎಂಬುದು. ಅವನು ಚಕ್ರವರ್ತಿ; ಅವನ ಚಲ ಎಂತಹುದೆಂದರೆ ಏಕಾಂಗಿಯಾದರೂ ನಿಸ್ಸಹಾಯಕನಾದರೂ ಇರುವಂಥದು. ಅವನು ಸಾಯುವಾಗಲೂ ಅದು ತುಂಬಿತ್ತು. ರಾಜನ ಗುಣ ಇಂತಹುದಾಗಿರಬೇಕು. ಮುಂದೆ, ಕರ್ಣನ ನನ್ನಿ. ಅವನ ನನ್ನಿ ಎಂತಹುದು? ತನ್ನ ಯಜಮಾನನಿಗಾಗಿ "ಎನ್ನೊಡಲನಾಂ ತವಿಪೆಂ ರಣರಂಗಭೂಮಿಯೊಳ್" ಎಂಬಂತಹುದು. ಒಡೆದ ಮನಸ್ಸಿನಿಂದ ಶತ್ರುಗಳನ್ನು ಎದುರಿಸುವಾಗ ಅವನ ಸ್ವಾಮಿನಿಷ್ಠೆ ಮಾತ್ರ ಒಡೆಯದೆ ಉಳಿದಿತ್ತು; ಇದು ಅವನ ನನ್ನಿಯ ಸ್ವರೂಪ. ಹಾಗೆಯೇ ಪರಾಕ್ರಮ, ದೇಹಬಲ, ಅತ್ಯುನ್ನತಿ, ಚಾಪವಿದ್ಯೆ, ಸಾಹಸ ಮತ್ತು ನಿರ್ಮಲಚಿತ್ತ - ಇವುಗಳನ್ನು ಪ್ರತಿನಿಧಿಸುವ ಪಾತ್ರಗಳೂ ಕೊನೆಯವರೆಗೂ (ಅಂದರೆ ಮಹಾಭಾರತ ಯುದ್ಧದ ಕೊನೆಯವರೆಗೆ) ಆ ಮೌಲ್ಯಗಳಿಗಾಗಿ ಬದುಕಿದವು. ಈ ಎಲ್ಲ ಪಾತ್ರಗಳೂ ತಮ್ಮ ವಿಶಿಷ್ಟ ಗುಣಗಳನ್ನು ಮೆರೆದದ್ದು ಯುದ್ಧಭೂಮಿಯಲ್ಲಿ, ತಮ್ಮ ಪ್ರಾಣಗಳನ್ನು ಒತ್ತೆಯಿಟ್ಟು (ಬೇರೊಂದು ಸಂದರ್ಭದಲ್ಲಿ ಈ ಕಾವ್ಯದಲ್ಲಿಯೇ 'ಭಾರತಂ ಕಲಹಂ' ಎಂಬ ಮಾತಿದೆ). ಅಂದರೆ ಈ ಎಲ್ಲ ಪಾತ್ರಗಳ ಒರೆಗಲ್ಲು ಯುದ್ಧ, ಉಳಿದಂತೆ ಬದುಕಿನ ಬಗೆಯಲ್ಲ. ಯುದ್ಧ ರಾಜರ ಸುತ್ತ ತಾನೆ ಹೆಣೆದುಕೊಳ್ಳುವುದು? ಅಂದರೆ ಭಾರತವನ್ನು 'ಲೋಕಪೂಜ್ಯವಾಗಿಸುವ' ಈ ಗುಣಗಳೂ ಪೂಜ್ಯವಾದವು. ಅವೆಲ್ಲ ಯುದ್ಧಸಂಬಂಧಿ ಗುಣಗಳು, ರಾಜಪರವಾದ ಮೌಲ್ಯಗಳು. ಅಂದರೆ ಪಂಪ ಈ ಮೌಲ್ಯಗಳಿಂದಾಗಿ ಬದುಕು ಮೌಲಿಕವಾಗುತ್ತದೆ, ಅಂಥ ಬದುಕು ಲೋಕಪೂಜಿತವಾಗುತ್ತದೆ ಎಂಬ ಧ್ವನಿಯನ್ನು ಸೂಸುತ್ತಿದ್ದಾನೆ. ಪ್ರಾಯಃ ಒಬ್ಬ ವ್ಯಕ್ತಿಯ ಲೌಕಿಕ ಬದುಕು ಸಾರ್ಥಕವಾಗುವುದು ಈ ಮೌಲ್ಯಗಳಿಂದ, ಯುದ್ಧಸಂಬಂಧೀ ಮೌಲ್ಯಗಳಿಂದ. ಅಂದರೆ ತಾನು ಬೆಳಗುತ್ತಿರುವ ಲೌಕಿಕ ಇದೇ ಆಗಿರಬಹುದು. ಇಂತಹ ಗುಣಗಳನ್ನು ಮೆರೆಯುವುದರ ಮೂಲಕವೇ ಲೌಕಿಕ ಬದುಕು ಸಾರ್ಥಕಗೊಳ್ಳುವುದು. ಈ ಪದ್ಯದಲ್ಲಿ ಕೃಷ್ಣನ ಪ್ರಸ್ತಾಪವಿಲ್ಲದ ಬಗ್ಗೆ ಅನೇಕ ವಿದ್ವಾಂಸರು ನಾನಾ ಬಗೆಯ

ಊಹೆಗಳನ್ನು ಮಾಡಿದ್ದಾರೆ: ಕೃಷ್ಣ ದೇವರಾದುದರಿಂದ ಅವನು ಎಲ್ಲೆಡೆಯೂ ಇದ್ದಾನೆ ಎಂಬ ಭಾವನೆಯಿಂದ ಅವನ ಹೆಸರನ್ನಿಲ್ಲಿ ಹೇಳಿಲ್ಲ ಎಂಬುದರಿಂದ ಹಿಡಿದು, ಪಂಪ ಜೈನನಾದುದರಿಂದ ವೈದಿಕ ದೇವರಾದ ಕೃಷ್ಣನನ್ನು ಹೆಸರಿಸಿಲ್ಲ ಎಂಬುವವರೆಗೆ. ಆದರೆ ಈಗ ನಾವೀಗ ಮಾಡಿದ ವಿಶ್ಲೇಷಣೆಗನುಗುಣವಾಗಿ ಕೃಷ್ಣನ ಹೆಸರನ್ನನಿಲ್ಲಿ ಸೇರಿಸದಿರುವುದು ಅವನು ಇಲ್ಲಿ ಹೆಸರುಗೊಂಡವರಂತೆ ಯಾವುದೇ ಮೌಲ್ಯದ ಸಂಕೇತವಲ್ಲ ಎಂಬುದರಿಂದ. ಅವನು, ಪಂಪನ ದೃಷ್ಟಿಯಲ್ಲಿ 'ಶ್ವೇತಕೃಷ್ಣಕಾರಕ'ನಾದ ಮೆಕೈವಿಲ್ಲಿಯನ್ ತಂತ್ರಗಾರ, ಅಷ್ಟೆ.

ಕಾವ್ಯದ ಒಡಲಲ್ಲಿಯೂ ಅಲ್ಲಲ್ಲಿ ಇಂತಹ ಗುಣಗಳ ಹೊಗಳಿಕೆ ಬರುತ್ತದೆ. ತನ್ನನ್ನು ಮಗನೆಂದು ಕುಂತಿ ಒಪ್ಪಿಕೊಂಡುದರಿಂದ ತನಗೆ ಕುಲ(ಕ್ಷತ್ರಿಯತ್ವ)ವೂ ಬಂತು, ಜೊತೆಗೆ ಶ್ರೇಷ್ಠ ಲೌಕಿಕ ಗುಣಗಳು ಪ್ರಾಪ್ತವಾದವು ಎಂದು ಕರ್ಣ ಹೇಳುತ್ತಾನೆ (ಆಶ್ವಾಸ ೯, ಪದ್ಯ ೮೦):

ಚಲಮುಂ ಚಾಗಮುಮಳವುಂ
ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್
ನೆಲಸಿದುವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು ಮಗನೆಂದುದಱಿಂ

ಭೀಷ್ಮನಿಗೆ ಸೇನಾಧಿಪತಿಯ ಪಟ್ಟವನ್ನು ಕಟ್ಟುವ ಪ್ರಸಂಗದಲ್ಲಿಯೂ ಕರ್ಣನು "ಚಲಂ ಗುಣಂ ಗುಣಂ ಕುಲಂ ಅಭಿಮಾನಮೊಂದೆ ಕುಲಂ ಅಣ್ಮು ಕುಲಂ" ಎಂದು ಘೋಷಿಸುತ್ತಾನೆ. ಕರ್ಣನ ಸಾವಿನ ಸಂದರ್ಭದಲ್ಲಿ "ಚಾಗದ ನನ್ನಿಯ ಕಲಿತನದಾಗರಮೆನೆ ನೆಗಟ್ದ" ದೇಹ ಕರ್ಣನದು ಎಂದು ಕವಿ ವರ್ಣಿಸುವುದಲ್ಲದೆ, (ಹನ್ನೆರಡನೆಯ ಆಶ್ವಾಸ, ಪದ್ಯ ಇನ್ನೂರ ಹದಿನೇಳು)

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ

ಎರಡನೆಯ ಪದ್ಯದ ಕೊನೆಗೆ "ವೀರನಾರಾಯಣನಪ್ಪತಿಶಯಧವಳಂ ನಮಗೀಗತರ್ಕಿತೋಪಸ್ಥಿತ ಪ್ರತಾಪೋದಯಮಂ" ಎಂದು ಪ್ರಾರ್ಥಿಸುತ್ತಾನೆ. ಅಂದರೆ ತನಗೆ ಪ್ರತಾಪೋದಯವನ್ನು ಮಾಡುವವನು 'ಅತಿಶಯಧವಳ' ಎಂಬ ನಂಬಿಕೆಯಿಲ್ಲಿ ನಿಚ್ಚಳವಾಗಿದೆ. ಈ ಸ್ತುತಿಯು ಪಂಪನ ಪದ್ಯಗಳಿಗೆ ಮಾದರಿಯಾಗಿವೆ. ಲಕ್ಷ್ಮಿಯು ಸಂಪ್ರೀತಿಯಿಂದ ಅಗಲದಂತೆ ಇರುವವಳು ನಾರಾಯಣ, ಆದರೆ ತನ್ನ ಆಶ್ರಯದಾತ ವೀರನಾರಾಯಣ.

ಎಂದು ಕರ್ಣನ ಗುಣಗಾನ ಮಾಡುತ್ತಾನೆ. ಕವಿಗೆ ಕರ್ಣ ಇಷ್ಟು ಆಪ್ತನಾಗಿರುವ

ಕಾರಣ ಅವನ ಗುಣಗಳು; ಅವೆಂದರೆ ಹದಿನಾಲ್ಕನೆಯ ಆಶ್ವಾಸದ ಅರವತ್ತನಾಲ್ಕನೆಯ ಪದ್ಯದಲ್ಲಿ ಉಕ್ತವಾದ ಗುಣಗಳೇ; ಅಂದರೆ ಚಲ, ಚಾಗ, ಅಳವು, ಕಲಿತನ, ನನ್ನಿ – ಇವುಗಳೇ. ಹಲವಾರು ಶ್ರೇಷ್ಠ ಗುಣಗಳ ಆಗರವಾಗಿದ್ದ ಕರ್ಣ ಒಂದು ರೀತಿಯಲ್ಲಿ ಪಂಪನ ವೀರಮಾದರಿ.

ಪಂಪನಂತಹ ಕವಿ ತನ್ನ ಕಾಲದ ಆಗುಹೋಗುಗಳಿಗೆ ಕನ್ನಡಿ ಹಿಡಿಯುವ ರೀತಿ ಇದು. ಆದರೆ ಕವಿಯ ಪ್ರತಿಭೆ (ಅಂದರೆ ಸನ್ನಿವೇಶವನ್ನು ವ್ಯಕ್ತ್ಯತೀತ ನೆಲೆಯಲ್ಲಿ ಪರಿಭಾವಿಸುವ ಸಾಮರ್ಥ್ಯ; ಇದೇ ಸಾಧಾರಣೀಕರಣ ಎನ್ನಬಹುದೇ?) ಇಂತಹ ಪೂರ್ವಸಿದ್ಧ ಮೌಲ್ಯಗಳಿಗೆ ಬಲಿಬೀಳದೆ ನಿರ್ಭಾವುಕವಾಗಿ ಚಿಂತಿಸಬಲ್ಲದು; ಎಲ್ಲ ಕಾಲದ ಮಾನವ ಬದುಕಿಗೆ ಅನ್ವಯಿಸಬಹುದಾದುದನ್ನು ಗುರುತಿಸಬಲ್ಲುದು. ಹೀಗಾಗಿಯೇ ತನ್ನ ದಟ್ಟ ರಾಜತ್ವಪರವಾದ ನಿಲವಿನ ಹಿನ್ನೆಲೆಯಲ್ಲಿಯೂ ಪಂಪ ಅದನ್ನೂ ಮೀರಿದ ಮಾತುಗಳನ್ನಾಡಬಲ್ಲ. 'ವಿಕ್ರಮಾರ್ಜುನ ವಿಜಯಂ'ನಲ್ಲಿ ಕರ್ಣನಿಗೆ ಸಾರಥಿಯಾಗೆಂದು ದುರ್ಯೋಧನನು ಶಲ್ಯನನ್ನು ಕೇಳಿಕೊಳ್ಳುವ ಪ್ರಸಂಗವನ್ನಿಲ್ಲಿ ನೆನಪಿಸಿಕೊಳ್ಳಬಹುದು. ಕೆಳಜಾತಿಯವನಿಗೆ ತಾನು ಸಾರಥಿಯಾಗಬೇಕೆಂಬ ಅವನ ಪ್ರಾರ್ಥನೆಯನ್ನು ಕೇಳಿದಾಗ ಶಲ್ಯ ಕೆರಳಿ ಹೇಳುವ ಮಾತುಗಳು ಹನ್ನೆರಡನೇ ಆಶ್ವಾಸದ ತೊಂಬತ್ತೆರಡು ಹಾಗೂ ತೊಂಬತ್ತಮೂರನೇ ಪದ್ಯಗಳಲ್ಲಿವೆ.

ಕಲಿಯನೆ ಪಂದೆ ಮಾಟ್ಪಿ ಕಡುವಂದೆಯನೊಳ್ಗಲಿ ಮಾಟ್ಪಿ ತಕ್ಕನಂ
ಪೊಲೆಯನೆ ಮಾಟ್ಪಿ ಮುಂ ಪೊಲೆಯನಂ ನೆಱೆ ತಕ್ಕನೆ ಮಾಟ್ಪಿ ತಮ್ಮೊಳ
ಗ್ಗಲಿಸಿ ಪೊದಳ್ದು ಪರ್ವಿದವಿವೇಕತೆಯಿಂ ನೃಪ ಚಿತ್ತವೃತ್ತಿ ಸಂ
ಚಲಮದಱಿಂದಮೋಲಗಿಸಿ ಬಾಟ್ವುದೆ ಕಷ್ಟಮಿಳಾಧಿನಾಥರಂ

ಅನುಪಮ ವಿಕ್ರಮಕ್ರಮಮುದಾರಗುಣಂ ಋತವಾಕ್ಯಮೆಂಬ ಪೆಂ
ಪೆನಲಿವು ಮೂಱೆ ನಾಲ್ಕೆ ಗುಣಮತ್ತ ಮದಾನ್ವಿತ ರಾಜಬೀಜಸಂ
ಜನಿತಗುಣಂ ಮದಂ ಮದಮನಾಳ್ದವಿವೇಕತೆಯಿಂದಮಲ್ತೆ ತೊ
ಟ್ಟಿನ ಮೊಲೆವಾಲನುಂಡ ಗುಣಮಿಂತಿದನಾರ್ ಕಿಡಿಪರ್ ನರೇಂದ್ರರೊಳ್

ಇಲ್ಲಿ ಅವನು ವ್ಯಕ್ತಪಡಿಸುತ್ತಿರುವ ಅಭಿಪ್ರಾಯವೆಂದರೆ, "ತಮ್ಮೊಳಗ್ಗಲಿಸಿ ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂಚಲಂ" ಹಾಗೂ "ಮತ್ತ ಮದಾನ್ವಿತ ರಾಜಬೀಜಸಂಜನಿತ ಗುಣಂ ಮದಂ, ಮದಮನಾಳ್ದವಿವೇಕತೆ" ಎಂಬುದು. ದೊಡ್ಡ ಕವಿ ತನ್ನ ಕಾಲದ ವಾಸ್ತವತೆಗಳನ್ನು ಚಿತ್ರಿಸುತ್ತಲೇ ಸಾರ್ವತ್ರಿಕವಾಗಿ ಮೌಲಿಕವಾದುದನ್ನು ಎತ್ತಿಹಿಡಿಯುತ್ತಾನೆ. ದಟ್ಟ ನಂಬಿಕೆಯ ನೆಲದಲ್ಲಿಯೇ ಮೊಳೆಯುವ ಸತ್ಯಸಸ್ಯಗಳಿವು. ರಾಜನಿಷ್ಠೆಯ ವಾದ್ಯಗಳ ನಡುವೆಯೇ ಕೇಳಿಬರುವ ರಾಜವಿರೋಧಿ ಧ್ವನಿಯಿದು. ಹತ್ತನೆ ಶತಮಾನದ ಕನ್ನಡನಾಡು ಯುದ್ಧ ಮತ್ತು ಜಾತಿ ಸಂಕಟಗಳಿಂದ ತಲ್ಲಣಗೊಂಡಿತ್ತು. ಒಟ್ಟ ಸಮಾಜ ಇವೆರಡನ್ನೂ ಮೀರಲಾರದವೆಂದು ಭಾವಿಸಿದಂತಿದ್ದರೂ ಸೂಕ್ಷ್ಮದಲ್ಲಿ ಅವೆರಡರ

ವಿರುದ್ಧವಾದ ಭಾವನೆ ನೆಲೆಗೊಂಡಿತ್ತೆನಿಸುತ್ತದೆ. ಇದರ ಒಂದೂವರೆ ಶತಮಾನಾನಂತರ ನಡೆದ ವಚನ ಚಳವಳಿ ಈ ಎರಡರ ವಿರುದ್ಧವೂ ದಿಟ್ಟ ನಿಲವನ್ನು ತೆಗೆದುಕೊಂಡದ್ದನ್ನು ನೆನಪಿಸಿಕೊಂಡರೆ, ಪಂಪ ತನಗರಿವಿಲ್ಲದೆಯೇ ಪ್ರಾತಿಭ ನೆಲೆಯಲ್ಲಿ ಜನರ ನೈಜ ಭಾವನೆಗಳನ್ನು ಧ್ವನಿಸುತ್ತಿರುವ ಹಾಗೆ ತೋರುತ್ತದೆ. ಈ ಎರಡನ್ನೂ ಚಿತ್ರಿಸುವುದರಲ್ಲಿ ಕಾವ್ಯದ ದ್ವಂದ್ವವಿದೆಯೆಂದೇನೂ ಭಾವಿಸಬೇಕಾದ್ದಿಲ್ಲ. ಶ್ರೇಷ್ಠ ಕಾವ್ಯ ಸಮಕಾಲೀನತೆಯನ್ನು ಮೇಲ್ಪದರದಲ್ಲಿ ಮಾತ್ರವಲ್ಲದೆ ಅದರ ಅಂತರಾಳದ ನೆಲೆಯಲ್ಲಿಯೂ ಒಳಗೊಳ್ಳುತ್ತದೆ.

* * * * * * *

ಕಾಮಧೇನು ಪುಸ್ತಕ ಭವನದ ಕೆಲವು ಪ್ರಕಟಣೆಗಳು

ಕುಮಾರವ್ಯಾಸ ಭಾರತ	ಸಂ: ಅ.ರಾ.ಸೇ.	2500.00
ಸೌಂದರ್ಯ ಸಮೀಕ್ಷೆ	ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ	300.00
ಸಮಗ್ರ ಕಾವ್ಯ	ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ	450.00
ಕಾವ್ಯಾರ್ಥ ಪದಕೋಶ	ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ	150.00
ಹಿಮಾಲಯದ ಮಹಾತ್ಮರ	ಕನ್ನಡಕ್ಕೆ	395.00
ಸನ್ನಿಧಿಯಲ್ಲಿ		300.00
ಹೂವು ಮತ್ತು ಆರೋಗ್ಯ	ಡಾ॥ ವಸುಂಧರಾ ಭೂಪತಿ	160.00
ಭಾರತದ ಸಂವಿಧಾನ – ಪಕ್ಷಿನೋಟ	ಶ್ರೀ ನೇ.ತಿ. ಸೋಮಶೇಖರ	200.00
ಪತ್ರಿಕೋದ್ಯಮ – ಸಮಗ್ರ ಸಂಪುಟ	ಜಿ.ಎನ್. ರಂಗನಾಥರಾವ್	650.00
ಗೀತಾಂಜಲಿ	ಕನ್ನಡ ಅನುವಾದ: ಮಹಿಪಾಲ ದೇಸಾಯಿ	150.00
ಶಿಶುನಾಳ ಶರೀಫರ ನೂರಾರು ತತ್ವಪದಗಳು ವ್ಯಾಖ್ಯಾನ ಸಹಿತ	ಸಂ: ಅ.ರಾ.ಸೇ.	75.00
ಅಂಬೇಡ್ಕರ್	ಜಿ.ಎಂ. ಕೃಷ್ಣಮೂರ್ತಿ	125.00
ಒಂದು ತುಂಡು ಗೋಡೆ	ಬೊಳುವಾರು	120.00
ಭಾಷಣ ಕಲೆ	ಡಾ. ಜಿ.ಎಂ. ಕೃಷ್ಣಮೂರ್ತಿ	150.00
ಹೊಸ ತಿರುವು (ವಿಮರ್ಶಾ ಲೇಖನಗಳು)	ಜಿ.ಎನ್. ರಂಗನಾಥರಾವ್	60.00
Constitution of India-a brief Study	ಡಾ. ಎ.ವಿ. ಪ್ರಸನ್ನ	90.00
ಸಂವಾದ ಕಲೆ	ಜಿ.ಎಂ. ಕೃಷ್ಣಮೂರ್ತಿ	100.00
Teacher Education in Karnataka	ಡಾ. ಶ್ರೀಪಾದ್ ಬೊಳಸೆಟ್ಟಿ	300.00
Content Based Methodology of Teaching English	ಎಂ.ಆರ್. ನರಸಿಂಹಪ್ರಸಾದ್	90.00
ನಾಕುತಂತಿ ಒಂದು ಟಿಪ್ಪಣಿ	ಡಾ. ಜಿ. ಕೃಷ್ಣಪ್ಪ	10.00
ಹಾಡುಹಕ್ಕಿ ಅಂಬಿಕಾತನಯದತ್ತ	ಡಾ. ಜಿ. ಕೃಷ್ಣಪ್ಪ	90.00
ಬೆಂಗಳೂರು ಕೆಂಪೇಗೌಡ	ಮ.ನ. ಮೂರ್ತಿ	100.00
ಗಣಪತಿಯ ಪೂಜೆಗೆ ಬಳಸುವ 21 ಪತ್ರೆಗಳು ಮತ್ತು ಆಯುರ್ವೇದ	ಡಾ. ವಸುಂಧರಾ ಭೂಪತಿ	90.00
ಜೈಮಿನಿ ಭಾರತ	ಸಂ: ಅ.ರಾಸೇ.	750.00
ಆಕಾಶಕ್ಕೆ ಸರಹದ್ದುಗಳಿಲ್ಲ	ಡಾ. ಕೆ.ಪಿ. ಮಂಜುಳಾ ರೆಡ್ಡಿ	150.00
ರಸ್ತೆ ನಿಯಮಗಳು	ಡಾ. ಜಿ. ಕೃಷ್ಣಪ್ಪ	99.00
Sharana Vachana Sampada	ಕೆ.ಎಸ್. ರಾಧಾಕೃಷ್ಣ	75.00
ಕೈಲಾಸ–ಮಾನಸ	ಮ.ನ. ಮೂರ್ತಿ	200.00
ವಿ.ವಿ. ಸೊಳ್ಳೆ	ಕಂಠೀರವ	75.00
ಸಿರಿಗನ್ನಡ ವ್ಯಾಕರಣ	ಅ.ರಾ.ಸೇ	75.00
ವ್ಯಕ್ತಿತ್ವ ವಿಕಸನ – ಧ್ಯಾನ–ಧರ್ಮ	ಜಿ.ಎಂ. ಕೃಷ್ಣಮೂರ್ತಿ	100.00

ವ್ಯಕ್ತಿತ್ವ ವಿಕಸನ – ಇಪ್ಪತ್ತು ಸೂತ್ರಗಳು	ಡಾ. ಜಿ.ಎಂ. ಕೃಷ್ಣಮೂರ್ತಿ	80.00
ಸ್ವತಂತ್ರ್ಯದ ಓಟ	ಬೊಳುವಾರು	750.00
ಯೇಗ್ದಾಗೆಲ್ಲಾ ಐತೆ	ಬೆಳಗೆರೆ ಕೃಷ್ಣಶಾಸ್ತ್ರಿ	60.00
ಹೂತsದ ಹುಣಸಿ	ಡಾ. ಜಿ. ಕೃಷ್ಣಪ್ಪ	90.00
ಅನ್ ಟು ದಿಸ್ ಲಾಸ್ಟ್	ಕನ್ನಡ ಅನುವಾದ: ಜಿ.ಎಂ.ಕೃಷ್ಣಮೂರ್ತಿ	75.00
ಭೂಮಿಗಾಥೆ	ಡಾ. ವಸುಂಧರಾ ಭೂಪತಿ	100.00
ಬೆಸ್ಟ್ ಆಫ್ ಅ.ರಾ.ಸೆ	ಅ.ರಾ.ಸೇ	150.00
ದೇವೀ ಮಹಾತ್ಮೆ	ಸಂ: ಅ.ರಾ.ಸೇ.	95.00
ಹನಿಗವನಗಳು	ಡಾ. ನಾರಾಯಣ್ ಭಟ್	50.00
ಆರೊಗ್ಯ ಸಂಗಾತಿ – I	ಡಾ. ವಸುಂಧರಾ ಭೂಪತಿ	550.00
ಆರೊಗ್ಯ ಸಂಗಾತಿ – II	ಡಾ. ವಸುಂಧರಾ ಭೂಪತಿ	550.00
ಪ್ರವಾದಿ	ಅನುವಾದ: ಮಹಿಪಾಲ ದೇಸಾಯಿ	150.00
ಹನುಮಾನ್ ಚಾಲೀಸಾ	ಅನುವಾದ: ಡಾ. ಪಿ. ನಾರಾಯಣಭಟ್	15.00
ಸೌಂದರ್ಯ ಲಹರೀ	ಅನುವಾದ: ಡಾ. ಪಿ. ನಾರಾಯಣಭಟ್	30.00
ಶಿವಾನಂದ ಲಹರೀ	ಅನುವಾದ: ಡಾ. ಪಿ. ನಾರಾಯಣಭಟ್	35.00
ಕಲ್ಯಾಣ	ಸಂ. ಬೆಳಗೆರೆ ಕೃಷ್ಣಶಾಸ್ತ್ರಿ	125.00
ಮಾತು ನನ್ನೋವ್ ಎಲ್ಡೆ	ಬೆಳಗೆರೆ ಚಂದ್ರಶೇಖರ ಶಾಸ್ತ್ರಿ	75.00
ವಚನ ಜೈಮಿನಿಭಾರತ	ಡಾ. ಜಿ. ಕೃಷ್ಣಪ್ಪ	150.00
ಹೈದರಾಲಿ	ಮ.ನ. ಮೂರ್ತಿ	100.00
ಟೀಪೂಸುಲ್ತಾನ್	ಮ.ನ. ಮೂರ್ತಿ	300.00
ಕೈಲಾಸ ಮಾನಸ ಯಾತ್ರಾಕಥನ	ಕಳಸೇಶ್ವರ	180.00
ಆಕಾಶಕ್ಕೆ ನೀಲಿ ಪರದೆ ಕಥಾ ಸಂಕಲನ)	ಬೊಳುವಾರು	60.00
ಪರಮಾರ್ಥ ಪದಕೋಶ	ಸಂ: ಅ.ರಾ.ಸೇ. ಹಾಗೂ ಡಾ. ಕೆ.ವಿ. ನಾರಾಯಣ	270.00
ಬ್ರಹ್ಮಸೂತ್ರಗಳು	ಕನ್ನಡ ಅನುವಾದ: ಅ.ರಾ.ಸೇ.	150.00
ಡಾ॥ ಸಿದ್ದಲಿಂಗಯ್ಯನವರ ಸದನದ ಭಾಷಣಗಳು	ಸಂ: ದೊಡ್ಡಹುಲ್ಲೂರು ರುಕ್ಕೋಜಿ	200.00
ಸಾಹಿತ್ಯಲೋಕದ ನೆನಪುಗಳು	ಪ್ರೊ॥ ಎಸ್. ರಾಮಸ್ವಾಮಿ	200.00
ಸಾಹಿತ್ಯ ಅಕಾಡೆಮಿ: ವರ್ಷದ ಶ್ರೇಷ್ಠ ಕೃತಿ ಪ್ರಶಸ್ತಿ ಪಡೆದ ಕೃತಿ)		
ಅಂಕ (ಕಥಾ ಸಂಕಲನ)	ಬೊಳುವಾರು	42.00
ಆಲೋಕ (ಶಬ್ದಮಣಿ ದರ್ಪಣ ಭಾಷ್ಯ, ಭಾಗ-1)	ಎಚ್.ಎಸ್. ಬಿಳಿಗಿರಿ	60.00
ಗಿಣಿ ಹೇಳಿದ ಅಪೋಲಿ ಕತೆಗಳು	ಶೇಷ	60.00
ಕಚ್ಚಾದ (ಕಾದಂಬರಿ)	ಫಕೀರ್ ಮಹಮ್ಮದ್ ಕಟ್ಪಾಡಿ	60.00
ಅಂತಾರಾಷ್ಟ್ರೀಯ ಅರ್ಥಶಾಸ್ತ್ರ	ನೇ.ತಿ. ಸೋಮಶೇಖರ್	150.00
ಆಯ್ದ ರಶಿಯನ್ ಕಥೆಗಳು	ಅನುವಾದ: ಸುತ್ರಾವೆ	35.00
ಬೊಳುವಾರರ ಆಯ್ದ ಕಥೆಗಳು	ಸಂ: ಡಿ.ಕೆ. ಶ್ಯಾಮಸುಂದರರಾವ್	60.00



ಪಂಪ ಕನ್ನಡದ ಆದಿಕವಿ; ಕಾಲದೃಷ್ಟಿಯಿಂದಲ್ಲ, ಕನ್ನಡ ಕಾವ್ಯಪರಂಪರೆಗೆ ಒಂದು ಗಟ್ಟಿ ಅಡಿಪಾಯವನ್ನು ಹಾಕಿದವನು ಎಂಬ ಕಾರಣದಿಂದ. ಶಿಷ್ಟದಲ್ಲಿ ಜಾನಪದ ಬೆರೆತಾಗ ಮಾತ್ರವೇ ಕಾವ್ಯ ಸ್ವಂತಿಕೆಯಿಂದಕೂಡೀತು ಎಂದು ಭಾವಿಸಿದವನು ಅವನು. ಹಳೆಯ ಕತೆಯನ್ನೇ ಸಮಕಾಲೀನ ಮನಃಸ್ಥಿತಿಯಿಂದ ಹೊಸದಾಗಿ ಕಟ್ಟಿದಾಗ ಕಾವ್ಯಕ್ಕೆ ಸ್ವಂತಿಕೆ ಪ್ರಾಪ್ತವಾಗುತ್ತದೆ ಎಂದವನಭಾವನೆ. ಇದನ್ನೇ ಅವನು "ದೇಸಿ" ಎಂದಂತೆ ಕಾಣುತ್ತದೆ. ಅವನ ಎರಡು ಕಾವ್ಯಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನವಿಜಯ'ಗಳು ಈ ಕಾಣ್ಕೆಯನ್ನು ಸಾಕಾರಗೊಳಿಸಿದವು. ಮೊದಲ ಕಾವ್ಯವು ಲೋಕೋತ್ತರನೆಲೆಯಲ್ಲಿ ಬದುಕಿನ ಸಾರ್ಥಕ್ಯವನ್ನು ಕುರಿತು ಧ್ಯಾನಿಸಿದರೆ, ಎರಡನೆಯ ಕಾವ್ಯವು ಇಲ್ಲಿನ ಬದುಕಿನ ಸಾರ್ಥಕ್ಯವನ್ನು ತನ್ನ ಸಮಕಾಲೀನ ದೃಷ್ಟಿಕೋನದಿಂದ ಚಿತ್ರಿಸುತ್ತದೆ. ಯುವಜನತೆಗೆ ಅವನ ಕಾವ್ಯಗಳ ಪರಿಚಯವಾಗಬೇಕೆಂಬ ಉದ್ದೇಶದಿಂದ ಈ ಸಂಪುಟದಲ್ಲಿ ಎರಡೂ ಕಾವ್ಯಗಳ ಸಂಕ್ಷಿಪ್ತರೂಪವನ್ನು ನೀಡಲಾಗಿದೆ; ಜೊತೆಗೆ ಅಭ್ಯಾಸಿಗಳಿಗೆ ಅನುಕೂಲವಾಗಲೆಂದು ಟಿಪ್ಪಣಿಗಳಿವೆ; ಕೊನೆಯಲ್ಲಿ ಕನ್ನಡ ಚಂಪೂಪರಂಪರೆಗೆ ಸಂಬಂಧಿಸಿದ ಲೇಖನಗಳೂ ಇವೆ. ಕನ್ನಡಿಗರಿಗೆ ಇದು ಉಪಯುಕ್ತವಾದೀತೆಂಬುದು ನಮ್ಮ ನಿರೀಕ್ಷೆ.

ಕಾಮಧೇನು
ಪುಸ್ತಕ ಭವನ

5/1, ನಾಗಪ್ಪ ರಸ್ತೆ, ಶೇಷಾದ್ರಿಪುರ, ಬೆಂಗಳೂರು–560 020

ಕಾಮಧೇನು ಪುಸ್ತಕ ಭವನ–ಶಾಸಕರ ಭವನ–ಬೆಂಗಳೂರು 560 001 ದೂ: 944 944 6328

ಬೆಲೆ: ₹ 200/-